
ರಾಷ್ಟ್ರ ಜಾಗೃತಿಯ ದೈನಿಕ

ಹುಬ್ಬಳ್ಳಿ
ಶನಿವಾರ, 4 ಜುಲೈ 2026
ಸಂಪುಟ 16, ಸಂಚಿಕೆ 101, ಪುಟಗಳು 14
ಹುಬ್ಬಳ್ಳಿ ▪ ಬೆಂಗಳೂರು ▪ ಮಂಗಳೂರು ▪ ಶಿವಮೊಗ್ಗ ₹5
RNI No.KARKAN/2011/64413
hosadigantha.com
epaper.hosadigantha.com
Hosadigantha Digital

# ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ



ಜು.6ರಿಂದ ಮೋದಿ 3 ದೇಶ ಪ್ರವಾಸ | 02
7 ಬ್ಯಾಟರಿ ನಿರ್ವಹಣಾ ಆ್ಯಪ್ಸ್ ತೆರವು | 02
ಶಸ್ತ್ರಗಳ ಖರೀದಿಗೆ 52 ಸಾವಿರ ಕೋಟಿ ರೂ. | 02

## ಶುಭ ದಿನ

ಕಲಿಯುಗಾಬ್ಧ 5128, ಪರಾಭವ ಸಂವತ್ಸರ, ದಕ್ಷಿಣಾಯನ, ಗ್ರೀಷ್ಮ ಋತು, ನಿಜ ಜ್ಯೇಷ್ಠ ಮಾಸ, ಕೃಷ್ಣ ಪಕ್ಷ, ತಿಥಿ: ಚೌತಿ, ನಕ್ಷತ್ರ: ಧನಿಷ್ಠೆ

## ದಿನದ ಮಾತು

ಅಪಾಯದ ಪರಿಸ್ಥಿತಿಯಲ್ಲಿ ತೋರಿಸುವ ಧೈರ್ಯವೇ ಅರ್ಧ ಗೆಲುವನ್ನು ತಂದು ಕೊಡುತ್ತದೆ.

▲ ನಾಣ್ನುಡಿ

### ವಿಶುದ್ಧ ಚಕ್ರ ಮತ್ತು ನಾಯಕತ್ವ-2

ಪೂರ್ಣ ಪರಿಪೂರ್ಣ

• ಪೂರ್ಣಪ್ರಜ್ಞ ಬೇಲೂರು

• ಪುಟ ೬

## ಕಿರುಸುದ್ದಿ

### ಗೃಹ ಜ್ಯೋತಿ ಜಾತಿ ಪ್ರಮಾಣ ಪತ್ರ ಕಡ್ಡಾಯವಲ್ಲ: ಬೆಸ್ಕಾಂ

• **ಬೆಂಗಳೂರು:** ರಾಜ್ಯಾದ್ಯಂತ ಜುಲೈ 1 ರಿಂದ ಆರಂಭಗೊಂಡಿರುವ ಗೃಹ ಜ್ಯೋತಿ ಯೋಜನೆಯ ಮಾಹಿತಿ ಸಂಗ್ರಹಕ್ಕೆ ಸಂಬಂಧಿಸಿದಂತೆ ಫಲಾನುಭವಿಯ ಪ್ರವರ್ಗ ಕುರಿತು ಕೇಳಿರುವ ಮಾಹಿತಿ ಕಡ್ಡಾಯವಲ್ಲ ಎಂದು ಬೆಸ್ಕಾಂ ಸ್ಪಷ್ಟಪಡಿಸಿದೆ. ಸಿಬ್ಬಂದಿ ಹಾಗೂ ಮೀಟರ್ ರೀಡರ್‌ಗಳು ಮನೆ ಮನೆಗೆ ತೆರಳಿ ದಾಖಲಾತಿ ಸಂಗ್ರಹಿಸುವ ಸಂದರ್ಭದಲ್ಲಿ ಜಾತಿ ಪ್ರಮಾಣಪತ್ರ ಕೇಳುತ್ತಿರುವ ಬಗ್ಗೆ ರಾಜ್ಯಾದ್ಯಂತ ವಿರೋಧ ವ್ಯಕ್ತವಾಗಿತ್ತು. ಆ ಹಿನ್ನೆಲೆಯಲ್ಲಿ ಬೆಸ್ಕಾಂ ಈಗ ಸ್ಪಷ್ಟನೆ ನೀಡಿದೆ. ➡ಪುಟ ೪

### ಅಮೆರಿಕದ ಮಿಷನರಿ ವಿರುದ್ಧ ಸಿಬಿಐ ಕೇಸ್?

• ಪುಟ ೭

### ಮಹಿಳೆಯರ ಲೈಂಗಿಕ ಶೋಷಣೆ ಸಹಿಸಲ್ಲ: ಹೈ

• ಪುಟ ೭

### ಖಾಸಗಿ ಮಾರುಕಟ್ಟೆಗೆ ರಾಕೆಟ್ ವಿಕ್ರಮ

• ಪುಟ ೭

### ಮಕ್ಕಳ ಮೇಲೆ ದೌರ್ಜನ್ಯ: ಮೆಟಾಗೆ ಕೇಂದ್ರ ಸಮನ್ಸ್

• ಪುಟ ೭

### ಟಿಎಂಸಿ ಕಚೇರಿ ವಶಕ್ಕೆ ಪಡೆದ ಬಂಡಾಯ ಬಣ

• ಪುಟ ೭

### ಅಮರನಾಥ ಯಾತ್ರಿಗಳಿಗೆ ಪ್ರಧಾನಿ ಶುಭಹಾರೈಕೆ

• ಪುಟ ೭



### ಸಾಮ್ರಾಜ್ಯಗಳ ನೆಲೆ ಕಾಲಾತೀತ ತಕ್ಷಶಿಲೆ

• ಪುಟ ೭

ಸುದ್ದಿ ಸಮಗ್ರ

ಭಕ್ತರ ವಿಶ್ವಾಸಕ್ಕೆ ಧಕ್ಕೆಯಾಗದಂತೆ ಟ್ರಸ್ಟ್ ಕಾರ್ಯನಿರ್ವಹಿಸಲಿ
ಆರೆಸ್ಸೆಸ್ ಸರಕಾರ್ಯವಾಹ ದತ್ತಾತ್ರೇಯ ಹೊಸಬಾಳೆ ಸಲಹೆ

# ಕಠಿಣ ಶಿಕ್ಷೆಯಾಗಲಿ

• **ಹೊಸದಿಲ್ಲಿ:** ಅಯೋಧ್ಯೆಯ ಶ್ರೀರಾಮಲಲ್ಲಾ ಮಂದಿರದ ಕಾಣಿಕೆ ಪೆಟ್ಟಿಗೆಗಳಲ್ಲಿನ ಹಣ ಕಳವು ಪ್ರಕರಣವು ಇಡೀ ಸಮಾಜ ಮತ್ತು ಕೋಟ್ಯಂತರ ರಾಮಭಕ್ತರ ಭಾವನೆ ಹಾಗೂ ನಂಬಿಕೆಗೆ ತೀವ್ರ ಆಘಾತ ಉಂಟುಮಾಡಿದ್ದು, ತನಿಖೆಯಲ್ಲಿ ತಪ್ಪಿತಸ್ಥರೆಂದು ಕಂಡುಬರುವ ಪ್ರತಿಯೊಬ್ಬರಿಗೂ ಕಠಿಣ ಶಿಕ್ಷೆಯಾಗಬೇಕು ಎಂದು ರಾಷ್ಟ್ರೀಯ ಸ್ವಯಂಸೇವಕ ಸಂಘದ ಸರಕಾರ್ಯವಾಹ ದತ್ತಾತ್ರೇಯ ಹೊಸಬಾಳೆ ಅವರು ಆಗ್ರಹಿಸಿದ್ದಾರೆ.



ಹಾಗೆಯೇ ಈ ಘಟನೆಯನ್ನು ಬಳಸಿಕೊಂಡು ಹಿಂದು ಧರ್ಮಕ್ಕೆ ಕಳಂಕ ತರುವ ಪ್ರಯತ್ನವನ್ನು ಹಿಂದು ವಿರೋಧಿ ಮತ್ತು ರಾಷ್ಟ್ರವಿರೋಧಿ ಶಕ್ತಿಗಳು ನಡೆಸುತ್ತಿವೆ. ಇಂಥ ಷಡ್ಯಂತ್ರಗಳನ್ನು ವಿಫಲಗೊಳಿಸಲು ಹಿಂದು ಸಮಾಜವು ಸಂಯಮ ಮತ್ತು ತಾಳ್ಮೆ ಪ್ರದರ್ಶಿಸಬೇಕು ಎಂದೂ ಕರೆನೀಡಿದ್ದಾರೆ.

ಶುಕ್ರವಾರ ಸಾಮಾಜಿಕ ಜಾಲತಾಣದಲ್ಲಿ ಪ್ರಕಟಿಸಿದ ಹೇಳಿಕೆಯಲ್ಲಿ ಅವರು, ಈ ಘಟನೆ ಅತ್ಯಂತ ನೋವು ಮತ್ತು ಆಕ್ರೋಶ ಉಂಟುಮಾಡಿದೆ ಎಂದು ತಿಳಿಸಿದ್ದಾರೆ. ಪ್ರಕರಣವನ್ನು ಶ್ರೀರಾಮ ಜನ್ಮಭೂಮಿ ತೀರ್ಥಕ್ಷೇತ್ರ ಟ್ರಸ್ಟ್ ಇದನ್ನು ಅಸಾಧಾರಣ ಮತ್ತು ಗಂಭೀರ ವಿಚಾರವೆಂದು ಪರಿಗಣಿಸಬೇಕು. ಎಲ್ಲ ಲೋಪಗಳನ್ನು ಸರಿಪಡಿಸಲು ಪರಿಣಾಮಕಾರಿ ಕ್ರಮ ಕೈಗೊಳ್ಳಬೇಕು ಎಂದು ಹೇಳಿದ್ದಾರೆ.

ಕೋಟ್ಯಂತರ ರಾಮಭಕ್ತರ ಸಮರ್ಪಣೆಯಿಂದ ಅಯೋಧ್ಯೆಯಲ್ಲಿ ಭವ್ಯ ಶ್ರೀರಾಮಮಂದಿರ ನಿರ್ಮಾಣವಾಗಿದೆ. ಅದು ಇಡೀ ಹಿಂದು ಸಮಾಜದ ಶ್ರದ್ಧೆ, ನಂಬಿಕೆ ಮತ್ತು ಭಕ್ತಿಯ ಕೇಂದ್ರವಾಗಿದೆ. ಹೀಗಾಗಿ ಮಂದಿರದ ಮೇಲಿನ ಭಕ್ತರ ವಿಶ್ವಾಸಕ್ಕೆ ಧಕ್ಕೆಯಾಗದಂತೆ ನೋಡಿಕೊಳ್ಳುವುದು ಅತ್ಯಂತ ಮುಖ್ಯ ಎಂದು ಹೊಸಬಾಳೆ ಅವರು ತಿಳಿಸಿದ್ದಾರೆ. ಟ್ರಸ್ಟ್‌ನ ಮನವಿಯ ಮೇರೆಗೆ ಉತ್ತರ ಪ್ರದೇಶ ಸರಕಾರ ವಿಶೇಷ ತನಿಖಾ ತಂಡವನ್ನು ರಚಿಸಿದ್ದು, ಅದರ ಶಿಫಾರಸಿನ ಆಧಾರದಲ್ಲಿ ಕಾನೂನು ಕ್ರಮ ಆರಂಭಿಸಿದೆ. ತನಿಖೆಯ ಬಳಿಕ ತಪ್ಪಿತಸ್ಥರಿಗೆ ಕಠಿಣ ಶಿಕ್ಷೆ ವಿಧಿಸುವುದರೊಂದಿಗೆ ಪ್ರಕರಣದ ಸುತ್ತಲಿನ ಗೊಂದಲ ಮತ್ತು ಅನಿಶ್ಚಿತತೆಗೆ ಶೀಘ್ರ ತೆರೆ ಎಳೆಯಬೇಕು ಎಂದು ಅವರು ಆಗ್ರಹಿಸಿದ್ದಾರೆ.



- ಭಕ್ತರ ನಂಬಿಕೆ ಅಚಲವಾಗಿರಲು ಪಾರದರ್ಶಕ ವ್ಯವಸ್ಥೆ ಅಗತ್ಯ
- ಹಿಂದು ವಿರೋಧಿ ಶಕ್ತಿಗಳ ಷಡ್ಯಂತ್ರಕ್ಕೆ ಬಲಿಯಾಗದಂತೆ ಸಂಯಮ ವಹಿಸಲು ಕರೆ
- ಆರ್‌ಎಸ್‌ಎಸ್ ಸರಕಾರ್ಯವಾಹ ದತ್ತಾತ್ರೇಯ ಹೊಸಬಾಳೆ ಆಗ್ರಹ

### ಶುದ್ಧ, ಪಾರದರ್ಶಕ ಆಡಳಿತಕ್ಕೆ ಒತ್ತು

ಸರಿಯಾದ ಹಣಕಾಸು ನಿರ್ವಹಣೆ, ದೋಷರಹಿತ ಹಾಗೂ ಪಾರದರ್ಶಕ ಕಾರ್ಯಾಚರಣೆ ಮತ್ತು ಪಾವಿತ್ರ್ಯಪೂರ್ಣ ಧಾರ್ಮಿಕ ವಾತಾವರಣದ ಮೂಲಕ ಶ್ರೀರಾಮ ಜನ್ಮಭೂಮಿ ತೀರ್ಥಕ್ಷೇತ್ರ ಟ್ರಸ್ಟ್ ಹಿಂದು ಸಮಾಜದ ವಿಶ್ವಾಸವನ್ನು ಮತ್ತಷ್ಟು ಬಲಪಡಿಸಲಿದೆ ಎಂಬ ನಂಬಿಕೆ ಇದೆ ಎಂದು ದತ್ತಾತ್ರೇಯ ಹೊಸಬಾಳೆ ಹೇಳಿದ್ದಾರೆ.

### ಹಿಂದು ಸಮಾಜ ಸಂಯಮ ವಹಿಸಲಿ

ಈ ದುರದೃಷ್ಟಕರ ಘಟನೆಯನ್ನು ಬಳಸಿಕೊಂಡು ಹಿಂದು ಧರ್ಮ ಮತ್ತು ಸಮಾಜಕ್ಕೆ ಕಳಂಕ ತರುವ ಪ್ರಯತ್ನವನ್ನು ಹಿಂದು ವಿರೋಧಿ, ರಾಷ್ಟ್ರವಿರೋಧಿ ಶಕ್ತಿಗಳು ನಡೆಸುತ್ತಿವೆ. ಇಂತಹ ಷಡ್ಯಂತ್ರಗಳನ್ನು ವಿಫಲಗೊಳಿಸಲು ಹಿಂದು ಸಮಾಜವು ಈ ಸಂಕಷ್ಟದ ಸಂದರ್ಭದಲ್ಲಿ ತಾಳ್ಮೆ ಮತ್ತು ಸಂಯಮ ಪ್ರದರ್ಶಿಸಬೇಕು ಎಂದು ದತ್ತಾತ್ರೇಯ ಹೊಸಬಾಳೆ ಅವರು ಕರೆನೀಡಿದ್ದಾರೆ.

### ಎಸ್‌ಐಟಿ ವರದಿವರೆಗೆ ತಾಳ್ಮೆಯಿಂದಿರಿ

**ಲೇಹ್:** ರಾಮಮಂದಿರದ ಕಾಣಿಕೆ ಹಣ ದುರುಪಯೋಗ ಆರೋಪದ ಕುರಿತು ವಿಶೇಷ ತನಿಖಾ ತಂಡದ ವರದಿ ಬರುವವರೆಗೆ ಜನರು ತಾಳ್ಮೆಯಿಂದ ಕಾಯಬೇಕು ಎಂದು ಆರ್‌ಎಸ್‌ಎಸ್ ಹಿರಿಯ ಮುಖಂಡ ಇಂದ್ರೇಶ್ ಕುಮಾರ್ ಮನವಿ ಮಾಡಿದ್ದಾರೆ. ತನಿಖಾ ತಂಡಕ್ಕೆ ಸಂಪೂರ್ಣ ಸ್ವಾತಂತ್ರ್ಯ ನೀಡಲಾಗಿದ್ದು, ವಿಚಾರಣೆಯಲ್ಲಿ ಹಸ್ತಕ್ಷೇಪ ಮಾಡಬಾರದು. ವರದಿ ಸಲ್ಲಿಕೆಯಾದ ಬಳಿಕ ಸರ್ಕಾರ ಸೂಕ್ತ ಕ್ರಮ ಕೈಗೊಳ್ಳಲಿದೆ. ತಪ್ಪಿತಸ್ಥರಿಗೆ ಕಠಿಣ ಶಿಕ್ಷೆಯಾಗಲಿದ್ದು, ನ್ಯಾಯವು ಮಾದರಿಯಾಗಲಿದೆ ಎಂದರು. ಪ್ರಕರಣವನ್ನು ರಾಜಕೀಯ ಗೊಳಿಸಬಾರದು ಹಾಗೂ ಮಾಧ್ಯಮ ವಿಚಾರಣೆ ನಡೆಸುವುದರಿಂದ ದೂರವಿರಬೇಕು ಎಂದೂ ಅವರು ಹೇಳಿದರು.

ಆರ್‌ಎಸ್‌ಎಸ್ ಹಿರಿಯ ನಾಯಕ ಇಂದ್ರೇಶ್ ಕುಮಾರ್ ಮನವಿ

ರಾಜ್ಯದ ಎ.ಕೆ. ದಾಸ್ ಪತ್ರಕ್ಕೆ ಮೋದಿ ಪ್ರತಿಕ್ರಿಯೆ

# ವಿಕಸಿತ ಭಾರತ ಕನಸಿಗೆ ಸೋಮನಾಥ ಸ್ಫೂರ್ತಿ

### ಆಶಯ ಗೀತೆ

ಎಲ್ಲಿ ನಂಬಿಕೆಗೆ ಧಕ್ಕೆಯಾಗಿತ್ತೋ,
ಅಲ್ಲೀಗ ವಿಶ್ವಾಸದ ದೀಪ ಬೆಳಗುತ್ತಿದೆ.
ಬದಲಾದ ಮೌಲ್ಯಗಳು ಪ್ರಗತಿಯ
ಹೊಸ ಮಾರ್ಗಕ್ಕೆ ನಾಂದಿ ಹಾಡಿವೆ.
ಮತ್ತೆ ನಿರ್ಮಾಣವಾಗುತ್ತಿದೆ ನವ ಭಾರತ
ಎಂದು ಸಾರುತ್ತಿದೆ ಪ್ರತಿ ಕಲ್ಲು.



• **ಹೊಸದಿಲ್ಲಿ:** ಸೋಮನಾಥ ದೇವಾಲಯದ ಪುನರ್ ನಿರ್ಮಾಣವು ಕೇವಲ ಐತಿಹಾಸಿಕ ಘಟನೆಯಲ್ಲ, ಅದು ಭಾರತದ ನಾಗರಿಕ ಪ್ರಜ್ಞೆಯ ಪುನರುತ್ಥಾನ ಹಾಗೂ ಆತ್ಮವಿಶ್ವಾಸದ ಸಂಕೇತವಾಗಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ.

ಕರ್ನಾಟಕದ ಬೆಂಗಳೂರಿನ ನಿವಾಸಿ ಎ.ಕೆ. ದಾಸ್ ಅವರು ಸೋಮನಾಥ ದೇವಾಲಯದ ಪುನರ್ ನಿರ್ಮಾಣದ 75ನೇ ವರ್ಷದ ಅಂಗವಾಗಿ ಬರೆದ ಪತ್ರಕ್ಕೆ ಪ್ರಧಾನಿ ಪ್ರತಿಕ್ರಿಯೆ ನೀಡಿದ್ದು, ಜೂ.24ರಂದು ಕಳುಹಿಸಿದ ಪತ್ರದಲ್ಲಿ ಸೋಮನಾಥ ದೇವಾಲಯವು ಭಾರತದ ಆಧ್ಯಾತ್ಮಿಕ ಪರಂಪರೆ, ಸ್ವಾಭಿಮಾನ ಹಾಗೂ ಸಾಂಸ್ಕೃತಿಕ ಪುನರುಜ್ಜೀವನದ ಕಾಲಾತೀತ ಪ್ರತೀಕವಾಗಿ ಉಳಿದಿದೆ ಎಂದು ಬಣ್ಣಿಸಿದ್ದಾರೆ.

ಶತಮಾನಗಳ ಕಾಲ ಅನೇಕ ಆಕ್ರಮಣ ಮತ್ತು ಧ್ವಂಸವನ್ನು ಎದುರಿಸಿದರೂ ಭಕ್ತರ ಅಚಲ ನಂಬಿಕೆಯಿಂದ ಸೋಮನಾಥದ ಚೈತನ್ಯ ಎಂದಿಗೂ ಕ್ಷೀಣಿಸಲಿಲ್ಲ. ಸ್ವಾತಂತ್ರ್ಯಾನಂತರ ದೇವಾಲಯದ ಪುನರ್‌ನಿರ್ಮಾಣವು ರಾಷ್ಟ್ರದ ಆತ್ಮವಿಶ್ವಾಸವನ್ನು ಮರುಜಾಗೃತಿಗೊಳಿಸಿದ ಐತಿಹಾಸಿಕ ಘಟ್ಟವಾಗಿದ್ದು, ವಿಕಸಿತ ಭಾರತ ನಿರ್ಮಾಣದ ಕನಸಿಗೂ ಇದೇ ಸಂಕಲ್ಪ, ಆತ್ಮವಿಶ್ವಾಸ ಮತ್ತು ಪುನರುತ್ಥಾನದ ಮನೋಭಾವವೇ ಪ್ರೇರಣೆಯಾಗಿದೆ ಎಂದು ಪ್ರಧಾನಿ ಹೇಳಿದ್ದಾರೆ.

ಭಾರತದ ಅಭಿವೃದ್ಧಿಯ ಪಯಣವು ತನ್ನ ಸಾಂಸ್ಕೃತಿಕ ಪರಂಪರೆಯನ್ನು ಗೌರವಿಸುತ್ತಲೇ ಆಧುನಿಕ ಭವಿಷ್ಯವನ್ನು ಆತ್ಮವಿಶ್ವಾಸದಿಂದ ಅಪ್ಪಿಕೊಳ್ಳುವ ನಾಗರಿಕತೆಯ ಶಕ್ತಿಯಿಂದ ಸಾಗುತ್ತಿದೆ ಎಂದೂ ಅವರು ಅಭಿಪ್ರಾಯಪಟ್ಟಿದ್ದಾರೆ. ➡ಪುಟ ೪

### ರಾಷ್ಟ್ರೀಯ ನವೀಕರಣದ ಕಥೆ

1951ರ ಸೋಮನಾಥ ದೇವಾಲಯದ ಪುನರ್ ನಿರ್ಮಾಣ ಮತ್ತು ವಿಕಸಿತ ಭಾರತ 2047 ಗುರಿಯ ನಡುವೆ ಸಾಮ್ಯತೆ ಎಳೆದಿರುವ ದಾಸ್, ಸೋಮನಾಥದ ಕಥೆಯು ಕೇವಲ ಮರುಸ್ಥಾಪನೆಯದ್ದಲ್ಲ, ಅದು ರಾಷ್ಟ್ರೀಯ ನವೀಕರಣದ ಕಥೆಯಾಗಿದೆ ಎಂದು ಅಭಿಪ್ರಾಯಪಟ್ಟಿದ್ದಾರೆ. ನಂಬಿಕೆ, ಧೈರ್ಯ ಮತ್ತು ಪುನರ್ ನಿರ್ಮಾಣದ ಮನೋಭಾವವೇ ಅಭಿವೃದ್ಧಿ ಹೊಂದಿದ ಭಾರತದತ್ತ ಸಾಗಲು ದೇಶಕ್ಕೆ ನಿರಂತರ ಸ್ಫೂರ್ತಿ ನೀಡಲಿದೆ ಎಂದು ಅವರು ವಿಶ್ವಾಸ ವ್ಯಕ್ತಪಡಿಸಿದ್ದಾರೆ. ಪ್ರಧಾನಿ ಮತ್ತು ನಾಗರಿಕರ ನಡುವಿನ ಈ ಪತ್ರ ವಿನಿಮಯವು ಭಾರತದ ಸಾಂಸ್ಕೃತಿಕ ಪರಂಪರೆಯೇ ದೇಶದ ಭವಿಷ್ಯದ ಅಭಿವೃದ್ಧಿಗೆ ಮಾರ್ಗದರ್ಶಕ ಶಕ್ತಿಯಾಗಿದೆ ಎಂಬ ಸಂದೇಶವನ್ನು ಮತ್ತೊಮ್ಮೆ ಬಲಪಡಿಸಿದೆ.

ಜಲ ವಿದ್ಯುತ್ ಪ್ರಮಾಣ ಕುಸಿತ ಸಾಧ್ಯತೆ ಹಿನ್ನೆಲೆ ಸಿಎಂ ನಿರ್ದೇಶನ

# ಪರ್ಯಾಯ ವಿದ್ಯುತ್‌ಗೆ ಸೂಚನೆ

• **ಬೆಂಗಳೂರು:** ಎಲ್ ನಿನೊ ಪರಿಣಾಮದಿಂದಾಗಿ ಜಲ ವಿದ್ಯುತ್ ಉತ್ಪಾದನೆ ಕುಸಿಯುವ ಸಾಧ್ಯತೆಯನ್ನು ಗಮನದಲ್ಲಿಟ್ಟುಕೊಂಡು ವಿಶೇಷ ತುರ್ತು ಕಾರ್ಯಯೋಜನೆ ರೂಪಿಸುವುದರ ಜತೆ ಸಂಗ್ರಹಣೆ ಮತ್ತು ಇತರೆ ಮೂಲಗಳ ಉತ್ಪಾದನೆಗೆ ತುರ್ತು ಗಮನಹರಿಸಬೇಕು ಎಂದು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಸೂಚನೆ ನೀಡಿದರು.



ಇಂಧನ ಇಲಾಖೆಯ ಪ್ರಗತಿ ಪರಿಶೀಲನೆ ನಡೆಸಿದ ಮುಖ್ಯಮಂತ್ರಿಗಳು ಬರಗಾಲದ ಪರಿಸ್ಥಿತಿ ಎದುರಿಸಲು ಇಲಾಖೆ ಏನೇನು ಮುನ್ನೆಚ್ಚರಿಕಾ ಕ್ರಮಗಳನ್ನು ಕೈಗೊಂಡಿದೆ ಎನ್ನುವ ಬಗ್ಗೆ ವಿವರಗಳನ್ನು ಪಡೆದು ಸಾರ್ವಜನಿಕ ಬಳಕೆಗೆ ತೊಂದರೆ ಆಗದಂತೆ ಅಗತ್ಯ ಕ್ರಮ ಕೈಗೊಳ್ಳಬೇಕು. ಇಂಧನ ಭದ್ರತೆಗಾಗಿ ಸರ್ಕಾರಕ್ಕೆ ಮೀಸಲಾದ ಕಲ್ಲಿದ್ದಲು ಗಣಿಗಳನ್ನು ಕಾರ್ಯಾರಂಭಗೊಳಿಸಿ ಸಾಕಷ್ಟು ಕಲ್ಲಿದ್ದಲು ಸಂಗ್ರಹವನ್ನು ನಿರಂತರವಾಗಿ ಕಾಯ್ದುಕೊಳ್ಳಬೇಕು ಎಂದು ಸೂಚನೆ ನೀಡಿದರು. ➡ಪುಟ ೪

### ವಿದ್ಯುತ್ ಖಾಸಗೀಕರಣ: ಹಿಂದೆ ಸರಿದ ಟಾಟಾ

• **ಬೆಂಗಳೂರು:** ರಾಜ್ಯದಲ್ಲಿ ವಿದ್ಯುತ್ ವಿತರಣೆ ಖಾಸಗೀಕರಣಕ್ಕೆ ತೀವ್ರ ವಿರೋಧ ವ್ಯಕ್ತವಾದ ಹಿನ್ನೆಲೆಯಲ್ಲಿ ಟಾಟಾ ಪವರ್ ಕಂಪನಿ ತನ್ನ ಅರ್ಜಿಯನ್ನು ವಾಪಸ್ ಪಡೆದಿದೆ. ರಾಜ್ಯದ ಎಸ್ಕಾಂಗಳು, ವಿದ್ಯುತ್ ವಲಯದ ನೌಕರರ ಸಂಘಟನೆಗಳು ಹಾಗೂ ಗ್ರಾಹಕರಿಂದ ವ್ಯಕ್ತವಾದ ತೀವ್ರ ಪ್ರತಿರೋಧಕ್ಕೆ ಮಣಿದ ಟಾಟಾ ಪವರ್ ಕಂಪನಿ ಲಿಮಿಟೆಡ್ 19 ಜಿಲ್ಲೆಗಳಲ್ಲಿ ವಿದ್ಯುತ್ ವಿತರಣೆಗೆ ಅನುಮತಿ ಕೋರಿ ಸಲ್ಲಿಸಿದ್ದ ಅರ್ಜಿಯನ್ನು ಶುಕ್ರವಾರ ಹಿಂಪಡೆದಿದೆ. ➡ಪುಟ ೪

ಕೇಂದ್ರ ಚುನಾವಣಾ ಆಯೋಗ ಮಧ್ಯಪ್ರವೇಶಕ್ಕೆ ಎಚ್‌ಡಿಕೆ ಆಗ್ರಹ


# ಎಸ್‌ಐಆರ್‌ನಲ್ಲಿ ಅಕ್ರಮ: ಆಕ್ರೋಶ

• **ಬೆಂಗಳೂರು:** ರಾಮನಗರ ಸೇರಿದಂತೆ ರಾಜ್ಯದ ವಿವಿಧೆಡೆ ರಾಜ್ಯ ಸರಕಾರ ಕೇಂದ್ರ ಚುನಾವಣಾ ಆಯೋಗದ ಮಾರ್ಗಸೂಚಿಯನ್ನು ಗಾಳಿಗೆ ತೂರಿ ಮತದಾರರ ಪಟ್ಟಿ ತೀವ್ರ ಪರಿಷ್ಕರಣೆ ಪ್ರಕ್ರಿಯೆ ನಡೆಸುತ್ತಿದ್ದು, ಆಡಳಿತ ಯಂತ್ರವನ್ನು ಸಂಪೂರ್ಣವಾಗಿ ದುರುಪಯೋಗ ಮಾಡಿಕೊಳ್ಳುತ್ತಿದೆ ಎಂದು ವಿಪಕ್ಷಗಳಾದ ಬಿಜೆಪಿ ಹಾಗೂ ಜೆಡಿಎಸ್ ಆರೋಪಿಸಿವೆ. ಕೆಲ ಜಿಲ್ಲೆಗಳ ಜಿಲ್ಲಾಧಿಕಾರಿಗಳು ರಾಜ್ಯ ಸರಕಾರದ ತಾಳಕ್ಕೆ ತಕ್ಕಂತೆ ಕುಣಿಯುತ್ತಿದ್ದಾರೆ. ಈ ಸರಕಾರವು ಅಧಿಕಾರಿಗಳನ್ನು ಗುಲಾಮರಂತೆ ನಡೆಸಿಕೊಳ್ಳುತ್ತಿದೆ. ಅವರನ್ನು ಹೆದರಿಸಿ ಬೆದರಿಸಿ ತನಗೆ ಬೇಕಾದ ಹಾಗೆ ಎಸ್‌ಐಆರ್ ಮಾಡಿಸಿಕೊಳ್ಳುತ್ತಿದೆ. ➡ಪುಟ ೪



### ಮಸೀದಿಗಳಲ್ಲಿ ಎಸ್‌ಐಆರ್ ಫಾರ್ಮ್ ಭರ್ತಿ: ಸಚಿವ ಜೋಶಿ

• **ಹೊಸದಿಲ್ಲಿ:** ಮತದಾರರ ಪಟ್ಟಿ ವಿಶೇಷ ಪರಿಷ್ಕರಣೆ ಅಕ್ರಮ ನಿನ್ನೆ ರಾಮನಗರ, ಇಂದು ಶಿಗ್ಗಾಂವಿ-ಸವಣೂರು, ಹುಬ್ಬಳ್ಳಿ-ಧಾರವಾಡ. ಮಸೀದಿಗಳಲ್ಲಿ ಕುಳಿತು ಫಾರ್ಮ್ ಭರ್ತಿ...ಹೀಗೆ ರಾಜ್ಯಾದ್ಯಂತ ಎಸ್‌ಐಆರ್‌ನಲ್ಲಿ ಅಕ್ರಮಗಳ ಸುರಿಮಳೆಯಾಗುತ್ತಿದೆ. ಬೃಹತ್ ಹಗರಣವೇ ನಡೆಯುತ್ತಿದೆ ಎಂದು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಕಿಡಿ ಕಾರಿದ್ದಾರೆ. ಈ ಕುರಿತು ಹೊಸದಿಲ್ಲಿಯಲ್ಲಿ ಮಾತನಾಡಿದ ಅವರು, ಮಸೀದಿಯಲ್ಲಿ ಕುಳಿತು ಫಾರ್ಮ್ ಭರ್ತಿ ಮಾಡಿಕೊಡಲಾಗುತ್ತಿದೆ. ➡ಪುಟ ೪



# ಜೈಶ್ ನಂಟಿನ 8 ಉಗ್ರರ ಸೆರೆ

• **ಗಾಂಧಿನಗರ:** ಗುಜರಾತ್ ಮತ್ತು ಮಧ್ಯಪ್ರದೇಶಗಳ ಹಲವು ಜಿಲ್ಲೆಗಳಲ್ಲಿ ಮಹತ್ವದ ಕಾರ್ಯಾಚರಣೆ ನಡೆಸಿರುವ ಗುಜರಾತ್ ಭಯೋತ್ಪಾದಕ ನಿಗ್ರಹ ದಳ , ಪಾಕ್ ಮೂಲದ ಭಯೋತ್ಪಾದಕ ಸಂಘಟನೆ ಜೈಶ್ ಇ -ಮೊಹಮ್ಮದ್‌ಗೆ ಸೇರಿದ ಎಂಟು ಭಯೋತ್ಪಾದಕರನ್ನು ಬಂಧಿಸಿದೆ. ಗುಜರಾತಿನ ಬನಸ್ಕಾಂತ, ಪಾಟನ್, ನವಸಾರಿ ಜಿಲ್ಲೆಗಳು ಮತ್ತು ಮಧ್ಯಪ್ರದೇಶದ ದೇವಸ್ ಜಿಲ್ಲೆಗಳಲ್ಲಿ ದಾಳಿ ಕಾರ್ಯಾಚರಣೆ ನಡೆಯಿತು.ಬಂಧಿತರ ಪೈಕಿ ಬಹುತೇಕರು ಉತ್ತರ ಗುಜರಾತಿನ ಒಂದೇ ಪ್ರದೇಶವಾಸಿಗಳು ಮತ್ತು ಸ್ಥಳೀಯ ಮದರಸ ಗಳೊಂದಿಗೆ ಸಂಪರ್ಕವಿರುವವರು. ಪ್ರಸ್ತುತ ಬಂಧನ ಕಾರ್ಯಾಚರಣೆಯಿಂದ ವಲಯದ ಜೈಶ್ ಇ ಮೊಹ ಮದ್ ಜಾಲಕ್ಕೆ ತೀವ್ರ ಹೊಡೆತ ಬಿದ್ದಿದೆ ಎಂದು ಎಟಿಎಸ್‌ನ ಪ್ರಾಥಮಿಕ ಮಾಹಿತಿ ಹೇಳಿದೆ. ➡ಪುಟ ೪

ಗುಜರಾತ್, ಮಧ್ಯಪ್ರದೇಶಗಳಲ್ಲಿ ಎಟಿಎಸ್ ಕಾರ್ಯಾಚರಣೆ



# ಇ20 ವಿರುದ್ಧದ ಸುಳ್ಳುಗಳಿಗೆ ತೆರೆ



## ನೀರು, ಮೈಲೇಜ್, ಎಂಜಿನ್, ವಿಮೆ ಕುರಿತ ವೈರಲ್ ಆರೋಪಗಳಿಗೆ ಕೇಂದ್ರದ ತಿರುಗೇಟು

• **ಹೊಸದಿಲ್ಲಿ:** ಇ20 ಎಥೆನಾಲ್ ಮಿಶ್ರಿತ ಪೆಟ್ರೋಲ್ ಕುರಿತು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿರುವ ಹತ್ತು ಪ್ರಮುಖ ಆರೋಪಗಳು ಸುಳ್ಳು ಅಥವಾ ದಾರಿತಪ್ಪಿಸುವಂತಿವೆ ಎಂದು ಕೇಂದ್ರ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವಾಲಯ ಸ್ಪಷ್ಟಪಡಿಸಿದೆ.

ಒಂದು ಲೀಟರ್ ಎಥೆನಾಲ್ ಉತ್ಪಾದನೆಗೆ 10 ಸಾವಿರ ಲೀಟರ್ ನೀರು ಬೇಕು ಎಂಬುದು ತಪ್ಪು. ರಾಷ್ಟ್ರೀಯ ಆಹಾರ ಭದ್ರತೆಯ ಅಗತ್ಯ ಪೂರೈಸಿದ ಬಳಿಕದ ಹೆಚ್ಚುವರಿ ಅಕ್ಕಿಯನ್ನಷ್ಟೇ ಎಥೆನಾಲ್‌ಗೆ ಬಳಸಲಾಗುತ್ತದೆ. ಘಟಕದಲ್ಲಿ ಒಂದು ಲೀಟರ್ ಎಥೆನಾಲ್‌ಗೆ 3ರಿಂದ 5 ಲೀಟರ್ ಸಂಸ್ಕರಿತ ನೀರು ಬೇಕಾಗುತ್ತದೆ. ಆಧುನಿಕ ಘಟಕಗಳಲ್ಲಿ ಶೂನ್ಯ ದ್ರವ ತ್ಯಾಜ್ಯ ವ್ಯವಸ್ಥೆಯಿಂದ ನೀರನ್ನು ಮರುಬಳಕೆ ಮಾಡಲಾಗುತ್ತದೆ. ಎಥೆನಾಲ್ ಪೂರೈಕೆಯಲ್ಲಿ ಮೆಕ್ಕೆಜೋಳದ ಪಾಲು ಈಗ ಶೇ.40ಕ್ಕಿಂತ ಹೆಚ್ಚಿದ್ದು, ಅದರ ಕನಿಷ್ಠ ಬೆಂಬಲ ಬೆಲೆಯನ್ನೂ ದಶಕದಲ್ಲಿ ಸುಮಾರು 1,300ರಿಂದ 2,400 ರೂ.ಗೆ ಹೆಚ್ಚಿಸಲಾಗಿದೆ.

### ಎಂಜಿನ್‌ಗೆ ಹಾನಿಯಾಗಲ್ಲ

ಇ20ರಿಂದ ಎಂಜಿನ್, ಲೋಹ ಅಥವಾ ಪ್ಲಾಸ್ಟಿಕ್ ಭಾಗಗಳಿಗೆ ಹಾನಿಯಿಲ್ಲ. ಕೆಲವು ಹಳೆಯ ವಾಹನಗಳಲ್ಲಿ ರಬ್ಬರ್ ಭಾಗ ಮತ್ತು ಗ್ಯಾಸ್ಕೆಟ್‌ಗಳನ್ನು ಬೇಗ ಬದಲಾಯಿಸಬೇಕಾಗಬಹುದು. ಪರೀಕ್ಷೆಗಳಲ್ಲಿ ಕಾರ್ಬನ್ ಮಾನಾಕ್ಸೈಡ್ ಉತ್ಸರ್ಜನೆ ದ್ವಿಚಕ್ರ ವಾಹನಗಳಲ್ಲಿ ಸುಮಾರು ಶೇ.50 ಹಾಗೂ ನಾಲ್ಕು ಚಕ್ರ ವಾಹನಗಳಲ್ಲಿ ಶೇ.30ರಷ್ಟು ಇಳಿದಿದೆ. ಇ20 ಬಳಕೆಯಿಂದ ವಾಹನ ವಿಮೆ ಅಥವಾ ತಯಾರಕರ ವಾರಂಟಿ ರದ್ದಾಗುವುದಿಲ್ಲ ಎಂದೂ ಸ್ಪಷ್ಟಪಡಿಸಲಾಗಿದೆ.

- ವೈರಲ್ ವಿಡಿಯೊಗಳೂ ನಕಲಿ
- ರೈತರಿಗೆ ಲಾಭ

• ವಿವರ ಪುಟ ೨

### ಪರೀಕ್ಷಿಸಲಾದ ಪ್ರಯೋಗ

ಇ20 ಪರೀಕ್ಷಿಸದ ಪ್ರಯೋಗವಲ್ಲ. ಅಮೆರಿಕ, ಬ್ರೆಜಿಲ್, ಕೆನಡಾ, ಥಾಯ್ಲೆಂಡ್, ಜಪಾನ್ ಮತ್ತು ಯುರೋಪಿನ ಹಲವು ರಾಷ್ಟ್ರಗಳಲ್ಲಿ ಎಥೆನಾಲ್ ಮಿಶ್ರಿತ ಇಂಧನ ಬಳಕೆಯಲ್ಲಿದೆ. ಭಾರತದಲ್ಲಿ ಕಾರುಗಳ ಮೇಲೆ 40 ಸಾವಿರ ಕಿ.ಮೀ. ಹಾಗೂ ದ್ವಿಚಕ್ರ ವಾಹನಗಳ ಮೇಲೆ 20 ಸಾವಿರ ಕಿ.ಮೀ. ನಡೆಸಿದ ಪರೀಕ್ಷೆಗಳಲ್ಲಿ ಗಂಭೀರ ಮೈಲೇಜ್ ಕುಸಿತ ಕಂಡುಬಂದಿಲ್ಲ. ಚಾಲನಾ ಶೈಲಿ, ವಾಹನ ನಿರ್ವಹಣೆ, ಟೈರ್ ಒತ್ತಡ ಮತ್ತು ಹವಾನಿಯಂತ್ರಣ ಬಳಕೆಯೂ ಮೈಲೇಜ್ ಮೇಲೆ ಪರಿಣಾಮ ಬೀರುತ್ತವೆ.

**ಬೆಳ್ಳಿ ಬಂಗಾರ** (ಬೆಂಗಳೂರು) ಬೆಳ್ಳಿ: 2,50,000 (2,45,000) ಅಪರಂಜಿ ಚಿನ್ನ: 1,47,000 (1,44,550) ಆಭರಣ ಚಿನ್ನ: 1,34,750 (1,32,500) ಚಿನ್ನ 10 ಗ್ರಾಂ.ಗೆ, ಬೆಳ್ಳಿ 1 ಕೆ.ಜಿಗೆ, ರೂ.ಗಳಲ್ಲಿ (ಆವರಣದಲ್ಲಿ ಹಿಂದಿನ ದಿನದ ದರ)

**ಷೇರು ಸೂಚ್ಯಂಕ** ಬಿಎಸ್‌ಇ 77,763 (261↑) ಎನ್‌ಎಸ್‌ಇ 24,270 (95↑)

$1 = ₹95.18

## ಕಿರುಸುದ್ದಿ



ಹುಬ್ಬಳ್ಳಿ: ನಗರಕ್ಕೆ ಆಗಮಿಸಿದ ಉಪಮುಖ್ಯಮಂತ್ರಿ ಡಾ. ಜಿ. ಪರಮೇಶ್ವರ ಅವರಿಗೆ ಹು-ಧಾ ಮಹಾನಗರ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಅಲ್ತಾಫ್ ಹಳ್ಳೂರ ಅವರ ನೇತೃತ್ವದಲ್ಲಿ ಸನ್ಮಾನಿಸಲಾಯಿತು. ಗ್ರಾಮೀಣ ಘಟಕ ಅಧ್ಯಕ್ಷ ಅನಿಲಕುಮಾರ ಪಾಟೀಲ, ಮುಖಂಡ ರಾಜಶೇಖರ ಮೆಣಸಿನಕಾಯಿ, ಪ್ರೇಮನಾಥ ಚಿಕ್ಕತುಂಬಳ ಹಾಗೂ ಶಿವಶಂಕರ ಹಂಪಣ್ಣವರ ಇದ್ದರು.

### ರಂಗರೋಹನ ಸಮಾರಂಭ ನಾಳೆ

ಹುಬ್ಬಳ್ಳಿ: ನಗರದ ಅಭಿನಯ ಸ್ಕೂಲ್ ಹಾಗೂ ಡ್ಯಾನ್ಸ್ ಅಕಾಡಮಿ ಮೂವರು ವಿದ್ಯಾರ್ಥಿಗಳಿಂದ ರಂಗರೋಹನ ಸಮಾರಂಭ ಜು. 5 ರಂದು ಸಂಜೆ 4.30 ಕ್ಕೆ ಇಲ್ಲಿಯ ದೇಶಪಾಂಡೆ ನಗರದ ಸವಾಯಿ ಗಂಧರ್ವ ಭವದಲ್ಲಿ ಏರ್ಪಡಿಸಲಾಗಿದೆ ಎಂದು ಸಂಸ್ಥಾಪಕಿ ಸೀಮಾ ಉಪಾಧ್ಯಾಯ ತಿಳಿಸಿದರು. ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಚೈತನ್ಯ ಶಾಲೆಯಲ್ಲಿ 7 ನೇ ತರಗತಿಯಲ್ಲಿ ವಿದ್ಯಾಭ್ಯಾಸ ಮಾಡುವ ಅವಣಿ ಜೋಶಿ, ಚಿನ್ಮಯ ವಿದ್ಯಾಲಯದ 8 ನೇ ತರಗತಿ ವಿದ್ಯಾರ್ಥಿನಿ ಆರನಾ ಕುರಕೋಡಿಯವರ, ಕೇಂದ್ರಿಯ ವಿದ್ಯಾಲಯದ ವಿದ್ಯಾರ್ಥಿನಿ ಆರಾಧ್ಯ ನೃತ್ಯ ಪ್ರದರ್ಶನ ನೀಡಲಿದ್ದಾರೆ ಎಂದರು. ಭರತನಾಟ್ಯದ ಸಂಪ್ರದಾಯವಾದ ಮಲ್ಲಾರಿ ನೃತ್ಯದೊಂದಿಗೆ ಸಮಾರಂಭಕ್ಕೆ ಚಾಲನೆ ದೊರೆಯಲಿದೆ. ರಾಜೋತ್ಸವ ಪ್ರಶಸ್ತಿ ಪುರಸ್ಕೃತ ಮೈಸೂರಿನ ವಿದ್ವಾಂಸ ಪ್ರೊ. ರಾಮಮೂರ್ತಿ ರಾವ್, ಕೆಎಂಸಿಆರ್‌ಐ ನಿರ್ದೇಶಕ ಡಾ. ಕೆ.ಎಫ್. ಕಮ್ಮಾರ, ಜಿಲ್ಲಾಧಿಕಾರಿ ಸ್ನೇಹಲ್ ಆರ್., ಅತಿಥಿಯಾಗಿ ಭಾಗವಹಿಸಲಿದ್ದಾರೆ ಎಂದರು. ನಟ್ಟುವಾಂಗ ನಾನು ನಿರ್ವಹಿಸಲಿದ್ದು, ಗಾಯನ ವಾಣಿ ಉಡುಪಿ, ಮೃದಂಗ ಪಂಚಮ್ ಉಪಾಧ್ಯಾಯ, ರಿದಮ್ ಪ್ಯಾಡ್ ಡಾ. ಗೋಪಿಕೃಷ್ಣ ನಂಬುದಿಯಾರ್ ಹಾಗೂ ಕೊಳಲಿನಲ್ಲಿ ವೈಭವ ಭಟ್ ಪ್ರಸ್ತುತ ಪಡಿಸಲಿದ್ದಾರೆ ಎಂದು ತಿಳಿಸಿದರು. ವೈದ್ಯರಾದ ಶ್ರೀನಿವಾಸ ಜೋಶಿ, ದೀಪ್ತಿ ಜೋಶಿ, ಅವಣಿ ಜೋಶಿ ಇದ್ದರು.

### ನಾಳೆ ಜಿಜ್ಞಾಸೆ ಕಾರ್ಯಕ್ರಮ

ಹುಬ್ಬಳ್ಳಿ: ಇಲ್ಲಿಯ ದುರ್ಗದ ಬೈಲ್ ಗೌಳಿಗಲ್ಲಿರುವ ವೆಂಕಟೇಶ್ವರ ದೇವಸ್ಥಾನದಲ್ಲಿ ವಿಜಯಿಂದ್ರ ಗುಡಿ ಹಾಗೂ ಶ್ರೀಶಗುಡಿ ಅವರಿಂದ ಜು.5ರಂದು ಬೆಳಗ್ಗೆ 10 ಗಂಟೆಗೆ ಜಿಜ್ಞಾಸೆ ಕಾರ್ಯಕ್ರಮ ನಡೆಯಲಿದೆ. ರಾಷ್ಟ್ರಪತಿ ಪ್ರಶಸ್ತಿ ಪುರಸ್ಕೃತ ವಿದ್ವಾನ್ ಡಾ. ವ್ಯಾಸನಕೆರೆ ಪ್ರಭಂಜನ ಆಚಾರ್ಯ ಅವರು ನಡೆಸಿಕೊಡಲಿದ್ದಾರೆ. ಸಾಧನ ಮಾರ್ಗ ಎಂಬ ವಿಷಯದ ಬಗ್ಗೆ ಕಾರ್ಯಕ್ರಮ ನಡೆಯಲಿದೆ ಎಂದು ವಿಜಯೀಂದ್ರ ಗುಡಿ ಹಾಗೂ ಶ್ರೀಶ ಗುಡಿ ತಿಳಿಸಿದ್ದಾರೆ.

### ಕಾಯಕಯೋಗಿ ಗೌರವ ಪ್ರಶಸ್ತಿ

ಹುಬ್ಬಳ್ಳಿ: ಕರ್ನಾಟಕ ಚುಟುಕು ಸಾಹಿತ್ಯ ಪರಿಷತ್ ನೀಡುವ ಕಾಯಕಯೋಗಿ ಗೌರವ ಪ್ರಶಸ್ತಿಗೆ ಕುಮಟಾದ ಗಣಪತಿ ಅಡಿಗುಂಡಿ, ಬಸವನ ಬಾಗೇರವಾಡಿಯ ಪ್ರಭಾಕರ ಖೇಡದ ಹಾಗೂ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಹೊಸಕೋಟೆ ಶ್ರೀಕಾಂತ ಕೆ.ವಿ. ಅವರನ್ನು ಆಯ್ಕೆ ಮಾಡಲಾಗಿದೆ ಎಂದು ಸಂಚಾಲಕ ಕೃಷ್ಣಮೂರ್ತಿ ಕುಲಕರ್ಣಿ ತಿಳಿಸಿದ್ದಾರೆ. ಪ್ರಶಸ್ತಿಯನ್ನು ಗಳಿಸಿದ ಈ ಮೂವರು ಘಟಕದ ಅಧ್ಯಕ್ಷರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಕಲಬುರಗಿಯ ಶ್ರೀನಿವಾಸ ಸರಡಗಿ ಮಠದಲ್ಲಿ ಜು. 5 ರಂದು ನಡೆಯುವ ರಾಜ್ಯಮಟ್ಟದ ಸಮ್ಮೇಳನದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ. ಸರ್ವಾಧ್ಯಕ್ಷ ಅಫಜಲಪುರದ ವಿಶ್ವಾರಾಧ್ಯ ಮಳೇಂದ್ರ ಶಿವಾಚಾರ್ಯರಿಗೆ ಚುಟುಕು ಚೇತನ ಮತ್ತು ಕಲಬುರಗಿಯ ಡಾ.ರೇವಣಸಿದ್ಧ ಶಿವಾಚಾರ್ಯ, ಬಸವಕಲ್ಯಾಣದ ಡಾ. ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯ ಅವರಿಗೆ ಚುಟುಕು ತಪಸ್ವಿ ಪ್ರಶಸ್ತಿ ನೀಡಿ ಗೌರವಿಸಲಾಗುವುದು ಎಂದು ಪ್ರಸಾರಾಂಗ ನಿರ್ದೇಶಕ ಚನ್ನಬಸಪ್ಪ ಧಾರವಾಡಶೆಟ್ಟಿ ಪ್ರಕಟಣೆಗೆ ತಿಳಿಸಿದ್ದಾರೆ.

### ಭರತನಾಟ್ಯ ನಾಳೆ

ಹುಬ್ಬಳ್ಳಿ: ನಾಟ್ಯಾಂಜಲಿ ನೃತ್ಯ ಕಲಾ ಕೇಂದ್ರದ ಹುಬ್ಬಳ್ಳಿ ಶಾಖೆ ವತಿಯಿಂದ ಪ್ರಥಮ ಪಲ್ಲವ ಭರತನಾಟ್ಯ ಕಾರ್ಯಕ್ರಮ ದೇಶಪಾಂಡೆ ನಗರದ ಸವಾಯಿ ಗಂಧರ್ವ ಭವನದಲ್ಲಿ ಜು. 5 ರಂದು ಸಂಜೆ 4.30 ಕ್ಕೆ ಆಯೋಜಿಸಲಾಗಿದೆ ಎಂದು ಕಲಾ ಕೇಂದ್ರದ ಅಧ್ಯಕ್ಷ ಪ್ರದೀಪ ಭಟ್ಟ ತಿಳಿಸಿದರು. ನಗರದಲ್ಲಿ ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ವಿದ್ಯಾರ್ಥಿನಿಯರಾದ ಅನಘಾ ಕುಲಕರ್ಣಿ, ಟಿ. ವೈಷ್ಣವಿ ಸಿಂಗ್, ಭುವನಾ ಹಿರೇಮಠ, ರಾಘವಿ ಎಸ್. ಫತ್ತೇಪುರ್ ಹಾಗೂ ಸಾನಿಧ್ಯ ಬಿಳ್ಲೂರ್ ಅವರು ಪುಷ್ಪಾಂಜಲಿ, ಜತಿಸ್ವರ, ಕೃತಿ, ಶಿವಸ್ತುತಿ, ದೇವರ ನಾಮ ಹಾಗೂ ತಿಲ್ಲಾನ ನೃತ್ಯಬಂಧಗಳನ್ನು ಪ್ರದರ್ಶಿಸಲಿದ್ದಾರೆ ಎಂದರು. ಅಧ್ಯಕ್ಷತೆಯನ್ನು ಪ್ರದೀಪ ಭಟ್ಟ ವಹಿಸಲಿದ್ದು, ಡಾ. ಶಿವರಾಮ ಕೆ.ವಿ. ಹಾಗೂ ವನಿತಾ ಆರ್. ಭಾಗವಹಿಸಲಿದ್ದಾರೆ. ಹಿಮ್ಮೇಳದಲ್ಲಿ ಡಾ. ಸಹನಾ ಭಟ್ಟ, ವಿನಯ ಮನ್ನಾ, ಪಂಚಮ್ ಉಪಾಧ್ಯಾಯ, ದೀಪಕ ಹೆಬ್ಬಾರ್ ಹಾಗೂ ಗೋಪಿಕೃಷ್ಣ ಸಹಕರಿಸಲಿದ್ದು, ಸತೀಶ್ ಮೂರುರ ನಿರ್ವಹಿಸಲಿದ್ದಾರೆ. ಪ್ರದೀಪ ಭಟ್ಟ ಅವರ ರಚನೆಯ ದಾಶರಥಿ ಎಂಬ ವಿಶೇಷ ನೃತ್ಯ ರೂಪಕ ಕಾರ್ಯಕ್ರಮದ ಪ್ರಮುಖ ಆಕರ್ಷಣೆಯಾಗಿದ್ದು, ನೃತ್ಯ ಗುರು ಡಾ. ಸಹನಾ ಭಟ್ಟ ಅವರಿಗೆ ಗುರುವಂದನೆ ಸಲ್ಲಿಸಲಾಗುವುದು ಎಂದರು. ಡಾ. ಸಹನಾ ಭಟ್ಟ, ಕಿರಣ್ ಹಿರೇಮಠ, ರವಿ ಬಿಳ್ಲೂರ್ ಹಾಗೂ ಡಾ. ವಿಶಾಲಾಕ್ಷಿ ಕುಲಕರ್ಣಿ, ಡಾ.ಸುಧೀಂದ್ರಶಯನ ಪತ್ತೇಪುರ ಇದ್ದರು.



ಹುಬ್ಬಳ್ಳಿ: ನೈರುತ್ಯ ರೈಲ್ವೆ ವೈದ್ಯಕೀಯ ವಿಭಾಗವು ವೈದ್ಯರ ಸಮರ್ಪಿತ ಸೇವೆಯನ್ನು ಗುರುತಿಸುವ ಮತ್ತು ಆರೋಗ್ಯ ಜಾಗೃತಿಯನ್ನು ಉತ್ತೇಜಿಸುವ ವಿವಿಧ ಕಾರ್ಯಕ್ರಮಗಳೊಂದಿಗೆ 'ರಾಷ್ಟ್ರೀಯ ವೈದ್ಯರ ದಿನಾಚರಣೆ-2026' ಆಚರಿಸಿತು.

## ಛಾತ್ರೋನ ಕಿ ಗೂಂಜ್ ಅಭಿಯಾನ ನಡೆಸಿ

ಧಾರವಾಡ: ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ನೇತೃತ್ವದ ಛಾತ್ರೋನ ಕಿ ಗೂಂಜ್ (ವಿದ್ಯಾರ್ಥಿಗಳ ಪ್ರತಿಧ್ವನಿ) ಅಭಿಯಾನ ಧಾರವಾಡದಲ್ಲಿ ನಡೆಸಬೇಕು ಎಂದು ಕಾನೂನು ವಿದ್ಯಾರ್ಥಿ ರಾಹುಲ್ ರಾಠೋಡ್ ಆಗ್ರಹಿಸಿದರು.

ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿ, ದೇಶದಲ್ಲಿ ದೊಡ್ಡಮಟ್ಟದಲ್ಲಿ ಸದ್ದು ಮಾಡಿದ ಪ್ರಶ್ನೆ ಪತ್ರಿಕೆ ಸೋರಿಕೆ, ಪರೀಕ್ಷಾ ಅಕ್ರಮ, ನಿರುದ್ಯೋಗ, ಶಿಕ್ಷಣ ವ್ಯವಸ್ಥೆಯ ಲೋಪಗಳ ವಿರುದ್ಧ ವಿದ್ಯಾರ್ಥಿಗಳ ಧ್ವನಿ ಬಲಪಡಿಸಬೇಕಿದೆ ಎಂದರು.

ಇದಕ್ಕಾಗಿ ಭಾರತೀಯ ಯುವ ಕಾಂಗ್ರೆಸ್ ಮತ್ತು ಭಾರತೀಯ ರಾಷ್ಟ್ರೀಯ ವಿದ್ಯಾರ್ಥಿ ಒಕ್ಕೂಟ(ಎನ್‌ಎಸ್‌ಯುಐ) ನೇತೃತ್ವದಲ್ಲಿ ದೇಶದ 28 ನಗರಗಳಲ್ಲಿ 'ಛಾತ್ರೋನ್ ಕಿ ಗೂಂಜ್' ಆಂದೋಲನವನ್ನು ಹಮ್ಮಿಕೊಂಡಿದೆ ಎಂದು ತಿಳಿಸಿದರು.

ಉತ್ತರ ಕರ್ನಾಟಕದ ಶೈಕ್ಷಣಿಕ ಕಾಶಿ ಎಂದೇ ಹೆಸರಾದ ಧಾರವಾಡದಲ್ಲಿ ಪ್ರಸ್ತುತ 1.50 ಲಕ್ಷಕ್ಕೂ ಅಧಿಕ ಉದ್ಯೋಗ ಆಕಾಂಕ್ಷಿಗಳು ಹಾಗೂ ವಿದ್ಯಾರ್ಥಿಗಳು ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತಯಾರಿ ನಡೆಸುತ್ತಿದ್ದಾರೆ ಎಂದರು.

ಇಲ್ಲಿನ ಅಭ್ಯರ್ಥಿಗಳ ಸಮಸ್ಯೆಗಳಿಗೆ ರಾಷ್ಟ್ರೀಯ ಮಟ್ಟದ ವೇದಿಕೆ ಕಲ್ಪಿಸುವ ನಿಟ್ಟಿನಲ್ಲಿ, ಧಾರವಾಡದಲ್ಲೂ ಸಂವಾದ ಸಮಾವೇಶ ನಡೆಸುವಂತೆ ಕೋರಿ ರಾಹುಲ್ ಗಾಂಧಿ ಅವರಿಗೆ ಪತ್ರ ಬರೆಯಲಾಗಿದೆ ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಪ್ರಕಾಶ ರಾಠೋಡ್ ಇದ್ದರು.



ಅಳ್ನಾವರ: ತಾಲೂಕು ಆಡಳಿತದ ವತಿಯಿಂದ ಫ.ಗು.ಹಳಕಟ್ಟಿ ಅವರ ಜನ್ಮ ದಿನವನ್ನು ಆಚರಿಸಲಾಯಿತು. ಶಿರಸ್ತೇದಾರ ಅಜ್ಜಪ್ಪ ಮಗಳಗಟ್ಟಿ, ಉಪ ತಹಶೀಲ್ದಾರ್ ಮಲ್ಲಿಕಾರ್ಜುನ ಬಿರಾದಾರ, ಕಸಾಪ ಅಧ್ಯಕ್ಷ ಗುರುರಾಜ ಸಬನೀಸ, ವಿನಾಯಕ ಮಾಯಮ್ಮನವರ, ಸುಷ್ಮಾ ಭಾಗವೆ, ಸುಧಾ ಆಲೂರ, ಸ್ವಾತಿ ಇತರರು ಇದ್ದರು.

### ಅಧಿಕಾರಿಗಳ ವಿಡಿಯೋ ಸಂವಾದ | ಜಿಲ್ಲಾಧಿಕಾರಿ ಸ್ನೇಹಲ್ ಸೂಚನೆ

# ಕುಡಿಯುವ ನೀರಿಗೆ ಆದ್ಯತೆ ನೀಡಿ

ಧಾರವಾಡ: ಜಿಲ್ಲೆಯಲ್ಲಿ ಮಳೆಗಾಲದ ಹಿನ್ನೆಲೆ ಸಾರ್ವಜನಿಕರಿಗೆ ಅಗತ್ಯ ಕುಡಿಯುವನೀರು, ಸ್ವೈರ್ಮಲ್ಯ ಹಾಗೂ ಆರೋಗ್ಯಕ್ಕೆ ಹೆಚ್ಚು ಒತ್ತು ನೀಡಬೇಕು ಎಂದು ಜಿಲ್ಲಾಧಿಕಾರಿ ಸ್ನೇಹಲ್ ಆರ್. ಅಧಿಕಾರಿಗಳಿಗೆ ಸೂಚಿಸಿದರು.

ನಗರದ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಅಧಿಕಾರಿಗಳೊಂದಿಗೆ ವೀಡಿಯೋ ಸಂವಾದ ನಡೆಸಿದ ಅವರು, ಭವಿಷ್ಯದಲ್ಲಿ ನೀರಿನ ಅಭಾವ ಉಂಟಾಗದಂತೆ ಮುಂಜಾಗ್ರತವಾಗಿ ಕ್ರಮ ಕೈಗೊಳ್ಳುವಂತೆ ಆದೇಶ ನೀಡಿದರು. ವ್ಯರ್ಥವಾಗಿ ನೀರು ಪೋಲು ಮಾಡಬಾರದು. ಕಾಲುವೆ ಮತ್ತು ಕೆರೆಯ ನೀರನ್ನು ಕುಡಿಯಲು ಬಳಸಬೇಕು. ಅನ್ಯ ಕೆಲಸಕ್ಕೆ ನೀರನ್ನು ಬಳಸದಂತೆ ರೈತರಿಗೆ ತಿಳಿಸಿ, ನೀರಿನ ಬಗ್ಗೆ ಜಾಗೃತಿ ಮೂಡಿಸಲು ಆದೇಶಿಸಿದರು.

ಜಿಲ್ಲೆಯಲ್ಲಿ ಚಿಕೂನ್ ಗುನ್ಯಾ, ಮಲೇರಿಯಾ ಹರಡದಂತೆ

> ಮಳೆಗಾಲ ಹಿನ್ನೆಲೆ ಸಿಡಿಲು ಬಡಿತದ ಅಪಾಯದ ಬಗ್ಗೆ ಜಾಗೃತಿ ಮೂಡಿಸಬೇಕು. ಜನ, ಜಾನುವಾರುಗಳು ಹಾಗೂ ಆಸ್ತಿ-ಪಾಸ್ತಿ ಹಾನಿಯಾಗದಂತೆ ಮುಂಜಾಗ್ರತಾ ಕ್ರಮ ವಹಿಸಲು ಸಾರ್ವಜನಿಕರಿಗೆ ತಿಳುವಳಿಕೆ ನೀಡಿ.
> ■ ಸ್ನೇಹಲ್ ಆರ್., ಡಿಸಿ

ಮುನ್ನಚ್ಚರಿಕೆಕ್ರಮಗಳು ಕೈಗೊಳ್ಳಬೇಕು. ವಿದ್ಯುತ್ ಮಿತವಾಗಿ ಬಳಸಬೇಕು. ಜನರಿಗೆ ಕುಡಿಯುವ ನೀರು ಹಾಗೂ ವಿದ್ಯುತ್ ಬಳಕೆ ಅರಿವು ಮೂಡಿಸಲು ಹೇಳಿದರು. ವಿಡಿಯೋ ಸಂವಾದ ಸಭೆಯಲ್ಲಿ ಉಪವಿಭಾಗಾಧಿಕಾರಿಗಳು, ತಹಶೀಲ್ದಾರರು, ಎಲ್ಲ ತಾಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿಗಳು ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿಗಳು ಇದ್ದರು.

#### ಕ್ರೀಡಾಂಗಣ ನಿರ್ಮಿಸಿ

ತಾಲೂಕು ಮಟ್ಟದ ಕ್ರೀಡಾಂಗಣಗಳ ನಿರ್ಮಾಣಕ್ಕೆ ಕ್ರಮ ವಹಿಸಬೇಕು. ಈಗಾಗಲೇ ಧಾರವಾಡ, ಕುಂದಗೋಳದಲ್ಲಿ ನಿರ್ಮಾಣವಾಗಿದ್ದು, ಹುಬ್ಬಳ್ಳಿ ಗ್ರಾಮೀಣ, ಕಲಘಟಗಿ, ಅಣ್ಣಿಗೇರಿ, ನವಲಗುಂದ ನಿರ್ಮಿಸಲು ಜಿಲ್ಲಾಧಿಕಾರಿ ಸ್ನೇಹಲ್ ಆರ್.ಆದೇಶಿಸಿದರು.



#### ಶೀಘ್ರ ಇತ್ಯರ್ಥಪಡಿಸಿ

ಕಂದಾಯ ಇಲಾಖೆಯ ಬಾಕಿ ಇರುವ ಪ್ರಕರಣಗಳನ್ನು ಶೀಘ್ರವಾಗಿ ಇತ್ಯರ್ಥ ಮಾಡಿ, ಯಾವುದಾದರೂ ಸಮಸ್ಯೆಗಳಿದ್ದರೆ ಜಿಲ್ಲಾಡಳಿತಕ್ಕೆ ಗಮನಕ್ಕೆ ತಿಳಿಸಲು ಡಿಸಿ ಸ್ನೇಹಲ್ ಆರ್. ಹೇಳಿದರಲ್ಲದೇ ಪಾರದರ್ಶಕತೆಯಿಂದ ಕಾರ್ಯನಿರ್ವಹಿಸಲು ಹೇಳಿದರು.

- ದೇವಾಲಯಗಳು, ಬಸ್ ನಿಲ್ದಾಣಗಳಲ್ಲಿ ಶುದ್ಧ ಕುಡಿಯುವ ನೀರು, ಶೌಚಾಲಯ ವ್ಯವಸ್ಥೆ ಕಲ್ಪಿಸಿ, ಸ್ವಚ್ಛತೆಗೆ ಬಗ್ಗೆ ನಿಗಾ ವಹಿಸಿ
- ನೀರಿನ ಸೋರಿಕೆ ಕಂಡುಬಂದಲ್ಲಿ ಅಧಿಕಾರಿಗಳು ತಕ್ಷಣ ಕ್ರಮ ಕೈಗೊಳ್ಳಲಿ
- ಕೃಷಿ ಇಲಾಖೆಯು ಎಲ್ಲ ರೈತರಿಗೆ ಬೆಳೆ ವಿಮೆಯ ಕುರಿತು ಮಾಹಿತಿ ನೀಡಿ
- ರೈತರು ಬೆಳೆ ವಿಮೆಯಿಂದ ವಂಚಿತರಾಗದಂತೆ ತಹಶೀಲ್ದಾರರು ಕ್ರಮ ವಹಿಸಲು ಸೂಚಿಸಿದ ಡಿಸಿ

## ವಚನ ಸಾಹಿತ್ಯಕ್ಕೆ ಡಾ.ಹಳಕಟ್ಟಿ ಕೊಡುಗೆ ಅಪಾರ

ಧಾರವಾಡ: ವಚನ ಸಾಹಿತ್ಯಕ್ಕೆ ಡಾ.ಫ.ಗು.ಹಳಕಟ್ಟಿ ಕೊಡುಗೆ ಅಪಾರ. ಅವನತಿ ಅಂಚಿಗೆ ತಲುಪಿದ ವಚನ ಸಾಹಿತ್ಯ ಉಳಿಸಿ, ಬೆಳೆಸುವ ಕೈಂಕರ್ಯಗಳು ನಿತ್ಯ ನಿರಂತ ನಡೆಸಲು ಗ್ಯಾರಂಟಿ ಸಮಿತಿ ಹು-ಧಾ ಅಧ್ಯಕ್ಷ ಪ್ರಕಾಶ ಹಳಿಯಾಳ ಸಲಹೆ ನೀಡಿದರು.

ಜಿಲ್ಲಾಡಳಿತ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ನಗರದ ಆಲೂರು ವೆಂಕಟರಾವ್ ಭವನದಲ್ಲಿ ಗುರುವಾರ ಹಮ್ಮಿಕೊಂಡ ವಚನ ಪಿತಾಮಹ ಡಾ. ಫ.ಗು. ಹಳಕಟ್ಟಿ ಅವರ ಜನ್ಮದಿನದ ಕಾರ್ಯಕ್ರಮ ಉದ್ಘಾಟಿಸಿ, ಅವರು ಮಾತನಾಡಿದರು. ಡಾ.ಹಳಕಟ್ಟಿ ಅವರ ಕನ್ನಡಪರ ಹೋರಾಟ ಸ್ಮರಣೀಯ. ಅವರು ವಕೀಲ ವೃತ್ತಿ ತ್ಯಜಿಸಿ, ವಚನ ಪಿತಾಮಹರಾದರು. ಶಾಲಾ-ಕಾಲೇಜುಗಳಲ್ಲಿ ಹಳಕಟ್ಟಿ ಜನ್ಮದಿನ ಆಚರಿಸುವ ಮೂಲಕ ವಿದ್ಯಾರ್ಥಿಗಳಿಗೆ ವಚನ ಸಾಹಿತ್ಯ ಪರಿಚಯ ಮಾಡಬೇಕು ಎಂದರು.

ಡಾ. ಎಂ.ಎಂ.ಕಲಬುರ್ಗಿ ರಾಷ್ಟ್ರೀಯ ಪ್ರತಿಷ್ಠಾನದ ಅಧ್ಯಕ್ಷ ಡಾ.ವೀರಣ್ಣ ರಾಜೂರ, ಡಾ. ಫ.ಗು.ಹಳಕಟ್ಟಿ ಅವರು, ಹಳ್ಳಿಹಳ್ಳಿ ಸುತ್ತಿ ಧೂಳು ಹಿಡಿದಿದ್ದ, ಮೂಲೆಗಳಲ್ಲಿದ್ದ ತಾಳೆಗರಿ ಹುಡುಕಿ, ಅದರಲ್ಲಿ ಅಡಗಿದ್ದ ಸಾವಿರಾರು ವಚನಗಳನ್ನು ಸಂಗ್ರಹಿಸಿದ್ದು ಸ್ಮರಿಸಿದರು.

#### ವಚನಗಳಿಗೆ ರೂಪ

ಪಾಲಿಕೆಯ ಸಭಾನಾಯಕ ಈರೇಶ ಅಂಚಟಗೇರಿ ಮಾತನಾಡಿ, ಕಾಲಗರ್ಭದಲ್ಲಿ ಹುದಗಿ ಹೋದ ಅಡಗಿ ಬಸಸವೇಶ್ವರ, ಅಲ್ಲಮಪ್ರಭು, ಅಕ್ಕಮಹಾದೇವಿ ಹೀಗೆ ಅನೇಕ ಶರಣರ ಸಾವಿರಾರು ವಚನಗಳಿಗೆ ಡಾ.ಹಳಕಟ್ಟಿ ಅವರು ರೂಪ ಕೊಟ್ಟದ್ದಾಗಿ ತಿಳಿಸಿದರು.

ತಮ್ಮ ಸ್ವಂತ ಹಣದಿಂದ ಮುದ್ರಣಾಲಯ ಸ್ಥಾಪಿಸಿ ವಚನ ಸಾಹಿತ್ಯ ಪುಸ್ತಕಗಳಲ್ಲಿ ಪ್ರಕಟಿಸಿ, ಸಮಾಜಕ್ಕೆ ದೊಡ್ಡ ಕೊಡುಗೆ ನೀಡಿದ್ದಾರೆ. ಅವರ ನಿಸ್ವಾರ್ಥ ಭಾವದಿಂದ ಮಾಡಿದ ಕೆಲಸ ಇಂದು ಇಡೀ ಮನಕುಲದ ಬದುಕು ಹಸನು ಮಾಡಿದೆ ಎಂದರು.

ಡಾ. ಫ.ಗು.ಹಳಕಟ್ಟಿ ಅವರ ಜೀವನ ಹಾಗೂ ಸಮಾಜಕ್ಕೆ ನೀಡಿದ ಕೊಡುಗೆಗಳ ಕುರಿತು ಡಾ.ಉಮಾ ಬಾಗಲಕೋಟ ಉಪನ್ಯಾಸ ನೀಡಿದರು. ಬಸವರಾಜ ಕೊಂಗಿ, ಸದಾನಂದ ಶಾಂತಪ್ಪ ಹಳಕಟ್ಟಿ, ಶಿವರಾಜ ಬ ಅನೇಕರು ಇದ್ದರು.



## ಬಿಜೆಪಿ ಸಹಾಯವಾಣಿ ಕೇಂದ್ರ ಆರಂಭ

ಧಾರವಾಡ: ಭಾರತೀಯ ಚುನಾವಣಾ ಆಯೋಗ ನಡೆಸುತ್ತಿರುವ ಎಸ್.ಐ.ಆರ್. ಕಾರ್ಯಕ್ಕೆ ಸಾರ್ವಜನಿಕರ ಅನಕೂಲ ಮತ್ತು ಮಾಹಿತಿ ನೀಡಲು ಹು-ಧಾ 74ರ ವಿಧಾನಸಭಾ ಕ್ಷೇತ್ರದಿಂದ ಸೆಂಟರ್ (ಸಹಾಯವಾಣಿ ಕೇಂದ್ರ) ತೆರೆಯಲಾಗಿದೆ.

ಬಿಜೆಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಬಸವರಾಜ ಗರಗ ಸಹಾಯವಾಣಿ ಕೇಂದ್ರ ಕಾರ್ಯಾರಂಭಕ್ಕೆ ಚಾಲನೆ ನೀಡಿದರು. ಈ ಸಂದರ್ಭದಲ್ಲಿ ಮಹಾನಗರ ಪಾಲಿಕೆ ಸದಸ್ಯ ಸುರೇಶ ಬೇದರೆ, ಮಂಜುನಾಥ ಮಲ್ಲಿಗವಾಡ ಸೇರಿದಂತೆ ಮುಖಂಡರು ಪಾಲ್ಗೊಂಡಿದ್ದರು.



74 ವಿಧಾನಸಭಾ ಕ್ಷೇತ್ರದ ಮತದಾರರಿಗೆ ಎಸ್‌ಐಆರ್ ಬಗ್ಗೆ ಏನಾದರೂ ಸಮಸ್ಯೆ ಇದ್ದಲ್ಲಿ ಮಾಹಿತಿಗಾಗಿ ಅಶೋಕ ವಾಲೀಕಾರ ದೂ:8660682143, ಲಕ್ಷ್ಮೀ ಹುಬ್ಬಳ್ಳಿ ಮೊ:7795806508 ಗೆ ಸಂಪರ್ಕಿಸುವಂತೆ ವಕ್ತಾರ ನಾಗರಾಜ ನಾಯಕ ತಿಳಿಸಿದರು.

## ಟಿಪ್ಪರ್‌ಗಳ ನಿರ್ಲಕ್ಷ್ಯ ಚಾಲನೆಗೆ ಕಡಿವಾಣ ಹಾಕಲು ಆಗ್ರಹ

ಕುಂದಗೋಳ: ಹುಬ್ಬಳ್ಳಿ-ಲಕ್ಷ್ಮೇಶ್ವರ ರಾಜ್ಯ ಹೆದ್ದಾರಿಯ ಕೊಪ್ಪದ ಅವರ ಕೇರೆ ಹತ್ತಿರ ಬುಧವಾರ ಸಂಭವಿಸಿದ ಟಿಪ್ಪರ್ ಹಾಗೂ ಬಸ್ ನಡುವಿನ ಭೀಕರ ಅಪಘಾತದಲ್ಲಿ ಶಿರೂರು ಗ್ರಾಮದ ಯುವಕ ದುರ್ಮರಣಕ್ಕೀಡಾದ ಘಟನೆಗೆ ತೀವ್ರ ಆಕ್ರೋಶ ವ್ಯಕ್ತಪಡಿಸಿರುವ ಸಾರ್ವಜನಿಕರು, ಟಿಪ್ಪರ್ ವಾಹನಗಳ ಅಜಾಗರೂಕ ಮತ್ತು ನಿಯಮಬಾಹಿರ ಚಾಲನೆಯೇ ಇಂತಹ ದುರಂತಗಳಿಗೆ ಪ್ರಮುಖ ಕಾರಣವಾಗಿದೆ ಎಂದು ಆರೋಪಿಸಿದರು.

ಈ ಹಿನ್ನೆಲೆಯಲ್ಲಿ ಹುಬ್ಬಳ್ಳಿ-ಲಕ್ಷ್ಮೇಶ್ವರ ಮಾರ್ಗದಲ್ಲಿ ಟಿಪ್ಪರ್ ವಾಹನಗಳ ಸಂಚಾರಕ್ಕೆ ಅಗತ್ಯ ನಿಯಂತ್ರಣ ಹೇರಬೇಕು. ಜೊತೆಗೆ ಚಾಲಕರಿಗೆ ಕಠಿಣ ಸಂಚಾರ ನಿಯಮಗಳನ್ನು ಜಾರಿಗೊಳಿಸಿ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳುವಂತೆ ಸಂಬಂಧಿತ ಇಲಾಖೆಗೆ ನಿರ್ದೇಶನ ನೀಡಬೇಕು ಎಂದು ಒತ್ತಾಯಿಸಿ ತಹಶೀಲ್ದಾರ್ ರಾಜು ಮಾವರಕರ ಅವರಿಗೆ ಮನವಿ ಸಲ್ಲಿಸಲಾಯಿತು. ಶಾಸಕ ಎಂ.ಆರ್. ಪಾಟೀಲ ಅವರ ಅಧ್ಯಕ್ಷತೆಯಲ್ಲಿ ಪೊಲೀಸ್, ಸಾರಿಗೆ, ಲೋಕೋಪಯೋಗಿ ಸೇರಿದಂತೆ ಸಂಬಂಧಿತ ಇಲಾಖೆಗಳ ಹಿರಿಯ ಅಧಿಕಾರಿಗಳು ಹಾಗೂ ಸಾರ್ವಜನಿಕರನ್ನೊಳಗೊಂಡ ಸಭೆಯನ್ನು ಶೀಘ್ರವೇ ಕರೆಯಿಸಿ, ಅಪಘಾತ ನಿಯಂತ್ರಣಕ್ಕೆ ಸಮಗ್ರ ಕಾರ್ಯಯೋಜನೆ ರೂಪಿಸಬೇಕು ಎಂದು ಆಗ್ರಹಿಸಲಾಯಿತು.

ಸಂಶಿ ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷರಾದ ರಾಜು ಪುಟ್ಟಣ್ಣವರ, ಗಿರೀಶಗೌಡ ಪಾಟೀಲ, ಕರವೇ ತಾಲೂಕಾಧ್ಯಕ್ಷ ಕಲ್ಲಪ್ಪ ಹರಕುಣಿ, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಸದಸ್ಯ ಅಡಿವೆಪ್ಪ ಹೆಬಸೂರ, ಸಂಶಿ ಗ್ರಾಮದ ಎ.ಬಿ. ಉಪ್ಪಿನ, ಪಿ.ಎಂ. ಕೋರಿ, ವಿದ್ಯಾಧರ ಸುಂಕದ ಈರಪ್ಪ ನಾಗಣ್ಣವರ, ರವಿ ಶಿರಸಂಗಿ ಸೇರಿದಂತೆ ತಾಲೂಕಿನ ಅನೇಕ ಗಣ್ಯರು ಹಾಗೂ ಸಾರ್ವಜನಿಕರು ಉಪಸ್ಥಿತರಿದ್ದರು.

#### ಅಗತ್ಯ ಕ್ರಮ

ಮನವಿ ಸ್ವೀಕರಿಸಿದ ದಂಡಾಧಿಕಾರಿ ರಾಜು ಮಾವರಕರ ಮಾತನಾಡಿ, ಸಾರ್ವಜನಿಕರ ಆತಂಕ ನ್ಯಾಯಸಮ್ಮತವಾಗಿದೆ. ಶೀಘ್ರ ಶಾಸಕರ ನೇತೃತ್ವದಲ್ಲಿ ಸಂಬಂಧಿತ ಇಲಾಖೆಗಳ ಅಧಿಕಾರಿಗಳು ಹಾಗೂ ಸಾರ್ವಜನಿಕರ ಸಭೆ ಆಯೋಜಿಸಿ, ಟಿಪ್ಪರ್ ವಾಹನಗಳ ನಿಯಂತ್ರಣ ಮತ್ತು ರಸ್ತೆ ಸುರಕ್ಷತೆ ಕುರಿತು ಅಗತ್ಯ ಕ್ರಮ ಕೈಗೊಳ್ಳಲಾಗುವುದು. ನಿಮ್ಮ ಮನವಿಯನ್ನು ಸಂಬಂಧಿತ ಉನ್ನತ ಅಧಿಕಾರಿಗಳಿಗೆ ರವಾನಿಸಿ ಸೂಕ್ತ ಕ್ರಮಕ್ಕೆ ಶಿಫಾರಸು ಮಾಡುತ್ತೇನೆ ಎಂದರು.



## ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಸನ್ಮಾನ



ಹುಬ್ಬಳ್ಳಿ: ಇಲ್ಲಿಯ ಗೋಕುಲ ರಸ್ತೆಯ ಗಾಂಧಿನಗರದ ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವ ವಿದ್ಯಾಲಯದಲ್ಲಿ ಎಸ್.ಎಸ್.ಎಲ್.ಸಿ ಹಾಗೂ ದ್ವಿತೀಯ ಪಿಯುಸಿಯ ಪರೀಕ್ಷೆಯಲ್ಲಿ ಉತ್ತೀರ್ಣರಾದ ಪ್ರತಿಭಾವಂತ ಮಕ್ಕಳಿಗೆ ಸನ್ಮಾನ ಮಾಡಲಾಯಿತು. ಹುಬ್ಬಳ್ಳಿ ಮಂಜುನಾಥ ನಗರ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಮುಖ್ಯೋಪಾಧ್ಯಾಯಿನಿ ಮಹಾದೇವಿ ಯಕ್ಕುಂಡಿ, ಸಂಶಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಮುಖ್ಯೋಪಾಧ್ಯಾಯಿನಿ ಭಾರತಿ ಸಾಂಬ್ರಾಣಿ, ಸಿವಿಲ್ ಎಂಜಿನಿಯರ್ ಚೇತನಾ, ಹುಬ್ಬಳ್ಳಿಯ ಸಿವಿಲ್ ಎಂಜಿನಿಯರ್ ಹಾಗೂ ಕಾಂಟ್ರಾಕ್ಟರ್ ಶಶಿಕಾಂಗಜಿಗಳೂರು ಉಪಸ್ಥಿತರಿದ್ದರು. ಈಶ್ವರಿ, ಭೂಮಿಕಾ, ಶ್ರೀ, ಕಾವ್ಯ ಹಾಗೂ ಕುಮಾರ್ ಸಂಜೀವ್, ಕುಮಾರ ಹರೀಶ್, ಕುಮಾರ ಓಂಕಾರ ಅವರನ್ನು ಸನ್ಮಾನಿಸಲಾಯಿತು.

## ಮಾತೃಭಾಷೆಯಲ್ಲಿ ಕಲಿತವರೇ ಸಾಧಕರು

ಧಾರವಾಡ: ನೀಟ್ ಪರೀಕ್ಷೆ ಸೇರಿದಂತೆ ಎಲ್ಲ ಕಡೆ ಮಾತೃಭಾಷೆ ಹಾಗೂ ಸರ್ಕಾರಿ ಶಾಲೆಯಲ್ಲಿ ಕಲಿತಿರುವ ಮಕ್ಕಳೇ ಮೇಲುಗೈ ಸಾಧಿಸುತ್ತಿದ್ದಾರೆ ಎಂದು ಸಾರ್ವಜನಿಕ ಶಿಕ್ಷಣ ಇಲಾಖೆಯ ಅಪರ ಆಯುಕ್ತ ಡಾ.ಈಶ್ವರ ಉಳ್ಳಾಗಡ್ಡಿ ಹೇಳಿದರು.

ಶ್ರೀನಯಕುಮಾರ ಶಂಕರ ಪಾಗೋಜಿ ಪ್ರಥಮ ವರ್ಷದ ಹುಟ್ಟು ಹಬ್ಬದ ಹಿನ್ನೆಲೆಯಲ್ಲಿ ದೇವಗಿರಿಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಮಕ್ಕಳಿಗೆ ಉಚಿತ ಸ್ಕೂಲ್ ಬ್ಯಾಗ್ ವಿತರಿಸಿ ಅವರು ಮಾತನಾಡಿದರು. ಮಕ್ಕಳಿಗೆ ಸ್ಕೂಲ್ ಬ್ಯಾಗ್ ಉಚಿತ ವಿತರಿಸಲಾಯಿತು. ಡಿಡಿಪಿಐ ಗಿರೀಶ್ ಪದಕಿ, ಶಿಕ್ಷಣ ಇಲಾಖೆ ಅಧಿಕಾರಿ ಡಿ.ಬಿ.ಕಮ್ಮಾರ, ಶಾಲಾ ಎಸ್‌ಡಿಎಂಸಿ ಅಧ್ಯಕ್ಷ ಅರ್ಜುನ್ ಮುನವಳ್ಳಿ, ಸೋಮಲಿಂಗ ದುರ್ಗಾಯಿ, ಸುನಿಲ್ ದುರ್ಗಾಯಿ, ರುಕ್ಮವ್ವ ಪಾಗೋಜಿ, ಬಾಬು ಪಾಗೋಜಿ, ಪತ್ರಕರ್ತ ಡಾ. ಬಸವರಾಜ ಹೊಂಗಲ ಇದ್ದರು.



## ಡಾ.ಫ.ಗು.ಹಳಕಟ್ಟಿ ಜಯಂತಿ

ಕಲಘಟಗಿ: ತಾಲೂಕಿನ ಹಿರೇಹೊನಿಹಳ್ಳಿ ಗ್ರಾಮದ ಬಸವ ತತ್ವ ಲಿಂಗಾನುಭಾವಿ ಶರಣರ ಬಳಗದ ಅನುಭವ ಮಂಟಪದಲ್ಲಿ ವಚನ ಸಂಶೋಧನಾ ಪಿತಾಮಹ ಶರಣ ಡಾ. ಫ.ಗು.ಹಳಕಟ್ಟಿಯವರ ಜಯಂತಿ ಹಾಗೂ ವಚನ ಸಾಹಿತ್ಯ ಸಂರಕ್ಷಣಾ ದಿನಆಚರಿಸಲಾಯಿತು.

ಹಳಕಟ್ಟಿ ಅವರು ಸ್ಥಾಪಿಸಿದ ಖ್ಯಾತ ಪತ್ರಿಕೆಯಾದ ಶಿವಾನುಭವ (1926-2026) ಜನ್ಮ ಶತಮಾನೋತ್ಸವ ವರ್ಷ ತುಂಬಿದ ಸಂದರ್ಭದ ಪ್ರಯುಕ್ತವಾಗಿ ನೆರೆದ ಎಲ್ಲ ಶರಣ ಬಳಗದವರು ಭಕ್ತಿಯಿಂದ ಅನುಭಾವದ ನುಡಿಗಳನ್ನು ಹಂಚಿಕೊಂಡರು .

ಶರಣರಾದ ಚನ್ನಬಸವ ಶರಣರು ಮತ್ತು ಶರಣರ ಬಳಗದ ಅಧ್ಯಕ್ಷ ಗುರುಲಿಂಗಪ್ಪ ಉಣಕಲ್ ಹಾಗೂ ಬಸವರಾಜ್ ಮಾದಿ, ಶಂಕರಲಿಂಗ



ಹೊಸಮನಿ, ರಾಮಣ್ಣ ಕೋಟಿ, ನೀಲಪ್ಪ ಹಿರೆಗುಂಜಾಳ, ಅಡಿವೆಪ್ಪ ಉಣಕಲ್ಲ, ಬಸವರಾಜ ಕೆಳಗಿನಮನಿ, ಬಸವಣ್ಣೆಪ್ಪ ಕೆಲಗೇರಿ, ಶಶಿಕಾಂತ್ ಕೋಟಿ, ಪ್ರಭು ಧನಿಗೊಂಡ, ಸುರೇಶ್ ಮಡಿವಾಳರ, ಶಿವಲಿಂಗಪ್ಪ ಹಿರೇಗುಂಜಾಳ, ಮಹಾದೇವ್ ಕೆಲಗೇರಿ ಸೇರಿದಂತೆ ಗ್ರಾಮಸ್ಥರು ಉಪಸ್ಥಿತರಿದ್ದರು.

## ಜ್ಞಾನಾಗ್ನಿಯೇ ಜೀವನದ ಶಕ್ತಿ: ಡಾ.ನಿರಂಜನಕುಮಾರ್

ಧಾರವಾಡ: ವಿದ್ಯಾರ್ಥಿಗಳ ವ್ಯಕ್ತಿತ್ವ ವಿಕಸನಕ್ಕೆ ಪಠ್ಯ ಪುಸ್ತಕದ ಜ್ಞಾನವಷ್ಟೇ ಸಾಲದು, ಪಠ್ಯೇತರ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳು ಬಹಳಷ್ಟು ಪೂರಕವಾಗಿವೆ ಎಂದು ಎಸ್‌ಡಿಎಂ ವಿಶ್ವವಿದ್ಯಾಲಯದ ಉಪಕುಲಪತಿ ಡಾ. ನಿರಂಜನಕುಮಾರ್ ಅಭಿಮತ ವ್ಯಕ್ತಪಡಿಸಿದರು.

ಪರ್ವ-2026 ಫೇಸ್-ಸಿಂಫನಿ ಆಫ್ ಫ್ಲೇಮ್ಸ್ ಎಂಬ ಧ್ಯೇಯದೊಂದಿಗೆ ನಗರದ ಸತ್ತೂರಿನ ಎಸ್‌ಡಿಎಂ ಭೌತಿಕ ಚಿಕಿತ್ಸಾ ಕಾಲೇಜಿನ ಅಲೈಡ್ ಹೆಲ್ತ್ ಸೈನ್ಸಸ್ ವಿಭಾಗದಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ ಎರಡು ದಿನಗಳ ಸಾಂಸ್ಕೃತಿಕ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು. ಜ್ಞಾನದ ಅಗ್ನಿಯು ಜೀವನದ ವಿದ್ಯಾರ್ಥಿ ತೇಜಸ್ಸನ್ನು ಹೆಚ್ಚಿಸಲಿದೆ. ಈ ಜ್ಞಾನಾಗ್ನಿಯು ಭವಿಷ್ಯದ ಜೀವನದಲ್ಲಿ ಬರುವ ಸವಾಲುಗಳನ್ನು ಧೈರ್ಯದಿಂದ ಎದುರಿಸಲು ಪ್ರಕೃತಿ



ನೀಡಿರುವ ಅತ್ಯಂತ ಪ್ರಬಲವಾದ ಶಕ್ತಿಯಾಗಿದೆ ಎಂದರು.

ವಿದ್ಯಾರ್ಥಿಗಳಲ್ಲಿ ಅಡಗಿರುವ ಪ್ರತಿಭೆ ಮತ್ತು ಸೃಜನಶೀಲತೆಯನ್ನು ಹೊರತರುವಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳು ಸಹಕಾರಿ. ವಿದ್ಯಾರ್ಥಿಗಳಿಗೆ ಮುಂದೆ ಉಜ್ವಲವಾದ ಭವಿಷ್ಯ ಕಾಯುತ್ತಿದ್ದು, ತಾವು ಆರಿಸಿಕೊಳ್ಳುವ ವೃತ್ತಿಯನ್ನು ಮನಸಾರೆ ಗೌರವಿಸಬೇಕು ಎಂದರು.

ಕಾಲೇಜಿನಲ್ಲಿ ಲಭ್ಯವಿರುವ ಸೌಲಭ್ಯಗಳನ್ನು ಸದ್ಬಳಸಿಕೊಂಡು ವಿದ್ಯಾರ್ಥಿಗಳು ವೈಯಕ್ತಿಕ ಸಾಧನೆಯ ಜೊತೆ ತಮ್ಮ ಸಂಸ್ಥೆಗೂ ಕೀರ್ತಿ ತರಬೇಕು. ಅಂದಾಗಲೇ ಪ್ರತಿ ವಿದ್ಯಾರ್ಥಿಯ ಜೀವನವು ಸಾರ್ಥಕವಾಗಲಿದೆ ಎಂದರು.

ಕಾರ್ಯಕ್ರಮದಲ್ಲಿ ಎಸ್‌ಡಿಎಂ ಕಾರ್ಯನಿರ್ವಾಹಕ ನಿರ್ದೇಶಕಿ ಪದ್ಮಲತಾ ನಿರಂಜನ್, ಸಂಯೋಜಕ ಡಾ.ಸಂಜಯ ಪರಮಾರ, ಡಾ.ಅನಿಲ್ ಬರ್ಗಲೆ, ಎಸ್‌ಡಿಎಂ ಉಪ ಪ್ರಾಚಾರ್ಯೆ ಡಾ. ವಿದ್ಯಾ ಪಾಟೀಲ, ವಿವಿಧ ವಿಭಾಗಗಳ ಮುಖ್ಯಸ್ಥರು,

> ಜ್ಞಾನದ ಅಗ್ನಿ ಜೀವನದ ತೇಜಸ್ಸು ಹೆಚ್ಚಿಸಲಿದೆ. ವಿದ್ಯಾರ್ಥಿಗಳಿಗೆ ಉಜ್ವಲ ಭವಿಷ್ಯ ಇರುವ ಕಾರಣ ವೃತ್ತಿಯನ್ನು ಗೌರವಿಸಬೇಕು ಮತ್ತು ಸೌಲಭ್ಯಗಳ ಸದ್ಬಳಕೆಯಿಂದ ಸಂಸ್ಥೆಗೆ ಕೀರ್ತಿ ತರಬೇಕು.
> ■ ಡಾ. ನಿರಂಜನಕುಮಾರ್, ಎಸ್‌ಡಿಎಂ ಉಪಕುಲಪತಿ

ಸಿಬ್ಬಂದಿ ಪಾಲ್ಗೊಂಡಿದ್ದರು. ವಿದ್ಯಾರ್ಥಿಗಳಿಂದ ವೈವಿಧ್ಯಮಯ ಸಾಂಸ್ಕೃತಿಕ ಕಾರ್ಯಕ್ರಮ ಹಾಗೂ ನೃತ್ಯ ಪ್ರದರ್ಶನಗಳು ಜರುಗಿದವು. ಸಿಲ್ವಿಯಾ ಸ್ವಾಗತಿಸಿದರು. ಕ್ಯಾರೆನ್ ನಿರೂಪಣೆ ಮಾಡಿದರು. ವಿಕ್ಟೋರಿಯಾ ಪರ್ವ ಕಾರ್ಯಕ್ರಮ ಪರಿಚಯಿಸಿದರು. ಆಂಜೆಲ್ ವಂದಿಸಿದರು.

## ಕಾಂಗ್ರೆಸ್ ಸರ್ಕಾರದ ಅಣತಿಯಂತೆ ಬಿಎಲ್‌ಒಗಳ ಕಾರ್ಯ: ಟೆಂಗಿನಕಾಯಿ

ಹುಬ್ಬಳ್ಳಿ: ಕೇಂದ್ರ ಚುನಾವಣೆ ಆಯೋಗ ರಾಜ್ಯದಲ್ಲಿ ಮತದಾರರ ಪರಿಷ್ಕರಣೆ ಕಾರ್ಯ ಪ್ರಾರಂಭಿಸಿದ್ದು, ಕಾಂಗ್ರೆಸ್ ಸರ್ಕಾರದ ತನ್ನ ಅಣತಿಯಂತೆ ಬಿಎಲ್‌ಒಗಳು ಕಾರ್ಯವನ್ನು ನಡೆಸಿದ್ದಾರೆ ಎಂದು ಶಾಸಕ ಮಹೇಶ ಟೆಂಗಿನಕಾಯಿ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಇಲ್ಲಿಯ ಹು-ಧಾ ಮಹಾನಗರ ಪಾಲಿಕೆಯ ವಾರ್ಡ್ ನಂಬರ್ 45ರ ನಾಗಶೆಟ್ಟಿ ಕೊಪ್ಪದಲ್ಲಿ ಮತದಾರರ ಸಹಾಯ ಕೇಂದ್ರವನ್ನು ಉದ್ಘಾಟಿಸಿ ಮಾತನಾಡಿದರು. ರಾಜ್ಯದಲ್ಲಿ ಮುಸ್ಲಿಮರು ಹಾಗೂ ಬಾಂಗ್ಲಾದೇಶಿಗರನ್ನು ಎಸ್ ಐಆರ್ ಪ್ರಕ್ರಿಯೆಯಲ್ಲಿ ಅವರ ಹೆಸರುಗಳನ್ನು ಸೇರಿಸಲು ಎಲ್ಲಿಲ್ಲದ ಕಸರತ್ತು ನಡೆದಿದೆ. ಪಾರದರ್ಶಕವಾಗಿ ನಡೆಯಬೇಕಿದ್ದ ಮತದಾರರ ಪರಿಷ್ಕರಣೆ ಕಾರ್ಯ ಪಟ್ಟಿ ಈಗ ಈ ವ್ಯವಸ್ಥೆಯು ಅಡ್ಡದಾರಿ ಹಿಡಿಯುತ್ತಿದೆ. ಕಲ್ಯಾಣ ಮಂಟಪ, ಕೇಂದ್ರಗಳಲ್ಲಿ ದೊಡ್ಡ ದೊಡ್ಡ ಹಾಲುಗಳಲ್ಲಿ ಮತದಾರರನ್ನು



ಕೂರಿಸಿಕೊಂಡು ಈಗ ಅನೇಕ ಕಡೆ ಬಿಎಲ್‌ಒಗಳು ನೋಂದಣಿಯನ್ನು ಮಾಡುತ್ತಿದ್ದಾರೆ. ಈ ಕುರಿತು ಸಾಕಷ್ಟು ಜಾಲತಾಣಗಳಲ್ಲಿ ವಿಡಿಯೋಗಳ ಬಿಜೆಪಿ ಹಾಗೂ ಜೆಡಿಎಸ್ ಬಿಡುಗಡೆ ಮಾಡಿವೆ. ಕೇವಲ ಒಲೈಕೆ ರಾಜ ಕಾರಣ ಮತ್ತೊಮ್ಮೆ ಸಾಬೀತಾಗಿದೆ ಎಂದು ಆರೋಪಿಸಿದ್ದಾರೆ.

ದೇಶದಲ್ಲಿ ಪಾರದರ್ಶಕ ಚುನಾವಣೆ ವ್ಯವಸ್ಥೆಯನ್ನು ಎಸ್‌ಐಆರ್ ಮೂಲಕ ಸಾಧ್ಯ ಎಂದು ಈಗಾಗಲೇ ಹಲವು ರಾಜ್ಯಗಳಲ್ಲಿ ಪ್ರಯೋಗವಾಗಿದೆ. ಪಾರದರ್ಶಕವಾಗಿ ನಡೆಸಲು ಉದ್ದೇಶಿಸಿರುವ ಚುನಾವಣೆ ಆಯೋಗ ಸಂದರ್ಭದಲ್ಲಿ ಎಲ್ಲ ಪಕ್ಷದವರು ಸಹಕಾರವನ್ನು ನೀಡುವುದು ಅಗತ್ಯವಾಗಿದೆ ಎಂದರು.

ಬಿಎಲ್‌ಒಗಳು ಮನೆ ಮನೆಗೆ ತೆರಳಿ ಕೆಲಸ ಮಾಡುವುದನ್ನು ಬಿಟ್ಟು ಒಂದೇ ಸ್ಥಳದಲ್ಲಿ ಕುಳಿತು ಕೆಲಸ ಮಾಡುತ್ತಿದ್ದಾರೆ. ಹಾಗೇನಾದರೂ ಏನಾದರೂ ಕಂಡುಬಂದಲ್ಲಿ ಬಿಎಲ್‌ಒ ಗಳೇ ಹೊಣೆಗಾರರಾಗಿ ತೊಂದರೆಯನ್ನು ಅನುಭವಿಸಬೇಕಾಗುತ್ತದೆ ಎಂದರು.

ಸೆಂಟ್ರಲ್ ಕ್ಷೇತ್ರದಲ್ಲಿ ನಮ್ಮ ಬಿಜೆಪಿ ಕಾರ್ಯಕರ್ತರು ಹಾಗು ಪಕ್ಷವು ಪ್ರಕ್ರಿಯೆಯನ್ನು ಗಂಭೀರವಾಗಿ ಪರಿಗಣಿಸಿದ್ದು, ಕ್ಷೇತ್ರದಲ್ಲಿ ಹದ್ದಿನ ಕಣ್ಣು ಇಟ್ಟಿದೆ ಎಂದರು.

ಕಾರ್ಯಕ್ರಮದಲ್ಲಿ ಸೆಂಟ್ರಲ್ ಕ್ಷೇತ್ರದ ಅಧ್ಯಕ್ಷ ರಾಜು ಕಾಳೆ, ಮಹಾನಗರ ಪಾಲಿಕೆಯ ಸದಸ್ಯೆ ಉಮಾ ಮುಕುಂದ, ಪಕ್ಷ ಕ್ಷೇತ್ರದ ಬಿಎಲ್‌ಒ ಪ್ರಶಾಂತ್ ಜಾಧವ್, ರವಿ ನಾಯಕ ಪ್ರದೀಪ್ ಮುಳ್ಳೂರು, ಪ್ರವೀಣ ಹುರುಳಿ, ರಾಮನಗೌಡ ಶೆಟ್ಟನಗೌಡರ್, ಅಶೋಕ್ ವಾಲ್ಮೀಕಿ, ರವಿರಾಜ್ ಕೊಡ್ಲಿ ಇದ್ದರು.

## ನಿರೀಕ್ಷಿತ ಮಟ್ಟದಲ್ಲಿ ಕಡಿಮೆಯಾಗದ ಪ್ರಕರಣಗಳ ಸಂಖ್ಯೆ

# 123 ಮಕ್ಕಳಲ್ಲಿ ತೀವ್ರ ಅಪೌಷ್ಟಿಕತೆ

▸ ರುದ್ರಗೌಡ ಪಾಟೀಲ

**ಗದಗ:** ರಾಜ್ಯದಲ್ಲಿ ಅಪೌಷ್ಟಿಕತೆಯ ವಿರುದ್ಧ ಸರ್ಕಾರ ಹಲವಾರು ಯೋಜನೆ ಜಾರಿಗೊಳಿಸಿದ್ದರೂ ಜಿಲ್ಲೆಯಲ್ಲಿ ಇನ್ನೂ 123 ಮಕ್ಕಳು ತೀವ್ರ ಅಪೌಷ್ಟಿಕತೆ ಸಮಸ್ಯೆಯಿಂದ ಬಳಲುತ್ತಿದ್ದಾರೆ.

ಜಿಲ್ಲೆಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಅಂಕಿ ಅಂಶಗಳ ಪ್ರಕಾರ ಪ್ರಸಕ್ತ ಸಾಲಿನಲ್ಲಿ ಜಿಲ್ಲೆಯ 66,076 ಮಕ್ಕಳ ಪೈಕಿ 775 ಮಕ್ಕಳು ಸಾಧಾರಣ ಅಪೌಷ್ಟಿಕತೆ ಹಾಗೂ 123 ಮಕ್ಕಳು ತೀವ್ರ ಅಪೌಷ್ಟಿಕತೆ ಹೊಂದಿರುವುದು ದಾಖಲಾಗಿದೆ. ಜಿಲ್ಲೆಯಲ್ಲಿ ಒಟ್ಟಾರೆ 898 ಮಕ್ಕಳು ಅಪೌಷ್ಟಿಕತೆಯಿಂದ ಬಳಲುತ್ತಿದ್ದಾರೆ.

ಕಳೆದ ಎರಡು ವರ್ಷಗಳಲ್ಲಿ ತೀವ್ರ ಅಪೌಷ್ಟಿಕ ಮಕ್ಕಳ ಸಂಖ್ಯೆ ಗಮನಾರ್ಹವಾಗಿ ಇಳಿಕೆಯಾಗಿದೆ. 2024ರ ಮಾರ್ಚ್‌ನಲ್ಲಿ 220 ಮಕ್ಕಳಿದ್ದರೆ, 2025ರಲ್ಲಿ ಅದು 263ಕ್ಕೆ ಏರಿಕೆಯಾಗಿತ್ತು. ಇದೀಗ 2026ರ ಮಾರ್ಚ್ ವೇಳೆಗೆ 123ಕ್ಕೆ ಇಳಿದಿದ್ದು, ಕಳೆದ ವರ್ಷಕ್ಕೆ ಹೋಲಿಸಿದರೆ 140 ಹಾಗೂ 2024ರೊಂದಿಗೆ ಹೋಲಿಸಿದರೆ 97 ಮಕ್ಕಳಷ್ಟು ಕಡಿಮೆಯಾಗಿದೆ.

ಎರಡು ವರ್ಷಗಳ ಅವಧಿಯಲ್ಲಿ ತೀವ್ರ ಅಪೌಷ್ಟಿಕ ಮಕ್ಕಳ ಸಂಖ್ಯೆ ಅರ್ಧಕ್ಕಿಂತ ಹೆಚ್ಚು ಕಡಿಮೆಯಾಗಿರುವುದು ಆಶಾದಾಯಕ ಬೆಳವಣಿಗೆಯಾದರೂ 123 ಮಕ್ಕಳು ಇನ್ನೂ ತೀವ್ರ ಅಪೌಷ್ಟಿಕತೆಯಿಂದ ಬಳಲುತ್ತಿರುವುದು ಜಿಲ್ಲೆಯ ಆರೋಗ್ಯ ವ್ಯವಸ್ಥೆಗೆ ಎಚ್ಚರಿಕೆಯ ಗಂಟೆಯಾಗಿದೆ. ವಿಶೇಷವಾಗಿ ಶಿರಹಟ್ಟಿ ಹಾಗೂ ಗದಗ ತಾಲೂಕುಗಳಲ್ಲಿ ಪ್ರಕರಣಗಳು ಹೆಚ್ಚಿರುವುದರಿಂದ ಅಲ್ಲಿನ ಮಕ್ಕಳ ಮೇಲೆ ವಿಶೇಷ ನಿಗಾ ವಹಿಸಲಾಗಿದೆ.

ವಿಶ್ವ ಆರೋಗ್ಯ ಸಂಸ್ಥೆಯ ಅಪೌಷ್ಟಿಕ ಮಕ್ಕಳನ್ನು ಗುರುತಿಸಲು ಕೆಲ ಮಾರ್ಗಸೂಚಿಗಳನ್ನು ನೀಡಿದೆ. 1ರಿಂದ 6 ವರ್ಷದೊಳಗಿನ ಮಕ್ಕಳ ಎತ್ತರ ಮತ್ತು ತೂಕ ಆಧರಿಸಿ ಅಪೌಷ್ಟಿಕ ಮಕ್ಕಳನ್ನು ಗುರುತಿಸಲಾಗುತ್ತದೆ. ಕಳೆದ ವರ್ಷ ತಪಾಸಣೆಗೆ ಒಳಗಾದ ಮಕ್ಕಳ ಸಂಖ್ಯೆಯಲ್ಲೂ ಭಾರೀ ಕಡಿತವಾಗಿರುವುದು ಅನುಮಾನಕ್ಕೆ ಕಾರಣವಾಗಿದೆ. ಪ್ರತಿ ವರ್ಷ ಸರಾಸರಿ 16 ಸಾವಿರ ಮಕ್ಕಳ ಜನನವಾಗುತ್ತದೆ. ಆದರ ಅಂದಾಜಿನ ಮೇಲೆ ಎರಡು ವರ್ಷಗಳಲ್ಲಿ ತಪಾಸಣೆಗೆ ಒಳಗಾದ ಮಕ್ಕಳ ಸಂಖ್ಯೆ ಸರಿಯಾಗಿದೆ. 2025–26ನೇ ಸಾಲಿನಲ್ಲಿ 66076 ಮಕ್ಕಳು ಮಾತ್ರ ತಪಾಸಣೆಗೆ ಒಳಗಾಗಿರುವುದು ಸಂಶಯಕ್ಕೆ ಎಡೆಮಾಡಿಕೊಟ್ಟಿದೆ.

ಮಕ್ಕಳ ಅಪೌಷ್ಟಿಕತೆ ತಡೆಗಟ್ಟಲು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಅಂಗನವಾಡಿಗಳ ಮೂಲಕ ಪೂರಕ ಪೌಷ್ಟಿಕ ಆಹಾರ ವಿತರಣೆ, ಮಕ್ಕಳ ಬೆಳವಣಿಗೆಯ ಮಾಸಿಕ ತಪಾಸಣೆ, ತೀವ್ರ ಅಪೌಷ್ಟಿಕ ಮಕ್ಕಳಿಗೆ ವಿಶೇಷ ಆರೈಕೆ, ಆರೋಗ್ಯ ಇಲಾಖೆಯ ಸಹಯೋಗದಲ್ಲಿ ವೈದ್ಯಕೀಯ ಪರೀಕ್ಷೆ, ಪೋಷಕರಿಗೆ ಪೌಷ್ಟಿಕ ಆಹಾರ ಹಾಗೂ ಆರೈಕೆ ಕುರಿತು ಜಾಗೃತಿ ಕಾರ್ಯಕ್ರಮಗಳನ್ನು ನಡೆಸುತ್ತಿದೆ. ಆದರೂ ಪ್ರಚಾರದ ಕೊರತೆ, ಪಾಲಕರಲ್ಲಿನ ಅರಿವಿನ ಕೊರತೆಯಿಂದ ಮಕ್ಕಳಲ್ಲಿ ಅಪೌಷ್ಟಿಕತೆ ಇನ್ನೂ ಜೀವಂತವಾಗಿದೆ.

**ಅಪೌಷ್ಟಿಕ ಮಕ್ಕಳ ಸಂಖ್ಯೆ**

| ವರ್ಷ | ಮಕ್ಕಳು | ಸಾಮಾನ್ಯ ಮಕ್ಕಳು | ಸಾಧಾರಣ ಅಪೌಷ್ಟಿಕತೆ | ತೀವ್ರ ಅಪೌಷ್ಟಿಕತೆ |
|---|---|---|---|---|
| 2023-24 | 86271 | 84214 | 1837 | 220 |
| 2024-25 | 80499 | 79037 | 1199 | 263 |
| 2025-26 | 66076 | 65178 | 775 | 123 |

**ಸರ್ಕಾರದ ಯೋಜನೆಗಳ ಮೂಲಕ ಅಪೌಷ್ಟಿಕತೆ ನಿವಾರಣೆಗೆ ಎಲ್ಲ ರೀತಿಯ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. ಜತೆಗೆ ಜಿಲ್ಲೆಯಲ್ಲಿ ಪೌಷ್ಟಿಕತೆಯಿಂದ ಬಳಲುತ್ತಿರುವ ಮಕ್ಕಳಿಗೆ ಒಂದೂವರೆ ಪಟ್ಟು ಹೆಚ್ಚು ಪೂರಕ ಪೌಷ್ಟಿಕ ಆಹಾರ ನೀಡಲಾಗುತ್ತಿದೆ. ಪೌಷ್ಟಿಕಾಂಶ ಪುನರ್ವಸತಿ ಕೇಂದ್ರಗಳಲ್ಲಿ ಉಚಿತ ಚಿಕಿತ್ಸೆ ನೀಡಲಾಗುತ್ತಿದೆ.**

■ ರಾಧಾ ಮಣ್ಣೂರ, ಉಪನಿರ್ದೇಶಕಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಗದಗ

ದಿಗಂತ ವಿಶೇಷ

## ಮಹಾರಾಜ ಟ್ರೋಫಿ ಯಶಸ್ಸಿನ ಸರದಾರರು!

▸ ವಿಜಯಕುಮಾರ ಬೆಳ್ಳೇರಿಮಠ



**ಹುಬ್ಬಳ್ಳಿ:** ಇಲ್ಲಿಯ ರಾಜನಗರದ ಕೆಎಸ್‌ಸಿಎ ಮೈದಾನದಲ್ಲಿ ನಡೆದ ಮಹಾರಾಜ ಟ್ರೋಫಿಯ ಟಿ20 ಕ್ರಿಕೆಟ್ ಟೂರ್ನಿಯ ಎರಡನೇ ಹಂತದ ಪಂದ್ಯಗಳು ಯಶಸ್ವಿಯಾಗಿ ನಡೆದವು. ತೆರೆಯ ಹಿಂದೆ ಮಳೆಯಲ್ಲೂ ಹತ್ತಾರು ಮಂದಿ ಬೆವರು ಹರಿಸಿ ಚುಟುಕು ಕ್ರಿಕೆಟ್‌ನ ಯಶಸ್ಸಿಗೆ ಶ್ರಮಿಸಿದ್ದಾರೆ.

ಕೆಎಸ್‌ಸಿಎ ಧಾರವಾಡವಲಯದ ಪಿಚ್ ಕ್ಯುರೇಟರ್ ಸತೀಶ್ ಉಳ್ಳಾಗಡ್ಡಿ ನೇತೃತ್ವದಲ್ಲಿ ಹುಬ್ಬಳ್ಳಿ ಹಾಗೂ ಬೆಳಗಾವಿಯ 46 ಕ್ಯುರೇಟರ್ ತಂಡ ಕ್ರೀಡಾಂಗಣದಲ್ಲಿ ರಾತ್ರಿ–ಹಗಲೆನ್ನದೆ ಶ್ರಮವಹಿಸಿದ್ದಾರೆ. ಗುರುವಾರ ನಡೆದ ಮಧ್ಯಾಹ್ನದ ನಡೆದ ಹುಬ್ಬಳ್ಳಿ ಟೈಗರ್ಸ್ ಹಾಗೂ ಮೈಸೂರು ವಾರಿಯರ್ಸ್ ನಡುವಿನ ಒಂದು ಪಂದ್ಯ ಬಿಟ್ಟರೆ ಉಳಿದ ಪಂದ್ಯಗಳು ರದ್ದಾಗದಂತೆ ನೋಡಿಕೊಂಡಿರುವುದು ವಿಶೇಷ.

12 ಪಂದ್ಯಗಳ ಪೈಕಿ 11 ಪಂದ್ಯಗಳು ನಡೆದವು. ಒಂದೊಂದು ದಿನವಂತು ಮಳೆಯು ಕಣ್ಣಾಮುಚ್ಚಾಲೆ ಮಧ್ಯೆಯೇ ಪಂದ್ಯಗಳು ನಡೆದವು. ಚೆಂಡು ಗೆರೆಯಲ್ಲಿ 17 ಟಾರ್ಪಲಿನ್ ಗ್ರೌಂಡ್ ಕವರ್‌ಗಳನ್ನು ಸಿದ್ಧಪಡಿಸಿಕೊಂಡಿರುವ ಸಿಬ್ಬಂದಿ ದೇಶದ ಗಡಿ ಕಾಯುವ ಯೋಧರಂತೆ ಧಾವಿಸಿ ಪಿಚ್, ಹುಲ್ಲು ಹಾಸನ್ನು ರಕ್ಷಿಸಿದ್ದಾರೆ.

ಟಿಕೆಟ್ ಖರೀದಿಸಿ ಬಂದ ಕ್ರಿಕೆಟ್ ಪ್ರೇಮಿಗೆ ಒಂದೂ ದಿನವೂ ನಿರಾಸೆಯಾಗದಂತೆ ನೋಡಿಕೊಂಡರು. ಮೈದಾನದಲ್ಲಿ ಮಳೆ ಬಂದಾಗ ನಿಂತ ನೀರನ್ನು ತೆರವು ಮಾಡಲು 4 ಸೂಪರ್ ಸಾಪರ್‌ಗಳು, ಇದಲ್ಲದೆ ಪಿಚ್ ಹದಗೊಳಿಸಲು ರೋಲರ್ ಬಳಸಿದರು.

**ತಿಂಗಳಿಂದ ತಯಾರಿ:** ಮಹಾರಾಜ ಟ್ರೋಫಿಗೆ ಅಂಗಳವನ್ನು ಅಣಿಗೊಳಿಸುವ ಪ್ರಕ್ರಿಯೆ ತಿಂಗಳ ಹಿಂದೆಯೇ ತಯಾರಿ ಮಾಡಲಾಗಿತ್ತು. ಮಳೆಯಾದರೆ ಕೈಯಲ್ಲಿ ನೀರಿನನ್ನೆತ್ತಲು ಆಗುವುದಿಲ್ಲ. ಆದ್ದರಿಂದ ಸೂಪರ್ ಸಾಪರ್ ಯಂತ್ರಗಳ ಬಳಸಿಕೊಳ್ಳಲಾಗಿದೆ. ಸಿಬ್ಬಂದಿ ಚಾಣಾಕ್ಷ್ಯತನದಿಂದ ಕಾರ್ಯನಿರ್ವಹಿಸಿದ್ದಾರೆ ಎಂದು ಪಿಚ್ ಕ್ಯುರೇಟರ್ ತಿಳಿಸಿದರು.

ಎಂಟು ಪಿಚ್‌ಗಳಿದ್ದು, ಮಹಾರಾಜ ಟ್ರೋಫಿಗೆ ಮೂರು ಪಿಚ್ ಬಳಸಲಾಗಿದೆ. ಕಲಘಟಗಿ ಹಾಗೂ ಕುರಡಿಕೇರಿ ಗ್ರಾಮದಿಂದ ಮಣ್ಣು ತಂದು ಮೂರು ಪಿಚ್ ತಯಾರಿಸಲಾಗಿದೆ ಎಂದು ಮಾಹಿತಿ ನೀಡಿದರು.

**ಪ್ರೇಕ್ಷಕರ ಬರ:** ಏಳು ದಿನ ನಡೆದ ಪಂದ್ಯಗಳಲ್ಲಿ ಪ್ರತಿದಿನ 2ರಿಂದ 3 ಸಾವಿರ ಜನ ಪಂದ್ಯ ವೀಕ್ಷಿಸಿದ್ದಾರೆ. ನಗರದಲ್ಲಿ ಹೆಚ್ಚು ಕ್ರಿಕೆಟ್ ಪಂದ್ಯಗಳು ನಡೆಯಬೇಕು, ಇದು ಯುವ ಕ್ರಿಕೆಟ್ಟಿಗರಿಗೆ ಪ್ರೋತ್ಸಾಹ ನೀಡಿದಂತಾಗುತ್ತದೆ ಎಂಬ ಮಾತುಗಳು ಪದೇ ಪದೇ ಕೇಳಿ ಬರುತ್ತಿದ್ದವು. ಆದರೆ, 11 ಪಂದ್ಯಗಳು ನಡೆದರೂ ಹಾಗೂ ಜನಪ್ರಿಯ ಆಟಗಾರರು ಭಾಗವಹಿಸಿದರೂ ಕ್ರಿಕೆಟ್ ಅಭಿಮಾನಿಗಳು ಮೈದಾನದತ್ತ ಬಾರದಿರುವುದು ಬೇಸರಕ್ಕೆ ಕಾರಣವಾಗಿತು.

**ಗ್ರೌಂಡ್ಸ್‌ಮನ್‌ಗಳು ಹಾಗೂ ನಮ್ಮ ಸಿಬ್ಬಂದಿ ಉತ್ತಮ ಕಾರ್ಯ ನಿರ್ವಹಿಸಿದ್ದಾರೆ. ಇಲ್ಲಿ ರಣಜಿ ಹಾಗೂ ಮಹಾರಾಜ ಟ್ರೋಫಿ ಯಶಸ್ವಿಯಾಗಿ ಮಾಡಲಾಗಿದೆ. ಮುಂದೆ ಯಾವುದೇ ಟೂರ್ನಿ ನೀಡಿದರೂ ನಿಭಾಯಿಸುತ್ತೇವೆ.**

■ ವೀರಣ್ಣ ಸವಡಿ, ನಿಮಂತ್ರಕ ಕೆಎಸ್‌ಸಿಎ

**ಮಹಾರಾಜ ಟ್ರೋಫಿಯ ಪಂದ್ಯಗಳು ಬಹಳ ಚೆನ್ನಾಗಿ ನಡೆದವು. ಪ್ರೇಕ್ಷಕರಿಗೆ ಸರಿಯಾಗಿ ಆಸನ ವ್ಯವಸ್ಥೆ ಹಾಗೂ ಸೌಲಭ್ಯ ಒದಗಿಸಬೇಕಾಗಿತ್ತು. ಹಿಂದೆ ರಣಜಿ ಪಂದ್ಯ ನೋಡಿದ್ದೇವು.**

■ ಶ್ರೇಯಸ್ ಪಿಲ್ಲಿ, ವಿದ್ಯಾನಗರ

## ಕಿರುಸುದ್ದಿ

### 5 ಲಕ್ಷ ಮೌಲ್ಯದ ಹೆರಾಯಿನ್ ಜಪ್ತಿ: ಓರ್ವನ ಬಂಧನ

**ಬೆಳಗಾವಿ:** ನಗರದಲ್ಲಿ ಅಕ್ರಮ ಮಾದಕ ವಸ್ತುಗಳ ಮಾರಾಟ ಮತ್ತು ಜಾಲದ ವಿರುದ್ಧ ಪೊಲೀಸರು ಕಾರ್ಯಾಚರಣೆ ತೀವ್ರಗೊಳಿಸಿದ್ದು, ಹೆರಾಯಿನ್ ಸಾಗಾಟ ಹಾಗೂ ಮಾರಾಟ ದಂಧೆಯಲ್ಲಿ ತೊಡಗಿದ್ದ ಪ್ರಮುಖ ಆರೋಪಿಯೊಬ್ಬನನ್ನು ಬಂಸುವಲ್ಲಿ ಎಪಿಎಂಸಿ ಠಾಣೆಯ ಪೊಲೀಸರು ಯಶಸ್ವಿಯಾಗಿದ್ದಾರೆ. ಬಂಧಿತ ಆರೋಪಿಯನ್ನು ಮಹಾದೇವ ಗುರುಸಿದ್ದಪ್ಪ ಪಾಟೀಲ (28) ಎಂದು ಗುರುತಿಸಲಾಗಿದೆ. ಆದರೆ, ಕಾರ್ಯಾಚರಣೆಯ ವೇಳೆ ಮತ್ತೊಬ್ಬ ಆರೋಪಿ ವಿನಾಯಕ ಬಾಬು ಬಂಡವಳಿ (25) ಎಂಬಾತ ಪೊಲೀಸರ ಕಣ್ಣು ತಪ್ಪಿಸಿ ತಲೆಮರೆಸಿಕೊಂಡಿದ್ದು, ಆತನ ಪತ್ತೆಗಾಗಿ ಪೊಲೀಸರು ಜಾಲ ಬೀಸಿದ್ದಾರೆ. ನಗರದ ಹಳೇ ಪಿಬಿ ರಸ್ತೆಯ ಕಾಂಗ್ರೆಸ್ ಭವನದ ಬಳಿ ಮಾದಕ ವಸ್ತುಗಳ ಮಾರಾಟ ದಂದೆ ನಡೆಯುತ್ತಿದೆ ಎಂಬ ಖಚಿತ ಮಾಹಿತಿ ಎಪಿಎಂಸಿ ಪೊಲೀಸರಿಗೆ ಲಭಿಸಿತ್ತು. ತಕ್ಷಣವೇ ಕಾರ್ಯಪ್ರವೃತ್ತರಾದ ಎಪಿಎಂಸಿ ಪೊಲೀಸ್ ಠಾಣೆಯ ಇನ್ಸಪೆಕ್ಟರ್ ಹಾಗೂ ಅವರ ನೇತೃತ್ವದ ವಿಶೇಷ ಸಿಬ್ಬಂದಿ ತಂಡವು ಜಂಟಿಯಾಗಿ ನಿಗದಿ ಪಡಿಸಿದ ಸ್ಥಳದ ಮೇಲೆ ಸಾರ್ವಜನಿಕವಾಗಿ ದಾಳಿ ನಡೆಸಿತು. ಬಂಧಿತ ಆರೋಪಿಯನ್ನು ತೀವ್ರ ತಪಾಸಣೆಗೆ ಒಳಪಡಿಸಿದಾಗ ಆತನ ಬಳಿ ಅಕ್ರಮವಾಗಿ ಬಚ್ಚಿಟ್ಟುಕೊಂಡಿದ್ದ 24.80 ಗ್ರಾಂ ತೂಕದ ಹೆರಾಯಿನ್ ಪತ್ತೆಯಾಗಿದ್ದು, ಅದನ್ನು ಪೊಲೀಸರು ವಶಪಡಿಸಿಕೊಂಡಿದ್ದಾರೆ. ಈ ಕುರಿತು ಬೆಳಗಾವಿಯ ಎಪಿಎಂಸಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ.

### ಗೋವಾದಲ್ಲಿರುವ ಕನ್ನಡ ಶಾಲೆಗಳ ಉಳಿವಿಗೆ ಆಗ್ರಹ

**ಹುಬ್ಬಳ್ಳಿ:** ಗೋವಾದಲ್ಲಿರುವ ಕನ್ನಡ ಶಾಲೆಗಳ ಉಳಿವಿಗೆ ತಕ್ಷಣ ಅಗತ್ಯದ ಕ್ರಮಕ್ಕೆ ಮುಂದಾಗುವಂತೆ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ ಅವರಿಗೆ ಕರ್ನಾಟಕ ಚುಟುಕು ಸಾಹಿತ್ಯ ಪರಿಷತ್ ಆಗ್ರಹಿಸಿದೆ. ಈ ಕುರಿತು ಪತ್ರ ಬರೆದಿರುವ ಪರಿಷತ್, ಗೋವಾ ರಾಜ್ಯದಲ್ಲಿ ಕನ್ನಡ ಮಾಧ್ಯಮ ಶಾಲೆಗಳ ಉಳಿವು, ಕನ್ನಡ ಭಾಷೆಯ ಸಂರಕ್ಷಣೆ ಹಾಗೂ ಕನ್ನಡಿಗ ವಿದ್ಯಾರ್ಥಿಗಳ ಶೈಕ್ಷಣಿಕ ಹಕ್ಕುಗಳ ರಕ್ಷಣೆಗಾಗಿ ಕಚುಸಾಪ ಮುಂದಾಗಿದೆ ಎಂದು ಸಂಚಾಲಕ ಕೃಷ್ಣಮೂರ್ತಿ ಕುಲಕರ್ಣಿ ತಿಳಿಸಿದ್ದಾರೆ. ಗೋವಾದಲ್ಲಿ ಕನ್ನಡ ಮಾಧ್ಯಮ ಶಾಲೆಗಳ ಸಂಖ್ಯೆ ವರ್ಷದಿಂದ ವರ್ಷಕ್ಕೆ ಕಡಿಮೆಯಾಗುತ್ತಿರುವ ಬಗ್ಗೆ ಆತಂಕ ವ್ಯಕ್ತಪಡಿಸಿದ್ದಾರೆ. ಕನ್ನಡ ಮಾಧ್ಯಮ ಶಾಲೆಗಳಿಗೆ ಅಗತ್ಯ ಶಿಕ್ಷಕರ ನೇಮಕಾತಿ, ಮೂಲಭೂತ ಸೌಲಭ್ಯಗಳ ಅಭಿವೃದ್ಧಿ, ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣ ಹಾಗೂ ಕನ್ನಡ ಭಾಷೆಯ ಬೆಳವಣಿಗೆಗೆ ವಿಶೇಷ ಯೋಜನೆಗಳನ್ನು ಜಾರಿಗೊಳಿಸುವಂತೆ ಮನವಿ ಮಾಡಲಾಗಿದೆ. ಪ್ರೊ ಡಿ.ಡಿ.ಎಂ.ದೇಸಾಯಿ, ಚನ್ನಬಸಪ್ಪ ಧಾರವಾಡಶೆಟ್ರು, ಡಾ.ಶಾಂತಣ್ಣ ಕಡಿವಾಲ, ಡಾ.ಸಿದ್ದಕುಮಾರ ಘಂಟಿ, ವಿ.ಜಿ.ಪಾಟೀಲ ಮುಂತಾದವರು ಇದಕ್ಕೆ ಧ್ವನಿಗೂಡಿಸಿ ಒತ್ತಾಯಿಸಿದ್ದಾರೆ.

## ವರದಿ ಆಧರಿಸಿ ಬರಗಾಲ ಘೋಷಣೆಗೆ ಕ್ರಮ: ಜಾರಕಿಹೊಳಿ



**ಹಾವೇರಿ:** ರಾಜ್ಯದಲ್ಲಿ ಮಳೆಕೊರತೆಯಿಂದ ಉಂಟಾಗಿರುವ ಪರಿಸ್ಥಿತಿಯನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿದ್ದು, ಎಲ್ಲ ಜಿಲ್ಲೆಗಳಿಂದ ಪರಿಶೀಲನಾ ವರದಿಗಳು ಬಂದ ಬಳಿಕ ಅಗತ್ಯ ಕಂಡುಬಂದರೆ ಬರಗಾಲ ಘೋಷಣೆ ಕುರಿತು ತೀರ್ಮಾನ ಕೈಗೊಳ್ಳಲಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಸತೀಶ ಜಾರಕಿಹೊಳಿ ತಿಳಿಸಿದರು.

ಜಿಲ್ಲಾ ಪಂಚಾಯಿತಿ ಸಭಾಂಗಣದಲ್ಲಿ ಶುಕ್ರವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಈಗಾಗಲೇ ಬಿತ್ತನೆ ಮಾಡಿರುವ ರೈತರು ಮಳೆ ಕೊರತೆಯಿಂದ ನಷ್ಟ ಅನುಭವಿಸಿದ್ದು, ಈ ಕುರಿತು ಸರ್ಕಾರಕ್ಕೆ ವರದಿ ಸಲ್ಲಿಸಲಾಗುವುದು. ವರದಿ ಆಧರಿಸಿ ರೈತರಿಗೆ ಪರಿಹಾರ ನೀಡುವ ಬಗ್ಗೆ ಸರ್ಕಾರದ ಮಟ್ಟದಲ್ಲಿ ತೀರ್ಮಾನ ಕೈಗೊಳ್ಳಲಾಗುವುದು ಎಂದರು.

ಸವಣೂರು ಏತ ನೀರಾವರಿ ಯೋಜನೆಯನ್ನು ಮರುಚಾಲನೆ ಮಾಡಲು ಅಗತ್ಯ ಕ್ರಮ ಕೈಗೊಳ್ಳಲಾಗುವುದು. ರೈತರ ಹಿತದೃಷ್ಟಿಯಿಂದ ಯೋಜನೆಯನ್ನು ಪುನರಾರಂಭಿಸಲು ಅಧಿಕಾರಿಗಳಿಗೆ ಸೂಚನೆ ನೀಡಲಾಗುವುದು ಎಂದು ಹೇಳಿದರು.

**ಕೊಲೆ ಪ್ರಕರಣಗಳನ್ನು ಕೋಮು ಗಲಭೆಯಾಗಿ ಬಿಂಬಿಸಬೇಡಿ:** ಜಿಲ್ಲೆಯಲ್ಲಿ ಇತ್ತೀಚೆಗೆ ನಡೆದ ನರೇಗಲ್‌ನ ಹಲ್ಲೆ ಪ್ರಕರಣ ಹಾಗೂ ರಟ್ಟಿಹಳ್ಳಿಯ ಕೊಲೆ ಪ್ರಕರಣಗಳು ವೈಯಕ್ತಿಕ ದ್ವೇಷದಿಂದ ನಡೆದಿದ್ದು, ಅವುಗಳನ್ನು ಕೋಮು ಗಲಭೆ ಎಂದು ಬಿಂಬಿಸಲು ಕೆಲವರು ಪ್ರಯತ್ನಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆ. ಈ ರೀತಿಯ ಪ್ರಚೋದನಾತ್ಮಕ ಹೇಳಿಕೆಗಳನ್ನು ನೀಡುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು. ರಾಜ್ಯದ ಹೊಸ ಗೃಹ ಸಚಿವರು ಇಂತಹ ಪ್ರಕರಣಗಳಲ್ಲಿ ಅತ್ಯಂತ ಕಟ್ಟುನಿಟ್ಟಿನ ನಿಲುವು ಹೊಂದಿದ್ದು, ಕಾನೂನು ಸುವ್ಯವಸ್ಥೆ ಕಾಪಾಡಲು ಯಾವುದೇ ರಾಜಿ ಮಾಡುವುದಿಲ್ಲ ಎಂದು ತಿಳಿಸಿದರು.

**ಜೆಜೆಎಂ ಕಾಮಗಾರಿ ಪೂರ್ಣವಾದ ಬಳಿಕವೇ ಹಸ್ತಾಂತರ:** ಜಲ್ ಜೀವನ್ ಮಿಷನ್ (ಜೆಜೆಎಂ) ಯೋಜನೆಯ ಕಾಮಗಾರಿ ಇನ್ನೂ ಹಲವು ಕಡೆ ಪೂರ್ಣಗೊಂಡಿಲ್ಲ. ಕಾಮಗಾರಿ ಸಂಪೂರ್ಣ ಮುಗಿದಿರುವ ಯೋಜನೆಗಳನ್ನು ಮಾತ್ರ ಇಲಾಖೆಗಳು ಹಸ್ತಾಂತರಿಸಿಕೊಳ್ಳುವಂತೆ ಅಧಿಕಾರಿಗಳಿಗೆ ಸೂಚನೆ ನೀಡಲಾಗುವುದು ಎಂದು ಹೇಳಿದರು.

**ಐಬಿಗಳು ಪುನರಾರಂಭ:** ಲೋಕೋಪಯೋಗಿ ಇಲಾಖೆಯ ಅಧೀನದಲ್ಲಿರುವ ಅನೇಕ ಐಬಿಗಳು ಮುಚ್ಚಿರುವುದು ಗಮನಕ್ಕೆ ಬಂದಿದೆ. ಪ್ರತಿ ಐಬಿಗೆ 3ರಿಂದ 5 ಸಿಬ್ಬಂದಿಯನ್ನು ಗುತ್ತಿಗೆ ಆಧಾರದಲ್ಲಿ ನೇಮಕ ಮಾಡಿ ಶೀಘ್ರದಲ್ಲೇ ಅವುಗಳನ್ನು ಪುನರಾರಂಭಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ಸಚಿವ ಸತೀಶ ಜಾರಕಿಹೊಳಿ ತಿಳಿಸಿದರು.

## ಮರಕ್ಕೆ ಬಸ್ ಡಿಕ್ಕಿ: 30ಕ್ಕೂ ಹೆಚ್ಚು ಜನರಿಗೆ ಗಾಯ



**ಲಕ್ಷ್ಮೇಶ್ವರ:** ತಾಲೂಕಿನ ಶಿಗ್ಲಿ–ದೊಡ್ಡೂರ ಮಧ್ಯ ಕೆಎಸ್‌ಆರ್‌ಟಿಸಿ ಬಸ್ ಬ್ರೇಕ್ ಫೇಲ್ ಆಗಿ ನಿಯಂತ್ರಣ ತಪ್ಪಿ ಮರಕ್ಕೆ ಡಿಕ್ಕಿ ಹೊಡೆದು ಬಸ್ಸಿನಲ್ಲಿದ್ದ 30ಕ್ಕೂ ಹೆಚ್ಚು ಜನರು ಗಾಯಗೊಂಡ ಘಟನೆ ಶುಕ್ರವಾರ ಸಂಜೆ ಜರುಗಿದೆ.

ಲಕ್ಷ್ಮೇಶ್ವರ ಸಾರಿಗೆ ಘಟಕಕ್ಕೆ ಸೇರಿದ ಬಸ್ ಶಿಗ್ಲಿ ಮಾರ್ಗವಾಗಿ ದೊಡ್ಡೂರು ಮೂಲಕ ಗುತ್ತಲ ಕಡೆ ಹೊರಟಿತ್ತು. ದೊಡ್ಡೂರು ಗ್ರಾಮದ ಸಮೀಪ ರಸ್ತೆಗೆ ಅಡ್ಡಲಾಗಿ ಕಿರು ಸೇತುವೆ, ಪರ್ಸಿ ನಿರ್ಮಿಸಲಾಗುತ್ತಿದ್ದು ವಾಹನಗಳ ಸಂಚಾರಕ್ಕಾಗಿ ನಿರ್ಮಿಸಿದ ಕಚ್ಚಾ ರಸ್ತೆಯಲ್ಲಿ ಸಾಗುವಾಗ ಬ್ರೇಕ್ ಫೇಲ್ ಆಗಿ ಚಾಲಕನ ನಿಯಂತ್ರಣ ತಪ್ಪಿ ಮರಕ್ಕೆ ಡಿಕ್ಕಿ ಹೊಡೆದಿದೆ.

ಪರಿಣಾಮ ಬಸ್ ಮುಂದಿನ ಭಾಗ ಸಂಪೂರ್ಣ ಜಖಂಗೊಂಡಿದ್ದು 30ಕ್ಕೂ ಹೆಚ್ಚು ಪ್ರಯಾಣಿಕರು ಗಾಯಗೊಂಡಿದ್ದು ಅದೃಷ್ಟವಶಾತ್ ಯಾವುದೇ ಪ್ರಾಣ ಹಾನಿಯಾಗಿಲ್ಲ, ಬಸ್‌ನಲ್ಲಿ ಲಕ್ಷ್ಮೇಶ್ವರ, ಶಿಗ್ಲಿಯ ಶಾಲಾ- ಕಾಲೇಜಿನ ವಿದ್ಯಾರ್ಥಿಗಳು ಸೇರಿ 105 ಪ್ರಯಾಣಿಕರು ಕಿಕ್ಕಿರಿದು ತುಂಬಿದ್ದರು. ಗಾಯಾಳುಗಳಲ್ಲಿ ಬಹುತೇಕ ವಿದ್ಯಾರ್ಥಿನಿಯರೇ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಗಾಯಾಳುಗಳಿಗೆ ಲಕ್ಷ್ಮೇಶ್ವರದ ಸರ್ಕಾರಿ ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆ ಕೊಡಿಸಿ ಹೆಚ್ಚಿನ ಚಿಕಿತ್ಸೆಗೆ ಗದಗ ಜಿಲ್ಲಾಸ್ಪತ್ರೆಗೆ ದಾಖಲಿಸಲಾಗಿದೆ. ವಿದ್ಯಾರ್ಥಿಗಳ ಕೈ-ಕಾಲು, ಬೆನ್ನು, ಕುತ್ತಿಗೆ ಭಾಗಕ್ಕೆ ಗಾಯಗಳಾಗಿದ್ದರಿಂದ ಅವರ ನರಳಾಟ, ಕೂಗಾಟ ಜೋರಾಗಿತ್ತು. ಆಸ್ಪತ್ರೆಯ ವೈದ್ಯರು, ಸಿಬ್ಬಂದಿ ಜೊತೆಗೆ ಕೆಲಸದ ಅವಧಿ ಮುಗಿದ್ದರ ಆಸ್ಪತ್ರೆಯ ಸಿಬ್ಬಂದಿಗಳೆಲ್ಲರೂ ಸೇರಿ ಸಕಾಲಕ್ಕೆ ಪ್ರಥಮ ಚಿಕಿತ್ಸೆ ನೀಡಿ ಜಿಲ್ಲಾಸ್ಪತ್ರೆಗೆ ದಾಖಲಿಸುವ ಕೆಲಸ ಮಾಡಿದರು. ಪೊಲೀಸರು, ಸಾರ್ವಜನಿಕರು ಈ ಕಾರ್ಯದಲ್ಲಿ ಸಹಕಾರ ನೀಡಿ ಮಾನವೀಯತೆ ಮೆರೆದರು.

## ಭಾರತೀಯ ಸೇನೆಯ ಲೆಫ್ಟಿನೆಂಟ್ ಆಗಿ

# ದೇಶಸೇವೆಗೆ ಸಜ್ಜಾದ ಹರ್ಷ ಹಿರೇಮಠ

▸ ಸಿದ್ದಯ್ಯ ಹೆಸರೂರು

ದಿಗಂತ ವಿಶೇಷ



**ಮಸ್ಕಿ:** ಸಿಂಧನೂರು ತಾಲೂಕಿನ ಯುಜಿಎಚ್ ಪಿಎಸ್ ಬಸಾಪುರ (ಇಜೆ) ಶಾಲೆಯ ಮುಖ್ಯ ಗುರುಗಳಾದ ರುದ್ರಮುನಿ ಹಿರೇಮಠ ಅವರ ಸುಪುತ್ರ ಹರ್ಷ ಹಿರೇಮಠ ಗುಡದೂರು ಅವರು ಭಾರತೀಯ ಸೇನೆಯಲ್ಲಿ ಲೆಫ್ಟಿನೆಂಟ್ (ಸೇನಾಧಿಕಾರಿ) ಆಗಿ ನೇಮಕಗೊಂಡಿರುವುದಕ್ಕೆ ತಾಲೂಕಿನ ಗುಡುದೂರು ಗ್ರಾಮಸ್ಥರು, ಹಾಗು ಕ್ಷೇತ್ರದ ಶಾಸಕರು ಹಾಗೂ ವಿವಿಧ ರಾಜಕೀಯ ಮುಖಂಡರು, ಗಣ್ಯರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ಯುಪಿಎಸ್‌ಸಿ ನಡೆಸುವ ಪ್ರತಿಷ್ಠಿತ ಎನ್‌ಡಿಎ ಪರೀಕ್ಷೆಯಲ್ಲಿ ಸಾಧನೆಗೈದು, 4 ವರ್ಷಗಳ ಕಠಿಣ ತರಬೇತಿ ಮುಗಿಸಿರುವ ಹರ್ಷ ಅವರು ಜಮ್ಮು ಕಾಶ್ಮೀರದ ಬಾರಾಮುಲ್ಲಾ ಸೆಕ್ಟರ್‌ನ 15 ಅಸ್ಸಾಂ ರೆಜಿಮೆಂಟ್‌ನಲ್ಲಿ ಸೇನಾಧಿಕಾರಿಯಾಗಿ ಕರ್ತವ್ಯಕ್ಕೆ ಹಾಜರಾಗುತ್ತಿದ್ದಾರೆ.

ಈ ಹಿನ್ನೆಲೆಯಲ್ಲಿ ಕ್ಷೇತ್ರದ ಶಾಸಕರಾದ ಬಸವನಗೌಡ ತುರುವಿಹಾಳ, ಹಾಗೂ ಸಿದ್ದನಗೌಡ ತುರುವಿಹಾಳ ಅವರು ಹರ್ಷ ಅವರ ಸಾಧನೆಯನ್ನು ಮುಕ್ತಕಂಠದಿಂದ ಶ್ಲಾಘಿಸಿದ್ದಾರೆ.

ಗ್ರಾಮೀಣ ಭಾಗದ ಯುವಕನೊಬ್ಬ ದೇಶದ ಗಡಿ ಕಾಯುವ ಅತ್ಯುನ್ನತ ಜವಾಬ್ದಾರಿ ಪಡೆದಿರುವುದು ಇಡೀ ಜಿಲ್ಲೆಗೆ ಹೆಮ್ಮೆಯ ವಿಷಯ ಎಂದು ಅವರು ತಿಳಿಸಿದ್ದಾರೆ.

ಇದೇ ಸಂದರ್ಭದಲ್ಲಿ ಪ್ರಮುಖ ಮುಖಂಡರಾದ ಬಸವನಗೌಡ ಬಾದರ್ಲಿ, ಕೆ.ವಿರೂಪಾಕ್ಷಪ್ಪ, ಹಂಪನಗೌಡ ನಾಡಗೌಡ,ಕೆ. ವಿರೂಪಾಕ್ಷಪ್ಪ, ಕೆ.ಕರಿಯಪ್ಪ, ಹನುಮನಗೌಡ ಬೆಳಗುರ್ಕಿ,ಅವರು ಕೂಡ ಯುವ ಸೇನಾಧಿಕಾರಿಗೆ ಹರ್ಷ ವ್ಯಕ್ತಪಡಿಸಿದ್ದಾರೆ.

ಹರ್ಷ ಹಿರೇಮಠ ಅವರ ಈ ದೇಶಸೇವೆಯ ಹೆಜ್ಜೆಯು ಮಸ್ಕಿ, ಸಿಂಧನೂರು ಮತ್ತು ರಾಯಚೂರು ಜಿಲ್ಲೆಯ ಸಾವಿರಾರು ಗ್ರಾಮೀಣ ಯುವಕರಿಗೆ ಮಿಲಿಟರಿ ಸೇರಲು ದೊಡ್ಡ ಪ್ರೇರಣೆಯಾಗಲಿದೆ ಎಂದು ಗಣ್ಯರು ಪ್ರಶಂಸನಾ ಸಂದೇಶದಲ್ಲಿ ತಿಳಿಸಿದ್ದಾರೆ.

## ನರೇಗಲ್ ಘಟನೆ: ಎಸ್‌ಐಟಿ ರಚನೆಗೆ ಬೊಮ್ಮಾಯಿ ಆಗ್ರಹ



**ಹಾವೇರಿ:** ಹಾನಗಲ್ ತಾಲೂಕಿನ ನರೇಗಲ್ ಗ್ರಾಮದಲ್ಲಿ ನಡೆದ ಘಟನೆಯ ತನಿಖೆಗೆ ಎಸ್‌ಐಟಿ ರಚನೆ ಮಾಡಬೇಕು, ಹಾವೇರಿ ಎಸ್ಪಿ ಮೇಲೆ ಕ್ರಮ ಕೈಗೊಂಡು, ಹಾನಗಲ್ ಸಿಪಿಐ ಮತ್ತು ಎಸ್‌ಐ ಅವರನ್ನು ಅಮಾನತು ಮಾಡುವಂತೆ ಸಂಸದ ಬಸವರಾಜ ಬೊಮ್ಮಾಯಿ ಆಗ್ರಹಿಸಿದ್ದಾರೆ.

ಹಾವೇರಿಯಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಜಿಲ್ಲೆಯಲ್ಲಿ ಕಾನೂನು ಸುವ್ಯವಸ್ಥೆ ಸತ್ತು ಹೋಗಿದೆ. ನಿರಂತರವಾಗಿ ಕೋಮು ಗಲಭೆ ಆಗುತ್ತಿವೆ. ಒಂದು ವರ್ಷದಲ್ಲಿ 7–8 ಘಟನೆ ಆಗಿವೆ. ನರೇಗಲ್‌ದಲ್ಲಿ 3ದಶಕಗಳಿಂದ ಹಲವಾರು ಸಂದರ್ಭಗಳಲ್ಲಿ ಕೋಮು ಶಾಂತಿ ಕದಡಿದ್ದು ಅದಕ್ಕೆ ಶಾಶ್ವತ ಪರಿಹಾರವಾಗಿ ಕೆಲವು ಕ್ರಮಗಳನ್ನ ನಮ್ಮ ಸರ್ಕಾರ ಇದ್ದಾಗ, ಉದಾಸಿ ಅವರು ಮಾಡಿದ್ದರು. ಮಸೀದಿಗೆ ಹೆಚ್ಚಿನ ಜಾಗ ಕೊಟ್ಟು ಅವರಿಗೆ ಹೋಗಿ ಬರೋದಕ್ಕೆ ಬೇರೆ ಬಾಗಿಲನ್ನು ಮಾಡಿ ವ್ಯವಸ್ಥೆ ಮಾಡಿ, ಅವತ್ತಿನ ಡಿಸಿ ಅವರು ಪ್ರೊಸೀಡಿಂಗ್ ಮಾಡಿ, ಮುಖ್ಯ ರಸ್ತೆಯನ್ನು ಎಲ್ಲರೂ ಉಪಯೋಗಿಸಬೇಕೆಂದು ತೀರ್ಮಾನ ಆಗಿದೆ. ಇದನ್ನು ಯಾವ ಪೊಲೀಸರು ಪಾಲಿಸುತ್ತಿಲ್ಲ, ಇಂದು ಕಾನೂನು ಸುವ್ಯವಸ್ಥೆ ಹದಗೆಡಲು ಇದೇ ಕಾರಣ.

ನರೇಗಲ್, ಬೊಮ್ಮನಹಳ್ಳಿ, ಬಂಕಾಪುರ ಇವೆಲ್ಲವೂ ಕೂಡ ಸೂಕ್ಷ್ಮ ಪ್ರದೇಶಗಳಿವೆ. ಎಲ್ಲೂ ಕ್ರಮ ತೆಗೆದುಕೊಂಡಿಲ್ಲ ಜಿಲ್ಲೆಯಲ್ಲಿ 112ದಲ್ಲಿ ಇಬ್ಬರು ಪೊಲೀಸರು ಇರುತ್ತಾರೆ. ಇಂತಹ ಸೂಕ್ಷ್ಮ ಪ್ರದೇಶದಲ್ಲಿ ನಿಯಂತ್ರಣ ಮಾಡಲು ಸಾಧ್ಯನಾ? ಇದು ಪೊಲಿಸರ ಸಂಪೂರ್ಣ ನಿರ್ಲಕ್ಷ್ಯ, ಪೊಲೀಶರ ಮೇಲೆ ಕ್ರಮ ಆಗಬೇಕೆಂದು ಆಗ್ರಹಿಸಿದರು.

ಅಲ್ಲದೇ ಈ ಪ್ರಕರಣದ ತನಿಖೆಗೆ ಎಸ್‌ಐಟಿ ರಚನೆ ಮಾಡಬೇಕು. ಜಿಲ್ಲಾ ಪೊಲೀಸರಿಂದ ನ್ಯಾಯ ಸಿಗುವುದಿಲ್ಲ, ಏನಾದರು ಗಲಾಟೆ ಆದರೆ ಆ ಕಡೆ 20 ಜನ, ಈ ಕಡೆ 20 ಜನರ ಮೇಲೆ ಕೇಸ್ ಹಾಕಿ ಮುಗಿಸಿ ಬಿಡುತ್ತಾರೆ ಎಂದು ಆರೋಪಿಸಿದರು.

ರಟ್ಟಿಹಳ್ಳಿಯಲ್ಲೂ ಕೂಡ ಇದೇ ರೀತಿ ಘಟನೆ ಆಗಿದೆ. ಹಿಂದೆ ಕಾಗಿನೆಲೆಯಲ್ಲಿ ಘಟನೆ ಆಗಿದೆ. ಇಡೀ ಜಿಲ್ಲೆಯಲ್ಲೇ ಘಟನೆ ಆಗಿದೆ. ಇಷ್ಟೆಲ್ಲಾ, ಓಸಿ ರಕ್ಷಣೆ ಕೊಡುವುದಕ್ಕೆ ಪೊಲೀಸರು ಬಳಕೆಯಾಗಿದ್ದಾರೆ ಹೊರತಾಗಿ ಇಲ್ಲಿ ಕೋಮು ಸೌಹಾರ್ದತೆಯನ್ನು ಕಾಪಾಡುವುದಕ್ಕೆ ಪೊಲೀಸರು ಇಲ್ಲ ಎಂದು ವಾಗ್ದಾಳಿ ನಡೆಸಿದರು.

ಈ ಎಲ್ಲಾ ಘಟನೆಗಳನ್ನು ಬಿಜೆಪಿಯವರು ತಾರ್ಕಿಕ ಅಂತ್ಯಕ್ಕೆ ತೆಗೆದುಕೊಂಡು ಹೋಗುತ್ತೇವೆ. ಇಲ್ಲಿಗೆ ಬಿಡುವುದಿಲ್ಲ, ಮೊದಲನೆಯದಾಗಿ ಗಾಯಾಳುಗಳಿಗೆ ಒಳ್ಳೆಯ ಚಿಕಿತ್ಸೆ ಕೊಟ್ಟು ಅವರಿಗೆಲ್ಲಾ ಸಹಕಾರ ಮಾಡಿ ಅವರು ಮನೆಗೆ ಬರುವಂತದ್ದು, ಎರಡನೆಯದು, ಎಲ್ಲಿಯವರೆಗೂ ಈ ಅಧಿಕಾರಿಗಳ ಮೇಲೆ ಕ್ರಮ ಆಗುವುದಿಲ್ಲ ಅಲ್ಲಿಯವರೆಗೂ ನಮ್ಮ ಹೋರಾಟ ಇದ್ದೇ ಇರುತ್ತದೆ. ಹಾವೇರಿಯಿಂದ ಹಾನಗಲ್‌ಗೂ ಮಾಡುತ್ತೇವೆ ಮತ್ತು ಎಲ್ಲೆಲ್ಲಿ ಆಗುತ್ತೆ ಅಲ್ಲಲ್ಲಿ ಉಗ್ರವಾದಂತಹ ಹೋರಾಟವನ್ನು ನಾವು ಖಂಡಿತವಾಗಿಯೂ ಮಾಡುತ್ತೇವೆ ಎಂದು ಹೇಳಿದರು.

## ಮೀಸಲಾತಿಗಾಗಿ ಶೀಘ್ರ ಸ್ವಾಮೀಜಿಗಳ ಸಭೆ



**ಚನ್ನಮ್ಮನ ಕಿತ್ತೂರು:** ಲಿಂಗಾಯತ ಪಂಚಮಸಾಲಿ ಸಮಾಜಕ್ಕೆ 2ಎ ಮೀಸಲಾತಿಗಾಗಿ ಮುಖ್ಯಮಂತ್ರಿಗಳ ಬಳಿ ನಿಯೋಗ ಹೋಗಲು ಸ್ವಾಮೀಜಿಗಳ ಸಭೆಯನ್ನು ಬೆಳಗಾವಿಯಲ್ಲಿ ಶೀಘ್ರ ಸಭೆ ಸೇರಿಸಲಾಗುವುದೆಂದು ದೇಗುಲಹಳ್ಳಿಯ ಮಡಿವಾಳೇಶ್ವರಮಠದ ವೀರೇಶ್ವರ ಸ್ವಾಮೀಜಿ ಹೇಳಿದರು.

ದೇಗುಲಹಳ್ಳಿಯ ಮಠದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ ಈಗಾಗಲೇ ಬೆಂಗಳೂರಿನ ಆರೋಢ ಮಠದ ಸ್ವಾಮೀಜಿ, ಕಕಮರಿಯ ಸ್ವಾಮೀಜಿಗಳು ಸಭೆ ಮಾಡಿದ್ದು, ಅದರಂತೆ ನಾವು ಬೆಳಗಾವಿ, ಧಾರವಾಡ, ವಿಜಯಪೂರ, ಬಾಗಲಕೋಟೆ ಸೇರಿದಂತೆ ಇನ್ನೂ ಹಲವಾರು ಜಿಲ್ಲೆಗಳ ಸ್ವಾಮೀಜಿಗಳ ಮೂಲಕ ಬೆಳಗಾವಿಯಲ್ಲಿ ಸಭೆ ನಡೆಸಿ ಮೀಲಾತಿ ನೀಡುವಂತೆ ಮುಖ್ಯಮಂತ್ರಿಗಳನ್ನು ಒತ್ತಾಯಿಸಲು 100 ಸ್ವಾಮೀಜಿಗಳ ನಿಯೋಗ ಹೋಗಲು ದಿನಾಂಕ, ಸಮಯ ನಿಗದಿಪಡಿಸಲಾಗುವುದೆಂದು ತಿಳಿಸಿದರು.

ಲಿಂಗಾಯತ ಪಂಚಮಸಾಲಿ ಸಮಾಜವು 2ಎ ಮೀಸಲಾತಿಗಾಗಿ ಹಲವಾರು ವರ್ಷಗಳಿಂದ ಹೋರಾಟ ಮಾಡುತ್ತಲೇ ಬಂದಿದ್ದು ಆದರೆ, ಇಲ್ಲಿಯವರೆಗೂ ಯಾವುದೇ ಸರ್ಕಾರಗಳು ಮೀಸಲಾತಿ ಕೊಟ್ಟಿರುವುದಿಲ್ಲ ಆದ್ದರಿಂದ ಈ ಸಭೆಯ ನಿರ್ಣಯದ ಮೂಲಕ ಬೆಂಗಳೂರಿಗೆ ಮುಖ್ಯಮಂತ್ರಿಗಳಿಗೆ ಭೇಟಿಯಾಗಿ ಮೀಸಲಾತಿ ನೀಡುವಂತೆ ಒತ್ತಾಯಿಸೋಣವೆಂದರು. ಪಿ.ಜಿ.ಹುಣಶ್ಯಾಳದ ಶಿವಲಿಂಗೇಶ್ವರ ವೇದಾಂತ ಆಶ್ರಮದ ಪ್ರಭು ದೇವರು ಮಾತನಾಡಿದರು. ಗೋಕಾಕ ಸಿದ್ದಾರೂಢ ಮಠದ ಶಂಕ್ರಾನಂದ ಸ್ವಾಮೀಜಿ ಉಪಸ್ಥಿತರಿದ್ದರು.

## ಕೊಠಡಿಯಲ್ಲಿ ಕುಳಿತು ಮತದಾರರ ಪಟ್ಟಿ ಪರಿಷ್ಕರಣೆ: ಆಕ್ರೋಶ

**ಹುಬ್ಬಳ್ಳಿ:** ಹು–ಧಾ ವಾರ್ಡ್ ನಂ.63ರಲ್ಲಿ ಮನೆ ಮನೆಗೆ ತೆರಳಿ ಮತದಾರರ ಪಟ್ಟಿ ಪರಿಷ್ಕರಣೆ (ಎಸ್‌ಐಆರ್) ಕೆಲಸ ಮಾಡದ ಬಿಎಲ್‌ಒಗಳು ಕೊಠಡಿಯೊಂದರಲ್ಲಿ ಕುಳಿತು ಪಟ್ಟಿ ಪರಿಷ್ಕರಣೆ ಕೆಲಸ ಮಾಡುತ್ತಿದ್ದಾರೆ ಎಂದು ಬಿಜೆಪಿ ಮುಖಂಡರು ಗಂಭೀರವಾಗಿ ಆರೋಪಿಸಿದ್ದಾರೆ.

ಇಲ್ಲಿಯ ಬಿಎಲ್‌ಒ ಬಾಲಚಂದ್ರ ಹರಪ್ಪನಾಳ ಮನೆ ಮನೆಗೆ ತೆರಳದೆ ಕೊಠಡಿಯೊಂದರಲ್ಲಿ ಮುಸ್ಲಿಂ ಮೂರು ನಾಲ್ಕು ಮಹಿಳೆಯರಿಂದ ಎನ್ಯೂಮರೇಷನ್ ಅರ್ಜಿಗಳ ಭರ್ತಿ ಮಾಡುತ್ತಿರುವ ವಿಡಿಯೋ ಹಾಗೂ ಫೋಟೋಗಳ ಸಾಮಾಜಿಕ ಜಾಲತಾಣದ ಪುಟದಲ್ಲಿ ಹಂಚಿಕೊಂಡಿದ್ದಾರೆ. ರಾಜ್ಯ ಸರ್ಕಾರದ ಅಣತಿಯಂತೆ ಈ ಕಾರ್ಯಗಳು ನಡೆಯುತ್ತಿದ್ದು, ತಕ್ಷಣ ಎಸ್‌ಐಆರ್ ನಿಯಮಗಳ ಉಲ್ಲಂಘನೆ ಮಾಡುತ್ತಿರುವುದು ತಡೆಯಬೇಕು. ಅಧಿಕಾರಿಗಳು ಮನೆ ಮನೆಗೆ ತೆರಳಿ ಸರಿಯಾಗಿ ಮತದಾರರ ಪಟ್ಟಿ ಪರಿಷ್ಕರಣೆ ಮಾಡಬೇಕು ಎಂದು ಆಗ್ರಹಿಸಿದ್ದಾರೆ.

ವಿಧಾನಸಭಾ ಕ್ಷೇತ್ರಗಳು ಸೇರಿದಂತೆ ರಾಜ್ಯದ ಹಲವೆಡೆ ಎಸ್‌ಐಆರ್ ಪ್ರಕ್ರಿಯೆಯಲ್ಲಿ ರಾಜ್ಯ ಕಾಂಗ್ರೆಸ್ ಸರ್ಕಾರದ ಕುಮ್ಮಕ್ಕಿನಿಂದಲೇ ಕಾನೂನು ಬಾಹಿರವಾಗಿ, ವ್ಯವಸ್ಥಿತವಾಗಿ ಬೃಹತ್ ಅಕ್ರಮವೆಸಗಲಾಗುತ್ತಿದೆ ಎಂದು ಕೇಂದ್ರ ಸಚಿವ ಪ್ರಹ್ಲಾದ ಜೋಶಿ ಆರೋಪಿಸಿದ್ದಾರೆ. ರಾಜ್ಯದಲ್ಲಿ ಮುಸ್ಲಿಂ ಹಾಗೂ ಬಾಂಗ್ಲಾ ದೇಶ ಜನರ ಹೆಸರನ್ನು ಎಸ್‌ಐಆರ್‌ನಲ್ಲಿ ಸೇರಿಸಲು ಎಲ್ಲಿಲ್ಲದ ಕಸರತ್ತು ನಡೆಸಿದ್ದಾರೆ. ರಾಜ್ಯದಲ್ಲಿ ಪಾರದರ್ಶಕದಿಂದ ನಡೆಯಬೇಕಾದ ಮತದಾರರ ಪಟ್ಟಿ ಪರಿಷ್ಕರಣೆ ಅಡ್ಡದಾರಿ ಹಿಡಿದಿದೆ. ಈ ಅಕ್ರಮವನ್ನು ತಡೆಯಬೇಕು ಎಂದು ಒತ್ತಾಯಿಸಿದರು. ವಾರ್ಡ್ ನಂ.63ರಲ್ಲಿ ಬಿಎಲ್‌ಒ ಒಂದೇ ಸ್ಥಳದಲ್ಲಿ ಕುಳಿತು ಮತದಾರರ ಪಟ್ಟಿ ಪರಿಷ್ಕರಣೆ(ಎಸ್ ಐಆರ್) ಮಾಡಿರುವ ಬಗ್ಗೆ ಗಂಭೀರವಾಗಿ ಪರಿಗಣಿಸಲಾಗುವುದು ಎಂದು ಜಿಲ್ಲಾಧಿಕಾರಿ ಸ್ನೇಹಲ್ ಆರ್. ತಿಳಿಸಿದರು.

## ಮತದಾರರ ಪಟ್ಟಿ ಪರಿಷ್ಕರಣೆಯಲ್ಲಿ ಅಕ್ರಮ: ಜೋಶಿ

**ನವದೆಹಲಿ:** ಮತದಾರರ ಪಟ್ಟಿ ವಿಶೇಷ ಪರಿಷ್ಕರಣೆಯಲ್ಲಿ ಅಕ್ರಮ ನಡೆಯುತ್ತಿದ್ದು, ಗುರುವಾರ ರಾಮನಗರ, ಇಂದು ಶಿಗ್ಗಾಂವಿ–ಸವಣೂರು, ಹುಬ್ಬಳ್ಳಿ–ಧಾರವಾಡ ಮಸೀದಿಗಳಲ್ಲಿ ಕುಳಿತು ಫಾರ್ಮ್ ಭರ್ತಿ ಮಾಡಲಾಗುತ್ತಿದೆ. ಹೀಗೆ ರಾಜ್ಯಾದ್ಯಂತ ಮತದಾರರ ಮಟ್ಟಿ ಪರಿಷ್ಕರಣೆ (ಎಸ್‌ಐಆರ್ )ಅಕ್ರಮಗಳ ಸುರಿಮಳೆಯಾಗುತ್ತಿದೆ. ಬೃಹತ್ ಹಗರಣವೇ ನಡೆಯುತ್ತಿದೆ ಎಂದು ಕೇಂದ್ರ ಸಚಿವ ಪ್ರಹ್ಲಾದ ಜೋಶಿ ಗಂಭೀರವಾಗಿ ಆರೋಪಿಸಿದ್ದಾರೆ.

ಈ ಕುರಿತು ಪ್ರಕಟಣೆಗೆ ತಿಳಿಸಿದ ಅವರು, ಮಸೀದಿಯಲ್ಲಿ ಕುಳಿತು ಫಾರ್ಮ್ ಭರ್ತಿ ಮಾಡಿಕೊಡಲಾಗುತ್ತಿದೆ. ಸಾಲದ್ದಕ್ಕೆ ರಾಜಾರೋಷವಾಗಿ ವಾಟ್ಸ್ಯಾಪ್ ಗ್ರೂಪ್‌ಗಳಲ್ಲಿ ಬಹಿರಂಗ ಪ್ರಚಾರ ಸಹ ಮಾಡಲಾಗುತ್ತಿದೆ. ತಕ್ಷಣವೇ ಇದಕ್ಕೆಲ್ಲ ತಡೆ ಹಾಕಬೇಕು ಎಂದು ಸಚಿವರು ಆಗ್ರಹಿಸಿದ್ದಾರೆ.

ರಾಜ್ಯದಲ್ಲಿ ನಡೆಯುತ್ತಿರುವ ಈ ಬಗೆಯ ಎಸ್‌ಐಆರ್‌ನಿಂದ ಕೇವಲ ನಿಯಮ ಉಲ್ಲಂಘನೆಯಲ್ಲ, ಪ್ರಜಾಪ್ರಭುತ್ವದ ಆಶಯಗಳಿಗೇ ವಿರುದ್ಧವಾಗಿದೆ. ನಿಯಮಗಳನ್ನೆಲ್ಲ ಗಾಳಿಗೆ ತೂರಿ ಮಸೀದಿಯಲ್ಲಿ ಕುಳಿತು ಎನ್ಯೂಮರೇಷನ್ ಫಾರ್ಮ್‌ಗಳನ್ನು ಭರ್ತಿ ಮಾಡುತ್ತಿದ್ದು, ಅದನ್ನು ವಾಟ್ಸ್ಯಾಪ್ ಗಳಲ್ಲಿ ಹಂಚಿಕೊಳ್ಳುತ್ತಿರುವ ಅಕ್ರಮಗಳ ಬಗ್ಗೆ ರಾಜ್ಯದ ಅನೇಕ ಕಡೆಗಳಿಂದ ಫೋನ್ ಕರೆಗಳೂ ಬರುತ್ತಿವೆ ಕಿಡಿಕಾರಿದ್ದಾರೆ.

ಹುಬ್ಬಳ್ಳಿ–ಧಾರವಾಡ ಪೂರ್ವ–72 ವಿಧಾನಸಭಾ ಕ್ಷೇತ್ರದ ವಾರ್ಡ್–63, ಬೂತ್ ನಂ.16ರಲ್ಲಿ ಸಹ ಎಸ್‌ಐಆರ್‌ನಲ್ಲಿ ನಿಯಮ ಬಾಹಿರ ಚಟುವಟಿಕೆ ನಡೆದಿದೆ. ಇಲ್ಲಿನ ಬಿಎಲ್‌ಒ ಮೇರಿ ರಾಮಚಂದ್ರ ಹರಪನಾಳ ಮನೆ ಮನೆಗೆ ತೆರಳದೆ ಸ್ಥಳವೊಂದರಲ್ಲಿ ಕುಳಿತು ಎನ್ಯೂಮರೇಷನ್ ಫಾರ್ಮ್ ಭರ್ತಿ ಮಾಡಿರುವುದು ಸಾರ್ವಜನಿಕವಾಗಿ ಬಹಿರಂಗಗೊಂಡಿದೆ.

ರಾಜ್ಯದಲ್ಲಿ ಈ ಮಟ್ಟದಲ್ಲಿ ನಡೆಯುತ್ತಿರುವ ಹಗರಣದ ಹಿಂದೆ ಯಾರ ಹಿತಾಸಕ್ತಿ ಅಡಗಿದೆ? ಎಂಬುದನ್ನು ಬಯಲಿಗೆಳೆಯಲು ನಿಷ್ಪಕ್ಷಪಾತ ಮತ್ತು ಸಮಗ್ರ ತನಿಖೆಯಾಗಬೇಕು. ತಪ್ಪಿತಸ್ಥ ಅಧಿಕಾರಿಗಳು ಮತ್ತು ಇದರ ಹಿಂದಿರುವ ರಾಜಕೀಯ ಕೈಗಳ ವಿರುದ್ಧ ಕಠಿಣ ಕಾನೂನು ಕ್ರಮ ಜರುಗಿಸಬೇಕು ಎಂದು ಒತ್ತಾಯಿಸಿದ್ದಾರೆ.

## ರಾಜ್ಯಮಟ್ಟದ 14ನೇ ಶೂಟಿಂಗ್ ಚಾಂಪಿಯನ್‌ಶಿಪ್

# ನಾಲ್ಕು ಚಿನ್ನ, ಬೆಳ್ಳಿ, ಐದು ಕಂಚಿನ ಪದಕ



**ಹುಬ್ಬಳ್ಳಿ:** ಬೆಂಗಳೂರಿನ ಸಾಯಿ ಶೂಟಿಂಗ್ ರೇಂಜ್‌ನಲ್ಲಿ ಈಚೆಗೆ ನಡೆದ ರಾಜ್ಯಮಟ್ಟದ 14ನೇ ಶೂಟಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಹುಬ್ಬಳ್ಳಿ ಶೂಟಿಂಗ್ ಅಕಾಡೆಮಿಯ ಶೂಟರ್‌ಗಳು ತಲಾ ನಾಲ್ಕು ಚಿನ್ನ, ಬೆಳ್ಳಿ ಮತ್ತು ಐದು ಕಂಚಿನ ಪದಕ ಗಳಿಸಿದ್ದಾರೆ. ಸ್ಪರ್ಧೆಯಲ್ಲಿ 32 ಶೂಟಿಂಗ್ ಅಕಾಡೆಮಿಗಳ 1600 ಶೂಟರ್‌ಗಳು ಭಾಗವಹಿಸಿದ್ದರು.

50 ಮೀ. 3 ಪೊಷಿಷನ್‌ನ ಜೂನಿಯರ್ ವಿಭಾಗದಲ್ಲಿ ನೀಲ್ ಅನಿರುದ್ಧ ಫಡನವೀಸ್ ಕಂಚು, ಯೂಥ್ ವಿಭಾಗದಲ್ಲಿ ಕಂಚು ಗಳಿಸಿದ್ದಾರೆ. 10ಮೀ. ಏರ್ ರೈಫಲ್ ಮಾಸ್ಟರ್‌ನಲ್ಲಿ ರಮೇಶ ದೊಡ್ಡಮನಿ ಚಿನ್ನದ ಪದಕ ಜಯಿಸಿದ್ದಾರೆ.

25 ಮೀ.ಸ್ಪೋರ್ಟ್ಸ್ ಪಿಸ್ತೂಲ್ ಮಾಸ್ಟರ್‌ನಲ್ಲಿ ಜಯಶ್ರೀ ಪಾಟೀಲ ಚಿನ್ನ, 50 ಮೀ. ಫ್ರೀ ಪಿಸ್ತೂಲ್‌ನಲ್ಲಿ ಬೆಳ್ಳಿ, ರವಿಚಂದ್ರ ಬಾಲೆಹೊಸೂರು ಅವರು 25 ಸ್ಟ್ಯಾಂಡರ್ಡ್ ಪಿಸ್ತೂಲ್ ಮಾಸ್ಟರ್‌ನಲ್ಲಿ ಚಿನ್ನ, 25 ಮೀ. ಸ್ಟ್ಯಾಂಡರ್ಡ್ ಸೀನಿಯರ್‌ನಲ್ಲಿ ಬೆಳ್ಳಿ, 25 ಮೀ. ಸೆಂಟರ್ ಫೈರ್ ಪಿಸ್ತೂಲ್ ಮಾಸ್ಟರ್‌ನಲ್ಲಿ ಕಂಚಿನ ಪದಕ ಗಳಿಸಿದ್ದಾರೆ.

ಮೊಹಮ್ಮದ್ ಅಜ್ಮಲ್ ಅವರು 25 ಮೀ. ಸೆಂಟರ್ ಫೀರ್ ಪಿಸ್ತೂಲ್ ಸೀನಿಯರ್‌ನಲ್ಲಿ ಬೆಳ್ಳಿ, 50 ಮೀ. ಫ್ರೀ ಪಿಸ್ತೂಲ್ ವಿಭಾಗದಲ್ಲಿ ಕಂಚಿನ ಪದಕ ಪಡೆದಿದ್ದಾರೆ.

**ತಂಡ ವಿಭಾಗ:** 10 ಮೀ. ಏರ್‌ಪಿಸ್ತೂಲ್ ಐಎಸ್‌ಎಸ್‌ಎಫ್ ಯೂಥ್ ವಿಭಾಗದಲ್ಲಿ ಪೃಥ್ವಿರಾಜ್ ಬಾಲೆಹೊಸೂರು, ಮೃತ್ಯುಂಜಯ ಮಣಕವಾಡ, ಖುಷ್ ಪರಮಶೆಟ್ಟಿ ಅವರ ತಂಡ ಚಿನ್ನ, 10 ಮೀ. ಏರ್ ಪಿಸ್ತೂಲ್ ಎನ್‌ಆರ್ ಸೀನಿಯರ್ ವಿಭಾಗದಲ್ಲಿ ಸುಶಾಂತ್ ಕುಲಕರ್ಣಿ, ಸಾಗರ್, ಅಭಿಜಿತ್ ಮುಲ್ಕಿಗೌಡರ್ ಅವರ ತಂಡ ಬೆಳ್ಳಿ ಪದಕ ಗೆದ್ದಿದೆ.

10 ಮೀ. ಏರ್ ಪಿಸ್ತೂಲ್ ಎನ್.ಆರ್ ಮಾಸ್ಟರ್ ವಿಭಾಗದಲ್ಲಿ ಯೋಗೀಶ್ ಕಂಬ್ಳಿಮಠ್, ಗಿರೀಶ್ ಹಾಲಬಾವಿ, ವೈ.ಟಿ. ರಾಜೇಂದ್ರ ಪ್ರಸಾದ್ ಅವರ ತಂಡ ಕಂಚಿನ ಪದಕ ಜಯಿಸಿದೆ.

## ಬೀದಿಗಳಲ್ಲಿ ಎಸ್‌ಐಆರ್ ಅರ್ಜಿ: ಅಶೋಕ ಆರೋಪ

• **ಬೆಂಗಳೂರು:** ಕಾಂಗ್ರೆಸ್ ಸರ್ಕಾರದ ಕುಮ್ಮಕ್ಕಿನಿಂದಾಗಿ ಮತಗಟ್ಟೆ ಮಟ್ಟದ ಅಧಿಕಾರಿ (ಬಿಎಲ್‌ಒ)ಗಳು ಬೀದಿಗಳಲ್ಲಿ ಎಸ್‌ಐಆರ್ ಅರ್ಜಿಗಳನ್ನು ಹಂಚುತ್ತಿದ್ದಾರೆ. ಈ ಮೂಲಕ ಬಾಂಗ್ಲಾ ಜನರನ್ನು ಮತದಾರರ ಪಟ್ಟಿಗೆ ಸೇರಿಸುವ ಷಡ್ಯಂತ್ರ ನಡೆದಿದೆ ಎಂದು ಪ್ರತಿಪಕ್ಷ ನಾಯಕ ಆರ್. ಅಶೋಕ್ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಶುಕ್ರವಾರ ವಿಧಾನಸೌಧದಲ್ಲಿ ಸುದ್ದಿಗೋಷ್ಠಿ ನಡೆಸಿದ ಅವರು, ದೇಶದ ಭದ್ರತೆಯ ದೃಷ್ಟಿಯಿಂದ ಚುನಾವಣಾ ಆಯೋಗ ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಮಾಡುತ್ತಿದೆ. ಇದು ಕೇಂದ್ರ ಸರ್ಕಾರದ ಉದ್ದೇಶ ಕೂಡ ಹೌದು. ಆದರೆ, ಕಾಂಗ್ರೆಸ್ ಸರ್ಕಾರ ಬಾಂಗ್ಲಾ ಜನರ ಪಾಲಿಗೆ ಸ್ವರ್ಗವಾಗಿದೆ. ಬೆಂಗಳೂರು, ಕೊಡಗು, ಚಿಕ್ಕಮಗಳೂರು ಸೇರಿದಂತೆ ಸುಮಾರು 20 ಲಕ್ಷ ಬಾಂಗ್ಲಾ ಜನರು ರಾಜ್ಯದಲ್ಲಿದ್ದಾರೆ. 2002ರ ಮತದಾರರ ಪಟ್ಟಿಯಲ್ಲಿ ಇವರ ಹೆಸರಿಲ್ಲ, ಆದ್ದರಿಂದ ಬಾಂಗ್ಲಾ ನಿವಾಸಿಗಳಿಗೆ ಹೆದ್ದಾರಿ ನಿರ್ಮಿಸಿಕೊಟ್ಟಿದ್ದು, ಹಜ್ ಭವನ, ಮಸೀದಿಗಳ ಮುಂದೆ ರಾಜಾರೋಷವಾಗಿ ಮತದಾರರ ಪಟ್ಟಿಗೆ ಹೆಸರು ಸೇರಿಸಲಾಗುತ್ತಿದೆ. ಬಿಎಲ್‌ಒಗಳು ಪ್ರತಿ ಮನೆಗೆ ಹೋಗಿ ಸಮೀಕ್ಷೆ ಮಾಡಬೇಕಿದ್ದರೂ ಪ್ರಸಾದ ಹಂಚಿದಂತೆ ಬೀದಿಯಲ್ಲಿ ಕುಳಿತು ಅರ್ಜಿಗಳನ್ನು ಹಂಚುತ್ತಿದ್ದಾರೆ. ಅಧಿಕಾರಿಗಳು ಮನೆ ಗುರುತು ಮಾಡಿ ಅರ್ಜಿ ತುಂಬಿಸಿ, ಮರಳಿ ಅರ್ಜಿಯನ್ನು ಪಡೆಯಬೇಕು. ಆದರೆ, ಕಾಂಗ್ರೆಸ್ ಮತಕ್ಕಾಗಿ ಬಾಂಗ್ಲಾ ಜನರನ್ನು ಪಟ್ಟಿಗೆ ಸೇರಿಸುವ ಷಡ್ಯಂತ್ರ ಮಾಡುತ್ತಿದೆ ಎಂದು ದೂರಿದರು.

ಮಹದೇವಪುರ, ಬ್ಯಾಟರಾಯನಪುರದಲ್ಲಿ ಮಸೀದಿಗಳ ಮುಂದೆ ಗುಂಪುಗುಂಪಾಗಿ ಕುಳಿತು ಎಸ್‌ಐಆರ್ ಪ್ರಕ್ರಿಯೆ ನಡೆಸಲಾಗುತ್ತಿದೆ ಎಂದರು.

## ಸ್ವಯಂಪ್ರೇರಿತ ದೂರು ದಾಖಲು

• **ಹೊಸದಿಲ್ಲಿ:** ಬೆಂಗಳೂರಿನ ಐಟಿ ಕಂಪನಿಯೊಂದರ ಆವರಣದಲ್ಲಿರುವ ಶಿಶುವಿಹಾರದಲ್ಲಿ ಪುಟ್ಟ ಮಕ್ಕಳನ್ನು ದಾದಿಯರು ಅಮಾನವೀಯವಾಗಿ ನಡೆಸಿಕೊಂಡಿದ್ದಾರೆ ಎಂಬ ಆರೋಪವನ್ನು ಗಂಭೀರವಾಗಿ ಪರಿಗಣಿಸಿರುವ ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗವು ಸ್ವಯಂಪ್ರೇರಿತವಾಗಿ ಪ್ರಕರಣ ದಾಖಲಿಸಿಕೊಂಡಿದೆ. ಪ್ರಕರಣಕ್ಕೆ ಸಂಬಂಧಿಸಿದಂತೆ ಕರ್ನಾಟಕ ಸರ್ಕಾರದ ಮುಖ್ಯ ಕಾರ್ಯದರ್ಶಿ ಹಾಗೂ ರಾಜ್ಯ ಪೊಲೀಸ್ ಮಹಾನಿರ್ದೇಶಕರಿಗೆ ಆಯೋಗ ನೋಟಿಸ್ ಜಾರಿಗೊಳಿಸಿದ್ದು, ಎರಡು ವಾರಗಳೊಳಗೆ ವಿವರವಾದ ವರದಿ ಸಲ್ಲಿಸುವಂತೆ ಸೂಚಿಸಿದೆ. ಐಟಿ ಕಂಪನಿಯ ಉದ್ಯೋಗಿಗಳು ತಮ್ಮ ಮಕ್ಕಳನ್ನು ಈ ಶಿಶುವಿಹಾರದಲ್ಲಿ ಬಿಡುತ್ತಿದ್ದರು. ಮಕ್ಕಳ ಮೇಲೆ ಕ್ರೌರ್ಯ ಎಸಗಲಾಗುತ್ತಿದೆ ಎನ್ನಲಾದ ವಿಡಿಯೋಗಳು ಮಕ್ಕಳ ಸಹಾಯವಾಣಿ ಕೇಂದ್ರದ ಅಧಿಕಾರಿಯೊಬ್ಬರಿಗೆ ತಲುಪಿದ ಬಳಿಕ ಘಟನೆ ಬೆಳಕಿಗೆ ಬಂದಿದೆ.

- ಐಟಿ ಕಂಪನಿಯೊಂದರಲ್ಲಿ ಶಿಶುವಿಹಾರಕ್ರೌರ್ಯ
- ಮುಖ್ಯ ಕಾರ್ಯದರ್ಶಿ, ಡಿಜಿಪಿಗೆ ನೋಟಿಸ್
- ಎರಡು ವಾರಗಳಲ್ಲಿ ಸಮಗ್ರ ವರದಿಗೆ ಸೂಚನೆ

ಮಾಧ್ಯಮ ವರದಿಯಲ್ಲಿ ಉಲ್ಲೇಖಿಸಲಾದ ಅಂಶಗಳು ಸತ್ಯವಾಗಿದ್ದರೆ, ಅವು ಮಕ್ಕಳ ಮಾನವ ಹಕ್ಕುಗಳ ಗಂಭೀರ ಉಲ್ಲಂಘನೆಯಾಗಲಿವೆ ಎಂದು ಆಯೋಗ ಅಭಿಪ್ರಾಯಪಟ್ಟಿದೆ. ಘಟನೆಗೆ ಸಂಬಂಧಿಸಿದಂತೆ ಕೈಗೊಂಡ ತನಿಖೆ, ಆರೋಪಿಗಳ ವಿರುದ್ಧದ ಕ್ರಮ ಹಾಗೂ ಮಕ್ಕಳ ಸುರಕ್ಷತೆಗೆ ಜಾರಿಗೊಳಿಸಿರುವ ವ್ಯವಸ್ಥೆಗಳ ಮಾಹಿತಿಯನ್ನು ವರದಿಯಲ್ಲಿ ಸೇರಿಸುವಂತೆ ಸೂಚಿಸಲಾಗಿದೆ.

## ಗೃಹಜ್ಯೋತಿ ಜಾತಿ ಪ್ರಮಾಣ ಪತ್ರ ಕಡ್ಡಾಯವಲ್ಲ: ಬೆಸ್ಕಾಂ

ಪುಟ ೧ ಬೆಸ್ಕಾಂನ ಸಿಬ್ಬಂದಿ ಹಾಗೂ ಮೀಟರ್ ರೀಡರ್‌ಗಳು ಸೇವಾ ಸಿಂಧು ಮೊಬೈಲ್ ಅಪ್ಲಿಕೇಷನ್ ಹಾಗೂ ಮುದ್ರಿತ ಘೋಷಣಾ ಪತ್ರದ ಮೂಲಕ ಮಾಹಿತಿಯನ್ನು ಫಲಾನುಭವಿಗಳ ಮನೆಗೆ ತೆರಳಿ ಕಲೆ ಹಾಕುತ್ತಿದ್ದು, ಫಲಾನುಭವಿಯ ಪ್ರವರ್ಗದ (ಜಾತಿ ಪ್ರಮಾಣಪತ್ರ) ಸಂಬಂಧಿಸಿದ ಮಾಹಿತಿ ಕೇವಲ ಐಚ್ಛಿಕವಾಗಿದೆ ಎಂದು ಬೆಸ್ಕಾಂ ತಿಳಿಸಿದೆ. ಫಲಾನುಭವಿಗಳ ಜಾತಿ ಪ್ರಮಾಣಪತ್ರಕ್ಕೆ ಸಂಬಂಧಿಸಿದಂತೆ ಸಾರ್ವಜನಿಕರು ಹಾಗೂ ಸಾಮಾಜಿಕ ಜಾಲತಾಣಗಳಲ್ಲಿ ಬಂದಿರುವ ಪ್ರಶ್ನೆಗೆ ಸಂಬಂಧಿಸಿದಂತೆ ಬೆಸ್ಕಾಂ ಈ ಸ್ಪಷ್ಟನೆ ನೀಡಿದ್ದು, ಫಲಾನುಭವಿಗಳಿಗೆ ಜಾತಿ ಮಾಹಿತಿ ನೀಡಲು ಇಷ್ಟವಿಲ್ಲದಿದ್ದರೆ ಮೊಬೈಲ್ ಅಪ್ಲಿಕೇಷನ್‌ನಲ್ಲಿರುವ ಮಾಹಿತಿ ನೀಡಲು ನಿರಾಕರಣೆ ಎಂಬ ಆಯ್ಕೆಯನ್ನು ನಮೂದಿಸಲು ಸಿಬ್ಬಂದಿಗೆ ಈಗಾಗಲೇ ಸೂಚನೆ ನೀಡಲಾಗಿದೆ ಎಂದು ಬೆಸ್ಕಾಂ ಅಧಿಕಾರಿಗಳು ತಿಳಿಸಿದ್ದಾರೆ.

**ಸಹಾಯವಾಣಿ ಆರಂಭ:** ಬೆಸ್ಕಾಂ ವ್ಯಾಪ್ತಿಯಲ್ಲಿ ಗೃಹ ಜ್ಯೋತಿ ಯೋಜನೆಯ ಪರಿಶೀಲನೆಯ ಮಾಹಿತಿ ಸಂಗ್ರಹಕ್ಕೆ ಸಂಬಂಧಿಸಿದಂತೆ ಗ್ರಾಹಕರು ಹಾಗೂ ಫಲಾನುಭವಿಗಳ ಪ್ರಶ್ನೆಗಳಿಗೆ ಪರಿಹಾರ ಸೂಚಿಸಲು ಬೆಸ್ಕಾಂ ನಿಗಮ ಕಚೇರಿಯಲ್ಲಿ ಸಹಾಯವಾಣಿ ಆರಂಭಿಸಿದೆ. ಸಹಾಯವಾಣಿ ಸಂಖ್ಯೆಗಳ ವಿವರ: 9480816111, 9480816112, 9480816113 ಮತ್ತು 9480816114. ಸಹಾಯವಾಣಿ ಬೆಳಗ್ಗೆ 6 ರಿಂದ ರಾತ್ರಿ 10 ಗಂಟೆಯವರೆಗೆ ಕಾರ್ಯನಿರ್ವಹಿಸಲಿದೆ ಎಂದು ಬೆಸ್ಕಾಂ ಪ್ರಕಟಣೆಯಲ್ಲಿ ತಿಳಿಸಿದೆ.

## ಇ20 ವಿರುದ್ಧದ 10 ಸುಳ್ಳುಗಳಿಗೆ ತೆರೆ

### ವೈರಲ್ ವಿಡಿಯೋಗಳೂ ನಕಲಿ

ಇಂಧನ ಟ್ಯಾಂಕ್‌ಗೆ ಇರುವೆ ಜೇನುನೊಣ ಆಕರ್ಷಿತವಾಗುತ್ತವೆ ಎಂಬುದಕ್ಕೆ ವೈಜ್ಞಾನಿಕ ಆಧಾರವಿಲ್ಲ, ಇಂಧನ ಎಥೆನಾಲ್‌ನಲ್ಲಿ ಸಕ್ಕರೆ ಉಳಿಯುವುದಿಲ್ಲ, ಇ20ಯಿಂದ ಟ್ಯಾಂಕ್‌ಗೆ ನೀರು ಸೇರುತ್ತದೆ ಎಂಬ ಆರೋಪವೂ ತಪ್ಪು. ವಾಹನ ಮತ್ತು ಬಂಕ್‌ಗಳ ಟ್ಯಾಂಕ್‌ಗಳಲ್ಲಿ ನೀರು ಪ್ರವೇಶಿಸದಂತೆ ರಕ್ಷಣಾ ವ್ಯವಸ್ಥೆಗಳಿವೆ. ಕಬ್ಬಿನ ರಸವನ್ನು ನೇರವಾಗಿ ಪೆಟ್ರೋಲ್‌ಗೆ ಬೆರೆಸುವುದು ಅಥವಾ ಪೆಟ್ರೋಲ್ ಬೇರ್ಪಡುವುದನ್ನು ತೋರಿಸುವ ವಿಡಿಯೋಗಳೂ ನಕಲಿ ಎಂದು ಸಚಿವಾಲಯ ಹೇಳಿದೆ.

### ಪ್ರಯೋಗ ಎಂದಿಲ್ಲ

ಸರ್ವೋಚ್ಚ ನ್ಯಾಯಾಲಯದಲ್ಲಿ ಕೇಂದ್ರ ಸರ್ಕಾರ ಇ20ಯನ್ನು ಪ್ರಯೋಗ ಎಂದಿದೆ ಎಂಬ ವರದಿಯೂ ತಪ್ಪು. ವಿಚಾರಣೆ ತೈಲ ಕಂಪನಿಗಳ ಎಥೆನಾಲ್ ಖರೀದಿ ಒಪ್ಪಂದ ಮತ್ತು ವಾರ್ಷಿಕ ಹಂಚಿಕೆ ವಿಧಾನಕ್ಕೆ ಸಂಬಂಧಿಸಿದ್ದೇ ಹೊರತು ಇ20 ಕಾರ್ಯಕ್ರಮದ ಗುಣಮಟ್ಟಕ್ಕೆ ಅಲ್ಲ.

### ರೈತರಿಗೆ ಲಾಭ

ಎಥೆನಾಲ್ ಘಟಕಗಳಿಗೆ ಪರಿಸರ ಅನುಮತಿ, ಅಂತರ್ಜಲ ನಿಯಮ ಪಾಲನೆ ಮತ್ತು ಶೂನ್ಯ ದ್ರವ ತ್ಯಾಜ್ಯ ವ್ಯವಸ್ಥೆ ಕಡ್ಡಾಯ. ಬಹುತೇಕ ಘಟಕಗಳಲ್ಲಿ ಜೈವಿಕ ಇಂಧನ ಆಧಾರಿತ ವಿದ್ಯುತ್ ಬಳಸುತ್ತವೆ. 2013-14ರಲ್ಲಿ ಶೇ.1.5ರಷ್ಟಿದ್ದ ಮಿಶ್ರಣ ಡಿಸೆಂಬರ್ 2025ಕ್ಕೆ ಶೇ.20 ತಲುಪಿದೆ. 2014-15ರಿಂದ ಮೇ 2026ರವರೆಗೆ 1.90 ಲಕ್ಷ ಕೋಟಿ ರೂ. ವಿದೇಶಿ ವಿನಿಮಯ ಉಳಿತಾಯ, ರೈತರಿಗೆ 1.60 ಲಕ್ಷ ಕೋಟಿ ರೂ. ಪಾವತಿ, 930 ಲಕ್ಷ ಮೆಟ್ರಿಕ್ ಟನ್ ಇಂಗಾಲ ಹೊರಸೂಸುವಿಕೆ ಕಡಿತ ಹಾಗೂ 310 ಲಕ್ಷ ಮೆಟ್ರಿಕ್ ಟನ್ ಕಚ್ಚಾ ತೈಲ ಬದಲಾವಣೆ ಸಾಧಿಸಲಾಗಿದೆ.

### ಸಮರ್ಪಕ ಫಾರ್ಮ್ ವಿತರಣೆಗೆ ಬಿಎಲ್‌ಒಗಳಿಗೆ ಅನ್ಬುಕುಮಾರ್ ಸೂಚನೆ

# ಮನೆಗಳಿಗೆ ಭೇಟಿ ಕಡ್ಡಾಯ

• **ಬೆಂಗಳೂರು:** ರಾಜ್ಯದಲ್ಲಿ ನಡೆಯುತ್ತಿರುವ ಮತದಾರರ ಪಟ್ಟಿ ವಿಶೇಷ ತೀವ್ರ ಪರಿಷ್ಕರಣೆ (ಎಸ್‌ಐಆರ್)ಯಲ್ಲಿ ಬೂತ್ ಮಟ್ಟದ ಅಧಿಕಾರಿಗಳು (ಬಿಎಲ್‌ಒ) ಕಡ್ಡಾಯವಾಗಿ ಮತದಾರರ ಮನೆ-ಮನೆಗೆ ಭೇಟಿ ನೀಡಿ ಎನ್ಯುಮರೇಷನ್ (ಗಣತಿ ನಮೂನೆ) ಫಾರಂಗಳನ್ನು ವಿತರಿಸಬೇಕು ಎಂದು ರಾಜ್ಯ ಮುಖ್ಯ ಚುನಾವಣಾಧಿಕಾರಿ(ಸಿಇಒ)ವಿ. ಅನ್ಬುಕುಮಾರ್ ಆದೇಶ ನೀಡಿದ್ದಾರೆ.

ಎಸ್‌ಐಆರ್ ಪ್ರಕ್ರಿಯೆಯಲ್ಲಿ ಬಿಎಲ್‌ಒಗಳು ನಿಯಮಾವಳಿಗಳನ್ನು ಗಾಳಿಗೆ ತೂರಿ ಕಚೇರಿ ಹಾಗೂ ಇತರೆಡೆ ಕುಳಿತು ಫಾರಂ ವಿತರಿಸುತ್ತಿದ್ದಾರೆ ಎಂಬ ಗಂಭೀರ ದೂರುಗಳು ಕೇಳಿಬಂದ ಬೆನ್ನಲ್ಲೇ ಕರ್ನಾಟಕದ ಮುಖ್ಯ ಚುನಾವಣಾಧಿಕಾರಿ ಈ ಕಠಿಣ ಆದೇಶ ಹೊರಡಿಸಿದ್ದಾರೆ. ರಾಜ್ಯದ ಎಲ್ಲಾ ಜಿಲ್ಲಾ ಚುನಾವಣಾಧಿಕಾರಿಗಳು, ಡೆಪ್ಯುಟಿ ಕಮಿಷನರಗಳಿ ಹಾಗೂ ಜಿಬಿಎ ಮುಖ್ಯ ಆಯುಕ್ತರಿಗೆ ಅಧಿಕೃತ ಸುತ್ತೋಲೆ ರವಾನಿಸಿರುವ ಸಿಇಒ, ಮಾರ್ಗ ಸೂಚಿಗಳನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ಕಡಕ್ ಸೂಚನೆ ನೀಡಿದ್ದಾರೆ.

**ಮನೆ-ಮನೆ ಭೇಟಿ ಕಡ್ಡಾಯ:** ಚುನಾವಣಾ ಆಯೋಗದ ಮಾರ್ಗಸೂಚಿಗಳ ಪ್ರಕಾರ ಎಲ್ಲಾ ಬಿಎಲ್‌ಒಗಳು ಕಡ್ಡಾಯವಾಗಿ ಪ್ರತಿಯೊಬ್ಬ ಮತದಾರರ ಮನೆಗೆ ಖುದ್ದಾಗಿ ಭೇಟಿ ನೀಡಿ ಫಾರಂಗಳನ್ನು ವಿತರಿಸ ಬೇಕು. ವಿಶೇಷ ಸಮಗ್ರ ಪರಿಷ್ಕರಣೆ ಕಾರ್ಯಕ್ರಮದ ಎಲ್ಲಾ ನಿಯಮಾವಳಿಗಳನ್ನು ಕಟ್ಟುನಿಟ್ಟಾಗಿ ಪಾಲಿಸು ವಂತೆ ಜಿಲ್ಲಾಧಿಕಾರಿಗಳು ಬಿಎಲ್‌ಒಗಳಿಗೆ ಅಗತ್ಯ ಸೂಚನೆಗಳನ್ನು ನೀಡಬೇಕೆಂದು ಆದೇಶದಲ್ಲಿ ತಿಳಿಸಲಾಗಿದೆ.

**ಮತದಾರರ ಸಹಾಯ ಕೇಂದ್ರಗಳ ಬಳಕೆ:** ಫಾರಂಗಳನ್ನು ಭರ್ತಿ ಮಾಡಲು ಕಷ್ಟಪಡುವ ಮತದಾರರಿಗೆ ನೆರವಾಗಲು ಮತದಾರರ ಸಹಾಯ ಕೇಂದ್ರಗಳು ಲಭ್ಯವಿದ್ದು, ಮತದಾರರು ಇದರ ಸದುಪಯೋಗ ಪಡಿಸಿಕೊಳ್ಳಬಹುದು. ಈ ಸೌಲಭ್ಯದ ಬಗ್ಗೆ ಸಾರ್ವಜನಿಕರಲ್ಲಿ ಹೆಚ್ಚಿನ ಜಾಗೃತಿ ಮೂಡಿಸುವಂ ತೆಯೂ ಅಧಿಕಾರಿಗಳಿಗೆ ತಿಳಿಸಲಾಗಿದೆ.



### ಕೋಟಿ ದಾಟಿದ ನಮೂನೆ ವಿತರಣೆ

ರಾಜ್ಯದಲ್ಲಿ ನಡೆಯುತ್ತಿರುವ ಮತದಾರರ ಪಟ್ಟಿಯ ವಿಶೇಷ ತೀವ್ರ ಪರಿಷ್ಕರಣೆ (ಎಸ್‌ಐಆರ್) ಕಾರ್ಯ ಭರದಿಂದ ಸಾಗುತ್ತಿದ್ದು, ಜುಲೈ 3ರ ಸಂಜೆ 6 ಗಂಟೆಯ ವೇಳೆಗೆ ರಾಜ್ಯಾದ್ಯಂತ ಒಟ್ಟು 2 ಕೋಟಿಗೂ ಹೆಚ್ಚು ಗಣತಿ ನಮೂನೆಗಳನ್ನು ವಿತರಿಸಲಾಗಿದ್ದು, ಶೇ.36.30 ರಷ್ಟು ಪ್ರಗತಿ ಕಂಡಿದೆ ಎಂದು ರಾಜ್ಯ ಮುಖ್ಯ ಚುನಾವಣಾಧಿಕಾರಿಗಳ ಕಚೇರಿ ತಿಳಿಸಿದೆ. ಜೂನ್ 16 ರ ಅಂಕಿ-ಅಂಶಗಳ ಪ್ರಕಾರ ರಾಜ್ಯದ ಮತದಾರರ ಪಟ್ಟಿಯಲ್ಲಿ ಒಟ್ಟು 5,54,32,314 ಮತದಾರರಿದ್ದಾರೆ. ಅದರಲ್ಲಿ ಇದುವರೆಗೆ 2,0,12,411 ಗಣತಿ ನಮೂನೆಯನ್ನು ವಿತರಿಸಲಾಗಿದೆ. ವಿತರಿಸಲಾದ ನಮೂನೆಯಲ್ಲಿ 12,07,432 (ಶೇ. 2.18) ನಮೂನೆ ಗಳನ್ನು ಡಿಜಿಟಲೀಕರಣಗೊಳಿಸಲಾಗಿದೆ ಎಂದು ಚುನಾವಣಾಧಿಕಾರಿಗಳ ಕಚೇರಿ ಮಾಹಿತಿ ನೀಡಿದೆ. ಮನೆ-ಮನೆ ಪರಿಶೀಲನೆಯ ಸಂದರ್ಭದಲ್ಲಿ ಇದುವರೆಗೆ ಒಟ್ಟು 17,688 (ಶೇ. 0.03) ಮತದಾರರನ್ನು ಮರಣ, ಗೈರುಹಾಜರು, ಸ್ಥಳಾಂತರ, ನಕಲು ಮತ್ತು ಇತರರು ಅಡಿಯಲ್ಲಿ ಗುರುತಿಸಲಾಗಿದೆ. ಕಲಬುರಗಿ ಜಿಲ್ಲೆಯಲ್ಲಿ 23,71,542 ಮತದಾರರ ಪೈಕಿ 11,59,114 ನಮೂನೆಗಳನ್ನು ವಿತರಿಸುವ ಮೂಲಕ ಮುಂಚೂಣಿಯಲ್ಲಿದೆ. ಬೆಳಗಾವಿ ಜಿಲ್ಲೆಯಲ್ಲಿ ಅತಿ ಹೆಚ್ಚು ಅಂದರೆ 41,07,000 ಮತದಾರರಿದ್ದು, ಈಗಾಗಲೇ 10,12,307 ನಮೂನೆಗಳನ್ನು ವಿತರಿಸಲಾಗಿದ್ದು, 50,213 ನಮೂನೆಗಳ ಡಿಜಿಟಲೀಕರಣ ಪೂರ್ಣಗೊಂಡಿದೆ.

### ಪ್ರಮುಖ ಮಾಹಿತಿ

- ಗಣತಿ ನಮೂನೆಗಳ ವಿತರಣೆ-2,0,12,411
- ಡಿಜಿಟಲೀಕರಣಗೊಂಡ ನಮೂನೆಗಳು-1,20,7,432 (ಶೇ. 2.18)
- ಆನ್‌ಲೈನ್ ಮೂಲಕ ಸಲ್ಲಿಕೆಯಾದ ನಮೂನೆಗಳು- 54,823 (ಶೇ. 0.10)
- ಮೃತ ಮತದಾರರು- 8,853 (ಶೇ. 0.02)
- ಖಾಯಂ ಆಗಿ ಸ್ಥಳಾಂತರಗೊಂಡವರು- 6,828 (ಶೇ. 0.01)
- ಈಗಾಗಲೇ ಹೆಸರು ನೋಂದಾಯಿಸಿಕೊಂಡವರು- 1,636
- ಪತ್ತೆಯಾಗದ ಮತದಾರರು -264
- ಇತರರು- 107

# ಮುಂಗಾರು ಹಿನ್ನಡೆ ನೀರು ಪೂರೈಕೆ ಸ್ಥಗಿತ

• **ಕೊಪ್ಪಳ:** ಕರ್ನಾಟಕದಲ್ಲಿ ಮುಂಗಾರು ಮಳೆ ಕೈಕೊಟ್ಟಿರುವ ಹಿನ್ನೆಲೆಯಲ್ಲಿ ಇಡೀ ಕಲ್ಯಾಣ ಕರ್ನಾಟಕ ಭಾಗದ ರೈತರ ಜೀವನಾಡಿಯಾಗಿರುವ ತುಂಗಭದ್ರಾ ಜಲಾಶಯದಿಂದ ಕಾಲುವೆಗಳಿಗೆ ನೀರು ಹರಿಸುವುದನ್ನು ಸಂಪೂರ್ಣವಾಗಿ ಸ್ಥಗಿತಗೊಳಿಸಲಾಗಿದೆ.

ಕೊಪ್ಪಳ ತಾಲೂಕಿನ ಮುನಿರಾಬಾದ್ ಸಮೀಪವಿರುವ ತುಂಗಭದ್ರಾ ಜಲಾಶಯದ ವ್ಯಾಪ್ತಿಯಲ್ಲಿ ಒಳಹರಿವು ಇಲ್ಲದೇ ಇರುವುದರಿಂದ ಮುಂಗಾರು ಬೆಳೆಗೆ ನೀರು ಕೊಡಲು ಸಾಧ್ಯವೇ ಇಲ್ಲ ಎಂದು ನೀರಾವರಿ ವಲಯದ ಅಧಿಕಾರಿಗಳು ಅಧಿಕೃತ ಆದೇಶ ಹೊರಡಿಸಿದ್ದಾರೆ. ಸರ್ಕಾರದ ಕಟ್ಟುನಿಟ್ಟಿನ ಸೂಚನೆಯ ಮೇರೆಗೆ ಕಾಲುವೆಗಳ ನೀರನ್ನು ಬಂದ್ ಮಾಡಲಾಗಿದೆ.

**ಟಿಬಿ ಡ್ಯಾಂನಲ್ಲಿ ಹತ್ತು ವರ್ಷಗಳಲ್ಲೇ ಅತ್ಯಂತ ಕನಿಷ್ಠ ನೀರಿನ ಮಟ್ಟ:** ಪ್ರಸ್ತುತ ತುಂಗಭದ್ರಾ ಜಲಾಶಯದಲ್ಲಿ ಕೇವಲ 9 ಟಿಎಂಸಿ ನೀರು ಮಾತ್ರ ಸಂಗ್ರಹವಿದ್ದು, ಇದು ಕಳೆದ 10 ವರ್ಷಗಳಲ್ಲೇ ಅತ್ಯಂತ ಕನಿಷ್ಠ ಮಟ್ಟದ ಸಂಗ್ರಹವಾಗಿದೆ. ಕಳೆದ ವರ್ಷ ಇದೇ ಅವಧಿಯಲ್ಲಿ ಜಲಾಶಯದಲ್ಲಿ ಬರೋಬ್ಬರಿ 75 ಟಿಎಂಸಿ ನೀರಿತ್ತು. ಆದರೆ, ಕಳೆದ ವರ್ಷ ಡ್ಯಾಂನ ಕ್ರಸ್ಟ್ ಗೇಟ್ ಕೊಚ್ಚಿ ಹೋಗಿದ್ದ ಕಾರಣದಿಂದಾಗಿ ರೈತರಿಗೆ ಹಿಂಗಾರು ಬೆಳೆಗೆ ನೀರು ಕೊಡಲು ಸಾಧ್ಯವಾಗಿರಲಿಲ್ಲ, ಈಗ ಈ ಬಾರಿ ಮುಂಗಾರು ಮಳೆಯೇ ಇಲ್ಲದ ಕಾರಣ ಜೂನ್ ತಿಂಗಳಲ್ಲಿ ಡ್ಯಾಂಗೆ ಯಾವುದೇ ಒಳಹರಿವು ಬಂದಿಲ್ಲ, ಪರಿಣಾಮವಾಗಿ ಮುಂಗಾರು ಬೆಳೆಗೆ ನೀರು ಹರಿಸುವುದನ್ನು ನಿಲ್ಲಿಸಲಾಗಿದೆ.




### ನಾಲ್ಕು ಜಿಲ್ಲೆಗಳ ರೈತರು ಕಂಗಾಲು

ತುಂಗಭದ್ರಾ ಜಲಾಶಯದ ನೀರನ್ನೇ ನಂಬಿ ಕೃಷಿ ಚಟುವಟಿಕೆ ಆರಂಭಿಸಲು ಸಜ್ಜಾಗಿದ್ದ ಕೊಪ್ಪಳ, ಬಳ್ಳಾರಿ, ರಾಯಚೂರು ಮತ್ತು ವಿಜಯನಗರ ಜಿಲ್ಲೆಗಳ ಲಕ್ಷಾಂತರ ರೈತರು ಸರ್ಕಾರದ ಈ ನಿರ್ಧಾರದಿಂದ ಕಂಗಾಲಾಗಿದ್ದಾರೆ. ಈಗಾಗಲೇ ಕೃಷಿ ಇಲಾಖೆಯು ರೈತರು ಜಲಾಶಯದ ನೀರನ್ನು ಮಾತ್ರ ನಂಬಿ ಹೆಚ್ಚಿನ ನೀರು ಬೇಡುವ ಬೆಳೆಗಳ ಬಿತ್ತನೆ ಮಾಡಬೇಡಿ ಎಂದು ಎಚ್ಚರಿಸಿದೆ. ಒಂದು ವೇಳೆ ಜುಲೈ ತಿಂಗಳಿನಲ್ಲಾದರೂ ಮಳೆ ಚೇತರಿಸಿಕೊಳ್ಳದಿದ್ದರೆ ಈ ನಾಲ್ಕು ಜಿಲ್ಲೆಗಳಲ್ಲಿ ಕೃಷಿ ಚಟುವಟಿಕೆ ಸಂಪೂರ್ಣ ನಾಶವಾಗಿ ರೈತರು ತೀವ್ರ ಸಾಲದ ಸುಳಿಗೆ ಸಿಲುಕುವ ಭೀತಿ ಎದುರಾಗಿದೆ.

### ಕಿಡಿ ನುಡಿ

• ವಾಸುದೇವರಾವ್ ಕಕ್ಕೆನೇಜಿ

ಅಲ್ಪ ಪ್ರಮಾಣದಲ್ಲಿ ಸರಕಾರಿ ಬಸ್ ದರ ಹೆಚ್ಚಳಕ್ಕೆ ಚಿಂತನೆ -ಸಚಿವರ ಹೇಳಿಕೆ
- ಪ್ರಯಾಣಿಕರಿಗೆ ಹೆಚ್ಚಿನ ಪ್ರಮಾಣದಲ್ಲಿ ಚಿಂತೆ ಆರಂಭವಾಗಿದೆ ಅಂತ ಸುದ್ದಿ!

### ದಿನ ಭವಿಷ್ಯ

**ಮೇಷ**
ಆರೋಗ್ಯ ಸುಸ್ಥಿರ. ಚಿಂತೆ ಅನವಶ್ಯ. ಉದ್ದೇಶಿತ ಕಾರ್ಯಸಿದ್ಧಿ. ಸ್ಪರ್ಧಾತ್ಮಕ ಪರಿಸ್ಥಿತಿ ನಿಮ್ಮ ಪಾಲಿಗೆ ಪೂರಕವಾಗಲಿದೆ. ಕೌಟುಂಬಿಕ ಸಾಮರಸ್ಯ.

**ವೃಷಭ**
ದೈಹಿಕ ಶ್ರಮ ಹೆಚ್ಚು. ಮನೆಯವರ ಬೇಡಿಕೆ ಈಡೇರಿಸಲು ಹೆಚ್ಚು ಶ್ರಮ ಪಡುವಿರಿ. ಹಣದ ಕೊರತೆ ಕಾಡಬಹುದು. ಮಿತವ್ಯಯ ಸಾಧಿಸಿ.

**ಮಿಥುನ**
ಯಾವುದೇ ಕೆಲಸ ಸಫಲವಾಗಲು ಪರಸ್ಪರ ಸಹಕಾರ ಅಗತ್ಯ. ಬಿಗುಮಾನ ಬಿಡಿ. ಎಲ್ಲರ ಜತೆ ಹೊಂದಾಣಿಕೆಯಿಂದ ವರ್ತಿಸಿರಿ.

**ಕಟಕ**
ಕಾಡುತ್ತಿದ್ದ ದೈಹಿಕ ನೋವು ಶಮನ. ಕೌಟುಂಬಿಕ ಬಿಕ್ಕಟ್ಟು ಪರಿಹಾರ. ಖರ್ಚು ನಿಯಂತ್ರಣದ ಸಮಾಧಾನ.

**ಸಿಂಹ**
ಬಂಧುಗಳಿಂದ ಲಾಭವಾಗಲಿದೆ. ಚಿಂತೆಗೆ ಕಾರಣವಾಗಿದ್ದ ವಿವಾದ ಪರಿಹಾರ. ನೆರೆಯವರ ಜತೆಗೆ ಸಂಘರ್ಷ ತಪ್ಪಿಸುವುದೊಳಿತು.

**ಕನ್ಯಾ**
ನಿಮ್ಮ ಮುಂದೆ ಹಲವು ಅವಕಾಶಗಳು. ಆಯ್ಕೆಯ ಗೊಂದಲ. ಯೋಚಿಸಿ ನಿರ್ಧಾರ ತಾಳಿ. ಆರೋಗ್ಯದ ಕಡೆ ಹೆಚ್ಚು ಗಮನ ಕೊಡಿ. ಪಥ್ಯಾಹಾರ ಒಳಿತು.

**ತುಲಾ**
ಆದ್ಯತೆಯ ಮೇರೆಗೆ ಕಾರ್ಯಾಚರಿಸಿ. ಅಮುಖ್ಯ ಕಾರ್ಯಗಳಿಗೆ ಮಹತ್ವ ಕೊಡಬೇಡಿ. ನೆಗೆಟಿವ್ ಚಿಂತನೆಯವರ ಪ್ರಭಾವಕ್ಕೆ ಸಿಲುಕಬೇಡಿ.

**ವೃಶ್ಚಿಕ**
ನಿಮ್ಮ ಆಹಾರ ಸೇವನೆಯಲ್ಲಿ ಹೆಚ್ಚು ಶಿಸ್ತು ರೂಪಿಸಿ. ಅನಿಯಮಿತ ಆಹಾರದಿಂದ ಆರೋಗ್ಯ ಸಮಸ್ಯೆ. ಕೌಟುಂಬಿಕ ಅಸಹಕಾರ. ಧನಪ್ರಾಪ್ತಿ.

**ಧನು**
ಕುಟುಂಬ ಸದಸ್ಯರ ಜತೆ ರಹಸ್ಯ ಬೇಡ. ಅದು ವಿರಸಕ್ಕೆ ಕಾರಣವಾದೀತು. ಮುಕ್ತ ಮಾತುಕತೆ ಒಳಿತು. ಆರ್ಥಿಕ ಒತ್ತಡ ಹೆಚ್ಚಲಿದೆ, ಧನವ್ಯಯ ಅಧಿಕ.

**ಮಕರ**
ವೃತ್ತಿಯಲ್ಲಿ ಹೆಚ್ಚು ಹೊಣೆಗಾರಿಕೆ. ಅದನ್ನು ನಿಭಾಯಿಸಲು ಹಿಂಜರಿಕೆ ಬೇಡ. ಮನೆಯಲ್ಲಿ ಮಾತಿನ ಸಂಘರ್ಷ ನಡೆದೀತು. ಸಂಯಮ ಅವಶ್ಯ.

**ಕುಂಭ**
ಮನೆಯಲ್ಲಿನ ಸಮಸ್ಯೆ ಇಂದು ಪರಿಹಾರ ಕಾಣಲಿದೆ. ಇನ್ನಿತರ ವಿಷಯಗಳತ್ತ ಗಮನ ಹರಿಸಲು ಸಕಾಲ. ಇನ್ನು ವಿಳಂಬ ಮಾಡದಿರಿ.

**ಮೀನ**
ಪ್ರಮುಖ ವಿಷಯ ದಲ್ಲಿ ಅನಿಶ್ಚಿತತೆ ಕಾಡುವುದು. ಗೊಂದಲಕ್ಕೆ ಆಸ್ಪದ ನೀಡದಿರಿ. ಹಿತೈಷಿಗಳ ಸಲಹೆ ಪಡೆದು ಮುಂದಿನ ಹೆಜ್ಜೆಯಿಡಿ. ಧನವ್ಯಯ.

**ರಾಹುಕಾಲ: 9.00-10.30**
**ಗುಳಿಕಕಾಲ: 6.00-7.30**
ಅದೃಷ್ಟ ಸಂಖ್ಯೆ: 1,7,3,6

# ಜೈಶ್ ನಂಟಿನ 8 ಉಗ್ರರ ಸೆರೆ

ಪುಟ ೧ ಬಂಧಿತ ಭಯೋತ್ಪಾದಕರನ್ನು ಬನಸ್ಕಾಂತ ಜಿಲ್ಲೆಯ ಪಾಲನ್‌ಪುರದ ಭಾಗಲ್ ಪ್ರದೇಶವಾಸಿಗಳಾದ ಅಹಮ್ಮದ್ ಅಬ್ದುಲ್ಲಾ ಗಾಜಿವಾಲಾ ಯಾನೆ ಅಬು ಉಬೈದಾ (19), ಇಬ್ರಾಹಿಂ ಮೊಹಮ್ಮದ್ ಹುಸೇನ್ ಘಗಾ ಯಾನೆ ಅಬು ಹಂಝು (30), ಮುದಸ್ಸಿರ್ ಅಬ್ದುಲ್ಲಾ ಘಾಝಿವಾಲಾ ಯಾನೆ ಅಬು ಅಯಾ (22), ಪಾಲನ್‌ಪುರಿಯ ಝುಕಾರಿಯಾ ದುರಾನಿ ಮೊಹಮ್ಮದ್ ಅಮ್ಮಾರ್ ಘಗಾ ಯಾನೆ ಇಬ್ನ್ ಅಮ್ಮಾರ್ ಯಾನೆ ಝುಕಾರಿಯಾ ಪಾಲನ್‌ಪುರಿ (21), ಪಾಟನ್ ಮೂಲದ ಜಮಿಯಾ ಅಬುಲ್ ಹಸನ್ ಮದ್ರಸಾ, ಮುಫ್ತಿ ಫೌಜನ್ ಇಸ್ಮಾಯಿಲ್ ದೌವಾ ಯಾನೆ ಮುಫ್ತಿ ಸಾಹಬ್ (40), ಜಮಿಯಾ ಅಬುಲ್ ಹಸನ್ ಮದ್ರಸಾ, ಖದಿಯಸಾನ, ಸಿದ್ಧ್‌ಪುರ್, ಪಾಟನ್, ಮೊಹಮದ್ ಅಮೀನ್ ಶೇರಾ ಯಾನೆ ಅಮೀನ್ ಪಾಲನ್‌ಪುರಿ (21), ಜಮಿಯಾ ಅಬುಲ್ ಹಸನ್ ಮದ್ರಸಾ, ಖದಿಯಸಾನ ,ಸಿದ್ಧ್‌ಪುರ್ ,ಪಾಟನ್, ಮೊಹಮದ್ ಅಬ್ದುಲ್ ರೆಹಮಾನ್ ಸವ್‌ದಿ ಯಾನೆ ಮೊಹಮದ್ ಪಾಲನ್‌ಪುರಿ ಯಾನೆ ಅಬು ಉನಿಸಾ (22), ಜಮಿಯಾ ರಹ್ಮಾನಿಯಾ ಖಿಂಭಿಯಾ, ಅಂಭೇಟ-ಚಿಕ್ಲಿ, ನವ್‌ಸಾರಿ, ಬಿಲಾಲ್ ದುರಾನಿ ಮೊಹಮ್ಮದ್ ಅಮ್ಮಾರ್ ಘಗಾ ಯಾನೆ ಅಬು ದುಜಾನ ಯಾನೆ ಅಬು ಸೂಫಿಯಾನ್ ಯಾನೆ ಅಬು ಝುಂಡಾಲ್ ಯಾನೆ ಉಮರ್ ಬಿನ್ ಖಟ್ಟಬ್ (18)-ವಾರ್ಸಿ ನಗರ್ , ದೇವಸ್ ,ಮಧ್ಯಪ್ರದೇಶ ಎಂದು ಗುರುತಿಸಲಾಗಿದೆ.

• ಈ ಭಯೋತ್ಪಾದಕರ ಚಟುವಟಿಕೆಗಳ ಸಮಗ್ರ ಮಾಹಿತಿ, ಸಂಭಾವ್ಯ ಹ್ಯಾಂಡ್ಲರ್‌ಗಳು, ಬಂಧಿತರಿಗೆ ಬೃಹತ್ ಭಯೋತ್ಪಾದನಾ ಜಾಲದೊಂದಿಗಿರುವ ನಂಟು ಇತ್ಯಾದಿಗಳನ್ನು ಪತ್ತೆ ಮಾಡುವ ನಿಟ್ಟಿನಲ್ಲಿ ಉಗ್ರರನ್ನು ತೀವ್ರ ವಿಚಾರಣೆಗೆ ಗುರಿಪಡಿಸಲಾಗಿದೆ.

ಈ ಮಧ್ಯೆ, ದೇಶದ ಆಂತರಿಕ ಭದ್ರತೆಗೆ ಎದುರಾಗಲಿದ್ದ ಸಂಭಾವ್ಯ ಬೆದರಿಕೆಗಳನ್ನು ತಡೆಯುವ ನಿಟ್ಟಿನಲ್ಲಿ ಪ್ರಸ್ತುತ ಬಂಧನ ಕಾರ್ಯಾಚರಣೆ ಮಹತ್ವದ ಯಶಸ್ಸೆಂದು ಅಧಿಕಾರಿಗಳು ಪ್ರಶಂಸಿಸಿದ್ದಾರೆ.

## ವಿಕಸಿತ ಭಾರತ ಕನಸಿಗೆ ಸೋಮನಾಥ ಸ್ಫೂರ್ತಿ



ಪುಟ ೧ ದೇಶಭಕ್ತಿಯ ಭಾವನೆಯೊಂದಿಗೆ ಪತ್ರ ಬರೆದಿರುವ ಎ.ಕೆ. ದಾಸ್ ಅವರ ಪ್ರಯತ್ನವನ್ನು ಶ್ಲಾಘಿಸಿರುವ ಪ್ರಧಾನಿ, ಅವರ ಉತ್ತಮ ಆರೋಗ್ಯ ಹಾಗೂ ರಾಷ್ಟ್ರಸೇವೆಗೆ ಶುಭ ಹಾರೈಸಿದ್ದಾರೆ. ಎ.ಕೆ. ದಾಸ್ ಅವರು ಪ್ರಧಾನಿಗೆ ಬರೆದ ಪತ್ರದಲ್ಲಿ ಸೋಮನಾಥ ದೇವಾಲಯವನ್ನು ಆಶಯದ ಗೀತೆ ಎಂದು ಬಣ್ಣಿಸಿದ್ದು, ಭಾರತದ ನಾಗರಿಕ ಪುನರುಜ್ಜೀವನದ ಜೀವಂತ ಸಂಕೇತ ಎಂದು ವರ್ಣಿಸಿದ್ದಾರೆ.

# ರಾಜ್ಯ ಎಸ್‌ಐಆರ್‌ನಲ್ಲಿ ಅಕ್ರಮ

ಪುಟ ೧ ಆದ್ದರಿಂದ ಈ ಕೂಡಲೇ ರಾಜ್ಯದ ಮತದಾರರ ಪಟ್ಟಿಯ ತೀವ್ರ ಪರಿಷ್ಕರಣೆಯ ಪ್ರಕ್ರಿಯೆಯಲ್ಲಿ ಕೇಂದ್ರ ಚುನಾವಣಾ ಆಯೋಗ ಮಧ್ಯಪ್ರವೇಶಿಸಬೇಕು ಹಾಗೂ ಈವರೆಗೂ ಆಗಿರುವ ಪರಿಷ್ಕರಣೆಯನ್ನು ಸಂಪೂರ್ಣವಾಗಿ ಕೈಬಿಟ್ಟು ಹೊಸದಾಗಿ ಮತದಾರರ ಪಟ್ಟಿ ಪರಿಷ್ಕರಣೆ ನಡೆಸಬೇಕು ಎಂದು ವಿಪಕ್ಷಗಳು ಒತ್ತಾಯಿಸಿವೆ.

ಈ ಕುರಿತು ಸುದ್ದಿಗೋಷ್ಠಿಯಲ್ಲಿ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಬೆಂಗಳೂರು ನಗರದ ಯಶವಂತಪುರ ವಿಧಾನಸಭೆ ಕ್ಷೇತ್ರದಲ್ಲಿ ನಡೆಯುತ್ತಿರುವ ಎಸ್‌ಐಆರ್‌ನ ಅಕ್ರಮ ಪ್ರಕ್ರಿಯೆಯ ವಿಡಿಯೋ ದಾಖಲೆಗಳ ಮಾಹಿತಿ ನೀಡಿ ಅದಕ್ಕೆ ಸಂಬಂಧಿಸಿದ ವಿಡಿಯೋಗಳನ್ನು ಬಿಡುಗಡೆ ಮಾಡಿದರು. ಬಳಿಕ ಮಾತನಾಡಿದ ಅವರು, ಈ ಸರಕಾರವು ಅಧಿಕಾರಿಗಳನ್ನು ಗುಲಾಮರಂತೆ ನಡೆಸಿಕೊಳ್ಳುತ್ತಿದೆ. ಅವರನ್ನು ಹೆದರಿಸಿ ಬೆದರಿಸಿ ತನಗೆ ಬೇಕಾದ ಹಾಗೆ ಎಸ್‌ಐಆರ್ ಮಾಡಿಸಿಕೊಳ್ಳುತ್ತಿದೆ ಎಂದು ಆರೋಪಿಸಿದರು. ಅಲ್ಲದೇ, ಈ ಬಗ್ಗೆ ಕೇಂದ್ರ ಚುನಾವಣಾ ಆಯುಕ್ತರಿಗೆ ಖುದ್ದು ನಾನೇ ಹೋಗಿ ದೂರು ನೀಡುತ್ತೇನೆ. ಇಡೀ ಎಸ್‌ಐಆರ್ ಅಕ್ರಮದ ಮೂಲಸೂತ್ರಧಾರಿ ಈ ರಾಜ್ಯದ ಮುಖ್ಯಮಂತ್ರಿಯೇ ಆಗಿದ್ದಾರೆ ಎಂದು ಆರೋಪಿಸಿದರು.

**ಕಳ್ಳತನ ಮಾಡಲು ಹೊರಟಿದ್ದಾರೆ!:** ಮುಖ್ಯಮಂತ್ರಿಗಳು ಮಹಾನ್ ಎನ್ನುವಂತೆ ಭಾಷಣ ಬಿಗಿಯುತ್ತಾರೆ. ಪಾಕಿಸ್ತಾನದ ಬಗ್ಗೆ ಮಾತನಾಡುತ್ತಾರೆ. ಹುಂಡಿ ಕಳುವಿನ ಬಗ್ಗೆ ಮಾತಾಡುತ್ತಾರೆ. ಆದರೆ ಇವರೇ ಮಾಡುತ್ತಿರುವ ಮತದಾರರ ಪಟ್ಟಿಯ ಕಳುವಿನ ಬಗ್ಗೆ ಜಾಣಮೌನ ವಹಿಸುತ್ತಾರೆ. ಸಂವಿಧಾನವನ್ನೇ ಬುಡಮೇಲು ಮಾಡುವ ಜನ ಇವರು. ಅಂತಹ ಕೆಲಸಗಳಲ್ಲಿ ಇವರದು ಎತ್ತಿದ ಕೈ. ಕುಣಿಗಲ್, ಪಾವಗಡ, ಅರಕಲಗೂಡು, ಇಂಡಿ ಮುಂತಾದ ವಿಧಾನಸಭೆ ಕ್ಷೇತ್ರಗಳಲ್ಲಿಯೂ ಕಾಂಗ್ರೆಸ್ ಅಕ್ರಮಗಳನ್ನು ನಡೆಸುತ್ತಿದೆ. ಈ ಬಗ್ಗೆ ನಮ್ಮ ಪಕ್ಷದ ವತಿಯಿಂದ ಚುನಾವಣಾ ಆಯೋಗಕ್ಕೆ ದೂರು ನೀಡುತ್ತಿದ್ದೇವೆ ಎಂದರು.

### ಮಸೀದಿಗಳಲ್ಲಿ ಎಸ್‌ಐಆರ್ ಫಾರ್ಮ್ ಭರ್ತಿ: ಸಚಿವ ಜೋಶಿ

ಪುಟ ೧ ಸಾಲದ್ದಕ್ಕೆ ರಾಜಾರೋಷವಾಗಿ ವಾಟ್ಸ್ಯಾಪ್ ಗ್ರೂಪ್‌ಗಳಲ್ಲಿ ಬಹಿರಂಗ ಪ್ರಚಾರ ಸಹ ಮಾಡಲಾಗುತ್ತಿದೆ. ತಕ್ಷಣವೇ ಇದಕ್ಕೆಲ್ಲ ಬ್ರೇಕ್ ಹಾಕಬೇಕು ಎಂದು ಸಚಿವರು ಆಗ್ರಹಿಸಿದ್ದಾರೆ. ರಾಮನಗರ, ಶಿಗ್ಗಾಂವಿ-ಸವಣೂರು, ಹುಬ್ಬಳ್ಳಿ-ಧಾರವಾಡ ವಿಧಾನಸಭಾ ಕ್ಷೇತ್ರಗಳು ಸೇರಿದಂತೆ ರಾಜ್ಯದ ಹಲವೆಡೆ ಖಬ್ಬ ಪ್ರಕ್ರಿಯೆಯಲ್ಲಿ ರಾಜ್ಯ ಕಾಂಗ್ರೆಸ್ ಸರ್ಕಾರದ ಕುಮ್ಮಕ್ಕಿನಿಂದಲೇ ಕಾನೂನು ಬಾಹಿರವಾಗಿ, ವ್ಯವಸ್ಥಿತವಾಗಿ ಬೃಹತ್ ಅಕ್ರಮವೆಸಗಲಾಗುತ್ತಿದೆ ಎಂದು ಜೋಶಿ ಆಕ್ರೋಶ ಹೊರಹಾಕಿದ್ದಾರೆ.

> ನಾನೇ ಸ್ವತಃ ಕೇಂದ್ರ ಚುನಾವಣಾ ಆಯುಕ್ತರನ್ನು ಭೇಟಿ ಮಾಡಿ ಮನವಿ ಮಾಡುತ್ತೇನೆ. ರಾಜ್ಯದಲ್ಲಿ ನಡೆದಿರುವ ಎಲ್ಲಾ ಅಕ್ರಮಗಳನ್ನು ಅವರ ಗಮನಕ್ಕೆ ತರುತ್ತೇನೆ.
> ■ ಎಚ್.ಡಿ.ಕುಮಾರಸ್ವಾಮಿ, ಕೇಂದ್ರ ಸಚಿವ

> ಹಲವು ವರ್ಷಗಳಿಂದ ಅಲ್ಪಸಂಖ್ಯಾತ ನಾಯಕರು ಅಕ್ರಮವಾಗಿ ಬಾಂಗ್ಲಾದೇಶಿಗರನ್ನು ರಾಜ್ಯಕ್ಕೆ ಕರೆತಂದಿದ್ದಾರೆ. ಅವರನ್ನು ಕರ್ನಾಟಕದ ಮತದಾರರನ್ನಾಗಿ ಮಾಡಲು ಷಡ್ಯಂತ್ರ ಮಾಡಿದ್ದಾರೆ. ರಾಜ್ಯದ ವಿವಿಧ ಭಾಗದಲ್ಲಿ ನೆಲೆಸಿರುವ ಅಕ್ರಮ ಬಾಂಗ್ಲಾದೇಶಿಗರನ್ನು ಮತಪಟ್ಟಿಗೆ ಸೇರಿಸಿ ಸಕ್ರಮ ಮಾಡುತ್ತಿದ್ದಾರೆ.
> ■ ಶೋಭಾ ಕರಂದ್ಲಾಜೆ, ಕೇಂದ್ರ ಸಚಿವೆ

# ಪರ್ಯಾಯ ವಿದ್ಯುತ್‌ಗೆ ಸೂಚನೆ

ಪುಟ ೧ ನಾವು ಐಟಿ ಕ್ಯಾಪಿಟಲ್ ಆಗಿದ್ದೇವೆ. ಕೃತಕ ಬುದ್ಧಿಮತ್ತೆಯಲ್ಲೂ ನಮ್ಮ ರಾಜ್ಯ ಕ್ಯಾಪಿಟಲ್ ಆಗಬೇಕು ಎನ್ನುವ ದಿಕ್ಕಿನಲ್ಲಿ ನಾವು ಮುಂದುವರಿಯುತ್ತಿದ್ದೇವೆ. ಹೀಗಾಗಿ ಡೇಟಾ ಸೆಂಟರ್‌ಗಳು, ಕೃತಕ ಬುದ್ಧಿಮತ್ತೆ ಮೂಲಸೌಕರ್ಯ ಹಾಗೂ ಡಿಜಿಟಲ್ ಆರ್ಥಿಕತೆಯಿಂದ ಹೆಚ್ಚುತ್ತಿರುವ ವಿದ್ಯುತ್ ಬೇಡಿಕೆಗೆ ಈಗಿನಿಂದಲೇ ಸಿದ್ಧತೆ ಮಾಡಿಕೊಳ್ಳಬೇಕು ಎಂದು ಸಿಎಂ ಸೂಚಿಸಿದರು. ರೈತರ ಅನುಕೂಲಕ್ಕಾಗಿ ನಮ್ಮ ಸರ್ಕಾರ ಕೃಷಿ ವಿದ್ಯುತ್ ಸಹಾಯಧನವನ್ನಾಗಿ ವರ್ಷಕ್ಕೆ 22,000 ಕೋಟಿ ರೂ. ನೀಡುತ್ತಿದ್ದೇವೆ. ಹೀಗಾಗಿ ಫೀಡರ್ ಸೌರೀಕರಣ, ಇಂಧನ-ದಕ್ಷ ಪಂಪ್‌ಸೆಟ್‌ಗಳ ಬಳಕೆ, ವಿದ್ಯುತ್ ಬೇಡಿಕೆ ನಿರ್ವಹಣೆ ಕಾರ್ಯಕ್ರಮಗಳನ್ನು ವೇಗಗೊಳಿಸಿ ಎಂದು ಸಿಎಂ ಸೂಚನೆ ನೀಡಿದರು.

### ಪಂಪ್ಡ್ ಸ್ಟೋರೇಜ್ ಯೋಜನೆಗಳನ್ನು ತ್ವರಿತವಾಗಿ ಜಾರಿಗೊಳಿಸಿ: ಸಿ ಎಂ

ಹಿಂದಿನ ವರ್ಷಕ್ಕೆ ಹೋಲಿಸಿದರೆ ಸದ್ಯ ನಮ್ಮಲ್ಲಿ ವಿದ್ಯುತ್ ಸಂಗ್ರಹಣಾ ಸ್ಥಿತಿ ಸುಸ್ಥಿತಿಯಲ್ಲಿದೆ. ಹಿಂದಿನ ಮೂರು ವರ್ಷ ವಿದ್ಯುತ್ ಕಡಿತ ಇಲ್ಲದೆ ನಿರ್ವಹಿಸಿದ್ದೇವೆ ಎಂದು ಅಧಿಕಾರಿಗಳು ಮಾಹಿತಿ ನೀಡಿದರು. ಇದಕ್ಕೆ ಪ್ರತಿಕ್ರಿಯಿಸಿದ ಮುಖ್ಯಮಂತ್ರಿಗಳು ಸದ್ಯದ ಸ್ಥಿತಿಯಲ್ಲಿ ನವೀಕರಿಸಬಹುದಾದ ಇಂಧನದ ಸಮರ್ಥ ನಿರ್ವಹಣೆಗಾಗಿ ಬ್ಯಾಟರಿ ಎನರ್ಜಿ ಸ್ಟೋರೇಜ್ ಸಿಸ್ಟಂಗಳು, ಪಂಪ್ಡ್ ಸ್ಟೋರೇಜ್ ಯೋಜನೆಗಳನ್ನು ತ್ವರಿತವಾಗಿ ಜಾರಿಗೊಳಿಸಬೇಕು ಎಂದು ಡಿ.ಕೆ.ಶಿವಕುಮಾರ್ ಸೂಚಿಸಿದರು.

### ಸಭೆಯ ಇತರೆ ಮುಖ್ಯಾಂಶಗಳು

ಎಸ್ಕಾಂಗಳ ಆರ್ಥಿಕ ಬಲವರ್ಧನೆಗೆ ದ್ರವ್ಯತೆ ಸುಧಾರಣೆ ಹಾಗೂ ಸಾಲ ನಿರ್ವಹಣೆಯ ಮೂಲಕ ಎಸ್ಕಾಂಗಳ ಹಣಕಾಸು ಸ್ಥಿರತೆಯನ್ನು ಹೆಚ್ಚಿಸಬೇಕು. ಪ್ರಸರಣ ಜಾಲವನ್ನು ಬಲಪಡಿಸುವ ಮೂಲಕ ನವೀಕರಿಸಬಹುದಾದ ಇಂಧನದ ಅನಗತ್ಯ ನಿಯಂತ್ರಣ ಸಮಸ್ಯೆಯನ್ನು ನಿವಾರಿಸಬೇಕು. ಕಲ್ಲಿದ್ದಲು ಸರಬರಾಜು ಭದ್ರತೆಗಾಗಿ ಮೀಸಲು ಕಲ್ಲಿದ್ದಲು ಗಣಿಗಳನ್ನು ಕಾರ್ಯಾರಂಭಗೊಳಿಸಿ, ಸಾಗಣೆ ಮತ್ತು ಸಂಗ್ರಹ ವ್ಯವಸ್ಥೆಯನ್ನು ಬಲಪಡಿಸುವ ಮೂಲಕ ಕಲ್ಲಿದ್ದಲು ಭದ್ರತೆಯನ್ನು ಖಚಿತಪಡಿಸಬೇಕು. ವಿದ್ಯುತ್ ವಾಹನ (ಇವಿ) ಮೂಲಸೌಕರ್ಯಕ್ಕಾಗಿ ರಾಜ್ಯಾದ್ಯಂತ ಇವಿ ಚಾರ್ಜಿಂಗ್ ಮೂಲಸೌಕರ್ಯವನ್ನು ವೇಗವಾಗಿ ವಿಸ್ತರಿಸುವುದರ ಜೊತೆಗೆ ಅದಕ್ಕೆ ಅಗತ್ಯವಾದ ವಿದ್ಯುತ್ ಜಾಲ ಸುಧಾರಣೆಗಳನ್ನು ಕೈಗೊಳ್ಳಬೇಕು.

### ನಿಗದಿತ ಸಮಯದಲ್ಲಿ ಸ್ಮಾರ್ಟ್ ಮೀಟರ್ ಅಳವಡಿಸಿ

ಮೀಟರ್‌ಗಳು ಹಾಗೂ ವಿದ್ಯುತ್ ವಿತರಣಾ ವ್ಯವಸ್ಥೆಯ ಆಧುನೀಕರಣಕ್ಕಾಗಿ ಕೇಂದ್ರ ಸರ್ಕಾರದ ನೆರವು ಪಡೆಯುವ ಉದ್ದೇಶದಿಂದ ಪರಿಷ್ಕೃತ ವಿತರಣಾ ವಲಯ ಯೋಜನೆಯನ್ನು ವೇಗವಾಗಿ ಅನುಷ್ಠಾನಗೊಳಿಸಬೇಕು. ಸ್ಮಾರ್ಟ್ ಮೀಟರ್‌ಗಳನ್ನು ಪಾರದರ್ಶಕವಾಗಿ ಹಾಗೂ ನಿಗದಿತ ಸಮಯದಲ್ಲಿ ಅಳವಡಿಸ ಬೇಕು. 2035ರ ವೇಳೆಗೆ ಗರಿಷ್ಠ ವಿದ್ಯುತ್ ಬೇಡಿಕೆ 38 ಗಿಗಾವ್ಯಾಟ್ ತಲುಪುವ ನಿರೀಕ್ಷೆಯಿರುವುದರಿಂದ ಇದಕ್ಕೆ ತಕ್ಕಂತೆ ಉತ್ಪಾದನಾ ಸಾಮರ್ಥ್ಯವನ್ನು ಹೆಚ್ಚಿಸುವ ಯೋಜನೆ ಜೊತೆಗೆ ಅಗತ್ಯವಾದ ಹಣಕಾಸು ನಕ್ಷೆ ಸಿದ್ಧಪಡಿಸಬೇಕು ಎಂದು ಸಲಹೆ ನೀಡಿದರು.

### ಸಂಘಟನೆಗಳ ಹರ್ಷ

ಟಾಟಾ ಪವರ್ ಅರ್ಜಿ ಹಿಂಪಡೆದ ನಿರ್ಧಾರವನ್ನು ವಿದ್ಯುತ್ ವಲಯದ ನೌಕರರು ಮತ್ತು ಗುತ್ತಿಗೆದಾರರು ಸ್ವಾಗತಿಸಿದ್ದಾರೆ. ನೌಕರರ ಹಿತ ಕಾಯ್ದ ಸರ್ಕಾರ ಮತ್ತು ಇಂಧನ ಇಲಾಖೆಗೆ ನಾವು ಕೃತಜ್ಞರಾಗಿದ್ದೇವೆ. ಸರ್ಕಾರದ ಬೆಂಬಲದಿಂದಾಗಿ ವಿದ್ಯುತ್ ವಲಯ ನಂಬಿಕೊಂಡಿದ್ದ ಸುಮಾರು 60 ಸಾವಿರಕ್ಕೂ ಹೆಚ್ಚು ಗುತ್ತಿಗೆದಾರರು ಹಾಗೂ ಕಾರ್ಮಿಕರ ಉದ್ಯೋಗ ರಕ್ಷಣೆಯಾಗಿದೆ.

> ವಿದ್ಯುತ್ ಪ್ರಸರಣ ಯೋಜನೆಗಳಿಗೆ ಇರುವ ತಾಂತ್ರಿಕ ಸಮಸ್ಯೆಗಳನ್ನು ಶೀಘ್ರ ಬಗೆಹರಿಸಿಕೊಳ್ಳಿ, ಭೂಸ್ವಾಧೀನ, ಹಕ್ಕುಮಾರ್ಗ ಹಾಗೂ ಕಾನೂನುಬದ್ಧ ಅನುಮತಿಗಳಿಗೆ ಸಂಬಂಧಿಸಿದ ಸಮಸ್ಯೆ ಪರಿಹರಿಸಿ ಯೋಜನೆಗಳನ್ನು ವೇಗಗೊಳಿಸಬೇಕು.
> ■ ಡಿ.ಕೆ.ಶಿವಕುಮಾರ್, ಸಿಎಂ

> ಗೃಹಜ್ಯೋತಿ ಯೋಜನೆಯಿಂದ ಯಾವುದೇ ಹೊರೆ ಆಗಿಲ್ಲ, ಆದರೆ, ಸರ್ಕಾರಿ ಇಲಾಖೆಗಳು ಎಸ್ಕಾಂಗಳಿಗೆ ಪಾವತಿಸಬೇಕಿರುವ 12,631 ಕೋಟಿ ರೂ.ಬಾಕಿಯನ್ನು ತ್ವರಿತವಾಗಿ ಪಾವತಿಸುವುದು ಅಥವಾ ಹಣಕಾಸು ಭದ್ರತೆ ಮೂಲಕ ಪರಿಹರಿಸಲು ಕ್ರಮ ಕೈಗೊಳ್ಳಬೇಕು ಎಂದು ಸಿಎಂ ಅವರಿಗೆ ಮನವಿ ಮಾಡಿದ್ದೇನೆ.
> ■ ಕೆ.ಜೆ.ಜಾರ್ಜ್, ಇಂಧನ ಸಚಿವ

## ವಿದ್ಯುತ್ ಖಾಸಗೀಕರಣ: ಹಿಂದೆ ಸರಿದ ಟಾಟಾ

ಪುಟ ೧ ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗದ (ಕೆಇಆರ್‌ಸಿ) ಮುಂದೆ ನಡೆದ ವಿಚಾರಣೆ ವೇಳೆ ಟಾಟಾ ಪವರ್ ಕಂಪನಿ ತನ್ನ ಅರ್ಜಿಯನ್ನು ಮೌಖಿಕವಾಗಿ ಹಿಂಪಡೆಯುತ್ತಿರುವುದಾಗಿ ತಿಳಿಸಿದೆ. ಈ ಕುರಿತು ಶೀಘ್ರದಲ್ಲೇ ಅಧಿಕೃತ ಜ್ಞಾಪನಾ ಪತ್ರ ಸಲ್ಲಿಸುವುದಾಗಿ ಕಂಪನಿ ಹೇಳಿದೆ ಎಂದು ಕೆಇಆರ್‌ಸಿ ಅಧಿಕಾರಿಗಳು ತಿಳಿಸಿದ್ದಾರೆ. ಕಳೆದ ಮೇನಲ್ಲಿ ಟಾಟಾ ಪವರ್ ಸಂಸ್ಥೆಯು ರಾಜ್ಯದ 19 ಜಿಲ್ಲೆಗಳಲ್ಲಿ ಬೆಸ್ಕಾಂ ಸೇರಿದಂತೆ ಇತರ ಎಸ್ಕಾಂಗಳ ವ್ಯಾಪ್ತಿಯಲ್ಲಿ ಸಮಾಂತರವಾಗಿ ವಿದ್ಯುತ್ ವಿತರಣೆ ಮಾಡಲು ಪರವಾನಗಿ ನೀಡುವಂತೆ ಕೆಇಆರ್‌ಸಿಗೆ ಅರ್ಜಿ ಸಲ್ಲಿಸಿತ್ತು. ತನಗೆ ಕರ್ನಾಟಕದಲ್ಲಿ ಸ್ವಂತ ಪ್ರಸರಣ ಮತ್ತು ವಿತರಣಾ ಜಾಲ ಇಲ್ಲದಿದ್ದರೂ, ಒಡಿಶಾ, ಮಹಾರಾಷ್ಟ್ರ, ದೆಹಲಿ ಮತ್ತು ರಾಜಸ್ಥಾನಗಳಲ್ಲಿ ಲಕ್ಷಾಂತರ ಗ್ರಾಹಕರಿಗೆ ಯಶಸ್ವಿಯಾಗಿ ವಿದ್ಯುತ್ ಒದಗಿಸುತ್ತಿರುವ ಅನುಭವದ ಆಧಾರದ ಮೇಲೆ ತನಗೂ ಇಲ್ಲಿ ಅವಕಾಶ ನೀಡಬೇಕು ಎಂದು ಟಾಟಾ ವಾದಿಸಿತ್ತು. ಟಾಟಾ ಪವರ್‌ನ ಈ ನಡೆಗೆ ರಾಜ್ಯಾದ್ಯಂತ ತೀವ್ರ ಆಕ್ರೋಶ ವ್ಯಕ್ತವಾಗಿತ್ತು. ವಿದ್ಯುತ್ ವಲಯದ ಹಲವು ಸಂಘಟನೆಗಳು ಖಾಸಗೀಕರಣದ ವಿರುದ್ಧ ಬೀದಿಗಿಳಿದು ಹೋರಾಟ ನಡೆಸಿದ್ದವು. ಅಲ್ಲದೆ ಜೂನ್ ತಿಂಗಳಲ್ಲಿ ರಾಜ್ಯದ ಎಲ್ಲಾ ಎಸ್ಕಾಂಗಳು ಜಂಟಿಯಾಗಿ ಕೆಇಆರ್‌ಸಿಗೆ ಆಕ್ಷೇಪಣಾ ಅರ್ಜಿ ಸಲ್ಲಿಸಿದ್ದವು. ಜುಲೈ 2ರಂದು ನಡೆದ ಸಚಿವ ಸಂಪುಟ ಸಭೆಯ ತೀರ್ಮಾನದಂತೆ ಸಿಎಂ ಡಿ.ಕೆ. ಶಿವಕುಮಾರ್ ಎಲ್ಲಾ ಎಸ್ಕಾಂಗಳಿಗೆ ಪ್ರತ್ಯೇಕವಾಗಿ ಆಕ್ಷೇಪಣೆ ಸಲ್ಲಿಸಲು ಸೂಚಿಸಿದ್ದರು. ಈ ಎಲ್ಲಾ ಬೆಳವಣಿಗೆ ನಡುವೆಯೇ ಟಾಟಾ ಪವರ್ ಪ್ರಸ್ತಾವನೆ ಅರ್ಜಿಯನ್ನು ಹಿಂಪಡೆದುಕೊಂಡಿದೆ.

# ಶುಲ್ಕ ಮರುಪಾವತಿ ದರ ಪರಿಷ್ಕರಿಸಿಲ್ಲ: ಆರೋಪ

**ಬೆಂಗಳೂರು:** ಖಾಸಗಿ ಶಾಲೆಗಳಲ್ಲಿ ಶಿಕ್ಷಣ ಹಕ್ಕು ಕಾಯ್ದೆ (ಆರ್‌ಟಿಇ)ಯಲ್ಲಿ ದಾಖಲಾದ ಶೇ.25ರಷ್ಟು ವಿದ್ಯಾರ್ಥಿಗಳ ಶುಲ್ಕ ಮರುಪಾವತಿ ಪ್ರಕ್ರಿಯೆಯಲ್ಲಿ ಶಿಕ್ಷಣ ಇಲಾಖೆಯಲ್ಲಿ ವ್ಯಾಪಕ ಭ್ರಷ್ಟಾಚಾರ ನಡೆಯುತ್ತಿದ್ದು, ನ್ಯಾಯಾಲಯಕ್ಕೂ ತಪ್ಪು ಮಾಹಿತಿ ಸಲ್ಲಿಸಲಾಗುತ್ತಿದೆ ಎಂದು ಖಾಸಗಿ ಶಾಲೆಗಳ ಆಡಳಿತ ಮಂಡಳಿಗಳ ಒಕ್ಕೂಟ (ಕ್ಯಾಮ್ಸ್) ಪ್ರಧಾನ ಕಾರ್ಯದರ್ಶಿ ಡಿ. ಶಶಿಕುಮಾರ್ ಗಂಭೀರ ಆರೋಪ ಮಾಡಿದ್ದಾರೆ.

ನಗರದಲ್ಲಿ ಶುಕ್ರವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯದಲ್ಲಿ 2013–14ನೇ ಸಾಲಿನಿಂದ ಆರ್‌ಟಿಇ ಅಡಿಯಲ್ಲಿ ಖಾಸಗಿ ಶಾಲೆಗಳಿಗೆ ಶುಲ್ಕ ಮರುಪಾವತಿ ನಡೆಯುತ್ತಿದ್ದರೂ, 2017ರಿಂದ ವಿದ್ಯಾರ್ಥಿ ಶುಲ್ಕದ ಮರುಪಾವತಿ ದರವನ್ನು ಪರಿಷ್ಕರಿಸಲಾಗಿಲ್ಲ ಎಂದು ದೂರಿದರು. ಸುಮಾರು ಒಂಬತ್ತು ವರ್ಷಗಳಿಂದ ಶುಲ್ಕ ಪರಿಷ್ಕರಣೆಯಾಗದ ಕಾರಣ ಖಾಸಗಿ ಶಾಲೆಗಳು ತೀವ್ರ ಆರ್ಥಿಕ ಸಂಕಷ್ಟಕ್ಕೆ ಸಿಲುಕಿವೆ. ಸರ್ಕಾರದಿಂದ ಶೇ.25ರಷ್ಟು ವಿದ್ಯಾರ್ಥಿಗಳ ಶುಲ್ಕದ ಸಮರ್ಪಕ ಮರುಪಾವತಿ ದೊರೆಯದ ಹಿನ್ನೆಲೆಯಲ್ಲಿ ಉಳಿದ ಶೇ.75 ವಿದ್ಯಾರ್ಥಿಗಳ ಶುಲ್ಕದ ಮೇಲೆ ಹೆಚ್ಚುವರಿ ಹೊರೆ ಹಾಕುವ ಅನಿವಾರ್ಯ ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ತಿಳಿಸಿದರು.

ರಾಜ್ಯದ ಶಿಕ್ಷಣ ಇಲಾಖೆಯ ವಾರ್ಷಿಕ ಬಜೆಟ್ ಕಳೆದ 13 ವರ್ಷಗಳಲ್ಲಿ ಸುಮಾರು 25 ಸಾವಿರ ಕೋಟಿ ರೂ.ಗಳಿಂದ 45 ಸಾವಿರ ಕೋಟಿ ರೂ.ಗಳವರೆಗೆ ಏರಿಕೆಯಾಗಿದೆ. ಸರ್ಕಾರಿ ಶಾಲೆಗಳಲ್ಲಿ ಪ್ರತಿ ವಿದ್ಯಾರ್ಥಿಗೆ ಸುಮಾರು 80 ಸಾವಿರ ರೂ.ನಿಂದ 1.30 ಲಕ್ಷ ರೂ.ವರೆಗೆ ವೆಚ್ಚ ಮಾಡಲಾಗುತ್ತಿದ್ದರೂ, ನ್ಯಾಯಾಲಯಕ್ಕೆ ಸಲ್ಲಿಸಲಾಗಿರುವ ದಾಖಲೆಗಳಲ್ಲಿ ಕೇವಲ 8 ಸಾವಿರ ರೂ.ದಿಂದ 16 ಸಾವಿರ ರೂ.ವರೆಗೆ ಮಾತ್ರ ವೆಚ್ಚವಾಗುತ್ತಿದೆ ಎಂದು ತೋರಿಸಲಾಗಿದೆ ಎಂದು ಆರೋಪಿಸಿದರು. ಪ್ರತಿ ವರ್ಷ ಹಳೆಯ ಲೆಕ್ಕಾಚಾರವನ್ನೇ ದಿನಾಂಕ ಬದಲಿಸಿ ನ್ಯಾಯಾಲಯಕ್ಕೆ ಸಲ್ಲಿಸಲಾಗುತ್ತಿದೆ ಎಂದು ಶಶಿಕುಮಾರ್ ಹೇಳಿದರು.

## ಸಿಎಂ ಭೇಟಿ



ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಪತ್ನಿ ಉಷಾ ಹಾಗೂ ಸಹೋದರ ಡಿ.ಕೆ. ಸುರೇಶ್ ಅವರು ಶುಕ್ರವಾರ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ನಿವಾಸಕ್ಕೆ ಭೇಟಿ ನೀಡಿ ಉಭಯ ಕುಶಲೋಪರಿ ವಿಚಾರಿಸಿದರು.

# ಸರ್ವೇ ಕಾರ್ಯಕ್ಕೆ ರೈತರಿಂದ ಅಧಿಕಾರಿಗಳಿಗೆ ತರಾಟೆ

**ಪಾಂಡವಪುರ:** ಕೆಆರ್ ಎಸ್ ಜಲಾಶಯದಿಂದ ಬೆಂಗಳೂರು ನಗರಕ್ಕೆ ಕುಡಿಯುವ ನೀರು ಸರಬರಾಜು ಮಾಡುವ ಉದ್ದೇಶದಿಂದ ಸರ್ವೇ ಕಾರ್ಯಕ್ಕಾಗಿ ಆಗಮಿಸಿದ ಅಧಿಕಾರಿಗಳನ್ನು ರೈತರು ತರಾಟೆಗೆ ತೆಗೆದುಕೊಂಡು ವಾಪಸ್ ಕಳುಹಿಸಿರುವ ಘಟನೆ ನಡೆಯಿತು.

ಕೆಆರ್‌ಎಸ್ ಅಣೆಕಟ್ಟೆಯಿಂದ ಬೆಂಗಳೂರು ನಾಗರೀಕರಿಗೆ ಕುಡಿಯುವ ನೀರು ಒದಗಿಸುವ ಆರನೇ ಹಂತದ ಯೋಜನೆ ಅನುಷ್ಠಾನಕ್ಕಾಗಿ ನೀರಾವರಿ ನಿಗಮದ ಅಧಿಕಾರಿಗಳಯ ತಾಲೂಕಿನ ಕಟ್ಟೇರಿ ಗ್ರಾಮದ ಸಮೀಪ ಸರ್ವೇ ಕಾರ್ಯಕ್ಕೆ ಮುಂದಾಗಿದ್ದರು, ವಿಚಾರ ತಿಳಿದು ರೈತಸಂಘ ಜಿಲ್ಲಾಧ್ಯಕ್ಷ ಎ.ಎಲ್.ಕೆಂಪೂಗೌಡರ ನೇತೃತ್ವದಲ್ಲಿ ಸ್ಥಳಕ್ಕೆ ತೆರಳಿದ ರೈತರು ಸರ್ವೇ ಕಾರ್ಯ ನಡೆಸದಂತೆ ಅಧಿಕಾರಿಗಳ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ಕೆಆರ್ ಜಲಾಶಯ ರೈತರ ಜೀವನಾಡಿಯಾಗಿದೆ. ಲಕ್ಷಾಂತರ ಅಣೆಕಟ್ಟೆ ನೀರಿನ ಮೇಲೆ ಅವಲಂಬಿತರಾಗಿ ಬೇಸಾಯ ಮಾಡುತ್ತಿದ್ದು, ಇದರಿಂದಲೇ ಬದುಕು ಕಟ್ಟಿಕೊಂಡಿದ್ದಾರೆ. ಬೆಂಗಳೂರಿಗೆ ಕುಡಿಯುವ ನೀರು ಒದಗಿಸಲು ಆರನೇ ಹಂತದ ಯೋಜನೆ ಜಾರಿಯಾದರೆ ರೈತರ ಬೆಳೆಗಳಿಗೆ ನೀರಿನ ಕೊರತೆ ಎದುರಾಗಲಿದೆ. ಹೀಗಾಗಿ ಈ ಯೋಜನೆ ಜಾರಿಯಾಗಬಾರದು ಎಂದು ಆರೋಪಿಸಿ ಅಧಿಕಾರಿಗಳು ಸರ್ವೇ ಕಾರ್ಯ ನಡೆಸದಂತೆ ತಡೆಯೊಡ್ಡಿದ್ದರು.

ರೈತಸಂಘ ಜಿಲ್ಲಾಧ್ಯಕ್ಷ ಎ.ಎಲ್.ಕೆಂಪೂಗೌಡ ಮಾತನಾಡಿ, ಮಾನವೀಯತೆ ದೃಷ್ಟಿಯಿಂದ ಕುಡಿಯುವ ನೀರು ಒದಗಿಸಲು ಅಡ್ಡಿಪಡಿಸಬಾರದು. ಆದರೆ, ಲಕ್ಷಾಂತರ ರೈತರ ಬದುಕು ಕೆಆರ್‌ಎಸ್ ಜಲಾಶಯದ ನೀರಿನ ಮೇಲೆ ಅವಲಂಬಿತವಾಗಿದೆ. ಅಣೆಕಟ್ಟೆಯಿಂದ ಲಕ್ಷಾಂತರ ಹೆಕ್ಟೇರ್ ಭೂಮಿಗೆ ನೀರು ಹರಿಸಲಾಗುತ್ತಿದೆ. ರೈತರ ವಿರೋಧದ ಹಿನ್ನೆಲೆಯಲ್ಲಿ ನೀರಾವರಿ ನಿಗಮದ ಅಧಿಕಾರಿಗಳು ಸರ್ವೇ ಕಾರ್ಯ ಸ್ಥಗಿತಗೊಳಿಸಿ ವಾಪಸ್ಸಾದರು. ಈ ವೇಳೆ ರೈತಸಂಘ ತಾಲೂಕು ಅಧ್ಯಕ್ಷ ವೈ.ಪಿ.ಮಂಜು, ಕಾರ್ಯದರ್ಶಿ ವೈ.ಜಿ.ರಘು ಇದ್ದರು.

## ಕಿರುಸುದ್ದಿ

### ನೇಮಕಾತಿ: ಉತ್ತಮ ಸ್ಪಂದನೆ

**ಬೆಂಗಳೂರು:** ರಾಜ್ಯ ಪೊಲೀಸ್ ಇಲಾಖೆಯಲ್ಲಿನ ಖಾಲಿ ಇರುವ ಸಿವಿಲ್ ಪೊಲೀಸ್ ಕಾನ್‌ಸ್ಟೇಬಲ್ ಹುದ್ದೆಗಳ ನೇಮಕಾತಿ ಪ್ರಕ್ರಿಯೆಗೆ ರಾಜ್ಯಾದ್ಯಂತ ಅಭ್ಯರ್ಥಿಗಳಿಂದ ಅತ್ಯಂತ ಉತ್ತಮ ಸ್ಪಂದನೆ ವ್ಯಕ್ತವಾಗಿದ್ದು, ಇದು ಯುವಜನರಿಗೆ ಹೆಚ್ಚಿನ ಉದ್ಯೋಗಾವಕಾಶಗಳನ್ನು ಕಲ್ಪಿಸಲು ರಾಜ್ಯ ಸರ್ಕಾರ ಕೈಗೊಂಡಿರುವ ಕ್ರಮಗಳ ಮೇಲೆ ಜನರ ವಿಶ್ವಾಸವನ್ನು ಪ್ರತಿಬಿಂಬಿಸುತ್ತದೆ ಎಂದು ಗೃಹಸಚಿವ ಪ್ರಿಯಾಂಕ್ ಖರ್ಗೆ ತಿಳಿಸಿದ್ದಾರೆ. ಈ ಬಗ್ಗೆ ಪತ್ರಿಕಾ ಪ್ರಕಟಣೆ ಹೊರಡಿಸಿದ ಅವರು, ಅಭ್ಯರ್ಥಿಗಳ ಮನವಿಯನ್ನು ಪರಿಗಣಿಸಿ, ಅರ್ಜಿ ಸಲ್ಲಿಸಲು ನಿಗದಿಪಡಿಸಿದ್ದ ಕೊನೆಯ ದಿನಾಂಕವನ್ನು ಸರ್ಕಾರ ವಿಸ್ತರಿಸಿದ್ದು, ಆನ್‌ಲೈನ್ ಅರ್ಜಿ ಸಲ್ಲಿಕೆಗೆ ಜು.8 ಸಂಜೆ 4 ಗಂಟೆಯವರೆಗೆ ಅವಕಾಶ ಕಲ್ಪಿಸಲಾಗಿದೆ. ಹಾಗೆಯೇ ಅರ್ಜಿ ತಿದ್ದುಪಡಿ ಮಾಡಲು ಜು.9 ರಿಂದ ಜು.12ರವರೆಗೆ ಅವಕಾಶ ನೀಡಲಾಗಿದೆ ಎಂದು ಹೇಳಿದ್ದಾರೆ. ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಸಹಯೋಗದಲ್ಲಿ ನಡೆಯುತ್ತಿರುವ ನೇಮಕಾತಿ ಪ್ರಕ್ರಿಯೆಯಲ್ಲಿ ಮೀಸಲು ಪೊಲೀಸ್ ಕಾನ್ ಸ್ಟೇಬಲ್ ವಿಭಾಗದ ಹುದ್ದೆಗಳಿಗೆ 2,80,216 ಅಭ್ಯರ್ಥಿಗಳು ಹಾಗೂ ಕಲ್ಯಾಣ ಕರ್ನಾಟಕ ವಿಭಾಗದ ಹುದ್ದೆಗಳಿಗೆ 59,309 ಅಭ್ಯರ್ಥಿಗಳು ಅರ್ಜಿ ಸಲ್ಲಿಸಿರುವುದು ರಾಜ್ಯದ ಯುವಜನರಲ್ಲಿ ಪೊಲೀಸ್ ಇಲಾಖೆಯಲ್ಲಿ ಸೇವೆ ಸಲ್ಲಿಸುವ ಉತ್ಸಾಹ ಹೆಚ್ಚಿರುವುದನ್ನು ತೋರಿಸುತ್ತದೆ ಎಂದು ಮಾಹಿತಿ ನೀಡಿದ್ದಾರೆ.



### ಶಂಕಿತ ನಕ್ಸಲ್ ಮುಖಂಡ ನ್ಯಾಯಾಲಯಕ್ಕೆ ಹಾಜರು

**ಶೃಂಗೇರಿ:** ಇಲ್ಲಿನ ಜೆಎಂಎಫ್‌ಸಿ ನ್ಯಾಯಾಲಯಕ್ಕೆ ಶಂಕಿತ ನಕ್ಸಲ್ ಮುಖಂಡ ಬಿ.ಜಿ. ಕೃಷ್ಣಮೂರ್ತಿಯನ್ನು ಕೇರಳ ಪೊಲೀಸರು ಶುಕ್ರವಾರ ಹಾಜರುಪಡಿಸಿದರು. ನೆಮ್ಮಾರ್ ಗ್ರಾಮ ಪಂಚಾಯಿತಿ ಹರೂರು ಗ್ರಾಮದ ಕಾನ್ ಎಸ್ಟೇಟ್‌ನ ಬಿ.ಜಿ. ಕೃಷ್ಣಮೂರ್ತಿ ವಿರುದ್ಧ ರಾಜ್ಯದ ವಿವಿಧ ಪೊಲೀಸ್ ಠಾಣೆಯಲ್ಲಿ ನಕ್ಸಲ್ ಚಟುವಟಿಕೆ ಸಂಬಂಧ 54 ಪ್ರಕರಣ ದಾಖಲಾಗಿದೆ.

### ಠಾಣೆಯಿಂದಲೇ ಪೋಕ್ಸೋ ಆರೋಪಿ ಪರಾರಿ, ಬಂಧನ

**ಕಲಬುರಗಿ:** ಜಿಲ್ಲೆಯ ಅಫಜಲಪುರ ಪೊಲೀಸ್ ಠಾಣೆಯ ಲಾಕಪ್‌ನಲ್ಲಿದ್ದ ಪೋಕ್ಸೋ ಪ್ರಕರಣದ ಆರೋಪಿಯೊಬ್ಬ ಪೊಲೀಸರ ಕಣ್ಣಿಗೆ ಮಣ್ಣೆರಚಿ ಪರಾರಿಯಾಗಿದ್ದಾನೆ. ಮಂಜುನಾಥ ಎಂಬಾತನೇ ಠಾಣೆಯಿಂದ ಪರಾರಿಯಾದ ಆರೋಪಿಯಾಗಿದ್ದಾನೆ. ಅಪ್ರಾಪ್ತೆಯ ಮೇಲಿನ ದೌರ್ಜನ್ಯಕ್ಕೆ ಸಂಬಂಧಿಸಿದಂತೆ ಕಳೆದ ಒಂದು ವಾರದ ಹಿಂದೆ ಅಫಜಲಪುರ ಠಾಣೆಯಲ್ಲಿ ಈತನ ವಿರುದ್ಧ ಪೋಕ್ಸೋ ಕಾಯ್ದೆಯಲ್ಲಿ ಪ್ರಕರಣ ದಾಖಲಾಗಿತ್ತು. ಈ ಹಿನ್ನೆಲೆಯಲ್ಲಿ ಕಾರ್ಯಾಚರಣೆ ನಡೆಸಿದ್ದ ಪೊಲೀಸರು ಆರೋಪಿಯನ್ನು ಬಂಧಿಸಿ ಠಾಣೆಗೆ ಕರೆತಂದು ಲಾಕಪ್‌ನಲ್ಲಿ ಇರಿಸಿದ್ದರು. ಆದರೆ, ಗುರುವಾರ ಮಧ್ಯರಾತ್ರಿ ಠಾಣೆಯಲ್ಲಿದ್ದ ಪೊಲೀಸರು ಮೈಮರೆತು ನಿದ್ರೆಗೆ ಜಾರಿದ್ದಾರೆ. ಇದನ್ನು ಬಳಸಿಕೊಂಡ ಆರೋಪಿ ಮಂಜುನಾಥ ಲಾಕಪ್‌ನಿಂದ ತಪ್ಪಿಸಿಕೊಂಡು ಓಡಿ ಹೋಗಿದ್ದಾನೆ. ಆರೋಪಿ ಠಾಣೆಯಿಂದ ಪರಾರಿಯಾಗಿ ರಸ್ತೆಯಲ್ಲಿ ಓಡುತ್ತಿರುವ ದೃಶ್ಯಾವಳಿಗಳು ಸಿಸಿಟಿವಿ ಕ್ಯಾಮೆರಾದಲ್ಲಿ ಸೆರೆಯಾಗಿತ್ತು.

**24 ಗಂಟೆಯಲ್ಲೇ ಆರೋಪಿ ಬಂಧನ!:** ತಕ್ಷಣ ಕಾರ್ಯಪ್ರವೃತ್ತರಾದ ಅಫಜಲಪುರ ಪೊಲೀಸರು ಕೇವಲ 24 ಗಂಟೆಗಳ ಅವಧಿಯಲ್ಲಿ ಕಾರ್ಯಾಚರಣೆ ನಡೆಸಿ, ಆರೋಪಿಯನ್ನು ಹೆಡೆಮುರಿ ಕಟ್ಟುವಲ್ಲಿ ಯಶಸ್ವಿಯಾಗಿದ್ದಾರೆ. ಆರೋಪಿಯನ್ನು ಸೆರೆ ಹಿಡಿದ ಪೊಲೀಸರ ತಕ್ಷಣದ ಕಾರ್ಯಕ್ಕೆ ಸಾರ್ವಜನಿಕ ವಲಯದಲ್ಲಿ ಭಾರೀ ಮೆಚ್ಚುಗೆ ವ್ಯಕ್ತವಾಗಿದೆ.

## ಅಕ್ರಮ ಮತದಾರರ ಪಟ್ಟಿ ತಯಾರಿಗೆ ಸರ್ಕಾರ ಮುಂದಾಗಿದೆ: ಶೋಭಾ

# ಬಾಂಗ್ಲಾದೇಶಿಗರ ಸಕ್ರಮ

**ಬೆಂಗಳೂರು:** ಕರ್ನಾಟಕದಲ್ಲಿ ಅಕ್ರಮ ಮತದಾರರ ಪಟ್ಟಿಯನ್ನು ತಯಾರು ಮಾಡಲು ರಾಜ್ಯ ಸರ್ಕಾರ ಮುಂದಾಗಿದೆ. ಹಲವು ವರ್ಷಗಳಿಂದ ಅಲ್ಪಸಂಖ್ಯಾತ ನಾಯಕರು ಅಕ್ರಮವಾಗಿ ಬಾಂಗ್ಲಾ ದೇಶಿಯರನ್ನು ರಾಜ್ಯಕ್ಕೆ ಕರೆತಂದಿದ್ದಾರೆ. ಅವರನ್ನು ರಾಜ್ಯದ ಮತದಾರರನ್ನಾಗಿ ಮಾಡಲು ಷಡ್ಯಂತ್ರ ಮಾಡಿದ್ದಾರೆ ಎಂದು ಕೇಂದ್ರಸಚಿವೆ ಶೋಭಾ ಕರಂದ್ಲಾಜೆ ಗಂಭೀರ ಆರೋಪ ಮಾಡಿದ್ದಾರೆ.

ಶುಕ್ರವಾರ ಬಿಜೆಪಿ ಕಚೇರಿಯಲ್ಲಿ ಸುದ್ದಿಗೋಷ್ಠಿ ನಡೆಸಿದ ಅವರು, ರಾಜ್ಯದ ವಿವಿಧ ಭಾಗದಲ್ಲಿ ನೆಲೆಸಿ ರುವ ಅಕ್ರಮ ಬಾಂಗ್ಲಾದೇಶಿಗಳನ್ನು ಮತಪಟ್ಟಿಗೆ ಸೇರಿಸಿ ಸಕ್ರಮ ಮಾಡುತ್ತಿದ್ದಾರೆ. ಬಿಹಾರ ಮತ್ತು ಪಶ್ಚಿಮ ಬಂಗಾಳ ಚುನಾವಣೆ ಬಳಿಕ ಅಲ್ಲಿದ್ದ ಅಕ್ರಮ ಬಾಂಗ್ಲಾ ವಲಸಿಗರು ರಾಜ್ಯಕ್ಕೆ ಬಂದಿದ್ದಾರೆ. ಇವರಲ್ಲಿ ಕೆಲವರು ಸಿಕ್ಕಿ ಬಿದ್ದಿದ್ದಾರೆ. ಅಲ್ಲದೇ, ಮುಖ್ಯ ಮಂತ್ರಿಗಳ ಮೌಖಿಕ ಆದೇಶದ ಮೇಲೆ ಬಿಎಲ್ ಒಗಳು ತಾಳಕ್ಕೆ ತಕ್ಕಂತೆ ಕುಣಿಯುತ್ತಿದ್ದು, ಅಕ್ರಮ ವಾಸಿಗಳನ್ನು ಮತಪಟ್ಟಿಗೆ ಸೇರಿಸಲಾಗುತ್ತಿದೆ ಎಂದು ಆರೋಪಿಸಿದರು.

ಬಿಎಲ್‌ಒಗಳು ಗುಂಪಾಗಿ ಜನರನ್ನು ಸೇರಿಸಿ ಎಸ್ ಐಆರ್ ಮಾಡುವುದು ಸರಿಯಲ್ಲ. ಮ್ಯಾಪಿಂಗ್ ಮಾಡುತ್ತಿಲ್ಲ, ಅರ್ಜಿಯನ್ನು ಮನೆಗೆ ಬಿಸಾಕಿ ಬರುತ್ತಿದ್ದಾರೆ. ಬಿಎಲ್‌ಒಗಳಿಗೆ ಒತ್ತಡ ಹೇರಲಾಗುತ್ತಿದೆ. ಕಾನೂನು ವಿರೋಧಿ ಕ್ರಮಗಳನ್ನು ತಕ್ಷಣ ರಾಜ್ಯ ಸರ್ಕಾರ ನಿಲ್ಲಿಸಬೇಕು. ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಕಾನೂನು ಪ್ರಕಾರ ಕೆಲಸ ಮಾಡಲಿ ಎಂದು ಕರಂದ್ಲಾಜೆ ಆಗ್ರಹಿಸಿದರು.



### ಸೈಬರ್ ಕೇಂದ್ರಗಳಲ್ಲಿ ಜನನ ಪ್ರಮಾಣಪತ್ರ

ರಾಜ್ಯದಲ್ಲಿ ಸೈಬರ್ ಕೇಂದ್ರಗಳಲ್ಲಿ ಜನನ ಪ್ರಮಾಣ ಅಕ್ರಮವಾಗಿ ಪತ್ರ ಕೊಡುತ್ತಿದ್ದಾರೆ. ಎಸ್‌ಐಆರ್ ಆರಂಭವಾದ ನಂತರ ಇದು ಹೆಚ್ಚಾಗಿದೆ. ಮುಂದಿನ ಚುನಾವಣೆಯಲ್ಲಿ ಅಕ್ರಮವಾಗಿ ಗೆಲ್ಲುವುದೇ ಇದೆಲ್ಲದರ ಉದ್ದೇಶ. ಆದ್ದರಿಂದ ಚುನಾವಣಾ ಆಯೋಗ ಮಧ್ಯಪ್ರವೇಶಿಸಿ ಕ್ರಮ ಕೈಗೊಳ್ಳಬೇಕೆಂದು ಶೋಭಾ ಕರಂದ್ಲಾಜೆ ಒತ್ತಾಯಿಸಿದರು.

### ಸಮಾನಾಂತರ ಎಸ್‌ಐಆರ್ ನಿಲ್ಲಿಸಿ

ಕೇಂದ್ರ ಚುನಾವಣಾ ಆಯೋಗ ರಾಜ್ಯದಾದ್ಯಂತ ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ (ಎಸ್ ಐಆರ್) ನಡೆಸುತ್ತಿದೆ. ಈ ಮಧ್ಯೆ ಗ್ರೇಟರ್ ಬೆಂಗಳೂರು ಪ್ರಾಧಿಕಾರ (ಜಿಬಿಎ)ದ ವಾರ್ಡ್‌ಗಳಲ್ಲಿ ರಾಜ್ಯ ಚುನಾವಣಾ ಆಯೋಗ ನಡೆಸುತ್ತಿರುವ ಸಮಾನಾಂತರ ಎಸ್‌ಐಆರ್ ಅನ್ನು ತಕ್ಷಣ ನಿಲ್ಲಿಸಬೇಕೆಂದು ಸಚಿವೆ ಶೋಭಾ ಕರಂದ್ಲಾಜೆ ಆಗ್ರಹಿಸಿದ್ದಾರೆ. ರಾಜ್ಯ ಚುನಾವಣಾ ಆಯೋಗವು ಜಿಬಿಎ ವಾರ್ಡ್‌ಗಳಲ್ಲಿ ನಡೆಸುತ್ತಿರುವ ಇನ್ನೊಂದು ಎಸ್‌ಐಆರ್ ಮತದಾರರನ್ನು ಗೊಂದಲಕ್ಕೀಡು ಮಾಡಿದೆ ಎಂದು ತಿಳಿಸಿದರು. ರಾಹುಲ್ ಗಾಂಧಿ ಅವರನ್ನು ತೃಪ್ತಿಪಡಿಸಲು ರಾಜ್ಯದ ಕಾಂಗ್ರೆಸ್ ಸರ್ಕಾರ ಇಂತಹ ಕೆಲಸ ಮಾಡುತ್ತಿದೆ. ಇಪ್ಪತ್ತು ವರ್ಷಗಳ ನಂತರ ಈ ಎಸ್‌ಐಆರ್ ನಡೆಯುತ್ತಿದ್ದು, ದೇಶದಲ್ಲಿ ಅಕ್ರಮ ಮತದಾರನ್ನು ಗುರುತಿಸಲು, ಮೃತಪಟ್ಟವರ ಹೆಸರು ತೆಗೆಯಲು ಮತ್ತು ಇತರ ಹಲವಾರು ಕಾರಣಗಳಿಂದ ಎಸ್‌ಐಆರ್ ನಡೆಯುತ್ತಿದೆ ಎಂದರು. ನಗರ ಪ್ರದೇಶಗಳಲ್ಲಿ ಮತದಾರರ ಹೆಸರು ಎರಡು ಕಡೆ ಇರುತ್ತದೆ. ಕೆಲವರು ಬೇರೆ ಕಡೆ ನೆಲೆಸಿರುತ್ತಾರೆ. ಹಳ್ಳಿಗೆ ಹೋಗಿರುತ್ತಾರೆ. ಆದರೆ, ಅವರ ಹೆಸರು ಮತಪಟ್ಟಿಯಲ್ಲಿ ಇರುತ್ತದೆ. ಲೆಕ್ಕಕ್ಕೆ ಇವರು ಇರುತ್ತಾರೆ. ಆದರೆ, ಮತ ಚಲಾಯಿಸುವುದಿಲ್ಲ. ಇದರಿಂದ ಶೇಕಡಾವಾರು ಮತದಾನ ಕಡಿಮೆಯಾಗುತ್ತದೆ, ಇದನ್ನೆಲ್ಲ ತಪ್ಪಿಸಲು ಎಸ್‌ಐಆರ್ ನಡೆಸಲಾಗುತ್ತಿದೆ ಎಂದು ವಿವರಿಸಿದರು. ಬೆಂಗಳೂರು ನಗರ ಜಿಲ್ಲಾಧ್ಯಕ್ಷರಾದ ಎಸ್. ಹರೀಶ್, ಸಪ್ತಗಿರಿ ಗೌಡ ಸುದ್ದಿಗೋಷ್ಠಿಯಲ್ಲಿದ್ದರು.

# ಪ್ರಜಾಸೇವೆ ಮೂಲಕ ರಾಜ್ಯದಲ್ಲಿ ಜನಸ್ಪಂದನ

**ದಾವಣಗೆರೆ:** ಪ್ರಜಾಸೇವೆ ಎಂಬುದಾಗಿ ಹೊಸ ಇಲಾಖೆಯನ್ನು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಆರಂಭಿಸಿದ್ದು, ಈ ಮೂಲಕವೇ ರಾಜ್ಯಾದ್ಯಂತ ಜನಸ್ಪಂದನ ಕಾರ್ಯಕ್ರಮ ನಡೆಸಲಾಗುವುದು. ಪ್ರಜಾ ಸೇವೆಯಲ್ಲಿ ಪ್ರತಿಯೊಬ್ಬ ಸಚಿವರೂ 1ನೇ ಹಾಗೂ 3ನೇ ಶನಿವಾರರಂದು ಜನಸ್ಪಂದನ ನಡೆಸುವಂತೆ ಸಿಎಂ ಸೂಚನೆ ನೀಡಿದ್ದಾರೆ ಎಂದು ನಗರಾಭಿವೃದ್ಧಿ ಸಚಿವ ಡಾ.ಯತೀಂದ್ರ ಸಿದ್ದರಾಮಯ್ಯ ಹೇಳಿದರು.

ಭಾರತ್ ಜೋಡೋ ಯುವಕರ ಸಂಘ ಸ್ಥಾಪಿಸುವ ಬಗ್ಗೆಯೂ ಸಂಪುಟ ಸಭೆಯಲ್ಲಿ ಚರ್ಚಿಸಿ ತೀರ್ಮಾನಿಸಲಾಗಿದೆ. ಎಸ್‌ಐಆರ್ ಬಗ್ಗೆಯೂ ಸಂಪುಟ ಸಭೆಯಲ್ಲಿ ಚರ್ಚೆ ನಡೆಸಿದ್ದೇವೆ ಎಂದರು. ಶುಕ್ರವಾರ ಸುದ್ದಿಗಾರರ ಜತೆ ಮಾತನಾಡಿ, ಕೇಂದ್ರ ನಗರಾಭಿವೃದ್ಧಿ ಖಾತೆ ರಾಜ್ಯ ಸಚಿವರನ್ನು ದೆಹಲಿಯಲ್ಲಿ ಭೇಟಿ ಮಾಡಿ, ಅನುದಾನ ಬಿಡುಗಡೆಗೊಳಿಸುವಂತೆ ಮನವಿ ಮಾಡಿದ್ದೇವೆ. 15ನೇ ಹಣಕಾಸು ಆಯೋಗದ 820 ಕೋಟಿ ರೂ. ರಾಜ್ಯಕ್ಕೆ ಬಿಡುಗಡೆಯಾಗುವುದು ಬಾಕಿ ಇದೆ.

ರಾಜ್ಯದಲ್ಲಿ ಸ್ಥಳೀಯ ಸಂಸ್ಥೆಗಳ ಚುನಾವಣೆ ನಡೆಯಬೇಕಿದ್ದು, ಬಾಕಿ ಅನುದಾನವನ್ನು ಬೇಗನೆ ಬಿಡುಗಡೆಗೊಳಿಸುವಂತೆ ಕೇಂದ್ರ ನಗರಾಭಿವೃದ್ಧಿ ಖಾತೆ ರಾಜ್ಯ ಸಚಿವರಿಗೆ ಮನವಿ ಮಾಡಿದ್ದೇವೆ.



ಜುಲೈ ತಿಂಗಳ 2ನೇ ವಾರದಲ್ಲಿ ಸಂಪುಟ ವಿಸ್ತರಣೆಯಾಗಲಿದೆ. ಸಿದ್ದರಾಮಯ್ಯ ನವರು ಇನ್ನೂ 2 ವರ್ಷ ಮುಖ್ಯಮಂತ್ರಿಯಾಗಿದ್ದರೆ ಜಾತಿ ಗಣತಿ ಸಮೀಕ್ಷೆ ವರದಿ ಜಾರಿಗೊಳ್ಳುತ್ತಿತ್ತು. ಜಾತಿ ಜನಗಣತಿ ವರದಿಯನ್ನು ಜಾರಿಗೊಳಿಸುವ ಬಗ್ಗೆ ನಮ್ಮ ಪಕ್ಷದ ಪ್ರಣಾಳಿಕೆಯಲ್ಲೂ ಪ್ರಸ್ತಾಪ ಮಾಡಿದ್ದು, ಅದನ್ನು ಈಡೇರಿಸಬೇಕಾಗಿರುವುದು ನಮ್ಮ ಪಕ್ಷದ ಜವಾಬ್ದಾರಿಯಾಗಿದೆ.

■ ಡಾ.ಯತೀಂದ್ರ ಸಿದ್ದರಾಮಯ್ಯ

**ಭಾರತ್ ಜೋಡೋ ಯುವಕರ ಸಂಘ ಸ್ಥಾಪಿಸುವ ಬಗ್ಗೆ: ಡಾ.ಯತೀಂದ್ರ ಸಿದ್ದರಾಮಯ್ಯ**

ಚುನಾವಣಾ ಆಯೋಗ ಸೂಚಿಸಿದ ನಂತರ ರಾಜ್ಯ ಸ್ಥಳೀಯ ಸಂಸ್ಥೆಗಳ ಚುನಾವಣೆ ನಡೆಸಲಿದ್ದು, ಆಗಸ್ಟ್ ತಿಂಗಳಿನಲ್ಲಿ ಚುನಾವಣೆ ನಡೆಸುವಂತೆ ನ್ಯಾಯಾಲಯದ ಸೂಚಿರುವ ಮೇರೆಗೆ ದಾವಣಗೆರೆ ನಗರ, ಜಿಲ್ಲೆ ಸ್ಥಳೀಯ ಸಂಸ್ಥೆಗಳ ಚುನಾವಣೆಯನ್ನೂ ಮಾಡುತ್ತೇವೆ ಎಂದು ಅವರು ವಿವರಿಸಿದರು.

# ಬರ ಘೋಷಣೆ ಮಾಡಿ: ರವಿಕುಮಾರ್

**ಕಲಬುರಗಿ:** ರಾಜ್ಯಾದ್ಯಂತ ಬರಗಾಲ ಆವರಿಸಿ ರೈತರು ಸಂಕಷ್ಟ ಅನುಭವಿಸುತ್ತಿದ್ದಾರೆ. ಮಳೆಯಿಲ್ಲದೇ ಬಿತ್ತನೆ ಕಾರ್ಯದಲ್ಲಿ ಕುಂಠಿತಗೊಂಡಿದೆ. ರೈತರ ಬವಣೆ, ಸಂಕಷ್ಟಗಳನ್ನು ಕೇಳಲು ದಿಕ್ಕಿಲ್ಲದಂತಹ ಪರಿಸ್ಥಿತಿ ನಿರ್ಮಾಣವಾಗಿದ್ದು, ಕೂಡಲೇ ರಾಜ್ಯ ಸರ್ಕಾರ ರಾಜ್ಯಕ್ಕೆ ಬರಗಾಲ ಘೋಷಣೆ ಮಾಡಬೇಕೆಂದು ವಿಧಾನ ಪರಿಷತ್ ಸದಸ್ಯ, ಮುಖ್ಯಸಚೇತಕ ಎನ್.ರವಿಕುಮಾರ್ ಆಗ್ರಹಿಸಿದರು.



ನಗರದ ಐವನ್ ಶಾಹಿ ಅತಿಥಿ ಗೃಹದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 140ಕ್ಕೂ ಅಧಿಕ ಗ್ರಾಮಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ತಾಂಡವಾಡುತ್ತಿದೆ. ರಾಜ್ಯದ 16 ಪ್ರಮುಖ ಜಲಾಶಯಗಳು ಬತ್ತಿ ಬರಿದಾಗಿವೆ. ಜನ–ಜಾನುವಾರು ಸೇರಿದಂತೆ ಪ್ರಾಣಿ ಪಶುಗಳಿಗೂ ನೀರು ಸಿಗುತ್ತಿಲ್ಲ, ಮುಂಗಾರು ಮಳೆ ಕೈಕೊಟ್ಟ ಪರಿಣಾಮ ರಾಜ್ಯಾದ್ಯಂತ ಬಹುತೇಕ ಬಿತ್ತನೆ ಕಾರ್ಯ ನಡೆದಿಲ್ಲ. ಕೂಡಲೇ ರಾಜ್ಯಕ್ಕೆ ಬರಗಾಲದ ರಾಜ್ಯವೆಂದು ಘೋಷಿಸಿ, ಸರ್ವ ಪಕ್ಷಗಳ ಸಭೆ ಕರೆದು ಪರಿಹಾರ ಒದಗಿಸಬೇಕು ಎಂದು ಹೇಳಿದರು.

### ಬಂಡೆ ಕುಸಿತ: ಕಾರ್ಮಿಕ ಕುಟುಂಬಕ್ಕೆ ನೌಕರಿ ನೀಡಿ

ಬೆಂಗಳೂರಿನ ಸಮೀಪದ ಮಾದಾಪಟ್ಟಣದ ಗ್ರಾಮದಲ್ಲಿ ಕಲ್ಲು ಬಂಡೆ ಕುಸಿದು ಏಳು ಜನ ಕಾರ್ಮಿಕರು ಮೃತಪಟ್ಟಿದ್ದು, ಅದರಲ್ಲಿ ಕಲ್ಯಾಣ ಕರ್ನಾಟಕ ಭಾಗದ ಯಾದಗಿರಿ ಜಿಲ್ಲೆಯ ಓರ್ವ ಕಾರ್ಮಿಕ ಮೃತಪಟ್ಟಿದ್ದಾನೆ. ಕಾರ್ಮಿಕ ಕುಟುಂಬದ ಹಿನ್ನೆಲೆ ಆ ಕುಟುಂಬಕ್ಕೆ ಆತನೊಬ್ಬನೆ ಆಸರೆಯಾಗಿದ್ದ. ಹೀಗಾಗಿ ಕೂಡಲೇ ರಾಜ್ಯ ಸರ್ಕಾರ ಕಾರ್ಮಿಕರ ಕುಟುಂಬಕ್ಕೆ 25 ಲಕ್ಷ ರೂ. ಪರಿಹಾರ ಜತೆಗೆ ಸರ್ಕಾರಿ ನೌಕರಿ ಕೊಡಬೇಕು. ಜತೆಗೆ ಮಧ್ಯಪ್ರದೇಶದ 6 ಜನ ಕರ್ನಾಟಕದಲ್ಲಿ ಮೃತಪಟ್ಟಿದ್ದು, ಅವರಿಗೂ ಸಹ 50 ಲಕ್ಷ ರೂ. ಪರಿಹಾರ ನೀಡಬೇಕೆಂದು ಸರ್ಕಾರಕ್ಕೆ ಆಗ್ರಹಿಸಿದರು.

# ಅಂಜನಾದ್ರಿಗೆ ಕ್ರಿಕೆಟಿಗ ರಾಹುಲ್ ದ್ರಾವಿಡ್ ಭೇಟಿ

**ಕೊಪ್ಪಳ:** ಖ್ಯಾತ ಕ್ರಿಕೆಟ್ ಆಟಗಾರ, ಟೀಂ ಇಂಡಿಯಾ ಮಾಜಿ ನಾಯಕ ರಾಹುಲ್ ದ್ರಾವಿಡ್ ಅವರು ಅಂಜನಾದ್ರಿಗೆ ತೆರಳಿ ಹನುಮನ ದರ್ಶನ ಪಡೆದರು. ಪತ್ನಿ ಜತೆ ಅಂಜನಾದ್ರಿ ಬೆಟ್ಟಕ್ಕೆ ತೆರಳಿದ ರಾಹುಲ್ ದ್ರಾವಿಡ್, 575 ಮೆಟ್ಟಿಲೇರಿ ಹನುಮನ ದರ್ಶನ ಪಡೆದರು. ದೇವರಿಗೆ ವಿಶೇಷ ಪೂಜೆ ಸಲ್ಲಿಸಿ ಪ್ರಾರ್ಥಿಸಿದರು.



ಬುಧವಾರ ಹಂಪಿಗೆ ತೆರಳಿ ವಿರೂಪಾಕ್ಷನ ದರ್ಶನ ಪಡೆದಿದ್ದರು. ಅದಕ್ಕೂ ಮೊದಲು ಅವರು ಸಾಸಿವೆಕಾಳು ಗಣೇಶ, ಹೇಮಕೂಟಕ್ಕೆ ತೆರಳಿದ್ದರು. ನಂತರ ಕೃಷ್ಣ ದೇವಸ್ಥಾನ, ಉಗ್ರನರಸಿಂಹ, ಬಡವಿಲಿಂಗ ದರ್ಶನ ಪಡೆದರು. ಮಧ್ಯಾಹ್ನದ ಬಳಿಕ ಚಕ್ರತೀರ್ಥ ಕೋದಂಡರಾಮ ದೇವಾಲಯ, ಯಂತ್ರೋದ್ಧಾರಕ ಆಂಜನೇಯ ದೇವಸ್ಥಾನ, ಅಚ್ಯುತರಾಯ ದೇವಾಲಯಗಳಿಗೆ ಭೇಟಿ ನೀಡಿ ಪೂಜೆ ಸಲ್ಲಿಸಿದರು.

# ಸರ್ಕಾರಕ್ಕೆ ಎಸ್‌ಐಆರ್ ನಡುಕ: ನಿಖಿಲ್ ಟೀಕೆ

**ರಾಮನಗರ:** ಎಸ್‌ಐಆರ್ ಪ್ರಕ್ರಿಯೆ ಆರಂಭವಾದಾಗಿನಿಂದ ಕಾಂಗ್ರೆಸ್ ಸರ್ಕಾರಕ್ಕೆ ನಡುಕ ಆರಂಭವಾಗಿದೆ, ತನ್ನ ಬೆನ್ನೆಲುಬಿಗೆ ನಿಂತಿರುವ ಕಳ್ಳ ಮತಗಳನ್ನು ಉಳಿಸಿಕೊಳ್ಳಲು ಸರ್ಕಾರ ಸಂಚು ನಡೆಸಿದೆ ಎಂದು ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್‌ಕುಮಾರಸ್ವಾಮಿ ತಿಳಿಸಿದರು.



ರಾಮನಗರದಲ್ಲಿ ಎಸ್ ಐಆರ್ ಪ್ರಕ್ರಿಯೆಯಲ್ಲಿ ಅಕ್ರಮ ನಡೆಯುತ್ತಿದೆ ಎಂದು ಆರೋಪಿಸಿ ಜೆಡಿಎಸ್ ಹಾಗೂ ಬಿಜೆಪಿ ಪಕ್ಷಗಳು ಇಲ್ಲಿನ ಜಿಲ್ಲಾಧಿಕಾರಿ ಕಚೇರಿ ಮುಂದೆ ಹಮ್ಮಿಕೊಂಡಿದ್ದ ಜಂಟಿ ಪ್ರತಿಭಟನೆಯಲ್ಲಿ ಭಾಗವಹಿಸಿ ಅವರು ಮಾತನಾಡಿದರು. ರಾಜ್ಯದ ಸುಮಾರು 25 ವಿಧಾನಸಭಾ ಕ್ಷೇತ್ರಗಳಲ್ಲಿ ಅಕ್ರಮ ನಡೆಯುತ್ತಿದೆ, ಮನೆ ಮನೆಗೆ ತೆರಳಿ, ಬಿಎಲ್‌ಎ–2ಗಳ ಸಮ್ಮುಖದಲ್ಲಿ ಪ್ರಕ್ರಿಯೆ ನಡೆಸುವ ಬದಲು, ಬಿಎಲ್‌ಎ ದಿಕ್ಕುತಪ್ಪಿಸಿ ಎಲ್ಲೋ ಒಂದು ಕಡೆ ಕಲ್ಯಾಣ ಮಂಟಪಗಳಲ್ಲಿ ಗುಂಪು ಗುಂಪಾಗಿ ಸೇರಿ ಅಕ್ರಮವಾಗಿ ನಕಲಿ ದಾಖಲೆಗಳನ್ನು ಪಡೆದು ಪ್ರಕ್ರಿಯೆ ನಡೆಸುತ್ತಿದ್ದಾರೆ, ಇದರ ವಿರುದ್ಧ ರಾಜ್ಯ ಹಾಗೂ ಕೇಂದ್ರ ಚುನಾವಣಾ ಆಯೋಗಕ್ಕೆ ದೂರು ನೀಡುತ್ತೇನೆ ಎಂದು ತಿಳಿಸಿದರು. ಪ್ರಜೆಗಳ ಮೂಲಭೂತ ಹಕ್ಕನ್ನು ಕಸಿಯಲು ಕಾಂಗ್ರೆಸ್‌ನವರು ಹೊರಟಿದ್ದಾರೆ, ಅಧಿಕಾರಿಗಳನ್ನು ಬಳಸಿಕೊಂಡು ಅಕ್ರಮ ಎಸಗಲಾಗುತ್ತಿದೆ, ಬಿಎಲ್‌ಒಗಳಿಗೆ ಬೆದರಿಕೆ ಹಾಕಿ ಕೆಲಸ ಮಾಡಿಸಿಕೊಳ್ಳುತ್ತಿದ್ದಾರೆ ಎಂದರು.

# ಕೇಂದ್ರದಿಂದ ಮಹತ್ವದ ಭರವಸೆ: ಯದುವೀರ್

**ಮೈಸೂರು:** ಕೊಡಗು ಜಿಲ್ಲೆಯಲ್ಲಿನ ಮಾನವ–ಆನೆ ಸಂಘರ್ಷ ಸಮಸ್ಯೆ ಪರಿಹಾರಕ್ಕೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರ ಅಗತ್ಯ ಸಹಕಾರ ನೀಡುವುದಾಗಿ ಕೇಂದ್ರ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವಾಲಯದ ಸಚಿವರು ಭರವಸೆ ನೀಡಿದ್ದಾರೆ ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ತಿಳಿಸಿದ್ದಾರೆ. ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ಅವರು, ಕೇಂದ್ರ ಅರಣ್ಯ ಮತ್ತು ಪರಿಸರ ಸಚಿವ ಭೂಪೇಂದ್ರ ಯಾದವ್ ರವರನ್ನು ಭೇಟಿಯಾಗಿ ಸಲ್ಲಿಸಿದ್ದ ಮನವಿಗೆ ಪ್ರತಿಕ್ರಿಯಿಸಿದ ಸಚಿವರು ಕೊಡಗಿನ ಅರಣ್ಯ ಅಂಚಿನ ಪ್ರದೇಶಗಳಲ್ಲಿ ರೈತರು, ತೋಟಗಾರರು ಮತ್ತು ಸ್ಥಳೀಯ ನಿವಾಸಿಗಳನ್ನು ಕಾಡುತ್ತಿರುವ ಮಾನವ–ಆನೆ ಸಂಘರ್ಷ ಸಮಸ್ಯೆ ನಿವಾರಣೆಗೆ ಭರವಸೆ ನೀಡಿದ್ದಾರೆ. ಕೇಂದ್ರ ಸಚಿವಾಲಯವು ವನ್ಯಜೀವಿ ವಾಸಸ್ಥಳಗಳ ಅಭಿವೃದ್ಧಿ ಹಾಗೂ ಪ್ರಾಜೆಕ್ಟ್ ಟೈಗರ್ ಎಲಿಫೆಂಟ್ ಸೇರಿದಂತೆ ಕೇಂದ್ರ ಪ್ರಾಯೋಜಿತ ಯೋಜನೆಗಳಡಿ ರಾಜ್ಯ ಸರ್ಕಾರಗಳಿಗೆ ಆರ್ಥಿಕ ನೆರವು ನೀಡುತ್ತಿರುವುದಾಗಿ ತಿಳಿಸಿದೆ. ಈ ಕಾರ್ಯಯೋಜನೆ ಕೆಲ ವಿಷಯಗಳ ಮೇಲೆ ಕೇಂದ್ರೀಕರಿಸಲಿದೆ ಎಂದು ಹೇಳಿದ್ದಾರೆ.

## ಕರಾವಳಿ–ಮಲೆನಾಡು ಕರ್ನಾಟಕ ಪ್ರವಾಸೋದ್ಯಮ ನೀತಿ–2026

# ಪ್ರವಾಸಿ ಸೌಲಭ್ಯಗಳಿಗೆ ಆದ್ಯತೆ: ಜಾರ್ಜ್

**ಬೆಂಗಳೂರು:** ಕರ್ನಾಟಕವನ್ನು ದೇಶದ ಪ್ರಮುಖ ಪ್ರವಾಸೋದ್ಯಮ ತಾಣವನ್ನಾಗಿ ರೂಪಿಸುವ ನಿಟ್ಟಿನಲ್ಲಿ, ಕರಾವಳಿ ಮತ್ತು ಮಲೆನಾಡು ಪ್ರದೇಶಗಳ ಪ್ರವಾಸೋದ್ಯಮಕ್ಕೆ ಹೊಸ ಚೈತನ್ಯ ನೀಡುವ ಕರಾವಳಿ–ಮಲೆನಾಡು ಕರ್ನಾಟಕ ಪ್ರವಾಸೋದ್ಯಮ ನೀತಿ–2026 ಯನ್ನು ರೂಪಿಸಲಾಗುತ್ತಿದ್ದು, ಈ ನೀತಿಯಲ್ಲಿ ಕ್ರೂಸ್ ಪ್ರವಾಸೋದ್ಯಮ, ಬೀಚ್ ಪ್ರವಾಸೋದ್ಯಮ ಹಾಗೂ ವಿಶ್ವದರ್ಜೆಯ ಪ್ರವಾಸಿ ಸೌಲಭ್ಯಗಳಿಗೆ ವಿಶೇಷ ಆದ್ಯತೆ ನೀಡಬೇಕು ಎಂದು ಇಂಧನ ಮತ್ತು ಪ್ರವಾಸೋದ್ಯಮ ಸಚಿವರಾದ ಕೆ.ಜೆ. ಜಾರ್ಜ್ ಅಧಿಕಾರಿಗಳಿಗೆ ಸೂಚನೆ ನೀಡಿದರು .

ಇಂದು ಇಂಧನ ಭವನದಲ್ಲಿ ಪ್ರವಾಸೋದ್ಯಮ ಇಲಾಖೆಯ ಹಿರಿಯ ಅಧಿಕಾರಿಗಳೊಂದಿಗೆ ಇಲಾಖೆಯ ವಿವಿಧ ಯೋಜನೆಗಳ ಪ್ರಗತಿ ಪರಿಶೀಲನೆ ನಡೆಸಿದ ಸಚಿವರು, ರಾಜ್ಯದ ಪ್ರವಾಸೋದ್ಯಮವನ್ನು ಮೇಲ್ದರ್ಜೆಗೇರಿಸುವ ದೂರದೃಷ್ಟಿಯ ಕಾರ್ಯತಂತ್ರಗಳ ಕುರಿತು ಸುದೀರ್ಘ ಚರ್ಚೆ ನಡೆಸಿದರು. ರಾಜ್ಯದ ಕರಾವಳಿ ಹಾಗೂ ಮಲೆನಾಡು ವ್ಯಾಪ್ತಿಯ ಆರು ಜಿಲ್ಲೆಗಳ ಪ್ರವಾಸೋದ್ಯಮ



ಸಾಮರ್ಥ್ಯವನ್ನು ಸಮಗ್ರವಾಗಿ ಅಭಿವೃದ್ಧಿಪಡಿಸುವ ಉದ್ದೇಶದಿಂದ ಸಿದ್ಧವಾಗುತ್ತಿರುವ ಹೊಸ ಪ್ರವಾಸೋದ್ಯಮ ನೀತಿಯಲ್ಲಿ, ವಿಷಯಾಧಾರಿತ ಪ್ರವಾಸೋ ೇದ್ಯಮ ಸರ್ಕಿಟ್‌ಗಳು, ಕಡಲತೀರ ಪ್ರವಾಸೋದ್ಯಮ, ಕ್ರೂಸ್ ಪ್ರವಾಸೋದ್ಯಮ, ಸಾಹಸ ಕ್ರೀಡೆಗಳು ಹಾಗೂ ಸ್ಥಳೀಯ ಆರ್ಥಿಕತೆಯನ್ನು ಉತ್ತೇಜಿಸುವ ಕಾರ್ಯಕ್ರಮಗಳಿಗೆ ಆದ್ಯತೆ ನೀಡಬೇಕು ಎಂದು ಸಚಿವರು ತಿಳಿಸಿದರು.

ಅಂತಾರಾಷ್ಟ್ರೀಯ ಕ್ರೂಸ್ ಹಡಗುಗಳು ಮಂಗಳೂರು ಸೇರಿದಂತೆ ರಾಜ್ಯದ ವಿವಿಧ ಬಂದರುಗಳಿಗೆ ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸುವಂತೆ ಸಮಗ್ರ ಕಾರ್ಯತಂತ್ರ ರೂಪಿಸಬೇಕಿದೆ. ಕ್ರೂಸ್ ಪ್ರವಾಸಿಗರು ಕರ್ನಾಟಕದಲ್ಲಿ ಹೆಚ್ಚು ದಿನ ಉಳಿಯುವಂತೆ ಆಕರ್ಷಕ ಪ್ರವಾಸೋದ್ಯಮ ಪ್ಯಾಕೇಜ್‌ಗಳು ಮತ್ತು ಸರ್ಕಿಟ್‌ಗಳನ್ನು ಅಭಿವೃದ್ಧಿಪಡಿಸಬೇಕು. ಈ ನಿಟ್ಟಿನಲ್ಲಿ ಪ್ರಮುಖ ಕ್ರೂಸ್ ಆಪರೇಟರ್‌ಗಳೊಂದಿಗೆ ಸಭೆ ನಡೆಸಿ, ಅವರ ಹಾಗೂ ಪ್ರವಾಸಿಗರ ನಿರೀಕ್ಷೆಗಳನ್ನು ಆಧರಿಸಿ ನೀತಿಯಲ್ಲಿ ಅಗತ್ಯ ಬದಲಾವಣೆಗಳನ್ನು ಅಳವಡಿಸಿಕೊಳ್ಳುವಂತೆ ಅಧಿಕಾರಿಗಳಿಗೆ ಸಚಿವರಾದ ಕೆ.ಜೆ. ಜಾರ್ಜ್ ಸೂಚಿಸಿದರು. ಬೀಚ್ ಪ್ರವಾಸೋದ್ಯಮವನ್ನು ಮತ್ತಷ್ಟು ಬಲಪಡಿಸುವ ನಿಟ್ಟಿನಲ್ಲಿ, ಬ್ಲೂ ಫ್ಲಾಗ್ ಬೀಚ್‌ಗಳ ಅಭಿವೃದ್ಧಿ, ಸ್ವಚ್ಛತೆ, ಸುರಕ್ಷತೆ, ಪ್ರವಾಸಿಗರ ಅನುಕೂಲಕ್ಕಾಗಿ ಅಗತ್ಯ ಮೂಲ ಸೌಕರ್ಯ, ಜಲಕ್ರೀಡೆಗಳು, ಸಾಹಸ ಚಟುವಟಿಕೆಗಳು ಹಾಗೂ ಸಮುದ್ರತೀರದಲ್ಲಿ ಗುಣಮಟ್ಟದ ಪ್ರವಾಸಿ ಅನುಭವ ಕಲ್ಪಿಸುವ ಯೋಜನೆಗಳನ್ನು ಹೊಸ ನೀತಿಯಲ್ಲಿ ಸೇರಿಸಬೇಕು ಎಂದು ಅವರು ತಿಳಿಸಿದರು.

ಸಭೆಯಲ್ಲಿ ಪ್ರವಾಸೋದ್ಯಮ ಇಲಾಖೆಯ ಕಾರ್ಯದರ್ಶಿ ತ್ರಿಲೋಕ್ ಚಂದ್ರ, ಪ್ರವಾಸೋದ್ಯಮ ಇಲಾಖೆಯ ಆಯುಕ್ತ ಡಾ. ವಿ. ರಾಮ್ ಪ್ರಸಾತ್ ಮನೋಹರ್, ಕೆಎಸ್ಟಿಡಿಸಿ ಹಾಗೂ ಜೆಎಲ್‌ಆರ್ ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು.

## ಬರದ ಛಾಯೆ | ಸಿಎಂ ಹೇಳಿಕೆಗೆ ಬಿಜೆಪಿ ರಾಜ್ಯಾಧ್ಯಕ್ಷ ಆಕ್ರೋಶ

# ರೈತರ ವಿಶ್ವಾಸಕ್ಕೆ ಧಕ್ಕೆ: ವಿಜಯೇಂದ್ರ ಟೀಕೆ

**ಬೆಂಗಳೂರು:** ಮುಖ್ಯಮಂತ್ರಿಗಳು ಬೆಳೆ ಬೆಳೆಯದಿರಿ ಎಂದಿರುವ ಹೇಳಿಕೆ ರೈತರ ಆತ್ಮಸ್ಥೈರ್ಯ ಕುಗ್ಗಿಸುವ ಕೆಲಸ ಮಾಡಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಟೀಕಿಸಿದ್ದಾರೆ. ಬಿಜೆಪಿ ರಾಜ್ಯ ಕಾರ್ಯಾಲಯದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಭೀಕರ ಬರಗಾಲದ ಮುನ್ಸೂಚನೆ ವಿಚಾರವನ್ನು ಗುರುವಾರ ಸಚಿವ ಸಂಪುಟ ಸಭೆಯಲ್ಲಿ ಚರ್ಚಿಸಿ ರಾಜ್ಯದ ಜಲಾಶಯಗಳಲ್ಲಿ ನೀರಿಲ್ಲದ ಕಾರಣ ರೈತರು ಬೆಳೆ ಬೆಳೆಯದಿರಿ ಎಂದು ಸ್ವತಃ ಮುಖ್ಯಮಂತ್ರಿಗಳು ಹೇಳಿದ್ದು ಬಹಳ ಆಶ್ಚರ್ಯ ಮಾತ್ರವಲ್ಲದೇ ಅತ್ಯಂತ ನೋವನ್ನು ತಂದಿದೆ ಎಂದರು.

ಇಡೀ ದೇಶದಲ್ಲಿ ಬರಗಾಲದ ಛಾಯೆ ಮೂಡಿದೆ. ಪ್ರಕೃತಿ ಮುನಿಸಿಕೊಂಡ ಸಂದರ್ಭದಲ್ಲಿ ರಾಜ್ಯದ ರೈತರಿಗೆ ಅಭಯ, ಭರವಸೆ ಸರ್ಕಾರ ನೀಡಬೇಕಿತ್ತು. ಮುಂದಿನ 15 – 20 ದಿನ ಮಳೆ ಬೀಳುವ ಆಶಾಭಾವ ಇದೆ. ಮುಖ್ಯಮಂತ್ರಿಗಳು ಹೇಳಿದರೆಂದು ಬಿತ್ತನೆಯೇ ಮಾಡದೇ ಇದ್ದರೆ ಯಾರು ಹೊಣೆಗಾರರು? ಆದ್ದರಿಂದ ನಾವೇನೇ ಹೇಳಿಕೆ ನೀಡಿದರೂ ಪ್ರಬುದ್ಧತೆಯಿಂದ ಮಾತನಾಡಬೇಕು ಎಂದು ವಿನಂತಿಸಿದರು.

ಶೇ 50 – 60 ಮಳೆ ಕಡಿಮೆ ಇರುವಾಗ ರಾಜ್ಯ ಸರ್ಕಾರದ ಆದ್ಯತೆ ಏನು? ಇವರೇನಾದರೂ ಜಿಲ್ಲಾಧಿಕಾರಿಗಳಿಗೆ ಹಣ ಬಿಡುಗಡೆ ಮಾಡಿದ್ದಾರಾ? ರೈತರಿಗೆ ಸ್ಪಂದಿಸುವ ನಿಟ್ಟಿನಲ್ಲಿ ಜಾನುವಾರುಗಳಿಗೆ ಮೇವಿಗಾಗಿ ಅನುದಾನ ಬಿಡುಗಡೆ ಮಾಡಿದ್ದಾರಾ? ಯಾಕೆ ಈ ರೀತಿ ಕಪಟ ನಾಟಕ ಆಡುತ್ತಿದ್ದೀರಿ? ನಮ್ಮ ಜಲಾಶಯದಿಂದ ತಮಿಳುನಾಡಿಗೆ ನೀರು ಬಿಡುವ ದುಸ್ಸಾಹಸಕ್ಕೆ ಯಾಕೆ ಕೈ ಹಾಕಿದ್ದೀರಿ? ಸಿಎಂ ರೈತಪರವಾಗಿಲ್ಲದೇ ರಿಯಲ್ ಎಸ್ಟೇಟ್ ಪರವಾದರೆ ರಾಜ್ಯದ ಹಣೆಬರಹ ಇದೇ ಆಗುತ್ತದೆ ಎಂದು ಆಕ್ಷೇಪಿಸಿದರು.

ಸಂಪುಟ ವಿಸ್ತರಣೆಗೆ ಡೇಟ್ ಫಿಕ್ಸ್ ಆಗುತ್ತಿಲ್ಲ, ಇದೇ ಕಾರಣಕ್ಕೆ ಅಧಿವೇಶನ ಮುಂದೂಡುತ್ತಿದ್ದಾರೆ ಎಂದು ಆರೋಪಿಸಿದರು.



### ಹಿಂದು ವಿರೋಧಿ ನೀತಿಯಿಂದ ಬಲ

ಹಾನಗಲ್ ತಾಲೂಕಿನ ನರೇಗಲ್‌ನಲ್ಲಿ ಹಾಲುಮತ ಸಮಾಜದ ಒಂದೇ ಕುಟುಂಬದ ಆರು ಜನರ ಮೇಲೆ ಮಾರಣಾಂತಿಕ ಹಲ್ಲೆ ನಡೆದಿದೆ. ಮತ್ತೊಂದೆಡೆ ಹಾಸನದ ರಟ್ಟೇಹಳ್ಳಿಯಲ್ಲಿ ಮರಾಠಾ ಸಮಾಜದ ಬಡ ಕುಟುಂಬದ ಶಿವಾಜಿ ರಾವ್ ಅವರನ್ನು ಹಾಡಹಗಲೇ ಒದ್ದು ಪ್ರಾಣ ತೆಗೆಯಲಾಗಿದೆ. ಚಿಕ್ಕಬಳ್ಳಾಪುರದಲ್ಲಿ ಲವ್ ಜಿಹಾದ್‌ಗೆ ಒಳಗಾಗಿ ಫಿಸಿಯೋಥೆರಪಿಸ್ಟ್ ಕೊಲೆಯಾಗಿದೆ. ಮುಖ್ಯಮಂತ್ರಿ ಡಿಕೆ ಅವರ ಸಾಫ್ಟ್ ಹಿಂದುತ್ವವಾದ, ಗೃಹಸಚಿವ ಪಿಕೆ ಮತ್ತು ಕೆಪಿಸಿಸಿ ಅಧ್ಯಕ್ಷ ಬಿಕೆ ಅವರ ಹಿಂದು ವಿರೋಧಿ ನೀತಿ – ಇವರ ಹೇಳಿಕೆಗಳು ಮತೀಯ ಶಕ್ತಿಗಳಿಗೆ ಧೈರ್ಯ ನೀಡುತ್ತಿದೆ. ಕಾಂಗ್ರೆಸ್ ಸರ್ಕಾರದ ಅಲ್ಪಸಂಖ್ಯಾತರ ಓಲೈಕೆಯೇ ಇದಕ್ಕೆ ಕಾರಣ ಎಂದು ವಿಜಯೇಂದ್ರ ಆಕ್ಷೇಪಿಸಿದರು.

## ಸಂಪಾದಕೀಯ

# ನಿರ್ಲಕ್ಷ್ಯಕ್ಕೆ ಬಲಿಯಾದ ಜೀವಗಳು

ಬೆಂಗಳೂರಿನ ರಾಮನಗರದ ಮಾದಾಪಟ್ಟಣದ ಸಮೀಪ ಕಲ್ಲು ಕ್ವಾರೆಯೊಂದರಲ್ಲಿ ಬಂಡೆ ಕುಸಿದ ಪರಿಣಾಮವಾಗಿ 7 ಮಂದಿ ಕಾರ್ಮಿಕರು ಅದರಡಿಗೆ ಸಿಲುಕಿ ಸಾವಿಗೀಡಾಗಿ ಇನ್ನು ಕೆಲವರು ಗಾಯಗೊಂಡಿರುವುದು ಮನಕಲಕುವ ಘಟನೆ. ಆದರೆ ಇದು ನೈಸರ್ಗಿಕ ಪ್ರಕೋಪದಿಂದ ಉಂಟಾದ ದುರ್ಘಟನೆಯೇನೂ ಅಲ್ಲ, ಬದಲಾಗಿ ಕಲ್ಲಿನ ಕ್ವಾರಿಯಲ್ಲಿ ಗಣಿಗಾರಿಕೆ ನಡೆಸುತ್ತಿದ್ದವರ ಘೋರ ನಿರ್ಲಕ್ಷ್ಯವೇ ಅದಕ್ಕೆ ಮುಖ್ಯ ಕಾರಣ. ಎತ್ತರದಲ್ಲಿ ಬಂಡೆ ಸಡಿಲಗೊಳಿಸುವ ಕಾರ್ಯ ನಡೆಯುತ್ತಿದ್ದ ಸಂದರ್ಭದಲ್ಲೇ ಕೆಳಭಾಗದಲ್ಲಿ



ಕೂಡಾ ಕಾರ್ಮಿಕರು ತಮ್ಮ ಕಾರ್ಯನಿರ್ವಹಿಸುವಂತೆ ಮಾಡಿದ ಕಾರಣದಿಂದಾಗಿ ಮೇಲಿನಿಂದ ಜಾರಿದ ಬಂಡೆ ಕೆಳಗಿದ್ದವರ ಮೇಲೆ ಬಿದ್ದು ಈ ದುರಂತ ಸಂಭವಿಸಿದೆ. ಇದು ಕ್ವಾರಿಯಲ್ಲಿ ನಡೆಯುತ್ತಿದ್ದ ಕಾರ್ಯದ ಉಸ್ತುವಾರಿ ನೋಡಿಕೊಳ್ಳುತ್ತಿದ್ದವರ ನಿರ್ಲಕ್ಷ್ಯ ಮತ್ತು ಹೊಣೆಗೇಡಿ ವರ್ತನೆಯ ಫಲ ಎನ್ನುವುದರಲ್ಲಿ ಅನುಮಾನವಿಲ್ಲ. ಇದರ ಜತೆಗೇ ಗಣಿಗಾರಿಕೆಗೆ ಕಣ್ಣುಮುಚ್ಚಿ ಅಂಗೀಕಾರ ನೀಡುವ ಹಾಗೂ ಬಳಿಕ ಅಲ್ಲಿನ ವ್ಯವಸ್ಥೆಗಳ ಕುರಿತಂತೆ ಕಣ್ಣೆತ್ತಿಯೂ ನೋಡದ ಗಣಿಗಾರಿಕೆ ಇಲಾಖೆಯ ಬೇಕಾಬಿಟ್ಟಿ ಧೋರಣೆಯೂ ಈ ದುರಂತಕ್ಕೆ ಪರೋಕ್ಷ ಕಾರಣವಾಗಿದೆಯೆಂದರೆ ತಪ್ಪಾಗಲಾರದು.

ಇಂತಹ ದುರಂತಗಳು ಸಂಭವಿಸುತ್ತಿರುವುದು ಹೊಸದೇನಲ್ಲ. ಕ್ವಾರಿಗಳಲ್ಲಿ ಗಣಿಗಾರಿಕೆ ನಡೆಸುವಾಗ ಸೂಕ್ತ ನಿಯಮಗಳನ್ನು ಪಾಲಿಸದಿರುವುದು, ಮುಂಜಾಗ್ರತಾ ಕ್ರಮಗಳನ್ನು ಅನುಸರಿಸದಿರುವುದರಿಂದಲೇ ಬಹುತೇಕ ಬಾರಿ ಇಂತಹ ದುರ್ಘಟನೆಗಳು ಸಂಭವಿಸುತ್ತವೆ. ಕಲ್ಲು ಒಡೆಯಲು ಸ್ಫೋಟಕಗಳನ್ನು ಬಳಸುವಲ್ಲಿ ಬಹಳಷ್ಟು ಬಾರಿ ನಿಯಮಗಳನ್ನು ಉಲ್ಲಂಘಿಸಲಾಗುತ್ತದೆ. ಮಿತಿಗಿಂತ ಹೆಚ್ಚು ಪ್ರಮಾಣದ ಸ್ಫೋಟಕ ಬಳಸುವುದಂತೂ ಸಾಮಾನ್ಯವಾಗಿದೆ. ಗಣಿಗಾರಿಕೆಗೆ ಅನುಮತಿ ಸಿಕ್ಕಿದ ಪ್ರದೇಶವನ್ನೂ ಮೀರಿ ಹೆಚ್ಚುವರಿ ಜಾಗದಲ್ಲಿ ಗಣಿಗಾರಿಕೆ ನಡೆಸುವುದು ಕೂಡಾ ಮಾಮೂಲಾಗಿದೆ.

ಗಣಿಗಾರಿಕೆ ನಡೆಸುವಾಗ ಸೂಕ್ತ ನಿಯಮಾವಳಿಗಳನ್ನು ಪಾಲಿಸುವಂತೆ ನೋಡಿಕೊಳ್ಳಬೇಕಾದ ಗಣಿಗಾರಿಕೆ ಇಲಾಖೆ ಕೂಡಾ ಕಣ್ಣುಮುಚ್ಚಿ ಕೂರುವುದರಿಂದ ಇಂತಹ ದುರಂತಗಳು ನಡೆಯಲು ಕಾರಣವಾಗುತ್ತಿದೆ. ಭೂಗರ್ಭ ಶಾಸ್ತ್ರಜ್ಞರು, ಸುರಕ್ಷಾ ಇಂಜಿನಿಯರ್‌ಗಳು ಕ್ವಾರಿಯು ಗಣಿಗಾರಿಕೆ ನಡೆಸಲು ಸೂಕ್ತವಾಗಿದೆಯೆ ಎಂದು ಮುಂಚಿತವಾಗಿ ಪರಿಶೀಲಿಸುವುದು, ಆ ಬಳಿಕವಷ್ಟೆ ಅನುಮತಿ ನೀಡುವುದು ಕಡ್ಡಾಯವಾಗಿದ್ದರೂ ಇಂತಹ ನಿಯಮಗಳನ್ನೆಲ್ಲ ಗಾಳಿಗೆ ತೂರುವುದೂ ಸಾಮಾನ್ಯವಾಗಿದೆ. ಇಂತಹ ದುರಂತಗಳು ನಡೆದಾಗ ಮಾತ್ರ ಇವೆಲ್ಲ ಅಪಸವ್ಯಗಳ ಕುರಿತು ಚರ್ಚೆ ನಡೆಯುತ್ತದಾದರೂ ಬಳಿಕ ಮಾಮೂಲಿನಂತೆ ಮರೆತುಹೋಗುತ್ತದೆ ಎಂಬುದೇ ನಿಜವಾದ ದುರಂತ. ಗಣಿಗಾರಿಕೆ ನಡೆಸಬೇಕಾದಲ್ಲಿ ಪಾಲಿಸಬೇಕಾದ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ಮಾಡಲು ಸರಕಾರವು ಸೂಕ್ತ ಕ್ರಮ ತೆಗೆದುಕೊಳ್ಳಬೇಕಾಗಿರುವುದು ಅತ್ಯಗತ್ಯ.

# ವಿಶುದ್ಧ ಚಕ್ರ ಮತ್ತು ನಾಯಕತ್ವ-2

**ಯಾವುದೇ ವ್ಯಕ್ತಿಯ ಭಾವನೆಗೆ ನೋವಾಗದಂತೆ, ಸಮಸ್ಯೆಗಳನ್ನು ಕಠಿಣವಾಗಿ ನಿಭಾಯಿಸುವುದೇ ರಾಜತಾಂತ್ರಿಕತೆ.**

ಪೂರ್ಣ ಪರಿಪೂರ್ಣ
• ಪೂರ್ಣಪ್ರಜ್ಞ ಬೇಲೂರು
poornaprajnabelur@gmail.com



ಯಾವುದೇ ಸಂಸ್ಥೆಗಳಲ್ಲಿ, ತಂಡದಲ್ಲಿ, ಆಫೀಸ್‌ಗಳಲ್ಲಿ, ಇಲಾಖೆಗಳಲ್ಲಿ, ಕುಟುಂಬದಲ್ಲಿ ಹೀಗೆ ಎಲ್ಲಿಯೂ ಸಹ ಭಿನ್ನಾಭಿಪ್ರಾಯಗಳು ಸಹಜ. ನೀವು ಅದನ್ನು ನಿಭಾಯಿಸುವ ಕ್ರಮ ತುಂಬಾ ಮುಖ್ಯವಾಗುತ್ತದೆ. ಅವರ ಅಭಿಪ್ರಾಯಗಳನ್ನು ಅರ್ಥಾತ್ ಭಿನ್ನಾಭಿಪ್ರಾಯಗಳನ್ನು ಸರಿಯಾಗಿ ಕೇಳಿಸಿ ಕೊಳ್ಳುವುದು, ಅದನ್ನು ಸರಿಯಾಗಿ ಅರ್ಥ ಮಾಡಿಕೊಳ್ಳಲು ಪ್ರಯತ್ನಿಸುವುದು, ಅವರ ದೃಷ್ಟಿಕೋನ ಏನೆಂದು ತಿಳಿದುಕೊಳ್ಳುವದು ಮೊದಲ ಹೆಜ್ಜೆ. ಹೀಗೆ ಮಾಡುವಾಗ ಭಾವನೆಗಳ ನಿಯಂತ್ರಣ ತುಂಬಾ ಮುಖ್ಯ. ನಿಮಗೆ ಸಿಟ್ಟು, ಅಸಹನೆ, ಕಿರಿಕಿರಿ, ಆತಂಕ ಹೀಗೆ ಏನೆಲ್ಲಾ ಆಗಬಹುದು. ಅದನ್ನು ನೀವು ಯಾವ ಕಾರಣಕ್ಕೂ ವ್ಯಕ್ತಪಡಿಸಬಾರದು. ಹಾಗೂ ಅವರು ಹೇಳಿ ಮುಗಿಸುವವರೆಗೂ ಮಾತನಾಡಲೇ ಬಾರದು. ಅವರು ತುಂಬಾ ಸಮಯ ಹೇಳಿದ್ದನ್ನೇ ಹೇಳುತ್ತಿದ್ದರೆ, ನೀವು ಆಗಲೂ ಸಹಾ ಸುಮ್ಮನೆ ಕುಳಿತುಕೊಂಡಿರಬೇಕು. ಕೆಲವೊಮ್ಮೆ ಅವರು ನಿಮ್ಮಿಂದ ಯಾವುದೇ ಉತ್ತರವನ್ನು ನಿರೀಕ್ಷೆ ಮಾಡದೇ ಇರಬಹುದು ಮತ್ತು ತಮ್ಮ ಭಿನ್ನಾಭಿಪ್ರಾಯ ವ್ಯಕ್ತಗೊಳಿಸಿದ ಕೂಡಲೇ ನಿರಾಳರಾಗಿ ಎಲ್ಲವನ್ನೂ ಮರೆತು ಬಿಡಲೂ ಬಹುದು!

ನೀವು ತಾಳ್ಮೆ ಕಳೆದುಕೊಂಡು ಕೋಪದಲ್ಲಿ ಮಾತನಾಡಿದರೆ ಪರಿಸ್ಥಿತಿ ನಿಮ್ಮ ಕೈ ತಪ್ಪಿ ಹೋಗುತ್ತದೆ. ಹಾಗೆ ಪರಿಸ್ಥಿತಿ ಕೈ ತಪ್ಪಿ ಹೋದ ಅರಿವು ನಿಮಗಾದರೆ ತಕ್ಷಣ ವಿಷಯವನ್ನು ಮುಂದೆ ತಳ್ಳಿ. ಸ್ವಲ್ಪ ಸಮಯ ಬಿಟ್ಟು ಈ ಸಂಗತಿಯನ್ನು ತೆಗೆದುಕೊಳ್ಳೋಣ ಎಂದು ಸಭೆಯನ್ನು ಮುಂದೂಡಿ.

**ನಾನು ಎನ್ನುವುದು**

ನೀನು ಯಾವಾಗಲೂ ಹೀಗೆ ಎಂದು ದೂಷಿಸಿದರೆ, ಅವರ ಅಹಂಕಾರಕ್ಕೆ ಧಕ್ಕೆ ಬರುತ್ತದೆ. ಅವರು ಕೂಗಾಡಬಹುದು, ಪರಿಸ್ಥಿತಿ ಇನ್ನಷ್ಟು ಹದಗೆಡುತ್ತದೆ. ಬದಲಿಗೆ ನಾನು ಇದನ್ನು ಹೀಗೆ ಮಾಡುತ್ತೇನೆ, ನಾನಾದರೆ ಈ ರೀತಿ ವರ್ತಿಸುತ್ತೇನೆ. ನನಗೆ ಇದರಿಂದ ಬೇಸರವಾಯಿತು, ನನಗೆ ನೋವಾಯಿತು, ಎನ್ನುವ ನಾನು ಹೆಚ್ಚು ಉಪಯುಕ್ತ.

ಅವರು ಭಿನ್ನಾಭಿಪ್ರಾಯ ವ್ಯಕ್ತಪಡಿಸುವಾಗ, ಅವರಲ್ಲೂ ನಿಮ್ಮಲ್ಲೂ ಇರುವ ಸಾಮಾನ್ಯ ಸಂಗತಿಗಳು ಯಾವುವು ಎನ್ನುವುದನ್ನು ಪಟ್ಟಿ ಮಾಡಿ. ನಿಮ್ಮ ಅಂತರಂಗ ಕೆಲವೊಮ್ಮೆ ಅವರು ಹೇಳುತ್ತಿರುವುದನ್ನೇ ಹೇಳುತ್ತಿರಬಹುದು. ಅದಕ್ಕೆ ನೀವು ಸೂಕ್ತ ಸಮಾಧಾನವನ್ನೂ ಮಾಡಿಕೊಂಡಿರಬಹುದು. ಅವುಗಳ ತುಲನೆ ಮಾಡಿಕೊಳ್ಳಿ. ಆಗ ನಿಮ್ಮದೇ ವಾದ ಗೆಲ್ಲಬೇಕು ಎನ್ನುವ ಹಠ ಮಾಯವಾಗುತ್ತದೆ. ನೀವು ಅವರ ಹಂತದಲ್ಲಿ ಇದ್ದಾಗ ಹೀಗೇ ಇದ್ದಿರಿ ಎನ್ನುವುದು ಮನದೊಳಗೆ ಮೂಡುತ್ತದೆ. ಆಗ ನಿಮಗೆ ಪರಿಹಾರ ತಾನಾಗಿಯೇ ಗೋಚರಿಸುತ್ತದೆ. ಕೆಲವೊಮ್ಮೆ ಅವರನ್ನು ಗೆಲ್ಲಲು ಬಿಡಿ. ಹಾಗಂತಾ ಅವರಿಗೆ ಅಧಿಕಾರವನ್ನು ಬಿಟ್ಟುಕೊಡಿ ಎಂದು ಹೇಳುವುದಿಲ್ಲ, ಕೆಲವು ಸಂಗತಿಗಳ ಜವಾಬ್ದಾರಿಯನ್ನು ಕೊಟ್ಟು, ನೀವೂ ಸಹಾ ಸಹಕರಿಸಿ. ಆಗ ಅವರು ನಿಮ್ಮ ಔದಾರ್ಯವನ್ನು ಸ್ವೀಕರಿಸಲೇ ಬೇಕಾಗುತ್ತದೆ. ಕೆಲವೊಮ್ಮೆ ಇಬ್ಬರಿಗೂ ಒಪ್ಪಿಗೆಯಾಗುವ ಮಾರ್ಗವನ್ನು ಅನುಸರಿಸಿ.

**ದೃಷ್ಟಿಕೋನ**

ಪ್ರತಿಯೊಬ್ಬರೂ ಬೆಳೆದು ಬಂದ ಹಿನ್ನೆಲೆ ಮತ್ತು ಅವರ ಜೀನ್‌ನಿಂದಾಗಿ ಅವರ ಆಲೋಚನಾ ಶಕ್ತಿ ಭಿನ್ನವಾಗಿಯೇ ಇರುತ್ತದೆ. ಯಾರೂ ಸಹಾ ನಿಮ್ಮಂತೆ ಅಲ್ಲ ಎನ್ನುವುದನ್ನು ನೆನಪಿಡಿ. ಯಾರದೇ ಅಭಿಪ್ರಾಯ ಅರ್ಥಾತ್ ಭಿನ್ನಾಭಿಪ್ರಾಯ ಸರಿಯಿಲ್ಲವಾದರೂ ಅದನ್ನು ಗೌರವಯುತವಾಗಿ ನಿರಾಕರಿಸಿ. ಎಂದಿಗೂ ಅವರನ್ನು ಅವಮಾನ ಮಾಡಬೇಡಿ. ಕೀಳಾಗಿ ಕಾಣಬೇಡಿ. ನಿರ್ಲಕ್ಷ್ಯ ಮಾಡಬೇಡಿ. ಭಿನ್ನಾಭಿಪ್ರಾಯಗಳನ್ನು ಗೆಲ್ಲುವುದು, ಹೊಸಕಿಹಾಕುವುದು ಮುಖ್ಯವಲ್ಲ, ಅಥವಾ ನೀವೇ ಅದೆಲ್ಲದರಿಂದ ಓಡಿ ಹೋಗುವುದೂ ಸಹಾ ಸರಿಯಲ್ಲ. ಸಂಬಂಧಗಳನ್ನು ಉಳಿಸಿಕೊಳ್ಳುವದು, ಸಂಸ್ಥೆಯಲ್ಲಿ, ಕುಟುಂಬದಲ್ಲಿ, ಸಂಘಟನೆಯಲ್ಲಿ ಇದ್ದು ನಿರ್ವಹಣೆ ಮಾಡುವುದು ಮುಖ್ಯ.

ರಾಜತಾಂತ್ರಿಕತೆ ಎನ್ನುವುದು ಎಂದಿಗೂ ಸಿಹಿಯಾಗಿ ಮಾತನಾಡಿ ಎಲ್ಲರೊಂದಿಗೆ ಒಳ್ಳೆಯವನು, ಆದರೆ ನಿಸ್ಸಹಾಯಕ ಎಂದು ಹೇಳಿಸಿಕೊಳ್ಳುವುದಲ್ಲ. ಅದೊಂದು ಕಲೆ; ವಿಭಿನ್ನ ವ್ಯಕ್ತಿಗಳನ್ನು, ವ್ಯಕ್ತಿತ್ವಗಳನ್ನು, ಹಿತಾಸಕ್ತಿಗಳನ್ನು, ಸಂಘರ್ಷಗಳನ್ನು, ಸಮಸ್ಯೆಗಳನ್ನು, ಅಧಿಕಾರವನ್ನು, ವ್ಯವಸ್ಥೆಯನ್ನು, ಕುಟುಂಬವನ್ನು, ಅಪರಾಧವನ್ನು ಹೀಗೆ ಎಲ್ಲವನ್ನೂ ಸಂಭಾಷಣೆಯ ಮೂಲಕ ವ್ಯವಸ್ಥಿತವಾಗಿ ನಿರ್ವಹಿಸುವ ಕಲೆ.

**ಪರಿಸ್ಥಿತಿಗೆ ತಕ್ಕ ಮಾತು**

ನಾಯಕರು ತಾವು ಆಡುವ ಮಾತಿನ ಪ್ರತಿಯೊಂದು ಪದಗಳ ತೂಕವನ್ನು ಬಲ್ಲವನಾಗಿರಬೇಕು. ಕೋಪದಲ್ಲಿ, ಆತಂಕದಲ್ಲಿ, ಒತ್ತಡದಲ್ಲಿ ಯಾವಾಗಲೂ ನಿರ್ಧಾರಗಳನ್ನು ತೆಗೆದುಕೊಳ್ಳಲೇ ಬಾರದು. ಆತುರವಂತೂ ಎಂದಿಗೂ ಸಲ್ಲದು. ಕಠಿಣವಾದ ನಿರ್ಧಾರಗಳನ್ನು ತೆಗೆದುಕೊಳ್ಳುವಾಗಲೂ ಸಮರ್ಥವಾದ ಸಮರ್ಥನೆಗಳು ನಿಮ್ಮಲ್ಲಿ ಇರಬೇಕು. ಸಾಕ್ಷಿಗಳು, ದೃಷ್ಟಾಂತಗಳು ಇರಬೇಕು. ಉದಾಹರಣೆಗಳ ಮೂಲಕ ಜನಸಾಮಾನ್ಯರಿಗೆ ಅರ್ಥವಾಗುವಂತೆ ವಿವರಿಸಿ ಹೇಳಿಕೆ ನೀಡಬೇಕು. ನಿಮ್ಮ ಶಾಂತತೆ ನಿಮ್ಮ ಬಲ. ನಿಮ್ಮ ತಾಕತ್ತು, ನಿಮ್ಮ ವ್ಯಕ್ತಿತ್ವ. ಅದು ಇಡೀ ತಂಡಕ್ಕೆ ಧೈರ್ಯವನ್ನು ಕೊಡುತ್ತದೆ. ಇದನ್ನು ಭಾವನಾತ್ಮಕ ಬುದ್ಧಿವಂತಿಕೆ ಎನ್ನುತ್ತಾರೆ. ಸೋತು ಸುಣ್ಣವಾದರೂ, ಎದೆ ಸೆಟೆಸಿ ನಿಲ್ಲುವವ ಎಂದೆಂದಿಗೂ ನೆನೆಪಿನಲ್ಲಿ ಉಳಿಯುವ ನಾಯಕನಾಗಿರುತ್ತಾನೆ ಎನ್ನುವುದನ್ನು ಮರೆಯಬೇಡಿ.

ನಿಮ್ಮೊಳಗೊಂದು ಸಹಾನುಭೂತಿ ಸದಾ ಇರಲಿ. ಅದು ನಿಮ್ಮನ್ನು ಮೀರಿ ಹೋಗುವಂತೆ ಇರಬಾರದು. ನಿಮ್ಮ ತಂಡದ ಸದಸ್ಯರ ಆತಂಕ, ಅಗತ್ಯಗಳನ್ನು ಅವರು ಹೇಳದೇ ನೀವು ಅರ್ಥ ಮಾಡಿಕೊಳ್ಳುತ್ತಿರಬೇಕು. ಆಗ ನಿಮಗೆ ಯಾವುದೇ ವಿರೋಧ ಎದುರಾಗುವುದಿಲ್ಲ. ರಾಜತಾಂತ್ರಿಕತೆ ಎಂದರೆ ನಿಮ್ಮ ತಂಡದವರನ್ನು ಸೋಲಿಸಿ ನೀವು ಗೆಲ್ಲುವುದಲ್ಲ! ಸಂಘರ್ಷವನ್ನು ನಿರ್ವಹಣೆ ಮಾಡುವುದು. ಎರಡೂ ಕಡೆಯವರಿಗೆ ಸಲ್ಲುವ ತೀರ್ಮಾನವನ್ನು ನೀಡುವುದು. ಇದರಿಂದ ಒಗ್ಗಟ್ಟು ಉಳಿಯುತ್ತದೆ ಮತ್ತು ಬಾಂಧವ್ಯ ಗಟ್ಟಿಯಾಗುತ್ತದೆ.

ತಂಡದಲ್ಲಿ ಭಿನ್ನಾಭಿಪ್ರಾಯಗಳು ಬಂದಾಗ ಯಾವುದೇ ಒಂದು ಪಕ್ಷದ ಕಡೆ ವಾಲುವುದು ಸರಿಯಲ್ಲ. ಇಬ್ಬರ ಅಭಿಪ್ರಾಯಗಳನ್ನು ಆಲಿಸುವುದು ಮತ್ತು ಪಕ್ಷಪಾತವಿಲ್ಲದ ತೀರ್ಮಾನಗಳನ್ನು ನೀಡುವುದು ಅಗತ್ಯ. ನಿಮ್ಮ ವೈಯಕ್ತಿಕ ಆಲೋಚನೆಗಳು, ಇಷ್ಟ ಕಷ್ಟಗಳು, ಹಿತಾಸಕ್ತಿ ಇವೆಲ್ಲಾ ನಾಯಕರಾದ ನಿಮಗೆ ಶೋಭೆ ತರುವುದಿಲ್ಲ. ಸಾರ್ವಜನಿಕವಾಗಿ ಎಂದಿಗೂ ಟೀಕಿಸಬೇಡಿ. ಹಿಂದೆ ಬಿಟ್ಟು ಮಾತುಗಳನ್ನು ಆಡಬೇಡಿ. ಟೀಕೆಗಳನ್ನು, ಹೀಗಳಿಕೆಯನ್ನು ಎಲ್ಲರೂ ಇರುವಾಗ ಮಾಡಲೇ ಬೇಡಿ. ತಪ್ಪು ಮಾಡಿದವರನ್ನು ಖಾಸಗಿಯಾಗಿ ಭೇಟಿ ಮಾಡಿ. ಅವರೊಂದಿಗೆ ಸಮಾಲೋಚನೆ ನಡೆಸಿ. ಅವರ ಸ್ವಾಭಿಮಾನಕ್ಕೆ ಧಕ್ಕೆ ಬಾರದಂತೆ ನಿರ್ವಹಣೆ ಮಾಡಿ.

**ಸಂಧಾನ ಮತ್ತು ಸಂಬಂಧಗಳ ನಿರ್ಮಾಣ**

ನೀವು ಅಧಿಕಾರ ಚಲಾಯಿಸಿ ಯಾವಾಗಲೂ ಗೆಲ್ಲಬಹುದು ಎಂದು ಅಂದುಕೊಂಡರೆ ಅದು ನಿಮ್ಮ ದೊಡ್ಡ ಸೋಲು. ಸಂಸ್ಥೆಯ ಪ್ರಭಾವಿ ವ್ಯಕ್ತಿಗಳೊಂದಿಗೆ ಸೌಹಾರ್ದ ಸಂಬಂಧ ಹೊಂದಿರುವುದು, ಅವರೊಂದಿಗೆ ಆಗಾಗ ಬೆರೆತು ಸಲಹೆ, ಸೂಚನೆಗಳನ್ನು ಪಡೆಯುತ್ತಿರುವುದು ತುಂಬಾ ಮುಖ್ಯ. ನೀವು ನಾಯಕರೇ ಇರಬಹುದು, ಆದರೆ ಅವರುಗಳು ನಿರ್ದೇಶಕರು. ಅವರು ಆಧಾರಸ್ತಂಭಗಳು. ಅವರು ಗೌರವ ಸದಸ್ಯರು. ಅವರು ನಿಮ್ಮದೇ ಸ್ಥಾನವನ್ನು ನಿಭಾಯಿಸಿ ನಿವೃತ್ತರಾದವರು. ಅವರು ಆರ್ಥಿಕವಾಗಿ ಪ್ರಬಲರು. ಅವರು ಬುದ್ಧಿವಂತರು. ಜ್ಞಾನಿಗಳು. ಹೀಗೆ ಏನೆಲ್ಲಾ ಆದವರು. ಅವರೊಂದಿಗಿನ ಮಾತುಕತೆಗಳು ನಿಮ್ಮನ್ನೂ ಸಹಾ ಎತ್ತರಕ್ಕೆ ಏರಿಸುತ್ತದೆ. ಸಂಬಂಧವನ್ನು ಇನ್ನಷ್ಟು ಬಿಗಿಮಾಡುತ್ತದೆ. ನೀವು ಸಂದಿಗ್ಧ ಪರಿಸ್ಥಿತಿಯಲ್ಲಿ ಇದ್ದಾಗ ಈ ಸಂಬಂಧಗಳೇ ನಿಮ್ಮನ್ನು ಉಳಿಸುತ್ತದೆ. ಬಂದಿರುವ ಬಿಕ್ಕಟ್ಟುಗಳನ್ನು ನಿವಾರಣೆ ಮಾಡುತ್ತವೆ. ಅವರೆಲ್ಲರೂ ನಿಮ್ಮ ಪರವಾಗಿ ನಿಂತು ಸಮಸ್ಯೆಗಳನ್ನು ಕರಗಿಸಿ ಬಿಡುತ್ತಾರೆ.

ಸಂಧಾನ ಎನ್ನುವುದು ಸಹ ಒಂದು ಮಾತಿನ ಕಲೆ. ಇಲ್ಲಿ ಮಾತೇ ಮುಖ್ಯ. ಅದೂ ನಿಮ್ಮ ಧ್ವನಿ ಏನನ್ನು ಸೂಚಿಸುತ್ತದೆ ಎನ್ನುವುದರ ಮೇಲೆ ಸಂಧಾನ ನಿಂತಿದೆ. ನೀವು ಉದ್ವೇಗಕ್ಕೆ ಒಳಗಾಗದೇ, ಆತುರ ಪಡದೇ, ಯಾವುದೇ ಪೂರ್ವಾಗ್ರಹಗಳಿಲ್ಲದೇ ಅತ್ಯಂತ ಶಾಂತವಾಗಿ, ಬುದ್ಧಿಪೂರ್ವಕ ಮತ್ತು ಹೃದಯಪೂರ್ವಕವಾಗಿ ವಿವಾದಗಳನ್ನು, ಭಿನ್ನಭಿಪ್ರಾಯಗಳನ್ನು ಬಗೆಹರಿಸುವ ವಾಕ್ಚಾತುರ್ಯ ಲಭಿಸಬೇಕು ಎಂದಾದರೆ ನಿಮ್ಮ ವಿಶುದ್ಧ ಚಕ್ರ ಜಾಗೃತವಾಗಲೇ ಬೇಕು. ಅದಕ್ಕಾಗಿ ನಿಮ್ಮ ಪ್ರಯತ್ನ ಮಾಡಬೇಕು. ಆಗ ನೀವು ಎಂದೆಂದಿಗೂ ಸಮತೋಲನದಲ್ಲೇ ಇರುತ್ತೀರಿ.

**ಸಂದರ್ಭಕ್ಕೆ ತಕ್ಕಂತೆ ಹೊಂದಾಣಿಕೆ**

ಕೆಲವೊಮ್ಮೆ ಅಧಿಕಾರ, ಹುದ್ದೆ, ಸ್ಥಾನ, ಮಾನ, ಹಣ, ಗೌರವ ಹೀಗೆಗಳಿಸಲು ಕೆಲವನ್ನು ಕಳೆದುಕೊಳ್ಳುವುದು ಅನಿವಾರ್ಯ. ಅದು ಸಮಯ, ಸ್ಥಾನ, ಹಣ, ಶಕ್ತಿ, ಗೆಳೆಯರು, ಆತ್ಮೀಯರು ಹೀಗೆ ಯಾವುದೋ ಒಂದನ್ನು ಕಳೆದುಕೊಳ್ಳಲು ಹಿಂಜರಿಯಬಾರದು. ಆದರೆ ನಿಮ್ಮ ಆತ್ಮವಿಶ್ವಾಸ, ಧೈರ್ಯ, ಸ್ವಾಭಿಮಾನ, ಸ್ವಾವಲಂಬನೆ ಅಥವಾ ಅಸ್ಮಿತೆ (ಐಡೆಂಟಿಟಿ) ಗಳಾದರೆ ಮತ್ತೊಮ್ಮೆ ಆಲೋಚನೆ ಮಾಡಿ. ಗೆಳೆತನ ಮತ್ತು ಆತ್ಮೀಯತೆ ಎನ್ನುವುದೆಲ್ಲಾ ಭಾವನಾತ್ಮಕವಾಗಿರುತ್ತದೆ. ಏನೇ ಆದರೂ ನಿಮಗೆ ನೀವೇ ಮುಖ್ಯವೇ ಹೊರತು, ಉಳಿದವರೆಲ್ಲಾ ಅನ್ಯರು. ಹಠಮಾರಿತನ ಯಾವಾಗಲೂ ಒಳ್ಳೆಯದಲ್ಲ. ಹೊಸ ಮಾಹಿತಿಗಳು, ವಿಭಿನ್ನವಾದ ಆದರೆ ಯೋಗ್ಯವಾದ ದೃಷ್ಟಿಕೋನಗಳು ಸಿಕ್ಕಾಗ ಅದನ್ನು ಅಳವಡಿಸಿ ಕೊಳ್ಳುವುದು, ನಿಮ್ಮ ದೃಷ್ಟಿಕೋನವನ್ನು ಬದಲಾಯಿಸಿಕೊಳ್ಳುವುದು ಸಹಾ ಮುಖ್ಯ.

ಸಾಫ್ಟ್ ಆನ್ ದಿ ಪೀಪಲ್, ಹಾರ್ಡ್ ಆನ್ ದಿ ಪ್ರಾಬ್ಲೆಮ್ ಎನ್ನುವ ಮಾತಿದೆ. ಸದಾ ಸೌಮ್ಯವಾಗಿರಿ ಹಾಗೂ ದೃಢವಾಗಿರಿ. ಅಥವಾ ನಿರ್ಲಿಪ್ತರಾಗಿರಿ. ಯಾವುದೇ ವ್ಯಕ್ತಿಯ ಭಾವನೆಗಳಿಗೆ ನೋವಾಗದಂತೆ, ಸಮಸ್ಯೆಗಳನ್ನು ಕಠಿಣವಾಗಿ ನಿಭಾಯಿಸುವುದೇ ರಾಜತಾಂತ್ರಿಕತೆ. ಅಂತಹವರನ್ನು ಮುತ್ಸದ್ದಿಗಳು ಎಂದು ಕರೆಯುತ್ತಾರೆ.

# ತಿಳಿದವರು ಆಶ್ರಯಿಸುವುದು ಯಾರನ್ನು?

**ಅರ್ಥಿತಾ ವಿಭವಸ್ತ್ಯಾಗಃ ಸ್ವಾತಂತ್ರ್ಯಮುಚಿತಜ್ಞತಾ ।**
**ಏತತ್ ಪಂಚಗುಣೋಪೇತಂ ಆಶ್ರಯಂತೀಶ್ವರಂ ಬುಧಾಃ ।। – ಕರ್ನಾಟಕ ಪಂಚತಂತ್ರ**

ಅರ್ಥಿತ್ವ, ಐಶ್ವರ್ಯ, ತ್ಯಾಗ, ಸ್ವಾತಂತ್ರ್ಯ ಹಾಗೂ ಉಚಿತಜ್ಞತೆ – ಈ ಐದು ಗುಣಗಳುಳ್ಳ ಯಜಮಾನನನ್ನು ತಿಳಿದವರು ಆಶ್ರಯಿಸುತ್ತಾರೆ – ಎಂಬುದು ಶ್ಲೋಕಾರ್ಥ.

'ಅನಾಶ್ರಯಾ ನ ಶೋಭಂತೇ ಪಂಡಿತಾ ವನಿತಾಲತಾಃ।' ಎಂಬ ಸುಭಾಷಿತವೊಂದಿದೆ. ಆಶ್ರಯವಿಲ್ಲದೆ ಪಂಡಿತರು, ವನಿತೆಯರು ಹಾಗೂ ಬಳ್ಳಿಗಳು ಶೋಭಿಸುವುದಿಲ್ಲ ಎಂಬುದು ಇದರ ಅರ್ಥ. ಪಾಂಡಿತ್ಯವನ್ನು, ಕವಿತ್ವವನ್ನು ಜ್ಞಾನಿಗಳನ್ನು ಪೋಷಿಸಬೇಕು.

ಶ್ಲೋಕ ಸಾಗರ
• ಡಾ. ಸೋಂದಾ ಭಾಸ್ಕರ ಭಟ್



ರಾಜಾಶ್ರಯ ದೊರೆತು, ಇಂಥವರನ್ನು ಪ್ರೋತ್ಸಾಹಿಸಿದರೆ ಸತ್ವಪೂರ್ಣ ಸಾಹಿತ್ಯಗಳ ಉದಯವಾಗುತ್ತದೆ. ವಿಶೇಷ ಸಂಶೋಧನೆಗಳು ನಡೆದು ಹೊಸತನ್ನು ನೀಡಲು ಸಾಧ್ಯ. ಆಗಲೇ ಒಂದು ಬಗೆಯ ಶೋಭೆ. ವನಿತೆಯರಿಗೆ ಪುರುಷರ ಆಶ್ರಯ ಬೇಕು. ಇದರಿಂದ ಸ್ತ್ರೀಯರ ಗೌರವ ಹೆಚ್ಚುತ್ತದೆ. ಬಳ್ಳಿಗಳಿಗೆ ಮರಗಿಡಗಳ ಆಶ್ರಯ ಬೇಕು. ಆಗಲೇ ಅವುಗಳು ಚೆನ್ನಾಗಿ ಹಬ್ಬಿ ಹೂ ಹಣ್ಣುಗಳನ್ನು ಸಾಕಷ್ಟು ನೀಡಬಲ್ಲವು. ಆದ್ದರಿಂದಲೇ ಇವುಗಳು ಆಶ್ರಯವನ್ನು ಅರಸಿ ಸಾಗುತ್ತವೆ. ಜನರು ಅಥವಾ ಒಂದಿಷ್ಟು ಮೌಲ್ಯಗಳು ವಿಜೃಂಭಿಸಲು ಅಥವಾ ಅರಳಲು ಯೋಗ್ಯ ಯಜಮಾನ ಬೇಕಾಗುತ್ತದೆ. ಉತ್ತಮ ಗುಣವುಳ್ಳ ಯಜಮಾನ ಮಾತ್ರ ಇದಕ್ಕೆ ಪಾತ್ರನಾಗುತ್ತಾನೆ. ಇಂಥವನನ್ನೆ ಅರಸಿ ಮೌಲ್ಯಗಳು ಆಶ್ರಯಿಸುತ್ತವೆ. ಆಶ್ರಯವನ್ನು ಅರಸಿಹೋಗುವ ಯಜಮಾನನಲ್ಲಿ ಕನಿಷ್ಠ ಐದು ಗುಣಗಳಾದರೂ ಇರಬೇಕಾಗುತ್ತದೆ. ಈ ಗುಣಗಳ ಕುರಿತಾಗಿಯೇ ಅರಿವನ್ನು ಪ್ರಕೃತ ಸುಭಾಷಿತ ತಿಳಿಸುತ್ತದೆ. ಮೊದಲನೆಯದು ಅರ್ಥಿತ್ವ. ಅಂದರೆ ಬಯಸಿ ಬಂದವರಿಗೆ ಏನನ್ನಾದರೂ ಪ್ರೀತಿಯಿಂದ ನೀಡುವ ಔದಾರ್ಯವಿರಬೇಕು. ವ್ಯಕ್ತಿ ಮಾನ್ಯನಾಗುವುದು ನೀಡುವುದರಿಂದಲೇ, ಕೊಡುವವನ ಸಮೀಪಕ್ಕೆ ಬೇಡುವವರು ಬರುತ್ತಾರೆಯೇ ವಿನಾ ಜಿಪುಣನ ಬಳಿ ಸಾರಲಾರರು. ಕೊಡುವ ಮನೋಭಾವ ಮೂಡುವುದಕ್ಕೂ ಸಂಸ್ಕಾರ ಬೇಕಾಗುತ್ತದೆ. ಎರಡನೆಯದು ವಿಭವಃ . ಅಂದರೆ ಸಂಪತ್ತು ಕೇಳಿ ಪಡೆಯಲು ಬಂದವನಿಗೆ ನೀಡುವುದಕ್ಕೆ ಸಂಪತ್ತಿರಬೇಕು. ಸಂಪತ್ತಿರುವ ವ್ಯಕ್ತಿ ದಾನ ಮಾಡುವ ಗುಣವನ್ನು ಹೊಂದಿದ್ದರೇನೇ ಜನರು ಬರುತ್ತಾರೆ. ಬಿಡಿಕಾಸನ್ನೂ ಕೊಡದ, ಬಾಯಿಗೆ ಬಂದಂತೆ ಬೈದು ಕಳಿಸುವ ವ್ಯಕ್ತಿ ಎಷ್ಟೇ ಶ್ರೀಮಂತನಾದರೂ ಜನರು ಅವನ ಸಮೀಪ ಸುಳಿಯುವುದಿಲ್ಲ. ಮೂರನೆಯದು ತ್ಯಾಗಭಾವ. ತ್ಯಾಗದ ಮನೋಭಾವ ಇದ್ದವನು ಮಾತ್ರ ಸಂತೋಷದಿಂದ ನೀಡಿ ತೃಪ್ತಿಯನ್ನು ಹೊಂದಬಲ್ಲ. ಅಮೃತತ್ವಕ್ಕೆ ಕಾರಣವಾದ ತ್ಯಾಗದ ಸಂಸ್ಕಾರ ಹೊಂದಿದವನಲ್ಲಿ ಜನರು ಹೋಗುತ್ತಾರೆ.

ನಾಲ್ಕನೆಯದಾಗಿ ಸ್ವಾತಂತ್ರ್ಯ. ತನ್ನೊಂದಿಗಿರುವವರು ಸರಿಯಾಗಿ ದುಡಿಯಬೇಕೆಂಬ ಹಂಬಲವಿರಬೇಕಾದದ್ದು ಸರಿ. ಅವರಿಗೂ ತಮ್ಮ ಕರ್ತವ್ಯ, ಅನುಭವದ ಹಿನ್ನೆಲೆಯಲ್ಲಿ ಮುಂದುವರಿಯಲು ಸ್ವಾತಂತ್ರ್ಯ ನೀಡಬೇಕು. ಸ್ವೇಚ್ಛೆಯಾಗದ ಸ್ವಾತಂತ್ರ್ಯ ನೀಡಿದರೇನೇ ಆಶ್ರಯಿಸಿದವರು ಉತ್ತಮವಾಗಿ ಕರ್ತವ್ಯ ನಿರ್ವಹಿಸಬಲ್ಲರು.

ಕೊನೆಯದಾಗಿ, ಅಂದರೆ ಐದನೆಯದಾಗಿ ಉಚಿತಜ್ಞತೆ. ಸಾಧಕ ಬಾಧಕಗಳನ್ನು ಮನಗಂಡು, ಸಕಾಲವನ್ನು ಗುರುತಿಸಿ ತೊಡಗುವಿಕೆಯನ್ನು ಉಚಿತಜ್ಞತೆ ಎನ್ನಬಹುದು. ಇಂತಹ ಗುಣ ಉಳ್ಳವನನ್ನು ಜನರು ಆಶ್ರಯಿಸುತ್ತಾರೆ. ನಂಬಿ ನಡೆದುಕೊಳ್ಳುತ್ತಾರೆ.

ಈ ಐದು ಗುಣಗಳಿಗೆ ಆಶ್ರಯತಾಣನಾದವನನ್ನು ಜನರು ನಂಬುತ್ತಾರೆ. ಆಶ್ರಯಿಸುತ್ತಾರೆ. ಎಲ್ಲರಲ್ಲಿಯೂ ಈ ಐದು ಗುಣಗಳು ಮನೆ ಮಾಡುವಂತಾಗಬೇಕು.

# ಮಾನವ ಮಿದುಳು-ಆಧುನಿಕ ವಿಜ್ಞಾನ-ಭಾರತೀಯ ತತ್ವಜ್ಞಾನ

ಒಳನೋಟ
• ಹೆ.ಬಾ. ಮಲ್ಯ



ಮಿದುಳೆಂಬುದು ದೇವರು ಮಾನವನಿಗೆ ಕೊಟ್ಟ ಒಂದು ಅದ್ಭುತ ಯಂತ್ರ. ಶರೀರ, ಪ್ರಾಣ, ಮನಸ್ಸು, ಬುದ್ಧಿ ಇವೆಲ್ಲವನ್ನೂ ಜೀವಾತ್ಮ ನಿಯಂತ್ರಿಸುವುದು ಈ ಮಾನವ ಮಿದುಳಿನ ಮೂಲಕವೇ ಎನ್ನಬಹುದು. ಮಿದುಳು ನರ, ನರಕೋಶ, ನರಮಂಡಳಗಳ ಮೂಲಕ ಕೆಲಸ ಮಾಡುತ್ತದೆ. ಯೋಗ ಹಾಗೂ ಪ್ರಾಣಾಯಾಮದಲ್ಲಿ 'ನಾಡಿ' ಎಂಬ ಪದವನ್ನು ನಾವು ಕೇಳಿರುತ್ತೇವೆ. 'ನರ-ನಾಡಿಗಳು' ಎಂದೂ ಹೇಳುವುದಿದೆ. ಮಿದುಳು, ಮಣಿಶಿರ, ಬೆನ್ನುಹುರಿಯ ಮೂಲಕ ಹೊರಟ ಲಕ್ಷಾಂತರ ನರಗಳು ದೇಹಾದ್ಯಂತ ವ್ಯಾಪಿಸಿವೆ. ಇವು ಕಣ್ಣಿಗೆ ಕಾಣಿಸುತ್ತವೆ. ಆದರೆ ಕಣ್ಣಿಗೆ ಕಾಣಿಸುವ ನರಗಳನ್ನು ಸಕ್ರಿಯಗೊಳಿಸುವ ಸೂಕ್ಷ್ಮನಾಡಿಗಳು ಕಣ್ಣಿಗೆ ಕಾಣಿಸುವುದಿಲ್ಲ. ಪ್ರಾಣಾಯಾಮದಲ್ಲಿ ಕಪಾಲಭಾತಿಗೆ ತುಂಬ ಮಹತ್ವವಿದೆ. ಕಪಾಲಭಾತಿ ಮಾಡುವಾಗ ಹೊಟ್ಟೆಯ ಹೊಕ್ಕುಳಿನ ಭಾಗ ಮೇಲೆ ಕೆಳಗೆ ಹೋಗುವುದನ್ನು ಗಮನಿಸಬಹುದು. ಕಣ್ಣಿಗೆ ಕಾಣಿಸದ ಸೂಕ್ಷ್ಮನಾಡಿಗಳು ಹೊರಡುವುದು ಹೊಕ್ಕುಳಿನಿಂದ ಎನ್ನಲಾಗಿದೆ. ಶಿಶು ತಾಯಿಯ ಗರ್ಭಾಶಯದಿಂದ ಹೊರಬಂದ ಮೇಲೆ ಹೊಕ್ಕುಳ ಬಳ್ಳಿಯನ್ನು ಛೇದಿಸಲಾಗುತ್ತಿದೆ. ಅದರ ಕುರುಹೇ ನಾಭಿ ಅಥವಾ ಹೊಕ್ಕಳು. ನಾಭಿಯಿಂದ 72 ಸಾವಿರ ಸೂಕ್ಷ್ಮನಾಡಿಗಳು ಹೊರಟು ಮುಂದೆ ಬಿಲಿಯಾಂತರ ಟಿಸಿಲುಗಳಾಗಿ ಒಡೆದು ಮಾನವ ದೇಹದಲ್ಲಿರುವ 100 ಬಿಲಿಯನ್ ಜೀವಕೋಶಗಳನ್ನು ಸಂಪರ್ಕಿಸುತ್ತವೆ. ನರಗಳೊಳಗೆ ಪ್ರವಹಿಸುವ ಶಕ್ತಿ ಈ ಸೂಕ್ಷ್ಮನಾಡಿಗಳೇ. ಆಧುನಿಕ ಜೀವಶಾಸ್ತ್ರವೂ ಈಗ ಇದನ್ನೆಲ್ಲ ಒಪ್ಪಲಾರಂಭಿಸಿದೆ. ಕಪಾಲಭಾತಿ ಮುಂತಾದ ಪ್ರಾಣಾಯಾಮ ಮಾಡುವಾಗ ಈ ಸೂಕ್ಷ್ಮನಾಡಿಗಳು ಸಚೇತನಗೊಂಡು ಪ್ರತಿ ಜೀವಕೋಶವನ್ನೂ ಸಚೇತನಗೊಳಿಸಿ ಅವುಗಳಲ್ಲಿ ಪ್ರಾಣಶಕ್ತಿ ತುಂಬಿ ವಿಷಪದಾರ್ಥ (Toxins) ಗಳನ್ನು ಹೊರ ಹಾಕುತ್ತವೆ. ಒಂದು ನ್ಯೂರಾನ್‌ನಿಂದ ಇನ್ನೊಂದು ನ್ಯೂರಾನ್‌ಗಳೊಳಗೆ ಎಲೆಕ್ಟ್ರೋಮ್ಯಾಗ್ನೆಟಿಕ್ ತರಂಗಗಳ ಮೂಲಕ ಪರಸ್ಪರ ಸಂಪರ್ಕ ಏರ್ಪಡುತ್ತದೆ. ಪ್ರಾಣಾಯಾಮದಿಂದ ಪ್ರತಿ ಜೀವಕೋಶವೂ ಆರೋಗ್ಯಪೂರ್ಣವಾಗಿ ಪ್ರತಿಅಂಗವೂ ಆರೋಗ್ಯಪೂರ್ಣವಾಗುತ್ತದೆ.

ಮಿದುಳಿನಲ್ಲಿ ಎರಡು ಭಾಗಗಳಿವೆ. ಎಡ ಹಾಗೂ ಬಲ. ಎಡಗಡೆಯ ಭಾಗ ಶರೀರದ ಬಲಭಾಗದ ಅಂಗಗಳನ್ನೂ, ಬಲಭಾಗದ ಮಿದುಳು ಶರೀರದ ಎಡಭಾಗವನ್ನೂ ನಿಯಂತ್ರಿಸುತ್ತದೆ. ಮನಸ್ಸಿನಲ್ಲಿ ಎರಡು ಭಾಗಗಳಿವೆ. ಒಂದು ಹೊರ ಮನಸ್ಸು, ಇನ್ನೊಂದು ಒಳಮನಸ್ಸು. (Sub-conscious mind = ಅಂತರ್ಮನ) ಹೊರಮನಸ್ಸು ಪಂಚೇಂದ್ರಿಯಗಳ ಮೂಲಕ ಹೊರ ಜಗತ್ತಿನ ಅನುಭವಗಳನ್ನು ಪಡೆಯುತ್ತದೆ. ದೃಷ್ಟಿ, ಶ್ರವಣ, ಆಘ್ರಾಣ, ರಸನೆ, ಸ್ಪರ್ಶಜ್ಞಾನ ಎಂಬ ಪಂಚೇಂದ್ರಿಯಗಳು. ಹೊರಜಗತ್ತು ಈ ಐದು ಜ್ಞಾನೇಂದ್ರಿಯಗಳಲ್ಲಿ ಅಡಗಿದೆ. ಬಾಹ್ಯ ಜಗತ್ತನ್ನು ನೋಡಲು, ಅನುಭವ ಪಡೆಯಲು ಬೇರೆ ಯಾವ ಮಾರ್ಗವೂ ಇಲ್ಲ. ಅಂದರೆ ಸರ್ವಜಗತ್ತು ಈ ಐದು ಸಾಧನಗಳೊಳಗೆ ಅಡಗಿದೆ ಎನ್ನಬಹುದು. ಇವು ಹೊರ ಮನಸ್ಸು, ಪ್ರಾಣ, ಬುದ್ಧಿ, ವಿವೇಚನೆಗಳ ಮೂಲ ಭೌತಿಕ, ಲೌಕಿಕ ಅವಶ್ಯಕತೆಗಳನ್ನು ಪೂರೈಸಿಕೊಳ್ಳಲು ನೆರವಾಗುತ್ತವೆ. ಒಳಮನಸ್ಸಿಗೆ ಅದ್ಭುತ ಶಕ್ತಿ ಇದೆ. ಶ್ವಾಸೋಚ್ಛ್ವಾಸ ಕ್ರಿಯೆ, ಜೀರ್ಣಕ್ರಿಯೆ, ರಕ್ತಪರಿಚಲನೆ, ಹೃದಯಬಡಿತ, ದೇಹದ ಉಷ್ಣಾಂಶ ಕಾಯ್ದಿಡುವಿಕೆ, ಸತ್ತ ಜೀವಕೋಶಗಳನ್ನು ಹೊರಹಾಕಿ ಹೊಸ ಜೀವಕೋಶಗಳ ಸೃಷ್ಟಿ, ಸವೆದುಹೋದ ಪ್ರತಿ ಅಂಗಾಂಗಗಳ ಪುನರ್‌ರಚನೆ, ಕನಸುಗಳು, ಕಣ್ಣಿನ ರೆಪ್ಪೆ ಬಡಿಯುವುದು ಇತ್ಯಾದಿ ಎಲ್ಲ ಕ್ರಿಯೆಗಳನ್ನು ನಿರ್ವಹಿಸುತ್ತದೆ. ಅತೀಂದ್ರಿಯ ಶಕ್ತಿಗಳು ಅಂತರ್‌ಬೋಧೆಗೆ ಸಂಬಂಧಪಟ್ಟವುಗಳು. ಪ್ರಾಣವು ಒಳ ಮನಸ್ಸುಗಳನ್ನು ಯೋಗ, ಪ್ರಾಣಾಯಾಮಗಳ ಮೂಲಕ ನಿಯಂತ್ರಿಸುವುದರಿಂದ ಅಷ್ಟಸಿದ್ಧಿಗಳನ್ನು ಪಡೆಯಲು ಸಾಧ್ಯ ಎನ್ನಲಾಗಿದೆ. ಅಣಿಮಾ, ಅಣುವಿನಷ್ಟು ಸೂಕ್ಷ್ಮವಾಗಿ ಕಣ್ಣಿಗೆ ಕಾಣಿಸದೆ ಅದೃಶವಾಗುವುದು, ಗೋಡೆಯ ನಡುವಿನಿಂದ ಹಾದು ಹೋಗುವುದು ಇತ್ಯಾದಿ. ಮಹಿಮಾ, ಎಂದರೆ ಬೃಹದಾಕಾರ ತಾಳುವುದು. ಲಘಿಮಾ, ಭಾರರಹಿತ ಸ್ಥಿತಿ, ಗಾಳಿಯಲ್ಲಿ ಪಕ್ಷಿಗಳಂತೆ ತೇಲುವುದು, ನೀರಿನ ಮೇಲೆ ನಡೆಯುವುದು ಇತ್ಯಾದಿ. ಗರಿಮಾ, ಭಾರವನ್ನು ಹೆಚ್ಚಿಸಿಕೊಳ್ಳುವುದು, ಯಾರೂ ನಮ್ಮನ್ನು ಎತ್ತಲು, ಅಲುಗಾಡಿಸಲು ಸಾಧ್ಯವಾಗದಿರುವ ಸ್ಥಿತಿ. ಪ್ರಾಕಾಮ್ಯ, ಬಯಸಿದ್ದನ್ನು ಪಡೆಯುವುದು, ಈಶಿತ್ವ ಹಾಗೂ ವಶೀತ್ವ ವಶೀಕರಣ ವಿದ್ಯೆ ಇತ್ಯಾದಿ. ಹನುಮಂತನಿಗೆ ಈ ಎಲ್ಲಾ ಶಕ್ತಿಗಳು ಇದ್ದುವಂತೆ. ಆದರೆ ಇವೆಲ್ಲದರ ಆಕರ್ಷಣೆಗೊಳಗಾಗದೆ, ಅಷ್ಟಾಂಗ ಯೋಗದ ಮೂಲಕ ಸಮಾಧಿ (ಜೀವನ್ಮುಕ್ತಿ) ಅಥವಾ ಮೋಕ್ಷವನ್ನು ಪಡೆಯುವುದು ಜೀವನದ ಪ್ರಮುಖ ಲಕ್ಷ್ಯ ಎನ್ನಲಾಗಿದೆ. ಎಲ್ಲ ಭೌತಿಕ ಆಸೆಗಳಿಗೆ, ಕರ್ಮಗಳಿಗೆ ಅಂಟಿಕೊಳ್ಳದೆ, ಇವೆಲ್ಲವನ್ನೂ ಮೀರಿ ಮುಂದಕ್ಕೆ ಸಾಗಬೇಕು ಎಂದಿದ್ದಾರೆ ಋಷಿಗಳು. ಅಷ್ಟಸಿದ್ಧಿಗಳು ಕೇವಲ ಉಪವಸ್ತುಗಳಷ್ಟೆ ಎಂದಿದ್ದಾರೆ.



ಆಧುನಿಕ ವಿಜ್ಞಾನ, ಜೀವವಿಜ್ಞಾನ ಕೂಡಾ ಈಗೀಗ ಈ ಭಾರತೀಯ ಜ್ಞಾನ ಪರಂಪರೆಯ ಬಗ್ಗೆ ಆಸಕ್ತಿ ಹೊಂದುತ್ತಿರುವುದು ಗಮನಕ್ಕೆ ಬಂದಿದೆ. ಈ ಬಗ್ಗೆ ಅನೇಕ ಪ್ರಯೋಗಗಳು ಪಾಶ್ಚಾತ್ಯ ವಿಜ್ಞಾನ ವಲಯಗಳಲ್ಲಿ ನಡೆಯುತ್ತಿವೆ. ಈಗ ಕ್ವಾಂಟಮ್ ಸಿದ್ಧಾಂತ ಎಲ್ಲೆಡೆ ಗಮನ ಸೆಳೆಯುತ್ತಿದೆ. ನಾವು ಪಂಚೇಂದ್ರಿಯಗಳ ಮೂಲಕ ನೋಡುವ ಜಗತ್ತು ನಿಜವಲ್ಲ ಎಂಬ ಆಚಾರ್ಯ ಶಂಕರರ ''ಜಗನ್ಮಿಥ್ಯಾ'' ತತ್ವದತ್ತ ವಾಲುತ್ತಿರುವುದು ಕಂಡುಬರುತ್ತಿದೆ. ಈ ಕಣ್ಣಿಗೆ ಕಾಣುವ ಜಗತ್ತು ಒಂದು ಅಜ್ಞಾತ, ಅಗೋಚರ ಶಕ್ತಿಯಿಂದ ಹುಟ್ಟಿದೆ ಎಂಬ ಅಭಿಪ್ರಾಯಗಳು ಅಲ್ಲಿ ಕೇಳಿ ಬರುತ್ತಿವೆ. ಅವರು ಅದನ್ನು ಎನರ್ಜಿ ಎಂದು ಕರೆಯುತ್ತಾರೆ. ದೃಶ್ಯ ಜಗತ್ತನ್ನು ವಸ್ತು -ದ್ರವ್ಯ (Mass) ಎಂದು ಕರೆಯುತ್ತಾರೆ. ಐನ್‌ಸ್ಟೀನರ ($E=Mc^2$) ಎಂಬ ಸಮೀಕರಣದಲ್ಲಿ ಈ ತರ್ಕದ ಸುಳಿವು ಕಾಣುತ್ತದೆ. E ಎಂದರೆ ಎನರ್ಜಿ – ಅಗೋಚರ ಶಕ್ತಿ ಸಾಗರ, M ಎಂದರೆ ದ್ರವ್ಯದಿಂದ ನಿರ್ಮಾಣವಾದ ಭೌತಿಕ ಜಗತ್ತು. $c^2$ ಎಂದರೆ ಬೆಳಕಿನ ಸ್ಥಿರಾಂಶ (Constant). ಬೆಳಕಿನ ವೇಗದ ಸ್ಥಿರಾಂಕದ ವರ್ಗದಿಂದ ಭೌತಿಕ ಜಗತ್ತಿನ ದ್ರವ್ಯವನ್ನು ಗುಣಿಸಿದಾಗ ಜಗತ್ತು ಎನರ್ಜಿಯಾಗುತ್ತದೆ. ಅಂದರೆ ಈ ಸೃಷ್ಟಿ ಒಂದೋ ದ್ರವ್ಯವಾಗಿರುತ್ತದೆ, ಇದೆಲ್ಲವೂ ನಾಶವಾದಾಗ ಎನರ್ಜಿಯಾಗಿರುತ್ತದೆ. ಅರ್ಥಾತ್ ಭೌತಿಕ ಜಗತ್ತು ಬೆಳಕಿನ ವೇಗದ ಸ್ಥಿರಾಂಕದಿಂದ ಧಾವಿಸಿದಾಗ ಪೂರ್ತಿ ಲಯವಾಗಿ ಎನರ್ಜಿ (ಶಕ್ತಿಸಾಗರ) ವಾಗಿ ರೂಪಾಂತರಗೊಳ್ಳುತ್ತದೆ. ಇಲ್ಲಿ ಈ ಶ್ಲೋಕ ಪ್ರಸ್ತುತ ಎನಿಸುತ್ತದೆ

**ಓಂ ಪೂರ್ಣಮದಃ ಪೂರ್ಣಮಿದಂ ಪೂರ್ಣಾತ್ ಪೂರ್ಣಮುದಚ್ಯತೇ।**
**ಪೂರ್ಣಸ್ಯ ಪೂರ್ಣಮಾದಾಯ ಪೂರ್ಣ ಮೇವಾವಶಿಷ್ಯತೆ॥**

''ಅಗೋಚರ ಆ ಶಕ್ತಿಸಾಗರವು ಪೂರ್ಣ, ಈ ದೃಶ್ಯ ಜಗತ್ತು ಪೂರ್ಣ. ಆ ಪೂರ್ಣದಿಂದ ಈ ಜಗತ್ತು ಉದ್ಭವಿಸಿತು. ಆ ಅದೃಶ್ಯ ಶಕ್ತಿಸಾಗರದಿಂದ ಈ ಪೂರ್ಣ ಅಂದರೆ ದೃಶ್ಯ ಜಗತ್ತನ್ನು ಲಯಗೊಳಿಸಿದರೆ ಆಗಲೂ ಪೂರ್ಣವೇ ಉಳಿಯುತ್ತದೆ.'' ಅದು ಶಾಶ್ವತ ಎಂದರ್ಥ. ಹೀಗೆ ಆಧುನಿಕ ವಿಜ್ಞಾನ ಭಾರತೀಯ ತತ್ವಜ್ಞಾನದತ್ತ ವಾಲುತ್ತಿರುವುದು ಕಂಡುಬರುತ್ತಿದೆ. ಹಾಗಾದರೆ ಈ ಭೌತಿಕ ಜಗತ್ತೆಂಬ ಮಿಥ್ಯೆಗೆ ಕಾರಣವೇನು ಎಂಬುದಕ್ಕೆ ಆಚಾರ್ಯ ಶಂಕರರು ಮಾಯೆ ಎಂಬ ಅದೃಶ್ಯಶಕ್ತಿ ಎನ್ನುತ್ತಾರೆ. ಮಾನವ ಮನಸ್ಸು ಈ ಮಾಯೆ ಎಂಬ ಅದೃಶ್ಯಶಕ್ತಿಯಿಂದ ಮಸುಕಾಗಿದೆ. ಮಾಯಾಪರದೆಯನ್ನು ಸರಿಸಲು ಶಕ್ತನಾದಾಗ ಪರಮಾತ್ಮನ ದರ್ಶನವಾಗುತ್ತದೆ. ಮಾಯಾಜಗತ್ತು ಅಶಾಶ್ವತ, ಪರಮಾತ್ಮ ಶಾಶ್ವತ.

ಕ್ವಾಂಟಮ್ ಸಿದ್ಧಾಂತದಲ್ಲಿ 'ಕ್ವಾಂಟಮ್ ಎನ್‌ಟ್ಯಾಂಗಲ್‌ಮೆಂಟ್' ಎಂಬ ವಾದ ಕೇಳಿ ಬರುತ್ತಿದೆ. ಪ್ರತಿಯೊಂದು ಪರಮಾಣು ಇನ್ನೊಂದು ಪರಮಾಣುವಿನೊಂದಿಗೆ ಜೋಡಿಸಲ್ಪಟ್ಟಿದೆ. ಒಂದು ಪರಮಾಣುವಿನಲ್ಲಿ ಏನೇ ಚಲನೆ, ಕ್ರಿಯೆ ಬದಲಾವಣೆ ನಡೆದರೂ ಅದು ಅದರ ಜೋಡಿಯಾಗಿರುವ ಪರಮಾಣುವಿನಲ್ಲೂ, ಅದೆಷ್ಟೇ ದೂರವಿದ್ದರೂ ತಕ್ಷಣ ಸ್ಪಂದಿಸಿ ಅದೇ ರೀತಿಯ ಕ್ರಿಯೆ ನಡೆಯುತ್ತದೆ. ಇದು ಭಾರತೀಯ ತತ್ವಜ್ಞಾನಕ್ಕೆ ಪೂರಕವಾಗಿಯೇ ಇದೆ. ಪರಮಾತ್ಮ ಎಲ್ಲೆಡೆ, ಎಲ್ಲದರಲ್ಲೂ ಇದ್ದಾನೆ. ಪ್ರತಿ ಆತ್ಮ ಇನ್ನೊಂದು ಆತ್ಮದೊಡನೆ ಜೋಡಿಸಲ್ಪಟ್ಟಿದೆ. ನನ್ನಲ್ಲಿರುವ ಆತ್ಮವೇ ನಿಮ್ಮಲ್ಲೂ ಇರುವುದು. ಅದಕ್ಕೆ ಪರಮಾತ್ಮನನ್ನು ಶಕ್ತಿ ಸಾಗರ ಎನ್ನುವುದು. ನಾವೆಲ್ಲ ಸಾಗರದಲ್ಲಿನ ಬಿಂದು ಇದ್ದಂತೆ. ಪ್ರತ್ಯೇಕವಾಗಿ ಚಿಮ್ಮಿದಾಗ ಬಿಂದು. ಆ ಬಿಂದು ಮತ್ತೆ ವಾಪಸ್ ಸಿಂಧುವಿನಲ್ಲಿ ಸೇರಿದರೆ ಅದು ಕೂಡಾ ಸಿಂಧುವಾಗುತ್ತದೆ. ಹೀಗೆ ಆಧುನಿಕ ವಿಜ್ಞಾನ ಪ್ರಾಚೀನ ಭಾರತೀಯ ತತ್ವಜ್ಞಾನದತ್ತ ವಾಲುತ್ತಿರುವುದು ಕಂಡುಬರುತ್ತಿದೆ.

# ಮಿಲಿಟರಿ ರಫ್ತಿನಲ್ಲಿ ಕ್ರಾಂತಿ: ಭಾರತದ ಯಶೋಗಾಥೆ

ವಿನೂತ್ ಎಂ. ಶಿವಾನಂದ

ಒಂದು ರಾಷ್ಟ್ರದ ಭದ್ರತೆ ಕೇವಲ ಅದರ ಸೈನ್ಯದ ಸಾಮರ್ಥ್ಯದ ಮೇಲೆ ಮಾತ್ರ ಅವಲಂಬಿತವಾಗಿರುವುದಿಲ್ಲ, ಆ ರಾಷ್ಟ್ರವು ತನ್ನ ರಕ್ಷಣಾ ಅಗತ್ಯಗಳನ್ನು ಎಷ್ಟರ ಮಟ್ಟಿಗೆ ಸ್ವತಃ ಪೂರೈಸಿಕೊಳ್ಳಬಲ್ಲದು ಮತ್ತು ಜಾಗತಿಕ ಮಾರುಕಟ್ಟೆಯಲ್ಲಿ ತನ್ನ ರಕ್ಷಣಾ ಉತ್ಪನ್ನಗಳನ್ನು ಎಷ್ಟರ ಮಟ್ಟಿಗೆ ಮಾರಾಟ ಮಾಡಬಲ್ಲದು ಎಂಬುದೂ ಪ್ರಮುಖವಾಗಿದೆ. ಈ ದೃಷ್ಟಿಯಿಂದ ನೋಡಿದರೆ, ಕಳೆದ ಒಂದು ದಶಕದಲ್ಲಿ ಭಾರತದ ರಕ್ಷಣಾ ಕ್ಷೇತ್ರದಲ್ಲಿ ನಡೆದಿರುವ ಬದಲಾವಣೆ ಅತ್ಯಂತ ಗಮನಾರ್ಹವಾಗಿದೆ.

2013-14ರ ಅವಧಿಯಲ್ಲಿ ಭಾರತದ ರಕ್ಷಣಾ ರಫ್ತು ಕೇವಲ ರೂ.686 ಕೋಟಿಗಳಷ್ಟಿತ್ತು. ಆ ಸಮಯದಲ್ಲಿ ಭಾರತವು ವಿಶ್ವದ ಅತಿದೊಡ್ಡ ರಕ್ಷಣಾ ಉಪಕರಣಗಳ ಆಮದುದಾರ ರಾಷ್ಟ್ರಗಳಲ್ಲಿ ಒಂದಾಗಿತ್ತು. ಯುದ್ಧವಿಮಾನಗಳು, ಕ್ಷಿಪಣಿಗಳು, ರಾಡಾರ್ ವ್ಯವಸ್ಥೆಗಳು, ಹೆಲಿಕಾಪ್ಟರ್‌ಗಳು ಹಾಗೂ ಹಲವು ಅತ್ಯಾಧುನಿಕ ಶಸ್ತ್ರಾಸ್ತ್ರಗಳಿಗಾಗಿ ಭಾರತವು ವಿದೇಶಿ ರಾಷ್ಟ್ರಗಳ ಮೇಲೆ ಹೆಚ್ಚಿನ ಅವಲಂಬನೆಯನ್ನು ಹೊಂದಿತ್ತು. ಇದರಿಂದ ದೇಶದ ಭದ್ರತೆ ಮಾತ್ರವಲ್ಲದೆ ವಿದೇಶಿ ವಿನಿಮಯದ ಮೇಲೂ ದೊಡ್ಡ ಹೊರೆ ಉಂಟಾಗುತ್ತಿತ್ತು.

ಆದರೆ ಕಳೆದ ಹನ್ನೆರಡು ವರ್ಷಗಳಲ್ಲಿ ಪರಿಸ್ಥಿತಿ ಗಣನೀಯವಾಗಿ ಬದಲಾಗಿದೆ. 2025-26ನೇ ಹಣಕಾಸು ವರ್ಷದಲ್ಲಿ ಭಾರತದ ರಕ್ಷಣಾ ರಫ್ತು ರೂ.38,424 ಕೋಟಿಗಳ ದಾಖಲೆಯ ಮಟ್ಟವನ್ನು ತಲುಪಿದೆ. ಅಂದರೆ 2013-14ರೊಂದಿಗೆ ಹೋಲಿಸಿದರೆ ಸುಮಾರು 56 ಪಟ್ಟು ಹೆಚ್ಚಳವಾಗಿದೆ. ಈ ಬೆಳವಣಿಗೆ ಕೇವಲ ಅಂಕಿಅಂಶಗಳ ಸಾಧನೆಯಲ್ಲ. ಇದು ಭಾರತದ ರಕ್ಷಣಾ ಕೈಗಾರಿಕೆಯ ಸಾಮರ್ಥ್ಯ, ತಾಂತ್ರಿಕ ಪ್ರಗತಿ ಹಾಗೂ ನೀತಿ ಸುಧಾರಣೆಗಳ ಪ್ರತಿಫಲವಾಗಿದೆ.

ಈ ಪರಿವರ್ತನೆಗೆ ಹಲವಾರು ಕಾರಣಗಳಿವೆ. ದೇಶೀಯ ಉತ್ಪಾದನೆಗೆ ಹೆಚ್ಚಿನ ಆದ್ಯತೆ ನೀಡುವ ನೀತಿಗಳು, ಮೇಕ್ ಇನ್ ಇಂಡಿಯಾ ಮತ್ತು ಆತ್ಮನಿರ್ಭರ ಭಾರತ ಅಭಿಯಾನಗಳು, ರಕ್ಷಣಾ ಉತ್ಪಾದನೆ ಮತ್ತು ರಫ್ತು ಉತ್ತೇಜನ ನೀತಿ ಹಾಗೂ ಪಾಸಿಟಿವ್ ಇಂಡಿಜಿನೈಸೇಶನ್‌ಗಳಂತಹ ಕ್ರಮಗಳು ದೇಶೀಯ ಕೈಗಾರಿಕೆಗೆ ಹೊಸ ಅವಕಾಶಗಳನ್ನು ಸೃಷ್ಟಿಸಿವೆ. ಇದರ ಪರಿಣಾಮವಾಗಿ ಹಿಂದೆ ವಿದೇಶಗಳಿಂದ ಆಮದು ಮಾಡಿಕೊಳ್ಳುತ್ತಿದ್ದ ಸಾವಿರಾರು ರಕ್ಷಣಾ ವಸ್ತುಗಳನ್ನು ಈಗ ದೇಶೀಯವಾಗಿ ತಯಾರಿಸಲಾಗುತ್ತಿದೆ. ಭಾರತದ ರಕ್ಷಣಾ ಉತ್ಪಾದನೆಯೂ ಗಮನಾರ್ಹವಾಗಿ ಏರಿಕೆಯಾಗಿದೆ.



ಸ್ವತಂತ್ರ ಭಾರತದ ಸುಮಾರು 65 ವರ್ಷಗಳ ಅವಧಿಯಲ್ಲಿ (2013-14ರಲ್ಲಿ) ರಕ್ಷಣಾ ಉತ್ಪಾದನೆ ರೂ.43,746 ಕೋಟಿಗಳಷ್ಟು ಇತ್ತು. ಕೇವಲ 10 ವರ್ಷಗಳ ಅಂತರದಲ್ಲಿ (2025-26ರಲ್ಲಿ) ಉತ್ಪಾದನಾ ಮೊತ್ತದಲ್ಲಿ ಸುಮಾರು ನಾಲ್ಕು ಪಟ್ಟಿಗೂ ಅಧಿಕವಾಗಿ ರೂ.1.78 ಲಕ್ಷ ಕೋಟಿಗಳನ್ನು ದಾಟಿದೆ. ಇಂದು ದೇಶದ ಸುಮಾರು 65 ಪ್ರತಿಶತ ರಕ್ಷಣಾ ಉಪಕರಣಗಳು ಭಾರತದಲ್ಲೇ ತಯಾರಾಗುತ್ತಿವೆ. ಇದು ಸ್ವಾವಲಂಬನೆಯತ್ತ ದೇಶದ ದೃಢ ಹೆಜ್ಜೆಯನ್ನು ಸೂಚಿಸುತ್ತದೆ.

ಇನ್ನೊಂದು ಪ್ರಮುಖ ಬೆಳವಣಿಗೆ ಎಂದರೆ ಖಾಸಗಿ ವಲಯದ ಹೆಚ್ಚುತ್ತಿರುವ ಪಾತ್ರ. 2025-26ರಲ್ಲಿ ರಕ್ಷಣಾ ಉತ್ಪಾದನೆಯಲ್ಲಿ ಖಾಸಗಿ ವಲಯದ ಪಾಲು ಸುಮಾರು 24 ಪ್ರತಿಶತಕ್ಕೆ ಏರಿಕೆಯಾಗಿದೆ. ಸಾವಿರಾರು ಎಂಎಸ್‌ಎಂಇಗಳು, ಸ್ಟಾರ್ಟ್‌ಅಪ್‌ಗಳು ಹಾಗೂ ತಂತ್ರಜ್ಞಾನ ಸಂಸ್ಥೆಗಳು ರಕ್ಷಣಾ ಉತ್ಪಾದನಾ ಸರಪಳಿಯಲ್ಲಿ ಭಾಗಿಯಾಗಿವೆ. 2018ರಲ್ಲಿ ಆರಂಭವಾದ ಐಡಿಇಎಕ್ಸ್ (ಇನ್ನೋವೇಶನ್ ಫಾರ್ ಡಿಫೆನ್ಸ್ ಎಕ್ಸಲೆನ್ಸ್) ಯೋಜನೆಯು ಸ್ವದೇಶಿ ರಕ್ಷಣೆ ಮತ್ತು ಬಾಹ್ಯಾಕಾಶ ಕ್ಷೇತ್ರದಲ್ಲಿ ಹೂಡಿಕೆಯನ್ನು ಹೆಚ್ಚಿಸಲು ಅತ್ಯುತ್ತಮವಾದ ಅವಕಾಶವನ್ನು ಕಲ್ಪಿಸಿದೆ. DRDO ದ ತಂತ್ರಜ್ಞಾನ ಅಭಿವೃದ್ಧಿ ನಿಧಿ ಯೋಜನೆಗಳು ಹೊಸ ಆವಿಷ್ಕಾರಗಳಿಗೆ ವೇದಿಕೆಯನ್ನು ಒದಗಿಸಿವೆ.

ಇಂದು ಭಾರತೀಯ ರಕ್ಷಣಾ ಉತ್ಪನ್ನಗಳು 100ಕ್ಕೂ ಹೆಚ್ಚು ದೇಶಗಳಿಗೆ ರಫ್ತಾಗುತ್ತಿವೆ. ಬ್ರಹ್ಮೋಸ್ ಸೂಪರ್ ಸಾನಿಕ್ ಕ್ಷಿಪಣಿ, ಆಕಾಶ್ ವಾಯು ರಕ್ಷಣಾ ವ್ಯವಸ್ಥೆ, ಚೇತಕ್ ಹೆಲಿಕಾಪ್ಟರ್, ಕರಾವಳಿ ಗಸ್ತು ನೌಕೆಗಳು, ಬುಲೆಟ್ ಪ್ರೂಫ್ ಜಾಕೆಟ್‌ಗಳು ಹಾಗೂ ವಿವಿಧ ರಾಡಾರ್ ವ್ಯವಸ್ಥೆಗಳು ಜಾಗತಿಕ ಮಾರುಕಟ್ಟೆಯಲ್ಲಿ ಉತ್ತಮ ಬೇಡಿಕೆಯನ್ನು ಹೊಂದಿವೆ. ಫಿಲಿಪೈನ್ಸ್‌ಗೆ ಬ್ರಹ್ಮೋಸ್ ಕ್ಷಿಪಣಿ ರಫ್ತು ಭಾರತದ ರಕ್ಷಣಾ ಸಾಮರ್ಥ್ಯಕ್ಕೆ ಜಾಗತಿಕ ಮಾನ್ಯತೆಯನ್ನು ತಂದುಕೊಟ್ಟಿದೆ.

ರಕ್ಷಣಾ ರಫ್ತಿನ ಈ ಬೆಳವಣಿಗೆ ಕೇವಲ ಆರ್ಥಿಕ ಲಾಭವನ್ನು ಮಾತ್ರ ನೀಡುವುದಿಲ್ಲ. ಇದು ಭಾರತದ ಕಾರ್ಯತಂತ್ರದ ಸ್ವಾಯತ್ತತೆಯನ್ನು ಬಲಪಡಿಸುತ್ತದೆ, ಉದ್ಯೋಗಾವಕಾಶಗಳನ್ನು ಸೃಷ್ಟಿಸುತ್ತದೆ. ವಿದೇಶಿ ವಿನಿಮಯವನ್ನು ಉಳಿಸುತ್ತದೆ ಮತ್ತು ಜಾಗತಿಕ ವೇದಿಕೆಯಲ್ಲಿ ಭಾರತದ ಪ್ರಭಾವವನ್ನು ಹೆಚ್ಚಿಸುತ್ತದೆ. ಜೊತೆಗೆ ಸ್ನೇಹಪರ ರಾಷ್ಟ್ರಗಳೊಂದಿಗೆ ರಕ್ಷಣಾ ಸಹಕಾರವನ್ನು ಗಟ್ಟಿಗೊಳಿಸುವ ಮೂಲಕ ಭಾರತದ ರಾಜತಾಂತ್ರಿಕ ಸ್ಥಾನಮಾನವನ್ನೂ ಬಲಪಡಿಸುತ್ತದೆ.

ಒಟ್ಟಾರೆ 2013ರಲ್ಲಿ ಆಮದುಗಳ ಮೇಲೆ ಹೆಚ್ಚಿನ ಅವಲಂಬನೆ ಹೊಂದಿದ್ದ ಭಾರತವು ಇಂದು ರಕ್ಷಣಾ ಉತ್ಪಾದನೆ ಮತ್ತು ರಫ್ತಿನಲ್ಲಿ ಹೊಸ ಮೈಲಿಗಲ್ಲುಗಳನ್ನು ಸ್ಥಾಪಿಸುತ್ತಿದೆ. ನೀತಿ ಸುಧಾರಣೆಗಳು, ದೇಶೀಯ ಕೈಗಾರಿಕೆಗೆ ನೀಡಲಾದ ಉತ್ತೇಜನ ಮತ್ತು ತಂತ್ರಜ್ಞಾನ ಅಭಿವೃದ್ಧಿಯ ಮೇಲಿನ ನಿರಂತರ ಪ್ರಯತ್ನವು ಭಾರತವನ್ನು ಆತ್ಮನಿರ್ಭರ ಹಾಗೂ ಜಾಗತಿಕವಾಗಿ ಸ್ಪರ್ಧಾತ್ಮಕ ರಕ್ಷಣಾ ಶಕ್ತಿಯನ್ನಾಗಿ ರೂಪಿಸುತ್ತಿದೆ. ಈ ಪಯಣ ಮುಂದುವರಿದರೆ, ಮುಂದಿನ ವರ್ಷಗಳಲ್ಲಿ ಭಾರತವು ವಿಶ್ವದ ಪ್ರಮುಖ ರಕ್ಷಣಾ ರಫ್ತು ರಾಷ್ಟ್ರಗಳ ಸಾಲಿನಲ್ಲಿ ಇನ್ನಷ್ಟು ಬಲವಾಗಿ ಗುರುತಿಸಿಕೊಳ್ಳುವುದರಲ್ಲಿ ಅನುಮಾನವೇ ಇಲ್ಲ.

ನಕ್ಸಲೀಯರಿಗೆ ಕೋಟಿ ಕೋಟಿ ಹಣ ಹರಿವು

# ಅಮೆರಿಕದ ಮಿಷನರಿ ವಿರುದ್ಧ ಸಿಬಿಐ ಕೇಸ್?

**• ಹೊಸದಿಲ್ಲಿ:** ಅಮೆರಿಕ ಮೂಲದ ಜಾಗತಿಕ ಕ್ರೈಸ್ತ ಮಿಷನರಿ ಸಂಸ್ಥೆಯೊಂದು ವಿದೇಶಿ ಡೆಬಿಟ್ ಕಾರ್ಡ್‌ಗಳ ಮೂಲಕ ಭಾರತದಲ್ಲಿ ಕೋಟಿ ಕೋಟಿ ರೂಪಾಯಿ ಹಣವನ್ನು ಅಕ್ರಮವಾಗಿ ತೆಗೆಯಿಸಿ, ನಕ್ಸಲ್ ಹಿಂಸಾಚಾರ ಪೀಡಿತ ಪ್ರದೇಶಗಳಲ್ಲಿ ಬಳಸಿದೆಯೆಂಬ ಗಂಭೀರ ಆರೋಪದ ಹಿನ್ನೆಲೆಯಲ್ಲಿ ಜಾರಿ ನಿರ್ದೇಶನಾಲಯ(ಇಡಿ)ವು, ಕೇಂದ್ರ ತನಿಖಾ ದಳ (ಸಿಬಿಐ) ತನಿಖೆ ಕೋರುವತ್ತ ಹೆಜ್ಜೆಯಿಟ್ಟಿದೆ.

ಅಧಿಕಾರಿಗಳ ಪ್ರಕಾರ, ಈ ಪ್ರಕರಣದಲ್ಲಿ ದಿ ಟಿಮೊಥಿ ಇನಿಷಿಯೇಟಿವ್ (ಟಿಟಿಐ) ಎಂಬ ಸಂಸ್ಥೆಯ ವಿರುದ್ಧ ವಿದೇಶಿ ದೇಣಿಗೆ ನಿಯಂತ್ರಣ ಕಾಯ್ದೆ (ಎಫ್‌ಸಿಆರ್‌ಎ) ಅನ್ವಯದಲ್ಲಿ ತನಿಖೆ ನಡೆಯಬೇಕೆಂದು ಇಡಿ, ಸಿಬಿಐಗೆ ಪತ್ರ ಬರೆಯಲಿದೆ. ಇದೇ ವೇಳೆ, ಅಕ್ರಮ ಹಣ ವರ್ಗಾವಣೆ ತಡೆ ಕಾಯ್ದೆಯಲ್ಲಿ ಪ್ರತ್ಯೇಕ ಅಪರಾಧ ಪ್ರಕರಣ ದಾಖಲಿಸುವ ಸಿದ್ಧತೆಯಲ್ಲಿಯೂ ಇಡಿ ಇದೆ ಎನ್ನಲಾಗಿದೆ.

ಈ ಪ್ರಕರಣಕ್ಕೆ ಚಾಲನೆ ಸಿಕ್ಕದ್ದು ಹಣಕಾಸು ಗುಪ್ತಚರ ಘಟಕ(ಎಫ್‌ಐಯು) ಸಲ್ಲಿಸಿದ ಅನುಮಾನಾಸ್ಪದ ವ್ಯವಹಾರ ವರದಿ ಮೂಲಕ. ಅದರ ಪ್ರಕಾರ, ಅಮೆರಿಕದ ಟ್ರುಯಿಸ್ಟ್ ಬ್ಯಾಂಕ್ ನೀಡಿದ ವಿದೇಶಿ ಡೆಬಿಟ್ ಕಾರ್ಡ್‌ಗಳನ್ನು ಭಾರತಕ್ಕೆ ತಂದು, ನಿಗದಿತ ಬ್ಯಾಂಕಿಂಗ್, ನಿಯಂತ್ರಣ ಮಾರ್ಗಗಳನ್ನು ಬಿಟ್ಟು ಹಣವನ್ನು ಬಳಸಿರುವ ಶಂಕೆ ವ್ಯಕ್ತವಾಗಿದೆ.

ಈ ಸುಳಿವಿನ ಮೇರೆಗೆ ಇಡಿ ಅಧಿಕಾರಿಗಳು, ಕಳೆದ ಏಪ್ರಿಲ್‌ನಲ್ಲಿ ಬೆಂಗಳೂರು, ಮೈಸೂರು, ಅಸ್ಸಾಂನ ಗೋಲ್ಪಾರಾ ಹಾಗೂ ಛತ್ತೀಸ್‌ಗಢದ ಧಮ್ತರಿ ಜಿಲ್ಲೆಗಳಲ್ಲಿ ಶೋಧ ನಡೆಸಿತ್ತು. ದಾಳಿಗಳ ವೇಳೆ ದೊರೆತ ಸಾಕ್ಷ್ಯಾಧಾರಗಳ ಆಧಾರದಲ್ಲಿ ಕರ್ನಾಟಕ ಹಾಗೂ ಛತ್ತೀಸ್‌ಗಢ ಪೊಲೀಸರಿಂದ ಮೇ ಮತ್ತು ಜೂನ್‌ನಲ್ಲಿ ಪ್ರತ್ಯೇಕ ಎಫ್‌ಐಆರ್‌ಗಳು ದಾಖಲಾಗಿವೆ.


ಇಡಿ ಪ್ರಕಾರ, 2025ರ ನವೆಂಬರ್‌ನಿಂದ 2026ರ ಏಪ್ರಿಲ್‌ವರೆಗೆ ಸುಮಾರು 95 ಕೋಟಿ ಹಣ ಭಾರತಕ್ಕೆ ಕಳಿಸಲಾಗಿದೆ ಎಂಬ ಹಣಕಾಸು ದಾಖಲೆಗಳು ಪತ್ತೆಯಾಗಿವೆ. ಇದಲ್ಲದೆ, ಕಳೆದ ಕೆಲವು ವರ್ಷಗಳಲ್ಲಿ ಛತ್ತೀಸ್‌ಗಢದ ಬಸ್ತರ್, ಧಮ್ತರಿ ಸೇರಿ ಎಡಪಂಥೀಯ ಬಾಧಿತ ಪ್ರದೇಶಗಳಲ್ಲಿ 6.5 ಕೋಟಿ ನಗದು ಎಟಿಎಂ ಮುಖಾಂತರ ತೆಗೆದಿರುವುದು ಗಮನಕ್ಕೆ ಬಂದಿದೆ.

### ಕರ್ನಾಟಕ ಹೈ ಹೇಳಿದ್ದೇನು?

ಟಿಟಿಐಗೆ ಸಂಬಂಧ ಹೊಂದಿದ್ದಾರೆ ಎನ್ನಲಾದ ಐವರ ವಿರುದ್ಧ ಬೆಂಗಳೂರಿನಲ್ಲಿ ದಾಖಲಾಗಿದ್ದ ಯುಎಪಿಎ ಪ್ರಕರಣವನ್ನು ರದ್ದುಪಡಿಸುವಂತೆ ಸಲ್ಲಿಸಲಾಗಿದ್ದ ಅರ್ಜಿಯನ್ನು ಕರ್ನಾಟಕ ಹೈಕೋರ್ಟ್ ಜು.1ರಂದು ತಳ್ಳಿಹಾಕಿದೆ. ಈ ಪ್ರಕರಣವನ್ನು ಸಾಮಾನ್ಯ ಕಾನೂನು ಉಲ್ಲಂಘನೆ ಎಂದು ಮಾತ್ರ ಕಾಣದೇ, ರಾಷ್ಟ್ರೀಯ ಭದ್ರತೆಗೂ ಸಂಬಂಧಿಸಿದ ವಿಷಯ ಎಂದು ಉಲ್ಲೇಖಿಸಿದೆ. ನಕ್ಸಲ್ ಗುಂಪುಗಳಿಗೆ ಹಣಕಾಸು ಪೂರೈಕೆ ಆಮ್ಲಜನಕದಂತೆ ಕೆಲಸಮಾಡುತ್ತದೆ, ಇದರ ಪರಿಣಾಮ ಕೇವಲ ಹಣ ವರ್ಗಾವಣೆಯಲ್ಲಿ ಅಂತ್ಯಗೊಳ್ಳದೆ, ದೇಶದ ಒಳಭದ್ರತೆಗೆ ಬೆದರಿಕೆ ಉಂಟುಮಾಡಬಹುದು ಎಂಬ ಅಭಿಪ್ರಾಯ ವ್ಯಕ್ತವಾಗಿದೆ.

- ವಿದೇಶಿ ಡೆಬಿಟ್ ಕಾರ್ಡ್‌ಗಳ ದುರುಪಯೋಗ ಶಂಕೆ
- ಎಫ್‌ಸಿಆರ್‌ಎ ಉಲ್ಲಂಘಿಸಿ ವಿದೇಶಿ ಹಣ ಬಳಕೆ ಆರೋಪ
- ಕರ್ನಾಟಕ ಸೇರಿ ಹಲವು ರಾಜ್ಯಗಳಲ್ಲಿ ಇಡಿ ದಾಳಿ
- 24 ಡೆಬಿಟ್ ಕಾರ್ಡ್‌ಗಳ ವಶ, 95 ಕೋಟಿ ಹಣದ ಹಾದಿ ಪತ್ತೆ
- ಸಿಬಿಐಗೆ ಪತ್ರ ಬರೆಯಲಿರುವ ಜಾರಿ ನಿರ್ದೇಶನಾಲಯ

ಈ ಪ್ರಕರಣದಲ್ಲಿ ಮೈಕಾ ಮಾರ್ಕ್ (43) ಎಂಬ ವ್ಯಕ್ತಿಯನ್ನು ಬೆಂಗಳೂರು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ತಡೆದು ಪರಿಶೀಲಿಸಿದಾಗ, ಅವನ ಬಳಿ 24 ವಿದೇಶಿ ಡೆಬಿಟ್ ಕಾರ್ಡ್‌ಗಳು ಪತ್ತೆಯಾದವು ಎಂದು ಇಡಿ ಏಪ್ರಿಲ್ 24ರಂದು ತಿಳಿಸಿತ್ತು. ವಿಚಾರಣೆ ವೇಳೆ, 2019ರಿಂದ ಭಾರತದಲ್ಲಿ 1,000ಕ್ಕೂ ಹೆಚ್ಚು ಕಾರ್ಡ್‌ಗಳನ್ನು ಹಂಚಲಾಗಿದೆ ಎಂದು ಆತ ಹೇಳಿದ್ದಾನೆ ಎಂಬ ಆರೋಪವನ್ನೂ ಇಡಿ ಹೊರಹಾಕಿದೆ.



ಪ್ರಾಚೀನ ಪುರಾತತ್ತ್ವ ತಾಣ ತಕ್ಷಶಿಲೆಯನ್ನು ವಿರೂಪಗೊಳಿಸಲು ಪಾಕಿಸ್ತಾನ ಸಂಚು ರೂಪಿಸಿದ ಹಿನ್ನೆಲೆ ಯುನೆಸ್ಕೋ ಆಕ್ರೋಶ ವ್ಯಕ್ತಪಡಿಸಿದ್ದು, ಸಂರಕ್ಷಣೆಯ ಹೆಸರಿನಲ್ಲಿ ಪಾಕಿಸ್ತಾನ ನಡೆಸುತ್ತಿರುವ ಮರುನಿರ್ಮಾಣ ಕಾಮಗಾರಿಯನ್ನು ಸರಿಪಡಿಸದಿದ್ದರೆ ತಕ್ಷಶಿಲೆಯನ್ನು ಅಪಾಯದಲ್ಲಿರುವ ವಿಶ್ವ ಪಾರಂಪರಿಕ ಪಟ್ಟಿಗೆ ಸೇರಿಸುವುದಲ್ಲದೆ, ಪಾಕ್‌ಗಿರುವ ವಿಶ್ವ ಪಾರಂಪರಿಕ ಸ್ಥಾನಮಾನವನ್ನೇ ರದ್ದುಗೊಳಿಸುವುದಾಗಿ ಎಚ್ಚರಿಕೆ ನೀಡಿದೆ. ಪಾಕ್ ಅಧಿಕಪ್ರಸಂಗದಿಂದ ಕಾಲಾತೀತ ನಗರ ಮತ್ತೊಮ್ಮೆ ತನ್ನ ಇತಿಹಾಸ ಹೇಳಲು ಮುನ್ನೆಲೆಗೆ ಬಂದಿದೆ. ಹಿಂದು ಮತ್ತು ಬೌದ್ಧ ಪರಂಪರೆಗಳ ಆಡಳಿತ ಮತ್ತು ಸಾಂಸ್ಕೃತಿಕ ನೆಲೆಬೀಡಾಗಿದ್ದ ತಕ್ಷಶಿಲೆ ಕುರಿತ ಸಂಕ್ಷಿಪ್ತ ಮಾಹಿತಿ ಇಲ್ಲಿದೆ ನೋಡಿ.

# ಸಾಮ್ರಾಜ್ಯಗಳ ನೆಲೆ ಕಾಲಾತೀತ ತಕ್ಷಶಿಲೆ

- ಪ್ರಾಚೀನ ಭಾರತ ಉಪಖಂಡದ ಶೈಕ್ಷಣಿಕ, ಆಡಳಿತ, ಸಾಂಸ್ಕೃತಿಕ ಕೇಂದ್ರ

ಸುದ್ದಿ ಸಮಗ್ರ

### ವೈದಿಕ ಭಾರತದಲ್ಲಿ ತಕ್ಷಶಿಲೆ

ವೈದಿಕ ಕಾಲದ ಮಹಾನ್ ಸಾಹಿತ್ಯಗಳಲ್ಲಿ ಗಾಂಧಾರ(ಇಂದಿನ ಅಫ್ಘಾನಿಸ್ತಾನ)ವನ್ನು 16 ಮಹಾಜನಪದಗಳಲ್ಲೊಂದು ಎಂದು ಉಲ್ಲೇಖಿಸಲಾಗಿದೆ. ಹಿಂದುಗಳ ಪಾಲಿಗೆ ಒಟ್ಟು ನಾಲ್ಕು ವೇದಗಳಿವೆ. ಅವುಗಳಲ್ಲಿ ಋಗ್ವೇದ ಮೊದಲನೇಯದು. ಋಗ್ವೇದದಲ್ಲೂ ಈ ಗಾಂಧಾರ ಹೆಸರಿನ ಉಲ್ಲೇಖವಿದೆ. ನಾಲ್ಕನೇ ವೇದ ಅಥರ್ವವೇದದಲ್ಲಿ ಗಾಂಧಾರ ಮತ್ತದರ ನಾಗರಿಕರ ಉಲ್ಲೇಖವಿದೆ. 6ನೇ ಶತಮಾನದಲ್ಲಿ ವೈದಿಕ ಶಿಕ್ಷಣವು ಆರಂಭವಾದಲ್ಲಿಂದ ತಕ್ಷಶಿಲೆಯೆಂಬ ಪ್ರಾಚೀನ ನಗರಿಯ ಹೆಸರು ಹೆಚ್ಚು ಮುನ್ನೆಲೆಗೆ ಬಂದಿದೆ. ವೈದಿಕ ಶಿಕ್ಷಣಕ್ಕಾಗಿ ವಿಶ್ವದೆಲ್ಲೆಡೆಯಿಂದ ತಕ್ಷಶಿಲೆಗೆ ಬರುತ್ತಿದ್ದರು. ಇಲ್ಲಿ ವಿದ್ಯಾರ್ಥಿಗಳು ವೇದಗಳು, ವ್ಯಾಕರಣ, ಔಷಧಿ ಮತ್ತು ವೈದ್ಯಕೀಯ ಚಿಕಿತ್ಸೆ, ಸೇನಾ ವಿಜ್ಞಾನ, ತತ್ವಶಾಸ್ತ್ರ ಮತ್ತು ರಾಜಕೀಯ ವಿಜ್ಞಾನ ಇತ್ಯಾದಿ ವಿದ್ಯೆಗಳನ್ನು ವ್ಯಾಸಂಗ ಮಾಡುತ್ತಿದ್ದರು.

### ಮಹಾಭಾರತದಲ್ಲಿ ತಕ್ಷಶಿಲೆ

ಹಿಂದುಗಳ ಪ್ರಮುಖ ಕಾವ್ಯ ಮಹಾಭಾರತದಲ್ಲಿ ತಕ್ಷಶಿಲೆಯನ್ನು ಉಲ್ಲೇಖಿಸಲಾಗಿದೆ. ಜನಮೇಜಯ ರಾಜನು ತಂದೆಯ ಸಾವಿನ ಪ್ರತೀಕಾರ ತೀರಿಸಿಕೊಳ್ಳಲು ಇಲ್ಲಿ ಪ್ರಸಿದ್ಧ ಸರ್ಪ ಸತ್ರವನ್ನು (ಸರ್ಪ ಬಲಿ) ಏರ್ಪಡಿಸಿದ್ದನೆಂಬ ಪೌರಾಣಿಕ ಇತಿಹಾಸವಿದೆ.

### ಹೆಸರು ಹೇಗೆ ಬಂತು?

ರಾಮಾಯಣ ಕಾಲದಲ್ಲಿ ಮರ್ಯಾದಾ ಪುರುಷೋತ್ತಮ ಶ್ರೀರಾಮಚಂದ್ರನ ಕಿರಿಯ ಸಹೋದರ ಭರತನ ಪುತ್ರ, ತಕ್ಷ ಸ್ಥಾಪಿಸಿದ ನಗರವು ತಕ್ಷಶಿಲೆ ಹೆಸರಿನಿಂದ ವಿಶ್ವವಿಖ್ಯಾತ ನಗರವಾಗಿ ಬೆಳೆಯಿತು. ತಕ್ಷಶಿಲೆ ಹೆಸರಿಗೆ ಕಲ್ಲು ಅಥವಾ ತಕ್ಷನ ನಗರ ಎಂಬ ಎರಡು ಅರ್ಥಗಳಿವೆ. ಹೀಗಾಗಿ ತಕ್ಷಶಿಲೆ ನಗರವು ತ್ರೇತಾಯುಗ, ದ್ವಾಪರಯುಗವನ್ನೂ ದಾಟಿ ಇಂದಿನ ಕಾಲದವರೆಗೆ ಎಲ್ಲವನ್ನೂ ಕಂಡಿದೆ.

### ವಿಶ್ವದ ಪ್ರಥಮ ವಿಶ್ವವಿದ್ಯಾಲಯ

ತಕ್ಷಶಿಲೆಯನ್ನು ವಿಶ್ವದ ಅತ್ಯಂತ ಪ್ರಾಚೀನ ವಿಶ್ವವಿದ್ಯಾಲಯವೆಂದೇ ಹೇಳಲಾಗುತ್ತದೆ. ವಿಶ್ವದ ಮೂಲೆ ಮೂಲೆಗಳಿಂದ ವಿದ್ಯಾರ್ಥಿಗಳು ಉನ್ನತ ಶಿಕ್ಷಣಕ್ಕಾಗಿ ತಕ್ಷಶಿಲೆಯತ್ತ ಬರುತ್ತಿದ್ದರು. ಅಂದಿನ ಕಾಲದಲ್ಲಿ ಕಾಲೇಜು ಕ್ಯಾಂಪಸ್ ಇರುತ್ತಿರಲಿಲ್ಲ. ಗುರುಕುಲ ವ್ಯವಸ್ಥೆಯಲ್ಲಿ ಗುರುವಿನ ಆಶ್ರಮಗಳಲ್ಲಿ ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದರು. ತಕ್ಷಶಿಲೆ ನಗರದೆಲ್ಲೆಡೆ ವಿವಿಧ ವಿದ್ಯೆಗಳನ್ನು ಕಲಿಸಿಕೊಡುವ ಮಹಾನ್ ಗುರುಗಳು ಇರುತ್ತಿದ್ದರು.

### ತಕ್ಷಶಿಲೆಯ ಪ್ರಸಿದ್ಧ ಗುರು, ಶಿಷ್ಯರು

**ಪಾಣಿನಿ:** ಸಂಸ್ಕೃತ ವ್ಯಾಕರಣದ ಅಡಿಪಾಯವಾದ ಅಷ್ಟಾಧ್ಯಾಯಿ ಪುಸ್ತಕದ ಲೇಖಕರು ತಕ್ಷಶಿಲೆಯ ಅಧ್ಯಾಪಕ.

**ಚಾಣಕ್ಯ (ಕೌಟಿಲ್ಯ):** ಮೌರ್ಯ ಸಾಮ್ರಾಜ್ಯ ಸ್ಥಾಪನೆಯ ಕಾರಣಕರ್ತ ಪ್ರಸಿದ್ಧ ರಾಜಕೀಯ ಚಿಂತಕ ತಕ್ಷಶಿಲೆಯ ವಿದ್ಯಾರ್ಥಿ.

**ಚರಕ:** ಭಾರತೀಯ ಔಷಧ ಪಿತಾಮಹನೆಂದು ಕರೆಯಲ್ಪಡುವ ಚರಕ ಸಂಹಿತೆ ಬರೆದು ಆಯುರ್ವೇದ ಕ್ಷೇತ್ರದಲ್ಲಿ ಅಪಾರ ಕೊಡುಗೆಯನ್ನು ನೀಡಿದ ಪ್ರಾಚೀನ ಭಾರತೀಯ ವೈದ್ಯನೂ ತಕ್ಷಶಿಲೆಯ ವಿದ್ಯಾರ್ಥಿ.



### ಅಶೋಕನ ಕಾಲದ ಬೌದ್ಧರ ಕೇಂದ್ರ

ಸುಮಾರು 3ನೇ ಶತಮಾನದಿಂದ ತಕ್ಷಶಿಲೆ ಬೌದ್ಧ ಮತದ ಪ್ರಮುಖ ಕೇಂದ್ರವಾಗಿತ್ತು. ಅಶೋಕ ಚಕ್ರವರ್ತಿ ಬೌದ್ಧ ಧರ್ಮ ಸ್ವೀಕರಿಸಿದ ಬಳಿಕ ಏಷ್ಯಾದೆಲ್ಲೆಡೆ ಬೌದ್ಧ ಧರ್ಮದ ವ್ಯಾಪಕ ಪ್ರಚಾರವು ನಡೆದಿತ್ತು. ಇಂತಹ ಸಂದರ್ಭ ತಕ್ಷಶಿಲೆಯಲ್ಲಿ ಹಲವಾರು ಹೊಸ ಬೌದ್ಧ ಶಿಕ್ಷಣ ಕೇಂದ್ರಗಳು ತೆರೆದುಕೊಂಡವು. ನಗರದಲ್ಲಿ ಹಲವು ಬೌದ್ಧ ಸ್ತೂಪಗಳನ್ನು ನಿರ್ಮಿಸಲಾಗಿವೆ ಎಂಬ ಉಲ್ಲೇಖಗಳಿವೆ.



### ಹಲವು ಸಾಮ್ರಾಜ್ಯಗಳ ಸಾಂಸ್ಕೃತಿಕ ಕೇಂದ್ರ

ಶತಮಾನಗಳಿಂದ ತಕ್ಷಶಿಲೆ ಹಲವು ರಾಜರು ಮತ್ತು ಸಾಮ್ರಾಜ್ಯಗಳ ಆಡಳಿತದಲ್ಲಿ ಪ್ರಮುಖ ಕೇಂದ್ರವಾಗಿ ಗುರುತಿಸಲ್ಪಟ್ಟಿದೆ. 6ನೇ ಮತ್ತು 4ನೇ ಶತಮಾನ ಬಿಸಿಇ ಕಾಲದಲ್ಲಿ ಅಕೆಮೆನಿಡ ಪರ್ಷಿಯನ್ ಸಾಮ್ರಾಜ್ಯದ ಆಡಳಿತಕ್ಕೆ ಒಳಗಾಗಿತ್ತು. 326 ಬಿಸಿಇನಲ್ಲಿ ಅಲೆಗ್ಸಾಂಡರ್ ತನ್ನ ಭಾರತ ಯಾತ್ರೆ ವೇಳೆ ತಕ್ಷಶಿಲೆಗೆ ಭೇಟಿ ನೀಡಿದ್ದ. ಚಂದ್ರಗುಪ್ತ ಮೌರ್ಯ ತನ್ನ ಆಡಳಿತಾವಧಿಯಲ್ಲಿ ತಕ್ಷಶಿಲೆಯನ್ನೇ ತನ್ನ ಆಡಳಿತ ಮತ್ತು ಸಾಂಸ್ಕೃತಿಕ ಕೇಂದ್ರವನ್ನಾಗಿ ಘೋಷಿಸಿದ್ದನು. ಮೌರ್ಯರ ನಂತರ ಇಂಡೋ- ಗ್ರೀಕರು, ಇಂಡೋ-ಸಿಂಥಿಯನ್ನರು, ಕೊನೆಗೆ ತಕ್ಷಶಿಲೆ ಹಿಂದು-ಬೌದ್ಧ ರಾಜರಿದ್ದ ಕುಶನರ ನಿಯಂತ್ರಣದಲ್ಲಿತ್ತು. ಎಲ್ಲಾ ಸಾಮ್ರಾಜ್ಯಗಳ ರಾಜಕೀಯ, ಸಾಂಸ್ಕೃತಿಕ ಮತ್ತು ಕಲಾತ್ಮಕ ಅಭಿವೃದ್ಧಿ ತಕ್ಷಶಿಲೆಯತ್ತ ಬೊಟ್ಟು ಮಾಡುತ್ತವೆ.

### ಮಂಗನ ಕೈಗೆ ಸಿಕ್ಕ ಮಾಣಿಕ್ಯ

ನಮ್ಮ ಹಿರಿಯರು ಆಗಾಗ ಮಂಗನ ಕೈಗೆ ಮಾಣಿಕ್ಯ ಸಿಕ್ಕಿದಂತೆ ಎಂಬ ಮಾತನ್ನು ಹೇಳುತ್ತಾರೆ. ಅದೇ ರೀತಿ ಇಷ್ಟೊಂದು ರಾಜಕೀಯ ಆಡಳಿತ, ಸಾಂಸ್ಕೃತಿಕ ಮತ್ತು ಕಲಾತ್ಮಕ ಇತಿಹಾಸಗಳ ನೆಲೆಬೀಡಾದ ತಕ್ಷಶಿಲೆ ಅದರ ಮೌಲ್ಯ ಗೊತ್ತಿಲ್ಲದ ಇಸ್ಲಾಮಿಕ್ ರಾಷ್ಟ್ರ ಪಾಕಿಸ್ತಾನದ ಕೈಗೆ ಸಿಕ್ಕಿದ್ದು ಅತ್ಯಂತ ದುರದೃಷ್ಟಕರ. 1947ರ ದೇಶ ವಿಭಜನೆಯ ಸಂದರ್ಭ ಬ್ರಿಟಿಷರು ರಾವಲ್ಪಿಂಡಿ ಸಮೀಪದಲ್ಲಿರುವ ತಕ್ಷಶಿಲೆಯನ್ನು ಪಾಕಿಸ್ತಾನಕ್ಕೆ ಒಪ್ಪಿಸಿದ್ದರು. ಪಾಕ್ ಸೇರಿದರೂ ತಕ್ಷಶಿಲೆ ನಗರವು ಭಾರತೀಯ ನಾಗರಿಕತೆ ಜತೆಗಿನ ಅದರ ನಂಟನ್ನು ಇತಿಹಾಸದ ಪುಟಗಳಲ್ಲಿ ಹೇಳುತ್ತದೆ. ಪ್ರಾಚೀನ ಇತಿಹಾಸವು ಗಡಿ ವಿವಾದಗಳಿಗೂ ಮೀರಿದ ಕಾಲಾತೀತ ಸ್ಥಳವೆಂದು ಸ್ಪಷ್ಟವಾಗಿ ಹೇಳುತ್ತದೆ. ಲುಂಬಿನಿ (ಬುದ್ಧನ ಜನ್ಮ ಸ್ಥಾನ) ಮತ್ತು ಕಠ್ಮಂಡು ನಗರಗಳಂತೆ ತಕ್ಷಶಿಲೆಯೂ ದಕ್ಷಿಣ ಏಷ್ಯಾ ಇತಿಹಾಸದ ಪ್ರಮುಖ ಕೇಂದ್ರವಾಗಿದೆ.

ಇ-ರಿಕ್ಷಾ ಬ್ಯಾಟರಿ ಆಫ್ ಪ್ರ್ಯಾಂಕ್‌ಗಾಗಿ ಆ್ಯಪ್ ದುರ್ಬಳಕೆ

# 7 ಬ್ಯಾಟರಿ ನಿರ್ವಹಣಾ ಆ್ಯಪ್ಸ್ ತೆರವು

**• ಹೊಸದಿಲ್ಲಿ:** ಇ-ರಿಕ್ಷಾಗಳು ಮತ್ತು ಇತರ ಎಲೆಕ್ಟ್ರಿಕ್ ವಾಹನಗಳ ಬ್ಯಾಟರಿಗಳನ್ನು ದೂರದಿಂದ ಆಫ್ ಮಾಡುವ ಪ್ರ್ಯಾಂಕ್‌ಗೋಸ್ಕರ ದುರ್ಬಳಕೆ ಆಗುತ್ತಿರುವ 7 ಬ್ಯಾಟರಿ ನಿರ್ವಹಣಾ ಆ್ಯಪ್‌ಗಳನ್ನು ತಮ್ಮ ಆ್ಯಪ್‌ಸ್ಟೋರ್‌ಗಳಿಂದ ತಕ್ಷಣವೇ ತೆಗೆದುಹಾಕುವಂತೆ ಕೇಂದ್ರ ಸರ್ಕಾರವು ಶುಕ್ರವಾರ ಗೂಗಲ್ ಆ್ಯಂಡ್ರಾಯ್ಡ್ ಮತ್ತು ಆ್ಯಪಲ್ ಐಒಎಸ್‌ಗೆ ನೋಟಿಸ್ ಕಳುಹಿಸಿದೆ.

ಬ್ಯಾಟ್-ಬಿಎಂಎಸ್, ಸ್ಮಾರ್ಟ್ ಬಿಎಂಎಸ್, ಲಾಸಿಕ ಸೇರಿ ಒಟ್ಟು 7 ಆ್ಯಪ್‌ಗಳನ್ನು ಗೂಗಲ್ ಪ್ಲೇಸ್ಟೋರ್ ಮತ್ತು ಆ್ಯಪಲ್ ಸ್ಟೋರ್‌ನಿಂದ ತೆಗೆದುಹಾಕುವಂತೆ ಕೇಂದ್ರ ಎಲೆಕ್ಟ್ರಾನಿಕ್ ಮತ್ತು ಮಾಹಿತಿ ತಂತ್ರಜ್ಞಾನ ಸಚಿವಾಲಯವು ನೋಟಿಸ್ ಕಳುಹಿಸಿದೆ ಎಂದು ಸರ್ಕಾರಿ ಮೂಲಗಳು ತಿಳಿಸಿವೆ.

ಬ್ಯಾಟರಿ ಚಾಲಿತ ವಾಹನಗಳಲ್ಲಿ ಬ್ಯಾಟರಿ ಆಫ್ ಮಾಡುವುದು ಸೇರಿ ಯಾವುದೇ ರೀತಿಯ ಇಂತಹ ಆ್ಯಪ್‌ಗಳು ಆ್ಯಪ್‌ಸ್ಟೋರ್‌ಗಳಲ್ಲಿ ಕಾಣಲು ಸಿಗಬಾರದು ಎಂದು ಕೇಂದ್ರ ಸರ್ಕಾರ ಎಚ್ಚರಿಕೆ ನೀಡಿದೆ.

**ಮೂರು ಚೀನಾ ಆ್ಯಪ್‌ಗಳು:** ಇವುಗಳಲ್ಲಿ ಮೂರು ಚೀನಾ ಬ್ಯಾಟರಿ ನಿರ್ವಹಣಾ ಆ್ಯಪ್‌ಗಳಾದ ಬ್ಯಾಟ್-ಬಿಎಂಎಸ್, ಲಾಸಿಕ ಮತ್ತು ಇಪಾರ್ಟ್-ಐ-ಆಯಾನ್ ಅನ್ನು ತಕ್ಷಣವೇ ತಮ್ಮ ಆ್ಯಪ್‌ಸ್ಟೋರ್‌ಗಳಿಂದ ತೆಗೆದುಹಾಕಲು ಗೂಗಲ್ ಮತ್ತು ಆ್ಯಪಲ್‌ಗೆ ಕೇಂದ್ರ ಸರ್ಕಾರ ತಾಕೀತು ಮಾಡಿದೆ.

## ಕಿರುಸುದ್ದಿ

### ಅಮರನಾಥ ಯಾತ್ರಿಗಳಿಗೆ ಪ್ರಧಾನಿ ಶುಭ ಹಾರೈಕೆ

**• ಹೊಸದಿಲ್ಲಿ:** ವಾರ್ಷಿಕ ಶ್ರೀ ಅಮರನಾಥ ಯಾತ್ರೆ ಶುರುವಾಗಿದ್ದು, ಯಾತ್ರೆ ಒಂದು ಮಹಾನ್ ಮಂಗಳಕರ ಭಾಗ್ಯವೆಂದು ಯಾತ್ರೆಗೆ ಹೊರಟಿರುವ ಭಕ್ತರಿಗೆ ಪ್ರಧಾನಿ ನರೇಂದ್ರ ಮೋದಿ ಶುಭ ಹಾರೈಸಿದ್ದಾರೆ. ಯಾತ್ರಾ ಸಂದರ್ಭ ಸ್ವಚ್ಛತೆ, ಸುರಕ್ಷೆ, ಪರಿಸರ ಸಂರಕ್ಷಣೆ, ಸ್ಥಳೀಯ ಆರ್ಥಿಕತೆಗೆ ಬೆಂಬಲ, ರಾಷ್ಟ್ರೀಯ ಸೇವೆ ಈ 5 ವಿಚಾರಗಳನ್ನು ಕೇಂದ್ರೀಕರಿಸಿದ ಸಂಕಲ್ಪಗಳನ್ನು ಅನುಸರಿಸುವಂತೆ ಯಾತ್ರಿಕರನ್ನು ಪ್ರಧಾನಿ ಮೋದಿ ಕೋರಿದ್ದಾರೆ. ಯಾತ್ರಿಕರ ದ್ವಿತೀಯ ಬ್ಯಾಚ್ ಶುಕ್ರವಾರ ಮುಂಜಾನೆ ಬಹುಸ್ತರದ ಭದ್ರತಾ ವ್ಯವಸ್ಥೆಯೊಂದಿಗೆ ಜಮ್ಮುವಿನ ಭಗವತಿ ನಗರ ಯಾತ್ರಿ ನಿವಾಸದಿಂದ ಹೊರಟಿದ್ದಂತೆ ಪ್ರಧಾನಿ ಈ ರೀತಿ ಸಂದೇಶ ನೀಡಿದ್ದಾರೆ.

### ಇಂದು ಮೋದಿ ರಾಜಸ್ಥಾನ, ಗುಜರಾತ್‌ಗೆ ಭೇಟಿ

**• ಹೊಸದಿಲ್ಲಿ:** ಬಾಲೋತ್ರಾದಲ್ಲಿ ದೇಶದ ಮೊದಲ ಗ್ರೀನ್ ಫೀಲ್ಡ್ ಇಂಟಿಗ್ರೇಟೆಡ್ ರಿಫೈನರಿ-ಕಮ್-ಪೆಟ್ರೋಕೆಮಿಕಲ್ ಕಾಂಪ್ಲೆಕ್ಸ್ ಮತ್ತು ಸಾಣಂದ್‌ನಲ್ಲಿ ಸೆಮಿಕಂಡಕ್ಟರ್ ಅಸೆಂಬ್ಲಿ ಮತ್ತು ಟೆಸ್ಟ್ ಸೌಲಭ್ಯವನ್ನು ಉದ್ಘಾಟಿಸಲು ಪ್ರಧಾನಿ ನರೇಂದ್ರ ಮೋದಿ ಅವರು ಶನಿವಾರ ರಾಜಸ್ಥಾನ ಮತ್ತು ಗುಜರಾತ್‌ಗೆ ಭೇಟಿ ನೀಡಲಿದ್ದಾರೆ. ನಿಗದಿತ ವೇಳಾಪಟ್ಟಿಯಂತೆ, ಮೋದಿಯವರು ತಮ್ಮ ಭೇಟಿಯ ರಾಜಸ್ಥಾನ ಹಂತವನ್ನು ಜೋಧ್ಪುರದಿಂದ ಪ್ರಾರಂಭಿಸಲಿದ್ದು, ಅಲ್ಲಿ ಅವರು ಜೋಧ್ಪುರ ವಿಮಾನ ನಿಲ್ದಾಣದಲ್ಲಿ ಹೊಸ ಟರ್ಮಿನಲ್ ಕಟ್ಟಡವನ್ನು ಉದ್ಘಾಟಿಸಲಿದ್ದಾರೆ. ಪ್ರಾದೇಶಿಕ ವಾಯು ಸಂಪರ್ಕವನ್ನು ಬಲಪಡಿಸುವ ಗುರಿಯನ್ನು ಹೊಂದಿರುವ ಮಾರ್ಪಡಿಸಿದ ಉಡಾನ್ ಯೋಜನೆಗೆ ಚಾಲನೆ ನೀಡಲಿದ್ದಾರೆ. 480 ಕೋಟಿ ರೂ.ವೆಚ್ಚದಲ್ಲಿ ನಿರ್ಮಿಸಲಾಗಿರುವ ಈ ಹೊಸ ವಿಮಾನ ನಿಲ್ದಾಣದ ಟರ್ಮಿನಲ್ ವಾರ್ಷಿಕವಾಗಿ 20 ಲಕ್ಷ ಪ್ರಯಾಣಿಕರನ್ನು ನಿಭಾಯಿಸುವ ಸಾಮರ್ಥ್ಯವನ್ನು ಹೊಂದಿದೆ. ನಂತರ ಪ್ರಧಾನಿ ಮೋದಿ ಅವರು ಬಾಲೋತ್ರಾಗೆ ಪ್ರಯಾಣ ಬೆಳೆಸಲಿದ್ದು, ಅಲ್ಲಿ ಅವರು ಸಾರ್ವಜನಿಕ ಸಭೆಯನ್ನು ಉದ್ದೇಶಿಸಿ ಮಾತನಾಡುವ ಮೊದಲು ಸುಮಾರು 1 ಲಕ್ಷ ಕೋಟಿ ರೂ. ಮೌಲ್ಯದ ಯೋಜನೆಗಳಿಗೆ ಶಂಕುಸ್ಥಾಪನೆ, ಉದ್ಘಾಟನೆ ನೆರವೇರಿಸಲಿದ್ದಾರೆ.

### ಪಾಕ್: ಕಂದಕಕ್ಕೆ ಬಸ್ ಉರುಳಿ 40 ಬಲಿ

**• ಪೇಶಾವರ್:** ಪಾಕಿಸ್ತಾನದಲ್ಲಿ ಶುಕ್ರವಾರ ಸಂಭವಿಸಿದ ಭೀಕರ ಬಸ್ ಅಪಘಾತದಲ್ಲಿ 40 ಮಂದಿ ಮೃತಪಟ್ಟಿದ್ದಾರೆ. ಕ್ವೆಟ್ಟಾದಿಂದ ಝೂಬ್-ಶೇರಾನಿ ಹೆದ್ದಾರಿಯ ಮೂಲಕ ಪೇಶಾವರದತ್ತ ಅತಿವೇಗದಿಂದ ಮತ್ತು ಸಾಮರ್ಥ್ಯಕ್ಕಿಂತ ಹೆಚ್ಚು ಪ್ರಯಾಣಿಕರನ್ನು ಹೊತ್ತೊಯ್ಯುತ್ತಿದ್ದ ಬಸ್ ನಿಯಂತ್ರಣ ತಪ್ಪಿ ಕಂದಕಕ್ಕೆ ಉರುಳಿದೆ. ದುರಂತದಲ್ಲಿ 8 ಮಂದಿ ಗಾಯಗೊಂಡಿದ್ದಾರೆ.

# ರಕ್ಷಣಾ ಪಡೆಗಳಿಗೆ ₹52 ಸಾವಿರ ಕೋಟಿ ಶಸ್ತ್ರಬಲ

**• ಹೊಸದಿಲ್ಲಿ:** ಭಾರತೀಯ ಸೇನೆಯ ಮೂರೂ ಪಡೆಗಳ ಯುದ್ಧ ಸನ್ನದ್ಧತೆ ಮತ್ತು ಕಾರ್ಯಾಚರಣಾ ಸಾಮರ್ಥ್ಯ ಹೆಚ್ಚಿಸುವ ಉದ್ದೇಶದಿಂದ ಸುಮಾರು 52 ಸಾವಿರ ಕೋಟಿ ರೂ. ಮೌಲ್ಯದ ಅತ್ಯಾಧುನಿಕ ಶಸ್ತ್ರಾಸ್ತ್ರ, ಕ್ಷಿಪಣಿ, ಡ್ರೋನ್ ಹಾಗೂ ರಕ್ಷಣಾ ವ್ಯವಸ್ಥೆಗಳ ಖರೀದಿಗೆ ಕೇಂದ್ರ ಸರ್ಕಾರ ತಾತ್ವಿಕ ಅನುಮೋದನೆ ನೀಡಿದೆ.

- ಕಾಮಿಕಾಜೆ ಡ್ರೋನ್, ಕ್ಷಿಪಣಿ ಖರೀದಿಗೆ ಕೇಂದ್ರ ಅಸ್ತು
- ವಾಯು ರಕ್ಷಣಾ ವ್ಯವಸ್ಥೆ, ನೌಕಾ ಕಣ್ಗಾವಲು ಸಾಮರ್ಥ್ಯ ವೃದ್ಧಿ

ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅಧ್ಯಕ್ಷತೆಯಲ್ಲಿ ಶುಕ್ರವಾರ ನಡೆದ ರಕ್ಷಣಾ ಖರೀದಿ ಮಂಡಳಿ ಸಭೆಯಲ್ಲಿ ಭೂಸೇನೆ, ನೌಕಾಪಡೆ, ವಾಯುಪಡೆಗಳಿಗೆ ಸಂಬಂಧಿಸಿದ ಹಲವು ಪ್ರಸ್ತಾವನೆಗಳಿಗೆ ಒಪ್ಪಿಗೆ ನೀಡಲಾಯಿತು. ಇದು ಖರೀದಿ ಪ್ರಕ್ರಿಯೆಯ ಮೊದಲ ಹಂತದ ಅನುಮೋದನೆಯಾಗಿದ್ದು, ಮುಂದಿನ ಪ್ರಕ್ರಿಯೆಗಳ ಬಳಿಕ ಒಪ್ಪಂದ ಅಂತಿಮಗೊಳ್ಳಲಿದೆ.

ಭೂಸೇನೆಗಾಗಿ ಶತ್ರು ಡ್ರೋನ್‌ಗಳನ್ನು ನಿಷ್ಕ್ರಿಯಗೊಳಿಸುವ ಆಕಾಶ್ ತರಂಗ್ ವಿದ್ಯುನ್ಮಾನ ಯುದ್ಧ ವ್ಯವಸ್ಥೆ, ಹೊತ್ತು ಸಾಗಿಸಬಹುದಾದ ಟ್ಯಾಂಕ್ ನಿರೋಧಕ ನಿರ್ದೇಶಿತ ಕ್ಷಿಪಣಿ, ಮಧ್ಯಮ ವ್ಯಾಪ್ತಿಯ ನೆಲದಿಂದ ಆಕಾಶಕ್ಕೆ ಚಿಮ್ಮುವ ಕ್ಷಿಪಣಿ, ಅತಿ ಕಡಿಮೆ ವ್ಯಾಪ್ತಿಯ ವಾಯು ರಕ್ಷಣಾ ವ್ಯವಸ್ಥೆ ಹಾಗೂ ಟ್ಯಾಂಕ್‌ಗಳಿಗೆ ಸಕ್ರಿಯ ರಕ್ಷಣಾ ವ್ಯವಸ್ಥೆ ಖರೀದಿಸಲಾಗುತ್ತದೆ. ಇದರ ಜತೆಗೆ ಜೆಟ್‌ಚಾಲಿತ ಕಾಮಿಕಾಜಿ ಡ್ರೋನ್‌ಗಳ ಖರೀದಿಗೂ ಅನುಮತಿ ನೀಡಲಾಗಿದೆ. ಇವು ನಿಖರ ದಾಳಿ ನಡೆಸುವುದರೊಂದಿಗೆ ವಿದ್ಯುನ್ಮಾನ ಯುದ್ಧ ಪರಿಸ್ಥಿತಿಯಲ್ಲೂ ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಲಿವೆ.

# ಮಕ್ಕಳ ಮೇಲೆ ದೌರ್ಜನ್ಯ: ಮೆಟಾಗೆ ಕೇಂದ್ರ ಸಮನ್ಸ್

**ಹೊಸದಿಲ್ಲಿ:** ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ ಉತ್ತೇಜಿಸುವ ಜಾಹೀರಾತುಗಳನ್ನು ಇನ್‌ಸ್ಟಾಗ್ರಾಮ್‌ನಲ್ಲಿ ಪ್ರಸಾರ ಮಾಡಿರುವ ಕುರಿತು ವಿವರಣೆ ನೀಡುವಂತೆ ಮೆಟಾ ಅಧಿಕಾರಿಗಳಿಗೆ ಕೇಂದ್ರ ಸರ್ಕಾರ ಸಮನ್ಸ್ ಕಳುಹಿಸಿದೆ. ಫೋಟೋ, ವಿಡಿಯೋಗಳನ್ನು ಸಾರ್ವಜನಿಕವಾಗಿ ಹಂಚಿಕೊಳ್ಳುವ ಇನ್‌ಸ್ಟಾಗ್ರಾಮ್, ಭಾರತದಲ್ಲಿ ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ ಉತ್ತೇಜಿಸುವ ಜಾಹೀರಾತುಗಳನ್ನು ಪ್ರಸಾರ ಮಾಡುತ್ತಿದೆ ಎಂಬ ಬ್ರಿಟಿಷ್ ಮಾಧ್ಯಮ ದೈತ್ಯ ಬಿಬಿಸಿ ವರದಿಯ ನಂತರ ಈ ಬೆಳವಣಿಗೆ ನಡೆದಿದೆ.

ವರದಿಗಳ ಪ್ರಕಾರ, ಆ್ಯಪ್‌ನ ಮೇಲ್ವಿಚಾರಣಾ ತಂತ್ರಜ್ಞಾನವು ಅನುಮತಿಸಿದ ಬಳಿಕ ಇಂತಹ ಕೀಳುಮಟ್ಟದ ಜಾಹೀರಾತುಗಳನ್ನು ಇನ್‌ಸ್ಟಾಗ್ರಾಮ್ ಪ್ರಕಟಿಸಿದೆ. ಅತ್ಯಾಚಾರ ವಿಡಿಯೋ, ಮಕ್ಕಳ ವಿಡಿಯೋ ಎಂಬಿತ್ಯಾದಿ ಪದಗಳನ್ನು ಬಳಸಿಕೊಂಡು ಜಾಹೀರಾತುಗಳ ಪ್ರದರ್ಶಿಸಲಾಗಿದೆ. ಇವುಗಳನ್ನು ಟೆಲಿಗ್ರಾಮ್ ಚಾನೆಲ್‌ಗಳಲ್ಲಿ 99 ರೂ. ನೀಡಿ ಖರೀದಿಸಲು ಉತ್ತೇಜಿಸಲಾಗುತ್ತಿದೆ. ಈ ವಿಚಾರದಲ್ಲಿ ಮೆಟಾ ಕಂಪನಿಯನ್ನು ಬಿಬಿಸಿ ಸಂಪರ್ಕಿಸಿದ್ದು, ಅಂತಹ ಪೋಸ್ಟ್ ಹಂಚಿಕೊಂಡ ಇನ್‌ಸ್ಟಾಗ್ರಾಮ್ ಖಾತೆಗಳನ್ನು ಅಮಾನತುಗೊಳಿಸಿರುವುದಾಗಿ ಮೆಟಾ ಸಮರ್ಥನೆ ಮಾಡಿಕೊಂಡಿದೆ.

**ಟೆಲಿಗ್ರಾಮ್, ಸಿಗ್ನಲ್‌ಗೆ ನೋಟಿಸ್:** ತಮ್ಮ ಮೆಸೇಜಿಂಗ್ ಆ್ಯಪ್‌ಗಳಲ್ಲಿ ಬಳಕೆದಾರರ ಹೆಸರು (ಯೂಸರ್‌ನೇಮ್) ಸೌಲಭ್ಯ ನೀಡುತ್ತಿರುವ ಕುರಿತು ವಿವರಣೆ ನೀಡುವಂತೆ ಕೇಂದ್ರ ಸರ್ಕಾರ ಗುರುವಾರ ನೋಟಿಸ್ ಕಳುಹಿಸಿತ್ತು. ಟೆಲಿಗ್ರಾಮ್ ಇನ್ನೂ ಸಹ ತನ್ನ ಯೂಸರ್‌ನೇಮ್ ಸೌಲಭ್ಯ ಮುಂದುವರಿಸಿದ ಬಗ್ಗೆ ವಿವರಣೆ ಕೇಳಿದೆ. ಈ ಬೆನ್ನಲ್ಲೆ ಮೆಟಾ ತಂಡ ಐಟಿ ಇಲಾಖೆ ಅಧಿಕಾರಿಗಳನ್ನು ಭೇಟಿ ಮಾಡಿದೆ.

# ಟಿಎಂಸಿ ಕಚೇರಿ ವಶಕ್ಕೆ ಪಡೆದ ಬಂಡಾಯ ಬಣ

**• ಕೋಲ್ಕತ್ತಾ:** ಪಶ್ಚಿಮ ಬಂಗಾಳದ ತೃಣಮೂಲ ಕಾಂಗ್ರೆಸ್‌ನಲ್ಲಿ ಬಣ ಸಂಘರ್ಷ ತೀವ್ರಗೊಂಡಿದ್ದು, ವಿಪಕ್ಷ ನಾಯಕ ರಿತಬ್ರತ ಬ್ಯಾನರ್ಜಿ ನೇತೃತ್ವದ ಬಂಡಾಯ ಬಣ ಶುಕ್ರವಾರ ಕೋಲ್ಕತ್ತಾದ ಪಕ್ಷದ ಪ್ರಧಾನ ಕಚೇರಿಯನ್ನು ವಶಕ್ಕೆ ಪಡೆದಿದೆ.



ಇಎಂ ಬೈಪಾಸ್‌ನ ಮೆಟ್ರೋಪಾಲಿಟನ್ ಪ್ರದೇಶದಲ್ಲಿರುವ ಕಚೇರಿಗೆ ಆಗಮಿಸಿದ ಬಂಡಾಯ ನಾಯಕರು, ಗೇಟ್‌ಗಳಿಗೆ ಹೊಸ ಬೀಗ ಹಾಕಿ, ತಮ್ಮ ನಾಯಕತ್ವದ ಹೊಸ ಭಿತ್ತಿಪತ್ರಗಳನ್ನು ಅಳವಡಿಸಿದ್ದಾರೆ. ಈ ಭಿತ್ತಿಪತ್ರಗಳಲ್ಲಿ ಮಾಜಿ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರ ಚಿತ್ರವಿಲ್ಲ. ಹಿರಿಯ ಶಾಸಕ ಅರೂಪ್ ರಾಯ್ ಅವರನ್ನು ಪಕ್ಷದ ಅಧ್ಯಕ್ಷರೆಂದು ಬಿಂಬಿಸಲಾಗಿದೆ.

ವಿಷಯ ತಿಳಿದು ಸ್ಥಳಕ್ಕೆ ಬಂದ ಮಮತಾ ಬಣದ ನಾಯಕ ಕುನಾಲ್ ಘೋಷ್ ಅವರಿಗೆ ಬೀಗ ಹಾಕಿದ್ದರಿಂದ ಕಚೇರಿ ಪ್ರವೇಶಿಸಲು ಸಾಧ್ಯವಾಗಲಿಲ್ಲ. ಬಂಡಾಯ ನಾಯಕರು ಪಕ್ಷದ ಕಾರ್ಯಕರ್ತರಲ್ಲಿ ಗೊಂದಲ ಸೃಷ್ಟಿಸುತ್ತಿದ್ದಾರೆ ಎಂದು ಅವರು ಆರೋಪಿಸಿದರು. ಪಕ್ಷದ ಹೆಸರು, ಚಿಹ್ನೆ, ಆಸ್ತಿ ಹಾಗೂ ಸಂಘಟನೆಯ ಮೇಲಿನ ಹಕ್ಕಿಗಾಗಿ ಎರಡೂ ಬಣಗಳು ಚುನಾವಣಾ ಆಯೋಗದ ಮೊರೆ ಹೋಗಿವೆ. ಆಯೋಗವು ಜುಲೈ 6ರೊಳಗೆ ಅಗತ್ಯ ದಾಖಲೆಗಳನ್ನು ಸಲ್ಲಿಸುವಂತೆ ಸೂಚಿಸಿದೆ. 80 ಶಾಸಕರ ಪೈಕಿ 58 ಮಂದಿ ರಿತಬ್ರತ ಬಣಕ್ಕೆ ಬೆಂಬಲ ನೀಡಿದ್ದಾರೆ ಎನ್ನಲಾಗಿದೆ.

# ಜು.6ರಿಂದ ಪ್ರಧಾನಿ ಮೋದಿ 3 ದೇಶಗಳ ಪ್ರವಾಸ

**• ಹೊಸದಿಲ್ಲಿ:** ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಜುಲೈ 6ರಿಂದ 11ರವರೆಗೆ ಇಂಡೋನೇಷ್ಯಾ, ಆಸ್ಟ್ರೇಲಿಯಾ ಮತ್ತು ನ್ಯೂಜಿಲೆಂಡ್ ರಾಷ್ಟ್ರಗಳಿಗೆ ಮೂರು ದೇಶಗಳ ಪ್ರವಾಸ ಕೈಗೊಳ್ಳಲಿದ್ದಾರೆ ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯ (ಎಂಇಎ) ಶುಕ್ರವಾರ ತಿಳಿಸಿದೆ. ಈ ಪ್ರವಾಸದ ಮೂಲಕ ಭಾರತ ಈ 3 ರಾಷ್ಟ್ರಗಳೊಂದಿಗಿನ ಸಂಬಂಧವನ್ನು ಮತ್ತಷ್ಟು ಗಟ್ಟಿಗೊಳಿಸುವ ಗುರಿ ಹೊಂದಿದೆ. ಪ್ರವಾಸದ ಮೊದಲ ಹಂತದಲ್ಲಿ ಮೋದಿ ಇಂಡೋನೇಷ್ಯಾಗೆ ತೆರಳಲಿದ್ದು, ನಂತರ ಆಸ್ಟ್ರೇಲಿಯಾಕ್ಕೆ ಪ್ರಯಾಣಿಸಲಿದ್ದಾರೆ. ಅಲ್ಲಿ ಅವರ ಪ್ರಮುಖ ಕಾರ್ಯಕ್ರಮಗಳು ಮೆಲ್ಬರ್ನ್‌ನಲ್ಲಿ ನಡೆಯಲಿವೆ. ನ್ಯೂಜಿಲೆಂಡ್ ಭೇಟಿಯೊಂದಿಗೆ ಅವರ ಈ ಪ್ರವಾಸ ಸಮಾಪ್ತಿಗೊಳ್ಳಲಿದೆ. ಸುಮಾರು 40 ವರ್ಷಗಳ ಬಳಿಕ ಭಾರತದ ಪ್ರಧಾನಮಂತ್ರಿಯೊಬ್ಬರು ನ್ಯೂಜಿಲೆಂಡ್‌ಗೆ ಭೇಟಿ ನೀಡುತ್ತಿರುವುದು ಇದೇ ಮೊದಲು ಎಂಬುದು ವಿಶೇಷ.

- ಇಂಡೋನೇಷ್ಯಾ, ಆಸ್ಟ್ರೇಲಿಯಾ, ನ್ಯೂಜಿಲೆಂಡ್‌ಗೆ ಭೇಟಿ

ತ್ರಿವಳಿ ತಲಾಖ್ ಹೆಸರಲ್ಲಿ ಅಪರಾಧಕ್ಕೆ ರಕ್ಷಣೆಯಿಲ್ಲ: ಅಲಹಾಬಾದ್ ಹೈಕೋರ್ಟ್

# ಮಹಿಳೆಯರ ಲೈಂಗಿಕ ಶೋಷಣೆ ಸಹಿಸಲ್ಲ

**• ಲಖನೌ:** ತ್ರಿವಳಿ ತಲಾಖ್ ಮತ್ತು ನಿಖಾಹ್ ಹಲಾಲಾದಂತಹ ಪದ್ಧತಿಗಳ ಹೆಸರಿನಲ್ಲಿ ಮಹಿಳೆಯರನ್ನು ಲೈಂಗಿಕವಾಗಿ ಶೋಷಿಸಲು ಅವಕಾಶ ನೀಡಲಾಗದು. ವೈಯಕ್ತಿಕ ಕಾನೂನನ್ನು ಅಪರಾಧ ಕೃತ್ಯಗಳಿಗೆ ರಕ್ಷಾ ಕವಚವಾಗಿ ಬಳಸಿಕೊಳ್ಳುವಂತಿಲ್ಲ ಎಂದು ಅಲಹಾಬಾದ್ ಹೈಕೋರ್ಟ್ ಕಠಿಣವಾಗಿ ಹೇಳಿದೆ.



ಉತ್ತರ ಪ್ರದೇಶದ ಅಮ್ರೋಹಾ ಜಿಲ್ಲೆಯಲ್ಲಿ ಮಹಿಳೆಯೊಬ್ಬರಿಗೆ ಅಪ್ರಾಪ್ತ ವಯಸ್ಸಿನಲ್ಲೇ ವಿವಾಹ ಮಾಡಿಸಿ, ತ್ರಿವಳಿ ತಲಾಖ್, ನಿಖಾಹ್ ಹಲಾಲಾ ಮತ್ತು ಮರು ವಿವಾಹದ ಹೆಸರಿನಲ್ಲಿ ಪದೇ ಪದೆ ಲೈಂಗಿಕ ಶೋಷಣೆ ನಡೆಸಲಾಗಿದೆ ಎಂಬ ಆರೋಪಕ್ಕೆ ಸಂಬಂಧಿಸಿದ ಪ್ರಕರಣದ ವಿಚಾರಣೆ ವೇಳೆ ನ್ಯಾಯಾಲಯ ಈ ಅಭಿಪ್ರಾಯ ವ್ಯಕ್ತಪಡಿಸಿದೆ.

ಪ್ರಕರಣದಲ್ಲಿ ದಾಖಲಾಗಿರುವ ಎಫ್‌ಐಆರ್ ರದ್ದುಗೊಳಿಸುವಂತೆ ಹಾಗೂ ಬಂಧನದಿಂದ ರಕ್ಷಣೆ ನೀಡುವಂತೆ ಕೋರಿ ಮಹಿಳೆಯ ಮಾಜಿ ಪತಿ, ಮೌಲ್ವಿ, ಸಂಬಂಧಿಕರು ಸೇರಿದಂತೆ ಆರೋಪಿಗಳು ಸಲ್ಲಿಸಿದ್ದ ಅರ್ಜಿಗಳನ್ನು ನ್ಯಾಯಮೂರ್ತಿಗಳಾದ ಜೆ.ಜೆ. ಮುನೀರ್ ಮತ್ತು ತರುಣ್ ಸಕ್ಸೇನಾ ಅವರ ವಿಭಾಗೀಯ ಪೀಠ ವಜಾಗೊಳಿಸಿದೆ.

ಆರೋಪಗಳು ಅತ್ಯಂತ ಗಂಭೀರ ಸ್ವರೂಪದ್ದಾಗಿದ್ದು, ಮೇಲ್ನೋಟಕ್ಕೆ ಕಾನೂನಿಗೆ ವಿರುದ್ಧವಾಗಿವೆ. ಇಂತಹ ಕೃತ್ಯಗಳು ಸಮಾಜದ ಕರಾಳ ಪುಟವಾಗಿದ್ದು, ಸಂವಿಧಾನ ನೀಡಿರುವ ಸಮಾನತೆ ಮತ್ತು ಮಾನವ ಘನತೆಯ ತತ್ವಗಳಿಗೆ ವಿರುದ್ಧವಾಗಿವೆ ಎಂದು ಪೀಠ ಹೇಳಿದೆ. ಪ್ರಕರಣದ ದಾಖಲೆಗಳು ಅಪ್ರಾಪ್ತೆಯ ವಿರುದ್ಧ ಪೂರ್ವಯೋಜಿತ ಸಾಮೂಹಿಕ ಅತ್ಯಾಚಾರ ನಡೆದಿರುವ ಸಾಧ್ಯತೆಯನ್ನು ಸೂಚಿಸುತ್ತಿದ್ದು, ಸಮಗ್ರ ತನಿಖೆ ಅಗತ್ಯವಾಗಿದೆ ಎಂದಿದೆ.

### 15ನೇ ವಯಸ್ಸಿನಲ್ಲೇ ವಿವಾಹ

ದೂರುದಾರ ಮಹಿಳೆಯನ್ನು 2015ರ ಏಪ್ರಿಲ್‌ನಲ್ಲಿ ಸುಮಾರು 15ನೇ ವಯಸ್ಸಿನಲ್ಲೇ ಅಜರ್ ನವಾಜ್ ಎಂಬಾತನೊಂದಿಗೆ ಬಲವಂತವಾಗಿ ವಿವಾಹ ಮಾಡಿಸಲಾಗಿತ್ತು ಎಂದು ಎಫ್‌ಐಆರ್‌ನಲ್ಲಿ ಆರೋಪಿಸಲಾಗಿದೆ. 2016ರ ಜನವರಿಯಲ್ಲಿ ಪತಿ ತ್ರಿವಳಿ ತಲಾಖ್ ನೀಡಿದ ಬಳಿಕ, ಮೌಲಾನಾ ಖಯೂಮ್ ಎಂಬಾತನೊಂದಿಗೆ ನಿಖಾಹ್ ಹಲಾಲಾ ನಡೆಸಿ, 2017ರಲ್ಲಿ ಮತ್ತೆ ಅಜರ್‌ನೊಂದಿಗೆ ಮದುವೆ ಮಾಡಲಾಗಿತ್ತು ಎನ್ನಲಾಗಿದೆ.

ವಿಕ್ರಮ್-1 ಅನಾವರಣಗೊಳಿಸಿದ ಸ್ಕೈರೂಟ್ ಏರೋಸ್ಪೇಸ್

# ಖಾಸಗಿ ಮಾರುಕಟ್ಟೆಗೆ ರಾಕೆಟ್ ವಿಕ್ರಮ

**• ಶ್ರೀಹರಿಕೋಟಾ:** ದೇಶದ ಮೊದಲ ಬಾಹ್ಯಾಕಾಶ ತಂತ್ರಜ್ಞಾನ ನವೋದ್ಯಮ ಸ್ಕೈರೂಟ್ ಏರೋಸ್ಪೇಸ್, ಭಾರತದ ಮೊದಲ ಖಾಸಗಿ ಹಾಗೂ ಅತಿ ಸಣ್ಣ ಭೂಕಕ್ಷಾ ರಾಕೆಟ್ ವಿಕ್ರಮ್-1ನ್ನು ಅನಾವರಣಗೊಳಿಸಿದೆ.

ಜು.12ರಿಂದ ಆ.4ರೊಳಗೆ ಆಗಮನ್ ಯೋಜನೆ ಅನ್ವಯ ದೇಶೀಯ ಮತ್ತು ಅಂತಾರಾಷ್ಟ್ರೀಯ ಗ್ರಾಹಕರ ಸಣ್ಣ ಉಪಗ್ರಹಗಳನ್ನು ಭೂಕಕ್ಷೆಯಾಚೆಗೆ ವಿಕ್ರಮ್ ಹೊತ್ತೊಯ್ಯಲಿದೆ. 450 ಕಿ.ಮೀ. ದೂರ ಭೂಕಕ್ಷೆಗೆ 60 ಡಿಗ್ರಿ ಕೋನದಲ್ಲಿ ರಾಕೆಟ್ ಸಂಚರಿಸಲಿದೆ. ಸಣ್ಣ ಉಪಗ್ರಹಗಳಿಗಾಗಿ ನಿರ್ಮಿಸಲಾದ ರಾಕೆಟ್ 350 ಕೆ.ಜಿ. ಪೇಲೋಡ್ ಸಾಮರ್ಥ್ಯ ಹೊಂದಿದೆ.

ವಿಕ್ರಮ್-1 ರಾಕೆಟ್, ಕೆಲವು ವರ್ಷಗಳ ತಾಂತ್ರಿಕ ನಾವೀನ್ಯತೆ ಮತ್ತು ಭಾರತದ ಉದಯೋನ್ಮುಖ ಖಾಸಗಿ ಬಾಹ್ಯಾಕಾಶ ವಲಯದ ಪ್ರಗತಿಯನ್ನು ಪ್ರತಿನಿಧಿಸುತ್ತದೆ. ಹಲವು ಪರೀಕ್ಷೆಗಳು, ಹವಾಮಾನ ಪರಿಸ್ಥಿತಿ ಮತ್ತು ನಿಯಂತ್ರಕ ಅಂಗೀಕಾರಗಳು ಬಾಕಿ ಇರುವುದರಿಂದ ಆ.4ರೊಳಗೆ ಉಡಾವಣೆ ನಡೆಸಲಾಗುವುದು.



- ದೇಶದ ಮೊದಲ ಖಾಸಗಿ ಭೂಕಕ್ಷಾ ರಾಕೆಟ್
- ದೇಶದ ಅತಿ ಸಣ್ಣ ಭೂಕಕ್ಷಾ ರಾಕೆಟ್
- ಪೇಲೋಡ್ ಸಾಮರ್ಥ್ಯ: 350 ಕೆ.ಜಿ.

> ವಿಕ್ರಮ್-1 ಭೂಕಕ್ಷಾ ರಾಕೆಟ್‌ನ ನೈಜ ಸಮಯದ ಹಾರಾಟ ಪ್ರದರ್ಶನದ ಮಾಹಿತಿ ಸಂಗ್ರಹಿಸುವುದೇ ಆಗಮನ್ ಯೋಜನೆಯ ಮೂಲ ಉದ್ದೇಶ. ನಾವು ವಿಶ್ವಾಸಾರ್ಹ, ಉನ್ನತ ದರ್ಜೆಯ ರಾಕೆಟ್ ವಿನ್ಯಾಸ ಅಭಿವೃದ್ಧಿ ಮಾಡಿರುವುದನ್ನು ಈ ಉಡಾವಣೆ ದೃಢೀಕರಿಸಲಿದೆ.
>
> ■ ಪವನ್ ಕುಮಾರ್ ಚಂದನ, ಸಹ-ಸಂಸ್ಥಾಪಕ ಮತ್ತು ಸಿಇಒ

**ಜಾಗತಿಕ ಮಟ್ಟದಲ್ಲಿ ಭಾರತದ ಆಗಮನ:** ಇದು ಆಗಮನ್ ಬಾಹ್ಯಾಕಾಶ ಯೋಜನೆಯ ಅಂಗವಾಗಿದ್ದು, ಸಂಸ್ಕೃತ ಪದ ಆಗಮನ್ ಎಂದರೆ ಆಗಮನ ಎಂಬರ್ಥ.

**ಬಾಹ್ಯಾಕಾಶ ಯೋಜನೆಗಳ ಪಿತಾಮಹನಿಗೆ ಗೌರವ:** ಭೂಕಕ್ಷಾ ರಾಕೆಟ್‌ಗೆ ವಿಕ್ರಮ್ ಹೆಸರನ್ನಿಟ್ಟು, ಭಾರತೀಯ ಬಾಹ್ಯಾಕಾಶ ಯೋಜನೆಗಳ ಪಿತಾಮಹ ಡಾ. ವಿಕ್ರಮ್ ಸಾರಾಭಾಯ್ ಅವರಿಗೆ ಗೌರವ ಸಲ್ಲಿಸಲಾಗಿದೆ.

## ಕಿರುಸುದ್ದಿ



ಬಳ್ಳಾರಿ: ಬೆಂಗಳೂರು ಕೆಪಿಸಿಸಿ ಕಚೇರಿಯಲ್ಲಿ ಎಸ್‌ಐಆರ್ ಮೇಲ್ವಿಚಾರಣಾ ಸಮಿತಿ ಹಾಗೂ ಜಿಲ್ಲಾವಾರು ವೀಕ್ಷಕರ ಸಭೆಯನ್ನು ಕೆಪಿಸಿಸಿ ಅಧ್ಯಕ್ಷ ಬಿಕೆ ಹರಿಪ್ರಸಾದ್ ಅವರ ನೇತೃತ್ವದಲ್ಲಿ ಆಯೋಜಿಸಲಾಗಿತ್ತು. ಸಂಸದ ಈ.ತುಕಾರಾಂ, ಮಾಜಿ ವಿಧಾನ ಪರಿಷತ್ ಸದಸ್ಯ ಕೆ.ಎಸ್.ಎಲ್.ಸ್ವಾಮಿ, ಬುಡಾ ಅಧ್ಯಕ್ಷ ಜೆ.ಎಸ್. ಆಂಜನೇಯುಲು, ಬಳ್ಳಾರಿ ನಗರ ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಅಲ್ಲಂ ಪ್ರಶಾಂತ್, ಕಾರ್ಯಾಧ್ಯಕ್ಷ ಬೋಯಪಾಟಿ ವಿಷ್ಣುವರ್ಧನ್, ಉಪಾಧ್ಯಕ್ಷ ಕೆ.ಶ್ರೀನಿವಾಸಲು ಇತರರಿದ್ದರು.

### ವೈದ್ಯಕೀಯ ಬಡ ವಿದ್ಯಾರ್ಥಿಗೆ ಧನಸಹಾಯ



ಯಲಬುರ್ಗಾ: ಎಂಬಿಬಿಎಸ್ ನಾಲ್ಕನೇ ವರ್ಷದಲ್ಲಿ ಅಭ್ಯಾಸ ಮಾಡುತ್ತಿರುವ ಬಡ ಕುಟುಂಬದ ಪ್ರತಿಭಾನ್ವಿತ ವಿದ್ಯಾರ್ಥಿ ನಾಗರಾಜ ಪೂಜಾರ ಅವರ ಮುಂದಿನ ವಿದ್ಯಾಭ್ಯಾಸಕ್ಕಾಗಿ ನಮ್ಮ ಕುಟುಂಬದ ವತಿಯಿಂದ ಧನ ಸಹಾಯವನ್ನು ವಿತರಿಸುವ ಮೂಲಕ ಮುಂದಿನ ಶೈಕ್ಷಣಿಕ ವಿದ್ಯಾಭ್ಯಾಸ ಯಶಸ್ವಿಯಾಗಲೆಂದು ಮಾಜಿ ಜಿಪಂ ಸದಸ್ಯ ಅರವಿಂದಗೌಡ ಪಾಟೀಲ ಹೇಳಿದರು. ತಾಲೂಕಿನ ವಜ್ರಬಂಡಿ ಗ್ರಾಮದ ವಿದ್ಯಾರ್ಥಿ ಎಂಬಿಬಿಎಸ್ ನಾಲ್ಕನೆ ವರ್ಷದಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗೆ ಧನಸಹಾಯ ವಿತರಿಸಿ ಮಾತನಾಡಿದ ಅವರು ವಜ್ರಬಂಡಿ ಗ್ರಾಮದ ಬಡ ಕುಟುಂಬದಲ್ಲಿ ಜನಿಸಿದ ನಾಗರಾಜ ತಂದಿ ಬಸಪ್ಪ ಪೂಜಾರ ಪ್ರತಿಭಾನ್ವಿತ ವಿದ್ಯಾರ್ಥಿಯಾಗಿದ್ದು, ಈಗ ಎಂಬಿಬಿಎಸ್‌ನಲ್ಲಿ ನಾಲ್ಕನೇ ವರ್ಷದಲ್ಲಿ ಅಭ್ಯಾಸ ಮಾಡುತ್ತಿದ್ದಾನೆ. ಆತನ ಶಿಕ್ಷಣಕ್ಕೆ ಯಾವ ತೊಂದರೆಯಾಗದಂತೆ ವ್ಯಾಸಂಗದಲ್ಲಿ ಮುಂದುವರೆಯಲಿ ಎನ್ನುವ ಉದ್ದೇಶದಿಂದ ಪ್ರತಿಭಾನ್ವಿತ ಬಡ ವಿದ್ಯಾರ್ಥಿ ನಾಗರಾಜ ಪೂಜಾರಗೆ ನಮ್ಮ ವೈಯಕ್ತಿಕವಾಗಿ ಆರ್ಥಿಕ ಸಹಾಯ ನೀಡುತ್ತಿದ್ದೇನೆ ಎಂದರು. ಬಸಪ್ಪ ಪೂಜಾರ, ರೇವಣಪ್ಪ ಮ್ಯಾಗೇರಿ, ಕನಕಪ್ಪ ಪೂಜಾರ, ಹನಮಂತಪ್ಪ ಉಪ್ಪಾರ, ರಾಮಣ್ಣ ಪೂಜಾರ, ದೇವಪ್ಪ ಪೂಜಾರ, ಶರಣಗೌಡ ಪಾಟೀಲ್, ಯಲ್ಲಪ್ಪ ಹಳ್ಳಿಗುಡಿ, ಹಂಪಯ್ಯ ಹಿರೇಮಠ, ತಿರುಪತಿ ರಾಠೋಡ, ಭೀಮಪ್ಪ ಹರಿಜನ, ಮೌನೇಶ ನಾಯಕ, ಅಮರೇಶ ಕರಮುಡಿ, ದುರಗಪ್ಪ ತಳವಾರ, ಶರಣಪ್ಪ ಬಿ.ಉಪ್ಪಾರ ಸೇರಿದಂತೆ ಗ್ರಾಮಸ್ಥರು ಇದ್ದರು.

### ಸಾಮಾಜಿಕ ಮೌಲ್ಯಗಳು ಬದುಕಿಗೆ ದಾರಿದೀಪ



ಹೂವಿನಹಡಗಲಿ: ಸಾಮಾಜಿಕ ಮೌಲ್ಯಗಳು ಬದುಕಿಗೆ ದಾರಿದೀಪ ಎಂದು ಗವಿಮಠದ ಡಾ.ಹಿರಿಶಾಂತವೀರ ಮಹಾಸ್ವಾಮಿಗಳು ಅಭಿಮತ ವ್ಯಕ್ತಪಡಿಸಿದರು. ತಾಲೂಕಿನ ಮೀರಾಕೊರ್ನಹಳ್ಳಿ ಶರಣಬಸವೇಶ್ವರ ಸರಕಾರಿ ಪ್ರೌಢಶಾಲೆಯಲ್ಲಿ 2026–27ನೇ ಸಾಲಿನಲ್ಲಿ ಮೌಲ್ಯ ಶಿಕ್ಷಣ ಸೇರಿಸಿದ ಪ್ರಯುಕ್ತ ಆ ವಿಷಯ ಕುರಿತು ಉಪನ್ಯಾಸ ಕಾರ್ಯಕ್ರಮ ಆಯೋಜಿಸಲಾಗಿತ್ತು. ಇಂದಿನ ಸಮಾಜಕ್ಕೆ ವಿದ್ಯಾರ್ಥಿಗಳಿಂದ ಉತ್ತಮ ಕೊಡುಗೆ ಆಗಲಿ. ಅನೇಕ ಮಹನೀಯರು ಸಮ ಸಮಾಜದ ಕನಸು ಕಂಡಿದ್ದರು. ಅವರ ಆದರ್ಶಗಳನ್ನು ಅನುಸರಿಸುವ ಮೂಲಕ ಉತ್ತಮ ಸಮಾಜ ನಿರ್ಮಾಣಕ್ಕೆ ಮುಂದಾಗಿರಿ ಎಂದು ತಿಳಿಸಿದರು. ಪರಸ್ಪರ ಒಬ್ಬರನ್ನು ಒಬ್ಬರು ಕರುಣೆ ಪ್ರೀತಿ ದಯಾ ಅಂತಕರಣ ದಿಂದ ಕಾಣಬೇಕು. ಅನೇಕ ಉದಾಹರಣೆ ತಾತ್ವಿಕ ಕಥೆಗಳ ಮೂಲಕ ವಿದ್ಯಾರ್ಥಿಗಳ ಮನ ಪರಿವರ್ತನೆ ಆಗುವಂತೆ ತಿಳಿಸಿಕೊಟ್ಟರು. ಡಯಟ್ ಬಳ್ಳಾರಿಯ ಉಪನ್ಯಾಸಕರಾದ ಎಸ್.ನಿಂಗಪ್ಪ ಮಾತನಾಡಿ, ಇಲಾಖೆಯ ವತಿಯಿಂದ ಈ ವರ್ಷ ಮೌಲ್ಯ ಶಿಕ್ಷಣದ ಬಗ್ಗೆ ಪಠ್ಯಕ್ರಮ ಅಳವಡಿಸಲಾಗಿದೆ. ಶಿಕ್ಷಕರು ಉತ್ತಮ ರೀತಿಯಲ್ಲಿ ಅನುಷ್ಠಾನಗೊಳಿಸಲು ತಿಳಿಸಿದರು. ಮುಖ್ಯೋಪಾಧ್ಯಾಯ ಬಾರಿಕರ ಸೂರ್ಯಕಾಂತ್ ಅಧ್ಯಕ್ಷತೆ ವಹಿಸಿದ್ದರು. ಎಸ್‌ಡಿಎಂಸಿ ಅಧ್ಯಕ್ಷ ಮಹಮದ್ ರಫಿ ಶಿಕ್ಷಕರಾದ ಸ್ವರೂಪಾರಾಣಿ ಮಂಜುಳಾ ಗುರುಪ್ರಸಾದ್ ಜ್ಯೋತಿ ಎಂ.ಜೆ. ಉಪಸ್ಥಿತರಿದ್ದರು. ಶಿಕ್ಷಕರಾದ ರೇಣುಕಾ ಊಳಿಗದ, ಪ್ರತಿಭಾ ಎಚ್., ವಿಘ್ನೇಶ್ವರ ಮಠದ ನಿರ್ವಹಿಸಿದರು. ಶಾಲೆಯ ವಿದ್ಯಾರ್ಥಿಗಳು ಮೌಲ್ಯ ಶಿಕ್ಷಣದ ಕುರಿತು ಉಪಯುಕ್ತ ಮಾಹಿತಿ ಪಡೆದುಕೊಂಡರು.

## ಕಲಬುರಗಿ, ಬೀದರ್, ಯಾದಗಿರಿ ಸಮಗ್ರ ತಾಂತ್ರಿಕ ತರಬೇತಿ ಶಿಬಿರ

# ಕ.ಕ. ಅಭಿವೃದ್ಧಿಗೆ ಎಂಜಿನಿಯರ್‌ಗಳ ಪಾತ್ರ ಅಪಾರ

ಕಲಬುರಗಿ: ಕಲ್ಯಾಣ ಕರ್ನಾಟಕ ಭಾಗದ ಸಮಗ್ರ ಅಭಿವೃದ್ಧಿಯ ನಿಟ್ಟಿನಲ್ಲಿ ರಾಜ್ಯ ಸರ್ಕಾರ ವಿಶೇಷ ಆಸಕ್ತಿ ವಹಿಸಿದ್ದು, ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ (ಕೆಕೆಆರ್‌ಡಿಬಿ) ಮೂಲಕ ಕೈಗೊಂಡಿರುವ ಕಾಮಗಾರಿಗಳ ಅನುಷ್ಠಾನದಲ್ಲಿ ಎಂಜಿನಿಯರ್‌ಗಳ ಪಾತ್ರ ಅತ್ಯಂತ ನಿರ್ಣಾಯಕವಾಗಿದೆ ಎಂದು ಕೆಕೆಆರ್‌ಡಿಬಿ ಕಾರ್ಯದರ್ಶಿ ನಲಿನ್ ಅತುಲ್ ಹೇಳಿದರು.

ಶುಕ್ರವಾರ ನಗರದ ನಾಗನಹಳ್ಳಿ ಕ್ರಾಸ್ ಹತ್ತಿರದಲ್ಲಿರುವ ಜೆಸ್ಟ್ ಹೋಟೆಲ್(ಉಪ್ಪಿನ ವೆಂಚರ್ಸ್ ಘಟಕ )ದಲ್ಲಿ ಆಯೋಜಿಸಿದ ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ ಕಲಬುರಗಿ ಹಾಗೂ ಲೋಕೋಪಯೋಗಿ ಇಲಾಖೆ ಈಶಾನ್ಯ ವಲಯ ಕಲಬುರಗಿ ಸಂಯುಕ್ತಾಶ್ರಯದಲ್ಲಿ ಕರ್ನಾಟಕ ಸರ್ಕಾರದ ವಿವಿಧ ಇಲಾಖೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಕಲ್ಯಾಣ ಕರ್ನಾಟಕ ಪ್ರದೇಶದ ಎಲ್ಲಸ್ತರದ ಅಭಿಯಂತರಿಗಾಗಿ ಬೀದರ, ಯಾದಗಿರಿ, ಕಲಬುರಗಿ ಎರಡು ದಿನಗಳ ಸಮಗ್ರ ತಾಂತ್ರಿಕ ತರಬೇತಿ ಕಾರ್ಯಗಾರ ಕಾರ್ಯಕ್ರಮವನ್ನು ಜ್ಯೋತಿ ಬೆಳಗಿಸುವುದರ ಮೂಲಕ ಉದಾಘಟಿಸಿ ಮಾತನಾಡಿದರು.

ಕಲ್ಯಾಣ ಕರ್ನಾಟಕ ಭಾಗವು ಅಭಿವೃದ್ಧಿಯಲ್ಲಿ ರಾಜ್ಯದ ಇತರ ವಿಭಾಗಗಳಿಗಿಂತ ಹಿಂದೆ ಉಳಿದಿರುವ ಹಿನ್ನೆಲೆಯಲ್ಲಿ, ಈ ಭಾಗಕ್ಕೆ ವಿಶೇಷ ಒತ್ತು ನೀಡಲಾಗುತ್ತಿದೆ. ಈ ಹಿನ್ನೆಲೆಯಲ್ಲಿ ಇಂಜಿನಿಯರ್‌ಗಳು ಬದ್ಧತೆಯಿಂದ ಕಾರ್ಯನಿರ್ವಹಿಸುವ ಆವಶ್ಯಕತೆ.ನಮ್ಮ ಇಂಜಿನಿಯರ್ ಬಂಧುಗಳು ಕೈಗೊಳ್ಳುವ ಯಾವುದೇ ಕೆಲಸಗಳು ಅಥವಾ ಯೋಜನೆಗಳನ್ನು ಯಶಸ್ವಿಯಾಗಿ ಪೂರ್ಣಗೊಳಿಸಲು ನಾವೆಲ್ಲರೂ ಬೆನ್ನೆಲುಬಾಗಿ ನಿಲ್ಲುತ್ತೇವೆ. ಈ ಮೂಲಕ ಇಂಜಿನಿಯರ್‌ಗಳ ಸಂಕಷ್ಟಗಳಿಗೆ ಸ್ಪಂದಿಸಲು ಈ ಕಾರ್ಯಗಾರವನ್ನು ಹಮ್ಮಿಕೊಳ್ಳಲಾಗಿದೆ. ಕಾರ್ಯಾಗಾರದ ಮೂಲಕ ಇಂಜಿನಿಯರ್‌ಗಳಅಭಿಪ್ರಾಯಗಳನ್ನುಆಲಿಸಿ,ತಾಂತ್ರಿಕ ಹಾಗೂ ಆಡಳಿತಾತ್ಮಕ ಸಮಸ್ಯೆಗಳನ್ನು ಬಗೆಹರಿಸಲು ನಾವು ಬದ್ಧರಿದ್ದೇವೆ, ಭರವಸೆ ನೀಡಿದರು.



**5,000 ಕೋಟಿ ರೂ. ಅನುದಾನ ಬಿಡುಗಡೆ**

**2013–14ರ ನಂತರ ಈ ಭಾಗದ ಅಭಿವೃದ್ಧಿಗೆ ಅನುದಾನದ ಪ್ರಮಾಣ ಗಣನೀಯವಾಗಿ ಹೆಚ್ಚಾಗಿದ್ದು, ಕಳೆದ ಮೂರು ವರ್ಷಗಳಲ್ಲಿ ಸುಮಾರು 5,000 ಕೋಟಿ ಅನುದಾನ ಬಿಡುಗಡೆ ಮಾಡಲಾಗಿದೆ. ಮಂಡಳಿಯ ವತಿಯಿಂದ ವಿವಿಧ ಇಲಾಖೆಗಳಿಗೆ ಅಗತ್ಯವಿರುವ ಮೂಲಸೌಕರ್ಯ ಕಲ್ಪಿಸಲಾಗುತ್ತಿದ್ದು, ಯಾವುದೇ ಇಲಾಖೆಯ ಮೊರೆ ಹೋಗದೆ ಸ್ವತಂತ್ರವಾಗಿ ಕಾರ್ಯನಿರ್ವಹಿಸುವಷ್ಟು ಹಣಕಾಸು ನೆರವು ಆರ್ಥಿಕ ಸಬಲತೆಯನ್ನು ಮಂಡಳಿ ಹೊಂದಿದೆ.**

ಕಲಬುರಗಿಈಶಾನ್ಯ ವಲಯದಲೋಕೋಪಯೋಗಿ ಇಲಾಖೆಯ ಮುಖ್ಯ ಅಭಿಯಂತರರಾದ ಸುಭಾಷ್ ಶಿವಶಂಕರ ಮಾತನಾಡಿದರು.

ಕೆಕೆಆರ್‌ಡಿಬಿ ಹಣಕಾಸು ಸಹಾಯಕ ನಿಯಂತ್ರಕರಾದ ಇಂದುಶ್ರೀ ಆರ್. ಅವರು ಸ್ವಾಗತಿಸಿದರು. ನಂತರ ಸಂಪನ್ಮೂಲ ವ್ಯಕ್ತಿಯಾದ ನಿವೃತ್ತ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರಾದ ಅನ್ವರ ಅವರು ಕಾರ್ಯಾಗಾರದ ಸಂಪೂರ್ಣ ಮಾಹಿತಿ ನೀಡಿದರು.

ಕೆಕೆಆರ್‌ಡಿಬಿ ಉಪಕಾರ್ಯದರ್ಶಿ ಸುರೇಖಾ, ಕೆಕೆಆರ್‌ಡಿಬಿ ಹೆಚ್ಚುವರಿ ನಿರ್ದೇಶಕ ಪ್ರವೀಣಾ ಪ್ರಿಯ ಡೇವಿಡ್, ಕೆಕೆಆರ್‌ಡಿಬಿ ಹಣಕಾಸು ನಿಯಂತ್ರಕರಾದ ಪವನಕುಮಾರ, ಕೆಕೆಆರ್‌ಡಿಬಿ ಅಧೀಕ್ಷಕ ಎಂಜಿನಿಯರ ಆನಂದ ಕಮಲಾಪೂರಕರ್ ಹಾಗೂ ಸಂಪನ್ಮೂಲ ವ್ಯಕ್ತಿಗಳಾದ ತಾಂತ್ರಿಕ ತಜ್ಞರಾದ ಯಳಸಂಗಿ ಮಠ, ನಿವೃತ್ತ ಮುಖ್ಯ ಇಂಜಿನಿಯರ ಎಂ. ನಾರಾಯಣ್, ಕಲಬುರಗಿ ಅಪ್ಪ ಇಂಜಿನಿರಿಂಗ್ ಕಾಲೇಜಿನ ಪ್ರಾಧ್ಯಾಪಕರಾದ ಡಾ. ಸಿದ್ರಾಮಪ್ಪ ಆವಂತಿ ಇತರರು ಸೇರಿದಂತೆ ಬೀದರ, ಕಲಬುರಗಿ ಹಾಗೂ ಯಾದಗಿರಿ ಜಿಲ್ಲೆಯ ಎಲ್ಲಸ್ತರದ ಅಧಿಕಾರಿಗಳು ಹಾಗೂ ಮುಖ್ಯ ಇಂಜಿನಿಯರಗಳು ಉಪಸ್ಥಿತರಿದ್ದರು.

## ಗೃಹಜ್ಯೋತಿ: ಮರು ನೋಂದಣಿ ಪರಿಶೀಲನೆ ಆರಂಭ



ಕಲಬುರಗಿ: ರಾಜ್ಯ ಸರ್ಕಾರದ ಮಹತ್ವಾಕಾಂಕ್ಷಿ ಗೃಹಜ್ಯೋತಿ ಯೋಜನೆಯ ಫಲಾನುಭವಿಗಳ ಮರು ನೋಂದಣಿ (ರೀ–ರಜಿಸ್ಟೇಷನ್) ಹಾಗೂ ದಾಖಲೆಗಳಪರಿಶೀಲನಾಕಾರ್ಯವನ್ನು ಜೆಸ್ಕಾಂ ಅಧಿಕಾರಿಗಳು ಗುರುವಾರ ನಗರದಲ್ಲಿ ಆರಂಭಿಸಲಾಗಿದೆ.

ಜೆಸ್ಕಾಂ ಅಧ್ಯಕ್ಷ ಪ್ರವೀಣ್ ಪಾಟೀಲ ಹರವಾಳ ಮಾರ್ಗದರ್ಶನದಲ್ಲಿ ಅಧಿಕಾರಿಗಳು ಹಾಗೂ ಸಿಬ್ಬಂದಿ ಕಲಬುರಗಿ ನಗರದ ಆಳಂದ ಕಾಲೋನಿಯಲ್ಲಿ ಮನೆ–ಮನೆಗೆ ತೆರಳಿ ಫಲಾನುಭವಿಗಳ ದಾಖಲೆಗಳನ್ನು ಪರಿಶೀಲಿಸಿದರು. ಈ ವೇಳೆ ಫಲಾನುಭವಿಗಳಿಂದ ಅಗತ್ಯ ದಾಖಲೆಗಳನ್ನು ಪಡೆದು ಮಾಹಿತಿ ಸಂಗ್ರಹಿಸಲಾಯಿತು. ಗೃಹಜ್ಯೋತಿ ಯೋಜನೆಯ ಮರು ನೋಂದಣಿ ಪ್ರಕ್ರಿಯೆಯನ್ನು ಆನ್‌ಲೈನ್ ಹಾಗೂ ಆಫ್‌ಲೈನ್ ಎರಡೂ ಮಾದರಿಯಲ್ಲಿ ನಡೆಸಲಾಗುತ್ತಿದ್ದು, ಫಲಾನುಭವಿಗಳಿಗೆ ಯೋಜನೆ ಕುರಿತ ಮಾಹಿತಿ ಹಾಗೂ ಅಗತ್ಯ ಮಾರ್ಗದರ್ಶನವನ್ನು ಅಧಿಕಾರಿಗಳು ನೀಡಿದರು. ಯಾವುದೇ ಆತಂಕಕ್ಕೆ ಅವಕಾಶವಿಲ್ಲ ಎಂದು ತಿಳಿಸಿದರು.

ಅರ್ಹ ಫಲಾನುಭವಿಗಳಿಗೆ ಮೊದಲಿನಂತೆ ಯೋಜನೆಯ ಸೌಲಭ್ಯ ಮುಂದುವರಿಯಲಿದ್ದು, ಸರ್ಕಾರ ಕೇಳಿರುವ ಮಾಹಿತಿಯನ್ನು ಮಾತ್ರ ಸಂಗ್ರಹಿಸಲಾಗುತ್ತಿದೆ ಎಂದು ಅಧಿಕಾರಿಗಳು ತಿಳಿಸಿದರು. ಇದೇ ವೇಳೆ ಮಾತನಾಡಿದ ಫಲಾನುಭವಿಗಳು, ಈ ಹಿಂದೆ ಅಗತ್ಯ ದಾಖಲೆಗಳನ್ನು ಸಲ್ಲಿಸಿ ಯೋಜನೆಯ ಸೌಲಭ್ಯ ಪಡೆದಿದ್ದೇವೆ. ಈಗಲೂ ನಮ್ಮ ಬಳಿ ಇರುವ ದಾಖಲೆಗಳನ್ನು ನೀಡುತ್ತೇವೆ. ಈ ಪ್ರಕ್ರಿಯೆಯಿಂದ ನಮಗೆ ಯಾವುದೇ ತೊಂದರೆಯಿಲ್ಲ ಎಂದು ಹೇಳಿದರು. ನಗರದ ವಿವಿಧ ಪ್ರದೇಶಗಳಲ್ಲೂ ಇದೇ ರೀತಿಯ ಪರಿಶೀಲನೆ ಹಾಗೂ ಮರು ನೋಂದಣಿ ಕಾರ್ಯ ಮುಂದಿನ ದಿನಗಳಲ್ಲಿ ಮುಂದುವರಿಯಲಿದೆ ಎಂದು ಜೆಸ್ಕಾಂ ಮೂಲಗಳು ತಿಳಿಸಿವೆ.



ರಾಯಚೂರು: ನಗರದ ಜಿಲ್ಲಾ ಪಂಚಾಯತ ಆವರಣದಲ್ಲಿ ಆರಂಭವಾದ ಅಕ್ಕ ಕೆಫೆ ಉಪಾಹಾರ ಗೃಹವನ್ನು ರಾಯಚೂರು ಪ್ರಕತಿ ವಿಕೋಪ ನಿರ್ವಹಣೆಯ ಮೇಲುಸ್ತುವಾರಿ ಆಗಿರುವ ವೈದ್ಯಕೀಯ ಶಿಕ್ಷಣ ಹಾಗೂ ಕೌಶಲ್ಯಾಭಿವೃದ್ಧಿ ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವ ಡಾ.ಶರಣಪ್ರಕಾಶ ಪಾಟೀಲ ಶುಕ್ರವಾರ ಉದ್ಘಾಟಿಸಿದರು. ಕರ್ನಾಟಕ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ ಅಧ್ಯಕ್ಷ ರಾಯಚೂರು ಗ್ರಾಮಾಂತರ ಕ್ಷೇತ್ರದ ಶಾಸಕ ಬಸನಗೌಡ ದದ್ದಲ ಇತರರಿದ್ದರು.

## ರಾಜ್ಯ ಸರ್ಕಾರ ಹಿಂಪಡೆದ ಕ್ರಿಮಿನಲ್ ಪ್ರಕರಣಗಳಿಗೆ ಹೈಕೋರ್ಟ್ ತಡೆ ಕಾನೂನಿನ ಗೆಲುವು: ಹರ್ಷಾ

ಕಲಬುರಗಿ: ರಾಜ್ಯ ಸರ್ಕಾರ ವಿವಿಧ ಗಂಭೀರ ಕ್ರಿಮಿನಲ್ ಪ್ರಕರಣಗಳನ್ನು ಹಿಂಪಡೆಯಲು ಕೈಗೊಂಡ ಕ್ರಮಕ್ಕೆ ರಾಜ್ಯ ಹೈಕೋರ್ಟ್ ತಡೆ ನೀಡಿರುವುದು ಕಾನೂನಿನ ಆಳ್ವಿಕೆ ಹಾಗೂ ನ್ಯಾಯಾಂಗದ ಮೇಲಿನ ಜನರ ವಿಶ್ವಾಸವನ್ನು ಮತ್ತಷ್ಟು ಬಲಪಡಿಸಿದೆ ಎಂದು ಜಿಪಂ ಮಾಜಿ ಉಪಾಧ್ಯಕ್ಷ ಹರ್ಷ ಗುತ್ತೇದಾರ್ ತಿಳಿಸಿದ್ದಾರೆ.



ಈ ಕುರಿತು ಪತ್ರಿಕಾ ಪ್ರಕಟಣೆ ನೀಡಿರುವ ಅವರು, ಜಿಲ್ಲೆಯ ವಿವಾದಿತ ಆಳಂದ ಪಟ್ಟಣದ ಲಾಡ್ಲೇ ಮಶಾಕ್ ದರ್ಗಾ ಪ್ರಕರಣದಲ್ಲಿ ಆರೋಪಿಗಳೆಲ್ಲರೂ ವೃತ್ತಿ ಮತ್ತು ಪ್ರವೃತ್ತಿಯಿಂದ ಗಂಭೀರ ಅಪರಾಧ ಪ್ರಕರಣಗಳಲ್ಲಿ ಭಾಗಿಯಾಗಿರುವವರಾಗಿದ್ದು, ಅವರ ಮೇಲೆ ಗಡಿಪಾರು ಆದೇಶವೂ ಜಾರಿಯಲ್ಲಿದೆ. ಇಂತಹ ಸಮಾಜವಿರೋಧಿ ಕೃತ್ಯಗಳಲ್ಲಿ ತೊಡಗಿರುವವರಿಗೆ ಕಾನೂನು ತಕ್ಕ ಪಾಠ ಕಲಿಸಬೇಕು. ಪ್ರಕರಣ ಹಿಂಪಡೆಯಲು ಶಿಫಾರಸು ಮಾಡಿದ ಶಾಸಕ ಬಿ.ಆರ್. ಪಾಟೀಲ್, ಗೃಹ ಸಚಿವ ಪ್ರಿಯಾಂಕ್ ಖರ್ಗೆ ಹಾಗೂ ಸಚಿವ ಯು.ಟಿ.ಖಾದರ್ ಅವರು ಈಗಾದರೂ ನ್ಯಾಯಾಂಗಕ್ಕೆ ಗೌರವ ನೀಡಬೇಕು ಎಂದು ಆಗ್ರಹಿಸಿದರು.

ಅಪರಾಧ ಪ್ರಕರಣಗಳನ್ನು ರಾಜಕೀಯ ಅಥವಾ ಇತರ ಕಾರಣಗಳಿಗಾಗಿ ಹಿಂಪಡೆಯುವ ಯಾವುದೇಕ್ರಮವೂನ್ಯಾಯದಮೂಲತತ್ವಗಳಿಗೆ ವಿರುದ್ಧವಾಗಿದೆ. ಸಮಾಜದ ಶಾಂತಿ, ಕಾನೂನು ಸುವ್ಯವಸ್ಥೆ ಹಾಗೂ ಸಾರ್ವಜನಿಕ ಹಿತಾಸಕ್ತಿಗೆ ಸಂಬಂಧಿಸಿದ ಗಂಭೀರ ಪ್ರಕರಣಗಳಲ್ಲಿ ಸರ್ಕಾರ ಅತ್ಯಂತ ಜವಾಬ್ದಾರಿಯಿಂದ ನಡೆದುಕೊಳ್ಳಬೇಕು. ಇಂತಹ ಪ್ರಕರಣಗಳನ್ನು ಏಕಪಕ್ಷೀಯವಾಗಿ ಹಿಂಪಡೆಯುವ ಪ್ರಯತ್ನದಿಂದ ಜನರಲ್ಲಿ ತಪ್ಪು ಸಂದೇಶ ರವಾನೆಯಾಗುವ ಅಪಾಯವಿದೆ ಎಂದು ಆತಂಕ ವ್ಯಕ್ತಪಡಿಸಿದ ಅವರು,ರಾಜ್ಯ ಹೈಕೋರ್ಟ್ ನೀಡಿರುವ ತಡೆಯಾಜ್ಞೆ ನ್ಯಾಯದ ಪರವಾದ ಮಹತ್ವದ ಹೆಜ್ಜೆಯಾಗಿದ್ದು, ಯಾವುದೇ ಸರ್ಕಾರ ಕಾನೂನಿನ ಚೌಕಟ್ಟಿನೊಳಗೆ ಕಾರ್ಯನಿರ್ವಹಿಸಬೇಕೆಂಬ ಸಂದೇಶ ಸ್ಪಷ್ಟವಾಗಿ ನೀಡಿದೆ ಎಂದರು.

> **ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಕಾಪಾಡುವುದು ಸರ್ಕಾರದ ಮೊದಲ ಆದ್ಯತೆಯಾಗಬೇಕು. ಅಪರಾಧಿಗಳಿಗೆ ರಾಜಕೀಯ ಆಶ್ರಯ ನೀಡುವ ಬದಲು, ಸಂತ್ರಸ್ತರಿಗೆ ನ್ಯಾಯ ದೊರಕುವಂತೆ ಸರ್ಕಾರ ಕಾರ್ಯನಿರ್ವಹಿಸಬೇಕು. ಬಿಜೆಪಿ ಸದಾ ಕಾನೂನಿನ ಆಳ್ವಿಕೆ, ಪಾರದರ್ಶಕ ಆಡಳಿತ ಹಾಗೂ ನ್ಯಾಯದ ಪರವಾಗಿ ನಿಲ್ಲಲಿದೆ.ಯಾವುದೇ ವ್ಯಕ್ತಿ ಅಥವಾ ಸಂಘಟನೆ ಕಾನೂನಿಗಿಂತ ಮೇಲಲ್ಲ, ಸಮಾಜದಲ್ಲಿ ಶಾಂತಿ, ಸೌಹಾರ್ದತೆ ಮತ್ತು ಸಾರ್ವಜನಿಕ ಸುವ್ಯವಸ್ಥೆಗೆ ಧಕ್ಕೆ ಉಂಟುಮಾಡುವ ಕೃತ್ಯಗಳಲ್ಲಿ ತೊಡಗುವವರ ವಿರುದ್ಧ ಕಾನೂನು ತನ್ನ ಕರ್ತವ್ಯವನ್ನು ನಿರ್ವಹಿಸಿರುವುದು ಸ್ವಾಗತಾರ್ಹ.**
>
> ■ **ಹರ್ಷಾನಂದ ಗುತ್ತೇದಾರ್, ಬಿಜೆಪಿ ಯುವ ಮುಖಂಡ, ಆಳಂದ**

## ಗಡಿ ಕಾಯುವ ಯೋಧರ ಕಾರ್ಯ ಅವಿಸ್ಮರಣೀಯ

ಯಲಬುರ್ಗಾ: ದೇಶದ ಗಡಿಗಳನ್ನು ಕಾಯುವ ಯೋಧರು ತಮ್ಮ ಜೀವದ ಹಂಗನ್ನು ತೊರೆದು ಸೇವೆ ಮಾಡುತ್ತಿರುವುದು ಅವಿಸ್ಮರಣೀಯವಾಗಿದೆ ಎಂದು ಗ್ರಾಮದ ಯುವ ಮುಖಂಡ ಹನುಮಗೌಡ ಸಾಲಭಾವಿ ಹೇಳಿದರು.

ತಾಲೂಕಿನ ಲಿಂಗನಬಂಡಿ ಗ್ರಾಮದ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯ ಆವರಣದಲ್ಲಿ ಅಗ್ನಿವೀರ ಯೋಧ ಕಳಕಮಲ್ಲ ಚೌಡಕಿ ಅವರು ಯಶಸ್ವಿಯಾಗಿ ತರಬೇತಿ ಪೂರ್ಣಗೊಳಿಸಿ ಸ್ವಗ್ರಾಮಕ್ಕೆ ಆಗಮಿಸಿದ ಹಿನ್ನೆಲೆಯಲ್ಲಿ ಹಮ್ಮಿಕೊಂಡಿದ್ದ ಭವ್ಯ ಸ್ವಾಗತ ಹಾಗೂ ಅಭಿನಂದನಾ ಸಮಾರಂಭದಲ್ಲಿ ಪಾಲ್ಗೊಂಡು ಮಾತನಾಡಿದರು.



ನಮ್ಮ ದೇಶದ ಗಡಿಗಳನ್ನು ಕಾಯುವ ಯೋದರ ತ್ಯಾಗ, ಶಿಸ್ತು, ಧೈರ್ಯ, ತಾಳ್ಮೆ ಪರಿಶ್ರಮದಿಂದ ನಾವೆಲ್ಲ ಭಾರತೀಯರು ಇಲ್ಲಿ ನೆಮ್ಮದಿಯಿಂದ ಉಸಿರಾಡುತ್ತ ಸುರಕ್ಷಿತವಾಗಿ ಜೀವಿಸುತ್ತಿದ್ದೇವೆಂದರೆ ಅದಕ್ಕೆ ನಮ್ಮ ಯೋದರ ಕಾರ್ಯಕ್ಷೇಮತೆಯೇ ಮುಖ್ಯ ಕಾರಣವಾಗಿದೆ ಎಂದರು.

ಗ್ರಾಮೀಣ ಭಾಗದ ಹೆಚ್ಚಿನ ಯುವಕರು ಭಾರತೀಯ ಸೇನೆಗೆ ಸೇರುವ ಮೂಲಕ ದೇಶಸೇವೆ ಮಾಡುವ ಕಾರ್ಯಕ್ಕೆ ಮುಂದಾಗಬೇಕು. ದೇಶ ಸೇವೆ ಮಾಡುವುದು ಸೌಭಾಗ್ಯ ಸೇವೆ ಅಂತಹ ಭಾಗ್ಯ ಸಿಗುವುದು ಅಪರೂಪ.ಅದು ಕೆಲವರಿಗೆ ಮಾತ್ರ ಒಲಿದು ಬರುವ ಬಹುದೊಡ್ಡ ಗೌರವ ಸ್ಥಾನದಹುದ್ದೆಯಾಗಿದೆ.ಲಿಂಗನಬಂಡಿ ಗ್ರಾಮದ ಯುವಕರು ಇಂತಹ ಸಾಧನೆ ಮಾಡುತ್ತಿರುವುದು ಇಡೀ ತಾಲೂಕಿಗೆ ಹೆಮ್ಮೆಯ ವಿಷಯವಾಗಿದೆ ಎಂದು ಹರ್ಷ ವ್ಯಕ್ತಪಡಿಸಿದರು.

ಗ್ಯಾರಂಟಿ ಅನುಷ್ಠಾನ ಸಮಿತಿ ಸದಸ್ಯ ಹುಲಗಪ್ಪ ಬಂಡಿವಡ್ಡರ, ಮುಖ್ಯ ಶಿಕ್ಷಕ ಶರಣಯ್ಯ ಸರಗಣಾಚಾರ, ಹಿರೇಅರಳಿಹಳ್ಳಿ ಮಾತಾ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಶರಣಪ್ಪ ತೆಗ್ಗಿಹಾಳ ಹಾಗೂ ಶಿಕ್ಷಕರಾದ ಯಲ್ಲಪ್ಪ ಕಳ್ಳಿಮರದ ಹಾಗೂ ಲವ ಬೇವಿನಗಿಡದ, ಅಗ್ನಿವೀರ ಯೋಧ ಕಳಕಮಲ್ಲ ಚೌಡಕಿ ಮಾತನಾಡಿದರು.

ಗ್ರಾಮಕ್ಕೆ ಆಗಮಿಸಿದ ಯೋಧನನ್ನು ನೂರಾರು ಯುವಕರು ಅದ್ದೂರಿ ಬೈಕ್ ರ್ಯಾಲಿ ಮೂಲಕ ಸ್ವಾಗತಿಸಿದರು. ಗ್ರಾಮದ ಗುರು–ಹಿರಿಯರು, ಮಹಿಳೆಯರು, ಯುವಕರು, ಪತ್ರಕರ್ತರ ಸಂಘದ ಅಧ್ಯಕ್ಷರು, ಗುತ್ತಿಗೆದಾರರು, ಶಿಕ್ಷಕರು ಹಾಗೂ ಎಸ್ಡಿಎಂಸಿ ಪದಾಧಿಕಾರಿಗಳು ಇದ್ದರು.

## ಅರಣ್ಯ ಇಲಾಖೆ ಹೊರಗುತ್ತಿಗೆ ನೌಕರರಿಗೆ ಕನಿಷ್ಠ ವೇತನ ನೀಡಿ



ಬಳ್ಳಾರಿ: ಕಳೆದ 25 ವರ್ಷಗಳಿಂದ ಅರಣ್ಯ ಇಲಾಖೆಯಲ್ಲಿ ಸಸಿಗಳ ಕಾವಲುಗರಾಗಿ ಸುಮಾರು ಜನರು ಹೊರಗುತ್ತಿಗೆ ಆಧಾರದ ಮೇಲೆ ಕೆಲಸ ನಿರ್ವಹಿಸುತ್ತಿದ್ದು, ಇಲ್ಲಿವರೆಗೂ ಸೇವಾ ಭದ್ರತೆ ಕನಸಾಗಿದೆ, ಸರ್ಕಾರದ ಸೂಚನೆಯಂತೆ ಕನಿಷ್ಠ ವೇತನವೂ ನೀಡುತ್ತಿಲ್ಲ ಎಂದು ಕರ್ನಾಟಕ ರಾಜ್ಯ ಅರಣ್ಯ ಇಲಾಖೆ ದಿನಗೂಲಿ ಹಾಗೂ ಪರಿಶಿಷ್ಟ ಜಾತಿ, ಪಂಗಡ ವರ್ಗಗಳ ನೌಕರರ ಸಂಘದ ರಾಜ್ಯಾಧ್ಯಕ್ಷ ಚಂದ್ರಪ್ಪ ಎಚ್ ಹೇಳಿದರು.

ನಗರದ ಪತ್ರಿಕಾ ಭವನದಲ್ಲಿ ಶುಕ್ರವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, 25 ವರ್ಷಗಳಿಂದ ಅರಣ್ಯ ಇಲಾಖೆಯ ಪ್ರಾದೇಶಿಕ, ಸಾಮಾಜಿಕ, ವನ್ಯಜೀವಿ, ವಿಭಾಗಗಳಲ್ಲಿ ರಾಜ್ಯಾದ್ಯಂತ ದಿನಗೂಲಿ ಹಾಗೂ ಹೊರಗುತ್ತಿಗೆ ಆಧಾರದ ಮೇಲೆ ಕೆಲಸ ನಿರ್ವಹಿಸುತ್ತಿದ್ದಾರೆ. ಸೇವಾ ಭದ್ರತೆ, ಕನಿಷ್ಠ ವೇತನ ನೀಡಿ ಎಂದು ಪ್ರಶ್ನಿಸಿದರೆ ದಾಖಲೆಗಳಿಲ್ಲ ನೋಡೋಣ, ಮಾಡೋಣ ಎಂದು ಸರ್ಕಾರ, ಇಲಾಖೆ ಕಾಲಹರಣ ಮಾಡುತ್ತಿದೆ.

ಕಾರ್ಮಿಕ ಇಲಾಖೆ ಕಾಯ್ದೆ ಪ್ರಕಾರ ಯಾವುದೇ ಸೌಲಭ್ಯಗಳನ್ನು ಕಲ್ಪಿಸಿಲ್ಲ, ಕನಿಷ್ಠ ವೇತನ ಜಾರಿ ನಿಯಮ ಜಾರಿಯಲ್ಲಿದ್ದರೂ ನಮಗೆ ಇಲ್ಲಿವರೆಗೆ ನೀಡಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು. ಒಂದೊಂದು ಕಡೆ ಒಂದು ರೀತಿ ವೇತನ ನೀಡ್ತಾರೆ, ಅದು ಯಾರಿಂದ, ಯಾವ ಏಜೆನ್ಸಿಯಿಂದ ಬರುತ್ತೆ ಎನ್ನುವುದು ಇಲ್ಲಿವರೆಗೆ ಯಾರಿಗೂ ತಿಳಿದಿಲ್ಲ, ಶಿವಮೊಗ್ಗ ಜಿಲ್ಲೆಯಲ್ಲಿ ನಮ್ಮ ಸಿಬ್ಬಂದಿಗಳಿಗೆ 18.5 ಸಾವಿರ ವೇತನ, ಹರಪನಹಳ್ಳಿಯಲ್ಲಿ 11 ಸಾವಿರ, ಬಳ್ಳಾರಿಯಲ್ಲಿ 12 ರಿಂದ 16 ಸಾವಿರ ವೇತನ ನೀಡ್ತಾರೆ, ಇದು ಹೇಗೆ, ಎಲ್ಲರೂ ಮಾಡೋದು ಒಂದೇ ಕೆಲಸ, ನಾವು ರಾಜ್ಯದಲ್ಲಿದ್ದೀವೋ ಎನ್ನುವುದು ತಿಳಿಯಾದಾಗಿದೆ ಎಂದರು. ಶಿವಣ್ಣ, ಆಂಜನಪ್ಪ ಪರಸಪ್ಪ, ಸಿದ್ದಲಿಂಗಪ್ಪ, ಆಂಜನಪ್ಪ ದರೋಜಿ, ವಡಕಪ್ಪ, ಶಿವಣ್ಣ ನಾಯಕ ಇದ್ದರು.

## ಆಧಾರ್ ಕಾರ್ಡ್ ತಿದ್ದುಪಡಿಗಾಗಿ ಪರದಾಟ

ಹ'ಗ'ರಿ'ಬೊ'ಮ್ಮ'ನ'ಹ'ಳ್ಳಿ: ಆಧಾರ್ ಕಾರ್ಡ್ ತಿದ್ದುಪಡಿ ಮಾಡಸಲಿಕ್ಕಾಗಿಯೇ ಎಲ್ಲ ಕೆಲಸ ಕಾರ್ಯಗಳನ್ನು ಬಿಟ್ಟು ಬೆಳಗ್ಗೆನೇ ಬಂದು ಆಧಾರ್ ಕಾರ್ಡ್ ತಿದ್ದುಪಡಿ ಮಾಡುವ ಸೇವಾಕೇಂದ್ರಗಳ ಮುಂಬಾಗದಲ್ಲಿ ಬಂದು ಸರದಿ ಸಾಲಿನಲ್ಲಿ ನಿಲ್ಲುವ ದುಸ್ಥಿತಿ ಹೇಳಾ ತೀರಾದಾಗಿದೆ.

ಕರುನಾಡ ವಿಜಯ ಸೇನೆ ಸಂಘಟನೆ ಹಗರಿಬೊಮ್ಮನಹಳ್ಳಿ ತಾಲೂಕು ಘಟಕದ ವತಿಯಿಂದ ತಾಲೂಕು ಆಡಳಿತ ಸೌಧದಲ್ಲಿ ಆಧಾರ್ ಕಾರ್ಡ್ ತಿದ್ದುಪಡಿ ಸೌಲಭ್ಯ ಕಲ್ಪಿಸಬೇಕು ಹಾಗೂ ತಾಲೂಕಿನಲ್ಲಿ ಹೆಚ್ಚುವರಿಯಾಗಿ 3 ರಿಂದ 4 ಹೊಸ ಆಧಾರ್ ಕಾರ್ಡ್ ಸೇವಾ ಕೇಂದ್ರಗಳನ್ನು ತೆರೆಯಬೇಕೆಂದು ಆಗ್ರಹಿಸಿ ಮನವಿ ಸಲ್ಲಿಸಲಾಯಿತು.

ಕರುನಾಡ ವಿಜಯ ಸೇನೆಯ ತಾಲೂಕು ಅಧ್ಯಕ್ಷ ಪ್ರಕಾಶ್ ಆರ್. ಮಾತನಾಡಿ, ತಾಲೂಕಿನ ಜನಸಂಖ್ಯೆಗೆ ಅನುಗುಣವಾಗಿ ಪ್ರಸ್ತುತ ಇರುವ ವ್ಯವಸ್ಥೆ ಸಾಲುತ್ತಿಲ್ಲ. ಆದ್ದರಿಂದ ಆಡಳಿತ ಸೌಧದಲ್ಲಿ ಕಾಯಂ ವ್ಯವಸ್ಥೆ ಮಾಡಬೇಕು ಹಾಗೂ ಸಾರ್ವಜನಿಕರ ಹಿತದೃಷ್ಟಿಯಿಂದ ಕನಿಷ್ಠ 3–4 ಹೊಸ ಸೇವಾ ಕೇಂದ್ರಗಳನ್ನು ತಕ್ಷಣವೇ ಆರಂಭಿಸಬೇಕು. ಒಂದು ವೇಳೆ ಈ ಬೇಡಿಕೆಗಳಿಗೆ ತಾಲೂಕು ಆಡಳಿತ ಶೀಘ್ರವೇ ಸ್ಪಂದಿಸದಿದ್ದರೆ, ಕರುನಾಡ ವಿಜಯ ಸೇನೆ ತಾಲೂಕು ಘಟಕದ ವತಿಯಿಂದ ಆಡಳಿತ ಸೌಧದ ಮುಂದೆ ಅನಿರ್ದಿಷ್ಟಾವಧಿ ಧರಣಿ ಹೋರಾಟವನ್ನು ಹಮ್ಮಿಕೊಳ್ಳಲಾಗುವುದು'' ಎಂದು ಎಚ್ಚರಿಕೆ ನೀಡಿದರು. ಸಂಘಟನೆಯ ಉಪಾಧ್ಯಕ್ಷ ಬಸವರಾಜ್ ಮೋರಗೇರಿ, ಸಂಚಾಲಕ ರಾಘವೇಂದ್ರ, ಕಾರ್ಯಾಧ್ಯಕ್ಷನವೀನ್ ಕುಮಾರ್ ಎಚ್., ಯುವ ಘಟಕದ ಕಾರ್ಯಾಧ್ಯಕ್ಷ ಸ್ವಾಮಿ ಎ.ಎಚ್., ವಿದ್ಯಾರ್ಥಿ ಘಟಕದ ಕಾರ್ಯಾಧ್ಯಕ್ಷ ಯಶ್ವಂತ್ ಇತರರಿದ್ದರು.



## ಚರಂಡಿ ನೀರು ರಸ್ತೆಗೆ: ಸಾರ್ವಜನಿಕರ ಪರದಾಟ

▸ ಹುಸೇನಸಾಬ ಕಟಗಿ

ದಿಗಂತ ವಿಶೇಷ

ಹನುಮಸಾಗರ: ಹನುಮಸಾಗರ ಸಮೀಪದ ಕಾಟಾಪುರ ಗ್ರಾಮದಲ್ಲಿ ಚರಂಡಿ ನೀರು ರಸ್ತೆಯ ಮೇಲೆ ಹರಿಯುತ್ತಿರುವುದರಿಂದ ಸಾರ್ವಜನಿಕರು ತೀವ್ರ ತೊಂದರೆ ಅನುಭವಿಸುತ್ತಿದ್ದಾರೆ. ಗ್ರಾಮದ ಹಲವು ಓಣಿಗಳಲ್ಲಿ ಇದೇ ಸಮಸ್ಯೆ ಕಂಡುಬಂದಿದ್ದು, ಮಳೆ ಬಂದಾಗ ರಸ್ತೆ ಸಂಪೂರ್ಣ ಕೆಸರಿನಿಂದ ತುಂಬಿ ಸಂಚಾರ ದುಸ್ತರವಾಗುತ್ತಿದೆ. ಸಂಬಂಧಪಟ್ಟ ಅಧಿಕಾರಿಗಳಿಗೆ ಹಲವು ಬಾರಿ ಮೌಖಿಕವಾಗಿ ದೂರು ನೀಡಿದರೂ ಯಾವುದೇ ಕ್ರಮ ಕೈಗೊಂಡಿಲ್ಲ ಎಂದು ಗ್ರಾಮಸ್ಥರು ಆರೋಪಿಸಿದ್ದಾರೆ.

ಗ್ರಾಮದ ಒಳರಸ್ತೆಗಳ ಪಕ್ಕದಲ್ಲಿರುವ ಚರಂಡಿಗಳು ಸರಿಯಾಗಿ ನಿರ್ವಹಣೆಯಾಗದ ಕಾರಣ ಕೊಳಚೆ ನೀರು ರಸ್ತೆಯ ಮೇಲೆ ಹರಿಯುತ್ತಿದೆ. ಪರಿಣಾಮ ರಸ್ತೆಗಳಲ್ಲಿ ದೊಡ್ಡ ಪ್ರಮಾಣದ ಕೆಸರು ಮತ್ತು ನೀರು ನಿಂತು ದುರ್ವಾಸನೆಬೀರುತ್ತಿದೆ. ಶಾಲಾಮಕ್ಕಳು,ಮಹಿಳೆಯರು, ವೃದ್ಧರು ಹಾಗೂ ದ್ವಿಚಕ್ರ ವಾಹನ ಸವಾರರು ಪ್ರತಿನಿತ್ಯ ಇದೇ ರಸ್ತೆಯಲ್ಲಿ ಸಂಚರಿಸಬೇಕಾಗಿದ್ದು, ಜಾರಿ ಬಿದ್ದು ಗಾಯಗೊಳ್ಳುವ ಭೀತಿಯಲ್ಲಿದ್ದಾರೆ.

ಚರಂಡಿ ನೀರು ನಿಂತಿರುವುದರಿಂದ ಸೊಳ್ಳೆಗಳ ಕಾಟವೂ ಹೆಚ್ಚಾಗಿದೆ. ಇದರಿಂದ ಡೆಂಘೀ, ಮಲೇರಿಯಾ ಸೇರಿದಂತೆ ಸಾಂಕ್ರಾಮಿಕ ರೋಗಗಳು ಹರಡುವ ಆತಂಕ ವ್ಯಕ್ತವಾಗಿದೆ. ರಸ್ತೆಯ ಮೇಲೆ ನಿಂತಿರುವ ಕೊಳಚೆ ನೀರು ಗ್ರಾಮಸ್ಥರ ಆರೋಗ್ಯಕ್ಕೂ ಅಪಾಯವನ್ನುಂಟು ಮಾಡುತ್ತಿದೆ. ಮಳೆಗಾಲದಲ್ಲಿ ಸಮಸ್ಯೆ ಮತ್ತಷ್ಟು ಉಲ್ಬಣವಾಗುತ್ತಿದ್ದು, ವಾಹನ ಸಂಚಾರಕ್ಕೂ ಅಡ್ಡಿಯಾಗುತ್ತಿದೆ. ಗ್ರಾಮಸ್ಥರ ಪ್ರಕಾರ, ಗ್ರಾಮ ಅಭಿವೃದ್ಧಿ ಅಧಿಕಾರಿಗಳಿಗೆ ಹಲವು ಬಾರಿ ಮೌಖಿಕವಾಗಿ ಸಮಸ್ಯೆ ತಿಳಿಸಿದ್ದರೂ ಪರಿಹರಿಸುತ್ತೇವೆ ಎಂಬ ಉತ್ತರ ಬಿಟ್ಟರೆ ಯಾವುದೇ ಶಾಶ್ವತ ಪರಿಹಾರ ದೊರೆತಿಲ್ಲ, ಸಮಸ್ಯೆ ದಿನದಿಂದ ದಿನಕ್ಕೆ ಹೆಚ್ಚುತ್ತಿದ್ದು, ಜನರು ಅಧಿಕಾರಿಗಳ ನಿರ್ಲಕ್ಷ್ಯದ ವಿರುದ್ಧ ಅಸಮಾಧಾನ ವ್ಯಕ್ತಪಡಿಸುತ್ತಿದ್ದಾರೆ.



ಸ್ಥಳೀಯರ ಅಭಿಪ್ರಾಯದಂತೆ, ಚರಂಡಿಗಳ ಹೂಳು ತೆರವು, ಹಾನಿಗೊಳಗಾದ ಚರಂಡಿಗಳ ದುರಸ್ತಿ ಹಾಗೂ ರಸ್ತೆ ಮೇಲೆ ಹರಿಯುವ ನೀರಿಗೆ ಸೂಕ್ತ ಹರಿವಿನ ವ್ಯವಸ್ಥೆ ಕಲ್ಪಿಸಿದರೆ ಸಮಸ್ಯೆಗೆ ಶಾಶ್ವತ ಪರಿಹಾರ ಸಿಗಲಿದೆ. ಗ್ರಾಮ ಪಂಚಾಯಿತಿ ಆಡಳಿತವು ಈ ಕುರಿತು ತಕ್ಷಣ ಗಮನಹರಿಸಿ ಅಗತ್ಯ ಕಾಮಗಾರಿ ಕೈಗೊಳ್ಳಬೇಕು ಎಂದು ಸಾರ್ವಜನಿಕರು ಒತ್ತಾಯಿಸಿದ್ದಾರೆ.

> **ಕಾಟಾಪುರ ಗ್ರಾಮದಲ್ಲಿ ಚರಂಡಿ ನೀರು ರಸ್ತೆಗೆ ಹರಿಯುತ್ತಿರುವ ಸಮಸ್ಯೆ ನನ್ನ ಗಮನಕ್ಕೆ ಬಂದಿದೆ. ಗ್ರಾಮ ಪಂಚಾಯಿತಿಯಲ್ಲಿ ಸಿಬ್ಬಂದಿ ಕೊರತೆಯಿರುವ ಕಾರಣ ಸ್ವಚ್ಛತಾ ಕಾಮಗಾರಿ ವಿಳಂಬವಾಗಿದೆ. ಆದರೂ ಸಾರ್ವಜನಿಕರಿಗೆ ಆಗುತ್ತಿರುವ ತೊಂದರೆಯನ್ನು ಗಂಭೀರವಾಗಿ ಪರಿಗಣಿಸಿದ್ದೇವೆ. ಹೊರಗಿನಿಂದ ಅಗತ್ಯ ಕೆಲಸಗಾರರನ್ನು ನಿಯೋಜಿಸಿ ಮುಂದಿನ ಎರಡು–ಮೂರು ದಿನಗಳೊಳಗೆ ಚರಂಡಿ ಸ್ವಚ್ಛತೆ ಹಾಗೂ ನೀರು ಸರಾಗವಾಗಿ ಹರಿಯುವಂತೆ ಅಗತ್ಯ ಕ್ರಮ ಕೈಗೊಂಡು ಸಮಸ್ಯೆ ಪರಿಹರಿಸಲಾಗುವುದು.**
>
> ■ **ಪ್ರಶಾಂತಕುಮಾರ್ ಹಿರೇಮಠ್, ಕಾಟಾಪುರ ಗ್ರಾಪಂ ಪಿಡಿಒ**

## ರಸಗೊಬ್ಬರ ಕೊರತೆಯಾಗದಂತೆ ಕ್ರಮ ಕೈಗೊಳ್ಳಿ: ಡಿಸಿ

ವಿಜಯನಗರ: ಮುಂಗಾರು ಹಂಗಾಮು ಆರಂಭವಾಗಿರುವುದರಿಂದ ಜಿಲ್ಲೆಯ ರೈತರಿಗೆ ಬಿತ್ತನೆ ಬೀಜ ಹಾಗೂ ರಸಗೊಬ್ಬರಗಳ ಕೊರತೆಯಾಗದಂತೆ ಅಗತ್ಯ ಕ್ರಮ ವಹಿಸಬೇಕು. ಕೃತಕ ಅಭಾವ ಸೃಷ್ಟಿಸುವ ಅಥವಾ ನಿಗದಿತ ದರಕ್ಕಿಂತ ಹೆಚ್ಚಿನ ಬೆಲೆಗೆ ಮಾರಾಟ ಮಾಡುವ ವರ್ತಕರ ವಿರುದ್ಧ ನಿರ್ದಾಕ್ಷಿಣ್ಯ ಕ್ರಿಮಿನಲ್ ಕ್ರಮ ಕೈಗೊಳ್ಳಲಾಗುವುದು ಎಂದು ಜಿಲ್ಲಾಧಿಕಾರಿ ಕವಿತಾ ಎಸ್ ಮನ್ನಿಕೇರಿ ಎಚ್ಚರಿಕೆ ನೀಡಿದ್ದಾರೆ.

ಜಿಲ್ಲಾಧಿಕಾರಿ ಕಚೇರಿಯಲ್ಲಿ ನಡೆದ ಜಿಲ್ಲಾ ಮಟ್ಟದ ಬೀಜ, ರಸಗೊಬ್ಬರ ಮತ್ತು ಕೀಟನಾಶಕ ಜಾಗೃತಿ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಜಿಲ್ಲೆಯಲ್ಲಿ ಜುಲೈ ಮೊದಲ ವಾರದಿಂದ ಮುಂಗಾರು ಚುರುಕುಗೊಳ್ಳುವ ನಿರೀಕ್ಷೆಯಿದ್ದು, ಕೃಷಿ ಚಟುವಟಿಕೆಗಳು ವೇಗ ಪಡೆದುಕೊಂಡಿವೆ. ಪ್ರಸಕ್ತ ಸಾಲಿನಲ್ಲಿ ಜಿಲ್ಲಾದ್ಯಂತ ಒಟ್ಟು 2,49,638 ಎಕರೆ ಬಿತ್ತನೆ ಗುರಿ ಹೊಂದಲಾಗಿತ್ತು.



ಆದರೆ ಮುಂಗಾರು ವಿಳಂಬ ಹಿನ್ನೆಲೆಯಲ್ಲಿ ಸದ್ಯಕ್ಕೆ 76,710 ಎಕರೆ ಪ್ರದೇಶದಲ್ಲಿ (ಶೇ.30ರಷ್ಟು) ಮಾತ್ರ ಬಿತ್ತನೆಯಾಗಿದೆ. ಇತ್ತೀಚೆಗೆ ವ'ು ಳೆ ಯಾ ಗಿ ರ'ು ವು ದ'ರಿಂ ದ' ಯೂರಿಯಾ, ಡಿ.ಎ.ಪಿ ಸೇರಿದಂತೆ ರಸಗೊಬ್ಬರಗಳನ್ನು ಬೇಡಿಕೆಗೆ ತಕ್ಕಂತೆ ಪೂರೈಸಲು ಕೃಷಿ ಇಲಾಖೆ ಸಜ್ಜಾಗಬೇಕು ಎಂದು ಸೂಚಿಸಿದರು.

ಇಲಾಖೆ ಮಾಹಿತಿ ಪ್ರಕಾರ, ಜಿಲ್ಲೆಯ ಮುಂಗಾರು ಹಂಗಾಮಿಗೆ ಒಟ್ಟು 1,33,543 ಮೆಟ್ರಿಕ್ ಟನ್ ರಸಗೊಬ್ಬರದ ಬೇಡಿಕೆಯಿದ್ದು, ಸದ್ಯ 74,538 ಮೆಟ್ರಿಕ್ ಟನ್ ದಾಸ್ತಾನು ಮಾಡಲಾಗಿದೆ. ಇದರಲ್ಲಿ ಈಗಾಗಲೇ 49,776 ಮೆಟ್ರಿಕ್ ಟನ್ ವಿತರಿಸಲಾಗಿದ್ದು, ಇನ್ನು 24,762 ಮೆಟ್ರಿಕ್ ಟನ್ ದಾಸ್ತಾನು ಲಭ್ಯವಿದೆ.

**ವಿಮೆ ನೋಂದಣಿಗೆ ಕೊನೆಯ ದಿನಾಂಕ:** ಪ್ರಧಾನಮಂತ್ರಿ ಫಸಲ್ ಬಿಮಾ ಯೋಜನೆಯಡಿ ಜೋಳ, ತೊಗರಿ, ಸೂರ್ಯಕಾಂತಿ, ಮುಸುಕಿನ ಜೋಳ, ಹತ್ತಿ ಹಾಗೂ ಈರುಳ್ಳಿ ಬೆಳೆಗಳಿಗೆ ಜು.31 ಕೊನೆಯ ದಿನವಾಗಿದೆ. ಭತ್ತ, ರಾಗಿ, ನವಣೆ, ಹುರುಳಿ, ನೆಲಗಡಲೆ ಮತ್ತು ಸಜ್ಜೆ ಬೆಳೆಗಳಿಗೆ ಆ.14 ಕಡೆಯ ದಿನವಾಗಿದೆ ಎಂದು ತಿಳಿಸಲಾಯಿತು.

ಇದೇ ಸಂದರ್ಭದಲ್ಲಿ ಬೆಳೆ ವಿಮೆಯ ಜಾಗೃತಿ ಕರಪತ್ರಗಳನ್ನು ಬಿಡುಗಡೆ ಮಾಡಲಾಯಿತು.

ಇದೇ ಸಂದರ್ಭದಲ್ಲಿ ಬೆಳೆ ವಿಮೆ ಹಾಗೂ ಪ್ರಧಾನ ಮಂತ್ರಿ ಫಸಲ್ ಭೀಮಾ ಯೋಜನೆ ಸಂಬಂಧಿಸಿದ ಕರಪತ್ರ ಬಿಡುಗಡೆಗೊಳಿಸಿದರು.

ಸಭೆಯಲ್ಲಿ ಜಿ.ಪಂ. ಸಿಇಒ ನೊಂಗ್ಜಾಯ್ ಮಹ್ಮದ್ ಅಲಿ ಅಕ್ರಮ್ ಷಾ, ಎಎಸ್ಪಿ ಮಂಜುನಾಥ, ಕೃಷಿ ಇಲಾಖೆಯ ಜಂಟಿ ನಿರ್ದೇಶಕ ವಾಮದೇವಕೊಳ್ಳಿ, ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ ಉಪನಿರ್ದೇಶಕ ರಿಯಾಜ್, ತೋಟಗಾರಿಕೆ ಇಲಾಖೆ ಜಂಟಿ ನಿರ್ದೇಶಕ ಪ್ರಭುರಾಜ್, ಯೋಜನೆ ಮತ್ತು ಸಾಂಖ್ಯಿಕ ಇಲಾಖೆ ಜಿಲ್ಲಾ ಅಧಿಕಾರಿ ಪತ್ರಿಬಸಪ್ಪ, ಪಶು ಇಲಾಖೆ ಉಪನಿರ್ದೇಶಕ ಡಾ.ರವಿ, ಸೇರಿದಂತೆ ವಿವಿಧ ಇಲಾಖೆಗಳ ಜಿಲ್ಲಾ ಮತ್ತು ತಾಲೂಕು ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

ಕರ್ನಾಟಕ ಸರ್ಕಾರ

## ಕಾರ್ಯನಿರ್ವಾಹಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನೀರಿಂಗ್ ವಿಭಾಗ, ಬೆಳಗಾವಿ

ಕ್ರ.ಸಂ.:ಪಂರಾಇಂ/ವಿಬೆ/ಪಿಬಿ-2/ಟೆಂಡರ್-16/2026-27/1819 ದಿನಾಂಕ: 03-07-2026

### ಗುತ್ತಿಗೆ ಆಹ್ವಾನ ಪ್ರಕಟಣೆ (ಇ-ಪ್ರೊಕ್ಯೂರ್‌ಮೆಂಟ್)

ಕಾರ್ಯನಿರ್ವಾಹಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನೀಯರಿಂಗ್ ವಿಭಾಗ, ಬೆಳಗಾವಿ ಅಡಿಯಲ್ಲಿ ಐಟಂವಾರು ಗುತ್ತಿಗೆಗಳನ್ನು ಇ-ಪ್ರೋಕ್ಯೂರ್‌ಮೆಂಟ್ ವೇದಿಕೆ ಮೂಲಕ ಪಂಚಾಯತ್ ರಾಜ್ ಇಂಜಿನೀಯರಿಂಗ್ ಇಲಾಖೆಯ ಚಾಲ್ತಿ ನೋಂದಾಯಿತ ಗುತ್ತಿಗೆದಾರರಿಗಾಗಿ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ಕೆ.ಡಬ್ಲ್ಯೂ-1 & 2, ರಲ್ಲಿ ಒಟ್ಟು 8 **(27661, 27662, 27663, 25437/Call-7, 26167/Call-5, 27683, 27684, 27685)** ಕಾಮಗಾರಿಯ ಟೆಂಡರ್ ಗುತ್ತಿಗೆಯನ್ನು ಕರೆಯಲಾಗಿದ್ದು ಗರಿಷ್ಠ ಹಾಗೂ ಕನಿಷ್ಠ ಅಂದಾಜು ಮೊತ್ತ ಅನುಕ್ರಮವಾಗಿ **ರೂ. 50.00** ಹಾಗೂ **ರೂ.7.51 ಲಕ್ಷಗಳು** ಗರಿಷ್ಠ ಹಾಗೂ ಕನಿಷ್ಠ ಮುಂಗಡ ಠೇವಣಿ ಮೊತ್ತ ಅನುಕ್ರಮವಾಗಿ **ರೂ.1,00,000/- ಹಾಗೂ ರೂ. 18,750/-ಗಳು** ಇರುತ್ತದೆ. ಆಕ್ಷೇಪಣೆಗಳಿದ್ದಲ್ಲಿ ಖುದ್ದಾಗಿ ಕಚೇರಿಗೆ ಹಾಜರಾಗಿ ಸಲ್ಲಿಸುವ ಕೊನೆಯ ದಿನಾಂಕ: **17-07-2026 ಸಂಜೆ 17:28 ರೊಳಗಾಗಿ,** ಗುತ್ತಿಗೆದಾರರಿಂದ ಅರ್ಜಿಗಳನ್ನು ಆನ್ ಲೈನ್ ಮೂಲಕ ಮನವಿ ಮಾಡಿಕೊಳ್ಳುವ ಕೊನೆಯ **ದಿನಾಂಕ: 17-07-2026 ಸಂಜೆ 17.30 ಗಂಟೆಯವರೆಗೆ,** ತಾಂತ್ರಿಕ ಬಿಡ್‌ನ್ನು ತೆರೆಯುವ **ದಿನಾಂಕ: 20-07-2026 ಮುಂಜಾನೆ 11:00 ಗಂಟೆಯ** ನಂತರ ಹಾಗೂ ಆರ್ಥಿಕ ಬಿಡ್ ತೆರೆಯುವ **ದಿನಾಂಕ: 20-07-2026 ರಂದು ಮುಂಜಾನೆ 11.30 ಗಂಟೆಗೆ** ಇರುತ್ತದೆ. ಪರಿಷ್ಕೃತ ವೇಳಾ ಪಟ್ಟಿ/ತಿದ್ದುಪಡಿಗಳು/ ಹೆಚ್ಚಿನ ಮಾಹಿತಿ ಬೇಕಾದಲ್ಲಿ ಗುತ್ತಿಗೆದಾರರು ಈ ಕೆಳಗೆ ಸಹಿ ಮಾಡಿದವರ ಕಚೇರಿಯಲ್ಲಿ ಹಾಗೂ ಅಂತರ್‌ಜಾಲದ ಮೂಲಕ ವೆಬ್‌ಸೈಟ್ ವಿಳಾಸ **www.kppp.karnataka.gov.in** ರಲ್ಲಿ ಪಡೆಯಬಹುದು.

ಸಹಿ/-
ಕಾರ್ಯನಿರ್ವಾಹಕ ಅಭಿಯಂತರು,
ಪಂ. ರಾ. ಇಂ. ವಿಭಾಗ, ಬೆಳಗಾವಿ.

ವಾ.ಸಾ.ಇ./ಬೆಳಗಾವಿ/
526/2026-27/ದೇಶಪಾಂಡೆಪಬ್ಲಿಸಿಟಿ

---

Crl. Misce. 76 /2026

**IN THE COURT OF HON'BLE I-J.M.F.C. HUBBALLI AT : HUBBALLI.**

**Petitioner : Smt.Sushila W/o. Hanumantappa Sottadyamannavar,**

**V/S**

**Respondent :** The Assistant Commissioner, Birth and Death Registrar, Zonal No.6, HDMC Hubballi.

**CITATION**

Herein the Advocate for the petitioner submits as under:

That, the petitioner above named have filed the top noted petition seeking declaration of death of her son by name **Gangappa S/o Hanumantappa Sottadyamannavar died Unmarried expired on 21-07-2021** in the residence at Sagar colony, Kusugal Road, Keshwapur, Hubballi, in the Dharwad District.

If anybody having objections for the death declaration sought for by the petitioner may please be filed their objections in writing either in person or through your counsel before the Hon'ble court on 06-08-2026 at 11:00 am sharp.

If no any objec-tions are found filed by anybody on the date and time above, the matter will be heard ex-parte in favour of the petitioner.

Given in my hand with seal & signature of the Hon'ble court on the **30th day of June 2026.**

COURT SEAL

Hubli, 30-06-2026
**R. Y. Talawar**
Advocate for the Petitioner

By order of the Court
Sd/- Sheristedar,
Hon'ble I-J.M.F.C.,
Court, Hubballi

---

## ಶಿವಮೊಗ್ಗ- ಭದ್ರಾವತಿ ನಗರಾಭಿವೃದ್ಧಿ ಪ್ರಾಧಿಕಾರ,

ವಾಣಿಜ್ಯ ಸಂಕೀರ್ಣ, 100 ಅಡಿ ರಸ್ತೆ, ವಿನೋಬನಗರ, ಶಿವಮೊಗ್ಗ-577204
Ph. 08182-249867, 249280

ನಂ.ಶಿಭನಪ್ರಾ/ತಾಂ.ಶಾ/ಟೆಂಡರ್/14/2025-26 ದಿನಾಂಕ: 24.06.2026

### ಕೆಪಿಪಿಪಿ ಪೋರ್ಟಲ್ ಟೆಂಡರ್ ಪ್ರಕಟಣೆ (2ನೇ ಕರೆ)

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧ್ಯಾದೇಶ 1999 ರ ನಿಯಮ 2000 ರಂತೆ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ ಕೆ.ಡಬ್ಲ್ಯೂ 4 ರ ಕಲಂಗಳ ಷರತ್ತಿನನ್ವಯ ಕೆಪಿಪಿ ಪೋರ್ಟಲ್‌ನಲ್ಲಿ ನೋಂದಾಯಿಸಲ್ಪಟ್ಟ ಲೋಕೋಪಯೋಗಿ ಇಲಾಖೆಯ ಸಿವಿಲ್ ಅರ್ಹ ಗುತ್ತಿಗೆದಾರರಿಂದ ಒಟ್ಟು 04 ಸಂಖ್ಯೆ ಕಾಮಗಾರಿಗಳಿಗೆ ಐಟಂವಾರು ಟೆಂಡರ್‌ಗಳನ್ನು ಈ ಕೆಳಗಡೆ ಸಹಿಮಾಡಿರುವವರು ಆಹ್ವಾನಿಸಿರುತ್ತಾರೆ. ಅರ್ಹ ಗುತ್ತಿಗೆದಾರರು KPPP ಪೋರ್ಟಲ್ https://kppp.karnataka.gov.in ಮುಖಾಂತರ ಟೆಂಡರ್‌ನಲ್ಲಿ ಭಾಗವಹಿಸಬಹುದಾಗಿದೆ. ಗುತ್ತಿಗೆದಾರರು ಟೆಂಡರ್ ತಿಳುವಳಿಕೆ ಪತ್ರದ ಕ್ಲಾಸ್-3ರ ಅನ್ವಯ ಅರ್ಹತಾ ವಿವರಗಳನ್ನು ಹಾಗೂ ವೇಳಾಪಟ್ಟಿಯನ್ನು KPPP ಪೋರ್ಟಲ್‌ನಲ್ಲಿ ಪ್ರಕಟಿಸಲಾಗಿದೆ. KPPP ಪೋರ್ಟಲ್‌ಗೆ ಸಂಬಂಧಿಸಿದಂತೆ ಹೆಚ್ಚಿನ ಮಾಹಿತಿಗಾಗಿ ಹೆಲ್ಪ್ ಡೆಸ್ಕ್ ನಂ.080-8046010000 & 8068948777ನ್ನು ಸಂಪರ್ಕಿಸಬಹುದಾಗಿರುತ್ತದೆ.

ಹೆಚ್ಚಿನ ವಿವರಗಳನ್ನು ಕಚೇರಿ ಕೆಲಸದ ದಿನದಂದು ಸಂಜೆ 3-30 ರಿಂದ 5-30 ರ ವೇಳೆಯಲ್ಲಿ ಪ್ರಾಧಿಕಾರದ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ರವರನ್ನು ಸಂಪರ್ಕಿಸಿ ಪಡೆಯಬಹುದಾಗಿದೆ.

ಸಹಿ/- (ಬಿ.ಆರ್.ಮಂಜುನಾಥ) ಸಹಿ/- (ಹೆಚ್.ಎಸ್.ಸುಂದರೇಶ್. ಬಿ.ಇ)
ಆಯುಕ್ತರು, ಅಧ್ಯಕ್ಷರು
ಶಿವಮೊಗ್ಗ-ಭದ್ರಾವತಿ ನಗರಾಭಿವೃದ್ಧಿ ಪ್ರಾಧಿಕಾರ, ಶಿವಮೊಗ್ಗ

ವಾ.ಸಾ.ಸಂ.ಇ/ಶಿವಎಸ್‌ಎಂಸಿಎ/ಶಿ/26-27/18/07/461

---

### CHANGE OF NAME

I, **DHANANJAY KHARADE** resident of H No. 4004, Kharade Galli Nipani have changed my name **DHANANJAY ARUN KHARADE** with wild affidavit before the Notary of **Smt. A. H. Suryawanshi** of Nipani dated: 3th July 2026.

### CHANGE OF NAME

I, **VIJAYALAXMI** (Old Name) Resident of 306A 7th Ward 2nd Cross M P Prakash Nagarhospet, Bellary Karnataka 583201, have changed my name as **VIJAYALAKSHMI** (New Name) henceforth I will be called and recognized by new name for all future purposes, dated: 03/07/2026.

### CHANGE OF NAME

I, **SHAMEERA D/O MUTALIB MADIWALE** Resident of Plot No 4 Shaikh Suleman Plot Yarnal Road Nipani have changed my name **SAMEERA SADIK SHAIKH** with wild affidavit beforethe Notary of **Smt. A. H. Suryawanshi** of Nipani dated: 3rd July 2026.

### CHANGE OF NAME

I, **TOUPIK PATAYAT** (Old Name), S/o.**KAMALASAB**, as per Educational Documents and I R/o.Manoli-591117, Dist-Belagavi, have changed my name to **TOUFIQ PATAYAT** (New Name), S/o.**KAMALASAB PATAYAT**, as per my KYC Documents. Henceforth I will be called and recognized by my New Name, for all Purposes, Vide Affidavit Sworn Before Notary T.G.BALANNAVAR at Hubballi on 02/07/2026

### CHANGE OF NAME

I, **SUSHMA SHIRAGUPPI** (Old Name), D/o. **SHANKAR**, (Before Marriage) and I R/o.Bengaluru-560102, have changed my name to **SUSHMA VISHWANATH HIREMATH** (New Name) , W/o.**VISHWANATH HIREMATH**, (After Marriage). Henceforth I will be called and recognized by my New Name, for all Purposes, Vide Affidavit Sworn Before Notary T.G.BALANNAVAR at Hubballi on 02/07/2026

### CHANGE OF NAME

I **FATIMA MAHABOOB KHAN PATHAN** (Old Name) Resident of 50, Sadar Sofa, Byahatti Plot, Old Hubli, Hubli, Hubballi - Dharwad City - 580024, Karnataka, India, have changed my name as **FATIMA KATEWADI** (New Name) henceforth I will be called and recognized by new name for all future purposes, dated: 03/07/2026.

### CHANGE OF NAME

I, **KAVERI CHIPPALAKATTI** (Old Name) Resident of H No. 2670, Vanasiri Nagar, Sattur, Dharwad, Karnataka, Pin Code: 580009, have changed my name as **KAVERI BADIGER** (New Name) henceforth I will be called and recognized by new name for all future purposes, dated: 03/07/2026.

### CHANGE OF NAME

I, **SURESH NAGARAJ** (Old Name) Resident of H No: 75/1 Gandhi Nagar Vijayanagar Sagar, Shivamogga Pin - 577401 (address), have changed my name as **SURESHA NAGARAJ** (New Name) henceforth I will be called and recognized by new name for all future purposes, dated: 03/07/2026.

### CHANGE OF NAME

I, **AQSABANU BABUSAB PATAD** (Old Name), D/o. **BABUSAB PATAD** (Before Marriage) and I R/o. Saundatti-591126, Dist-Belagavi, have changed my name to **AQSABANU SALEEM DAFEDAR** (New Name), W/o. **SALEEM DAFEDAR** (After Marriage). Henceforth I will be called and recognised by my New Name, for all Purposes, Vide Affidavit Sworn Before Notary T.G.BALANNAVAR at Hubballi on 02/07/2026

---

ಕರ್ನಾಟಕ ಸರಕಾರ

## ಪಂಚಾಯತ ರಾಜ್ ಇಂಜಿನೀಯರಿಂಗ್ ವಿಭಾಗ, ಶಿರಸಿ ಉತ್ತರ ಕನ್ನಡ

ದೂರವಾಣಿ: 08384-226381 ಇ-ಮೇಲ್: ee_zpedsirsi@yahoo.co.in
ಕ್ರ.ಸಂ:ಪಂ.ರಾ.ಇಂ/ವಿಶಿ/ಪಿ.ಬಿ-2/ಟೆಂಡರ್-09/CMIDP/2026-27/649 ದಿನಾಂಕ: 25-06-2026

### ಟೆಂಡರ್ ಪ್ರಕಟಣೆ 09/2026-27 (ಇ - ಪ್ರೊಕ್ಯೂರ್‌ಮೆಂಟ್ ಮೂಲಕ)

ಕರ್ನಾಟಕ ರಾಜ್ಯಪಾಲರ ಪರವಾಗಿ ಕಾರ್ಯನಿರ್ವಾಹಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನೀಯರಿಂಗ್ ವಿಭಾಗ, ಶಿರಸಿ ಇವರಿಂದ ಲೋಕೋಪಯೋಗಿ ಇಲಾಖೆಯಲ್ಲಿ ನವಿಕೃತ ನೊಂದಾಯಿತ 2019-20 ನೇ ಸಾಲಿನ ನವಿಕೃತ ನೋಂದಾಯಿಸಿದ ಅರ್ಹ ಹಾಗೂ ಇ-ಪ್ರೊಕ್ಯೂರ್‌ಮೆಂಟ್ ಸಂಸ್ಥೆಯಿಂದ ನೋಂದಾಯಿಸಲ್ಪಟ್ಟ ಗುತ್ತಿಗೆದಾರರಿಂದ CMIDP ಯೋಜನೆಯಡಿ ಕಾಮಗಾರಿಗಳಿಗೆ ಕರ್ನಾಟಕ ಸರ್ಕಾರದ ಸಾರ್ವಜನಿಕ ಖರೀದಿ ಪಾರದರ್ಶಕತೆ ಕಾನೂನು ಹಾಗೂ ನಿಯಮಾವಳಿ 2000 ಹಾಗೂ Standard Tender Document ನಂತೆ ತತ್ಸಂಬಂಧ ಕಾಲಕಾಲಕ್ಕೆ ಹೊರಡಿಸಲಾದ ತಿದ್ದುಪಡಿ ಆದೇಶಗಳನ್ವಯ ನಿಬಂಧನೆಗೆ ಒಳಪಟ್ಟು ಈ ಕೆಳಗಿನಂತೆ ಐಟಂವಾರು ಟೆಂಡರ ಕರೆಯಲಾಗಿದೆ. ಅರ್ಹ ಗುತ್ತಿಗೆದಾರರು ಇ-ಆಡಳಿತ ಕೇಂದ್ರ ಅಥವಾ ವೆಬ್‌ಸೈಟ್ http://www.kppp.karnataka.gov.in ನಲ್ಲಿ ಪ್ರಕಟಿಸಿದಂತೆ ದಿನಾಂಕ ಹಾಗೂ ಇನ್ನುಳಿದ ವಿವರಗಳನ್ನು ಖಚಿತಪಡಿಸಿಕೊಂಡು ಟೆಂಡರಿಗಾಗಿ ಭಾಗವಹಿಸಬಹುದು. ಹೆಚ್ಚಿನ ವಿವರಗಳಿಗೆ ಈ ಕಚೇರಿಯಿಂದ ಕಚೇರಿ ವೇಳೆಯಲ್ಲಿ ಮಾಹಿತಿ ಪಡೆಯಬಹುದು ಟೆಂಡರ್ ವಿವರಗಳು ಈ ಕೆಳಗಿನಂತಿವೆ.

ಕಾಮಗಾರಿ ಹೆಸರು: SC Category: (1) RDPR/2025-26/RD/WORK_INDENT25392 (2) RDPR/2025-26/RD/WORK_INDENT25389 **(3) RDPR/2025-26/RD/WORK_INDENT25418 (4) RDPR/2025-26/RD/WORK_INDENT25413 (5) RDPR/2026-27/RD/WORK_INDENT27546 (6) RDPR/2026-27/RD/WORK_INDENT27561**
**ST Category: (7) RDPR/2025-26/RD/WORK_INDENT25378 (8) RDPR/2026-27/RD/WORK_INDENT27539**
**CAT (I) Category: (9) RDPR/2025-26/RD/WORK_INDENT25417 (10) RDPR/2026-27/RD/WORK_INDENT27536**
**CAT II(A) Category: (11) RDPR/2025-26/RD/WORK_INDENT25412 (12) RDPR/2025-26/RD/WORK_INDENT25391 (13) RDPR/2025-26/RD/WORK_INDENT25367 (14) RDPR/2026-27/RD/WORK_INDENT27532 (15) RDPR/2026-27/RD/WORK_INDENT27540 (16) RDPR/2026-27/RD/WORK_INDENT27537**
**Others Category: (17) RDPR/2025-26/RD/WORK_INDENT25420 (18) RDPR/2025-26/RD/WORK_INDENT25401 (19) RDPR/2025-26/RD/WORK_INDENT25419 (20) RDPR/2025-26/RD/WORK_INDENT25411 (21) RDPR/2026-27/RD/WORK_INDENT27565 (22) RDPR/2026-27/RD/WORK_INDENT27533 (23) RDPR/2025-26/RD/WORK_INDENT24986 (24) RDPR/2026-27/RD/WORK_INDENT27541 (25) RDPR/2026-27/RD/WORK_INDENT27542**

(1) ಭರ್ತಿ ಮಾಡಿದ ಟೆಂಡರ್‌ಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ: 17-07-2026 ರ ಸಂಜೆ 16.00 ಘಂಟೆ ವರೆಗೆ (2) ಟೆಂಡರನ್ನು ತೆರೆಯುವ ದಿನಾಂಕ: 18-07-2026 ಸಂಜೆ 16.30 ಘಂಟೆಗೆ (ಸಾಧ್ಯವಾದಲ್ಲಿ) ಹೆಚ್ಚಿನ ವಿವರಗಳನ್ನು www.kppp.karnataka.gov.in ವೆಬ್‌ಸೈಟಿನಲ್ಲಿ ಅಥವಾ ಈ ಕಚೇರಿಯಲ್ಲಿ ಪಡೆಯಬಹುದಾಗಿದೆ.

ಸಹಿ/- ಕಾರ್ಯನಿರ್ವಾಹಕ ಇಂಜಿನೀಯರು,
ಪಂಚಾಯತ ರಾಜ್ ಇಂಜಿನೀಯರಿಂಗ್ ವಿಭಾಗ, ಶಿರಸಿ.

DIPR/KWR/KSMCA/244/26-27
dt. 03.07.2026

---

ಕರ್ನಾಟಕ ಸರ್ಕಾರ

## ಹಂಪಿ ವಿಶ್ವ ಪರಂಪರೆ ಪ್ರದೇಶ ನಿರ್ವಹಣಾ ಪ್ರಾಧಿಕಾರ

ಕಮಲಾಪುರ. ದೂರವಾಣಿ: 08394-241661
e-mail ID: hwhama@gmail.com

ಸಂಖ್ಯೆ:ಹವಿಪಪ್ರನಿಪ್ರಾ/ಕ/ಕ.ದು/2025-26 ದಿನಾಂಕ: 01-07-2026

### ಪತ್ರಿಕಾ ಪ್ರಕಟಣೆ / ದರಪಟ್ಟಿ ಆಹ್ವಾನ ಸೂಚನೆ

ಹಂಪಿ ವಿಶ್ವ ಪರಂಪರೆ ಪ್ರದೇಶ ನಿರ್ವಹಣಾ ಪ್ರಾಧಿಕಾರ, ಕಮಲಾಪುರ ವತಿಯಿಂದ ಹಂಪಿ ವಿಶ್ವ ಪರಂಪರಾ ತಾಣದಲ್ಲಿ QR CODE ಅಳವಡಿಸಲು ಹಾಗೂ ನಿರ್ವಹಣೆಗಾಗಿ ಕೆಳಕಂಡಂತೆ ಪ್ರತ್ಯೇಕ ದರ ನಮೂದಿಸುವ ಮೂಲಕ ಕಾರ್ಯ ಕೈಗೊಳ್ಳಲು ಅನುಭವ ಹೊಂದಿರುವ ಪ್ರತಿಷ್ಠಿತ ಸಂಸ್ಥೆಗಳು/ಏಜೆನ್ಸಿಗಳಿಂದ ಮುಚ್ಚಿದ ಲಕೋಟಿ ಮೂಲಕ ದರಪಟ್ಟಿಗಳನ್ನು ಆಹ್ವಾನಿಸಲಾಗುತ್ತಿದೆ. ವಿವರ ಕೆಳಗಿನಂತೆ

| ಕ್ರ.ಸಂ | ವಿವರ |
|---|---|
| 1 | ವೆಬ್ಸೈಟ್ ಹಾಗೂ ಸಾಫ್ಟ್‌ವೇರ್ ಅಭಿವೃದ್ಧಿ |
| 2 | ಕಂಟೆಂಟ್ ಮ್ಯಾನೇಜ್ಮೆಂಟ್ ಸಿಸ್ಟಮ್ (CMS) ಅಭಿವೃದ್ಧಿ |
| 3 | 50 ಬಹುಭಾಷಾ ಪ್ರವಾಸಿ ತಾಣಗಳ ವೆಬ್ಪುಟ ನಿರ್ಮಾಣ |
| 4 | QR ಕೋಡ್ ಸೃಜನ ಹಾಗೂ ನಿರ್ವಹಣೆ |
| 5 | ಮೂರು ಭಾಷೆಗಳಲ್ಲಿ ಮಾಹಿತಿ ನಮೂದು ಹಾಗೂ ವಿನ್ಯಾಸ |
| 6 | ಮೂಲ ಅನಾಲಿಟಿಕ್ಸ್ ಮತ್ತು ಮ್ಯಾಪ್ ಇಂಟಿಗ್ರೇಷನ್ |
| 7 | 50 QR ಮಾಹಿತಿ ಫಲಕಗಳ ತಯಾರಿಕೆ ಮತ್ತು ಅಳವಡಿಕೆ |
| 8 | 10 ಹೆಚ್ಚುವರಿ / ಬದಲಾವಣೆ QR ಮಾಹಿತಿ ಫಲಕಗಳು |
| 9 | ಒಂದು ವರ್ಷದ ಹೋಸ್ಟಿಂಗ್, SSL ಹಾಗೂ ಡೇಟಾ ಬ್ಯಾಕಪ್ |
| 10 | ಪರೀಕ್ಷೆ, ತರಬೇತಿ ಹಾಗೂ ದಾಖಲೆ ಒದಗಿಕೆ |
| 11 | ಒಂದು ವರ್ಷದ ವಾರಂಟಿ ಹಾಗೂ ತಾಂತ್ರಿಕ ಸಹಾಯ |

ಸೂಚನೆಗಳು:- ದರಪಟ್ಟಿಯನ್ನು ಸಂಸ್ಥೆಯ ಲೆಟರ್ ಹೆಡ್‌ನಲ್ಲಿ ಸಲ್ಲಿಸಬೇಕು. ● ಎಲ್ಲಾ ದರಗಳನ್ನು ಒಳಗೊಂಡಂತೆ ನಮೂದಿಸುವುದು.●ವಾರ್ಷಿಕ ನಿರ್ವಹಣಾ ವೆಚ್ಚ (AMC) ಅನ್ನು ಪ್ರತ್ಯೇಕವಾಗಿ ನಮೂದಿಸಬೇಕು. ●ಪ್ರಾಧಿಕಾರವು ಯಾವುದೇ ಕಾರಣ ನೀಡದೆ ದರಪಟ್ಟಿ ಸ್ವೀಕರಿಸುವ / ತಿರಸ್ಕರಿಸುವ ಹಕ್ಕನ್ನು ಕಾಯ್ದಿರುತ್ತದೆ.

ತಮ್ಮ ದರಪಟ್ಟಿಗಳನ್ನು ಸಲ್ಲಿಸುವ ಕೊನೆಯ ದಿನಾಂಕ: 06/07/2026 ಸಂಜೆ 5:00 ಗಂಟೆಯೊಳಗೆ, ಆಯುಕ್ತರು, ಹಂಪಿ ವಿಶ್ವ ಪರಂಪರೆ ಪ್ರದೇಶ ನಿರ್ವಹಣಾ ಪ್ರಾಧಿಕಾರ, ಕಮಲಾಪುರ, ವಿಜಯನಗರ ಜಿಲ್ಲೆ ಇಲ್ಲಿಗೆ ಖುದ್ದಾಗಿ/ಇ-ಮೇಲ್ ಮೂಲಕ (hwhama@gmail.com)ಸಲ್ಲಿಸುವುದು. ಹೆಚ್ಚಿನ ಮಾಹಿಗಾಗಿ ಕಛೇರಿಯ ಅವಧಿಯಲ್ಲಿ 08394-241661 ಕರೆ ಮಾಡುವುದು.

ಸಹಿ/-ಆಯುಕ್ತರು, ಹಂಪಿ ವಿಶ್ವ ಪರಂಪರೆ ಪ್ರದೇಶ
ನಿರ್ವಹಣಾ ಪ್ರಾಧಿಕಾರ ಕಮಲಾಪುರ

ವಾ.ಸಾ.ಸಂ.ಇ/ವಿಜಯನಗರ/2026-27/ಕೆಎಸ್‌ಎಂಸಿಎ/ಆರ್.ಓ.ಸಂಖ್ಯೆ/170

---

ಕರ್ನಾಟಕ ಗೃಹ ಮಂಡಳಿ
Karnataka Housing Board

## ಕರ್ನಾಟಕ ಗೃಹ ಮಂಡಳಿ

3ನೇ ಮಹಡಿ, ಕಾವೇರಿ ಭವನ, ಕೆ. ಜಿ. ರಸ್ತೆ, ಬೆಂಗಳೂರು-560009

### ಟೆಂಡರ್ ಪ್ರಕಟಣೆ

(ಕರ್ನಾಟಕ ಸಾರ್ವಜನಿಕ ಸಂಗ್ರಹಣಾ ಪೋರ್ಟಲ್ ಮುಖಾಂತರ)

**Notification No.KHB/CE/AEF/S&S/Hoovinahalli-Hassan/KHB/2026-27/ SE0378/Call-2 Date: 02.07.2026**

ಕರ್ನಾಟಕ ಗೃಹ ಮಂಡಳಿ ವತಿಯಿಂದ ಹಾಸನ ಜಿಲ್ಲೆ, ಹಾಸನ ತಾಲ್ಲೂಕು, ಕಸಬಾ ಹೋಬಳಿ ಹೂವಿನಹಳ್ಳಿ ಕಾವಲ್ ಮತ್ತು ಹೂವಿನಹಳ್ಳಿ ಗ್ರಾಮದಲ್ಲಿ 494 ಎಕರೆ 14.12 ಗುಂಟೆ ಜಮೀನಿನಲ್ಲಿ ಅಭಿವೃದ್ಧಿಪಡಿಸಲು ಉದ್ದೇಶಿಸಿರುವ ನಿವೇಶನ ಮತ್ತು ಸೇವೆಗಳ ಯೋಜನೆಯ ಕಾಮಗಾರಿಗೆ ವಾಸ್ತುಶಿಲ್ಪಿ ಸಂಸ್ಥೆ (AEF) ನೇಮಕಾತಿಗಾಗಿ KPP Portal ಮೂಲಕ ಟೆಂಡರ್ ಕರೆಯಲಾಗಿದೆ.

**ಅರ್ಜಿಯನ್ನು ಸಲ್ಲಿಸಲು ಕೊನೆಯ ದಿನಾಂಕ : 16.07.2026 ಸಂಜೆ 4.00 ಗಂಟೆಯವರೆಗೆ.**

ಕಾಮಗಾರಿಗಳ ಬಗ್ಗೆ ಹಾಗೂ ಇನ್ನಿತರ ವಿವರಗಳನ್ನು ಈ ಕೆಳಕಂಡ ವಿಳಾಸದಲ್ಲಿ ಕಛೇರಿಯ ವೇಳೆಯಲ್ಲಿ ಪಡೆಯಬಹುದಾಗಿದೆ. ಕಾರ್ಯಪಾಲಕ ಅಭಿಯಂತರರು, ಕರ್ನಾಟಕ ಗೃಹ ಮಂಡಳಿ, ಕಾವೇರಿ ಭವನ, ಬೆಂಗಳೂರು. ದೂರವಾಣಿ: 080-22273511/080-22100077 website: https://kppp.karnataka.gov.in

ಸಹಿ/- ಕಾರ್ಯಪಾಲಕ ಅಭಿಯಂತರರು,
ಕರ್ನಾಟಕ ಗೃಹ ಮಂಡಳಿ, ಬೆಂಗಳೂರು

ವಾ.ಸಾ.ಸಂ.ಇ/ವಾಪ್ರ/1469/ಆಕಾರ್/2026-27

---



### CHANGE OF NAME

I, **LAVISH BAGRACHA** (Old Name) Resident of S/3 3rd Floor Arihant Comforts Desai Park Kusugal Road, Keshwapur, Hubballi, Dist: Dharwad 580023, have changed my name as **LAVISH BAGRECHA** (New Name) henceforth I will be called and recognized by new name for all future purposes, dated: 03/07/2026.

---

## ನಗರಸಭಾ ಕಾರ್ಯಾಲಯ-ತಿಪಟೂರು

ತಿಪಟೂರು ತಾಲ್ಲೂಕು. ತುಮಕೂರು ಜಿಲ್ಲೆ. 08134-250785
itstaff_ulb_tiptur@yahoo.co.in, www.tipturcity.mrc.gov.in

ನಂ.ನ.ಸ.ತಿ/ತಾಂಶಾ/ಸಿ.ಆರ್/100/2026-27 ದಿನಾಂಕ: 30-06-2026

### ಟೆಂಡರ್ / ಕೊಟೇಷನ್ ಪ್ರಕಟಣೆ

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆಯ ಅಧ್ಯಾದೇಶ 1999 - 2000ರ ನಿಯಮಗಳಂತೆ ನಗರಸಭೆಯ ವಿವಿಧ ಅನುದಾನದಲ್ಲಿ ಈ ಕೆಳಕಂಡ ಕಾಮಗಾರಿಗಳನ್ನು ನಿರ್ವಹಿಸಲು ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿಸಿರುವ ಅರ್ಹ ದರ್ಜೆಯ ಗುತ್ತಿಗೆದಾರರು/ಸರಬರಾಜುದಾರರಿಗೆ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಆಸಕ್ತರು KPPP Portal ವೆಬ್‌ಸೈಟ್‌ನಲ್ಲಿ **(https://kppp.karnataka.gov.in)** ಟೆಂಡರ್‌ಗಳನ್ನು ಸಲ್ಲಿಸಬಹುದು. (ಹೆಚ್ಚಿನ ಮಾಹಿತಿಗಳನ್ನು ಕಛೇರಿಯ ಸಮಯದಲ್ಲಿ ಪಡೆಯಬಹುದು). ಟೆಂಡರ್‌ನಲ್ಲಿ ಯಾವುದೇ ಬದಲಾವಣೆ ಅಥವಾ ತಿದ್ದುಪಡಿ ಇದಲ್ಲಿ KPPP Portal ವೆಬ್‌ಸೈಟ್‌ನಲ್ಲಿ ತಿಳಿಸಲಾಗುವುದು.

| ಕ್ರ ಸಂ | ಇಂಡೆಂಟ್ ನಂಬರ್ | ಅಂದಾಜು ಮೊತ್ತ ಲಕ್ಷ ರೂ. ಗಳಲ್ಲಿ | ಇ.ಎಂ.ಡಿ ರೂಗಳಲ್ಲಿ | ಟೆಂಡರ್ ಸಲ್ಲಿಸುವ ಕಡೆಯ ದಿನಾಂಕ | ಟೆಂಡರ್ ತೆರೆಯುವ ದಿನಾಂಕ |
|---|---|---|---|---|---|
| 1 | DMA/2026-27/OW/WORK_ INDENT60113 | 30.00 | 60,000/- | 10.07.2026 | 13.07.2026 |
| 2 | DMA/2025-26/IND5926/CALL-3 | 2.73 | 6,825/- | 07.07.2026 | 08.07.2026 |
| 3 | DMA/2025-26/IND5890/CALL-3 | 11.43 | 28,575/- | 07.07.2026 | 08.07.2026 |
| 4 | DMA/2025-26/OW/WORK_INDENT38940/ CALL-3 | 3.20 | 8,000/- | 15.07.2026 | 16.07.2026 |
| 5 | DMA/2026-27/OW/WORK_INDENT60432 | 87.50 | 1,75,000/- | 06.08.2026 | 07.08.2026 |
| 6 | DMA/2026-27/OW/WORK_INDENT60050 | 80.00 | 1,60,000/- | 06.08.2026 | 07.08.2026 |
| 7 | DMA/2026-27/OW/WORK_INDENT59937 | 35.00 | 70,000/- | 06.08.2026 | 07.08.2026 |
| | KPPP Portal ವೆಬ್‌ಸೈಟ್‌ನಲ್ಲಿ ದಿನಾಂಕಗಳನ್ನು ಈ ಕೆಳಕಂಡಂತೆ ನಿಗದಿಪಡಿಸಿ ತಿದ್ದುಪಡಿ ಟೆಂಡರ್ ಪ್ರಕಟಣೆಯನ್ನು ನೀಡಿರುತ್ತಾರೆ | | | | |
| 8 | DMA/2026-27/OW/WORK_INDENT 59795 | 10.04 | 25,100/- | 04.07.2026 | 06.07.2026 |
| 9 | DMA/2026-27/OW/WORK_INDENT 59730 | 26.50 | 53,000/- | 04.07.2026 | 06.07.2026 |
| 10 | DMA/2026-27/OW/WORK_INDENT 59815 (CAT-II A) | 10.40 | 13,000/- | 04.07.2026 | 06.07.2026 |
| 11 | DMA/2026-27/WS/WORK_INDENT 59395 (ST) | 10.20 | 12,750/- | 04.07.2026 | 06.07.2026 |
| 12 | DMA/2026-27/OW/WORK_INDENT 59810 (SC) | 13.70 | 17,125/- | 04.07.2026 | 06.07.2026 |

**ಕರ್ನಾಟಕ ಪುರಸಭೆ ಕಾಯ್ದೆ 1964 ನಿಯಮ 347 ರಂತೆ ಕೆಲಸ ನಿರ್ವಹಿಸಲು ಕೊಟೇಷನ್ ಆಹ್ವಾನಿಸಲಾಗಿದೆ**

| | |
|---|---|
| 1 | ತಿಪಟೂರು ನಗರಸಭೆ ವ್ಯಾಪ್ತಿಯ ಐ.ಬಿ ವೃತ್ತದಲ್ಲಿ ಇರುವ Signal Light ಗಳ Control Box ಗಳನ್ನು ದುರಸ್ಥಿ ಪಡಿಸಲು ಕೊಟೇಷನ್ ಸಲ್ಲಿಸುವುದು |
| 2 | ತಿಪಟೂರು ನಗರಸಭೆಯ ಘನತ್ಯಾಜ್ಯ ವಿಲೇವಾರಿ ಘಟಕದಲ್ಲಿ ಹಾಳಾಗಿರುವ ಬೀದಿ ದೀಪಗಳ Control Box ಮತ್ತು ಕಂಬಗಳ Juction Box, ವೈರಿಂಗ್‌ನ್ನು ದುರಸ್ಥಿ ಪಡಿಸಲು ಕೊಟೇಷನ್ ಸಲ್ಲಿಸುವುದು |
| 3 | ತಿಪಟೂರು ನಗರಸಭೆಗೆ ಸೇರಿದ ಅನುಪಯುಕ್ತ ಈ ಕೆಳಕಂಡ ಕಟ್ಟಡಗಳನ್ನು ತೆರವುಗೊಳಿಸಿ, ತ್ಯಾಜ್ಯ ವಸ್ತುಗಳನ್ನು ವಿಲೇ ಪಡಿಸುವುದು ಮತ್ತು ಉಪಯುಕ್ತ ವಸ್ತುಗಳನ್ನು ಕಛೇರಿಯ ನಿರ್ದೇಶನಂತೆ ಸೂಕ್ತ ಸ್ಥಳಕ್ಕೆ ರವಾನಿಸಿ ಸಂಗ್ರಹಿಸುವುದು.<br>1) ವಾರ್ಡ್ ನಂ 3 ಚಿಕ್ಕ ಮಾರ್ಕೆಟ್ ಬಳಿ ಶೌಚಾಲಯ ಕಟ್ಟಡ, 2) ನಗರಸಭೆ ಆವರಣದ ಕಂದಾಯ ಶಾಖೆ, ಹಳೇ ಆರೋಗ್ಯ ಶಾಖೆ ಕಟ್ಟಡ, ಮಧ್ಯದ ಅಂಗವಿಕಲರ ಶೌಚಾಲಯ ಕಟ್ಟಡ, 3) ಹಳೇಪಾಳ್ಯ ರಸ್ತೆಯ ಮೂಲೆಅಂಚಿನಲ್ಲಿರುವ ಎ.ಸಿ ಶೀಟ್ ವಾಣಿಜ್ಯ ಮಳಿಗೆಗಳು, 4) IDSMT ವಾಣಿಜ್ಯ ಮಳಿಗೆ ಅರಳಿಕಟ್ಟೆ ಹತ್ತಿರ, 5) ಹಳೇಪಾಳ್ಯ ರಸ್ತೆ ಈಶ್ವರಲಿಂಗ ಪಂಪ್‌ಹೌಸ್ ಪಕ್ಕದ ಮಳಿಗೆಗಳು, 6) ಹುಳಿಯಾರ ರಸ್ತೆ ಪಕ್ಕದ ಅಂಗಡಿ ಮಳಿಗೆಗಳು, 7) ತಿಪಟೂರು ನಗರಸಭೆ ವ್ಯಾಪ್ತಿಯಲ್ಲಿ ಇರುವ ಕಂಚಾಘಟ್ಟದಲ್ಲಿ ಸಮುದಾಯ ಭವನ, 8) ವೈಟಿ ರಸ್ತೆ ಕೋಟೆ ಶಾಲೆ ಹೊಂದಿಕೊಂಡಿರುವ ಮಳಿಗೆಗಳು, 9) ಗಾಂಧಿನಗರ ರಂಗಾಪುರ ರಸ್ತೆ ಗಾಂಧಿನಗರ ಉರ್ದು ಶಾಲೆಯ ಆವರಣದಲ್ಲಿರುವ ಹಳೆಯ ಗ್ರಂಥಾಲಯ ಕಟ್ಟಡ, 10) ವೈಟಿ ರಸ್ತೆಯ ಎ.ಪಿ.ಎಂ.ಸಿ ಮುಂಭಾಗದಲ್ಲಿ ಪೌರಾಯುಕ್ತರು ಹಾಗೂ ನಗರಸಭೆ ನೌಕರರ ವಸತಿ ಗೃಹಗಳು, 11) ವಾರ್ಡ್ ನಂ 6 ಕೆ.ಆರ್ ಬಡಾವಣೆನಲ್ಲಿರುವ ನಗರಸಭೆ ಮಾಲೀಕತ್ವದ ಶಿಕ್ಷಕರ ಭವನ, 12) ಗಾಂಧಿನಗರ ಪಾರ್ಕ್ ವಾಚ್‌ಮ್ಯಾನ್ ರೂಮ್. |

**ಸೂಚನೆ: ಕೊಟೇಷನ್ ಪ್ರಕಟಣೆಯು ದಿನಪತ್ರಿಕೆಯಲ್ಲಿ ಪ್ರಕಟಣೆ ಆದ 7 ದಿನಗಳ ಒಳಗೆ ಸಂಜೆ 5.30 ರ ಒಳಗೆ ಹಾಗೂ ಕೊನೆಯ ದಿನ ಸರ್ಕಾರಿ ರಜೆ ಬಂದಲ್ಲಿ ಮುಂದಿನ ದಿನ ಕಚೇರಿಗೆ ಕೊಟೇಷನ್ ಸಲ್ಲಿಸುವುದು.**

ಸಹಿ/- ವಿಶ್ವೇಶ್ವರ್ ಬದರಗಡೆ
ಪೌರಾಯುಕ್ತರು, ನಗರಸಭೆ, ತಿಪಟೂರು

DIPR/TUM/RO-66/26-27/Oysters

---



---

## ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ, ಹುಬ್ಬಳ್ಳಿ

ಕೇಂದ್ರ ಕಚೇರಿ, ಗೋಕುಲ ರಸ್ತೆ, ಹುಬ್ಬಳ್ಳಿ-580 0030
ಸಂಚಾರ ಇಲಾಖೆ E-mail: cosp.nwkrtc@karnataka.gov.in

ಸಂಖ್ಯೆ: ವಾಕರಸಾ/ಕೇಂಕ/ಹು/ಸಂ/ವಾ-2:1850 ದಿನಾಂಕ: 03-07-2026

### ಇ-ಟೆಂಡರ್ ಪ್ರಕಟಣೆ ಸಂಖ್ಯೆ:01/26

ವಾಕರಸಾ ಸಂಸ್ಥೆಯ ವ್ಯಾಪ್ತಿಯಲ್ಲಿನ ಸಾಮಾನ್ಯ ಹಾಗೂ ವೇಗದೂತ ಬಸ್ಸುಗಳ ಮೇಲೆ ಜಾಹೀರಾತು ಅಳವಡಿಸಲು 5 ವರ್ಷಗಳ ಅವಧಿಗೆ ಪರವಾನಗಿ ಪಡೆಯಲು, ಆಸಕ್ತದಾರರಿಂದ ಇ-ಟೆಂಡರ್ ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

| ಕ್ರ ಸಂ | ಜಾಹೀರಾತು | ಸ್ಥಳ | ಮಾ.ಪ.ಶು (ಪ್ರತಿ ಬಸ್ಸಿಗೆ ಪ್ರತಿ ತಿಂಗಳಿಗೆ ರೂ.) | ಮಾ.ಪ.ಶು ಒಟ್ಟು ರೂ. | ಇ.ಎಂ.ಡಿ. ರೂ. | ಅವಧಿ |
|---|---|---|---|---|---|---|
| 1 | 2500 ಬಸ್ಸುಗಳ | ಪೂರ್ಣ ಬಸ್ ಮೇಲೆ ಜಾಹೀರಾತು ಪ್ರದರ್ಶಿಸುವುದು | 5,000/- | 1,25,00,000 | 3,75,00,000 | 5 ವರ್ಷ |
| 2 | 2500 ಬಸ್ಸುಗಳ | ಒಳ ಭಾಗ ಮತ್ತು ಹೊರ ಭಾಗದಲ್ಲಿ ಜಾಹೀರಾತು ಪ್ರದರ್ಶಿಸುವುದು | 2,240/- | 56,00,000 | 1,68,00,000 | 5 ವರ್ಷ |
| 3 | 2500 ಬಸ್ಸುಗಳ | 1000 ಪೂರ್ಣ ಬಸ್ ಮೇಲೆ & 1500 ಒಳ ಭಾಗ ಮತ್ತು ಹೊರ ಭಾಗದಲ್ಲಿ ಜಾಹೀರಾತು ಪ್ರದರ್ಶಿಸುವುದು | 7,240/- (ರೂ.5000*1000 ಬಸ್) & (ರೂ.2240*1500 ಬಸ್) | 83,60,000 | 2,50,80,000 | 5 ವರ್ಷ |

ಟೆಂಡರ್‌ಗಳಿಗೆ ಸಂಬಂಧಿತ ಅರ್ಜಿ ಶುಲ್ಕ, ದಾಖಲಾತಿಗಳು, ಅರ್ಹತಾ ಮಾನದಂಡಗಳು, ಷರತ್ತು & ನಿಬಂಧನೆಗಳು ಮತ್ತು ಇತರೆ ದಾಖಲಾತಿಗಳನ್ನು ಇ-ಪ್ರೊಕ್ಯೂರ್‌ಮೆಂಟ್‌ನ **ವೆಬ್‌ಸೈಟ್: kppp.karnataka.gov.in**ಮುಖೇನ ದಿನಾಂಕ: **04-07-2026** ರಿಂದ ಪಡೆದುಕೊಳ್ಳಬಹುದಾಗಿರುತ್ತದೆ.

ನಿಗದಿತ ದಿನಾಂಕ ಮತ್ತು ಸಮಯ: 1) ಪ್ರಿ ಬಿಡ್ ದಿನಾಂಕ: **15-07-2026 ಗಂಟೆ 11:00** 2) ಅರ್ಜಿಯನ್ನು ಸಲ್ಲಿಸಲು ಕೊನೆಯ ದಿನಾಂಕ: **23-07-2026 ಗಂಟೆ 17:00** 3) ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ: **25-07-2026 ಗಂಟೆ 11:00** 4) ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ: **28-07-2026 ಗಂಟೆ 15:00**

• ತಾಂತ್ರಿಕ ಬಿಡ್‌ನಲ್ಲಿ ಅರ್ಹವಾಗುವ ಬಿಡ್‌ದಾರರುಗಳ ಆರ್ಥಿಕ ಬಿಡ್‌ನ್ನು ಮಾತ್ರ ತೆರೆಯಲಾಗುವುದು. • ಯಾವುದೇ ಕಾರಣ ನೀಡದೆ ಟೆಂಡರ್‌ನ್ನು ಪುರಸ್ಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಸಂಸ್ಥೆಯು ಕಾಯ್ದಿರಿಸಿಕೊಂಡಿರುತ್ತದೆ. • ಹೆಚ್ಚಿನ ಮಾಹಿತಿಗಾಗಿ ಮುಖ್ಯ ಸಂಚಾರ ವ್ಯವಸ್ಥಾಪಕರು - 7760991504, ಉಪ ಮುಖ್ಯ ಸಂಚಾರ ವ್ಯವಸ್ಥಾಪಕರು -7760998504, ಸ.ಸಂ.ವ್ಯ. - 7760992098 ನ್ನು ಸಂಪರ್ಕಿಸಿ.
•ಇ-ಮೇಲ್: support@eprochelpdesk.com

ಸಹಿ/- ಮುಖ್ಯ ಸಂಚಾರ ವ್ಯವಸ್ಥಾಪಕರು
ಕೇಂದ್ರ ಕಚೇರಿ, ಹುಬ್ಬಳ್ಳಿ,

ಡಿಐಪಿಆರ್/ಧಾರವಾಡ/378/ಮಣಿಪಾಲ್/2026-27

---

ಕರ್ನಾಟಕ ಸರ್ಕಾರ
ಧಾರ್ಮಿಕ ದತ್ತಿ ಇಲಾಖೆ

## ಗುರುಗುಂಟಾ ಶ್ರೀಅಮರೇಶ್ವರ ದೇವಸ್ಥಾನ ದೇವರಭೂಪುರ ತಾ॥ಲಿಂಗಸುಗೂರು

ಸಂ:ಕಂ.ಅ.ದೇ/2026-27 ದಿನಾಂಕ:-30-06-2026.

### ಸಾರ್ವಜನಿಕ ಪ್ರಚಾರ ಪ್ರಕಟಣೆ

**ವಿಷಯ:-** ಲಿಂಗಸುಗೂರು ತಾಲೂಕಿನ ದೇವರಭೂಪುರ ಗ್ರಾಮದ ಗುರುಗುಂಟಾ ಶ್ರೀ ಅಮರೇಶ್ವರ ದೇವಸ್ಥಾನದಲ್ಲಿ ಸಂಗ್ರಹವಾಗಿರುವ ವಿವಿಧ ಬಗೆಯ ಬಾಂಡೆ ಸಾಮಾನುಗಳು ಮಾರಾಟ ಮಾಡುವ ಕುರಿತು.

ಲಿಂಗಸುಗೂರು ತಾಲೂಕಿನ ದೇವರಭೂಪುರ ಗ್ರಾಮದ ಗುರುಗುಂಟಾ ಶ್ರೀ ಅಮರೇಶ್ವರ ದೇವಸ್ಥಾನದಲ್ಲಿ ಸಂಗ್ರಹವಾಗಿರುವ ವಿವಿಧ ಬಗೆಯ ಬಾಂಡೆ ಸಾಮಾನುಗಳು ಮಾರಾಟ ಮಾಡಲಾಗುತ್ತಿದ್ದು ಆಸಕ್ತಿಯುಳ್ಳವರು ಈ ಕೆಳಗೆ ನಮೂದಿಸಿರುವ ಆಯಾ ಬಾಂಡೆ ಸಾಮಾನುಗಳು ಖರೀದಿ ಪಡೆಯುವವರು ಆಯಾ ಬಾಂಡೆ ಸಾಮಾನುಗಳಿಗೆ ಪ್ರತ್ಯೇಕ 1 ಕೆ.ಜಿ ದರ ದರಪಟ್ಟಿಯಲ್ಲಿ ನಮೂದಿಸತಕ್ಕದ್ದು ಹಾಗೂ ಸಲ್ಲಿಸಿರುವ ದರಪಟ್ಟಿಯಲ್ಲಿ 01 ಕೆ.ಜಿ.ಗೆ ಅತೀ ಹೆಚ್ಚು ದರ ಇರುವವರಿಗೆ ಮಾತ್ರ ಖರೀದಿಗೆ ಕೊಡಲಾಗುವುದು. ಸದರಿ ದರಪಟ್ಟಿಯನ್ನು ಸಲ್ಲಿಸುವವರು ದಿ:- 30.06.2026 ರಿಂದ 08.07.2026ರ ಸಂಜೆ 5:30 ರ ಒಳಗಡೆ ಶ್ರೀ ಅಮರೇಶ್ವರ ದೇವಸ್ಥಾನದ ಕಾರ್ಯಾಲಯದಲ್ಲಿ ಸಲ್ಲಿಸತಕ್ಕದ್ದು. ಈ ಕೆಳಗೆ ಇರುವ ಆಯಾ ಬಾಂಡೆ ಸಾಮಾನುಗಳಿಗೆ ಪ್ರತ್ಯೇಕ ದರ ನಮೂದಿಸುವ ವಿವರ ಈ ಕೆಳಗಿನಂತಿದೆ.

| ಕ್ರಸಂ | ವಿವರ | 1 ಕೆ.ಜಿ ದರ |
|---|---|---|
| 1 | ಸ್ಟೀಲ್ | |
| 2 | ಅಲುಮಿನಿಯಂ | |
| 3 | ತಾಂಬ್ರ | |
| 4 | ಹಿತ್ತಾಳೆ | |
| 5 | ಕಬ್ಬಿಣ | |

ಮೇಲ್ಕಂಡ ಕ್ರ.ಸಂ 01 ರಿಂದ 05ರ ವರೆಗೆ ಇರುವ ಆಯಾ ಬಾಂಡೆ ಸಾಮಾನುಗಳಿಗೆ ಪ್ರತ್ಯೇಕ ದರ ನಮೂದಿಸಿದ ಶೀಲ್ಡ್ ಕವರ್‌ನ್ನು ಮೇಲೆ ನಮೂದಿಸಿರುವ ದಿನಾಂಕ ಅವಧಿ ಒಳಗಡೆ ಬಂದಿರುವ ಶೀಲ್ಡ್ ಕವರ್‌ಗಳನ್ನು ಪಡೆಯಲಾಗುವುದು ಅವಧಿ ಮುಗಿದ ಬಂದ ಶೀಲ್ಡ್ ಕವರ್‌ನ್ನು ತಿರಸ್ಕತಿಸಲಾಗುವುದು.

ಸಹಿ/- ತಹಶೀಲ್ದಾರ ಲಿಂಗಸುಗೂರು
ಹಾಗೂ ಕಾರ್ಯನಿರ್ವಾಹಕ ಅಧಿಕಾರಿಗಳು
ಶ್ರೀಅಮರೇಶ್ವರ ದೇವಸ್ಥಾನ

DIP/RCR/149/KSMC&A/151/2026-27

---

## ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ

ನಂ.1 ಕಟ್ಟಡಗಳ ವಿಭಾಗ, ಎಸ್.ಜೆ.ಪಿ. ಆವರಣ, ಬೆಂಗಳೂರು.ದೂರವಾಣಿ: 080-22255210
ಸಂಖ್ಯೆ: ಕಾಅ/ಕವಿ.1/ಎಇ-1, ಎಇ-4/2026-27/09 ದಿನಾಂಕ: 02.07.2026

### ಟೆಂಡರ್‌ಗಾಗಿ ಆಹ್ವಾನ

ಮೇಲ್ಕಂಡ ಇಲಾಖೆಯು ವಿವಿಧ ಸೂಚಿತ ಸ್ಥಳಗಳಲ್ಲಿ **ಪೇಂಟಿಂಗ್, ಪಾಲಿಷಿಂಗ್ ಒದಗಿಸುವುದು, ಬಾತ್‌ರೂಮ್‌ಗಳ ನವೀಕರಣ, ಯುಪಿವಿಸಿ ಕಿಟಕಿಗಳನ್ನು ಅಳವಡಿಸುವುದು, ಶಟ್ಟರ್‌ಗಳ ದುರಸ್ತಿ, ಫ್ಲೋರ್ ಮ್ಯಾಟ್‌ಗಳನ್ನು ಒದಗಿಸುವುದು, ವರ್ಕ್‌ಸ್ಟೇಷನ್‌ಗಳು, ಕರ್ಟನ್ ರಾಡ್‌ಗಳನ್ನು ಒದಗಿಸುವುದು, ಕಿಟಕಿಗಳ ದುರಸ್ತಿ, ಅಲ್ಯೂಮಿನಿಯಂ ಪಾರ್ಟಿಷನ್‌ಗಳ ದುರಸ್ತಿ, ಹೆಚ್‌ಇ ಕಿಚನ್, ರಿಸಪ್ಷನ್, ಗ್ಯಾರೇಜ್‌ಗಳಲ್ಲಿ ಅಳವಡಿಸಿರುವ ವಾಟರ್ ಪ್ಯೂರಿಫೈಯರ್‌ಗಳ ವಾರ್ಷಿಕ ನಿರ್ವಹಣೆ, ಗ್ಯಾಸ್ ಲೈನ್‌ನ ನಿಯತಕಾಲಿಕ ತಪಾಸಣೆ, ಚಿಮಣಿ ಸರ್ವೀಸ್, ಫ್ಲೋರ್, ಸೋಫ, ಚೇರುಗಳ ಡೀಪ್ ಕ್ಲೀನಿಂಗ್ ಮತ್ತು ಇತರೆ ಅಭಿವೃದ್ಧಿ ಕಾಮಗಾರಿಗಳು ಸೇರಿದಂತೆ ಒಟ್ಟು 4** ಕಾಮಗಾರಿಗಳಿಗೆ ಅರ್ಹ ಟೆಂಡರ್‌ದಾರರಿಂದ ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ **(http://kppp.karnataka.gov.in)** ಮೂಲಕ ಟೆಂಡರ್‌ಗಳನ್ನು ಆಹ್ವಾನಿಸಿದೆ. ಕಾಮಗಾರಿಗಿಟ್ಟ ಅಂದಾಜು ಮೊತ್ತ: **ಕನಿಷ್ಠ ರೂ.2.26 ಲಕ್ಷಗಳು, ಗರಿಷ್ಠ ರೂ.7.99 ಲಕ್ಷಗಳು.** ಇಎಂಡಿ: **ಕನಿಷ್ಠ ರೂ.2,900/-, ರೂ.20,000/-.** ಕಾಲಾವಧಿ: **2 ರಿಂದ 12 ತಿಂಗಳು (ಮಳೆಗಾಲ ಸೇರಿದಂತೆ).** ಪ್ರತೀ ಕಾಮಗಾರಿಯ ದಸ್ತಾವೇಜು ಬೆಲೆ: **ಕೆಪಿಪಿ ಪೋರ್ಟಲ್‌ನಲ್ಲಿ ತಿಳಿಸಿರುವಂತೆ.** ಟೆಂಡರ್‌ಗಳನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಡೌನ್‌ಲೋಡ್ ಮಾಡಿಕೊಂಡು ಆನ್‌ಲೈನ್‌ನಲ್ಲಿ ಸಲ್ಲಿಸಲು ಕೊನೆಯ **ದಿನಾಂಕ: 09.07.2026, ಸಂಜೆ 4.30 ಗಂಟೆಯೊಳಗೆ.** ಟೆಂಡರ್‌ಗಳನ್ನು ತೆರೆಯುವ ದಿನಾಂಕ: **ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ತಿಳಿಸಿರುವಂತೆ.** ಸಂಕ್ಷಿಪ್ತ ಟೆಂಡರ್ ಕಾಮಗಾರಿಯ ವಿವರಗಳು, ಇಂಡೆಂಟ್ ಸಂಖ್ಯೆಗಳು, ಅಂದಾಜು ಮೊತ್ತ, ಇಎಂಡಿ, ಮೀಸಲಾತಿ ಹಾಗೂ ಇತರೆ ಹೆಚ್ಚಿನ ಮಾಹಿತಿಯನ್ನು ಮೇಲ್ಕಂಡ ಕಚೇರಿಯಿಂದ ಅಥವಾ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ **http://kppp.karnataka.gov.in** ಮೂಲಕ ಪಡೆಯಬಹುದು.

ಸಹಿ/- ಕಾರ್ಯಪಾಲಕ ಅಭಿಯಂತರರು

ವಾಸಾಸಂಇ/ಉನಿ-ಸಿ.ಪಿ/1458/ಕೆಎಸ್‌ಎಂಸಿಎ/2026-27

---

## ಕರ್ನಾಟಕ ನೀರಾವರಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯಪಾಲಕ ಅಭಿಯಂತರರ ಕಛೇರಿ, ಕ.ನೀ.ನಿ.ನಿ., ಮ.ಬ.ದ.ಕಾ.ನಿ., ವಿಭಾಗ ನಂ. 1, ನರಗುಂದ, ಜಿಲ್ಲೆ ಗದಗ ದೂ. : 08377-244236,
ಇ-ಮೇಲ್ : knnlestablishment@gmail.com

ಸಂಖ್ಯೆ : ಕ.ನೀ.ನಿ.ನಿ./ಮ.ಬ.ದ.1/ಪಿ.ಬಿ./ಟೆಂಡರ್/2026-27/419
ದಿನಾಂಕ : 01-07-2025

### ಟೆಂಡರ್ ಪ್ರಕಟಣೆ (ಏಳನೇಯ ಕರೆ)

(ಕೆ.ಪಿ.ಪಿ.ಪಿ. ಪೋರ್ಟಲ್ ಮುಖಾಂತರ)

ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಬೆಂಗಳೂರು ಇವರ ಪರವಾಗಿ ಈ ಕೆಳ ಸಹಿ ಮಾಡಿದವರಿಂದ ಲೋಕೋಪಯೋಗಿ ಇಲಾಖೆಯಲ್ಲಿ ಸೂಕ್ತ ದರ್ಜೆ ನೊಂದಾಯಿತರಾಗಿರುವ ಅರ್ಹ ಗುತ್ತಿಗೆದಾರರಿಂದ, ಕೆ.ಡಬ್ಲ್ಯೂ-4 ಪ್ರಕಾರ Turnkey ಆಧಾರದ ಮೇಲೆ ಕೆ.ಪಿ.ಪಿ.ಪಿ ಪೋರ್ಟಲ್ ಮೂಲಕ (ದ್ವಿ-ಲಕೋಟೆ ಪದ್ಧತಿ) ಟೆಂಡರ್ ಕರೆಯಲಾಗಿದೆ.

**1) ವರ್ಕ್ ಇಂಡೆಂಟ್ ನಂ. : 1574, ಕಾಮಗಾರಿಯ ಒಟ್ಟು ಅಂದಾಜು ಮೊತ್ತ : ರೂ. 45.75 ಕೋಟಿಗಳು ಮತ್ತು ಇ.ಎಂ.ಡಿ. ಮೊತ್ತ : ರೂ. 38.40 ಲಕ್ಷಗಳು, 2) ವರ್ಕ್ ಇಂಡೆಂಟ್ ನಂ. : 1575, ಕಾಮಗಾರಿಯ ಒಟ್ಟು ಅಂದಾಜು ಮೊತ್ತ : ರೂ. 41.30 ಕೋಟಿಗಳು ಮತ್ತು ಇ.ಎಂ.ಡಿ. ಮೊತ್ತ : ರೂ. 34.71 ಲಕ್ಷಗಳು, 3) ಟೆಂಡರ್ ಆಕ್ಷೇಪಣೆಗಳಿಗೆ / ಸ್ಪಷ್ಟೀಕರಣಕ್ಕಾಗಿ ನಿಗದಿಪಡಿಸಿದ ದಿನಾಂಕ : 10-07-2026 ರ ಬೆಳಿಗ್ಗೆ 11.00 ಘಂಟೆಯಿಂದ 5.30 ರವರೆಗೆ, 4) ಪೂರ್ವ ಭಾವಿ ಸಭೆ ದಿನಾಂಕ : 10-07-2026 ಸ್ಥಳ ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕ.ನೀ.ನಿ.ನಿ., 4ನೇ ಮಹಡಿ, ಕಾಫೀ ಬೋರ್ಡ್ ಬಿಲ್ಡಿಂಗ್ ನಂ. 1, ಡಾ॥ ಬಿ. ಆರ್. ಅಂಬೇಡ್ಕರ ವೀದಿ, ಬೆಂಗಳೂರು ಇವರ ಕಛೇರಿಯಲ್ಲಿ ಪೂರ್ವಾಹ್ನ 11.00 ಘಂಟೆಗೆ, 5) ಭರ್ತಿ ಮಾಡಿದ ಇ-ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ : 01-08-2026 ರ ಅಪರಾಹ್ನ 4.00 ಗಂಟೆವರೆಗೆ, 6) ತಾಂತ್ರಿಕ ಬಿಡ್ ತೆರೆಯುವ ದಿನಾಂಕ : 03-08-2026 ರ ಪೂವಾಹ್ನ 11.00 ಗಂಟೆಗೆ, 7) ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ ಆರ್ಥಿಕ ಬಿಡ್‌ನ್ನು ತೆರೆಯಲಾಗುವುದು.**

ಇತರೆ ವಿವರಗಳನ್ನು ಕೆ.ಪಿ.ಪಿ.ಪಿ. ಪೋರ್ಟಲ್ : **kppp.karnataka.gov.in** ವೆಬ್‌ಸೈಟ್ ಮುಖೇನ ಮೂಲಕ ಪಡೆಯಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಈ ಕಚೇರಿ ದೂರವಾಣಿ ಸಂಖ್ಯೆ : **08377-244236** ನ್ನು ಕಚೇರಿಯ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ.

ಸಹಿ/- ಕಾರ್ಯನಿರ್ವಾಹಕ ಅಭಿಯಂತರರು,
ಕ.ನೀ.ನಿ.ನಿ., ಮ.ಬ.ದ.ಕಾ.ನಿ. ವಿಭಾಗ ನಂ. 1,
ನರಗುಂದ.

ಡಿಐಪಿಆರ್/ಗದಗ/150/ಮಣಿಪಾಲ್/2026-27

ಮಾನ್ಯ ಘನ ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ನ್ಯಾಯಾಲಯ, ಸಂಡೂರು

ಸಿಆರ್ ಎಲ್.ಎಮ್.ಸಿ ಸಂಖ್ಯೆ: 551/2026

ಅರ್ಜಿದಾರರು:ಶ್ರೀಮತಿ ಹನುಮಕ್ಕ ಗಂಡ ಓಬಯ್ಯ, ವಯಸ್ಸು: 51 ವರ್ಷ, ಗೃಹಿಣಿ ಹಿಂದೂ, ವಾಸ: 2ನೇ ವಾರ್ಡ, ಶ್ರೀರಾಮಸ್ವಾಮಿ ದೇವಸ್ಥಾನದ ಓಣಿ, ಸಂಡೂರು ಪಟ್ಟಣ, ಸಂಡೂರು ತಾಲೂಕು, ಬಳ್ಳಾರಿ ಜಿಲ್ಲೆ.

ವಿರುದ್ಧ

ಎದುರುದಾರರು: ಮಾನ್ಯ ಮುಖ್ಯಾಧಿಕಾರಿಗಳು ಮತ್ತು ಜನನ ಮರಣ ನೊಂದಣಾಧಿಕಾರಿಗಳು ಕುರೇಕುಪ್ಪ ಪುರಸಭೆ.

ನೋಟಿಸ್

ಈ ಮೇಲ್ಕಂಡ ಪ್ರಕರಣದಲ್ಲಿ ಅರ್ಜಿದಾರರಾದ ಅಜ್ಜಿಯವರಾದ ಶ್ರೀ ದಾಮಪ್ಪ ತಂದೆ ಹನುಮಂತಪ್ಪ ಇವರು ದಿನಾಂಕ: 05-10-1996 ರಂದು 2ನೇ ವಾರ್ಡ, ಸಂಡೂರು ಪಟ್ಟಣ, ಸಂಡೂರು ತಾಲೂಕು, ಬಳ್ಳಾರಿ ಜಿಲ್ಲೆ ನಮ್ಮ ಮನೆಯಲ್ಲಿ ಸ್ವಾಭಾವಿಕ ಮರಣ ಹೊಂದಿರುವು ದರಿಂದ ಸದರಿಯವರು ಮರಣ ಪ್ರಮಾಣ ಪತ್ರಕ್ಕೆ ಎದುರುದಾರರ ವಿರುದ್ಧ ಪ್ರಕರಣ ದಾಖಲಿಸಿರುತ್ತಾರೆ. ಆದುದರಿಂದ ಸದರಿ ಮರಣ ಪ್ರಮಾಣ ಪತ್ರ ದಾಖಲಿಸಲು ಯಾರಾದರು ಯಾವು ದೇ ರೀತಿಯ ತಂಟೆ-ತಕರಾರು ಇದ್ದಲ್ಲಿ ಅವರ ಹಾಜರಾತಿಗೆ ದಿನಾಂಕ: 07-08-2026 ಬೆಳಿಗ್ಗೆ 11:00 ಗಂಟೆಗೆ ಮುದ್ದತ್ತು ನೇಮಿಸಿದ್ದು. ಸದರಿ ದಿನಾಂಕ ದಂದು ಖುದ್ದಾಗಿ ತಾವಾಗಲೀ ಅಥವಾ ವಕೀಲರ ಮೂಲಕವಾಗಲೀ ತಕರಾರು ಸಲ್ಲಿಸಬಹುದು. ಇದಕ್ಕೆ ತಪ್ಪಿದಲ್ಲಿ ನ್ಯಾಯಾಲಯ ಏಕತರ್ಫಿ ಮುಂದಿನ ಆದೇಶ ಕೈಗೊಳ್ಳಲಾಗುವುದು. ನ್ಯಾಯಾ ಲಯದ ಮೊಹರುನೊಂದಿಗೆ ದಿನಾಂಕ: 30-06-2026 ರಂದು ನೀಡಲಾಯಿತು.

ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೇದಾರರು, ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸಂಡೂರು
ಎಂ.ಶಶಿಕಾಂತ್, ಅರ್ಜಿದಾರರ ಪರ ವಕೀಲರು ಸಂಡೂರು

---

ಮಾನ್ಯ ಘನ ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ನ್ಯಾಯಾಲಯ, ಸಂಡೂರು

ಸಿಆರ್ ಎಲ್.ಎಮ್.ಸಿ ಸಂಖ್ಯೆ: 552/2026

ಅರ್ಜಿದಾರರು:ಶ್ರೀಮತಿ ಹನುಮಕ್ಕ ಗಂಡ ಓಬಯ್ಯ, ವಯಸ್ಸು: 51 ವರ್ಷ, ಗೃಹಿಣಿ ಹಿಂದೂ, ವಾಸ: 2ನೇ ವಾರ್ಡ, ಶ್ರೀರಾಮಸ್ವಾಮಿ ದೇವಸ್ಥಾನದ ಓಣಿ, ಸಂಡೂರು ಪಟ್ಟಣ, ಸಂಡೂರು ತಾಲೂಕು, ಬಳ್ಳಾರಿ ಜಿಲ್ಲೆ.

ವಿರುದ್ಧ

ಎದುರುದಾರರು: ಮಾನ್ಯ ಮುಖ್ಯಾಧಿಕಾರಿಗಳು ಮತ್ತು ಜನನ ಮರಣ ನೊಂದಣಾಧಿಕಾರಿಗಳು ಕುರೇಕುಪ್ಪ ಪುರಸಭೆ.

ನೋಟಿಸ್

ಈ ಮೇಲ್ಕಂಡ ಪ್ರಕರಣದಲ್ಲಿ ಅರ್ಜಿದಾರರಾದ ಅಜ್ಜಿಯವರಾದ ಹನುಮಕ್ಕ ಗಂಡ ತಿಪ್ಪಯ್ಯ ಇವರು ದಿನಾಂಕ: 03-03-1970 ರಂದು 2ನೇ ವಾರ್ಡ, ಸಂಡೂರು ಪಟ್ಟಣ, ಸಂಡೂರು ತಾಲೂಕು, ಬಳ್ಳಾರಿ ಜಿಲ್ಲೆ ನಮ್ಮ ಮನೆಯಲ್ಲಿ ಸ್ವಾಭಾವಿಕ ಮರಣ ಹೊಂದಿರುವು ದರಿಂದ ಸದರಿಯವರು ಮರಣ ಪ್ರಮಾಣ ಪತ್ರಕ್ಕೆ ಎದುರುದಾರರ ವಿರುದ್ಧ ಪ್ರಕರಣ ದಾಖಲಿಸಿರುತ್ತಾರೆ. ಆದುದರಿಂದ ಸದರಿ ಮರಣ ಪ್ರಮಾಣ ಪತ್ರ ದಾಖಲಿಸಲು ಯಾರಾದರು ಯಾವು ದೇ ರೀತಿಯ ತಂಟೆ-ತಕರಾರು ಇದ್ದಲ್ಲಿ ಅವರ ಹಾಜರಾತಿಗೆ ದಿನಾಂಕ: 07-08-2026 ಬೆಳಿಗ್ಗೆ 11:00 ಗಂಟೆಗೆ ಮುದ್ದತ್ತು ನೇಮಿಸಿದ್ದು. ಸದರಿ ದಿನಾಂಕ ದಂದು ಖುದ್ದಾಗಿ ತಾವಾಗಲೀ ಅಥವಾ ವಕೀಲರ ಮೂಲಕವಾಗಲೀ ತಕರಾರು ಸಲ್ಲಿಸಬಹುದು. ಇದಕ್ಕೆ ತಪ್ಪಿದಲ್ಲಿ ನ್ಯಾಯಾಲಯ ಏಕತರ್ಫಿ ಮುಂದಿನ ಆದೇಶ ಕೈಗೊಳ್ಳಲಾಗುವುದು. ನ್ಯಾಯಾಲಯದ ಮೊಹರುನೊಂದಿಗೆ ದಿನಾಂಕ: 30-06-2026 ರಂದು ಮಾಡಲಾಯಿತು.

ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೇದಾರರು, ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸಂಡೂರು
ಎಂ.ಶಶಿಕಾಂತ್, ಅರ್ಜಿದಾರರ ಪರ ವಕೀಲರು

---

## CHANGE OF NAME

I, **SALMABEGUM LADASAB ILKAL (Old Name)** R/o National Town, Near Masjid, Mantur Road, Hubli-580020 have changed my name to **UMME SALMA JILANI SOUDAGAR (New Name)** Vide Affidavit Sworn Before Notary S.F. Huilgol on 03-07-2026

## CHANGE OF NAME

I, **AHAMMED S/o. MOHAMMED MOHSIN MUSBA** R/o. Azad Nagar, 6th Cross Bhatkal, Karwar, Uttara Kannada Pin: 581320, Karnataka, India, Passport No: **V2010354 Issued at Dubai on 20/09/2021 valid upto 19/09/2026** presently working at Baniyas Square to **AHMED MUSBA** for all purposes.

## CHANGE OF NAME

I, **BIBIRUKHASANA DHARWAR** (Old Name) R/o. Plot No. 171, Old mantur Road, Millat Eidgah Bharthi Nagar, Hubballi-580020 have changed my name as **BIBIRUKHASANA DHARWAD** (New Name) vide affidavit sworn before notary Shivalli, M.A., Hubli, Dated 01.07.2026.

## CHANGE OF NAME

I **ANAS AHMED MUZAFFER ALI SHAIKH** (old name) R/o. HIG 5, H No. 101 Akshay Park Gokul Road Udyam Nagar Hubli 580030 have changed my name as **ANAS AHMED** (new name) (New Name) henceforth I will be called and recognized by new name for all future purposes, dated: 03/07/2026.

## CHANGE OF NAME

I **HARSHA NAYAK** (Old Name) R/o. 144 Bedsgaon Tq: Mundgod 581346 have changed my name as **HARSHA NARAYAN NAYAK** (New Name) henceforth I will be called and recognized by new name for all future purposes, dated: 03/07/2026.

## CHANGE OF NAME

I, **RAHIMAN NASHIPUDI (Old Name)** R/o Vivekananda Nagar, 4th Cross, Byadgi-581106 have changed my name to **ABDUL REHAMAN NASHIPUDI (New Name)** Vide Affidavit Sworn Before Notary S.F. Huilgol on 03-07-2026

---

ಮಾನ್ಯ ಘನ ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ನ್ಯಾಯಾಲಯ, ಸಂಡೂರು

ಸಿಆರ್ ಎಲ್.ಎಮ್.ಸಿ ಸಂಖ್ಯೆ: 553/2026

ಅರ್ಜಿದಾರರು:ಶ್ರೀಮತಿ ಹನುಮಕ್ಕ ಗಂಡ ಓಬಯ್ಯ, ವಯಸ್ಸು: 51 ವರ್ಷ, ಗೃಹಿಣಿ ಹಿಂದೂ, ವಾಸ: 2ನೇ ವಾರ್ಡ, ಶ್ರೀರಾಮಸ್ವಾಮಿ ದೇವಸ್ಥಾನದ ಓಣಿ. ಸಂಡೂರು ಪಟ್ಟಣ, ಸಂಡೂರು ತಾಲೂಕು, ಬಳ್ಳಾರಿ ಜಿಲ್ಲೆ.

ವಿರುದ್ಧ

ಎದುರುದಾರರು : ಮಾನ್ಯ ಮುಖ್ಯಾಧಿಕಾರಿಗಳು ಮತ್ತು ಜನನ ಮರಣ ನೊಂದಣಾಧಿಕಾರಿಗಳು ಕುರೇಕುಪ್ಪ ಪುರಸಭೆ.

ನೋಟಿಸ್

ಈ ಮೇಲ್ಕಂಡ ಪ್ರಕರಣದಲ್ಲಿ ಅರ್ಜಿದಾರರಾದ ಅಜ್ಜಿಯವರಾದ ಹೊಲೆಮ್ಮ ಗಂಡ ಹನುಮಂತಪ್ಪ ಇವರು ದಿನಾಂಕ: 05-07-2003 ರಂದು 2ನೇ ವಾರ್ಡ, ಸಂಡೂರು ಪಟ್ಟಣ, ಸಂಡೂರು ತಾಲೂಕು, ಬಳ್ಳಾರಿ ಜಿಲ್ಲೆ ನಮ್ಮ ಮನೆಯಲ್ಲಿ ಸ್ವಾಭಾವಿಕ ಮರಣ ಹೊಂದಿರುವು ದರಿಂದ ಸದರಿಯವರು ಮರಣ ಪ್ರಮಾಣ ಪತ್ರಕ್ಕೆ ಎದುರುದಾರರ ವಿರುದ್ಧ ಪ್ರಕರಣ ದಾಖಲಿಸಿರುತ್ತಾರೆ. ಆದುದರಿಂದ ಸದರಿ ಮರಣ ಪ್ರಮಾಣ ಪತ್ರ ದಾಖಲಿಸಲು ಯಾರಾದರು ಯಾವು ದೇ ರೀತಿಯ ತಂಟೆ-ತಕರಾರು ಇದ್ದಲ್ಲಿ ಅವರ ಹಾಜ ರಾತಿಗೆ ದಿನಾಂಕ: 07-08-2026 ಬೆಳಿಗ್ಗೆ 11:00 ಗಂಟೆಗೆ ಮುದ್ದತ್ತು ನೇಮಿಸಿದ್ದು. ಸದರಿ ದಿನಾಂಕ ದಂದು ಖುದ್ದಾಗಿ ತಾವಾಗಲೀ ಅಥವಾ ವಕೀಲರ ಮೂಲಕವಾಗಲೀ ತಕರಾರು ಸಲ್ಲಿಸಬಹುದು. ಇದಕ್ಕೆ ತಪ್ಪಿದಲ್ಲಿ ನ್ಯಾಯಾಲಯ ಏಕತರ್ಫಿ ಮುಂದಿನ ಆದೇಶ ಕೈಗೊಳ್ಳಲಾಗುವುದು. ನ್ಯಾಯಾಲಯದ ಮೊಹರುನೊಂದಿಗೆ ದಿನಾಂಕ: 30-06-2026 ರಂದು ನೀಡಲಾಯಿತು.

ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೇದಾರರು, ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸಂಡೂರು
ಎಂ.ಶಶಿಕಾಂತ್, ಅರ್ಜಿದಾರರ ಪರ ವಕೀಲರು ಸಂಡೂರು

---

ಕ್ರಿ. ಮಿ. ನಂ: 683 /2026

ರಾಣೇಬೆನ್ನೂರ 1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ಇವರ ನ್ಯಾಯಾಲಯದಲ್ಲಿ

ಅರ್ಜಿದಾರರು: 1.ಲೀಲಾ ಕೋಂ ಸುರೇಶ ಕುಂದೂರು ಸಾ॥ರಾಣೇಬೆನ್ನೂರ ಹಾಗೂ ವಗೈರೆ

ವಿರುದ್ಧ

ಎದುರುಗಾರರು:ಉಪ-ತಹಶೀಲ್ದಾರರು. ವ ಜನನ ಮರಣ ನೊಂದಣಾಧಿಕಾರಿಗಳು ನಾಡಕಛೇರಿ ಕುಪ್ಪೇಲೂರು,

'ಇಸ್ತಿಯಾರ ನಾಮೆ'

ಇದರಲ್ಲಿ ಅರ್ಜಿದಾರರು, ಎದುರುಗಾರರ ವಿರುದ್ಧ, 1ನೇ ಅರ್ಜಿದಾರಳ ಗಂಡ,2,3 ನೇಅರ್ಜಿದಾರ ತಂದೆ ಸುರೇಶ ತಂದೆ ರಾಮಪ್ಪ ಕುಂದೂರು ಇವರು ರಾಣೇಬೆನ್ನೂರ ತಾಲೂಕು, ತುಮ್ಮಿನಕಟ್ಟಿ ಗ್ರಾಮದಲ್ಲಿ ದಿನಾಂಕ10-04-2015 ರಂದುಮೃತರಾಗಿದ್ದು ,ಸದರಿಯವರ ಮರಣದ ದಿನಾಂಕವನ್ನು ಎದುರುಗಾರರ ಕಛೇರಿಯ ಜನನಮರಣನೊಂದಣಿ ದಾಖಲೆಯಲ್ಲಿ ನೊಂದಣಿ ಮಾಡಿಸಿಕೊಳ್ಳುವಕುರಿತು ಆದೇಶ ಪಡೆಯಲು ಅರ್ಜಿ ದಾಖಲಿಸಿದ್ದು, ಈ ಕುರಿತು ಸಾರ್ವಜನಿಕರಯಾವುದೇ ತಂಟೆ ತಕರಾರು ಇದ್ದಲ್ಲಿ ದಿ:10-08-2026 ರಂದು ಬೆಳಿಗ್ಗೆ 10.30 ಘಂಟೆಗೆನ್ಯಾಯಾಲಯದಲ್ಲಿ ಹಾಜರಾಗಿ ತಕರಾರು ಸಲ್ಲಿಸತಕ್ಕದ್ದು, ತಪ್ಪಿದಲ್ಲಿ ನ್ಯಾಯಾಲಯದವರು ಮುಂದಿನ ಆದೇಶ ಮಾಡುತ್ತಾರೆ ಅಂತಾ ಕೊಟ್ಟ ಸಾರ್ವಜನಿಕ ತಿಳುವಳಿಕೆ ನೋಟೀಸು. ನ್ಯಾಯಾಲಯದ ಮೋಹರಿನೊಂದಿಗೆ ದಿ:3/7/2026 ರಂದು ನೀಡಿದೆ.

ಸ್ಥಳ: ರಾಣೇಬೆನ್ನೂರ.
ದಿನಾಂಕ: 3-7-2026

ನ್ಯಾಯಾಲಯದ ಆದೇಶದ ಮೇರೆಗೆ
ಸಹಿ/-ಶಿರಸ್ತೇದಾರರು, 1ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆಎಮ್ಎಫ್ ಸಿ ನ್ಯಾಯಾಲಯ ರಾಣೇಬೆನ್ನೂರ.
ಸಹಿ/-ಶ್ರೀ ಎಮ್.ಎಮ್ ಹಾದಿಮನಿ
ಅರ್ಜಿದಾರರ ಪರ ವಕೀಲರು,

---

IN THE COURT OF THE 3rd ADDITIONAL CIVIL JUDGE & JMFC AT BALLARI
Crl. M.C. No.359/2026
Between:-ULURU GOPALAPPA and others ...Petitioner
And
The Register of Births & Death's, Thasildhar, Taluk office, Ballari ...Respondent

NOTICE

WHEREAS, the above named petitioner has filed the above petition under section 13(2) of Birth and Dea ths Act, 1969 against the respondent for the purpose of seeking date of death of Petitioner's No.1 father by name U.MUKKANNA S/O LATE.ERANNA was died on 15-05-1995 at Kolagallu village, Ballari taluk and District in the above mentioned address. Therefore, If any persons are interested you are hereby directed to appear in this court in person or by a pleader duly instructed on 17-08-2026 at about 11.00 a.m to show cause against the above suit, failing which the suit will be heard and determined ex-parte against you. Given under my hand and seal of the court on this 03rd day of July 2026.

By Order of the court.
Sherestedar, 3rd Addl Civil Judge and JMFC Ballari
H.Virupakshi, Advocates for the petitioners

---

IN THE COURT OF THE 3rd ADDITIONAL CIVIL JUDGE & JMFC AT BALLARI
Crl. M.C. No.360/2026
Between:-ULURU GOPALAPPA and others ...Petitioner
And
The Register of Births & Death's, Thasildhar, Taluk office, Ballari ...Respondent

NOTICE

WHEREAS, the above named petitioner has filed the above petition under section 13(2) of Birth and Deaths Act, 1969 against the respondent for the purpose of seeking date of death of Petitioner's No.1 mother by name SHANTHAMMA W/O LATE U.MUKKANNA was died on 20-04-1975 at Kolagallu village, Ballari taluk and District in the above mentioned address. Therefore, If any persons are interested you are hereby directed to appear in this court in person or by a pleader duly instructed on 17-08-2026 at about 11.00 a.m to show cause against the above suit, failing which the suit will be heard and determined ex-parte against you. Given under my hand and seal of the court on this 03rd day of July 2026.

By Order of the court.
Sherestedar , 3rd Addl Civil Judge and JMFC Ballari
H.Virupakshi, Advocates for the petitioners

---

## ರಾಜ್ಯ ಅಬಕಾರಿ ಇಲಾಖೆ, ಅಬಕಾರಿ ಉಪ ಆಯುಕ್ತರು ಕಛೇರಿ, ಚಿಕ್ಕಬಳ್ಳಾಪುರ ಜಿಲ್ಲೆ, ಚಿಕ್ಕಬಳ್ಳಾಪುರ

ಸಂಅಎಕ್ಸ್‌ಇ/ಡಿಸಿಇ/ಸಿಬಿಪಿ/ಇ-ಹರಾಜು/48/2025-26 ದಿನಾಂಕ 02.07.2026

### ಇ-ಹರಾಜು ಪ್ರಕಟಣೆ

ಸರ್ಕಾರದ ಅಧಿಸೂಚನೆ ಸಂ:ಆಇ/52/ಇಎಫ್ಎಲ್/2025 ದಿನಾಂಕ: 01.07.2026 ರ ಅಧಿಸೂಚನೆಯನ್ವಯ ಅಬಕಾರಿ ಇಲಾಖೆಯು ಭಾರತೀಯ ಮದ್ಯ ಅಥವಾ ವಿದೇಶಿ ಮದ್ಯ ಅಥವಾ ಎರಡನ್ನೂ ಮಾರಾಟ ಮಾಡಲು ಯಶಸ್ವಿ ಹೆಚ್-1 ಬಿಡ್ಡರ್‌ಗಳಿಗೆ ಫಾರ್ಮ್ CL-2A ಮತ್ತು CL-9A ನಮೂನೆಗಳಲ್ಲಿ ಅಬಕಾರಿ ಸನ್ನದು ನೀಡಲು ಅರ್ಹ ಬಿಡ್ಡರ್‌ಗಳಿಂದ ಬಿಡ್‌ಗಳನ್ನು ಆಹ್ವಾನಿಸಿರುತ್ತದೆ. ಸದರಿ ಅಧಿಸೂಚನೆಯಲ್ಲಿ ಚಿಕ್ಕಬಳ್ಳಾಪುರ ಜಿಲ್ಲೆಗೆ 11 ಮತ್ತು ಕೋಲಾರ ಜಿಲ್ಲೆಗೆ 15 ಒಟ್ಟು 26 ಸನ್ನದುಗಳನ್ನು ಹಂಚಿಕೆ ಮಾಡಲಾಗಿರುತ್ತದೆ. ಅದರನ್ವಯ, ಆನ್‌ಲೈನ್ ಮೂಲಕ ಇ-ಹರಾಜು ಪ್ರಕ್ರಿಯೆ ನಡೆಸಲು ಚಿಕ್ಕಬಳ್ಳಾಪುರ ಜಿಲ್ಲೆಗೆ **ದಿನಾಂಕ: 29.07.2026 ರಂದು ಅಪರಾಹ್ನ 3.00 ಘಂಟೆಯಿಂದ 5.00 ಘಂಟೆಯವರೆಗೆ** ಹಾಗೂ ಕೋಲಾರ ಜಿಲ್ಲೆಗೆ **ದಿನಾಂಕ: 31.07.2026 ರಂದು ಪೂರ್ವಾಹ್ನ 10.00 ಘಂಟೆಯಿಂದ 12.00 ಘಂಟೆಯವರೆಗೆ ನಿಗದಿಪಡಿಸಲಾಗಿರುತ್ತದೆ.** ಸದರಿ ಹರಾಜು ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳುವ ಸಂಭಾವ್ಯ ಅರ್ಹ ಬಿಡ್‌ದಾರರಿಗೆ ಸನ್ನದನ್ನು ಮಂಜೂರು ಮಾಡಲಾಗುತ್ತದೆ. ಸದರಿ ಹರಾಜು ಪ್ರಕ್ರಿಯೆಯಲ್ಲಿ ಭಾಗವಹಿಸಲು ಇಚ್ಛಿಸುವ ಸಾರ್ವಜನಿಕರಿಗೆ ಹಾಗೂ ಸಂಭಾವ್ಯ ಬಿಡ್‌ದಾರರಿಗೆ ಶ್ರೀ ಸರ್.ಎಂ. ವಿಶ್ವೇಶ್ವರಯ್ಯ ಸಭಾಂಗಣ, ಜಿಲ್ಲಾ ಪಂಚಾಯತ್, ಜಿಲ್ಲಾಡಳಿತ ಭವನ, ಶಿಡ್ಲಘಟ್ಟ ರಸ್ತೆ, ಚಿಕ್ಕಬಳ್ಳಾಪುರ – 562101 ಇಲ್ಲಿ **ದಿನಾಂಕ: 07.07.2026 ರಂದು ಬೆಳಿಗ್ಗೆ 11.00 ಘಂಟೆಯಿಂದ** ತರಬೇತಿಯನ್ನು ಆಯೋಜಿಸಲಾಗಿರುತ್ತದೆ, ಸದರಿ ತರಬೇತಿಗೆ ಹಾಜರಾಗಲು ಸಾರ್ವಜನಿಕರಲ್ಲಿ ಈ ಮೂಲಕ ಕೋರಲಾಗಿದೆ. ಇ-ಹರಾಜಿಗೆ ಸಂಬಂಧಿಸಿದ ವಿವರವಾದ ಮಾರ್ಗಸೂಚಿಗಳು, ನಿಯಮಗಳು ಮತ್ತು ಷರತ್ತುಗಳು, ಜಿಲ್ಲಾವಾರು ಸನ್ನದು ವಿವರಗಳು, ಮೀಸಲಾತಿ ವಿವರಗಳು, ಅರ್ಜಿ ಶುಲ್ಕ, ಮುಂಗಡ ಠೇವಣಿ ಹಣ (EMD) ಮೂಲ ಬೆಲೆ ಮತ್ತು ಹರಾಜಿನ ನಂತರದ ವಿವರಗಳು ಇಲಾಖೆಯ ವೆಬ್‌ಸೈಟ್ **https://stateexcise.karnataka.gov.in** ಮತ್ತು ಎಂ.ಎಸ್.ಟಿ.ಸಿ. (MSTC) ಲಿಮಿಟೆಡ್ ನ ಇ-ಹರಾಜು ಪೋರ್ಟಲ್ **https://www.mstcecommerce.com** ಗಳನ್ನು ವೀಕ್ಷಿಸಬಹುದಾಗಿರುತ್ತದೆ.

ಸಹಿ/- ಅಬಕಾರಿ ಉಪ ಆಯುಕ್ತರು
ಚಿಕ್ಕಬಳ್ಳಾಪುರ ಜಿಲ್ಲೆ, ಚಿಕ್ಕಬಳ್ಳಾಪುರ

ವಾಸಾಸಂಇ/ಚಿಕ್ಕಬಳ್ಳಾಪುರ/ಆರ್.ಓ.ಸಂಖ್ಯೆ:123/ಕೆಎಸ್‌ಎಂಸಿಎ/2026-27

---

ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಹೂವಿನಹಡಗಲಿ.

ಕ್ರಿಮಿನಲ್ ಮಿಸ್ಲೇನಿಯಸ್ ಸಂಖ್ಯೆ: 446/2026

ಅರ್ಜಿದಾರರು : ಶ್ರೀ ಮಲ್ಲಪ್ಪ ಜೆ. ತಂದೆ ಪರಸಪ್ಪ, ವಯಸ್ಸು 45 ವರ್ಷ, ಸಾ॥ ಸೋಗಿ ಗ್ರಾಮ, ಹೂವಿನಹಡಗಲಿ ತಾಲೂಕು, ವಿಜಯನಗರ ಜಿಲ್ಲೆ.

ವಿರುದ್ಧ

ಎದುರುದಾರರು : ಮಾನ್ಯ ತಹಶೀಲ್ದಾರರು ತಾಲೂಕು ಕಾರ್ಯಾಲಯ & ಇನ್ನೊಬ್ಬರು, ಹೂವಿನಹಡಗಲಿ,

ಸಾರ್ವಜನಿಕ ನೋಟಿಸು

ಈ ಪ್ರಕರಣದಲ್ಲಿ ಅರ್ಜಿದಾರರು ಸಾರ್ವಜನಿಕರ ಗಮನಕ್ಕೆ ಪ್ರಕಟಿಸಿದ ಈ ನೋಟೀಸು ಏನೆಂದರೆ, ಅರ್ಜಿದಾರಳು ಮಾನ್ಯ ಹೂವಿನಹಡಗಲಿ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯದಲ್ಲಿ ತನ್ನ ದೊಡ್ಡಮ್ಮನ ಮರಣ ಪ್ರಮಾಣಪತ್ರ ಪಡೆಯಲು ಅರ್ಜಿ ಹಾಕಿರುತ್ತಾರೆ.

ಅರ್ಜಿದಾರರ ದೊಡ್ಡಮ್ಮಳಾದ ಸೋಮಕ್ಕ ಗಂಡ ಪರಸಪ್ಪ ಇವರು ದಿನಾಂಕ: 01-04-2009 ರಂದು ವರಕನಹಳ್ಳಿ ಗ್ರಾಮದ ತಮ್ಮ ಮನೆಯಲ್ಲಿ ಮರಣಹೊಂದಿರುತ್ತಾರೆ. ಸದರಿಯವರ ಮರಣದ ಬಗ್ಗೆ ಎದುರುದಾರರ ಕಛೇರಿಯಲ್ಲಿ ನೊಂದಣಿಯಾಗದ ಕಾರಣ ಅರ್ಜಿದಾರರು ಘನ ನ್ಯಾಯಾಲಯದಲ್ಲಿ ಜನನ ಮತ್ತು ಮರಣ ನೊಂದಣಿ ಕಾಯ್ದೆ ಅಡಿಯಲ್ಲಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಸದರಿ ವಿಚಾರವಾಗಿ ಯಾರಾದರೂ ಈ ಬಗ್ಗೆ ತಕರಾರು ಸಲ್ಲಿಸುವವರಿದ್ದರೆ ತಾವಾಗಲೀ ಅಥವಾ ತಮ್ಮ ಪರವಾಗಿ ವಕೀಲರ ಮೂಲಕವಾಗಲೀ ದಿನಾಂಕ: 02/9/2026 ರಂದು ಸಮಯ ಬೆಳಿಗ್ಗೆ 11-00 ಗಂಟೆಗೆ ಹೂವಿನಹಡಗಲಿ ನ್ಯಾಯಾಲಯದಲ್ಲಿ ತಕರಾರು ಸಲ್ಲಿಸತಕ್ಕದ್ದು. ಇಲ್ಲವಾದಲ್ಲಿ ಮಾನ್ಯ ಘನ ನ್ಯಾಯಾಲಯವು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಯಾವುದೇ ತಕರಾರು ಇರುವುದಿಲ್ಲವೆಂದು ಏಕತರ್ಫಿ(ಏಕಪಕ್ಷೀಯ) ಆದೇಶ ಮಾಡಲಾಗುವುದು ಎಂದು ತಿಳಿಯತಕ್ಕದ್ದು.

ದಿನಾಂಕ: 15/6/2026 ರಂದು ನ್ಯಾಯಾಲಯದ ಆದೇಶ ಹಾಗೂ ಮೊಹರಿನೊಂದಿಗೆ ನೀಡಲಾಗಿದೆ.

ಸಹಿ/- ಶಿರಸ್ತೇದಾರರು
ಸಿ.ಜೆ. & ಜೆ.ಎಂ.ಎಫ್.ಸಿ. ನ್ಯಾಯಾಲಯ ಹೂವಿನಹಡಗಲಿ
ಸಹಿ/- ಶ್ರೀ ಆರ್.ಎಸ್. ಅರ್ಜಿ
ಅರ್ಜಿದಾರರ ಪರ ವಕೀಲರು, ಹೂವಿನಹಡಗಲಿ.

---

ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಹೂವಿನಹಡಗಲಿ.

ಕ್ರಿಮಿನಲ್ ಮಿಸ್ಲೇನಿಯಸ್ ಸಂಖ್ಯೆ: 500/2026

ಅರ್ಜಿದಾರರು : ಶ್ರೀ ರಮೇಶನಾಯ್ಕ ತಂದೆ ಲೇ॥ ಹರಿಶ್ಚಂದ್ರ ನಾಯ್ಕ, ವಯಸ್ಸು 43 ವರ್ಷ, ಸಾ॥ ಅರಳಿಹಳ್ಳಿತಾಂಡ, ಹೂವಿನಹಡಗಲಿ ತಾಲೂಕು, ವಿಜಯನಗರ ಜಿಲ್ಲೆ.

ವಿರುದ್ಧ

ಎದುರುದಾರರು : ಮಾನ್ಯ ತಹಶೀಲ್ದಾರರು ತಾಲೂಕು ಕಾರ್ಯಾಲಯ & ಇನ್ನೊಬ್ಬರು, ಹೂವಿನಹಡಗಲಿ,

ಸಾರ್ವಜನಿಕ ನೋಟಿಸು

ಈ ಪ್ರಕರಣದಲ್ಲಿ ಅರ್ಜಿದಾರರು ಸಾರ್ವಜನಿಕರ ಗಮನಕ್ಕೆ ಪ್ರಕಟಿಸಿದ ಈ ನೋಟೀಸು ಏನೆಂದರೆ, ಅರ್ಜಿದಾರಳು ಮಾನ್ಯ ಹೂವಿನಹಡಗಲಿ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯದಲ್ಲಿ ತನ್ನ ತಂದೆಯ ಮರಣ ಪ್ರಮಾಣಪತ್ರ ಪಡೆಯಲು ಅರ್ಜಿ ಹಾಕಿರುತ್ತಾರೆ.

ಅರ್ಜಿದಾರರ ತಂದೆಯಾದ ಹರಿಶ್ಚಂದ್ರನಾಯ್ಕ ತಂದೆ ಹೀರ್ಯಾನಾಯ್ಕ ಇವರು ದಿನಾಂಕ: 03-04-1984 ರಂದು ಅರಳಿಹಳ್ಳಿತಾಂಡದ ತಮ್ಮ ಮನೆಯಲ್ಲಿ ಮರಣಹೊಂದಿರುತ್ತಾರೆ. ಸದರಿಯವರ ಮರಣದ ಬಗ್ಗೆ ಎದುರುದಾರರ ಕಛೇರಿಯಲ್ಲಿ ನೊಂದಣಿಯಾಗದ ಕಾರಣ ಅರ್ಜಿದಾರರು ಘನ ನ್ಯಾಯಾಲಯದಲ್ಲಿ ಜನನ ಮತ್ತು ಮರಣ ನೊಂದಣಿ ಕಾಯ್ದೆ ಅಡಿಯಲ್ಲಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಸದರಿ ವಿಚಾರವಾಗಿ ಯಾರಾದರೂ ಈ ಬಗ್ಗೆ ತಕರಾರು ಸಲ್ಲಿಸುವವರಿದ್ದರೆ ತಾವಾಗಲೀ ಅಥವಾ ತಮ್ಮ ಪರವಾಗಿ ವಕೀಲರ ಮೂಲಕವಾಗಲೀ ದಿನಾಂಕ: 22/7/2026 ರಂದು ಸಮಯ ಬೆಳಿಗ್ಗೆ 11-00 ಗಂಟೆಗೆ ಹೂವಿನಹಡಗಲಿ ನ್ಯಾಯಾಲಯದಲ್ಲಿ ತಕರಾರು ಸಲ್ಲಿಸತಕ್ಕದ್ದು. ಇಲ್ಲವಾದಲ್ಲಿ ಮಾನ್ಯ ಘನ ನ್ಯಾಯಾಲಯವು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಯಾವುದೇ ತಕರಾರು ಇರುವುದಿಲ್ಲವೆಂದು ಏಕತರ್ಫಿ(ಏಕಪಕ್ಷೀಯ) ಆದೇಶ ಮಾಡಲಾಗುವುದು ಎಂದು ತಿಳಿಯತಕ್ಕದ್ದು.

ದಿನಾಂಕ: 30/6/2026 ರಂದು ನ್ಯಾಯಾಲಯದ ಆದೇಶ ಹಾಗೂ ಮೊಹರಿನೊಂದಿಗೆ ನೀಡಲಾಗಿದೆ.

ಸಹಿ/- ಶಿರಸ್ತೇದಾರರು
ಸಿ.ಜೆ. & ಜೆ.ಎಂ.ಎಫ್.ಸಿ. ನ್ಯಾಯಾಲಯ ಹೂವಿನಹಡಗಲಿ
ಸಹಿ/- ಶ್ರೀ ಎಲ್. ಲಕ್ಷ್ಮಣನಾಯ್ಕ
ಅರ್ಜಿದಾರರ ಪರ ವಕೀಲರು, ಹೂವಿನಹಡಗಲಿ.

---

ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಹೂವಿನಹಡಗಲಿ.

ಕ್ರಿಮಿನಲ್ ಮಿಸ್ಲೇನಿಯಸ್ ಸಂಖ್ಯೆ: 518/2026

ಅರ್ಜಿದಾರರು : ಶ್ರೀಮತಿ ಹೆಚ್.ಎಂ. ಕೊಟ್ರಮ್ಮ ಗಂಡ ಕೊಟ್ರಯ್ಯ, ವಯಸ್ಸು 55 ವರ್ಷ, ಸಾ॥ ಅಡವಿಮಲ್ಲನಕೇರಿ, ಹೂವಿನಹಡಗಲಿ ತಾಲೂಕು, ವಿಜಯನಗರ ಜಿಲ್ಲೆ.

ವಿರುದ್ಧ

ಎದುರುದಾರರು : ಮಾನ್ಯ ತಹಶೀಲ್ದಾರರು ತಾಲೂಕು ಕಾರ್ಯಾಲಯ & ಇನ್ನೊಬ್ಬರು, ಹೂವಿನಹಡಗಲಿ,

ಸಾರ್ವಜನಿಕ ನೋಟಿಸು

ಈ ಪ್ರಕರಣದಲ್ಲಿ ಅರ್ಜಿದಾರರು ಸಾರ್ವಜನಿಕರ ಗಮನಕ್ಕೆ ಪ್ರಕಟಿಸಿದ ಈ ನೋಟೀಸು ಏನೆಂದರೆ, ಅರ್ಜಿದಾರಳು ಮಾನ್ಯ ಹೂವಿನಹಡಗಲಿ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯದಲ್ಲಿ ತನ್ನ ತಂದೆಯ ಮರಣ ಪ್ರಮಾಣಪತ್ರ ಪಡೆಯಲು ಅರ್ಜಿ ಹಾಕಿರುತ್ತಾರೆ.

ಅರ್ಜಿದಾರರ ತಂದೆಯಾದ ಗುರುಸಿದ್ದಯ್ಯ ತಂದೆ ಲೇಟ್ ನೀಲಕಂಠಯ್ಯ ಇವರು ದಿನಾಂಕ: 12-02-1973 ರಂದು ಅಡವಿಮಲ್ಲನಕೇರಿ ಗ್ರಾಮದ ತಮ್ಮ ಮನೆಯಲ್ಲಿ ಮರಣಹೊಂದಿರುತ್ತಾರೆ. ಸದರಿಯವರ ಮರಣದ ಬಗ್ಗೆ ಎದುರುದಾರರ ಕಛೇರಿಯಲ್ಲಿ ನೊಂದಣಿಯಾಗದ ಕಾರಣ ಅರ್ಜಿದಾರರು ಘನ ನ್ಯಾಯಾಲಯದಲ್ಲಿ ಜನನ ಮತ್ತು ಮರಣ ನೊಂದಣಿ ಕಾಯ್ದೆ ಅಡಿಯಲ್ಲಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಸದರಿ ವಿಚಾರವಾಗಿ ಯಾರಾದರೂ ಈ ಬಗ್ಗೆ ತಕರಾರು ಸಲ್ಲಿಸುವವರಿದ್ದರೆ ತಾವಾಗಲೀ ಅಥವಾ ತಮ್ಮ ಪರವಾಗಿ ವಕೀಲರ ಮೂಲಕವಾಗಲೀ ದಿನಾಂಕ: 29/7/2026 ರಂದು ಸಮಯ ಬೆಳಿಗ್ಗೆ 11-00 ಗಂಟೆಗೆ ಹೂವಿನಹಡಗಲಿ ನ್ಯಾಯಾಲಯದಲ್ಲಿ ತಕರಾರು ಸಲ್ಲಿಸತಕ್ಕದ್ದು. ಇಲ್ಲವಾದಲ್ಲಿ ಮಾನ್ಯ ಘನ ನ್ಯಾಯಾಲಯವು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಯಾವುದೇ ತಕರಾರು ಇರುವುದಿಲ್ಲವೆಂದು ಏಕತರ್ಫಿ(ಏಕಪಕ್ಷೀಯ) ಆದೇಶ ಮಾಡಲಾಗುವುದು ಎಂದು ತಿಳಿಯತಕ್ಕದ್ದು.

ದಿನಾಂಕ: 01/6/2026 ರಂದು ನ್ಯಾಯಾಲಯದ ಆದೇಶ ಹಾಗೂ ಮೊಹರಿನೊಂದಿಗೆ ನೀಡಲಾಗಿದೆ.

ಸಹಿ/- ಶಿರಸ್ತೇದಾರರು
ಸಿ.ಜೆ. & ಜೆ.ಎಂ.ಎಫ್.ಸಿ. ನ್ಯಾಯಾಲಯ ಹೂವಿನಹಡಗಲಿ
ಸಹಿ/- ಶ್ರೀ ಭಾಸ್ಕರ್ ಕೆ. (ಬಿ.ಕೆ.)
ಅರ್ಜಿದಾರರ ಪರ ವಕೀಲರು, ಹೂವಿನಹಡಗಲಿ.

---

ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಹೂವಿನಹಡಗಲಿ.

ಕ್ರಿಮಿನಲ್ ಮಿಸ್ಲೇನಿಯಸ್ ಸಂಖ್ಯೆ: 542/2026

ಅರ್ಜಿದಾರರು : ಶ್ರೀ ಸೈದಲಿ ಮಾಟುಸಾಬ್ ತಂದೆ ಲೇ ಖಾಸೀಂಸಾಬ್, ವಯಸ್ಸು 52 ವರ್ಷ, ಸಾ॥ ಹೂವಿನಹಡಗಲಿ, ಹೂವಿನಹಡಗಲಿ ತಾಲೂಕು, ವಿಜಯನಗರ ಜಿಲ್ಲೆ.

ವಿರುದ್ಧ

ಎದುರುದಾರರು : ಮಾನ್ಯ ತಹಶೀಲ್ದಾರರು ತಾಲೂಕು ಕಾರ್ಯಾಲಯ & ಇನ್ನೊಬ್ಬರು, ಹೂವಿನಹಡಗಲಿ,

ಸಾರ್ವಜನಿಕ ನೋಟಿಸು

ಈ ಪ್ರಕರಣದಲ್ಲಿ ಅರ್ಜಿದಾರರು ಸಾರ್ವಜನಿಕರ ಗಮನಕ್ಕೆ ಪ್ರಕಟಿಸಿದ ಈ ನೋಟೀಸು ಏನೆಂದರೆ, ಅರ್ಜಿದಾರಳು ಮಾನ್ಯ ಹೂವಿನಹಡಗಲಿ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯದಲ್ಲಿ ತನ್ನ ತಂದೆಯ ಮರಣ ಪ್ರಮಾಣಪತ್ರ ಪಡೆಯಲು ಅರ್ಜಿ ಹಾಕಿರುತ್ತಾರೆ.

ಅರ್ಜಿದಾರರ ಸನ್ನ ತಂದೆಯಾದ ಸೈಯದ್‌ಅಲಿ ಖಾಸಿಂಸಾಬ್ ಸೈಯದ್‌ಅಲಿ ಅಬ್ದಾಸಾಬ್ ಇವರು ದಿನಾಂಕ: 12-03-1968 ರಂದು ಹೂವಿನಹಡಗಲಿ ಗ್ರಾಮದ ತಮ್ಮ ಮನೆಯಲ್ಲಿ ಮರಣಹೊಂದಿರುತ್ತಾರೆ. ಸದರಿಯವರ ಮರಣದ ಬಗ್ಗೆ ಎದುರುದಾರರ ಕಛೇರಿಯಲ್ಲಿ ನೊಂದಣಿಯಾಗದ ಕಾರಣ ಅರ್ಜಿದಾರರು ಘನ ನ್ಯಾಯಾಲಯದಲ್ಲಿ ಜನನ ಮತ್ತು ಮರಣ ನೊಂದಣಿ ಕಾಯ್ದೆ ಅಡಿಯಲ್ಲಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಸದರಿ ವಿಚಾರವಾಗಿ ಯಾರಾದರೂ ಈ ಬಗ್ಗೆ ತಕರಾರು ಸಲ್ಲಿಸುವವರಿದ್ದರೆ ತಾವಾಗಲೀ ಅಥವಾ ತಮ್ಮ ಪರವಾಗಿ ವಕೀಲರ ಮೂಲಕವಾಗಲೀ ದಿನಾಂಕ: 05/08/2026 ರಂದು ಸಮಯ ಬೆಳಿಗ್ಗೆ 11-00 ಗಂಟೆಗೆ ಹೂವಿನಹಡಗಲಿ ನ್ಯಾಯಾಲಯದಲ್ಲಿ ತಕರಾರು ಸಲ್ಲಿಸತಕ್ಕದ್ದು. ಇಲ್ಲವಾದಲ್ಲಿ ಮಾನ್ಯ ಘನ ನ್ಯಾಯಾಲಯವು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಯಾವುದೇ ತಕರಾರು ಇರುವುದಿಲ್ಲವೆಂದು ಏಕತರ್ಫಿ(ಏಕಪಕ್ಷೀಯ) ಆದೇಶ ಮಾಡಲಾಗುವುದು ಎಂದು ತಿಳಿಯತಕ್ಕದ್ದು.

ದಿನಾಂಕ: 29/5/2026 ರಂದು ನ್ಯಾಯಾಲಯದ ಆದೇಶ ಹಾಗೂ ಮೊಹರಿನೊಂದಿಗೆ ನೀಡಲಾಗಿದೆ.

ಸಹಿ/- ಶಿರಸ್ತೇದಾರರು
ಸಿ.ಜೆ. & ಜೆ.ಎಂ.ಎಫ್.ಸಿ. ನ್ಯಾಯಾಲಯ ಹೂವಿನಹಡಗಲಿ
ಸಹಿ/- ಶ್ರೀ ಸಂಗಮೇಶ ಎಂ.
ಅರ್ಜಿದಾರರ ಪರ ವಕೀಲರು, ಹೂವಿನಹಡಗಲಿ.

---

ಕ್ರಿ.ಮಿಃ ನಂ:711/2026

ಮಾನ್ಯ ರಾಣೆಬೆನ್ನೂರು 1ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಇವರ ನ್ಯಾಯಾಲಯದಲ್ಲಿ

ಅರ್ಜಿದಾರರು: ಮಂಜುಳಾ ಕೋಂ ಚಂದ್ರಪ್ಪ ತೆಟ್ರಿಗೋಣೆಮ್ಮನವರ

ವಿರುದ್ಧ

ಎದುರುಗಾರರು: ಉಪ ತಹಶೀಲ್ದಾರ ನಾಡ ಕಛೇರಿ ಕುಪ್ಪೇಲೂರ

ಇಸ್ತೀಯಾರ ನಾಮಾ

ಇದರಲ್ಲಿ ಅರ್ಜಿದಾರರ ಪ್ರಸ್ತುತ ಅರ್ಜಿಯಲ್ಲಿ ಅರ್ಜಿದಾರರ ತಾಯಿಯಾದ ನೀಲಮ್ಮ ಕೋಂ ಭೀಮಪ್ಪ ಬುರಡಿಕಟ್ಟಿ ಇವರು ತಾರಿಖು 23-03-2019 ರಂದು ರಾಣೆಬೆನ್ನೂರು ತಾಲೂಕ ಮುದೇನೂರ ಗ್ರಾಮದಲ್ಲಿ ಮರಣಹೊಂದಿರುತ್ತಾರೆ ಅನ್ನುವುದರ ಬಗ್ಗೆ ಜನನ ಮತ್ತು ಮರಣ ನೋಂದಣಿ ದಾಖಲೆಯಲ್ಲಿ ದಾಖಲಪಡಿಸಿ ಮರಣ ಪ್ರಮಾಣಪತ್ರವನ್ನು ಪಡೆಯಲು ಮಾನ್ಯ ನ್ಯಾಯಾಲಯದಲ್ಲಿ ಅರ್ಜಿ ದಾಖಲಿಸಿದ್ದು, ಸದರ ಅರ್ಜಿಗೆ ಯಾವತ್ತೂ ಯಾವುದೇ ಸಾರ್ವಜನಿಕರು ತಮ್ಮದೇನಾದರೂ ತಂಟೆ ತಕರಾರು ಇದ್ದಲ್ಲಿ ಮಾನ್ಯ ನ್ಯಾಯಾಲಯಕ್ಕೆ ತಾ:10/08/2026ರಂದು ಖುದ್ದಾಗಿ ಅಥವಾ ತಮ್ಮ ವಕೀಲರ ಮೂಲಕ ಮೇಲ್ಕಂಡ ನ್ಯಾಯಾಲಯದಲ್ಲಿ ಮುಂಜಾನೆ 11-00 ಘಂಟೆಗೆ ಹಾಜರಾಗಿ ತಮ್ಮ ತಕರಾರುಸಲ್ಲಿ ಸತಕ್ಕದ್ದು. ಇಲ್ಲದೇ ಇದ್ದಲ್ಲಿ ನ್ಯಾಯಾಲಯದವರು ಏಕತರ್ಫಿ ಆದೇಶ ಮಾಡುವವರು ತಿಳಿಯಿರಿ. ದಿನಾಂಕ: 02-07-2026ರಂದು ನ್ಯಾಯಾಲಯದ ಮೊಹರಿನೊಂದಿಗೆ ಕೊಡಲ್ಪಟ್ಟಿದ್ದು,

ರಾಣೆಬೆನ್ನೂರ
ದಿ:29-06-2026

ನ್ಯಾಯಾಲಯದ ಆದೇಶ ಮೇರೆಗೆ
ಸಹಿ/-ಶಿರಸ್ತೇದಾರರು, ಮಾನ್ಯ ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಮ್. ಎಫ್.ಸಿ. ನ್ಯಾಯಾಲಯ ರಾಣೆಬೆನ್ನೂರ
ಅರ್ಜಿದಾರ ಪರ ವಕೀಲರು
ಸಹಿ/- ವಾಯ್.ಎಮ್.ಮುದೋಳಕರ
ವಕೀಲರು ರಾಣೆಬೆನ್ನೂರ

---

ಸಾರ್ವಜನಿಕ ನೋಟಿಸು.

ಈ ಮೂಲಕ ನಮ್ಮ ಪಕ್ಷಗಾರರಾದ ಶ್ರೀ ಮಂಜುನಾಥ ತಂದೆ ಅಶೋಕ ಸಾಬಣ್ಣವರ, ಸಾ॥ಕಲಘಟಗಿ, ತಾ॥ ಕಲಘಟಗಿ, ಜಿ॥ ಧಾರವಾಡ, ಇವರು ಕೊಟ್ಟ ಮಾಹಿತಿ ವ ಅಧಿಕಾರದ ಮೇರೆಗೆ ಕೊಡುವ ಸಾರ್ವಜನಿಕ ನೋಟೀಸು ಏನೆಂದರೆ.

ಧಾರವಾಡ ಜಿಲ್ಲೆಯ ಕಲಘಟಗಿ ತಾಲೂಕ ಮುತ್ತಗಿ ಗ್ರಾಮದ ರಿ.ಸ.ನಂ. 103/10 ಕ್ಷೇತ್ರ 00 ಎಕರೆ 19 ಗುಂಟೆ 02 ಆಣೆ, ಜಮೀನಿನ ಪೈಕಿ 5 ಗುಂಟೆ 1 ಆಣೆ ಜಮೀನನ್ನು ಮಾಲಿಕರಾದ ಶ್ರೀ ಬಸಪ್ಪ ತಂದೆ ಶಿವಪ್ಪ ಲಕ್ಕಪ್ಪನವರ, ಇವರಿಂದ ನಮ್ಮ ಪಕ್ಷಗಾರರು ಖರೀದಿ ನೋಂದ ಮಾಡಿಕೊಳ್ಳುವವರಿದ್ದು, ಕಾರಣ ಸದರಿ ಆಸ್ತಿಯ ಕುರಿತು ಸಾರ್ವಜನಿಕರಿಂದಾಗಲೀ ಅಥವಾ ಯಾವುದೇ ಹಣಕಾಸಿನ ಸಂಸ್ಥೆಗಳಿಂದಾಗಲೀ ಯಾವುದಾದರೂ ಬೋಜಾ, ಒತ್ತಿ, ಹಕ್ಕು ವಗೈರೆ ಹಿತಸಂಬಂಧ ಇದ್ದಲ್ಲಿ ಹಾಗೂ ಆಸ್ತಿಯ ಮಾಲಿಕರ ವಾರಸುದಾರರಿಂದಾಗಲೀ ಯಾವುದೇ ತಂಟೆ ವ ತಕರಾರು ಇದ್ದಲ್ಲಿ ಈ ನೋಟೀಸ ಪ್ರಕಟವಾದ 07 ದಿನಗಳ ಒಳಗಾಗಿ ಸಂಬಂಧಪಟ್ಟ ದಾಖಲಾತಿಗಳೊಂದಿಗೆ ಈ ಕೆಳಗಿನ ವಿಳಾಸಕ್ಕೆ ಲಿಖಿತವಾಗಿ ಯಾವುದೇ ರೀತಿಯ ತಕರಾರುಗಳು ಇದ್ದಲ್ಲಿ ಸಲ್ಲಿಸತಕ್ಕದ್ದು, ಒಂದು ವೇಳೆ ಸದರಿ ನೋಟೀಸ್ ಗೆ ಸದರಿ ಅವಧಿಯ ಒಳಗಾಗಿ ಯಾವುದೇ ರೀತಿಯ ತಕರಾರು ಬರದೆ ಹೋದಲ್ಲಿ ನಮ್ಮ ಪಕ್ಷಗಾರರು ಸದರಿ ಮೇಲ್ಕಂಡ ಆಸ್ತಿಯ ಕುರಿತು ಖರೀದಿ ವ್ಯವಹಾರ ನೋಂದಣಿ ಮಾಡಿಕೊಳ್ಳುವವರು ಇರುತ್ತಾರೆ. ನಂತರ ಬಂದ ಯಾವುದೇ ತಕರಾರುಗಳು ಸದರಿ ವ್ಯವಹಾರಕ್ಕೆ ಬಾಂಧಾಯಿಸುವುದಿಲ್ಲ ಅಂತಾ ಕೊಟ್ಟ ಸಾರ್ವಜನಿಕ ನೋಟೀಸು.

ಸ್ಥಳ : ಕಲಘಟಗಿ
ದಿನಾಂಕ : 03/07/2026

ಶ್ರೀ ಆರ್. ವಾಯ್. ರೊಳ್ಳಿ,
ವಕೀಲರು, ಕಲಘಟಗಿ.
ತಾ॥ ಕಲಘಟಗಿ ಜಿ॥ ಧಾರವಾಡ.
ಮೊನಂ. 9611728382, 7090521171

---

ಕ್ರಿಮಿನಲ್ ಮಿಸಲೇನಿಯಸ್ ನಂ:493/2026

ಮೇ॥ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಮ್. ಎಫ್.ಸಿ.ಸವಣೂರ ಇವರ ನ್ಯಾಯಾಲಯದಲ್ಲಿ

ಅರ್ಜಿದಾರರು :1)ಬಸವಣ್ಣೆಪ್ಪ ತಂದೆ ಫಕ್ಕೀರಪ್ಪ ಕೂಡಲಮಠ, 2)ಶೇಖಪ್ಪ ತಂದೆ ಫಕ್ಕೀರಪ್ಪ ಕೂಡಲಮಠ, 3)ಕೋಟೆಪ್ಪ ತಂದೆ ಫಕ್ಕೀರಪ್ಪ ಕೂಡಲಮಠ, 4)ಶ್ರೀಮತಿ ಅಕ್ಕಮ್ಮ ಕೋಂ ಫಕ್ಕೀರಪ್ಪ, ಹೊಸಮನಿ, 5) ಶ್ರೀಮತಿ ದ್ಯಾಮವ್ವ ಕೋಂ ಶಿವಪ್ಪ ಕೂಡಲಮಠ (ಸದರ ಅರ್ಜಿದಾರ ನಂ-1ರಿಂದ3 ಮತ್ತು5 ಸಾ॥ ಸವೂರ ತಾ॥ಸವಣೂರ ಜಿ॥ಹಾವೇರಿ ಅರ್ಜಿದಾರ ನಂ-4 ಸಾ॥ ಸವಣೂರ ಜಿ॥ ಹಾವೇರಿ)

ವಿರುದ್ಧ

ಎದುರುದಾರರು :ತಹಸೀಲ್ದಾರರು ವ ಜನನ ಮರಣ ನೊಂದಣಿ ಅಧಿಕಾರಿಗಳು ವ ತಹಶೀಲ್ದಾರರ ಕಛೇರಿ ಸವಣೂರ

ಇಸ್ತಿಹಾರ

[illegible]

ಸ್ಥಳ :ಸವಣೂರ
ದಿನಾಂಕ:03-07-2026

ಸಹಿ/-ಶ್ರೀ ಎಸ್ ಆರ್ ಹಿರೇಮಠ
ಅರ್ಜಿದಾರರ ಪರ ವಕೀಲರು,ಸವಣೂರ
ಸಹಿ/-ಶಿರಸ್ತೇದಾರರು, ಮೇ॥ ದಿವಾಣಿ & ಜೆ ಎಮ್ ಎಫ್ ಸಿ ನ್ಯಾಯಾಲಯ ಸವಣೂರ

---

IN THE COURT OF THE 4th ADDITIONAL CIVIL JUDGE & JMFC AT BALLARI
Crl. M.C. No. 227/2026

Between:-1)DODDANA GOUDA S/O LATE.NAGAPPA, aged about 28 years,2)LAKSHMIPATHI S/O LATE.NAGAPPA, aged about 32 years,3)DYAVAMMA W/O LATE. NAGAPPA, aged about 52 years, 4)DODANA GOUDA S/O LATE. BASANNA, aged about 37 years all are, R/o, Tegginabudhial village, Ballari taluk and district. ...Petitioners

And

RESPONDENT:The Thasildhar, cum Register of Births & Death's, Taluk office, Ballari ...Respondent

NOTICE

WHEREAS, the above named petitioner has filed the above petition under section 13(2) of Birth and Deaths Act, 1969 against the respondent for the purpose of seeking date of death of Petitioner's No.1 Grandfather by name KURUBARA NEELAPPA S/O BASAPPA was died on 15-12-1978 at Tegginabudhial village, Ballari taluk and District in the above mentioned address. Therefore, If any persons are interested you are hereby directed to appear in this court in person or by a pleader duly instructed on 13-08-2026 at about 11.00 a.m to show cause against the above suit, failing which the suit will be heard and determined ex-parte against you. Given under my hand and seal of the court on this 2nd day of July 2026

By Order of the court.
Sherestedar, 4th Addl Civil Judge and JMFC Ballari
Durugappa. A.K, Advocates for the petitioners

---

ಕರ್ನಾಟಕ ಸರ್ಕಾರ

## ಕಾರ್ಯನಿರ್ವಾಹಕ ಇಂಜನೀಯರರು, ಲೋಕೋಪಯೋಗಿ ಇಲಾಖೆ ವಿಭಾಗ ವಿಜಯಪುರ.

ಐ.ಎಫ್.ಟಿ.ಸಂ: ಕಾ.ನಿ.ಇಂ./ಲೋ.ಇ/ವಿ.ಜೆ.ಪಿ/ಪಿ.ಬಿ/8443-ಠೇವಣಿ ವಂತಿಕೆ/2026-27/1246 ದಿನಾಂಕ:03.07.2026

### ಅಲ್ಪಾವಧಿ ಗುತ್ತಿಗೆ ಆಹ್ವಾನ ಪ್ರಕಟಣೆ (ಇ-ಪ್ರೊಕ್ಯೂರ್‌ಮೆಂಟ್)(2ನೇ ಕರೆ)

ಕಾರ್ಯನಿರ್ವಾಹಕ ಇಂಜಿನೀಯರರು ಲೋಕೋಪಯೋಗಿ ಇಲಾಖೆ ವಿಜಯಪುರ ಅಡಿಯಲ್ಲಿ ಐಟಂವಾರು ಗುತ್ತಿಗೆಗಳನ್ನು ಇ-ಪ್ರೋಕ್ಯೂರಮೆಂಟನಲ್ಲಿ ನೋಂದಾಯಿತ ಗುತ್ತಿಗೆದಾರರು ಲೋಕೋಪಯೋಗಿ ಇಲಾಖೆಯಲ್ಲಿ ನೊಂದಣಿ ಮತ್ತು ನವೀಕರಣ ಪ್ರಮಾಣ ಪತ್ರದ ದಾಖಿಲೆಗಳನ್ನು ಗೆಜೆಟೆಡ್ ಅಧಿಕಾರಿಯಿಂದ ಪ್ರಮಾಣೀಕರಿಸಿ ಟೆಂಡರ್‌ನೊಂದಿಗೆ ಸಲ್ಲಿಸುವುದು ಮತ್ತು ಅರ್ಹ ಗುತ್ತಿಗೆದಾರರಿಂದ ಸ್ಟಾಂಡರ್ಡ್ ಟೆಂಡರ ಡಾಕ್ಯೂಮೆಂಟ್ ಕೆ.ಡಬ್ಲ್ಯೂ-2 ರಲ್ಲಿ ಲೆಕ್ಕ ಶೀರ್ಷಿಕೆ 8443-ಠೇವಣಿ ವಂತಿಕೆ ಅಡಿಯಲ್ಲಿ 1 ಕಾಮಗಾರಿಗೆ (ಇಂಡೆಟ್ ನಂ.36137 call-2) ಗುತ್ತಿಗೆಯನ್ನು ಕರೆಯಲಾಗಿದ್ದು, ಅಂದಾಜು ಮೊತ್ತ ರೂ. 32.50 ಲಕ್ಷಗಳು & ಮುಂಗಡ ಠೇವಣಿ ಮೊತ್ತ 65,000.00 ರೂಗಳು. ಸದರ ಕಾಮಾಗಾರಿ ಗುತ್ತಿಗೆ ಮೊತ್ತಕ್ಕೆ ಅನುಗುಣವಾಗಿ ಜಿ.ಎಸ್.ಟಿ ಪ್ರತ್ಯೇಕವಾಗಿ ನೀಡಲಾಗುವದು. ಹಾಗೂ ವಿಸ್ತೃತ ಗುತ್ತಿಗೆ ಅವಧಿಯಲ್ಲಿ, ಗುತ್ತಿಗೆ ಅವಧಿಯು ಗುತ್ತಿಗೆದಾರರ ವಿಳಂಭದಿಂದ ಉಂಟಾದಲ್ಲಿ ಆ ಅವಧಿಯಲ್ಲಿ ಜಿ.ಎಸ್.ಟಿ ದರಗಳಲ್ಲಿ ಹೆಚ್ಚಾಳವಾದಲ್ಲಿ ಇದನ್ನು ಗುತ್ತಿಗೆದಾರರೇ ಭರಿಸುವದು. ಟೆಂಡರಗಳನ್ನು ಸ್ವೀಕರಿಸುವ ದಿನಾಂಕ:- 13.07.2026 ರ ಸಂಜೆ 4:30 ಗಂಟೆಯವರೆಗೆ, ಟೆಂಡರಗಳನ್ನು ತೆರೆಯುವ ದಿನಾಂಕ: 14.07.2026 ರ ಸಂಜೆ 4.31 ಗಂಟೆಯ ನಂತರ. ಹೆಚ್ಚಿನ ಮಾಹಿತಿ ಬೇಕಾದಲ್ಲಿ ಗುತ್ತಿಗೆದಾರರು ಈ ಕೆಳಗೆ ಸಹಿ ಮಾಡಿದವರ ಕಛೇರಿಯಲ್ಲಿ ಹಾಗೂ ಅಂತರ್ ಜಾಲದ ಮೂಲಕ ವೆಬ್‌ಸೈಟ್ ವಿಳಾಸ www.kppp.karnataka.gov.in ರಲ್ಲಿ ಪಡೆಯಬಹುದು.

ಸಹಿ/- ಕಾರ್ಯನಿರ್ವಾಹಕ ಅಭಿಯಂತರರು,
ಲೋಕೋಪಯೋಗಿ ಇಲಾಖೆ ವಿಭಾಗ,
ವಿಜಯಪುರ

ವಾಸಾಸಂಇ/ವಿಜಯಪುರ/186/ಕೆಎಸ್‌ಎಂಸಿಎ/2026-27

---

ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಹೂವಿನಹಡಗಲಿ

ಕ್ರಿಮಿ. ಸಂಖ್ಯೆ : 587/2026

ಅರ್ಜಿದಾರರು: ಕಂಠಿ ಮೈಲಾರಿ ತಂದೆ ಕಂಠಿ ಸಾರೆಪ್ಪ, ವ: 32, ದುರುಗಮ್ಮ ಗುಡಿ ಹತ್ತಿರ, ಹೂವಿನಹಡಗಲಿ ಪಟ್ಟಣ, ಹೂವಿನಹಡಗಲಿ ತಾ: ವಿಜಯನಗರ ಜಿಲ್ಲೆ

ವಿರುದ್ಧ

ಎದುರುದಾರರು : ಮುಖ್ಯ ಅಧಿಕಾರಿಗಳು ಪುರಸಭೆ ಹೂವಿನಹಡಗಲಿ

ಸಾರ್ವಜನಿಕ ನೋಟಿಸು

ಈ ಪ್ರಕರಣದಲ್ಲಿ ಅರ್ಜಿದಾರರು ಸಾರ್ವಜನಿಕರ ಗಮನಕ್ಕೆ ಪ್ರಕಟಿಸಿದ ಈ ನೋಟಿಸ್ ಏನೆಂದರೆ, ಅರ್ಜಿದಾರನು ಮಾನ್ಯ ಹೂವಿನಹಡಗಲಿ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯದಲ್ಲಿ ಅರ್ಜಿದಾರರ ತಾಯಿಯ ಮರಣ ಪ್ರಮಾಣ ಪತ್ರ ಪಡೆಯಲು ಅರ್ಜಿ ಸಲ್ಲಿಸಿರುತ್ತಾರೆ.

ಅರ್ಜಿದಾರರ ತಾಯಿಯಾದ ಕಂಠಿ ಗಾಳೆವ್ವ ಗಂಡ ಕಂಠಿ ಸಾರೆಪ್ಪ ಇವರು ದಿನಾಂಕ 03-04-2015 ರಂದು ಹೂವಿನಹಡಗಲಿ ತಾಲ್ಲೂಕಿನ, ಹೂವಿನಹಡಗಲಿ ಪಟ್ಟಣದ ಅರ್ಜಿದಾರರ ಮನೆಯಲ್ಲಿ ಮರಣ ಹೊಂದಿರುತ್ತಾರೆ. ಸದರಿಯವರ ಮರಣದ ಬಗ್ಗೆ ಎದುರುದಾರರ ಕಚೇರಿಯಲ್ಲಿ ನೋಂದಣಿಯಾಗದ ಕಾರಣ ಅರ್ಜಿದಾರರು ಘನ ನ್ಯಾಯಾಲಯದಲ್ಲಿ ಜನನ ಮತ್ತು ಮರಣ ನೊಂದಣಿ ಕಾಯ್ದೆಯಡಿಯಲ್ಲಿ ಅರ್ಜಿದಾರರ ತಂದೆ-ಯ ಮರಣ ದಿನಾಂಕ ನೊಂದಣೆಗಾಗಿ ಮತ್ತು ಮರಣ ಪ್ರಮಾಣ ಪತ್ರ ಪಡೆಯಲು ಅರ್ಜಿಯನ್ನು ಸಲ್ಲಿಸಿರುತ್ತಾರೆ. ಸದರಿ ವಿಚಾರವಾಗಿ ಯಾರಾದರು ಈ ಬಗ್ಗೆ ತಕರಾರು ಸಲ್ಲಿಸುವವರು ಇದ್ದರೆ, ತಾವಾಗಲೀ ಅಥವಾ ತಮ್ಮ ಪರವಾಗಿ ವಕೀಲರ ಮೂಲಕವಾಗಲಿ ದಿನಾಂಕ: 5-08-2026 ರಂದು ಸಮಯ: ಬೆಳಿಗ್ಗೆ 11:00 ಗಂಟೆ ಹೂವಿನಹಡಗಲಿ ಸಿವಿಲ್ ನ್ಯಾಯಾಲಯದಲ್ಲಿ ಹಾಜರಾಗತಕ್ಕದ್ದು. ಇಲ್ಲವಾದಲ್ಲಿ ಮಾನ್ಯ ಘನ ನ್ಯಾಯಾಲಯವು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಏಕತರ್ಫಿ (ಏಕಪಕ್ಷೀಯ) ಆದೇಶ ಮಾಡಲಾಗುವುದೆಂದು ತಿಳಿಯತಕ್ಕದ್ದು.

ಸಹಿ/- ಶಿರಸ್ತೇದಾರರು
ಸಿ.ಜೆ. & ಜೆ.ಎಂ.ಎಫ್.ಸಿ. ನ್ಯಾಯಾಲಯ ಹೂವಿನಹಡಗಲಿ
ಸಹಿ/- ಶ್ರೀ ದಾದಾಪೀರ ಕಪಾಲಿ/ಆರ್.ಎಸ್. ಅರ್ಜಿ
ಅರ್ಜಿದಾರರ ಪರ ವಕೀಲರು, ಹೂವಿನಹಡಗಲಿ.

---

ಕ್ರಿಮಿನಲ್ ಮಿಸಲೇನಿಸ್ ನಂ:44/2026

ಮಾನ್ಯ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಮ್ ಎಫ್.ಸಿ ಕುಂದಗೋಳ ಇವರ ನ್ಯಾಯಾಲಯದಲ್ಲಿ,

ಅರ್ಜಿದಾರರು: ವೀರಬಸಪ್ಪ ತಂದೆ ಬಸವಂತಪ್ಪ ಕಂಬಿ

ವಿರುದ್ಧ

ಎದುರುಗಾರರು :1) ತಹಸೀಲ್ದಾರರು, ವ ಜನನ ಮರಣ ನೋಂದಣಿ ಅಧಿಕಾರಿಗಳು ಕುಂದಗೋಳ ತಾಲೂಕ: ಕುಂದಗೋಳ ಮತ್ತು ಇನ್ನೊಬ್ಬರು

ನೋಟಿಸು

ಮೇಲ್ಕಂಡ ಪ್ರಕರಣವನ್ನು ಅರ್ಜಿದಾರಳ ತಾಯಿಯಾದ ಶ್ರೀಮತಿ ನೀಲವ್ವ ಕೋಂ ಬಸವಂತಪ್ಪ ಕಂಬಿ ಇವರು ದಿನಾಂಕ:01/12/1971ರಂದು ಕುಂದಗೋಳ ತಾಲೂಕ ಯರೇಬೂದಿಹಾಳ ಗ್ರಾಮ ದಲ್ಲಿರುವ ಅರ್ಜಿದಾರನ ಮನೆಯಲ್ಲಿ ಮೃತ ಪಟ್ಟಿರುತ್ತಾರೆ ಅಂತಾ ಸದರ ಮರಣ ಪ್ರಮಾಣ ಪತ್ರವನ್ನು ಪಡೆಯಲು ಈ ಅರ್ಜಿಯನ್ನು ದಾಖಲಿಸಿರುತ್ತಾರೆ.

ಸದರ ಮರಣ ದಾಖಲಾತಿ ಕುರಿತು ಯಾರಿಗಾದರೂ ಯಾವುದೇ ರೀತಿಯ ಹಕ್ಕು ಹಿತ ಸಂಬಂಧ ತಂಟೆ ತಕರಾರು ವಗೈರೆ ಇದ್ದಲ್ಲಿ ಅವರ ಹಾಜರಾತಿಗಾಗಿ ತಾ:16/07/2026 ರಂದು ಬೆಳಗಿನ 10-30 ಗಂಟೆಗೆ ಮುದ್ದತ್ತು ನೇಮಿಸಿದ್ದು ಆ ದಿವಸ ಸಧರಿಯವರು ತಾವಾಗಲಿ ತಮ್ಮ ವಕೀಲರ ಮುಖಾಂತರ ಹಾಜರಾಗತಕ್ಕದ್ದು ತಪ್ಪಿದಲ್ಲಿ ಪ್ರಕರಣವನ್ನು ನಿರ್ಣಯಿಸಲಾಗುವುದು.

ನನ್ನ ಸಹಿಯೊಡನೆ ಮತ್ತು ನ್ಯಾಯಾಲಯದ ಮೊಹರಿನೊಡನೆ 2026 ರ ಜುಲೈ ತಿಂಗಳಿನ 3ನೇ ಈ ದಿನದಂದು ಇದನ್ನ ಕೊಡಲಾಗಿದೆ.

ಕುಂದಗೋಳ
ದಿನಾಂಕ: 03/07/2026

ಸಹಿ ಕೋರ್ಟ ಮೊಹರು
ಶಿರಸ್ತೇದಾರರು, ಹಿರಿಯ ದಿವಾಣಿ ನ್ಯಾಯಾಧೀಶರು ವ ಜೆ.ಎಮ್.ಎಫ್.ಸಿ ನ್ಯಾಯಾಲಯ, ಕುಂದಗೋಳ
ಅರ್ಜಿದಾರ ಪರ ವಕೀಲರು (ಬಿ.ಬಿ.ನೀರಲಗಿ)
ವಕೀಲರು ಕುಂದಗೋಳ

---

ಕರ್ನಾಟಕ ಸರಕಾರ

## ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳ ಕಛೇರಿ, ಜಿಲ್ಲಾ ಮಕ್ಕಳ ರಕ್ಷಣಾ ಘಟಕ ಯಾದಗಿರಿ

**ಕೋಣೆ ಸಂಖ್ಯೆ : ಸಿ-17, ಒಂದನೇ ಮಹಡಿ, ಜಿಲ್ಲಾ ಆಡಳಿತ ಭವನ ಸಂಕೀರ್ಣ, ಯಾದಗಿರಿ**

E-mail ID:- dcpoyadgir@gmail.com ದೂರವಾಣಿ ಸಂಖ್ಯೆ: 08473-253347

ಸಂ:ಉನಿ/ಯಾ/ಡಿ.ಸಿ.ಪಿ.ಓ/ಇ-ಟೆಂಡರ್/2026-2027 ದಿನಾಂಕ:22-06 2026

### ಟೆಂಡರ್ ಪ್ರಕಟಣೆ

**ವಿಷಯ:** 2026-2027ನೇ ಸಾಲಿಗೆ ಯಾದಗಿರಿ ಜಿಲ್ಲಾ ಮಕ್ಕಳ ರಕ್ಷಣಾ ಘಟಕದಡಿ ಬರುವ ಸರಕಾರಿ ಮಕ್ಕಳ ಪಾಲನಾ ಸಂಸ್ಥೆಗಳ ಮಕ್ಕಳ ಉಪಯೋಗಕ್ಕಾಗಿ ಆಹಾರ ಸಾಮಗ್ರಿಗಳನ್ನು ಮತ್ತು ಇತರೆ ಸಾಮಗ್ರಿಗಳನ್ನು ಖರೀದಿಸಿ ಸರಬರಾಜು ಮಾಡಲು ಟೆಂಡರ್ ಕರೆಯುವ ಕುರಿತು.

**ಉಲ್ಲೇಖ:**5) ಮಾನ್ಯ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬೆಂಗಳೂರ ಇವರ ಪತ್ರ ಸಂಖ್ಯೆ: ಮಮಅಇ/ಜಿಡಿಎಂ-2/2014-15 ದಿನಾಂಕ: 18-5-2015, 16-05-2017

6) ಸರಕಾರದ ಆದೇಶ ಸಂಖ್ಯೆ: ಮಮಇ2/ಮಭಾಬ 2012 ಬೆಂಗಳೂರು ದಿನಾಂಕ: 19-10-2012 ಹಾಗೂ 29-04-2017

7) 1999 ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯ ಪಾರದರ್ಶಕತೆ ಅಧಿನಿಯಮ ನಿಯಮ 2000

8) ಮಾನ್ಯ ಜಿಲ್ಲಾಧಿಕಾರಿಗಳು ಹಾಗೂ ಅಧ್ಯಕ್ಷರು, ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಯಾದಗಿರಿ ರವರು ಅಲ್ಪಾವಧಿ ಟೆಂಡರ್ ಕರೆಯಲು ಅನುಮೋದನೆ ನೀಡಿದ ದಿನಾಂಕ:19-05-2026.

ಯಾದಗಿರಿ ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಅಧೀನದಲ್ಲಿ ಬರುವ ಸುಧಾರಣಾ ಸಂಸ್ಥೆಗಳಾದ ಸರಕಾರಿ ಮಕ್ಕಳ ಪಾಲನಾ ಸಂಸ್ಥೆಗಳ ನಿವಾಸಿ ಮಕ್ಕಳಿಗೆ 2026-2027ನೇ ಸಾಲಿಗೆ ಆಹಾರ ಸಾಮಗ್ರಿಗಳನ್ನು, ಮತ್ತು ಇತರೆ ಸಾಮಗ್ರಿಗಳನ್ನು ಸರಬರಾಜು ಮಾಡಲು ಹಾಗೂ ಟೆಂಡರನಲ್ಲಿ ಸ್ತ್ರೀ ಶಕ್ತಿ ಸ್ವ-ಸಹಾಯ ಗುಂಪುಗಳ ಒಕ್ಕೂಟ, ಮಹಿಳಾ ವಿವಿಧೋದ್ದೇಶಗಳ ಸಹಕಾರಿ ಸಂಘಗಳು, ಮಹಿಳಾ ಮಂಡಳಿಗಳು ಸಹ ಬಾಗವಹಿಸಬಹುದು ಮತ್ತು ಗುತ್ತಿಗೆದಾರರನ್ನು ನೇಮಿಸಲು, ಅಧಿನಿಯಮ (KTPP) 1999 ನಿಯಮಗಳು 2000 ರ ಪ್ರಕಾರ E-Procurement ಮೂಲಕ ಟೆಂಡರ್ ಕರೆದಿರುವ ಬಗ್ಗೆ, (Website: www.kpppt.karnataka.gov.in) ಟೆಂಡರ್‌ದಾರರು e-Portal ಮೂಲಕ ಟೆಂಡರ್ ಸಲ್ಲಿಸುವುದು. ಅಂದಾಜು ವೆಚ್ಚ ರೂ.30.00(ಲಕ್ಷ)ಗಳಲ್ಲಿ ಟೆಂಡರ್ ಫಾರಂ ಅಪ್‌ಲೋಡ್ ಮಾಡಲು ಪ್ರಾರಂಭಿಸುವ ದಿನಾಂಕ:22-06-2026 ರಿಂದ 04-07-2026ರ ಸಂಜೆ:5.00 ಗಂಟೆ. ಆಹ್ವಾನಿಸಲಾಗಿದೆ. Tender Number:DCP/2026-27/IND0103/Call-2.

ಹೆಚ್ಚಿನ ವಿವರಗಳು ಟೆಂಡರ್ ದಸ್ತಾವೇಜುಗಳಲ್ಲಿ ಲಭ್ಯವಿದ್ದು, www.kppp.karnataka.gov.in ವೆಬ್‌ಸೈಟ್‌ನಲ್ಲಿ ಪಡೆದು ಪರಿಶೀಲಿಸುವುದು. ಹಾಗೂ ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು, ಜಿಲ್ಲಾ ಮಕ್ಕಳ ರಕ್ಷಣಾ ಘಟಕ ಯಾದಗಿರಿ ಕೋಣೆ ಸಂಖ್ಯೆ: ಸಿ-17, ಒಂದನೇ ಮಹಡಿ, ಜಿಲ್ಲಾ ಆಡಳಿತ ಭವನ ಸಂಕೀರ್ಣ, ಚಿತ್ತಾಪೂರ ರಸ್ತೆ, ಯಾದಗಿರಿ-585202 ಫೋನ್:08473-253739 ಇವರನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸುವುದು.

ಸಹಿ/- ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು
ಜಿಲ್ಲಾ ಮಕ್ಕಳ ರಕ್ಷಣಾ ಘಟಕ ಯಾದಗಿರಿ

ವಾ.ಸಾ.ಸಂ.ಇ/ಯಾದಗಿರಿ/136/ಕೆ.ಎಸ್.ಎಂ.ಸಿ&ಎ/2026-27

---

## ಕರ್ನಾಟಕ ನೀರಾವರಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಉದ್ಯಮ)

### ಕಾರ್ಯಪಾಲಕ ಇಂಜಿನೀಯರರವರ ಕಚೇರಿ,

ಕನೀನಿನಿ, ಶಿಗ್ಗಾಂವ ಏತ ನೀರಾವರಿ ವಿಭಾಗ, ಕೆ.ಪಿ.ಡಿ. ವೃತ್ತ , ಗಣಪತಿ ದೇವಸ್ಥಾನದ ಹಿಂದುಗಡೆ, ದಾಸನಕೊಪ್ಪ ಮುಖ್ಯ ರಸ್ತೆ , ಧಾರವಾಡ-580 001.

ಫೋನ: 0836-2955347 ಇ-ಮೇಲ್: eesliddwd@gmail.com

No.KNN/SLID/DWD/PB-2/Shiggaon-Savanur works /Tender/2026-27/285 Dt:02-07-2026

### ಅಲ್ಪಾವಧಿ ಟೆಂಡರ್ ಪ್ರಕಟಣೆ
(ಕೆ.ಪಿ.ಪಿ.ಪೋರ್ಟಲ್ ಮುಖಾಂತರ ಮಾತ್ರ)


ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಬೆಂಗಳೂರು ಇವರ ಪರವಾಗಿ ಕಾರ್ಯಪಾಲಕ ಇಂಜಿನಿಯರ್, ಕ.ನೀ.ನಿ.ನಿ, ಶಿಗ್ಗಾಂವ ಏತ ನೀರಾವರಿ ವಿಭಾಗ ಧಾರವಾಡ ರವರು, ಅರ್ಹ ಸಿವಿಲ್ ನೋಂದಾಯಿತ ಗುತ್ತಿಗೆದಾರರಿಂದ **1) Improvement and Development of Rajakaluve in Savanur City Haveri District. (Amount put to tender Rs.418.31 Lakhs) 2) Improvement and Development of Nala from Huralikoppi Doddakere to Belageri Tank in Savanur Taluk Haveri District. (Amount put to tender Rs.418.99 Lakhs) 3) Improvement and Development of Rajakaluve near Belageri Tank and Constrcution of Cross Drainage in Savanur Taluk of Haveri District. (Amount put to tender Rs.251.45 Lakhs) & 4) Improvement and Development of Rajakaluve near Mothitalab Tank in Savanur Taluk of Haveri District. (Amount put to tender Rs.251.54 Lakhs)** ದ್ವಿ-ಲಕೋಟೆ ಪದ್ಧತಿಯ ಮುಖಾಂತರ ಟೆಂಡರ್‌ನ್ನು ನಿರ್ವಹಿಸಲು ಕೆ.ಪಿ.ಪಿ. ಪೋರ್ಟಲ್‌ನಲ್ಲಿ ಆಹ್ವಾನಿಸಲಾಗಿದೆ. ಟೆಂಡರ್ ದಾಖಲೆಗಳನ್ನು ಇ-ಪ್ರೋಕ್ಯೂರ್‌ಮೆಂಟ್‌ನ ವೆಬ್‌ಸೈಟ್ **(http://kppp.karnataka.gov.in)** ಮುಖಾಂತರವೇ ದಿನಾಂಕ:15/07/2026 ಬೆಳಿಗ್ಗೆ 11.00 ರಿಂದ ಡೌನಲೋಡ್ ಮಾಡಿಕೊಂಡು ದಿನಾಂಕ:30/07/2026 ರ ಸಂಜೆ 4.00 ಗಂಟೆವರೆಗೆ ಟೆಂಡರ್‌ಗಳನ್ನು ಸಲ್ಲಿಸಬಹುದಾಗಿರುತ್ತದೆ. ಟೆಂಡರ್ ಪೂರ್ವಭಾವಿ ಸಭೆಯನ್ನು ದಿನಾಂಕ:20/07/2026 ರಂದು ಬೆಳಿಗ್ಗೆ 11.00 ರಿಂದ 1.00 ಗಂಟೆಯವರೆಗೆ ಕಾರ್ಯನಿರ್ವಾಹಕ ಇಂಜಿನೀಯರರು , ಕನೀನಿನಿ, ಶಿಗ್ಗಾಂವ ಏತ ನೀರಾವರಿ ವಿಭಾಗ ಧಾರವಾಡ ಇವರ ಕಚೇರಿಯಲ್ಲಿ ಜರುಗಿಸಲಾಗುವುದು. ತಾಂತ್ರಿಕ ಟೆಂಡರ್‌ಗಳನ್ನು ದಿನಾಂಕ:31/07/2026 ರಂದು ಸಂಜೆ 4.30 ಗಂಟೆಗೆ ಹಾಗೂ ಆರ್ಥಿಕ ಟೆಂಡರ್‌ಗಳನ್ನು ದಿನಾಂಕ:03/08/2026 ರಂದು ಬೆಳಿಗ್ಗೆ 11.00 ಗಂಟೆಗೆ ಅಥವಾ ತಾಂತ್ರಿಕ ಬಿಡ್ ಅನುಮೋದನೆಗೊಂಡ ನಂತರ ತೆರೆಯಲಾಗುವುದು.

ಟೆಂಡರ್‌ನಲ್ಲಿ ಯಾವುದೇ ಬದಲಾವಣೆ/ತಿದ್ದುಪಡಿಗಳು ಇದ್ದಲ್ಲಿ ವಿದ್ಯುನ್ಮಾನ ಸಂಗ್ರಹಣೆ (KPP Portal) ವೇದಿಕೆಯಲ್ಲಿ ಮಾತ್ರ ಪ್ರಕಟಿಸಲಾಗುವುದು. ಯಾವುದೇ ಕಾರಣ ನೀಡದೆ ಟೆಂಡರ್‌ಗಳನ್ನು ಮುಂದೂಡುವ, ಅಂಗೀಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಕೆಳಗೆ ಸಹಿ ಮಾಡಿರುವ ಅಧಿಕಾರಿಗಳು ಕಾಯ್ದಿರಿಸಿಕೊಂಡಿರುತ್ತಾರೆ.

ಸಹಿ/- (ಮಂಜುನಾಥ.ಬಿ)
ಕಾರ್ಯಪಾಲಕ ಇಂಜಿನೀಯರ್,
ಕನೀನಿನಿ ಶಿಗ್ಗಾಂವ ಏತ ನೀರಾವರಿ ವಿಭಾಗ, ಧಾರವಾಡ

ವಾ.ಸಾ.ಸಂ.ಇ/ಧಾರವಾಡ/375/ದೇಶಪಾಂಡೆಪಬ್ಲಿಸಿಟಿ/2026-27

---




## CHANGE OF NAME

I, **SHABEENABANU BASTWAD** (Old Name) R/o. Mehboob Nagar, Banti Katti, 2nd Cross, Old Hubli, Hubballi-580024 have changed my name as **SHABEENABANU TIGADI** (New Name) vide affidavit sworn before notary T.G.Balannavar, Hubli, Dated 01.07.2026.

## ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸ ಪೂರ್ಣವೇ ಆದರೂ ಅವುಗಳಲ್ಲಿ ಕೊಡುವ ಮಾಹಿತಿ, ಗುಣಮಟ್ಟ ಮುಂತಾದವುಗಳ ಕುರಿತು ಸಾರ್ವಜನಿಕರು ಜಾಹೀರಾತು ನೀಡಿದವರೊಡನೆ ವ್ಯವಹರಿಸಬೇಕು. ಇದಕ್ಕೆ ಪತ್ರಿಕೆ ಜವಾಬ್ದಾರಿ ಇಲ್ಲಾ.

ಜಾಹೀರಾತು ವ್ಯವಸ್ಥಾಪಕರು

---

ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಹೂವಿನಹಡಗಲಿ.

ಕ್ರಿಮಿನಲ್ ಮಿಸ್ಲೇನಿಯಸ್ ಸಂಖ್ಯೆ: 629/2026 ಕ್ರಿಮಿನಲ್ ಮಿಸ್ಲೇನಿಯಸ್ ಸಂಖ್ಯೆ: 630/2026

ಅರ್ಜಿದಾರರು : ಶ್ರೀ ಮಲ್ಲಿಕಾರ್ಜುನ ಕೆ. ತಂದೆ ಸಿದ್ದಲಿಂಗಪ್ಪ, ವಯಸ್ಸು 63 ವರ್ಷ, ಸಾ॥ ಸೋಗಿ ಗ್ರಾಮ, ತಾ॥ ಹೂವಿನಹಡಗಲಿ ಜಿ॥ ವಿಜಯನಗರ ಹಾಲಿವಸ್ತಿ॥ ಹೂವಿನಹಡಗಲಿ ಪಟ್ಟಣ

ವಿರುದ್ಧ

ಎದುರುದಾರರು : ಮಾನ್ಯ ತಹಶೀಲ್ದಾರರು ತಾಲೂಕು ಕಾರ್ಯಾಲಯ & ಇನ್ನೊಬ್ಬರು, ಹೂವಿನಹಡಗಲಿ,

ಸಾರ್ವಜನಿಕ ನೋಟಿಸು

ಈ ಪ್ರಕರಣದಲ್ಲಿ ಅರ್ಜಿದಾರನು ಸಾರ್ವಜನಿಕರ ಗಮನಕ್ಕೆ ಪ್ರಕಟಿಸಿದ ಈ ನೋಟೀಸು ಏನೆಂದರೆ, ಅರ್ಜಿದಾರನು ಮಾನ್ಯ ಹೂವಿನಹಡಗಲಿ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯದಲ್ಲಿ ತನ್ನ ಕುಟುಂಬದ ಹಿರಿಯರ ಮರಣ ಪ್ರಮಾಣಪತ್ರ ಪಡೆಯಲು ಅರ್ಜಿ ಹಾಕಿರುತ್ತಾರೆ. ಅರ್ಜಿದಾರರು ತನ್ನ ಹಿರಿಯರ ಮರಣ ದಿನಾಂಕದ ವಿವರ.

| ಕ್ರ.ಸಂ. | ಹೆಸರು | ಸಂಬಂಧ | ಮರಣ ದಿನಾಂಕ | ಮರಣ ಸ್ಥಳ: |
|---|---|---|---|---|
| 1 | ಕಲ್ಲಿ ಕೊಟ್ರಪ್ಪ ತಂದೆ ಬಸಪ್ಪ | ಅಜ್ಜ | 08-07-1986 | ಸೋಗಿ |
| 2 | ಕಲ್ಲಿ ನಾಗಮ್ಮ ಗಂಡ ಕಲ್ಲಿ ಕೊಟ್ರಪ್ಪ | ಅಜ್ಜಿ | 17-10-1988 | ಸೋಗಿ |

ಸದರಿಯವರ ಮರಣದ ಬಗ್ಗೆ ಎದುರುದಾರರ ಕಛೇರಿಯಲ್ಲಿ ನೊಂದಣಿಯಾಗದ ಕಾರಣ ಅರ್ಜಿದಾರರು ಘನ ನ್ಯಾಯಾಲಯದಲ್ಲಿ ಜನನ ಮತ್ತು ಮರಣ ನೊಂದಣಿ ಕಾಯ್ದೆ ಅಡಿಯಲ್ಲಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಸದರಿ ವಿಚಾರವಾಗಿ ಯಾರಾದರೂ ಈ ಬಗ್ಗೆ ತಕರಾರು ಸಲ್ಲಿಸುವವರಿದ್ದರೆ ತಾವಾಗಲೀ ಅಥವಾ ತಮ್ಮ ಪರವಾಗಿ ವಕೀಲರ ಮೂಲಕವಾಗಲೀ ದಿನಾಂಕ: 19/08/2026 ರಂದು ಸಮಯ ಬೆಳಿಗ್ಗೆ 11-00 ಗಂಟೆಗೆ ಹೂವಿನಹಡಗಲಿ ನ್ಯಾಯಾಲಯದಲ್ಲಿ ತಕರಾರು ಸಲ್ಲಿಸತಕ್ಕದ್ದು. ಇಲ್ಲವಾದಲ್ಲಿ ಮಾನ್ಯ ಘನ ನ್ಯಾಯಾಲಯವು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಯಾವುದೇ ತಕರಾರು ಇರುವುದಿಲ್ಲವೆಂದು ಏಕತರ್ಫಿ(ಏಕಪಕ್ಷೀಯ) ಆದೇಶ ಮಾಡಲಾಗುವುದು ಎಂದು ತಿಳಿಯತಕ್ಕದ್ದು.

ದಿನಾಂಕ: 23/06/2026 ರಂದು ನ್ಯಾಯಾಲಯದ ಆದೇಶ ಹಾಗೂ ಮೊಹರಿನೊಂದಿಗೆ ನೀಡಲಾಗಿದೆ.

ನ್ಯಾಯಾಲಯದ ಆದೇಶದ ಮೇರೆಗೆ
ಸಹಿ/- ಶಿರಸ್ತೇದಾರರು, ಸಿ.ಜೆ. & ಜೆ.ಎಂ.ಎಫ್.ಸಿ. ನ್ಯಾಯಾಲಯ ಹೂವಿನಹಡಗಲಿ
ಸಹಿ/- ಶ್ರೀ ಎ. ಷಣ್ಮುಖನಗೌಡ್ರ, ಅರ್ಜಿದಾರರ ಪರ ವಕೀಲರು, ಹೂವಿನಹಡಗಲಿ.

---

ಮಾನ್ಯ ದಿವಾಣಿ ನ್ಯಾಯಾಧೀಶರ ನ್ಯಾಯಾಲಯ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಹೂವಿನಹಡಗಲಿ

ಕ್ರಿಮಿನಲ್ ಮಿಸ್ ನಂ. 637/2026 ಕ್ರಿಮಿನಲ್ ಮಿಸ್ ನಂ. 636/2026

1) ಶ್ರೀ ಗುರುಸಿದ್ದನಗೌಡ ತಂದೆ ಭರಮಗೌಡ, 76 ವರ್ಷ, ವ್ಯವಸಾಯ. ಸಾ: ಇಟ್ಟಿಗಿ ಗ್ರಾಮ. ಹೂವಿನಹಡಗಲಿ ತಾಲೂಕು, ವಿಜಯನಗರ ಜಿಲ್ಲಾ .....ಅರ್ಜಿದಾರರು.

ವಿರುದ್ಧ

1). ತಹಶೀಲ್ದಾರರು ತಾಲ್ಲೂಕ ಕಛೇರಿ ಹೂವಿನಹಡಗಲಿ.
2) ಗ್ರಾಮ ಲೆಕ್ಕಾಧಿಕಾರಿಗಳು ಇಟ್ಟಿಗಿ ಗ್ರಾಮ .....ಎದುರುದಾರರು.

ಸಾರ್ವಜನಿಕ ನೋಟಿಸ್

ಈ ಪ್ರಕರಣದಲ್ಲಿ ಅರ್ಜಿದಾರರು ಸಾರ್ವಜನಿಕರ ಗಮನಕ್ಕೆ ಪ್ರಕಟಿಸಿದ ಈ ನೋಟಿಸು ಏನೆಂದರೆ, ಅರ್ಜಿದಾರನು ಮಾನ್ಯ ಹೂವಿನಹಡಗಲಿ ಸಿವಿಲ್ ಜಡ್ಜ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯದಲ್ಲಿ ತನ್ನ ಹಿರಿಯರ ಮರಣ ಪ್ರಮಾಣ ಪತ್ರ ಪಡೆಯಲು ಅರ್ಜಿ ಸಲ್ಲಿಸಿರುತ್ತಾರೆ. ಅರ್ಜಿದಾರರ ಹಿರಿಯರ ಮರಣ ದಿನಾಂಕದ ವಿವರ.

| ಕ್ರ.ಸಂ. | ಹೆಸರು | ಸಂಬಂಧ | ಮರಣ ದಿನಾಂಕ | ಸ್ಥಳ |
|---|---|---|---|---|
| 1 | ಭರಮನಗೌಡ ತಂದೆ ಬಸವನಗೌಡ | ತಂದೆ | 05-08-1973 | ಇಟ್ಟಿಗಿ |
| 2 | ಬುಳ್ಳಮ್ಮ ಗಂಡ ಭರಮನಗೌಡ | ತಾಯಿ | 04-09-1957 | ಇಟ್ಟಿಗಿ |

ಸದರಿಯವರು ವಿಜಯನಗರ ಜಿಲ್ಲಾ ಹೂವಿನಹಡಗಲಿ ತಾಲೂಕಿನ ಇಟ್ಟಿಗಿ ಗ್ರಾಮದಲ್ಲಿ ಮರಣ ಹೊಂದಿರುತ್ತಾರೆ ಆದ್ದರಿಂದ ಸದರಿಯವರ ಮರಣ ಪ್ರಮಾಣ ಪತ್ರ ನೀಡಲು ಎದುರುದಾರರಿಗೆ ನಿರ್ದೇಶನ ನೀಡುವಂತೆ ಹೂವಿನಹಡಗಲಿಯ ಮಾನ್ಯ ದಿವಾಣಿ ನ್ಯಾಯಾಧೀಶರ ನ್ಯಾಯಾಲಯ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯದಲ್ಲಿ ಕ್ರಿಮಿನಲ್ ಮಿಸ್ ಅರ್ಜಿ ಸಲ್ಲಿಸಿದ್ದು ಇರುತ್ತದೆ. ಇದಕ್ಕೆ ಸಂಬಂಧಿಸಿದವರು ಅಥವಾ ವಾರಸುದಾರರು ಇದ್ದಲ್ಲಿ ಯಾರಾದರೂ ಆಕ್ಷೇಪಣೆ ಅಥವಾ ತಕರಾರು ಇದ್ದಲ್ಲಿ ಖುದ್ದಾಗಿ ಅಥವಾ ವಕೀಲರ ಮೂಲಕವಾಗಲಿ ದಿನಾಂಕ 19/8/2026 ರಂದು ಬೆಳಿಗ್ಗೆ 11.00 ಗಂಟೆಗೆ ಹೂವಿನಹಡಗಲಿ ನ್ಯಾಯಾಲಯದಲ್ಲಿ ಹಾಜರಾಗತಕ್ಕದ್ದು ಇಲ್ಲವಾದಲ್ಲಿ ಮಾನ್ಯ ನ್ಯಾಯಾಲಯ ಏಕತರ್ಫಿ ಆದೇಶ ನೀಡಲಾಗುವದು.

ದಿನಾಂಕ : 23/06/2006 ಸ್ಥಳ : ಹೂವಿನಹಡಗಲಿ

ನ್ಯಾಯಾಲಯದ ಆದೇಶದ ಮೇರೆಗೆ
ಸಹಿ/- ಶಿರಸ್ತೇದಾರರು, ಮಾನ್ಯ ದಿವಾಣಿ ನ್ಯಾಯಾಧೀಶರ ನ್ಯಾಯಾಲಯ ಮತ್ತು ಪ್ರಥಮದರ್ಜೆ ದಂಡಾಧಿಕಾರಿಗಳ ನ್ಯಾಯಾಲಯ, ಹೂವಿನಹಡಗಲಿ.
ಸಹಿ/- ಶ್ರೀ ಕೆ.ಎಂ. ಗುರುರಾಜ್, ಅರ್ಜಿದಾರರ ಪರ ವಕೀಲರು.

**ಶನಿವಾರದ ಪಂದ್ಯಗಳು**

ಕೊಲಂಬಿಯಾ-ಘಾನಾ (ಬೆಳಗ್ಗೆ 7:30)

ಕೆನಡಾ-ಮೊರಾಕ್ಕೊ (16ರ ಸುತ್ತು) (ರಾ. 10:30)

## ಕಿರುಸುದ್ದಿ

### ಡೈಮಂಡ್ ಲೀಗ್‌ಗೆ ಸರ್ವೇಶ್

**ಹೊಸದಿಲ್ಲಿ:** ರಾಷ್ಟ್ರೀಯ ದಾಖಲೆ ಹೊಂದಿರುವ ಹೈಜಂಪರ್ ಸರ್ವೇಶ್ ಕುಶಾರೆ ಮೊನಾಕೊ ಲೆಗ್‌ನಲ್ಲಿ ಪುರುಷರ ಸ್ಪರ್ಧೆಯಲ್ಲಿ ತಮ್ಮ ಡೈಮಂಡ್ ಲೀಗ್‌ಗೆ ಪದಾರ್ಪಣೆ ಮಾಡಲಿದ್ದಾರೆ. ಭುವನೇಶ್ವರದ ಕಳಿಂಗ ಕ್ರೀಡಾಂಗಣದಲ್ಲಿ ಇತ್ತೀಚೆಗೆ ಮುಕ್ತಾಯಗೊಂಡ 65 ನೇ ರಾಷ್ಟ್ರೀಯ ಅಂತರ-ರಾಜ್ಯ ಸೀನಿಯರ್ ಅಥ್ಲೆಟಿಕ್ ಚಾಂಪಿಯನ್‌ಶಿಪ್‌ನಲ್ಲಿ, ಮಹಾರಾಷ್ಟ್ರದ ಕುಶಾರೆ ಪುರುಷರ ಹೈಜಂಪ್ ರಾಷ್ಟ್ರೀಯ ದಾಖಲೆಯನ್ನು ಮುರಿದರು. ಅವರು 2.31 ಮೀ. ಎತ್ತರವನ್ನು ಹೆಚ್ಚಿಸುವ ಮೂಲಕ, ಏಪ್ರಿಲ್ 27, 2018 ರಿಂದ ಲುಬ್ಬಾಕ್‌ನಲ್ಲಿ ತೇಜಸ್ವಿನ್ ಶಂಕರ್ ಅವರ ಹಿಂದಿನ ರಾಷ್ಟ್ರೀಯ ದಾಖಲೆ ಯಾದ 2.29 ಮೀ. ಅನ್ನು ಉತ್ತಮಗೊಳಿಸಿದರು. ಕುತೂಹಲಕಾರಿಯಾಗಿ, ವಿಶ್ವದ ಒಂಬತ್ತನೇ ಶ್ರೇಯಾಂಕದಲ್ಲಿರುವ ಕುಶಾರೆ, 10 ಜನರ ಕ್ಷೇತ್ರದಲ್ಲಿ ಅತ್ಯುತ್ತಮ ಸೀಸನ್ ಬೆಸ್ಟ್ ಅನ್ನು ಹೊಂದಿದ್ದಾರೆ.

### ಅಲ್ಜೀರಿಯಾ ನಾಯಕ ರಿಯಾದ್ ನಿವೃತ್ತಿ

**ಟೊರಾಂಟೊ:** ಫಿಫಾ ವಿಶ್ವಕಪ್‌ನಲ್ಲಿ ಸ್ವಿಟ್ಜರ್ಲೆಂಡ್ ವಿರುದ್ಧ ಸೋತ ನಂತರ ಅಲ್ಜೀರಿಯಾ ತಂಡದ ನಾಯಕ ರಿಯಾದ್ ಮಹ್ರೆಜ್ ಅಂತಾರಾಷ್ಟ್ರೀಯ ಫುಟ್‌ಬಾಲ್‌ನಿಂದ ನಿವೃತ್ತಿ ಘೋಷಿಸಿದರು. ಗುರುವಾರ ವ್ಯಾಂಕೋವರ್‌ನಲ್ಲಿ ನಡೆದ 32ರ ಘಟ್ಟದ ಪಂದ್ಯದಲ್ಲಿ ಅಲ್ಜೀರಿಯಾವನ್ನು 2-0 ಗೋಲುಗಳಿಂದ ಸೋಲಿಸುವ ಮೂಲಕ ಸ್ವಿಟ್ಜರ್ಲೆಂಡ್ ತಂಡದ ಬ್ರೀಲ್ ಎಂಬೋಲೊ ಮತ್ತು ಡ್ಯಾನ್ ನ್ಡೋಯ್ ಅವರು ಗೋಲು ಗಳಿಸಿದರು. ಪ್ರಸ್ತುತ ಸೌದಿ ಪ್ರೊ ಲೀಗ್ ತಂಡ ಅಲ್-ಅಹ್ಲಿ ಪರ ಆಡುತ್ತಿರುವ ಮಹ್ರೆಜ್, 113 ಪಂದ್ಯಗಳು ಮತ್ತು 39 ಗೋಲುಗಳೊಂದಿಗೆ ತಮ್ಮ ಅಂತಾರಾಷ್ಟ್ರೀಯ ವೃತ್ತಿಜೀವನವನ್ನು ಕೊನೆಗೊಳಿಸಿದರು. ಫ್ರಾನ್ಸ್‌ನ ಕ್ಲಿಚಿಯಲ್ಲಿ ಜನಿಸಿದ ಮಹ್ರೆಜ್, 2013 ರಲ್ಲಿ ಅಲ್ಜೀರಿಯಾವನ್ನು ಪ್ರತಿನಿಧಿಸಲು ಆಯ್ಕೆ ಮಾಡಿಕೊಂಡರು, ಅವರ ಕುಟುಂಬದ ಎರಡೂ ಕಡೆಯ ಅಲ್ಜೀರಿಯಾ ಪರಂಪರೆಯ ಮೂಲಕ ಅರ್ಹತೆ ಪಡೆದರು.

### ಗ್ಲೋಬಲ್ ಚೆಸ್ ಲೀಗ್‌ಗೆ ಕರ್ನಾಟಕ ಸರ್ಕಾರ ಸಹಕಾರ

**ಬೆಂಗಳೂರು:** ನಾಲ್ಕನೇ ಆವೃತ್ತಿಯ ಗ್ಲೋಬಲ್ ಚೆಸ್ ಪಂದ್ಯಾವಳಿಯನ್ನು ಬೆಂಗಳೂರಲ್ಲಿ ಆಯೋಜಿಸಲು ಇಲ್ಲಿನ ಸ್ಥಳೀಯ ಸರ್ಕಾರದ ಬೆಂಬಲ ಕೋರಿ ಗ್ಲೋಬಲ್ ಚೆಸ್ ಲೀಗ್ ನಿಯೋಗ ಉಪಮುಖ್ಯಮಂತ್ರಿ ಡಾ. ಜಿ. ಪರಮೇಶ್ವರ್ ಅವರಿಗೆ ಮನವಿ ಸಲ್ಲಿಸಿದ್ದು, ಸಹಕಾರದ ಭರವಸೆ ಪಡೆದಿದೆ. ಸೆಪ್ಟೆಂಬರ್‌ನಲ್ಲಿ ನಡೆಯಲಿರುವ ಈ ವಿಶ್ವ ದರ್ಜೆ ಕೂಟಕ್ಕೆ ಬೆಂಗಳೂರು ಆತಿಥ್ಯ ನೀಡಲಿದೆ. ಈಗಾಗಲೇ ಆಟಗಾರರ ಡ್ರಾಫ್ಟಿಂಗ್ ಕೂಡ ಇತ್ತೀಚೆಗೆ ಮುಂಬೈನಲ್ಲಿ ನಡೆದಿದೆ. ಈ ಬಗ್ಗೆ ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಹಂಚಿಕೊಂಡಿರುವ ಉಪಮುಖ್ಯಮಂತ್ರಿ ಡಾ. ಜಿ. ಪರಮೇಶ್ವರ್, ಗ್ಲೋಬಲ್ ಚೆಸ್ ಲೀಗ್ ನಿಯೋಗದವರು ಭೇಟಿ ಮಾಡಿ, ಗ್ಲೋಬಲ್ ಚೆಸ್ ಲೀಗ್ ಆಯೋಜಿಸುವ ಸಂಬಂಧ ಸಹಕಾರವನ್ನು ಕೋರಿದರು. ವಿಶ್ವಮಟ್ಟದ ಕ್ರೀಡಾಕೂಟಗಳಿಗೆ ಬೆಂಗಳೂರು ಆತಿಥ್ಯ ವಹಿಸುವ ಮೂಲಕ ರಾಜ್ಯದ ಕ್ರೀಡಾ ಕ್ಷೇತ್ರಕ್ಕೆ ಹೊಸ ಉತ್ತೇಜನ ದೊರೆಯಲಿದ್ದು, ಇಂತಹ ಪ್ರತಿಷ್ಠಿತ ಕಾರ್ಯಕ್ರಮಗಳಿಗೆ ಸರ್ಕಾರ ಅಗತ್ಯ ಸಹಕಾರವನ್ನು ನೀಡಲು ಸಿದ್ಧ ಎಂದು ಬರೆದುಕೊಂಡಿದ್ದಾರೆ.

### ಕೆನಡಾ ಓಪನ್: ಭಾರತ ಅಭಿಯಾನ ಅಂತ್ಯ

**ಹೊಸದಿಲ್ಲಿ:** ಕೆನಡಾ ಓಪನ್‌ನಲ್ಲಿ ತಾನ್ಯಾ ಹೇಮ್ನಾಥ್ ಮತ್ತು ಆಕರ್ಷಿ ಕಶ್ಯಪ್ ಮಹಿಳೆಯರ ಸಿಂಗಲ್ಸ್ ವಿಭಾಗದ ಎರಡನೇ ಸುತ್ತಿನ ಪಂದ್ಯಗಳಲ್ಲಿ ಸೋಲುವ ಮೂಲಕ ಭಾರತದ ಅಭಿಯಾನಕ್ಕೆ ತೆರೆ ಎಳೆದರು. ತಾನ್ಯಾ ಜಪಾನ್‌ನ ಮೂರನೇ ಶ್ರೇಯಾಂಕಿತ ಆಟಗಾರ್ತಿ ರಿಕೊ ಗುಂಜಿ ವಿರುದ್ಧ 31 ನಿಮಿಷಗಳಲ್ಲಿ 11-21, 11-21 ಅಂತರದಲ್ಲಿ ಸೋತರು. ಮತ್ತೊಂದೆಡೆ, ಆಕರ್ಷಿ ಅವರು ಅಮೆರಿಕದ ನಾಲ್ಕನೇ ಶ್ರೇಯಾಂಕಿತ ಆಟಗಾರ್ತಿ ಬೇವೆನ್ ಜಾಂಗ್ ವಿರುದ್ಧದ ಪಂದ್ಯದಲ್ಲಿ ಹೋರಾಡಿ 22-20, 17-21, 17-21 ಅಂತರದಲ್ಲಿ ಪರಾಭವಗೊಂಡರು.

### ಸ್ಕ್ವಾಷ್: ತನ್ವಿಗೆ ಗೆಲುವು

**ಮುಂಬೈ:** ಈಜಿಪ್ಟ್‌ನ ಎರಡನೇ ಶ್ರೇಯಾಂಕದ ಫರೀದಾ ವಾಲಿದ್ ವಿರುದ್ಧ 3-2 ಅಂತರದ ಗೆಲುವು ಸಾಧಿಸಿರು ಭಾರತದ ತನ್ವಿ ಖನ್ನಾ ಶುಕ್ರವಾರ ನಡೆದ ಎಚ್‌ಸಿಎಲ್ ಸ್ಕ್ವ್ಯಾಷ್ ಪಿಎಸ್‌ಎ ಚಾಲೆಂಜರ್ ಟೂರ್‌ನಲ್ಲಿ ಗಮನ ಸೆಳೆದಿದ್ದಾರೆ. ವಿಶ್ವದ 74 ನೇ ಶ್ರೇಯಾಂಕದ ತನ್ವಿ, ಮೂರನೇ ಶ್ರೇಯಾಂಕದ ಆಟಗಾರ್ತಿ, 29 ವರ್ಷದ ದೆಹಲಿ ಆಟಗಾರ್ತಿ, 54 ನಿಮಿಷಗಳಲ್ಲಿ 8-11, 2-11, 12-10, 11-9, 11-7 ಅಂತರದ ಗೆಲುವು ಸಾಧಿಸಿ 11 ಕಟಿಲ ಫೈನಲ್‌ಗಳಲ್ಲಿ ಐದನೇ ಪ್ರಶಸ್ತಿಯನ್ನು ತಮ್ಮದಾಗಿಸಿಕೊಂಡರು. ಮಲೇಷ್ಯಾದ ಮೊಹಮ್ಮದ್ ಸಯಾಫಿಕ್ ಕಮಲ್ ಪುರುಷರ ಪ್ರಶಸ್ತಿಯನ್ನು ಗೆದ್ದರು.

ರೊನಾಲ್ಡೊ ಪೆನಾಲ್ಟಿ ಅಬ್ಬರ | ಕೊನೆ ಕ್ಷಣದಲ್ಲಿ ಗೊನ್ಸಾಲೊ ಮಿಂಚು | ಕ್ರೊಯೇಷಿಯಾಗೆ ಆಫ್‌ಸೈಡ್ ಶಾಕ್

# ಕ್ರೊಯೇಷಿಯಾಗೆ ಪೋರ್ಚುಗಲ್ ಪಂಚ್

**ಟೊರಾಂಟೊ:** ಫುಟ್‌ಬಾಲ್ ವಿಶ್ವಕಪ್ ಪಂದ್ಯಾವಳಿಯಲ್ಲಿ ರೋಚಕ ಪಂದ್ಯಗಳ ಅಬ್ಬರ ಮುಂದುವರಿದಿದ್ದು, ಕ್ರಿಸ್ಟಿಯಾನೊ ರೊನಾಲ್ಡೊ ಅವರ ಪೆನಾಲ್ಟಿ ಗೋಲು ಹಾಗೂ ಹೆಚ್ಚುವರಿ ಸಮಯದಲ್ಲಿ ಗೊನ್ಸಾಲೊ ರಾಮೋಸ್ ಗಳಿಸಿದ ನಿರ್ಣಾಯಕ ಗೋಲಿನ ನೆರವಿನಿಂದ ಪೋರ್ಚುಗಲ್ ತಂಡ ಕ್ರೊಯೇಷಿಯಾವನ್ನು 2-1 ಗೋಲುಗಳಿಂದ ಮಣಿಸಿ ಪ್ರಿಕ್ವಾರ್ಟರ್‌ಫೈನಲ್‌ಗೆ ಪ್ರವೇಶಿಸಿತು. ಅತ್ತ ಕೊನೆಯ ಕ್ಷಣದಲ್ಲಿ ಗೋಲು ಗಳಿಸಿದರೂ ಅದು ಆಫ್‌ಸೈಡ್ ಆದ ಕಾರಣ ಕ್ರೊಯೇಷಿಯಾ ಆಘಾತ ಎದುರಿಸಿತು.

ಪಂದ್ಯದ 53ನೇ ನಿಮಿಷದಲ್ಲಿ ಜೋಸಿಪ್ ಸ್ಟಾನಿಶಿಚ್ ನೀಡಿದ ಕ್ರಾಸ್ ಅನ್ನು ಇವಾನ್ ಪೆರಿಸಿಕ್ ಗೋಲಾಗಿ ಪರಿವರ್ತಿಸಿ ಕ್ರೊಯೇಷಿಯಾಕ್ಕೆ ಮುನ್ನಡೆ ತಂದುಕೊಟ್ಟರು. ಹಿನ್ನಡೆಯಲ್ಲಿದ್ದ ಪೋರ್ಚುಗಲ್‌ಗೆ 68ನೇ ನಿಮಿಷದಲ್ಲಿ ದೊರೆತ ಪೆನಾಲ್ಟಿಯನ್ನು ಯಶಸ್ವಿಯಾಗಿ ಗೋಲಾಗಿ ಪರಿವರ್ತಿಸಿದ ಕ್ರಿಸ್ಟಿಯಾನೊ ರೊನಾಲ್ಡೊ ಪಂದ್ಯಕ್ಕೆ ಜೀವ ತುಂಬಿದ್ದಲ್ಲದೆ, ತಮ್ಮ ತಂಡಕ್ಕೆ ಗೆಲುವಿನ ಹೋಪ್ ಕೊಟ್ಟರು. ವಿಶ್ವಕಪ್ ನಾಕೌಟ್ ಹಂತದಲ್ಲಿ ರೊನಾಲ್ಡೊ ದಾಖಲಿಸಿದ ಮೊದಲ ಗೋಲು ಇದಾಗಿದೆ.

**ಕೊನೆ ಕ್ಷಣದಲ್ಲಿ ಟ್ವಿಸ್ಟ್:** ಪಂದ್ಯ ಹೆಚ್ಚುವರಿ ಸಮಯದತ್ತ ಸಾಗುತ್ತಿದ್ದ ವೇಳೆ ರಫೆಲ್ ಲಿಯಾವೊ ನೀಡಿದ ಅದ್ಭುತ ಪಾಸ್ ಅನ್ನು ಗೊನ್ಸಾಲೊ ರಾಮೋಸ್ ಹೆಡರ್ ಮೂಲಕ ಗೋಲಾಗಿ ಪರಿವರ್ತಿಸಿ ಪೋರ್ಚುಗಲ್‌ಗೆ 2-1ರ ಮುನ್ನಡೆ ತಂದುಕೊಟ್ಟರು. ಕೊನೆಯ ಕ್ಷಣಗಳಲ್ಲಿ ಮಾರಿಯೊ ಪಾಸಾಲಿಚ್ ಸಮಬಲದ ಗೋಲು ಗಳಿಸಿದ್ದರೂ, ಡಿಆರ್‌ಎಸ್ ಪರಿಶೀಲನೆಯಲ್ಲಿ ಆಫ್‌ಸೈಡ್ ಎಂದು ತೀರ್ಪು ಬಂದ ಕಾರಣ ಗೋಲನ್ನು ರದ್ದುಪಡಿಸಲಾಯಿತು. ಇದರಿಂದ ಅಸಮಾಧಾನಗೊಂಡ ಕ್ರೊಯೇಷಿಯಾ ಅಭಿಮಾನಿಗಳು ಮೈದಾನದೊಳಗೆ ಬಾಟಲಿಗಳನ್ನು ಎಸೆದು ಪ್ರತಿಭಟನೆ ನಡೆಸಿದರು. ಈ ಜಯದೊಂದಿಗೆ ಪೋರ್ಚುಗಲ್ ತಂಡ ಪ್ರೀಕ್ವಾರ್ಟರ್‌ಫೈನಲ್‌ನಲ್ಲಿ ಸ್ಪೇನ್ ವಿರುದ್ಧ ಸೆಣಸಲಿದ್ದು, ಮತ್ತೊಂದೆಡೆ ಲೂಕಾ ಮೊಡ್ರಿಚ್ ಅವರ ಐದನೇ ವಿಶ್ವಕಪ್ ಅಭಿಯಾನಕ್ಕೆ ತೆರೆ ಬಿದ್ದಿದೆ.

- ಪೋರ್ಚುಗಲ್ 2-1 ಕ್ರೊಯೇಷಿಯಾ
- ಕ್ರೊಯೇಷಿಯಾ ಪರ ಪೆರಿಸಿಕ್ (53ನೇ ನಿಮಿಷ)
- ರೊನಾಲ್ಡೊ (ಪೆನಾಲ್ಟಿ) (68ನೇ ನಿಮಿಷ)
- ಗೊನ್ಸಾಲೊ ರಾಮೋಸ್ (ಹೆಚ್ಚುವರಿ ಸಮಯ)
- ಕ್ರೊಯೇಷಿಯಾ ಗೋಲು ಆಫ್‌ಸೈಡ್‌ನಿಂದ ರದು



## ಅಲ್ಜೀರಿಯಾ ಮಣಿಸಿ ಪ್ರಿ-ಕ್ವಾರ್ಟರ್‌ಗೆ ಸ್ವಿಟ್ಜರ್ಲೆಂಡ್

**ವ್ಯಾಂಕೂರ್ವ:** ಬ್ರೀಲ್ ಎಂಬೊಲೊ ಮತ್ತು ಡ್ಯಾನ್ ಎಂಡೋಯೆ ಅವರ ಗೋಲುಗಳ ನೆರವಿನಿಂದ ಸ್ವಿಟ್ಜರ್ಲೆಂಡ್ ರೌಂಡ್ ಆಫ್ 32 ಪಂದ್ಯದಲ್ಲಿ ಅಲ್ಜೀರಿಯಾವನ್ನು 2-0 ಗೋಲುಗಳಿಂದ ಮಣಿಸಿ ಪ್ರೀಕ್ವಾರ್ಟರ್‌ಫೈನಲ್‌ಗೆ ಪ್ರವೇಶಿಸಿತು.

ಪಂದ್ಯದ ಎರಡೂ ಅವಧಿಗಳಲ್ಲಿ ಸಮತೋಲನದ ಆಟವಾಡಿದ ಸ್ವಿಟ್ಜರ್ಲೆಂಡ್, ಎಂಬೊಲೊ ಮತ್ತು ಎಂಡೋಯೆ ದಾಖಲಿಸಿದ ಗೋಲುಗಳ ನೆರವಿನಿಂದ ಸುಲಭ ಗೆಲುವು ಸಾಧಿಸಿತು. ಅಲ್ಜೀರಿಯಾ ತಂಡಕ್ಕೆ ಪಂದ್ಯದುದ್ದಕ್ಕೂ ಸಮಬಲ ಸಾಧಿಸುವ ಅವಕಾಶ ದೊರೆಯಲಿಲ್ಲ. ಈ ಜಯದೊಂದಿಗೆ ಸ್ವಿಟ್ಜರ್ಲೆಂಡ್ ಮುಂದಿನ ಮಂಗಳವಾರ ವ್ಯಾಂಕೂವರ್‌ನಲ್ಲಿ ನಡೆಯಲಿರುವ ಪ್ರಿ-ಕ್ವಾರ್ಟರ್‌ಫೈನಲ್ ಪಂದ್ಯದಲ್ಲಿ ಕೊಲಂಬಿ-ಯಾಘಾನಾ ನಡುವಿನ ಪಂದ್ಯದ ವಿಜೇತರನ್ನು ಎದುರಿಸಲಿದೆ. 1938ರ ವಿಶ್ವಕಪ್ ಬಳಿಕ ಸ್ವಿಟ್ಜರ್ಲೆಂಡ್ ಇನ್ನೂ ನಾಕೌಟ್ ಹಂತದಲ್ಲಿ ಜಯ ಸಾಧಿಸಿಲ್ಲ. ಕಳೆದ ಮೂರು ವಿಶ್ವಕಪ್‌ಗಳಲ್ಲೂ ಪ್ರೀಕ್ವಾರ್ಟರ್ ಫೈನಲ್‌ಗೇರಿದ್ದರೂ ಅದಕ್ಕಿಂತ ಮುಂದೆ ಸಾಗಲು ಸಾಧ್ಯವಾಗಿರಲಿಲ್ಲ. ಈ ಬಾರಿ ಆ ದಾಖಲೆಯನ್ನು ಬದಲಿಸುವ ವಿಶ್ವಾಸದಲ್ಲಿ ತಂಡ ಮುಂದಿನ ಹಂತಕ್ಕಿಳಿಯಲಿದೆ.



ಸ್ವಿಟ್ಜರ್ಲೆಂಡ್ 2-0 ಅಲ್ಜೀರಿಯಾ

## ಮಿಕೆಲ್ ದ್ವಿಗೋಲು; ಸ್ಪೇನ್ ವಿನ್!

**ಇಂಗಲ್‌ವುಡ್:** ಮಿಕೆಲ್ ಒಯಾರ್ಜಬಲ್ ಅವರ ಎರಡು ಗೋಲುಗಳ ನೆರವಿನಿಂದ ಸ್ಪೇನ್ ತಂಡ ರೌಂಡ್ ಆಫ್ 32 ಪಂದ್ಯದಲ್ಲಿ ಆಸ್ಟ್ರಿಯಾವನ್ನು 3-0 ಗೋಲುಗಳಿಂದ ಮಣಿಸಿ 16ರ ಸುತ್ತಿಗೆ ಪ್ರವೇಶಿಸಿದೆ. ಪಂದ್ಯದ 36ನೇ ನಿಮಿಷದಲ್ಲಿ ಮಾರ್ಕ್ ಕುಕುರೆಲ್ಲಾ ನೀಡಿದ ಪಾಸ್ ಅನ್ನು ಒಯಾರ್ಸಬಲ್ ಗೋಲಾಗಿ ಪರಿವರ್ತಿಸಿ ಸ್ಪೇನ್‌ಗೆ ಮುನ್ನಡೆ ತಂದುಕೊಟ್ಟರು. ದ್ವಿತೀಯಾರ್ಧದಲ್ಲಿ ಪೆಡ್ರೊ ಪೊರೊ ಹೆಡರ್ ಮೂಲಕ ಗೋಲು ದಾಖಲಿಸಿ ಮುನ್ನಡೆಯನ್ನು 2-0ಕ್ಕೆ ಹೆಚ್ಚಿಸಿದರು. ಪಂದ್ಯ ಅಂತ್ಯದ 89ನೇ ನಿಮಿಷದಲ್ಲಿ ಮತ್ತೊಮ್ಮೆ ಕುಕುರೆಲ್ಲಾ ಅವರ ಪಾಸ್ ಅನ್ನು ಗೋಲಾಗಿ ಪರಿವರ್ತಿಸಿದ ಒಯಾರ್ಜಬಲ್ ಸ್ಪೇನ್‌ನ ಗೆಲುವು ಖಚಿತಪಡಿಸಿದರು. ಪಂದ್ಯದ ಬಹುತೇಕ ಸಮಯ ಚೆಂಡಿನ ಮೇಲೆ ಸಂಪೂರ್ಣ ಹಿಡಿತ ಸಾಧಿಸಿದ್ದ ಸ್ಪೇನ್, ಆಸ್ಟ್ರಿಯಾಗೆ ಒಂದೇ ಒಂದು ಗುರಿ ಕಡೆಗಿನ ಶಾಟ್ ಹೊಡೆಯಲು ಅವಕಾಶ ನೀಡಲಿಲ್ಲ. ಗೋಲ್‌ಕೀಪರ್ ಉನೈ ಸಿಮೋನ್ ಸತತ ನಾಲ್ಕನೇ ಕ್ಲೀನ್ ಶೀಟ್ ದಾಖಲಿಸಿ ತಂಡದ ಭದ್ರ ರಕ್ಷಣೆಗೆ ಸಾಕ್ಷಿಯಾದರು. ಈ ಗೆಲುವಿನೊಂದಿಗೆ 2010ರಲ್ಲಿ ವಿಶ್ವಕಪ್ ಪ್ರಶಸ್ತಿ ಗೆದ್ದ ಬಳಿಕ ಮೊದಲ ಬಾರಿಗೆ ಸ್ಪೇನ್ ನಾಕೌಟ್ ಹಂತದ ಪಂದ್ಯದಲ್ಲಿ ಜಯ ದಾಖಲಿಸಿದೆ. ಜೊತೆಗೆ 2023ರ ಮಾರ್ಚ್‌ನಿಂದ ಸ್ಪರ್ಧಾತ್ಮಕ ಪಂದ್ಯಗಳಲ್ಲಿ ಸ್ಪೇನ್‌ನ ಅಜೇಯ ಓಟ 35 ಪಂದ್ಯಗಳಿಗೆ ವಿಸ್ತರಿಸಿದೆ. ಸ್ಪೇನ್ ತಂಡ ಈಗ ಪ್ರೀಕ್ವಾರ್ಟರ್‌ಫೈನಲ್‌ನಲ್ಲಿ ಪೋರ್ಚುಗಲ್ ವಿರುದ್ಧ ಸೆಣಸಲಿದ್ದು, ವಿಶ್ವಕಪ್‌ನಲ್ಲಿ ಮತ್ತೊಂದು ಬಲಿಷ್ಠ ಪೈಪೋಟಿಗೆ ವೇದಿಕೆ ಸಜ್ಜಾಗಿದೆ.



- ಸ್ಪೇನ್ 3-0 ಆಸ್ಟ್ರಿಯಾ
- ಮಿಕೆಲ್ ಎರಡು ಗೋಲು (36, 89ನೇ ನಿಮಿಷ)
- ಪೆಡ್ರೊ ಪೊರೊ (ದ್ವಿತೀಯಾರ್ಧ)
- ಸತತ ನಾಲ್ಕನೇ ಕ್ಲೀನ್ ಶೀಟ್ ದಾಖಲಿಸಿದ ಸ್ಪೇನ್
- 2010ರ ಬಳಿಕ ವಿಶ್ವಕಪ್ ನಾಕೌಟ್ ಹಂತದಲ್ಲಿ ಸ್ಪೇನ್‌ಗೆ ಮೊದಲ ಗೆಲುವು

## ಗೆಲುವಿನ ಹಾದಿಗೆ ಮರಳೀತೇ ಭಾರತ

**ಮ್ಯಾಂಚೆಸ್ಟರ್:** ಮೊದಲ ಪಂದ್ಯ ರದ್ದಾದ ನಂತರ ಎರಡನೇ ಪಂದ್ಯದಲ್ಲಿ ಭಾರತ ಇಂಗ್ಲೆಂಡ್ ತಂಡವನ್ನು ಎದುರಿಸಲಿದ್ದು, ಶನಿವಾರದಂದು ಎರಡನೇ ಟಿ20 ಪಂದ್ಯ ನಡೆಯಲಿದೆ.

ಐರ್ಲೆಂಡ್ ಸರಣಿ ಸೋಲಿನ ನಂತರ ಮತ್ತೆ ಕಣಕ್ಕಿಳಿದಿರುವ ಭಾರತವು ಇಂಗ್ಲೆಂಡ್‌ನಲ್ಲಿ 5 ಪಂದ್ಯಗಳ ಸರಣಿಯನ್ನಾಡುತ್ತಿದೆ. ಮೊದಲ ಪಂದ್ಯದಲ್ಲಿ ಮಳೆಗೆ ಪಂದ್ಯ ತತ್ತರಿಸಿದ ನಂತರ ಎರಡನೇ ಪಂದ್ಯ ಶನಿವಾರ ನಡೆಯಲಿದೆ. ಮಾದರಿಯ ಹೊಸ ನಾಯಕ ಶ್ರೇಯಸ್ ಅಯ್ಯರ್ ನೇತೃತ್ವದಲ್ಲಿ ಭಾರತ ತಂಡ ಮೊದಲ ಗೆಲುವು ಇನ್ನೂ ಸಾಧಿಸಬೇಕಿದೆ. ಮ್ಯಾಂಚೆಸ್ಟರ್ ಈ ಪಂದ್ಯಕ್ಕೆ ಆತಿಥ್ಯ ನೀಡಲಿದ್ದು, ಮುನ್ನಡೆಗಾಗಿ ಎರಡು ತಂಡಗಳ ನಡುವೆ ಭರ್ಜರಿ ಪೈಪೋಟಿ ನಡೆಯಲಿದೆ. ಕಳೆದ ಪಂದ್ಯದಲ್ಲಿ ಭಾರತ ತಮಡ ಉತ್ತಮ ಬ್ಯಾಟಿಂಗ್ ಅನ್ನೇ ಮಾಡಿತ್ತು. ಆರಂಭಿಕ ಆಘಾತ ಎದುರಿಸಿದ್ದರೂ ಅಭಿಷೇಕ್ ಶರ್ಮ ಅವರ ಸ್ಫೋಟಕ ಬ್ಯಾಟಿಂಗ್ ಆಸರೆ ಪಡೆದಿತ್ತು.

ಇಂದು ಇಂಗ್ಲೆಂಡ್ ವಿರುದ್ಧ 2ನೇ ಟಿ20

ಮಧ್ಯಮ ಕ್ರಮಾಂಕದಲ್ಲಿ ನಾಯಕ ಶ್ರೇಯಸ್ ಅಯ್ಯರ್ ಉತ್ತಮ ಬ್ಯಾಟಿಂಗ್‌ನೊಂದಿಗೆ ಆಸರೆಯಾಗಿದ್ದರು. ಅತ್ತ ಕೊನೆಯಲ್ಲಿ ಶಿವಂ ದುಬೆ ಸ್ಫೋಟಕ ಬ್ಯಾಟಿಂಗ್ ಮಾಡಿದ ನಂತರ ಭಾರತ 20 ಓವರ್ ಗಳಲ್ಲಿ 189 ರನ್ ಗಳಿಸಿತ್ತು. ಮಳೆಯಿಂದಾಗಿ ಎರಡನೇ ಇನ್ನಿಂಗ್ಸ್ ನಡೆದಿರಲಿಲ್ಲ.

**ಪಂದ್ಯದ ವಿವರ**
**ಯಾವಾಗ:** ಭಾನುವಾರ, **ಎಲ್ಲಿ:** ಮ್ಯಾಂಚೆಸ್ಟರ್, **ಸಮಯ:** ಸಂಜೆ 7:00, **ಪ್ರಸಾರ:** ಸ್ಟಾರ್ ಸ್ಪೋರ್ಟ್ಸ್ ಜಿಯೋ ಹಾಟ್‌ಸ್ಟಾರ್

### ಶನಿವಾರದ ಪಂದ್ಯಕ್ಕೆ ಇಂಗ್ಲೆಂಡ್ 11

ಫಿಲ್ ಸಾಲ್ಟ್, ಜಾಸ್ ಬಟ್ಲರ್ (ವಿಕೆಟ್ ಕೀಪರ್), ಹ್ಯಾರಿ ಬ್ರೂಕ್ (ನಾಯಕ), ವಿಲ್ ಜ್ಯಾಕ್ಸ್, ಜೇಕಬ್ ಬೆಥೆಲ್, ಟಾಮ್ ಬ್ಯಾಂಟನ್, ಸ್ಯಾಮ್ ಕರನ್, ಆದಿಲ್ ರಶೀದ್, ಜೋಫ್ರಾ ಆರ್ಚರ್, ಲಿಯಾಮ್ ಡಾಸನ್, ಜೋಶ್ ಟಂಗ್.

### ಏಕದಿನಕ್ಕೆ ಇಂಗ್ಲೆಂಡ್ ತಂಡ ಪ್ರಕಟ

**ತಂಡ:** ಹ್ಯಾರಿ ಬ್ರೂಕ್, ರೆಹಾನ್ ಅಹ್ಮದ್, ಜೋಫ್ರಾ ಆರ್ಚರ್, ಗಸ್ ಅಟ್ಕಿನ್ಸನ್, ಟಾಮ್ ಬ್ಯಾಂಟನ್, ಜೇಕಬ್ ಬೆಥೆಲ್, ಜಾಸ್ ಬಟ್ಲರ್, ಜೇಮ್ಸ್ ಕೋಲ್ಸ್, ಸ್ಯಾಮ್ ಕರನ್, ಲಿಯಾಮ್ ಡಾಸನ್, ಬೆನ್ ಡಕೆಟ್, ವಿಲ್ ಜ್ಯಾಕ್ಸ್, ಸಕಿಬ್ ಮಹಮೂದ್, ಆದಿಲ್ ರಶೀದ್, ಜೋ ರೂಟ್ ಮತ್ತು ಜೋಶ್ ಟಂಗ್.

## ಫೈನಲ್‌ನಲ್ಲಿ ಆಸೀಸ್‌ಗೆ ಇಂಗ್ಲೆಂಡ್ ಎದುರಾಳಿ

**ಓವಲ್:** ನಾಟ್ ಸೀವರ್ ಬ್ರಂಟ್ ಅವರ ಸ್ಫೋಟಕ ಬ್ಯಾಟಿಂಗ್ ಹಾಗೂ ತಂಡದ ಸಾಂಘಿಕ ಬೌಲಿಂಗ್ ದಾಳಿಯ ನೆರವಿನೊಂದಿಗೆ ಇಂಗ್ಲೆಂಡ್ ತಂಡ ವೆಸ್ಟ್ ಇಂಡೀಸ್ ವಿರುದ್ಧ 40 ರನ್ ಗಳಿಂದ ಗೆಲುವು ಸಾಧಿಸಿದ್ದು, ಆಸ್ಟ್ರೇಲಿಯಾದೊಂದಿಗೆ ಮಹಿಳೆಯರ ಟಿ20 ವಿಶ್ವಕಪ್ ಫೈನಲ್ ಪಂದ್ಯವಾಡುವುದಕ್ಕೆ ಸಿದ್ಧವಾಗಿದೆ.

ಎರಡನೇ ಸೆಮಿಫೈನಲ್ ಪಂದ್ಯದಲ್ಲಿ ಬಿ ಗುಂಪಿನ ಮೊದಲ ಸ್ಥಾನಿ ಇಂಗ್ಲೆಂಡ್ ಹಾಗೂ ಎ ಗುಂಪಿನ ಎರಡನೇ ಸ್ಥಾನದಲ್ಲಿದ್ದ ದ.ಆಫ್ರಿಕಾ ತಂಡಗಳು ಮುಖಾಮುಖಿಯಾಗಿದ್ದವು. ಈ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಇಂಗ್ಲೆಂಡ್ 20 ಓವರ್‌ಗಳಲ್ಲಿ 5 ವಿಕೆಟ್ ನಷ್ಟಕ್ಕೆ 169 ರನ್ ಗಳಿಸಿತ್ತು. ನಾಯಕಿ ಸೀವರ್ ಬ್ರಂಟ್ ಸ್ಫೋಟಕ 75(47) ರನ್ ಗಳಿಸಿದರು. ಹೀದರ್ ನೈಟ್ 58 ರನ್ ಗಳಿಸಿದರು. ದ.ಆಫ್ರಿಕಾ ಪರ ಇಸ್ಮೈಲಿ, ಎಮ್‌ಬಾಲಾ ತಲಾ 2 ವಿಕೆಟ್ ಪಡೆದರೆ ಮಾರೀಝುನ್ ಕಾಪ್ 1 ವಿಕೆಟ್ ಪಡೆದುಕೊಂಡರು. ಗುರಿ ಬೆನ್ನತ್ತಿದ ಆಫ್ರಿಕಾ 20 ಓವರ್‌ಗಳಲ್ಲಿ 8 ವಿಕೆಟ್ ನಷ್ಟಕ್ಕೆ 128 ರನ್ ಗಳಿಸಲಷ್ಟೇ ಶಕ್ತವಾಯಿತು. ತಜ್ಮಿನ್ ಬ್ರಿಟ್ಸ್ 51 ರನ್ ಬಿಟ್ಟರೆ ಇನ್ನುಳಿದ ಯಾವುದೇ ಬ್ಯಾಟರ್‌ನಿಂದ 20+ ರನ್ ಬರಲೇ ಇಲ್ಲ, ಚಾಣಾಕ್ಷ ದಾಳಿ ಸಂಘಟಿಸಿದ ಇಂಗ್ಲೆಂಡ್ ಪರ ಲೌರೆನ್ ಬೆಲ್, ಚಾರ್ಲೀ ಡೀನ್ 2 ವಿಕೆಟ್ ಪಡೆದರೆ, ಫ್ರೇಯಾ, ಸೋಫಿ, ಸ್ಮಿತ್ ತಲಾ 1 ವಿಕೆಟ್ ಕಿತ್ತರು. ಬ್ರಂಟ್ ಪಂದ್ಯದ ಬೆಸ್ಟ್ ಬ್ಯಾಟರ್ ಅನಿಸಿದ್ದಲ್ಲದೆ, ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು. ಹೀದರ್ ಕೂಡ ಬಲಿಷ್ಠ ಸ್ಕೋರ್ ನಿರ್ಮಿಸುವಲ್ಲಿ ಇಂಗ್ಲೆಂಡ್‌ಗೆ ಆಸರೆಯಾದರು. ಅತ್ತ ಆಫ್ರಿಕಾ ಪರ ಎಮ್‌ಬಾಲಾ 25 ರನ್ ಮಾತ್ರ ನೀಡಿ 2 ವಿಕೆಟ್ ಪಡೆದು ಪಂದ್ಯದ ಬೆಸ್ಟ್ ಬೌಲರ್ ಅನಿಸಿಕೊಂಡರು. ಮುಂದಿನ ಪಂದ್ಯವು ಭಾನುವಾರ ಲಾರ್ಡ್ಸ್‌ನಲ್ಲಿ ನಡೆಯಲಿದೆ. ಐತಿಹಾಸಿಕ ಫೈನಲ್ ಪಂದ್ಯದಲ್ಲಿ ರೋಚಕತೆಯ ಮೆರುಗು ಇರುವ ಲಕ್ಷಣಗಳಿವೆ.

**ಸಂಕ್ಷಿಪ್ತ ಸ್ಕೋರ್**
ಇಂಗ್ಲೆಂಡ್ 20 ಓವರ್‌ಗಳಲ್ಲಿ 169/5: ಬ್ರಂಟ್ 75, ಹೀದರ್ 58; ಎಮ್‌ಲಾಬಾ 25/2
ದ.ಆಫ್ರಿಕಾ 20 ಓವರ್‌ಗಳಲ್ಲಿ 128/8: ಬ್ರಿಟ್ಸ್ 51; ಬೆಲ್ 28/2, ಚಾರ್ಲೀ; 31/2

- ಮಹಿಳೆಯರ ಟಿ20 ವಿಶ್ವಕಪ್
- ಆಫ್ರಿಕನ್ನರ ವಿರುದ್ಧ ಗೆದ್ದ ಆಂಗ್ಲರು

## ಸಾಯಿ ಸುದರ್ಶನ್ ಶತಕ

**ಗಾಲೆ:** ಸತತ ಎರಡನೇ ಶತಕ ಬಾರಿಸಿರುವ ಬ್ಯಾಟರ್ ಸಾಯಿ ಸುದರ್ಶನ್ ಅವರು ಭಾರತ ಎ ತಂಡಕ್ಕೆ ಮತ್ತೊಮ್ಮೆ ಆಸರೆಯಾಗಿದ್ದು ಶ್ರೀಲಂಕಾ ಎ ತಂಡದೊಂದಿಗೆ ನಡೆಯುತ್ತಿರುವ ಅನಧಿಕೃತ ಟೆಸ್ಟ್ ಪಂದ್ಯದಲ್ಲಿ ಭಾರತ ಸ್ಥಿರ ಪ್ರದರ್ಶನ ನೀಡುತ್ತಿದೆ. ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿರುವ ಶ್ರೀಲಂಕಾ 110 ಓವರ್‌ಗಳಲ್ಲಿ 336 ರನ್‌ಗಳಿಗೆ ಪತನಗೊಂಡಿದೆ. ಸಹನ್ 127 ರನ್ ಗಳಿಸಿದ್ದರು. ಅಂಜಲಾ 42 ರನ್ ಗಳಿಸಿದರು. ಭಾರತ ಪರ ಗುರ್ನೂರ್, ಸರಾಂಶ್ ತಲಾ 4 ವಿಕೆಟ್ ಕಿತ್ತರು. ಈ ರನ್‌ಗಳನ್ನು ಬೆನ್ನತ್ತಿರುವ ಭಾರತ ಎ ತಂಡ ದಿನದಾಟದಂತ್ಯಕ್ಕೆ 1 ವಿಕೆಟ್ ಕಳೆದುಕೊಂಡು 247 ರನ್ ಗಳಿಸಿದೆ. 184 ಬಾಲ್‌ಗಳಲ್ಲಿ ಸಾಯಿ ಸುದರ್ಶನ್ 104 ರನ್ ಗಳಿಸಿ ಬ್ಯಾಟಿಂಗ್ ಮಾಡುತ್ತಿದ್ದಾರೆ. ದೇವದತ್ತ ಪಡಿಕ್ಕಲ್ 151 ಬಾಲ್‌ಗಳಲ್ಲಿ 94 ರನ್ ಗಳಿಸಿ ಬ್ಯಾಟಿಂಗ್ ಮಾಡುತ್ತಿದ್ದಾರೆ.

## ಲಾಸ್ ಏಂಜಲೀಸ್‌ನಲ್ಲಿ ನೈಟ್ ರೈಡರ್ಸ್ ಕ್ರೀಡಾಂಗಣ

**ಲಾಸ್ ಏಂಜಲೀಸ್:** ನಟ ಶಾರುಖ್ ಖಾನ್ ಅಮೆರಿಕದ ಪೊಮೊನಾದಲ್ಲಿ ಕ್ರಿಕೆಟ್ ಮೈದಾನವೊಂದನ್ನು ಉದ್ಘಾಟಿಸಿದರು. ತಮ್ಮದೇ ಮಾಲೀಕತ್ವದಲ್ಲಿ ಎಲ್ ಎ ನೈಟ್ ರೈಡರ್ಸ್ ಕ್ರೀಡಾಂಗಣ ಎಂಬ ಹೆಸರಿನಲ್ಲಿ ಉದ್ಘಾಟಿಸಿದ ಈ ಕ್ರೀಡಾಂಗಣ 2028ರ ಲಾಸ್ ಏಂಜಲೀಸ್ ಒಲಿಂಪಿಕ್ಸ್‌ನಲ್ಲಿ ಪ್ರಮುಖ ಪಾತ್ರ ವಹಿಸಲಿದೆ.

ಶತಕದನಂತರ ಒಲಿಂಪಿಕ್ಸ್‌ಗೆ ಕ್ರಿಕೆಟ್ ಮರಳಿದ್ದು ನಾರ್ಥ್ ಅಮೆರಿಕದಲ್ಲಿರುವ ನೈಟ್ ರೈಡರ್ಸ್ ಕ್ರೀಡಾಂಗಣವು ಮುಂಬರಲಿರುವ ದಿನಗಳಲ್ಲಿ ವಿವಿಧ ಪಂದ್ಯಾವಳಿಗಳನ್ನು ಆಯೋಜಿಸಲಿದೆ. ಈ ಬಗ್ಗೆ ಸಾಮಾಜಿಕ ಜಾಲತಾಣ ಪೋಸ್ಟ್‌ನಲ್ಲಿ ಮಾಹಿತಿ ಹಂಚಿಕೊಂಡಿರುವ ಶಾರುಖ್ ಖಾನ್, ನನ್ನ ಕನಸೊಂದು ಈಗ ನನಸಾಗಿದೆ. ನೈಟ್ ರೈಡರ್ಸ್ ಕ್ರೀಡಾಂಗಣಕ್ಕೆ ನಿಮ್ಮೆಲ್ಲರಿಗೂ ಸ್ವಾಗತ. ಜಯ್ ಶಾ, ಐಸಿಸಿಗೆ ವಿಶೇಷ ಕೃತಜ್ಞತೆಗಳು. ಕ್ರೀಡಾಂಗಣ ವಿಶ್ವ ಕ್ರಿಕೆಟ್ ಅಭಿಮಾನಿಗಳಿಗಾಗಿ ನಿರ್ಮಿಸಲಾಗಿದೆ ಎಂದು ಬರೆದುಕೊಂಡಿದ್ದಾರೆ.



## 32ರ ಸುತ್ತಿಗೆ ಸಿನ್ನರ್, ಜೊಕೊವಿಚ್

**ವಿಂಬಲ್ಡನ್:** ಹಾಲಿ ಚಾಂಪಿಯನ್ ಯಾನಿಕ್ ಸಿನ್ನರ್, ಅನುಭವಿ ನೋವಾಕ್ ಜೊಕೊವಿಚ್ ಅವರು ಪ್ರತಿಷ್ಠಿತ ವಿಂಬಲ್ಡನ್ ಗ್ರ್ಯಾಂಡ್‌ಸ್ಲಾಮ್ ಪಂದ್ಯಾವಳಿಯ 32ರ ಸುತ್ತಿಗೆ ಪ್ರವೇಶಿಸಿದರು.

ಕಳೆದ ಬಾರಿ ಚಮತ್ಕಾರದ ಮೂಲಕ ಚಾಂಪಿಯನ್ ಪಟ್ಟಕ್ಕೇರಿದ್ದ ಯಾನಿಕ್ ಸಿನ್ನರ್ ಭರ್ಜರಿ ಗೆಲುವು ಸಾಧಿಸಿದರೆ, ಅತ್ತ ನೋವಾಕ್ ಜೊಕೊವಿಚ್ ಅಲ್ಪ ಹೋರಾಟ ನಡೆಸಿ ಜಯ ಸಾಧಿಸಿದರು. ಅಮೆರಿಕದ ಪೇಗುಲಾ, ಜೋವಿಕ್ ಹಾಗೂ ಜಪಾನ್‌ನ ಒಸಾಕಾ ಗೆಲುವು ದಾಖಲಿಸಿ ಮುನ್ನಡೆದರು.

ಪುರುಷರ ಸಿಂಗಲ್ಸ್ ವಿಭಾಗದಲ್ಲಿ ಬ್ರೂಕ್ಸ್ಬಿ ಅವರನ್ನು ಎದುರಿಸಿದ್ದ ಯಾನಿಕ್ ಸಿನ್ನರ್ ಆರಂಭದಿಂದಲೂ ಉತ್ತಮ ಪ್ರದರ್ಶನ ನೀಡಿದರು. ಮೊದಲನೇ ಸೆಟ್‌ನಿಂದಲೇ ಯಾನಿಕ್ ಸಿನ್ನರ್ ಆಕ್ರಮಣಕಾರಿ ಪ್ರದರ್ಶನ ನೀಡಲಾರಂಭಿಸಿದರು. ಏಸ್ ಅಂಕಗಳಿಂದಲೇ ಮುನ್ನಡೆ ಪಡೆದುಕೊಂಡ ಸಿನ್ನರ್ ಸರ್ವ್ ಪಾಯಿಂಟ್ ಮೇಲೂ ಗಮನ ಹರಿಸಿದರು. ಎರಡು ಬಾರಿ ಡಬಲ್ ಫಾಲ್ಟ್ ಮಾಡಿಕೊಂಡ ಸಿನ್ನರ್ ಮೊದಲನೇ ಸೆಟ್ ಅನ್ನು 6-4ರಿಂದ ಗೆದ್ದರು. ಎರಡನೇ ಸೆಟ್‌ನಲ್ಲೂ ಸಿನ್ನರ್ ಆಟ ಮುಂದುವರೆಯಿತು. ಅದೇ ಆಟದೊಂದಿಗೆ ಕಟ್ಟಿ ಹಾಕಿದ ಸಿನ್ನರ್ 6-4ರಿಂದಲೇ ಗೆದ್ದು ಭರ್ಜರಿ ಮುನ್ನಡೆ ಸಾಧಿಸಿದರು. ಮೂರನೇ ಸೆಟ್‌ನಲ್ಲಿ ಎದುರಾಳಿ ಜೆನ್ಸನ್ ಅಲ್ಪ ಪ್ರತಿರೋಧ ತೋರಿದರು. ಆದಾಗ್ಯೂ ಸಿನ್ನರ್ 6-4ರಿಂದ ಗೆಲುವು ದಾಖಲಿಸಿದರು.

ಅತ್ತ ಮತ್ತೊಂದು ಪಂದ್ಯದಲ್ಲಿ ಜೊಕೊವಿಚ್, ಅರ್ಥರ್ ಅವರನ್ನು ಎದುರಿಸಿದ್ದರು. ಮೊದಲನೇ ಸೆಟ್‌ನಲ್ಲಿ ತೀವ್ರ ಪೈಪೋಟಿ ನಡೆಯಿತು. ಆದಾಗ್ಯೂ ಜೊಕೊವಿಚ್ ಅದನ್ನು 7-5ರಿಂದ ಗೆಲುವು ಸಾಧಿಸಿದರು. ಎರಡನೇ ಸೆಟ್‌ನಲ್ಲಿ 6-4ರಿಂದ ಗೆಲುವು ಸಾಧಿಸಿದರು. ಮೂರನೇ ಸೆಟ್‌ನಲ್ಲಿ ಕಂಬ್ಯಾಕ್ ಮಾಡಿದ ಅರ್ಥರ್ 6-1ರಿಂದ ಗೆದ್ದರು. ಅಲ್ಲದೆ, ನಾಲ್ಕನೇ ಸೆಟ್‌ನಲ್ಲಿ ಪ್ರಖರ ಪ್ರದರ್ಶನದೊಂದಿಗೆ ಪೈಪೋಟಿ ಕೊಟ್ಟರು. ಆದರೆ ಜೊಕೊವಿಚ್ 7-6ರಿಂದ ಗೆಲುವು ಸಾಧಿಸಿ ಮುನ್ನಡೆದರು. ಮಹಿಳೆಯರ ವಿಭಾಗದಲ್ಲಿ ಪೇಗುಲಾ 6-1, 6-3ರಿಂದ ಬೌಝ್ಕೂಸ್ ಅವರೊಂದಿಗೆ ಗೆದ್ದರು. ಜೋವಿಕ್, ಅಲೆಕ್ಸಾಂಡ್ರೋವಾ ವಿರುದ್ಧ 6-3, 3-6, 6-4 ರಿಂದ ಗೆದ್ದು ಮುನ್ನಡೆದರು.

## ಗುಲ್ಬರ್ಗಾ ಮಿಸ್ಟಿಕ್ಸ್ ವಿರುದ್ಧ ಮೈಸೂರು ತಂಡಕ್ಕೆ ಜಯ

ವಿಜಯಕುಮಾರ ಬೆಳ್ಳೇರಿಮಠ

**ಹುಬ್ಬಳ್ಳಿ:** ರಿತೇಶ್ ಭಟ್ಕಳ( 75ರ, 42ಎ, 4 ಹಿ4,5ಹಿ6) ಅವರ ಅನುಭವದ ಬ್ಯಾಟಿಂಗ್ ನೆರವಿನೊಂದಿಗೆ ಮೈಸೂರು ವಾರಿಯರ್ಸ್ ತಂಡವು ಗುಲ್ಬರ್ಗಾ ಮಿಸ್ಟಿಕ್ಸ್ ತಂಡದ ವಿರುದ್ಧ 3 ವಿಕೆಟ್‌ಗಳ ಸುಲಭ ಜಯ ಸಾಧಿಸಿತು.

ಈ ಮೂಲಕ ಮನೀಶ್ ಪಾಂಡೆ ನೇತೃತ್ವದ ಗುಲ್ಬರ್ಗ ತಂಡ ಪ್ಲೇ ಆಫ್ ಹಾದಿ ಮತ್ತಷ್ಟು ಕಠಿಣವಾಯಿತು. ಈ ಮೂಲಕ 7 ಅಂಕಗಳಿಸಿ ಕೊನೆಯಿಂದ ನಾಲ್ಕನೇ ಸ್ಥಾನಕ್ಕೇರಿತು.

ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಗುಲ್ಬರ್ಗಾ ಮಿಸ್ಟಿಕ್ಸ್ 20 ಓವರ್‌ಗಳಲ್ಲಿ 7 ವಿಕೆಟ್ ನಷ್ಟಕ್ಕೆ 196 ರನ್ ಗಳಿಸಿತು. ಮಧ್ಯಮ ಕ್ರಮಾಂಕದ ಧ್ರುವ್ 51, ತಿಪ್ಪಾ ರೆಡ್ಡಿ 51 ಮತ್ತು ಮನೀಶ್ ಪಾಂಡೆ 41★ ರನ್ ಗಳಿಸಿದರು. ಮೈಸೂರು ಪರ ಲವೀಶ್ ಹಾಗೂ ಅರ್ವಿಂದ್ ತಲಾ 3 ವಿಕೆಟ್ ಕಿತ್ತರು. ಗುರಿ ಬೆನ್ನತ್ತಿದ ಮೈಸೂರು 19.3 ಓವರ್‌ಗಳಲ್ಲೇ 7 ವಿಕೆಟ್ ನಷ್ಟಕ್ಕೆ 197 ರನ್ ಗಳಿಸಿ ಪಂದ್ಯ ಗೆದ್ದಿತು. ರಿತೇಶ್ ಭಟ್ಕಳ್ 42 ಬಾಲ್‌ಗಳಲ್ಲಿ ಅಜೇಯ 75 ರನ್ ಗಳಿಸಿದರು. ಲಂಕೇಶ್ 29, ಮನೋಜ್ 24 ರನ್ ಗಳಿಸಿದರು. ಗುಲ್ಬರ್ಗಾ ಪರ ನಾಥನ್ 3, ಪಾರಸ್ ಹಾಗೂ ರೋನಿತ್ ತಲಾ 2 ವಿಕೆಟ್ ಪಡೆದರು. ಗುಲ್ಬರ್ಗ ತಂಡದ 197 ರನ್ ಗುರಿ ಬೆನ್ನತ್ತಿದ ಮೈಸೂರು ತಂಡವೂ ಆರಂಭದಲ್ಲಿ 3 ವಿಕೆಟ್ ಕಳೆದುಕೊಂಡಿತು. ಬಳಿಕ ರಿತೇಶ ಭಟ್ಕಳ ಅಬ್ಬರಿಸಿದರು. 27 ಬಾಲ್‌ಗೆ ಆಕರ್ಷಕ ಅರ್ಧ ಶತಕ ಗಳಿಸಿದರು. ಮಧ್ಯಮ ಕ್ರಮಾಂಕದ ಬ್ಯಾಟರ್ ಲಂಕೇಶ್ ಕೆ.ಎಸ್.(29) ಅವರು ರಿತೇಶಗೆ ಸಾಥ್ ನೀಡಿದರು. ಕೊನೆಯಲ್ಲಿ ಮನೋಜ್ ಭಾಂಡ್ಗೆ ಕೂಡ ಉತ್ತಮ ಬ್ಯಾಟಿಂಗ್‌ನೊಂದಿಗೆ ಮಿಂಚಿದರು. ಪರಿಣಾಮ ಪಂದ್ಯ ಮೈಸೂರು ಕಡೆ ಸಾಗಿತು. ನಾಥನ್ 38ಕ್ಕೆ 3 ವಿಕೆಟ್ ಪಡೆದರು.

ಇದಕ್ಕೂ ಮೊದಲು ಬ್ಯಾಟಿಂಗ್ ಮಾಡಿದ ಗುಲ್ಬರ್ಗಾ ತಂಡಕ್ಕೆ ಆರಂಭದಲ್ಲಿ (24ಕ್ಕೆ2) ಆಘಾತವಾಗಿತು. ಧ್ರುವ್ ಪ್ರಭಾಕರ, ತಿಪ್ಪಾ ರೆಡ್ಡಿ ಇವರಿಬ್ಬರ ಆಕರ್ಷಕ ಅರ್ಧ ಶತಕ ಹಾಗೂ ಮನೀಶ್ ಪಾಂಡೆ(41ರ) ಸ್ಫೋಟಕ ಬ್ಯಾಟಿಂಗ್‌ನಿಂದ ತಂಡ ಮೊತ್ತ ಹೆಚ್ಚಿತು.



ಚಿತ್ರ: ಮಂಜುನಾಥ ಜರತಾರಘರ

**ಸಂಕ್ಷಿಪ್ತ ಸ್ಕೋರ್**
ಗುಲ್ಬರ್ಗಾ: 196/7(20): ಧ್ರುವ್ ಪ್ರಭಾಕರ 51, ತಿಪ್ಪಾ ರೆಡ್ಡಿ 51; ಅರ್ವಿಂದ್ 31/3, ಲವಿಶ್ ಕುಶಾಲ್ 35/03
ಮೈಸೂರ: 197/7(19.3): ರಿತೇಶ್ 75★, ಲಂಕೇಶ್ 29; ನಾಥನ್ 38/3

## ಪದಬಂಧ

ರಾಜಾ ಸಂಗಮೇಶ ಹಿರೇಮಠ



**6034**

ಎಡದಿಂದ ಬಲಕ್ಕೆ
1. ಕರ್ನಾಟಕದ ದೊಡ್ಡ ವಿದ್ಯುತ್ ಯೋಜನೆಯ ನದಿ (4)
4. ಕಾಲಿಗೆ ಕಟ್ಟಿಕೊಳ್ಳುವ ದೊಡ್ಡ ಗೆಜ್ಜೆಯ ಆಭರಣ (3)
6. ಸ್ಥಳ ಪುರಾಣವನ್ನು ಹೀಗೂ ಹೇಳುತ್ತೇವೆ (3)
7. ನೈತಿಕವಾಗಿ ಅಧಃಪತನ ಹೊಂದಿದವನು (3)
9. ''ಇದನ್ನೂ ಸೇರಿಸಿ'' ಎನ್ನುವ ಬರಹದ ಗುರುತು (4)
10. ಹತ್ತಿರಕ್ಕೆ ಬರುವ-ಸಮೀಪಿಸು ಎಂಬರ್ಥದ ಶಬ್ದ (4)
11. ''ಟೊಂಕ'' ಎಂಬ ಪಾರ್ಸಿ ಮೂಲದ ಶಬ್ದ (3)
14. ಆಡ್ಡಾಡುವುದು-ಪ್ರಯಾಣವಿದು (3)
16. ಖಾಲಿ ಮಾಡಿದ ಜಾಗ-ಎಡೆ (3)
17. ಇದು ಸತ್ಯವಾದ ಮಾತು (4)

ಮೇಲಿನಿಂದ ಕೆಳಕ್ಕೆ
1. ಕಸುವು-ಬಲ ಎಂಬರ್ಥದ ಶಬ್ದ (3)
2. ''ಭೂವೈಕುಂಠ'' ಎಂದು ಕರೆಯಲ್ಪಡುವ ಧಾರ್ಮಿಕ ಕ್ಷೇತ್ರ (4)
3. ನದಿಗಳು ಸೇರುವ ಸ್ಥಳ (3)
5. ಶೋಷಣೆ ಮಾಡು ಎಂಬರ್ಥದ ನುಡಿಗಟ್ಟು (4)
7. ಮಾಡಿದ ಸಾಧನೆಗಾಗಿ ನೀಡುವ ಗೌರವದ ಗುರುತು (3)
8. ಪಿಂಚಣಿಗಾಗಿ ಅಲೆದಾಡಿದ ಪೂಚಂತೇ ಅವರ ಕಥೆಯ ಪಾತ್ರ (3)
9. ತರಾಸು ಕಾದಂಬರಿಯಾಧಾರಿತ ಜಿ.ವಿ.ಅಯ್ಯರ್ ನಿರ್ದೇಶಿತ ಚಿತ್ರ (4)
12. ಒರಿಸ್ಸಾದ ಕಣ್ಣೀರಿನ ಹೊಳೆಯಿದು (4)
13. ಮರದಿಂದ ತಯಾರಿಸಿದ ಪಾದರಕ್ಷೆ (3)
15. ಮನೆಯ ಮುಂಭಾಗದ ವಿಶಾಲ ಕೋಣೆ (3)

**6033 ಉತ್ತರ**

ಎಡದಿಂದ ಬಲಕ್ಕೆ:
1. ಉತ್ಸಾಹ 3. ಭಕ್ತಪ್ರಹ್ಲಾದ
5. ಗುಜರಾತ 8. ನೆಪ
9. ಪರಿವಾರ 10. ಅನುಮಾನ
11. ಪಂಪ 13. ಕಸರತ್ತು
16. ಕಣ್ಣುಹಾಯಿಸು
17. ಆಯಾಸ

ಮೇಲಿನಿಂದ ಕೆಳಕ್ಕೆ:
1. ಉತ್ಪಾದನೆ 2. ಹಡಗು
3. ರಾಸಭ 4. ದರಕಾರ
6. ಜಲಜನಕ 7. ತಪನಕರ
10. ಅನಾಮಿಕ
12. ಪರಿಹಾಸ 14. ಸಹಿಸು
15. ಆಪತ್ತು

## ಉನ್ನತ ಮಟ್ಟದ ತನಿಖೆಗೆ ಸಹೋದರಿ ಆಗ್ರಹ



• **ಬೀದರ್:** ಹೈದರಾಬಾದ್‌ನ ಆಸಿಫ್ ನಗರದಲ್ಲಿ ಬೀದರ್ ಜಿಲ್ಲೆಯ ಔರಾದ್ ತಾಲೂಕಿನ ಯುವಕನೊಬ್ಬ ಅನುಮಾನಾಸ್ಪದ ರೀತಿಯಲ್ಲಿ ಮೃತಪಟ್ಟಿದ್ದು, ಇದು ಪತ್ನಿಯೇ ಮಾಡಿದ ಕೊಲೆ ಎಂದು ಮೃತನ ಸಹೋದರಿ ಪಲ್ಲವಿ ತಿಪ್ಪಿರ್ ಆರೋಪಿಸಿ, ಉನ್ನತ ಮಟ್ಟದ ತನಿಖೆಗೆ ಆಗ್ರಹಿಸಿದ್ದಾರೆ.

ಈ ಕುರಿತು ನಗರದ ಜಿಲ್ಲಾ ಪತ್ರಿಕಾ ಭವನದಲ್ಲಿ ಶುಕ್ರವಾರ ಪತ್ರಿಕಾಗೋಷ್ಠಿ ಉದ್ದೇಶಿಸಿ ಮಾತನಾಡಿರುವ ಅವರು, ಮೃತ ಯುವಕನನ್ನು ಔರಾದ್ ತಾಲೂಕಿನ ಮಣಿಗೆಂಪೂರ ಗ್ರಾಮದ ದತ್ತಾತ್ರಿ ಕರಬಸಪ್ಪ ಲದ್ದೆ ಎಂದು ಗುರುತಿಸಲಾಗಿದೆ.

ಈತ ಮಾರ್ಚ್ 24, 2026ರಂದು ಹೈದರಾಬಾದ್‌ನ ಆಸಿಫ್ ನಗರದ ಯಾದವ ಬಸ್ತಿಯಲ್ಲಿರುವ ತನ್ನ ನಿವಾಸದಲ್ಲಿ ಸಾವಿಗೀಡಾಗಿದ್ದ. ಪತ್ನಿ ನೀಲಾಂಬಿಕಾ ನೀಡಿದ ದೂರಿನ ಮೇರೆಗೆ ಆಸಿಫ್ ನಗರ ಠಾಣೆಯ ಪೊಲೀಸರು ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾನೆ ಎಂದು ಎಫ್‌ಐಆರ್ ದಾಖಲಿಸಿದ್ದಾರೆ. ಆದರೆ, ಇದು ಆತ್ಮಹತ್ಯೆಯಲ್ಲ, ವ್ಯವಸ್ಥಿತ ಕೊಲೆ ಎಂದು ಪಲ್ಲವಿ ಗಂಭೀರ ಆರೋಪ ಮಾಡಿದ್ದಾರೆ.

ಮೃತನ ಕುತ್ತಿಗೆಯ ಕೆಳಭಾಗದಲ್ಲಿ ಹಾಗೂ ಮೈಮೇಲೆ ಭಾರೀ ರಕ್ತಗಾಯಗಳು ಮತ್ತು ಹಲ್ಲೆನಡೆಸಿದ ಗುರುತುಗಳಿದ್ದು, ಇದು ನೇಣು ಹಾಕಿಕೊಂಡ ಸಾವಲ್ಲ ಎಂಬುದು ಲಭ್ಯವಿರುವ ಫೋಟೋಗಳಿಂದ ಸ್ಪಷ್ಟವಾಗುತ್ತದೆ ಎಂದು ಆರೋಪಿಸಿದರು.

ಘಟನೆ ನಡೆದ ದಿನ (ಮಾ. 24) ರಾತ್ರಿ 11:22 ರಿಂದ 11:37 ರವರೆಗಿನ ಸುಮಾರು 15 ನಿಮಿಷ ಮನೆಯಿದ್ದ ಬಿಲ್ಡಿಂಗ್‌ನ ಸಿಸಿಟಿವಿ ಕ್ಯಾಮೆರಾವನ್ನು ಉದ್ದೇಶ ಪೂರ್ವಕವಾಗಿ ಆಫ್ ಮಾಡಲಾಗಿತ್ತು. ಇದೇ ಅವಧಿಯಲ್ಲಿ ಕೃತ್ಯ ನಡೆದಿರುವ ಶಂಕೆ ವ್ಯಕ್ತವಾಗಿದೆ. ಈ ಕೃತ್ಯ ನಡೆದ ಕೆಲವೇ ಕ್ಷಣಗಳಲ್ಲಿ ಶವ ತೆಗೆದುಕೊಂಡು ಹೋದ ಪೊಲೀಸರು, ಸಂಬಂಧಿಕರಿಗೆ ಮಾಹಿತಿ ನೀಡದೆ ಶವ ಪರೀಕ್ಷೆ ನಡೆಸಿರುವುದು ಪೊಲೀಸರ ಮೇಲೂ ಅನುಮಾನ ಮೂಡುವಂತೆ ಮಾಡಿದೆ. ಇದು ಸುವ್ಯವಸ್ಥಿತ ಕೊಲೆ ಎಂದು ಪಲ್ಲವಿ ಕಣ್ಣೀರಿಟ್ಟಿದ್ದಾರೆ.

ಮೃತ ದತ್ತಾತ್ರಿ ವಿವಿಧೆಡೆ ಕೆಲಸ ಮಾಡಿ ಸಂಪಾದಿಸಿದ್ದ ಸುಮಾರು 6.80 ಲಕ್ಷ ರೂ. ಹಣವು ಆತನ ಸಾವಿನ ಸುತ್ತಮುತ್ತಲ ಅವಧಿಯಲ್ಲಿ ಪತ್ನಿ ನೀಲಾಂಬಿಕಾಳ ಸ್ನೇಹಿತರ ಖಾತೆಗಳಿಗೆ ವರ್ಗಾವಣೆಯಾಗಿದೆ. ಜೊತೆಗೆ ಆಕೆಯು ಮನೆಯಲ್ಲಿದ್ದ ಚಿನ್ನಾಭರಣಗಳನ್ನು ತೆಗೆದುಕೊಂಡು ಹೋಗಿದ್ದಾಳೆ.

ಪತ್ನಿಯು ಪೊಲೀಸರಿಗೆ 15 ಲಕ್ಷ ರೂ. ಹಾಗೂ ಮಾಧ್ಯಮಗಳಿಗೆ 25 ಲಕ್ಷ ರೂ. ಸಾಲವಿತ್ತು ಎಂದು ತದ್ವಿರುದ್ಧ ಹೇಳಿಕೆಗಳನ್ನು ನೀಡುತ್ತಿದ್ದು, ವಾಸ್ತವದಲ್ಲಿ ಮೃತನಿಗೆ ಯಾವುದೇ ಸಾಲವಿರಲಿಲ್ಲ ಎಂದು ಸಹೋದರಿ ಸ್ಪಷ್ಟಪಡಿಸಿದ್ದಾರೆ. ಮೃತನ ತಾಯಿ ಸಂಗಮ್ಮ, ತಂದೆ ಕರಬಸಪ್ಪ, ಚಿಕ್ಕಮ್ಮ ಭಾಗ್ಯಶ್ರೀ, ಚಿಕ್ಕಪ್ಪ ವಿಶ್ವನಾಥ ಕಾರಂಜಿ, ಸಂಬಂಧಿಕರಾದ ರಾಜಕುಮಾರ ನೌಬಾದ ಹಾಗೂ ಇತರರು ಇದ್ದರು.

» ಹೈದರಾಬಾದ್‌ನಲ್ಲಿ ಬೀದರ್ ಯುವಕನ ಅನುಮಾನಾಸ್ಪದ ಸಾವು
» ಪತ್ನಿಯಿಂದಲೇ ಕೊಲೆ, ಆರೋಪ

## ಮಂಗಳೂರು ವಿರುದ್ಧ ಶಿವಮೊಗ್ಗ ತಂಡಕ್ಕೆ ಜಯ




• **ಹುಬ್ಬಳ್ಳಿ:** ನಾಯಕ ಸ್ಮರಣ್ ಆರ್ ಮತ್ತು ಅನೀಶ್ ಕೆ.ವಿ ಅವರ ಶತಕದ ಜತೆಯಾಟದ (125 ರನ್, 75 ಎ) ಬಲದಿಂದ ಶಿವಮೊಗ್ಗ ಯೋಧಾಸ್ ತಂಡವು 7 ವಿಕೆಟ್‌ಗಳಿಂದ ಕೋಸ್ಟಲ್ ಕಿಂಗ್ಸ್ ಮಂಗಳೂರು ತಂಡವನ್ನು ಮಣಿಸಿತು. ಈ ಗೆಲುವಿನೊಂದಿಗೆ ಶಿವಮೊಗ್ಗ ತಂಡವು ಪಾಯಿಂಟ್ ಪಟ್ಟಿಯಲ್ಲಿ ಎರಡನೇ ಸ್ಥಾನಕ್ಕೇರಿತು.

ಗುರುವಾರ ಎರಡನೇ ಪಂದ್ಯದಲ್ಲಿ ಮಂಗಳೂರು ಒಡ್ಡಿದ 163 ರನ್‌ಗಳ ಗುರಿ ಬೆನ್ನತ್ತಿದ ಶಿವಮೊಗ್ಗ ತಂಡವು 18.2 ಓವರ್‌ಗಳಲ್ಲಿ 165 ರನ್ ಗಳಿಸಿ ಸುಲಭವಾಗಿ ಜಯಿಸಿತು. ಅನೀಶ್ (ಔಟಾಗದೆ 76 ರನ್, 46 ಎ, 4 ಗಿ 8, 6 ಗಿ 2) ಮತ್ತು ಸ್ಮರಣ್ (ಔಟಾಗದೆ 53 ರನ್, 32 ಎ, 4 ಗಿ 6, 6 ಗಿ 2) ಅರ್ಧಶತಕ ಗಳಿಸಿ ಜಯ ತಂದು ಕೊಟ್ಟರು.

ಇದಕ್ಕೂ ಮುನ್ನ ಬ್ಯಾಟಿಂಗ್ ಮಾಡಿದ ಮಂಗಳೂರು ತಂಡದ ಆರಂಭ ಉತ್ತಮವಾಗಿರಲಿಲ್ಲ. ನಾಯಕ ಕರುಣ್ ನಾಯರ್, ಆಲ್ ರೌಂಡರ್ ಶ್ರೇಯಸ್ ಗೋಪಾಲ್ ಖಾತೆ ತೆರೆಯದೆ ನಿರ್ಗಮಿಸಿದರು. ಆರಂಭಿಕ ಆಟಗಾರ ನಿಕಿನ್ ಜೋಸ್ (51 ರನ್, 41 ಎ) ಅರ್ಧಶಕ ಗಳಿಸಿ ತಂಡ ಅಲ್ಪ ಮೊತ್ತಕ್ಕೆ ಕುಸಿಯದಂತೆ ನೋಡಿಕೊಂಡರು. ಸೂರಜ್ ಅಹುಜಾ (39 ರನ್, 19 ಎ) ಮಿಂಚಿದರು.

### ಸಂಕ್ಷಿಪ್ತ ಸ್ಕೋರ್

**ಕೋಸ್ಟಲ್ ಕಿಂಗ್ಸ್ ಮಂಗಳೂರು: 20 ಓವರ್‌ಗಳಲ್ಲಿ 7 ವಿಕೆಟ್‌ಗೆ 162 (ನಿಕಿನ್ ಜೋಸ್ 51, ಸೂರಜ್ ಅಹುಜಾ 39; ಶ್ರೀಷ ಆಚಾರ್ 23ಕ್ಕೆ2, ಧನುಷ್ ಗೌಡ 33ಕ್ಕೆ 2).**
**ಶಿವಮೊಗ್ಗ ಯೋಧಾಸ್: 18.2 ಓವರ್‌ಗಳಲ್ಲಿ 3 ವಿಕೆಟ್‌ಗೆ 165 (ಅನೀಶ್ ಕೆ.ವಿ ಔಟಾಗದೆ 76, ಸ್ಮರಣ್ ಆರ್. ಔಟಾಗದೆ 53; ನಿಶ್ಚಿತ್ ಪೈ 35ಕ್ಕೆ 2). ಪಂದ್ಯದ ಆಟಗಾರ: ಅನೀಶ್ ಕೆ.ವಿ**

## ಕೃಷ್ಣಾ ನದಿಗೆ ಬಿದ್ದ ವಾಹನ ಮೇಲೆತ್ತುವಲ್ಲಿ ಯಶಸ್ವಿ
# ಚಾಲಕನ ಮೃತದೇಹ ಪತ್ತೆ

• **ಬೀಳಗಿ:** ತಾಲೂಕಿನ ಕೊರ್ತಿ-ಕೋಲಾರ ಸೇತುವೆ ಮೇಲೆ ಕೋಲ್ಹಾರ ಕಡೆಗೆ ಹೊರಟಿದ್ದ ಕಾರ್ ಗಾಡಿಯನ್ನು ಹಿಂದಿಕ್ಕಲು (ಓವರ್‌ಟೇಕ್) ಹೋಗಿ ಟಿಪ್ಪರ ಕಾರ್ ಗಾಡಿಗೆ ಗುದ್ದಿ ಚಾಲಕನ ನಿಯಂತ್ರಣ ತಪ್ಪಿ ಎನ್‌ಎಚ್-218ರ ಬ್ರಿಜ್ ತಡೆಗೋಡೆ ಮುರಿದು ಸೇತುವೆ ಮೇಲಿಂದ ಟಿಪ್ಪರ್ ಕೃಷ್ಣಾ ನದಿಯಲ್ಲಿ ಬಿದ್ದು ಚಾಲಕ ಮೃತಪಟ್ಟು, ಕ್ಲೀನರ್‌ನನ್ನು ರಕ್ಷಣೆ ಮಾಡಲಾಗಿತ್ತು.

ಬೀಳಗಿ ಪೊಲೀಸರು ಮತ್ತು ಅಗ್ನಿಶಾಮಕ ಇಲಾಖೆ ಮೃತಪಟ್ಟ ಟಿಪ್ಪರ್ ಚಾಲಕನ ಮೃತದೇಹ ಪತ್ತೆಗಾಗಿ ಗುರುವಾರ ಕಾರ್ಯಾಚರಣೆ ಮಾಡಿದ್ದರು. 50 ಟನ್ ಭಾರ ಹೊರುವ ಕ್ರೇನ್ ಮೂಲಕ ಟಿಪ್ಪರ ವಾಹನವನ್ನು ಮೇಲೆ ತಂದರೂ ಬ್ರಿಡ್ಜ್ ರಸ್ತೆ ಮೇಲೆ ಇಳಿಸಲು ವಿಫಲವಾದ ಕಾರಣ ಕತ್ತಲು ಆವರಿಸುತ್ತಿದ್ದಂತೆ ಕಾರ್ಯಾಚರಣೆಯನ್ನು ಸ್ಥಗಿತಗೊಳಿಸಲಾಗಿತ್ತು. ಶುಕ್ರವಾರ ಡಿವೈಎಸ್‌ಪಿ ಗಜಾನನ ಸುತಾರ ಮತ್ತು ಸಿಪಿಐ ಹನುಮಂತ ಸಣಮನಿ ನೇತೃತ್ವದಲ್ಲಿ ಮತ್ತೆ 80 ಟನ್ ಭಾರ ಹೊರುವ ಕ್ರೇನನ್ನು ವಿಜಯಪುರದಿಂದ ತರಿಸಿ ಕಾರ್ಯಾಚರಣೆ ಆರಂಭಿಸಿದರು. ಒಂದು ಗಂಟೆ ರಾಷ್ಟ್ರೀಯ ಹೆದ್ದಾರಿ-218ನ್ನು ಬಂದ್ ಮಾಡಿ ಸಾಕಷ್ಟು ಮುಂಜಾಗ್ರತೆ ವಹಿಸಿ ಕ್ರೇನ್ ಸಹಾಯದ ಮೂಲಕ ಟಿಪ್ಪರ್ ವಾಹನವನ್ನು ಕೃಷ್ಣಾ ನದಿಯಿಂದ ಎತ್ತಿ ಬ್ರಿಡ್ಜ್ ರಸ್ತೆ ಮೇಲೆ ಇಳಿಸುವಲ್ಲಿ ಯಶಸ್ವಿಯಾದರು. ಮೃತದೇಹವನ್ನು ವಾಹನದಿಂದ ಹೊರತರಲು ಸಿಬ್ಬಂದಿ ಹರಸಾಹಸ ಮಾಡಬೇಕಾಯಿತು. ಬಾಗಲಕೋಟೆ ತಾಲೂಕಿನ ಬೆಣ್ಣೂರ ಗ್ರಾಮದ ಟಿಪ್ಪರ ಚಾಲಕ ಸಂತೋಷ ಕೋಟಿ (35) ಮೃತದೇಹವನ್ನು ಟಿಪ್ಪರದಿಂದ ಹೊರತೆಗೆದು ಶವಪರೀಕ್ಷೆಗಾಗಿ ಸಾಗಿಸಲಾಯಿತು.

ಬೀಳಗಿ ಪೊಲೀಸ್ ಠಾಣೆಯಲ್ಲಿ ಈ ಕುರಿತು ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡಿರುವರು.

### ಗಾಂಜಾ ಸೇವಿಸುತ್ತಿದ್ದ ಇಬ್ಬರ ಬಂಧನ

• **ಭಟ್ಕಳ :** ಮುರ್ಡೇಶ್ವರದ ನಾಕಾ ಹತ್ತಿರದ ಬಸ್ ನಿಲ್ದಾಣದ ಸನಿಹದಲ್ಲಿ ಗಾಂಜಾ ಸೇವನೆ ಮಾಡುತ್ತಿದ್ದ ವ್ಯಕ್ತಿಯನ್ನು ಮುರುಡೇಶ್ವರ ಪೊಲೀಸರು ಬಂಧಿಸಿದ್ದಾರೆ.

ಬಳ್ಳಾರಿ ಜಿಲ್ಲೆಯ ಕುರುಗೋಡ ಕುಡುತಿನಿ ನಿವಾಸಿ ಅನಿಲಕುಮಾ ಕೆ ರುದ್ರಪ್ಪ(25)ಬಂಧಿತ. ವೈದ್ಯಕೀಯ ತಪಾಸಣೆ ಬಳಿಕ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ. ಮುರುಡೇಶ್ವರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಇನ್ನೊಂದು ಪ್ರಕರಣದಲ್ಲಿ ತಾಲೂಕಿನ ಹೆಬಳೆಯ ಹನಿಫಾಬಾದ್ ಸಾರ್ವಜನಿಕ ಸ್ಥಳದಲ್ಲಿ ಗಾಂಜಾ ಸೇವನೆ ಮಾಡುತ್ತಿದ್ದ ಜಾಲಿ ಆಜಾದ್ ನಗರ ನಿವಾಸಿ ಮಹಮ್ಮದ ಮೀರಾ (28) ಅವರನ್ನು ಗ್ರಾಮೀಣ ಠಾಣಾ ಪೊಲೀಸರು ಬಂಧಿಸಿ ವೈದ್ಯಕೀಯ ತಪಾಸಣೆ ಬಳಿಕ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ. ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

### ಪತಿಯಿಂದಲೇ ಪತ್ನಿ ಕೊಲೆ

• **ವಿಜಯನಗರ:** ಕೌಟುಂಬಿಕ ಕಲಹದಿಂದ ವ್ಯಕ್ತಿಯೊಬ್ಬ ತನ್ನ ಹೆಂಡತಿಯನ್ನು ಕತ್ತು ಕುಯ್ದು ಭೀಕರವಾಗಿ ಹತ್ಯೆ ಮಾಡಿರುವ ಘಟನೆ ಹೊಸಪೇಟೆ ನಗರದಲ್ಲಿ ಗುರುವಾರ ನಡೆದಿದೆ.



ನಗರದ ಅಗಸರ ಓಣಿ ನಿವಾಸಿ ಪ್ರಭಾವತಿ (50) ಕೊಲೆಯಾಗಿದ್ದು, ಆರೋಪಿ ಪತಿ ರಾಮಮೂರ್ತಿ (55) ಪತ್ನಿಯನ್ನು ಪೊಲೀಸರು ಬಂಧಿಸಿದ್ದಾರೆ.

ಗುರುವಾರ ಬೆಳಗ್ಗೆ ಪ್ರಭಾವತಿ ಪೂಜೆಯಲ್ಲಿ ತೊಡಗಿದ್ದಾಗ ಆರೋಪಿ ಏಕಾಏಕಿ ದಾಳಿ ನಡೆಸಿದ್ದಾನೆ. ಹರಿತವಾದ ಅಸ್ತ್ರದಿಂದ ಕತ್ತು ಕುಯ್ದು ಕೊಲೆ ಮಾಡಿದ್ದಾನೆ. ಘಟನೆಗೆ ಕೌಟುಂಬಿಕ ಕಾರಣ ಎನ್ನಲಾಗುತ್ತಿದೆ. ಈ ಕುರಿತು ಮಾಹಿತಿ ತಿಳಿಯುತ್ತಿದ್ದಂತೆ ಎಸ್‌ಪಿ ಎಸ್.ಜಾಹ್ನವಿ, ಹೆಚ್ಚುವರಿ ವರಿಷ್ಠಾಧಿಕಾರಿ ಮಂಜುನಾಥ ಹಾಗೂ ಡಿಎಸ್ಪಿ ಮುರುಳಿಧರ್ ಸ್ಥಳಕ್ಕೆ ಭೇಟಿ ನೀಡಿ, ಪರಿಶೀಲನೆ ನಡೆಸಿದರು. ಈ ಕುರಿತು ಹೊಸಪೇಟೆ ಟೌನ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಎಂಬಿಬಿಎಸ್ ವಿದ್ಯಾರ್ಥಿನಿ ಸಾವು

• **ಮಸ್ಕಿ:** ಬೆಂಗಳೂರಿಗೆ ತೆರಳುತ್ತಿದ್ದ ಬೀದರ್ ಘಟಕದ ಕೆಕೆಆರ್‌ಟಿಸಿ ಬಸ್ ಒಂದು ಶಿರಾ ಬಳಿ ಅಪಘಾತಕ್ಕೆ ಒಳಗಾಗಿ ಓರ್ವ ಎಂಬಿಬಿಎಸ್ ವಿದ್ಯಾರ್ಥಿನಿ ಮೃತಪಟ್ಟು 15 ಜನ ಗಾಯಗೊಂಡ ಘಟನೆ ಬೆಳಗಿನ ಜಾವ 3 ಗಂಟೆಗೆ ಜರುಗಿದೆ. ಶಿರಾ ಸಮೀಪ ಇಂದು ಮುಂಜಾನೆ ಸಂಭವಿಸಿದ ಭೀಕರ ರಸ್ತೆ ಅಪಘಾತದಲ್ಲಿ ಲಾರಿಗೆ ಬಸ್ ಡಿಕ್ಕಿ ಹೊಡೆದ ಪರಿಣಾಮ ಮಸ್ಕಿ ಸಮೀಪದ ಮುದುಗಲ್ ಪಟ್ಟಣದ ವೆಂಕಟರಾಯನಪೇಟೆ ಹರಿಜನ ವಾರ್ಡ್ ನಿವಾಸಿ, ಪ್ರಥಮ ವರ್ಷದ ಎಂಬಿಬಿಎಸ್ ವಿದ್ಯಾರ್ಥಿನಿ ಸುಮಂಗಲ(22) ಸ್ಥಳದಲ್ಲೇ ಮೃತಪಟ್ಟಿದ್ದಾರೆ ಎಂದು ಮಾಹಿತಿ ಲಭ್ಯವಾಗಿದೆ. ಬೀದರ್‌ನಿಂದ ಬೆಂಗಳೂರಿಗೆ ಹೊರಟಿದ್ದ ಬಸವಕಲ್ಯಾಣ ವಿಭಾಗದ ಕೆಕೆಆರ್‌ಟಿಸಿ ಬಸ್ ಅಪಘಾತಕ್ಕೆ ಒಳಗಾಗಿದೆ. ಅಪಘಾತದಲ್ಲಿ ಓರ್ವ ಎಂಬಿಬಿಎಸ್ ವಿದ್ಯಾರ್ಥಿನಿ ಮೃತಪಟ್ಟು ಸುಮಾರು 15 ಪ್ರಯಾಣಿಕರು ಗಾಯಗೊಂಡಿದ್ದು, ಗಾಯಾಳುಗಳನ್ನು ಸಮೀಪದ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಲಾಗುತ್ತಿದೆ. ಮುಂಜಾನೆ ಸುಮಾರು 3 ಗಂಟೆ ವೇಳೆಗೆ ಘಟನೆ ನಡೆದಿದ್ದು, ಅಪಘಾತದ ನಿಖರ ಕಾರಣ ತಿಳಿದುಬಂದಿಲ್ಲ. ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು ತನಿಖೆ ನಡೆಸುತ್ತಿದ್ದಾರೆ.

» ಶಿರಾ ಬಳಿ ಬಸ್-ಲಾರಿ ಅಪಘಾತ
» 15 ಜನರಿಗೆ ಗಾಯ

## ಎರಡು ಎತ್ತು ಬಲಿ

• **ಬೆಳಗಾವಿ:** ಗಡಿ ಭಾಗದಲ್ಲಿ ಖಾಸಗಿ ಕಂಪನಿಯೊಂದರ ತೀವ್ರ ನಿರ್ಲಕ್ಷ್ಯಕ್ಕೆ ಅಮಾಯಕ ಜೀವಿಗಳು ಬಲಿಯಾಗಿರುವ ಘಟನೆಯೊಂದು ಗುರುವಾರ ಸಂಭವಿಸಿದೆ.

ಸಮೀಪದ ಮಹಾರಾಷ್ಟ್ರದ ಕಮಲಕಟ್ಟ ಗ್ರಾಮದ ಹದ್ದಿಯಲ್ಲಿ ವಿದ್ಯುತ್ ತಂತಿ ತಗುಲಿ ಎರಡು ಎತ್ತುಗಳು ಸ್ಥಳದಲ್ಲೇ ಜೀವಬಿಟ್ಟಿವೆ. ಅದೃಷ್ಟವಶಾತ್ ರೈತರೊಬ್ಬರು ಪ್ರಾಣಾಪಾಯದಿಂದ ಪಾರಾಗಿದ್ದಾರೆ.

ಬೆಳಗಾವಿ ಜಿಲ್ಲೆಯ ಹುಕ್ಕೇರಿ ತಾಲೂಕಿನ ಮುರಗೋಡ ಗ್ರಾಮದ ನಿವಾಸಿಯಾದ ರೈತ ಕಂಪಣ್ಣ ಗೋಪಾಲ ಬಾಬಾಜಿ ಎಂಬುವವರು ಎತ್ತುಗಳು ಕಂಬದ ಸಂಪರ್ಕಕ್ಕೆ ಬರುತ್ತಿದ್ದಂತೆ ತೀವ್ರವಾಗಿ ವಿದ್ಯುತ್ ಶಾಕ್ ತಗುಲಿ ಸ್ಥಳದಲ್ಲೇ ಕುಸಿದು ಬಿದ್ದು ಮೃತಪಟ್ಟಿವೆ.

ಎಪೊಲೀಸರು ಘಟನಾ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಮೃತಪಟ್ಟ ಎತ್ತುಗಳ ಮಹಜರು ನಡೆಸಲಾಗಿದ್ದು, ಪೊಲೀಸರು ಪ್ರಕರಣ ದಾಖಲಿಸಿಕೊಂಡು ಮುಂದಿನ ತನಿಖೆ ಕೈಗೊಂಡಿದ್ದಾರೆ.

---

ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಹೂವಿನಹಡಗಲಿ.
ಕ್ರಿಮಿನಲ್ ಮಿಸ್ಲೇನಿಯಸ್ ಸಂಖ್ಯೆ: 1027/2025
ಅರ್ಜಿದಾರರು : ಶ್ರೀ ಗೋಣೆಪ್ಪ ಕುರಿ ತಂದೆ ನಿಂಗಪ್ಪ ಕುರಿ, ವಯಸ್ಸು 54 ವರ್ಷ, ವಾಸ॥ ಕೆ.ಅಯ್ಯನಹಳ್ಳಿ ಗ್ರಾಮ, ಹೂವಿನಹಡಗಲಿ ತಾಲೂಕು, ವಿಜಯನಗರ ಜಿಲ್ಲೆ.
ವಿರುದ್ಧ
ಎದುರುದಾರರು : ಮಾನ್ಯ ತಹಶೀಲ್ದಾರರು ತಾಲೂಕು ಕಾರ್ಯಾಲಯ & ಇನ್ನೊಬ್ಬರು, ಹೂವಿನಹಡಗಲಿ,
ಸಾರ್ವಜನಿಕ ನೋಟಿಸು
ಈ ಪ್ರಕರಣದಲ್ಲಿ ಅರ್ಜಿದಾರರು ಸಾರ್ವಜನಿಕರ ಗಮನಕ್ಕೆ ಪ್ರಕಟಿಸಿದ ಈ ನೋಟೀಸು ಏನೆಂದರೆ, ಅರ್ಜಿದಾರಳು ಮಾನ್ಯ ಹೂವಿನಹಡಗಲಿ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯದಲ್ಲಿ ತನ್ನ ಅಜ್ಜನ ಮರಣ ಪ್ರಮಾಣಪತ್ರ ಪಡೆಯಲು ಅರ್ಜಿ ಹಾಕಿರುತ್ತಾರೆ.
ಅರ್ಜಿದಾರರ ಅಜ್ಜನಾದ ಗೋಣೆಪ್ಪ ಕುರಿ ತಂದೆ ಮಲ್ಲಪ್ಪ ಕುರಿ ಅವರು ದಿನಾಂಕ: 01-10-1989 ರಂದು ಕೆ.ಅಯ್ಯನಹಳ್ಳಿ ಗ್ರಾಮದ ನಮ್ಮ ಮನೆಯಲ್ಲಿ ಮರಣಹೊಂದಿರುತ್ತಾರೆ. ಸದರಿಯವರ ಮರಣದ ಬಗ್ಗೆ ಎದುರುದಾರರ ಕಛೇರಿಯಲ್ಲಿ ನೊಂದಣಿಯಾಗದ ಕಾರಣ ಅರ್ಜಿದಾರರು ಘನ ನ್ಯಾಯಾಲಯದಲ್ಲಿ ಜನನ ಮತ್ತು ಮರಣ ನೊಂದಣಿ ಕಾಯ್ದೆ ಅಡಿಯಲ್ಲಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಸದರಿ ವಿಚಾರವಾಗಿ ಯಾರಾದರೂ ಈ ಬಗ್ಗೆ ತಕರಾರು ಸಲ್ಲಿಸುವವರಿದ್ದರೆ ತಾವಾಗಲೀ ಅಥವಾ ತಮ್ಮ ಪರವಾಗಿ ವಕೀಲರ ಮೂಲಕವಾಗಲೀ ದಿನಾಂಕ: 01/7/2026 ರಂದು ಸಮಯ ಬೆಳಿಗ್ಗೆ 11-00 ಗಂಟೆಗೆ ಹೂವಿನಹಡಗಲಿ ನ್ಯಾಯಾಲಯದಲ್ಲಿ ತಕರಾರು ಸಲ್ಲಿಸತಕ್ಕದ್ದು. ಇಲ್ಲವಾದಲ್ಲಿ ಮಾನ್ಯ ಘನ ನ್ಯಾಯಾಲಯವು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಯಾವುದೇ ತಕರಾರು ಇರುವುದಿಲ್ಲವೆಂದು ಏಕತರ್ಫಿ(ಏಕಪಕ್ಷೀಯ) ಆದೇಶ ಮಾಡಲಾಗುವುದು ಎಂದು ತಿಳಿಯತಕ್ಕದ್ದು.
ದಿನಾಂಕ: 15/6/2026 ರಂದು ನ್ಯಾಯಾಲಯದ ಆದೇಶ ಹಾಗೂ ಮೊಹರಿನೊಂದಿಗೆ ನೀಡಲಾಗಿದೆ.
ಸಹಿ/- ಶಿರಸ್ತೇದಾರರು
ಸಿ.ಜೆ. & ಜೆ.ಎಂ.ಎಫ್.ಸಿ. ನ್ಯಾಯಾಲಯ
ಹೂವಿನಹಡಗಲಿ
ಸಹಿ/- ಶ್ರೀ ಟಿ.ವೆಂಕಟಪ್ಪ
ಅರ್ಜಿದಾರರ ಪರ ವಕೀಲರು, ಹೂವಿನಹಡಗಲಿ.

---

ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಹೂವಿನಹಡಗಲಿ.
ಕ್ರಿಮಿನಲ್ ಮಿಸ್ಲೇನಿಯಸ್ ಸಂಖ್ಯೆ: 628/2026
ಅರ್ಜಿದಾರರು : ಶ್ರೀ ರಂಗನಾಥ ಜೆ. ತಂದೆ ಲೇ॥ ಜಂಬಣ್ಣ ಜೆ., ವಯಸ್ಸು 32 ವರ್ಷ, ವಾಸ॥ ಹೊಳಗುಂದಿ ಗ್ರಾಮ, ಹೂವಿನಹಡಗಲಿ ತಾಲೂಕು, ವಿಜಯನಗರ ಜಿಲ್ಲೆ.
ವಿರುದ್ಧ
ಎದುರುದಾರರು : ಮಾನ್ಯ ತಹಶೀಲ್ದಾರರು ತಾಲೂಕು ಕಾರ್ಯಾಲಯ & ಇನ್ನೊಬ್ಬರು, ಹೂವಿನಹಡಗಲಿ,
ಸಾರ್ವಜನಿಕ ನೋಟಿಸು
ಈ ಪ್ರಕರಣದಲ್ಲಿ ಅರ್ಜಿದಾರರು ಸಾರ್ವಜನಿಕರ ಗಮನಕ್ಕೆ ಪ್ರಕಟಿಸಿದ ಈ ನೋಟೀಸು ಏನೆಂದರೆ, ಅರ್ಜಿದಾರಳು ಮಾನ್ಯ ಹೂವಿನಹಡಗಲಿ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯದಲ್ಲಿ ತನ್ನ ಅಜ್ಜನ ಮರಣ ಪ್ರಮಾಣಪತ್ರ ಪಡೆಯಲು ಅರ್ಜಿ ಹಾಕಿರುತ್ತಾರೆ.
ಅರ್ಜಿದಾರರ ಅಜ್ಜನಾದ ಜೆ.ರಂಗಪ್ಪ ತಂದೆ ದೊಡ್ಡರಂಗಪ್ಪ ಅವರು ದಿನಾಂಕ: 01-01-1986 ರಂದು ಹೊಳಗುಂದಿ ಗ್ರಾಮದ ನಮ್ಮ ಮನೆಯಲ್ಲಿ ಮರಣಹೊಂದಿರುತ್ತಾರೆ. ಸದರಿಯವರ ಮರಣದ ಬಗ್ಗೆ ಎದುರುದಾರರ ಕಛೇರಿಯಲ್ಲಿ ನೊಂದಣಿಯಾಗದ ಕಾರಣ ಅರ್ಜಿದಾರರು ಘನ ನ್ಯಾಯಾಲಯದಲ್ಲಿ ಜನನ ಮತ್ತು ಮರಣ ನೊಂದಣಿ ಕಾಯ್ದೆ ಅಡಿಯಲ್ಲಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಸದರಿ ವಿಚಾರವಾಗಿ ಯಾರಾದರೂ ಈ ಬಗ್ಗೆ ತಕರಾರು ಸಲ್ಲಿಸುವವರಿದ್ದರೆ ತಾವಾಗಲೀ ಅಥವಾ ತಮ್ಮ ಪರವಾಗಿ ವಕೀಲರ ಮೂಲಕವಾಗಲೀ ದಿನಾಂಕ: 19/8/2026 ರಂದು ಸಮಯ ಬೆಳಿಗ್ಗೆ 11-00 ಗಂಟೆಗೆ ಹೂವಿನಹಡಗಲಿ ನ್ಯಾಯಾಲಯದಲ್ಲಿ ತಕರಾರು ಸಲ್ಲಿಸತಕ್ಕದ್ದು. ಇಲ್ಲವಾದಲ್ಲಿ ಮಾನ್ಯ ಘನ ನ್ಯಾಯಾಲಯವು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಯಾವುದೇ ತಕರಾರು ಇರುವುದಿಲ್ಲವೆಂದು ಏಕತರ್ಫಿ(ಏಕಪಕ್ಷೀಯ) ಆದೇಶ ಮಾಡಲಾಗುವುದು ಎಂದು ತಿಳಿಯತಕ್ಕದ್ದು.
ದಿನಾಂಕ: 23/6/2026 ರಂದು ನ್ಯಾಯಾಲಯದ ಆದೇಶ ಹಾಗೂ ಮೊಹರಿನೊಂದಿಗೆ ನೀಡಲಾಗಿದೆ.
ಸಹಿ/- ಶಿರಸ್ತೇದಾರರು
ಸಿ.ಜೆ. & ಜೆ.ಎಂ.ಎಫ್.ಸಿ. ನ್ಯಾಯಾಲಯ
ಹೂವಿನಹಡಗಲಿ
ಸಹಿ/- ಶ್ರೀ ಗುರುರಾಜ್ ಕೆ.ಎಂ.
ಅರ್ಜಿದಾರರ ಪರ ವಕೀಲರು, ಹೂವಿನಹಡಗಲಿ.

---

ದರಖಾಸ್ತ ನಂ.272/2023.
ಮೆ॥ 1ನೇಯ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಬಾಗಲಕೋಟಿ ಇವರ ನ್ಯಾಯಾಲಯದಲ್ಲಿ.
2)ಶ್ರೀ ಕೃಷ್ಣಪ್ಪ ತಂದೆ ಹೇಮಲೆಪ್ಪ ಚವಾಣ @ ಲಮಾಣಿ, ........ಡಿಕ್ರಿದಾರ.
ವಿರುದ್ಧ
1)ಶ್ರೀ ಹಣಮಂತ ತಂದೆ ಪೋಣಪ್ಪ ಲಮಾಣಿ @ ಚವಾಣ, ........ಜಿರ್ಮುಖಿಯಣಿದಾರ.
ಗೆ,
ಹಣಮಂತ ತಂದೆ ಪೋಣಪ್ಪ ಲಮಾಣಿ@ ಚವಾಣ, ವಯಾ: 70 ವರ್ಷಗಳು, ಉದ್ಯೋಗ: ಕೃಷಿ ಕೆಲಸ, ಸಾ॥ಮನೆ ನಂ. 45, ಹೋಸ ಬದಾಮಿ ನಗರ, ಹುಬ್ಬಳ್ಳಿ, ತಾ॥ ಹುಬ್ಬಳ್ಳಿ, ಜಿ॥ಧಾರವಾಡ. ....ಜಿರ್ಮುಖಿಯಣಿದಾರ.
ಆದೇಶ 5 ನಿಯಮ 20 (ಎ) ಅಡಿಯಲ್ಲಿ
ಸದರಿ ಮೇಲ್ಕಾಣಿಸಿದ ಪ್ರಕರಣದಲ್ಲಿ ಡಿಕ್ರಿದಾರ. ನಿಮ್ಮ ವಿರುದ್ಧ, ಬಾಗಲಕೋಟ ಜಿಲ್ಲಾ, ಬಾಗಲಕೋಟ ತಾಲೂಕಾ ಪೈಕಿ ಹೀರೆಗುಳಬಾಳಗ್ರಾಮದ ಜಮೀನು ರಿ.ಸ.ನಂ.62/2. ಕ್ಷೇತ್ರ 04ಎಕರೆ25 ಗುಂಟೆ ಮತ್ತು ಅದೆ ಗ್ರಾಮದ ಜಮೀನು ರಿ.ಸ. ನಂ. 62/5. ಕ್ಷೇತ್ರ00 ಎಕರೆ 01ಗುಂಟೆ ಜಮೀನುಗಳನ್ನು ಅಸಲು ದಾವಾ ನಂ.106/2015 ಮೆ॥ 1ನೇಯ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರ ನ್ಯಾಯಾಲಯ ಬಾಗಲಕೋಟಿ ಇವರ ಆದೇಶದಂತೆ ಸದರಿ ಮೇಲ್ಕಾಣಿಸಿದ ಜಮೀನುಗಳನ್ನು ಡಿಕ್ರಿದಾರನ ಪರವಾಗಿಖರೀದಿ ಹಾಕಿ ಕೊಡುವಂತೆ ಸದರಿ ದರಖಾಸ್ತ ಪ್ರಕರಣ ವನ್ನು ತಮ್ಮ ವಿರುದ್ಧ ಸಲ್ಲಿಸಿದ್ದು ಅದೆ. ಆದರೆ ತಮಗೆ ಕರಡು ಪ್ರತಿ ಖರೀದಿ ಪತ್ರವನ್ನು ಅಂಚೆಯ ಮೂಲಕ ಮೆ॥ ನ್ಯಾಯಾಲಯದವರು ಕಳುಹಿಸಿದ್ದು, ತಾವು ನೀಡಿದ ವಿಳಾಸದಲ್ಲಿ ಇಲ್ಲಾ ಅಂತಾ ಅಂಚೆಯ ಇಲಾಖೆಯವರು ತಿಳಿಸಿದ್ದು ಅದೆ.
ಸದರಿ ಪ್ರಕರಣದಲ್ಲಿ ಕರಡು ಪ್ರತಿ ಖರೀದಿ ಪತ್ರ-ಕ್ಕೆ ನಿಮ್ಮಮ ವ, ಯಾರದಾದರು, ಏನಾದರೂ ತಕರಾರೂ ಇದ್ದಲ್ಲಿ ವ. ದಾಖಲಾತಿಗಳನ್ನು ಸಲ್ಲಿಸದು ಇದ್ದಲ್ಲಿ, ದಿನಾಂಕ: 06-08-20-2025 ರಂದು ಮೆ॥ ನ್ಯಾಯಾಲಯಕ್ಕೆ ನೀವಾಗಲಿ, ನಿಮ್ಮ ವಕೀಲರ ಮುಖಾಂತರವಾಗಲಿ, ಸದರಿ ಪ್ರಕರಣದಲ್ಲಿ ಹಾಜರಾಗಿ ತಕರಾರು ಸಲ್ಲಿಸಬೇಕು, ತಪ್ಪಿದ್ದಲ್ಲಿ ತಮ್ಮದು ಯಾವುದೇ ತಕರಾರು ಇಲ್ಲ ಅಂತಾ ಪರಿಗಣಿಸಿ, ಏಕತರ್ಫಿ ಆದೇಶವನ್ನು ಮಾಡಲಾಗುವದು ಅಂತಾ ಕೊಟ್ಟ ಕೋರ್ಟ ನೋಟಿಸು.
ಈ ಹೊತ್ತು ದಿನಾಂಕ:02/07/2026ರಂದು ನ್ಯಾಯಾಲಯದ ಮೊಹರಿನೊಂದಿಗೆ ನೀಡಲ್ಪಟ್ಟಿತು
ಸ್ಥಳ:ಬಾಗಲಕೋಟ,
ದಿನಾಂಕ: 02/07/2026
ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೇದಾರರು/-(1ನೇಯ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರ "ನ್ಯಾಯಾಲಯ, ಬಾಗಲಕೋಟೆ")
ಶ್ರೀ ಬಿ.ಎಸ್. ನಾಡಗೌಡ ಡಿಕ್ರಿದಾರ ಪರ ವಕೀಲರು.

---

ಕ್ರಿಮಿನಲ್ ಮಿಸಲೇನಿಯಸ್ ನಂ: 713 /2026
ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆ ಎಮ್ ಎಫ್ ಸಿ ರಾಣೇಬೆನ್ನೂರ ಇವರ ನ್ಯಾಯಾಲಯದಲ್ಲಿ
ಅರ್ಜಿದಾರರು :1) ಶಿವಕುಮಾರ ತಂದೆ ಕರಬಸಪ್ಪ ಕ್ಯಾತಮ್ಮನವರ ಸಾ: ಚಳಗೇರಿ ತಾ: ರಾಣೇಬೆನ್ನೂರ ಹಾಗು ವಗೈರೆ.
ವಿರುದ್ಧ
ಎದುರುಗಾರರು:1)ಉಪ ತಹಶೀಲ್ದಾರ,ನಾಡಕಛೇರಿ ಮೇಡ್ಲೇರಿ.ತಾ: ರಾಣೇಬೆನ್ನೂರ. ಹಾಗು ವಗೈರೆ
ಇಸ್ತಿಯಾರ ನಾಮೆ
ಈ ಮೇಲ್ಕಾಣಿಸಿದ ಅರ್ಜಿದಾರರ ತಾಯಿಯಾದ ಶ್ರೀಮತಿ ಗಿರಿಜಮ್ಮ ಕೋಂಕರಬಸಪ್ಪ ಕ್ಯಾತಮ್ಮನವರ ಇವರು ದಿನಾಂಕ:17/06/1996. ರಂದು ರಾಣೇಬೆನ್ನೂರ ತಾಲೂಕ ಚಳಗೇರಿ ಗ್ರಾಮದಲ್ಲಿ ಮೃತಪಟ್ಟಿರುತ್ತಾರೆ ಅಂತಾ ನಿರ್ಣಯಿಸಿ ಮರಣ ದಿನಾಂಕವನ್ನು ಎದುರುಗಾರರಲ್ಲಿ ನೋಂದಾಯಿಸಿ ಪ್ರಮಾಣ ಪತ್ರ ಪೂರೈಸಲು ಆದೇಶ ಪಡೆಯುವ ಕುರಿತು ಎದುರುಗಾರರ ಮೇಲೆ ಮಾನ್ಯ ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ ಇವರ ನ್ಯಾಯಾಲಯದಲ್ಲಿ ಕ್ರಿಮಿನಲ್ ಮಿಸಲೇನಿಯಸ್ ನಂ:713/2026 ನೇದ್ದನ್ನು ದಾಖಲ ಮಾಡಿರುತ್ತಾರೆ.
ಕಾರಣ ಈ ಮೇಲ್ಕಂಡ ವಿಷಯದ ಬಗ್ಗೆ ಯಾರಾ ದರೂ ಹಿತಾಸಕ್ತಿಯುಳ್ಳವರು ಇದ್ದು, ಸದರ ವಿಷಯದ ಬಗ್ಗೆ ತಮ್ಮ ಆಕ್ಷೇಪ ಇದ್ದಲ್ಲಿ ದಿನಾಂಕ: 04/08/2026 ರಂದು ಬೆಳಿಗ್ಗೆ 11 ಗಂಟೆಗೆ ತಾವಾಗಲೀ ಅಥವಾ ತಮ್ಮ ವಕೀಲರ ಮುಖಾಂತರವಾಗಲೀ ನ್ಯಾಯಾಲಯಕ್ಕೆ ಹಾಜರಾಗಿ ತಮ್ಮ ತಕರಾರು ಸಲ್ಲಿಸತಕ್ಕದ್ದು. ಇಲ್ಲದೇ ಇದ್ದಲ್ಲಿ ಯಾರದ್ದು ತಕರಾರು ಇಲ್ಲ ಅಂತಾ ಪರಿಗಣಿಸಿ ಮುಂದಿನ ಆದೇಶ ಮಾಡಲಾಗುವುದು ಅಂತಾ ಕೊಟ್ಟ ಪ್ರಕಟಣೆ.
ಈ ದಿನ ನ್ಯಾಯಾಲಯದ ಮೊಹರು ಹಾಗೂ ಸಹಿಯೊಂದಿಗೆ ನೀಡಲಾಗಿದೆ.
ರಾಣೇಬೆನ್ನೂರ.
ದಿನಾಂಕ: 03/07/2026
ನ್ಯಾಯಾಲಯದ ಆದೇಶದ ಮೇರೆಗೆ.
ಸಹಿ/-ಶಿರಸ್ತೇದಾರರು, ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರ ಮತ್ತು ಜೆಎಮ್‌ಎಫ್‌ಸಿ ರಾಣೇಬೆನ್ನೂರ ಇವರ ನ್ಯಾಯಾಲಯ.
ಸಹಿ/-ಶ್ರೀ ಸಿ.ಯು ಕರೇಗೌಡ್ರ ವಕೀಲರು ರಾಣೇಬೆನ್ನೂರ.

---

**IN THE COURT OF THE CIVIL JUDGE AND J M F C AT HADAGALI**
Criminal miscellanies, No. 625/2026
Alagilawada Durugavva W/o. late Alagilawada Shekhappa aged about 37 years R/o Holalu village in Hadagali Tq. Vijayanagara district. .....Petitioners
VS
The Tahsildar. Taluka office At Hadagali and another .....Respondent
**PUBLIC NOTICE**
That in the above case, the petitioner is published to aver of the society. The petitioner is filed a petition in civil judge and JMFC court at hadagali for obtaining the death certificate of her husband by name **Alagilawada Shekhappa S/o Sannappa is died on 30/10/2021 at Holalu village in hadagali Tq Vijayanagara district.** Hence this petition.
That the consented birth and death officers are not entries in the record in office. Hence filed this petition under act of birth and death. For this reasons you and any persons or through advocate for filing any objection on 02-09-2026 at JMFC court at hadagali 11 AM. Otherwise not filed any objection in the case. The honourable court was passing the expertly order and according with law. Hence this public notice.
This notice was issued through court order and signature dated 30/6/2026
Sd/- Chief Ministerial Officer
Civil Judge & J.M.F.C Court, Huvinahadagali
Sd/- L. Shivakumara Naik
Advocate for the Petitioner

---

ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಹೂವಿನಹಡಗಲಿ.
ಕ್ರಿಮಿನಲ್ ಮಿಸ್ಲೇನಿಯಸ್ ಸಂಖ್ಯೆ: 120/2026 ಕ್ರಿಮಿನಲ್ ಮಿಸ್ಲೇನಿಯಸ್ ಸಂಖ್ಯೆ: 121/2026
ಅರ್ಜಿದಾರರು : ಶ್ರೀಮತಿ ಎಸ್. ಲೀಲಾಬಾಯಿ ಗಂಡ ಚೀನ್ಯನಾಯ್ಕ, ವಯಸ್ಸು 58 ವರ್ಷ, ಸಾ॥ ಅಡವಿಮಲ್ಲನಕೇರಿತಾಂಡ, ತಾ॥ ಹೂವಿನಹಡಗಲಿ ಜಿ॥ ವಿಜಯನಗರ
ವಿರುದ್ಧ
ಎದುರುದಾರರು : ಮಾನ್ಯ ತಹಶೀಲ್ದಾರರು ತಾಲೂಕು ಕಾರ್ಯಾಲಯ & ಇನ್ನೊಬ್ಬರು, ಹೂವಿನಹಡಗಲಿ,
ಸಾರ್ವಜನಿಕ ನೋಟಿಸು
ಈ ಪ್ರಕರಣದಲ್ಲಿ ಅರ್ಜಿದಾರನು ಸಾರ್ವಜನಿಕರ ಗಮನಕ್ಕೆ ಪ್ರಕಟಿಸಿದ ಈ ನೋಟೀಸು ಏನೆಂದರೆ, ಅರ್ಜಿದಾರನು ಮಾನ್ಯ ಹೂವಿನಹಡಗಲಿ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯದಲ್ಲಿ ತನ್ನ ಕುಟುಂಬದ ಹಿರಿಯರ ಮರಣ ಪ್ರಮಾಣಪತ್ರ ಪಡೆಯಲು ಅರ್ಜಿ ಹಾಕಿರುತ್ತಾರೆ. ಅರ್ಜಿದಾರರು ತನ್ನ ಹಿರಿಯರ ಮರಣ ದಿನಾಂಕದ ವಿವರ.

| ಕ್ರ.ಸಂ. | ಹೆಸರು | ಮರಣ ದಿನಾಂಕ | ಮರಣ ಸ್ಥಳ: |
|---|---|---|---|
| 1 | ರಮಕಿಬಾಯಿ ಗಂಡ ಲಾಲ್ಯನಾಯ್ಕ | 01-06-2000 | ಕೊಮಾರನಹಳ್ಳಿತಾಂಡ |
| 2 | ಓಬಳಿಬಾಯಿ ಗಂಡ ಬೋಕ್ಯನಾಯ್ಕ | 04-08-2002 | ಗೋವಿಂದಪುರತಾಂಡ |

ಸದರಿಯವರ ಮರಣದ ಬಗ್ಗೆ ಎದುರುದಾರರ ಕಛೇರಿಯಲ್ಲಿ ನೊಂದಣಿಯಾಗದ ಕಾರಣ ಅರ್ಜಿದಾರರು ಘನ ನ್ಯಾಯಾಲಯದಲ್ಲಿ ಜನನ ಮತ್ತು ಮರಣ ನೊಂದಣಿ ಕಾಯ್ದೆ ಅಡಿಯಲ್ಲಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಸದರಿ ವಿಚಾರವಾಗಿ ಯಾರಾದರೂ ಈ ಬಗ್ಗೆ ತಕರಾರು ಸಲ್ಲಿಸುವವರಿದ್ದರೆ ತಾವಾಗಲೀ ಅಥವಾ ತಮ್ಮ ಪರವಾಗಿ ವಕೀಲರ ಮೂಲಕವಾಗಲೀ ದಿನಾಂಕ: 08/07/2026 ರಂದು ಸಮಯ ಬೆಳಿಗ್ಗೆ 11-00 ಗಂಟೆಗೆ ಹೂವಿನಹಡಗಲಿ ನ್ಯಾಯಾಲಯದಲ್ಲಿ ತಕರಾರು ಸಲ್ಲಿಸತಕ್ಕದ್ದು. ಇಲ್ಲವಾದಲ್ಲಿ ಮಾನ್ಯ ಘನ ನ್ಯಾಯಾಲಯವು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಯಾವುದೇ ತಕರಾರು ಇರುವುದಿಲ್ಲವೆಂದು ಏಕತರ್ಫಿ(ಏಕಪಕ್ಷೀಯ) ಆದೇಶ ಮಾಡಲಾಗುವುದು ಎಂದು ತಿಳಿಯತಕ್ಕದ್ದು.
ದಿನಾಂಕ: 08/06/2026 ರಂದು ನ್ಯಾಯಾಲಯದ ಆದೇಶ ಹಾಗೂ ಮೊಹರಿನೊಂದಿಗೆ ನೀಡಲಾಗಿದೆ.
ನ್ಯಾಯಾಲಯದ ಆದೇಶದ ಮೇರೆಗೆ
ಸಹಿ/- ಶಿರಸ್ತೇದಾರರು, ಸಿ.ಜೆ. & ಜೆ.ಎಂ.ಎಫ್.ಸಿ. ನ್ಯಾಯಾಲಯ ಹೂವಿನಹಡಗಲಿ
ಸಹಿ/- ಶ್ರೀ ಅಂಜಿನಪ್ಪ ಹೊಸಮನಿ, ಅರ್ಜಿದಾರರ ಪರ ವಕೀಲರು, ಹೂವಿನಹಡಗಲಿ.

---






---

ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಹೂವಿನಹಡಗಲಿ.
ಕ್ರಿಮಿನಲ್ ಮಿಸ್ಲೇನಿಯಸ್ ಸಂಖ್ಯೆ: 492/2026 ಕ್ರಿಮಿನಲ್ ಮಿಸ್ಲೇನಿಯಸ್ ಸಂಖ್ಯೆ: 493/2026
ಕ್ರಿಮಿನಲ್ ಮಿಸ್ಲೇನಿಯಸ್ ಸಂಖ್ಯೆ: 494/2026
ಅರ್ಜಿದಾರರು : ತಾಳೆದಹಳ್ಳಿ ಬಸವರಾಜ ತಂದೆ ಸಿದ್ದಪ್ಪ, ವಯಸ್ಸು 46 ವರ್ಷ, ಸಾ॥ ಮೀರಾಕೊರನಹಳ್ಳಿ, ಹೂವಿನಹಡಗಲಿ ತಾಲೂಕ ವಿಜಯನಗರ ಜಿಲ್ಲೆ
ವಿರುದ್ಧ
ಎದುರುದಾರರು : ಮಾನ್ಯ ತಹಶೀಲ್ದಾರರು ತಾಲೂಕು ಕಾರ್ಯಾಲಯ & ಇನ್ನೊಬ್ಬರು, ಹೂವಿನಹಡಗಲಿ,
ಸಾರ್ವಜನಿಕ ನೋಟಿಸು
ಈ ಪ್ರಕರಣದಲ್ಲಿ ಅರ್ಜಿದಾರನು ಸಾರ್ವಜನಿಕರ ಗಮನಕ್ಕೆ ಪ್ರಕಟಿಸಿದ ಈ ನೋಟೀಸು ಏನೆಂದರೆ, ಅರ್ಜಿದಾರನು ಮಾನ್ಯ ಹೂವಿನಹಡಗಲಿ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯದಲ್ಲಿ ತನ್ನ ಕುಟುಂಬದ ಹಿರಿಯರ ಮರಣ ಪ್ರಮಾಣಪತ್ರ ಪಡೆಯಲು ಅರ್ಜಿ ಹಾಕಿರುತ್ತಾರೆ. ಅರ್ಜಿದಾರರು ತನ್ನ ಹಿರಿಯರ ಮರಣ ದಿನಾಂಕದ ವಿವರ.

| ಕ್ರ.ಸಂ. | ಹೆಸರು | ಮರಣ ದಿನಾಂಕ | ಸಂಬಂಧ | ಮರಣ ಸ್ಥಳ: |
|---|---|---|---|---|
| 1 | ತಾಳೇದಹಳ್ಳಿ ಬೀರಪ್ಪ ತಂದೆ ಶಿದ್ದಪ್ಪ | 09-05-1975 | ಅಜ್ಜ | ಮೀರಾಕೊರನಹಳ್ಳಿ |
| 2 | ತಾಳೇದಹಳ್ಳಿ ಹನುಮವ್ವ ಗಂಡ ಬೀರಪ್ಪ | 07-01-1977 | ಅಜ್ಜಿ | ಮೀರಾಕೊರನಹಳ್ಳಿ |
| 3 | ತಾಳೇದಹಳ್ಳಿ ಶಿವಪ್ಪ ತಂದೆ ಲೇ॥ ಬೀರಪ್ಪ | 03-05-1983 | ಚಿಕ್ಕಪ್ಪ | ಮೀರಾಕೊರನಹಳ್ಳಿ |

ಸದರಿಯವರ ಮರಣದ ಬಗ್ಗೆ ಎದುರುದಾರರ ಕಛೇರಿಯಲ್ಲಿ ನೊಂದಣಿಯಾಗದ ಕಾರಣ ಅರ್ಜಿದಾರರು ಘನ ನ್ಯಾಯಾಲಯದಲ್ಲಿ ಜನನ ಮತ್ತು ಮರಣ ನೊಂದಣಿ ಕಾಯ್ದೆ ಅಡಿಯಲ್ಲಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಸದರಿ ವಿಚಾರವಾಗಿ ಯಾರಾದರೂ ಈ ಬಗ್ಗೆ ತಕರಾರು ಸಲ್ಲಿಸುವವರಿದ್ದರೆ ತಾವಾಗಲೀ ಅಥವಾ ತಮ್ಮ ಪರವಾಗಿ ವಕೀಲರ ಮೂಲಕವಾಗಲೀ ದಿನಾಂಕ: 22/07/2026 ರಂದು ಸಮಯ ಬೆಳಿಗ್ಗೆ 11-00 ಗಂಟೆಗೆ ಹೂವಿನಹಡಗಲಿ ನ್ಯಾಯಾಲಯದಲ್ಲಿ ತಕರಾರು ಸಲ್ಲಿಸತಕ್ಕದ್ದು. ಇಲ್ಲವಾದಲ್ಲಿ ಮಾನ್ಯ ಘನ ನ್ಯಾಯಾಲಯವು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಯಾವುದೇ ತಕರಾರು ಇರುವುದಿಲ್ಲವೆಂದು ಏಕತರ್ಫಿ(ಏಕಪಕ್ಷೀಯ) ಆದೇಶ ಮಾಡಲಾಗುವುದು ಎಂದು ತಿಳಿಯತಕ್ಕದ್ದು.
ದಿನಾಂಕ: 30/06/2026 ರಂದು ನ್ಯಾಯಾಲಯದ ಆದೇಶ ಹಾಗೂ ಮೊಹರಿನೊಂದಿಗೆ ನೀಡಲಾಗಿದೆ.
ನ್ಯಾಯಾಲಯದ ಆದೇಶದ ಮೇರೆಗೆ
ಸಹಿ/- ಶಿರಸ್ತೇದಾರರು, ಸಿ.ಜೆ. & ಜೆ.ಎಂ.ಎಫ್.ಸಿ. ನ್ಯಾಯಾಲಯ ಹೂವಿನಹಡಗಲಿ
ಸಹಿ/- ಶ್ರೀ ಸಿ.ಕೆ. ಬಸವಲಿಂಗಸ್ವಾಮಿ, ಶ್ರೀ ಎಸ್. ಸುಭಾಷ್‌ಗೌಡ, ಅರ್ಜಿದಾರರ ಪರ ವಕೀಲರು, ಹೂವಿನಹಡಗಲಿ.

---

ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಹೂವಿನಹಡಗಲಿ.
ಕ್ರಿಮಿನಲ್ ಮಿಸ್ಲೇನಿಯಸ್ ಸಂಖ್ಯೆ: 544/2026 ಕ್ರಿಮಿನಲ್ ಮಿಸ್ಲೇನಿಯಸ್ ಸಂಖ್ಯೆ: 545/2026
ಅರ್ಜಿದಾರರು : ಶ್ರೀ ಮಡ್ಡಿ ಸಿಂಗಪ್ಪ ತಂದೆ ಮಡ್ಡಿ ಭೀಮಪ್ಪ, ವಯಸ್ಸು 41 ವರ್ಷ, ವಾಸ॥ ಬಾವಿಹಳ್ಳಿ ಗ್ರಾಮ, ಹೂವಿನಹಡಗಲಿ ತಾಲೂಕು ವಿಜಯನಗರ ಜಿಲ್ಲೆ
ವಿರುದ್ಧ
ಎದುರುದಾರರು : ಮಾನ್ಯ ತಹಶೀಲ್ದಾರರು ತಾಲೂಕು ಕಾರ್ಯಾಲಯ & ಇನ್ನೊಬ್ಬರು, ಹೂವಿನಹಡಗಲಿ
ಸಾರ್ವಜನಿಕ ನೋಟಿಸು

| ಕ್ರ.ಸಂ. | ಹೆಸರು | ಮರಣ ಹೊಂದಿದ ವರ್ಷ | ಸಂಬಂಧ | ಮರಣ ಹೊಂದಿದ ಸ್ಥಳ |
|---|---|---|---|---|
| 1 | ಬಾರಿಕರ ರೇಣುಕಮ್ಮ ಗಂಡ ಲೇಟ್ ಚಿತ್ರವಾಡಿಗಿ ಪರಮೇಶ್ವರಪ್ಪ | 10-08-2008 | ಅಜ್ಜಿ | ಬಾವಿಹಳ್ಳಿ |
| 2 | ಮಡ್ಡಿ ಚಿಗಟೇರಿ ಗೋಣೆಮ್ಮ ಗಂಡ ಲೇಟ್ ಸಿಂಗಪ್ಪ | 12-03-1980 | ಅಜ್ಜಿ | ಬಾವಿಹಳ್ಳಿ |

ಸದರಿಯವರ ಮರಣದ ಬಗ್ಗೆ ಎದುರುದಾರರ ಕಛೇರಿಯಲ್ಲಿ ನೊಂದಣಿಯಾಗದ ಕಾರಣ ಅರ್ಜಿದಾರರು ಘನ ನ್ಯಾಯಾಲಯದಲ್ಲಿ ಜನನ ಮತ್ತು ಮರಣ ನೊಂದಣಿ ಕಾಯ್ದೆ ಅಡಿಯಲ್ಲಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಸದರಿ ವಿಚಾರವಾಗಿ ಯಾರಾದರೂ ಈ ಬಗ್ಗೆ ತಕರಾರು ಸಲ್ಲಿಸುವವರಿದ್ದರೆ ತಾವಾಗಲೀ ಅಥವಾ ತಮ್ಮ ಪರವಾಗಿ ವಕೀಲರ ಮೂಲಕವಾಗಲೀ ದಿನಾಂಕ: 05/08/2026 ರಂದು ಸಮಯ ಬೆಳಿಗ್ಗೆ 11-00 ಗಂಟೆಗೆ ಹೂವಿನಹಡಗಲಿ ನ್ಯಾಯಾಲಯದಲ್ಲಿ ತಕರಾರು ಸಲ್ಲಿಸತಕ್ಕದ್ದು. ಇಲ್ಲವಾದಲ್ಲಿ ಮಾನ್ಯ ಘನ ನ್ಯಾಯಾಲಯವು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಯಾವುದೇ ತಕರಾರು ಇರುವುದಿಲ್ಲವೆಂದು ಏಕತರ್ಫಿ(ಏಕಪಕ್ಷೀಯ) ಆದೇಶ ಮಾಡಲಾಗುವುದು ಎಂದು ತಿಳಿಯತಕ್ಕದ್ದು.
ದಿನಾಂಕ 29-05-2026 ರಂದು ನ್ಯಾಯಾಲಯದ ಆದೇಶ ಹಾಗೂ ಮೊಹರಿನೊಂದಿಗೆ ನೀಡಲಾಗಿದೆ.
ನ್ಯಾಯಾಲಯದ ಆದೇಶದ ಮೇರೆಗೆ
ಸಹಿ/- ಶಿರಸ್ತೇದಾರರು, ಸಿ.ಜೆ. & ಜೆ.ಎಂ.ಎಫ್.ಸಿ. ನ್ಯಾಯಾಲಯ ಹೂವಿನಹಡಗಲಿ
ಸಹಿ/- ಶ್ರೀ ಟಿ. ವಿಜಯಕುಮಾರ, ಶ್ರೀ ಗುರುರಾಜ ಕೆ.ಎಂ., ಅರ್ಜಿದಾರರ ಪರ ವಕೀಲರು, ಹೂವಿನಹಡಗಲಿ.

---

ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಹೂವಿನಹಡಗಲಿ.
ಕ್ರಿಮಿನಲ್ ಮಿಸ್ಲೇನಿಯಸ್ ಸಂಖ್ಯೆ: 498/2026 ಕ್ರಿಮಿನಲ್ ಮಿಸ್ಲೇನಿಯಸ್ ಸಂಖ್ಯೆ: 449/2026
ಅರ್ಜಿದಾರರು : ಶ್ರೀ ಪಿ. ಶೇಖರಪ್ಪ ತಂದೆ ಕೊಟ್ರಬಸಪ್ಪ, ವಯಸ್ಸು 83 ವರ್ಷ, ಸಾ॥ ಭಾವಿಹಳ್ಳಿ ಗ್ರಾಮ, ತಾ॥ ಹೂವಿನಹಡಗಲಿ ಜಿ॥ ವಿಜಯನಗರ
ವಿರುದ್ಧ
ಎದುರುದಾರರು : ಮಾನ್ಯ ತಹಶೀಲ್ದಾರರು ತಾಲೂಕು ಕಾರ್ಯಾಲಯ & ಇನ್ನೊಬ್ಬರು, ಹೂವಿನಹಡಗಲಿ,
ಸಾರ್ವಜನಿಕ ನೋಟಿಸು

---

ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಹೂವಿನಹಡಗಲಿ.
ಕ್ರಿಮಿನಲ್ ಮಿಸ್ಲೇನಿಯಸ್ ಸಂಖ್ಯೆ: 543/2025 ಕ್ರಿಮಿನಲ್ ಮಿಸ್ಲೇನಿಯಸ್ ಸಂಖ್ಯೆ: 552/2025

---

ಮಾನ್ಯ ದಿವಾಣಿ ನ್ಯಾಯಾಧೀಶರ ನ್ಯಾಯಾಲಯ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಹೂವಿನಹಡಗಲಿ
ಕ್ರಿಮಿನಲ್ ಮಿಸ್ ನಂ. 547/2026
1) ಶ್ರೀ ಹೆಚ್.ಎಂ. ಕೊಟ್ರಯ್ಯ ತಂದೆ ಹೆಚ್.ಎಂ. ಗುರುವಯ್ಯ 39 ವರ್ಷ, ವ್ಯವಸಾಯ. ಸಾ: ಇಟ್ಟಿಗಿ ಗ್ರಾಮ. ಹೂವಿನಹಡಗಲಿ ತಾಲೂಕು, ವಿಜಯನಗರ ಜಿಲ್ಲಾ .....ಅರ್ಜಿದಾರರು.
ವಿರುದ್ಧ
1). ತಹಶೀಲ್ದಾರರು ತಾಲ್ಲೂಕ ಕಛೇರಿ ಹೂವಿನಹಡಗಲಿ.
2) ಗ್ರಾಮ ಲೆಕ್ಕಾಧಿಕಾರಿಗಳು ಇಟ್ಟಿಗಿ ಗ್ರಾಮ .....ಎದುರುದಾರರು.
ಸಾರ್ವಜನಿಕ ನೋಟಿಸ್

---

ಮಾನ್ಯ ದಿವಾಣಿ ನ್ಯಾಯಾಧೀಶರ ನ್ಯಾಯಾಲಯ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಹೂವಿನಹಡಗಲಿ
ಕ್ರಿಮಿನಲ್ ಮಿಸ್ ನಂ. 584/2026
1) ಶ್ರೀ ಬಾರಿಕರ ಶಿವಕುಮಾರ ತಂದೆ ಬಿ. ಪಂಪಣ್ಣ, 64 ವರ್ಷ, ವ್ಯವಸಾಯ. ಸಾ: ಇಟ್ಟಿಗಿ ಗ್ರಾಮ. ಹೂವಿನಹಡಗಲಿ ತಾಲೂಕು, ವಿಜಯನಗರ ಜಿಲ್ಲಾ .....ಅರ್ಜಿದಾರರು.
ವಿರುದ್ಧ
1). ತಹಶೀಲ್ದಾರರು ತಾಲ್ಲೂಕ ಕಛೇರಿ ಹೂವಿನಹಡಗಲಿ.
2) ಗ್ರಾಮ ಲೆಕ್ಕಾಧಿಕಾರಿಗಳು ಇಟ್ಟಿಗಿ ಗ್ರಾಮ .....ಎದುರುದಾರರು.
ಸಾರ್ವಜನಿಕ ನೋಟಿಸ್

## ಕಿರುಸುದ್ದಿ

### ಜಿಎಸ್‌ಪಾಗೆ ಸಚಿವ ಸ್ಥಾನ ನೀಡಲಿ: ಕೋಲಕಾರ



**ಗಜೇಂದ್ರಗಡ:** ರಾಜ್ಯ ಸಚಿವ ಸಂಪುಟ ವಿಸ್ತರಣೆ ವೇಳೆ ರೋಣ ವಿಧಾನಸಭಾ ಕ್ಷೇತ್ರದ ಶಾಸಕ ಜಿ.ಎಸ್. ಪಾಟೀಲ ಅವರಿಗೆ ಸಚಿವ ಸ್ಥಾನ ನೀಡುವಂತೆ ಕಾಂಗ್ರೆಸ್ ಅಲ್ಪಸಂಖ್ಯಾತ ಘಟಕದ ರಾಜ್ಯ ಪ್ರಧಾನ ಕಾರ್ಯದರ್ಶಿ ಎ.ಡಿ. ಕೋಲಕಾರ ಮುಖ್ಯಮಂತ್ರಿ ಹಾಗೂ ಪಕ್ಷದ ವರಿಷ್ಠರನ್ನು ಆಗ್ರಹಿಸಿದ್ದಾರೆ.

ಈ ಕುರಿತು ಪತ್ರಿಕಾ ಪ್ರಕಟಣೆ ನೀಡಿರುವ ಅವರು, ರೋಣ ಕ್ಷೇತ್ರದಲ್ಲಿ ಶಾಸಕ ಜಿ.ಎಸ್. ಪಾಟೀಲ ಅವರು ಜನಪರ ಆಡಳಿತದ ಮೂಲಕ ಉತ್ತಮ ಹೆಸರು ಗಳಿಸಿದ್ದು, ಕ್ಷೇತ್ರದ ಅಭಿವೃದ್ಧಿಗೆ ನಿರಂತರವಾಗಿ ಶ್ರಮಿಸುತ್ತಿದ್ದಾರೆ. ರೈತರು, ಕಾರ್ಮಿಕರು, ಮಹಿಳೆಯರು, ಯುವಕರು ಸೇರಿದಂತೆ ಎಲ್ಲ ವರ್ಗದ ಜನರ ಸಮಸ್ಯೆಗಳಿಗೆ ಸ್ಪಂದಿಸುವ ಮೂಲಕ ಜನರ ವಿಶ್ವಾಸವನ್ನು ಗಳಿಸಿದ್ದಾರೆ. ಕಾಂಗ್ರೆಸ್ ಪಕ್ಷದ ಸಂಘಟನೆ ಬಲಪಡಿಸುವಲ್ಲಿ ಹಾಗೂ ಪಕ್ಷದ ತತ್ವ-ಸಿದ್ಧಾಂತಗಳನ್ನು ಜನರಿಗೆ ತಲುಪಿಸುವಲ್ಲಿ ಜಿ.ಎಸ್. ಪಾಟೀಲ ಅವರು ಪ್ರಮುಖ ಪಾತ್ರ ವಹಿಸಿದ್ದು, ಅವರ ಅನುಭವ ಹಾಗೂ ಆಡಳಿತ ಸಾಮರ್ಥ್ಯವನ್ನು ಪರಿಗಣಿಸಿ ಸಚಿವ ಸಂಪುಟದಲ್ಲಿ ಅವಕಾಶ ನೀಡಿದರೆ ರಾಜ್ಯದ ಅಭಿವೃದ್ಧಿಗೆ ಮತ್ತಷ್ಟು ಕೊಡುಗೆ ನೀಡಲಿದ್ದಾರೆ. ಉತ್ತರ ಕರ್ನಾಟಕ ಭಾಗಕ್ಕೆ ಸಮರ್ಪಕ ಪ್ರಾತಿನಿಧ್ಯ ಕಲ್ಪಿಸುವ ದೃಷ್ಟಿಯಿಂದಲೂ ರೋಣ ಕ್ಷೇತ್ರದ ಶಾಸಕರಿಗೆ ಸಚಿವ ಸ್ಥಾನ ನೀಡುವುದು ಅಗತ್ಯವಾಗಿದೆ ಎಂದಿದ್ದಾರೆ.

### ಅಕ್ಷರಾಭ್ಯಾಸ ಕಾರ್ಯಕ್ರಮ



**ಗಜೇಂದ್ರಗಡ:** ನಗರದ ರೋಣ ರಸ್ತೆಯಲ್ಲಿನ ಶ್ರೀ ತುಳಜಾಭವಾನಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿನ ಮಕ್ಕಳಿಗೆ ಶ್ರೀಸೇವಾಲಾಲ ಕಲ್ಯಾಣ ಮಂಟಪದಲ್ಲಿ ಅಕ್ಷರಾಭ್ಯಾಸ ಕಾರ್ಯಕ್ರಮವು ಶುಕ್ರವಾರ ನಡೆಯಿತು.

ಕಾರ್ಯಕ್ರಮವನ್ನು ಸಮಾಜಸೇವಕರಾದ ಶರಣಪ್ಪ ರೇವಡಿ ಉದ್ಘಾಟಿಸಿ ಮಾತನಾಡಿ, ಮಕ್ಕಳಿಗೆ ಉತ್ತಮ ಶಿಕ್ಷಣದ ಜೊತೆಗೆ ಸಂಸ್ಕಾರಯುತ ಜೀವನ ಮೌಲ್ಯಗಳನ್ನು ಬೆಳೆಸುವುದು ಪ್ರತಿಯೊಬ್ಬ ಪೋಷಕರ ಮತ್ತು ಶಿಕ್ಷಕರ ಜವಾಬ್ದಾರಿಯಾಗಿದೆ. ಅಕ್ಷರಾಭ್ಯಾಸವು ಕೇವಲ ವಿದ್ಯಾಭ್ಯಾಸದ ಆರಂಭವಲ್ಲ, ಜ್ಞಾನಾರ್ಜನೆಯ ಪವಿತ್ರ ಪಯಣಕ್ಕೆ ಮೊದಲ ಮೆಟ್ಟಿಲಾಗಿದೆ ಎಂದರು. ಶಾಲೆಯ ಸಂಸ್ಥಾಪಕ ಲಾಲಪ್ಪ ರಾಠೋಡ ಅಧ್ಯಕ್ಷತೆ ವಹಿಸಿ ಮಾತನಾಡಿ, ಪ್ರತಿ ಮಗುವಿನ ಪ್ರತಿಭೆಯನ್ನು ಗುರುತಿಸಿ ಉತ್ತಮ ಪ್ರಜೆಗಳನ್ನಾಗಿ ರೂಪಿಸುವ ಉದ್ದೇಶದಿಂದ ವಿವಿಧ ಶೈಕ್ಷಣಿಕ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗುತ್ತಿದೆ ಎಂದರು. ಕಾಲಕಾಲೇಶ್ವರ ದೇವಸ್ಥಾನದ ಅರ್ಚಕ ರಾಜನಾರಾಯಣ ಪೂಜಾರ ಅವರು ವೇದಮಂತ್ರಗಳ ಪಠಣದೊಂದಿಗೆ ಪುಟ್ಟ ಮಕ್ಕಳಿಗೆ ಸಂಪ್ರದಾಯಬದ್ಧವಾಗಿ ಅಕ್ಷರಾಭ್ಯಾಸ ನೆರವೇರಿಸಿದರು. ಅಕ್ಕಿ ತುಂಬಿದ ತಟ್ಟೆಯಲ್ಲಿ ಮಕ್ಕಳಿಂದ ಓಂ ಹಾಗೂ ಮೊದಲ ಅಕ್ಷರಗಳನ್ನು ಬರೆಯಿಸಿ ಆಶೀರ್ವದಿಸಿದರು. ಪೋಷಕರು ಮಕ್ಕಳೊಂದಿಗೆ ಉತ್ಸಾಹದಿಂದ ಪಾಲ್ಗೊಂಡು ಈ ಅಪರೂಪದ ಕ್ಷಣವನ್ನು ಸಂಭ್ರಮದಿಂದ ಆಚರಿಸಿದರು. ಸರ್ವೋದಯ ಮಹಿಳಾ ಕಾಲೇಜಿನ ಅಧ್ಯಕ್ಷ ಲೋಕಪ್ಪ ರಾಠೋಡ, ಶಿಧರ ಹೂಗಾರ, ಆರ್.ಕೆ.ಚವ್ಹಾಣ, ಮುಖ್ಯಶಿಕ್ಷಕಿ ರೇಖಾ ಮಾನೆ, ಹಿರಿಯ ಶಿಕ್ಷಕಿ ಮಂಜುಳಾ ಭಜೇಂತ್ರಿ, ಸುನಿತಾ ಹವಾಲ್ದಾರ, ವೀರಮ್ಮ ಹೂಗಾರ, ಭಾಗ್ಯ ಆದಾಪೂರ, ದೀಪಾ ಗಜಕೋಶ, ಉಮಾ ಯಂಕಚಿ, ವೈ. ಎಲ್.ನಧಾಪ, ರುದ್ರಪ್ಪ ಚವ್ಹಾಣ, ಲಕ್ಷ್ಮಿ ಗಣವಾರಿ, ದಿವ್ಯಾ ಚವ್ಹಾಣ ಸೇರಿದಂತೆ ಅನೇಕರು ಇದ್ದರು.

### ಜ್ಯೋತಿ ಕೊಡ್ಲಿವಾಡ ನಿಧನ



**ನರಗುಂದ:** ತಾಲೂಕಿನ ಬನಹಟ್ಟಿ ಗ್ರಾಮದ ಕರ್ನಾಟಕ ಪಬ್ಲಿಕ್ ಶಾಲೆಯ ಎಲ್.ಕೆ.ಜಿ ವಿಭಾಗ ಶಿಕ್ಷಕಿ ಜ್ಯೋತಿ ಬಸವರಾಜ ಕೊಡ್ಲಿವಾಡ (34) ಶುಕ್ರವಾರ ಹೃದಯಾಘಾತದಿಂದ ನಿಧನ ಹೊಂದಿದ್ದಾರೆ. ಮೃತರು ಪತಿ, ಓರ್ವ ಪುತ್ರ, ಓರ್ವ ಪುತ್ರಿ ಹಾಗೂ ಅಪಾರ ಬಂಧುಬಳಗವನ್ನು ಅಗಲಿದ್ದಾರೆ.

### ಗದಗ ಮಾರುಕಟ್ಟೆ ಧಾರಣೆ (ಕ್ವಿಂಟಲ್)

| | |
|---|---|
| ಅಲಸಂದೆಕಾಳು | 2015-5868 |
| ಕಡಲೆಕಾಳು | 2029-5822 |
| ಉದ್ದಿನಕಾಳು | 2050-6789 |
| ಹೆಸರಕಾಳು | 2185-8560 |
| ಶೇಂಗಾ | 3715-9019 |
| ಜೋಳ | 1550-4469 |
| ಮಡಿಕೆ | 2015-5015 |
| ಸಾಸುವೆ | 6219-6880 |
| ಕುಸುಬೆ | 4159-5169 |
| ಸೋಯಾಬಿನ್ | 6429-6629 |
| ಸೂರ್ಯಕಾಂತಿ | 6368-7259 |
| ತೊಗರಿ | 1515-4560 |
| ಗೋಧಿ | 2119-3169 |



ಗದಗ: ನಗರದ ವೀರೇಶ್ವರ ಪುಣ್ಯಾಶ್ರಮದಲ್ಲಿ ಗಾನಯೋಗಿ ಶಿವಯೋಗಿ ಲಿಂ. ಪಂ. ಪಂಚಾಕ್ಷರಿ ಗವಾಯಿಗಳ 82ನೇ ಹಾಗೂ ಪದ್ಮಭೂಷಣ ಲಿಂ. ಡಾ.ಪಂ. ಪುಟ್ಟರಾಜ ಕವಿ ಗವಾಯಿಗಳ 16ನೇ ಪುಣ್ಯಸ್ಮರಣೋತ್ಸವ ಮತ್ತು ಉಭಯ ಗುರುಗಳ ಜಾತ್ರಾ ಮಹೋತ್ಸವದಲ್ಲಿ ಪಂ.ಪಂಚಾಕ್ಷರ ಗವಾಯಿಗಳ ಅಂಧರ ವಸತಿಯುತ ವಿಶೇಷ ಸಂಗೀತ ಶಾಲೆಯ ಅಂಧ ವಿದ್ಯಾರ್ಥಿಗಳು ಸಂಗೀತ ಸೇವೆ ನೀಡಿದರು. ಶಿರಹಟ್ಟಿಯ ಜ.ಫಕೀರ ದಿಂಗಾಲೇಶ್ವರ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು.

## ಸಮಾಜದ ಅಭಿವೃದ್ಧಿಗಾಗಿ ಬದುಕಿದ್ದವರು ಸ್ಮರಣೀಯರು

**ಗದಗ:** ಸಮಾಜದ ಅಭಿವೃದ್ಧಿಗಾಗಿ ಬದುಕಿದವರನ್ನು ಸಮಾಜ ಸ್ಮರಣೆ ಮಾಡುತ್ತದೆ. ಸಮಾಜದಿಂದ ನಿರ್ಲಕ್ಷ್ಯಕ್ಕೊಳಗಾದ ಅಂಧ- ಅನಾಥ ಮಕ್ಕಳನ್ನು ಸಲುಹಿ ಅವರಿಗೆ ಶಿಕ್ಷಣ, ಅನ್ನ ನೀಡಿ ಬದುಕನ್ನು ನೀಡಿದವರು ಉಭಯ ಗುರುಗಳು ಎಂದು ವಿಧಾನ ಪರಿಷತ್ ಸದಸ್ಯ ಎಸ್.ವಿ.ಸಂಕನೂರ ಹೇಳಿದರು. ನಗರದ ವೀರೇಶ್ವರ ಪುಣ್ಯಾಶ್ರಮದಲ್ಲಿ ಲಿಂ.ಪಂ.ಪಂಚಾಕ್ಷರಿ ಗವಾಯಿಗಳ 82ನೇ ಹಾಗೂ ಲಿಂ.ಡಾ.ಪಂ.ಪುಟ್ಟರಾಜ ಗವಾಯಿಗಳ 16 ನೇ ಪುಣ್ಯಾರಾಧನೆ ಹಾಗೂ ಸಂಗೀತ ಸಮಾರಾಧನೆ ಕಾರ್ಯಕ್ರಮದಲ್ಲಿ ಮಾತನಾಡಿದರು. ವೀರೇಶ್ವರ ಪುಣ್ಯಾಶ್ರಮದ ಕಲ್ಲಯ್ಯಜ್ಜನವರು ಮಾತನಾಡಿ, ಗುರು ಕಾರುಣ್ಯವಿಲ್ಲದೆ ಯಾವ ಕಾರ್ಯಗಳು ನಡೆಯುವುದಿಲ್ಲ ಎಂದರು. ಕೀರ್ತನ ಸಮ್ಮೇಳನದ ಸಾನ್ನಿಧ್ಯ ಬಾಳೆಹೊನ್ನೂರಿನ ರಂಭಾಪುರಿ ಮಹಾ ಪೀಠದ ಶ್ರೀಮದ್ ರಂಭಾಪುರಿ ಜ.ಪ್ರಸನ್ನ ರೇಣುಕಾ ವೀರಸೋಮೇಶ್ವರ ರಾಜದೇಶಿ ಕೇಂದ್ರ ಶಿವಾಚಾರ್ಯ ಭಗವತ್ಪಾದಂಗಳವರು ವಹಿಸಿದ್ದರು. ಎಮ್ಮಿಗನೂರಿನ ವಾಮದೇವ ಮಹಾಂತ ರಾಜದೇಶಿಕೇಂದ್ರ ಶಿವಾಚಾರ್ಯ ಶ್ರೀಗಳು ಅಧ್ಯಕ್ಷತೆ ವಹಿಸಿದ್ದರು. ಚಳಗೇರಿ ಹಿರೇಮಠದ ವೀರ ಸಂಗಮೇಶ್ವರ ಶಿವಾಚಾರ್ಯ ಸ್ವಾಮೀಜಿ ನೇತೃತ್ವ ವಹಿಸಿದ್ದರು. ಸಮ್ಮುಖವನ್ನು ನೆಗಳೂರು ಸಂಸ್ಥಾನ ಹಿರೇಮಠದ ಗುರುಶಾಂತೇಶ್ವರ ಶಿವಾಚಾರ್ಯ ಸ್ವಾಮೀಜಿ, ಹೂವಿನ ಹಡಗಲಿಯ ಡಾ.ಹಿರಿಯ ಶಾಂತವೀರ ಸ್ವಾಮೀಜಿ, ಮೈನಹಳ್ಳಿ ಬಿಕನಹಳ್ಳಿಯ ಸಿದ್ದೇಶ್ವರ ಶಿವಾಚಾರ್ಯ ಸ್ವಾಮೀಜಿ, ನರೇಗಲ್ ಸವದತ್ತಿ ಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮೀಜಿ, ಅಡ್ನೂರ-ರಾಜೂರ-ಗದಗ ಬೃಹನ್ಮಠದ ಅಭಿನವ ಪಂಚಾಕ್ಷರ ಶಿವಾಚಾರ್ಯ ಸ್ವಾಮೀಜಿ, ಅಲಮೇಲ ಚಂದ್ರಶೇಖರ ಶಿವಾಚಾರ್ಯರು ಸಮ್ಮುಖ ವಹಿಸಿದ್ದರು. ಸೋಲ್ ಟ್ರಸ್ಟ್ ಅಧ್ಯಕ್ಷ ನಿಂಗಪ್ಪ ಕೆಂಗಾರ, ಚಂದ್ರು ಬಾಳಿಹಳ್ಳಿಮಠ, ಮಹೇಶ ಶಾಬಾದಿಮಠ, ವಿ.ಎಸ್.ಮಾಳೆಕೊಪ್ಪಮಠ, ಹೇಮರಾಜ ಶಾಸ್ತ್ರಿ ಹಿರೇಮಠ, ಸೋಲ್ ಟ್ರಸ್ಟ್ ಸದಸ್ಯ ಪರಶುರಾಮ ಕಟ್ಟಿಮನಿ ಇದ್ದರು.



ಗದಗ: ನಗರದ ವೀರೇಶ್ವರ ಪುಣ್ಯಾಶ್ರಮದಲ್ಲಿ ಲಿಂ.ಪಂ.ಪಂಚಾಕ್ಷರಿ ಗವಾಯಿಗಳವರ 82ನೇ ಹಾಗೂ ಲಿಂ.ಡಾ.ಪಂ.ಪುಟ್ಟರಾಜ ಗವಾಯಿಗಳವರ 16 ನೇ ಪುಣ್ಯಾರಾಧನೆ ಹಾಗೂ ಸಂಗೀತ ಸಮಾರಾಧನೆ ಕಾರ್ಯಕ್ರಮ ನಡೆಯಿತು.

# ಮತದಾರರ ನಿಖರ ದಾಖಲೆಗೆ ಸಿದ್ಧತೆ



**ಗದಗ:** ನಮ್ಮ ದೇಶವು ಜಗತ್ತಿನಲ್ಲೇ ಅತ್ಯಂತ ದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರವಾಗಿದೆ. ಇಲ್ಲಿ ದೇಶವನ್ನು ಮುನ್ನಡೆಸುವ ಮತ್ತು ಕಾನೂನು ರೂಪಿಸುವ ಜನಪ್ರತಿನಿಧಿಗಳನ್ನು ಆಯ್ಕೆ ಮಾಡುವ ಪರಮಾಧಿಕಾರ ಇರುವುದು ಮತದಾರರಿಗೆ ಮಾತ್ರ. ಅರ್ಹ ಮತದಾರರು ಮತದಾನ ಪಟ್ಟಿಯಿಂದ ಹೊರಗುಳಿಯಬಾರದು ಎಂದು ಜಿಲ್ಲಾಧಿಕಾರಿ ಸಿ.ಎನ್. ಶ್ರೀಧರ ಹೇಳಿದರು.

ನಗರದ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಸ್ವಿಪ್ ಸಮಿತಿ ತಾಲೂಕು ಸ್ವಿಪ್ ಸಮಿತಿ ಗದಗ ಇವರುಗಳ ಸಹಯೋಗದಲ್ಲಿ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ 2026 ಅಂಗವಾಗಿ ಶುಕ್ರವಾರ ನಗರದ ಮುನ್ಸಿಪಲ್ ಹೈಸ್ಕೂಲ್ ಆವರಣದಲ್ಲಿ ಜನಜಾಗೃತಿ ಜಾಥಾ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು. ಪ್ರತಿ 10 ವರ್ಷಗಳಿಗೊಮ್ಮೆ ಮತದಾರರ ಪಟ್ಟಿಯನ್ನು ಸಂಪೂರ್ಣವಾಗಿ ಹೊಸದಾಗಿ ಸಿದ್ಧಪಡಿಸುವ ಪ್ರಕ್ರಿಯೆ ನಡೆಯುತ್ತದೆ. ಈ ಹಿಂದೆ ಇದ್ದ ಮತದಾರರು ಸದ್ಯ ಅದೇ ಸ್ಥಳದಲ್ಲಿದ್ದಾರೆಯೇ ಹೊಸದಾಗಿ ಯಾರೆಲ್ಲಾ ಸೇರ್ಪಡೆಯಾಗಬೇಕು ಎಂಬುದನ್ನು ಗುರುತಿಸಿ ದೃಢೀಕರಿಸುವ ಸಲುವಾಗಿ ಈ ವರ್ಷ ವಿಶೇಷ ಪರಿಷ್ಕರಣೆ ಕಾರ್ಯವನ್ನು ಹಮ್ಮಿಕೊಳ್ಳಲಾಗಿದೆ. ಈ ಮೂಲಕ ಜಿಲ್ಲೆಯಲ್ಲಿರುವ ಅಧಿಕೃತ ಮತದಾರರ ನಿಖರವಾದ ದಾಖಲೆ ಸಿದ್ಧಪಡಿಸಲಾಗುತ್ತಿದೆ ಎಂದರು.

> ಸಾರ್ವಜನಿಕರು ಹಾಗೂ ಯುವ ಜನಾಂಗದವರು ತಮ್ಮ ಪೋಷಕರ, ಸಂಬಂಧಿಕರ ಹಾಗೂ ತಮ್ಮ ಪರಿಚಯದವರ ಹೆಸರು ಮತದಾರರ ಪಟ್ಟಿಯಲ್ಲಿದೆಯೇ ಎಂಬುದನ್ನು ಖಚಿತಪಡಿಸಿಕೊಳ್ಳಬೇಕು. ಮತಗಟ್ಟೆ ಮಟ್ಟದ ಅಧಿಕಾರಿಗಳು ಮನೆ ಮನೆಗೆ ಭೇಟಿ ನೀಡಿದಾಗ ಸೂಕ್ತ ಫಾರಂಗಳನ್ನು ಭರ್ತಿ ಮಾಡಿ ನೀಡಿ, ಪ್ರಕ್ರಿಯೆ ಯಶಸ್ವಿಗೊಳಿಸಿ.
> ■ ಸಿ.ಎನ್. ಶ್ರೀಧರ್, ಡಿಸಿ

ಜಿಲ್ಲಾ ನೋಡಲ್ ಅಧಿಕಾರಿ ಎ.ಎ.ಕಂಬಾಳಿಮಠ, ಜಿಲ್ಲಾ ಪಂಚಾಯತ್ ಉಪಕಾರ್ಯದರ್ಶಿ ಸಿ.ಆರ್.ಮುಂಡರಗಿ, ಉಪವಿಭಾಗಾಧಿಕಾರಿ ಗಂಗಪ್ಪ ಎಂ., ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಡಾ.ಬಸವರಾಜ ಬಳ್ಳಾರಿ, ಸಮಾಜ ಕಲ್ಯಾಣ ಇಲಾಖೆಯ ಉಪ ನಿರ್ದೇಶಕಿ ಡಾ.ನಂದಾ ಹಣಬರಹಟ್ಟಿ, ಡಿಡಿಎಲ್ ಆರ್. ರುದ್ರಣ್ಣಗೌಡ, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ಉಪನಿರ್ದೇಶಕ ಆರ್. ಎಸ್. ಬುರಡಿ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಅಧಿಕಾರಿ ಮೆಹಬೂಬ ತುಂಬರಮಟ್ಟಿ, ಅಲ್ಪ ಸಂಖ್ಯಾತರ ಕಲ್ಯಾಣ ಇಲಾಖೆಯ ಜಿಲ್ಲಾಧಿಕಾರಿ ಅಮಿತ ಬಿದರಿ, ಯುವಜನ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕ ಡಾ. ಶರಣು ಗೋಗೇರಿ, ಪ್ರವಾಸೋದ್ಯಮ ಇಲಾಖೆ ಸಹಾಯಕ ನಿರ್ದೇಶಕ ಕೊಟ್ರೇಶ್ವರ ವಿಭೂತಿ ಇದ್ದರು.

### ಎಸ್‌ಐಆರ್ ಅರಿವಿಗೆ ಬೈಕ್ ರ್‍ಯಾಲಿ

**ನರಗುಂದ:** ಮತದಾರರ ವಿಶೇಷ ಸಮಗ್ರ ಪರಿಷ್ಕರಣೆ (ಎಸ್ ಐಆರ್) ಕುರಿತು ಸಾರ್ವಜನಿಕರಲ್ಲಿ ಅರಿವು ಮೂಡಿಸುವ ಉದ್ದೇಶದಿಂದ ತಾಪಂ, ತಾಲೂಕು ಆಡಳಿತ, ಪುರಸಭೆ ಸೇರಿದಂತೆ ವಿವಿಧ ಇಲಾಖೆಗಳು ಹಾಗೂ ತಾಲೂಕು ಸ್ವಿಪ್ ಸಮಿತಿಯಿಂದ ಶುಕ್ರವಾರ ನಗರದಲ್ಲಿ ಬೃಹತ್ ಬೈಕ್ ರ್‍ಯಾಲಿ ನಡೆಸಿದರು. ಪಟ್ಟಣದ ದಂಡಾಪೂರ ಉಡಚಾ ಪರಮೇಶ್ವರಿ ದೇವಸ್ಥಾನದಿಂದ ಬೈಕ್ ರ್‍ಯಾಲಿ ಆರಂಭವಾಯಿತು.

ತಾಪಂ ಇಓ ಶ್ರೀಧರ ಚಿನಗುಂಡಿ ಮಾತನಾಡಿ, ಜೂನ್ 30 ರಿಂದ ಜುಲೈ 29ರವರೆಗೆ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ ನಡೆಯುತ್ತಿದ್ದು, ಬೂತ್ ಮಟ್ಟದ ಅಧಿಕಾರಿಗಳು ಮನೆ-ಮನೆಗೆ ಭೇಟಿ ನೀಡಿ ಮಾಹಿತಿ ಸಂಗ್ರಹಿಸುತ್ತಿದ್ದಾರೆ. ಸಾರ್ವಜನಿಕರು ಬಿಎಲ್‌ಒಗಳು ಕೇಳುವ ಪ್ರಶ್ನೆಗಳಿಗೆ ಸರಿಯಾದ ಮಾಹಿತಿ ನೀಡಿ, ಅಗತ್ಯ ನಮೂನೆಗಳನ್ನು ಭರ್ತಿ ಮಾಡಿ ಸ್ವೀಕೃತಿ ಪಡೆಯುವ ಮೂಲಕ ಸಹಕರಿಸಬೇಕು ಎಂದರು.

ಪುರಸಭೆ ಮುಖ್ಯಾಧಿಕಾರಿ ಸುಭಾಸ ಖಿದಾನಪುರ ಮಾತನಾಡಿ, ತಾಲೂಕು ಸ್ವೀಪ್ ಸಮಿತಿಯಿಂದ ಶಾಲಾ-ಕಾಲೇಜುಗಳು, ಗ್ರಾಮೀಣ ಪ್ರದೇಶಗಳು ಹಾಗೂ ಸಾರ್ವಜನಿಕ ಸ್ಥಳಗಳಲ್ಲಿ ವಿಶೇಷ ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಮತದಾರರ ಪಟ್ಟಿಯಲ್ಲಿ ಅರ್ಹ ನಾಗರಿಕರನ್ನು ಸೇರ್ಪಡೆಗೊಳಿಸುವ ಉದ್ದೇಶದಿಂದ ವಿವಿಧ ಮಾಧ್ಯಮಗಳ ಮೂಲಕ ವ್ಯಾಪಕ ಅರಿವು ಮೂಡಿಸಲಾಗುತ್ತಿದೆ ಎಂದರು. ಸಹಾಯಕ ನಿರ್ದೇಶಕ (ಗ್ರಾಮೀಣ ಉದ್ಯೋಗ) ಸಂತೋಷಕುಮಾರ ಪಾಟೀಲ, ಪಂಚಾಯತ ರಾಜ್ ಸಹಾಯಕ ನಿರ್ದೇಶಕಿ ಕೃಷ್ಣಮ್ಮ ಹಾದಿಮನಿ, ಹಿರಿಯ ಆರೋಗ್ಯ ನಿರೀಕ್ಷಕ ಸಂಗಮೇಶ ಬ್ಯಾಳಿ, ತಾಲೂಕು ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಮಲ್ಲಿಕಾರ್ಜುನ ಹಿರೇಮಠ ಸೇರಿದಂತೆ ಇತರರಿದ್ದರು.



## ಎಸ್.ಐ.ಆರ್ ಪ್ರಕ್ರಿಯೆಗೆ ಸ್ಪಂದಿಸಿ: ಶ್ರೀಗಳು

**ಮುಂಡರಗಿ:** ಎಸ್.ಐ.ಆರ್ ಪ್ರಕ್ರಿಯೆ ಪ್ರಾರಂಭವಾಗಿದ್ದು, ಬಿಎಲ್‌ಓ ಅವರು ಮನೆಗೆ ಭೇಟಿ ನೀಡಿ ಮತದಾರ ಪಟ್ಟಿಯಲ್ಲಿ ಹೆಸರಿರುವ ಮತದಾರರಿಗೆ ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಸ್ಕರಣೆ ಎನ್ಯುಮೆರೇಶನ್ ಫಾರ್ಮ್ ನೀಡಲಿದ್ದಾರೆ. ಮತದಾರರು ಫಾರ್ಮ ಭರ್ತಿಮಾಡಿ, ಸಹಿಮಾಡಿ ಬಿಎಲ್‌ಓ ಗಳಿಗೆ ಮರಳಿ ನೀಡುವ ಮೂಲಕ ಎಸ್ .ಐ.ಆರ್ ಪ್ರಕ್ರಿಯೆಗೆ ಎಲ್ಲರೂ ಸ್ಪಂದಿಸಬೇಕು ಎಂದು ನಾಡೋಜ ಡಾ.ಅನ್ನದಾನೀಶ್ವರ ಸ್ವಾಮೀಜಿ ಹೇಳಿದರು.

ಅವರು ಪಟ್ಟಣದ ಅನ್ನದಾನೀಶ್ವರ ಸಂಸ್ಥಾನ ಮಠದಲ್ಲಿ ತಮ್ಮ ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಸ್ಕರಣೆ ಎನುಮೆರೇಶನ್ ಫಾರ್ಮ್ ಭರ್ತಿಮಾಡಿ ಸಹಿ ಮಾಡಿ ಬಿಎಲ್ ಒಗೆ ಕೊಡುವ ಮೂಲಕ ತಾಲೂಕಿನಾದ್ಯಂತ ಪ್ರಾರಂಭವಾಗಿರುವ ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಸ್ಕರಣೆ ಕಾರ್ಯಕ್ಕೆ ಚಾಲನೆ ನೀಡಿದರು.

ಈ ಕಾರ್ಯ ಜರುಗುವುದರಿಂದ ಭಾರತದ ನಿಖರವಾದ ಮತದಾರರ ಸಂಖ್ಯೆ ತಿಳಿಯಲು ಸಹಾಯವಾಗುತ್ತದೆ. ಈ ಕಾರ್ಯವು ಎಲ್ಲೆಡೆ ಯಶಸ್ವಿಯಾಗಿ ಜರುಗುವ ಮೂಲಕ ಮುಂಬರುವ ವರ್ಷಗಳಲ್ಲಿ ಇದರ ಯಶಸ್ಸು ಎಲ್ಲವರ್ಗದ ಜನಾಂಗಕ್ಕೂ ದೊರೆತಾಗ ದೇಶದ ವಿಶೇಷ ಅಭಿವೃದ್ಧಿಗೆ ಕಾರಣವಾಗುತ್ತದೆ. ಈ ಕಾರ್ಯಕ್ಕೆ ಸಾರ್ವಜನಿಕರು ಸ್ಪಂದಿಸಬೇಕು ಎಂದರು.

ತಾಲೂಕು ಕ್ಷೇತ್ರ ಶಿಕ್ಷಣಾಧಿಕಾರಿ ಗಂಗಾಧರ ಅಣ್ಣೇಗೇರಿ, ಬೂತ್ ಮಟ್ಟದ ಅಧಿಕಾರಿ (ಬಿಎಲ್‌ಓ) ಬಸವರಾಜ ಇಟಗಿ, ವಿಶ್ವನಾಥ ಉಳ್ಳಾಗಡ್ಡಿ, ಎಸ್.ಡಿ.ಬಸೇಗೌಡ್ರ, .ಎಚ್. ಹೊಳೆಯಮ್ಮನವರ, ಎಸ್.ಸಿ.ಚಕ್ಕಡಿಮಠ, ಸುಭಾಷ್ಚಂದ್ರ ಹೊಸಮನಿ ಉಪಸ್ಥಿತರಿದ್ದರು.



### ಮತದಾರರ ಪಟ್ಟಿಗೆ ಡಿಜಿಟಲೀಕರಣ

ಎಸ್.ಐ.ಆರ್ ಪ್ರಾರಂಭವಾಗಿದ್ದು, ಅದಕ್ಕಾಗಿ ತಾಲೂಕಿನಾದ್ಯಂತ ಎಲ್ಲ ಬಿಎಲ್‌ಓಗಳು ಮನೆ ಮನೆಗೆ ಭೇಟಿ ನೀಡಿ ಕುಟುಂಬದಲ್ಲಿರುವ ಎಲ್ಲ ಮತದಾರರಿಗೆ ಎನುಮೆರೇಶನ್ ಫಾರ್ಮ್ ನೀಡಲಿದ್ದಾರೆ. ಎಲ್ಲ ಮತದಾರರು ಎನುಮೆರೇಶನ್ ಫಾರ್ಮ್ (ಗಣತಿ ನಮೂನೆ) ಭರ್ತಿ ಮಾಡಬೇಕು. ಇದಾದ ನಂತರ ತಾವು ನೀಡಿರುವ ಮಾಹಿತಿಯ ಗಣತಿ ನಮೂನೆಯನ್ನು ಮತದಾರರ ಪಟ್ಟಿಗೆ ಡಿಜಿಟಲೀಕರಣ ಮಾಡುತ್ತೇವೆ ಎಂದು ತಹಶೀಲ್ದಾರ್ ಎರ್ರಿಸ್ವಾಮಿ ಪಿ.ಎಸ್. ಹೇಳಿದರು.

## ಸ್ವಚ್ಛತಾ ಕಾಮಗಾರಿಯಲ್ಲಿ ಭ್ರಷ್ಟಾಚಾರ ಆರೋಪ

**ನರಗುಂದ:** ಮಲಪ್ರಭಾ ಜಲಾಶಯದಿಂದ ನೀರು ಪೂರೈಕೆ ಮಾಡುವ ತಾಲೂಕಿನ ಕೊಣ್ಣೂರ ಕೊಳಚೆ ಕಾಲುವೆ ಹೂಳೆತ್ತುವ ಹಾಗೂ ಗಿಡಕಂಟೆಗಳ ಸ್ವಚ್ಛತಾ ಕಾಮಗಾರಿಯಲ್ಲಿ ಭಾರೀ ಭ್ರಷ್ಟಾಚಾರವಾಗಿದೆ ಎಂದು ಆರೋಪಿಸಿದ ಕೊಣ್ಣೂರ ಗ್ರಾಮದ ರೈತರು ನೀರಾವರಿ ನಿಗಮದ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರ ನಾಗರಾಜ ಪಿಇ ಅವರಿಗೆ ಘೇರಾವು ಹಾಕಿ ಪ್ರತಿಭಟನೆ ಮಾಡಿದರು.

ತಾಲೂಕಿನ ಕೊಣ್ಣೂರ ಗ್ರಾಮದಲ್ಲಿನ ಮಲಪ್ರಭಾ ಕೊಳಚೆ ಕಾಲುವೆ ಕಾರ್ಯಾಲಯದ ಕಚೇರಿಯಲ್ಲಿ ಕಾಲುವೆ ಕಾಮಗಾರಿಯಲ್ಲಿ ಭ್ರಷ್ಟಾಚಾರ ನಡೆದಿದೆ ಮತ್ತು ಕೊಳಚೆ ಕಾಲುವೆಗಳನ್ನು ಕೂಡಲೇ ಸ್ವಚ್ಛಗೊಳಿಸಬೇಕೆಂದು ಆಗ್ರಹಿಸಿ ಮನವಿ ಅರ್ಪಿಸಿ ಮಾತನಾಡಿದರು. ತಾಲೂಕಿನ ಕೊಣ್ಣೂರ, ಬೆಳ್ಳೇರಿ, ವಾಸನ, ಬೂದಿಹಾಳ, ಕಪ್ಪಲಿ, ಕಲ್ಲಾಪೂರ, ಶಿರೋಳ, ಅಸೂಟಿ, ಕರಮಡಿ, ಹೊಳೆ-ಆಲೂರ ಗ್ರಾಮಗಳಿಗೆ ನೀರು ಪೂರೈಕೆ ಮಾಡುವ ಕೊಳಚೆ ಕಾಲುವೆ ನಮ್ಮ ತಾಲೂಕಿನಲ್ಲಿ 18 ಕಿ.ಮೀ. ಇದೆ. ಈ ಕಾಲುವೆ ಸ್ವಚ್ಛತೆಗೆ 2025-26ನೇ ಸಾಲಿನಲ್ಲಿ ಸರ್ಕಾರ 29 ಲಕ್ಷ ರೂ. ಅನುದಾನ ಬಿಡುಗಡೆ ಮಾಡಿದೆ. ಈ ಕಾಲುವೆಯಲ್ಲಿನ ಜಾಲಿ ಕಂಟಿ, ಆಫ ಹುಲ್ಲು, ಕಸ, ಹೂಳು ತೆಗೆಯದ್ದರಿಂದ ಪ್ರತಿ ವರ್ಷ ರೈತರ ಜಮೀನಗಳಿಗೆ ಕಾಲುವೆ ನೀರು ಹೊರಚೆಲ್ಲಿ ಬೆಳೆಗಳು ನಾಶವಾಗಿವೆ. ರೈತರು ಅಧಿಕಾರಿಗಳಿಗೆ ಕಾಲುವೆ ಸ್ವಚ್ಛಗೊಳಿಸಿ ಎಂದಾಗ ನಿಗಮದ ಅಧಿಕಾರಿಗಳು ಕಾಲುವೆಗಳಿಗೆ ನೀರು ಬಂದಾಗ ಅಲ್ಪಸ್ವಲ್ಪ ಹೂಳು ತೆಗಿಸಿ ಸರ್ಕಾರದ ಅನುದಾನವನ್ನು ಲೂಟಿ ಮಾಡಿದ್ದಾರೆಂದು ಆರೋಪಿಸಿದರು.

ರೈತ ಸಂಘ ಹಾಗೂ ಹಸಿರು ಸೇನೆ ಅಧ್ಯಕ್ಷ ಉಮೇಶ ಮರ್ಚಪ್ಪನವರ, ಶಂಕರಗೌಡ ಶಿರಿಯಪ್ಪಗೌಡ್ರ, ಆನಂದ ಹಿರೇಗೌಡ್ರ, ಶರಣಪ್ಪ ಕರಿಯಪ್ಪನವರ, ಎಚ್.ಎಸ್. ಸಾಲಿಗೌಡ್ರ, ಬಸಯ್ಯ ಚಿಕ್ಕಮಠ, ಶಿವನಗೌಡ ಯಲ್ಲಪ್ಪಗೌಡ್ರ, ಮೌನೇಶ ಪಟ್ಟಣಶೆಟ್ಟಿ, ಶಂಕರಣ್ಣ ಹಿರೇಹೊಳಿ, ನೂರಂದಯ್ಯ ಹೊರಗಿನಮಠ ಸೇರಿದಂತೆ ಮುಂತಾದವರಿದ್ದರು.

- ಕಾಲುವೆ ಸ್ವಚ್ಛ ಮಾಡಲು ಬಂದಿರುವ ಅನುದಾನದ ಬಗ್ಗೆ ಸಮಗ್ರ ತನಿಖೆ ಅವಶ್ಯ
- ಕೊಳಚೆ ಕಾಲುವೆಗೆ ಬಂದಿರುವ ಅನುದಾನದಲ್ಲಿ ಭ್ರಷ್ಟಾಚಾರವಾಗಿದೆ. ಆದ್ದರಿಂದ ನೀವು ನಮಗೆ ಕಾಲುವೆ ಸ್ವಚ್ಛ ಮಾಡಿಸುತ್ತೇವೆಂದು ಒಪ್ಪಿಗೆ ಪತ್ರ ಬರೆದು ಕೊಡಬೇಕೆಂದು ಅಧಿಕಾರಿಯನ್ನು ಕೂಡಿ ಹಾಕಿ ರೈತರಿಂದ ಆಗ್ರಹ



- ನೀರಾವರಿ ನಿಗಮದ ಅಧಿಕಾರಿ ಪಿ.ಇ.ನಾಗರಾಜ ಅವರು ರೈತರಿಗೆ ಜು.6ನೇ ತಾರೀಕಿನಿಂದ ಕಾಲುವೆ ಸ್ವಚ್ಛ ಮಾಡಲು ಪ್ರಾರಂಭ ಮಾಡುತ್ತವೆಂದು ಭರವಸೆ ಪತ್ರ ಬರೆದು ಕೊಟ್ಟ ನಂತರ ಹೋರಾಟ ಹಿಂಪಡೆದ ರೈತರು

## ಹಿರಿಯ ನಾಗರಿಕರಿಗೆ ಪ್ರತ್ಯೇಕ ಸಚಿವರ ನೇಮಕ ಮಾಡಲು ರಾಜ್ಯ ಸರ್ಕಾರಕ್ಕೆ ಆಗ್ರಹ

**ಲಕ್ಷ್ಮೇಶ್ವರ:** ರಾಜ್ಯ ಸರ್ಕಾರ ಹಿರಿಯ ನಾಗರಿಕರಿಗೆ ನೀಡಬೇಕಾದ ಸೌಲಭ್ಯ ನೀಡುವಲ್ಲಿ ಮುಂದಾಗಬೇಕು ಹಾಗೂ ಹಿರಿಯ ನಾಗರಿಕರಿಗಾಗಿ ಪ್ರತ್ಯೇಕ ಸಚಿವರು ಹಾಗೂ ಸಚಿವಾಲಯ ಸ್ಥಾಪನೆ ಮಾಡಬೇಕು ಎಂದು ರಾಜ್ಯ ಸರ್ಕಾರಕ್ಕೆ ಆಗ್ರಹಿಸಿ ಲಕ್ಷ್ಮೇಶ್ವರ ತಾಲೂಕಿನ ಗ್ರೇಡ್ -2 ತಹಸೀಲ್ದಾರ ಮಂಜುನಾಥ ಅಮಾಸಿ ಅವರಿಗೆ ಶುಕ್ರವಾರ ಮನವಿ ಸಲ್ಲಿಸಿದರು.



ಹಿರಿಯ ನಾಗರಿಕರ ವೇದಿಕೆಯ ತಾಲೂಕು ಅಧ್ಯಕ್ಷ ಸಿ.ಆರ್. ಲಕ್ಕುಂಡಿಮಠ ಮಾತನಾಡಿ, ರಾಜ್ಯದಲ್ಲಿ ಹಿರಿಯ ನಾಗರಿಕರಿಗೆ ದೊರಯಬೇಕಾದ ಸೌಲಭ್ಯಗಳನ್ನು ಸಮರ್ಪಕವಾಗಿ ಮುಟ್ಟಿಸುವಲ್ಲಿ ಮೀನಾಮೇಷ ಎಣಿಸುತ್ತಿರುವುದು ಸರಿಯಲ್ಲ. ರಾಜ್ಯದಲ್ಲಿ ಹಿರಿಯ ನಾಗರಿಕರ ಮೇಲೆ ನಿರಂತರ ದೌರ್ಜನ್ಯ, ಅನ್ಯಾಯಗಳು ನಡೆಯುತ್ತಿದ್ದು, ಅವುಗಳನ್ನು ತಡೆಗಟ್ಟುವ ನಿಟ್ಟಿನಲ್ಲಿ ಸರ್ಕಾರ ಮುಂದಾಗಬೇಕು ಹಾಗೂ ಹಿರಿಯ ನಾಗರಿಕರ ಬೇಡಿಕೆಗಳನ್ನು ತಕ್ಷಣವೇ ಈಡೇರಿಸುವ ಮೂಲಕ ಹಿರಿಯ ಜೀವಿಗಳಿಗೆ ನ್ಯಾಯ ಒದಗಿಸುವ ಕಾರ್ಯ ಮಾಡಬೇಕು. ರಾಜ್ಯದಲ್ಲಿ ಸುಮಾರು 85 ಲಕ್ಷ ಹಿರಿಯ ನಾಗರಿಕರಿದ್ದು ಅವರಿಗೆ ದೊರೆಯಬೇಕಾದ ಮೂಲಸೌಲಭ್ಯ ದೊರಕಿಸಿ ಕೊಡುವಲ್ಲಿ ರಾಜ್ಯ ಸರ್ಕಾರ ಮುಂದಾಗಬೇಕು ಎಂದರು.

ತಹಶೀಲ್ದಾರ್ ಮಂಜುನಾಥ ಅಮಾಸಿ ಮಾತನಾಡಿ, ಹಿರಿಯ ನಾಗರಿಕರು ನೀಡಿದ ಮನವಿಯನ್ನು ಜಿಲ್ಲಾಧಿಕಾರಿಗಳ ಮೂಲಕ ರಾಜ್ಯ ಸರ್ಕಾರಕ್ಕೆ ಕಳುಹಿಸಲಾಗುವುದು ಎಂದರು.

ಈ ವೇಳೆ ಚಂಬಣ್ಣ ಬಾಳಿಕಾಯಿ, ಕುಬೇರಪ್ಪ ಮಹಾಂತಶೆಟ್ಟರ, ನೀಲಪ್ಪ ಕರ್ಜಕಣ್ಣವರ, ಬಾಬಣ್ಣ ವಡಕಣ್ಣವರ, ಮಲಸಮುದ್ರ, ಐ.ಎಸ್.ಮಡಿವಾಳರ ಸೇರಿದಂತೆ ಅನೇಕರು ಇದ್ದರು.

## ರೈತರಿಗೆ ಸೂಕ್ತ ಪರಿಹಾರ ನೀಡಲು ಒತ್ತಾಯ

**ಮುಂಡರಗಿ:** ತಾಲೂಕಿನಲ್ಲಿ ಮಳೆ ಕೊರತೆಯಿಂದ ರೈತರು ಬಿತ್ತಿದ ಬೆಳೆಗಳು ಒಣಗಿ ಹಾಳಾಗುತ್ತಿವೆ. ಇದರಿಂದ ರೈತರು ತೀವ್ರ ಆರ್ಥಿಕ ಸಂಕಷ್ಟಕ್ಕೆ ಸಿಲುಕಿದ್ದಾರೆ. ಸರ್ಕಾರ ಕೂಡಲೇ ಬೆಳೆಹಾನಿ ಸಮೀಕ್ಷೆ ನಡೆಸಬೇಕು. ರೈತರಿಗೆ ಸೂಕ್ತ ಪರಿಹಾರ ನೀಡಬೇಕು ಎಂದು ಬಿಜೆಪಿ ಮುಂಡರಗಿ ಮಂಡಲ ಅಧ್ಯಕ್ಷ ಡಾ.ಕುಮಾರಸ್ವಾಮಿ ಹಿರೇಮಠ ಒತ್ತಾಯಿಸಿದ್ದಾರೆ.



ಈ ಕುರಿತು ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರೈತರು ಬೀಜ, ಗೊಬ್ಬರ, ಕೂಲಿ, ನಿರ್ವಹಣೆ ಸೇರಿ ಹತ್ತಾರುಸಾವಿರ ರೂ.ಖರ್ಚು ಮಾಡಿ ಕಷ್ಟಪಟ್ಟು ಬೆಳೆ ಬೆಳೆದಿದ್ದಾರೆ. ಆದರೆ ಮಳೆ ಇಲ್ಲದೇ ಬಿತ್ತನೆ ಮಾಡಿದ ಬೆಳೆಯಲ್ಲ ಸಂಪೂರ್ಣ ಒಣಗಿ ಹಾಳಾಗುತ್ತಿದೆ. ಇದರಿಂದ ರೈತರು ಆರ್ಥಿಕ ತೊಂದರೆಗೆ ಸಿಲುಕಿದ್ದಾರೆ. ಹಾಗೆಯೇ ಜೀವನ ನಡೆಸುವುದಕ್ಕೆ ಆರ್ಥಿಕ ಸಮಸ್ಯೆಯು ಎದುರಾಗುತ್ತಿದೆ. ಈ ಬಗ್ಗೆ ರಾಜ್ಯ ಸರ್ಕಾರ ತಕ್ಷಣವೇ ಗಮನ ಹರಿಸಬೇಕು. ತಾಲೂಕನ್ನು ಬರಪೀಡಿತ ಪ್ರದೇಶವೆಂದು ಘೋಷಣೆ ಮಾಡಬೇಕು. ರೈತರಿಗೆ ಪ್ರತಿ ಎಕರೆಗೆ ಕನಿಷ್ಠ 25ಸಾವಿರ ರೂ. ಪರಿಹಾರ ನೀಡಬೇಕು. ಜಾನುವಾರುಗಳಿಗೆ ಮೇವು, ನೀರಿನ ವ್ಯವಸ್ಥೆ ಮಾಡುವುದಕ್ಕೆ ಮುಂದಾಗಬೇಕು ಎಂದು ಆಗ್ರಹಿಸಿದರು.

## ಕಾಲೇಜು ಸಂಸತ್ತು ಉದ್ಘಾಟನೆ ಇಂದು

**ಮುಂಡರಗಿ:** ಇಲ್ಲಿಯ ಶ್ರೀ ಜ.ಅ.ವಿ.ಸಮಿತಿಯ ಜಗದ್ಗುರು ಅನ್ನದಾನೀಶ್ವರಪದವಿ ಪೂರ್ವ ಕಾಲೇಜಿನ ಪ್ರಸ್ತುತ ಸಾಲಿನ ಕಾಲೇಜು ಸಂಸತ್ತು ಮತ್ತು ಸಿಇಟಿ ಮತ್ತು ನೀಟ್ ತರಗತಿಗಳ ಉದ್ಘಾಟನಾ ಸಮಾರಂಭ ಜು.4ರಂದು ಬೆಳಗ್ಗೆ 10ಕ್ಕೆ ಕಾಲೇಜು ಸಭಾಭವನದಲ್ಲಿ ಜರುಗಲಿದೆ ಎಂದು ಪ್ರಾಚಾರ್ಯ ಪಿ.ಎಂ.ಕಲ್ಲನಗೌಡರ ತಿಳಿಸಿದ್ದಾರೆ.

ಸಾನ್ನಿಧ್ಯವನ್ನು ನಾಡೋಜ ಡಾ.ಅನ್ನದಾನೀಶ್ವರ ಮಹಾಶಿವಯೋಗಿಗಳು ವಹಿಸುವರು. ನೇತೃತ್ವವನ್ನು ಶ್ರೀಮಠದ ಉತ್ತರಾಧಿಕಾರಿ ಡಾ.ಮಲ್ಲಿಕಾರ್ಜುನ ಸ್ವಾಮೀಜಿ ವಹಿಸುವರು. ಅಧ್ಯಕ್ಷತೆಯನ್ನು ಕಾಲೇಜು ಮೇಲ್ವಿಚಾರಣಾ ಸಮಿತಿಯ ಕಾರ್ಯಾಧ್ಯಕ್ಷ ಕೆ.ವಿ.ಹಂಚಿನಾಳ ವಹಿಸುವರು. ಉದ್ಘಾಟಕರಾಗಿ ವಿಧಾನ ಪರಿಷತ್ ಸದಸ್ಯ ಪ್ರೊ. ಎಸ್.ವಿ.ಸಂಕನೂರ ಆಗಮಿಸುವರು. ವಿಶೇಷ ಉಪನ್ಯಾಸವನ್ನು ಧಾರವಾಡದ ಸುರೇಶ ಕುಲಕರ್ಣಿ ನೀಡುವರು. ಮುಖ್ಯ ಅತಿಥಿಗಳಾಗಿ ಡಿಡಿಪಿಯು ಸಿದ್ದಲಿಂಗ ಬಂಡುಮಸನಾಯಕ, ಡಾ.ಬಿ.ಜಿ.ಜವಳಿ, ಡಾ.ಎಸ್.ಬಿ.ಹಿರೇಮಠ, ಬಸವರಾಜ ಬನ್ನಿಕೊಪ್ಪ, ಬಿ.ಎಫ್.ಈಟಿ, ಕೆ.ಎಸ್.ರೋಣದ ಭಾಗವಹಿಸುವರು.

## ಕಾರ್ಮಿಕರ ಸುರಕ್ಷತೆ ಪ್ರತಿಯೊಬ್ಬರ ಆದ್ಯತೆಯಾಗಲಿ: ಬಂಕದ

**ಗಜೇಂದ್ರಗಡ:** ನಗರದ ದುರ್ಗಾದೇವಿ ದೇವಾಲಯದಲ್ಲಿ ಶ್ರೀ ದುರ್ಗಾದೇವಿ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಸಂಘದ ವತಿಯಿಂದ ಕಟ್ಟಡ ಕಾರ್ಮಿಕರ ಸುರಕ್ಷತೆ ಮತ್ತು ಆರೋಗ್ಯದ ಹಿತದೃಷ್ಟಿಯಿಂದ ಕಾರ್ಮಿಕರಿಗೆ ಸುರಕ್ಷತಾ ಕಿಟ್‌ಗಳನ್ನು ವಿತರಿಸುವ ಕಾರ್ಯಕ್ರಮ ಶುಕ್ರವಾರ ನಡೆಯಿತು.

ಕಾರ್ಮಿಕ ಸಂಘಟನೆಯ ಅಧ್ಯಕ್ಷ ಯಲ್ಲಪ್ಪ ಬಂಕದ ಮಾತನಾಡಿ, ಕಟ್ಟಡ ನಿರ್ಮಾಣ ಕ್ಷೇತ್ರವು ಅತ್ಯಂತ ಅಪಾಯಕಾರಿಯಾದ ವೃತ್ತಿಗಳಲ್ಲಿ ಒಂದಾಗಿದೆ. ಆದ್ದರಿಂದ ಪ್ರತಿಯೊಬ್ಬ ಕಾರ್ಮಿಕರು ತಮ್ಮ ಸುರಕ್ಷತೆಗೆ ಮೊದಲ ಆದ್ಯತೆ ನೀಡಬೇಕು. ಕೆಲಸದ ವೇಳೆ ಹೆಲ್ಮೆಟ್, ಸುರಕ್ಷತಾ ಕೈಗವಸು, ಪ್ರತಿಫಲಿತ ಜಾಕೆಟ್, ಸುರಕ್ಷತಾ ಬೆಲ್ಟ್ ಸೇರಿದಂತೆ ಅಗತ್ಯ ಸುರಕ್ಷತಾ ಸಾಧನಗಳನ್ನು ಕಡ್ಡಾಯವಾಗಿ ಬಳಸಬೇಕು ಎಂದರು.



ರಾಜ್ಯ ಹಾಗೂ ಕೇಂದ್ರ ಸರ್ಕಾರಗಳು ಕಟ್ಟಡ ಕಾರ್ಮಿಕರ ಕಲ್ಯಾಣಕ್ಕಾಗಿ ಅನೇಕ ಯೋಜನೆಗಳನ್ನು ಜಾರಿಗೊಳಿಸಿವೆ. ಕಾರ್ಮಿಕರು ಕಡ್ಡಾಯವಾಗಿ ಕಾರ್ಮಿಕ ಕಲ್ಯಾಣ ಮಂಡಳಿಯಲ್ಲಿ ನೋಂದಣಿ ಮಾಡಿಕೊಂಡು ವೈದ್ಯಕೀಯ ನೆರವು, ಮಕ್ಕಳ ಶೈಕ್ಷಣಿಕ ಸಹಾಯಧನ, ಮಾತೃತ್ವ ಸೌಲಭ್ಯ, ಮದುವೆ ನೆರವು, ಪಿಂಚಣಿ ಸೇರಿದಂತೆ ವಿವಿಧ ಯೋಜನೆಗಳ ಪ್ರಯೋಜನ ಪಡೆದುಕೊಳ್ಳಬೇಕು ಎಂದರು.

ಜಗನ್ನಾಥ ನಿಡಗುಂದಿ ಮಾತನಾಡಿ, ಸುರಕ್ಷತಾ ಕಿಟ್‌ಗಳ ವಿತರಣೆಯಿಂದ ಕಾರ್ಮಿಕರಲ್ಲಿ ಸುರಕ್ಷತೆಯ ಬಗ್ಗೆ ಜಾಗೃತಿ ಹೆಚ್ಚುವುದರ ಜೊತೆಗೆ ಕೆಲಸದ ಸ್ಥಳಗಳಲ್ಲಿ ಅಪಘಾತಗಳನ್ನು ತಡೆಗಟ್ಟಲು ಸಹಕಾರಿಯಾಗಲಿದೆ. ಕಾರ್ಮಿಕರ ಜೀವ ಅಮೂಲ್ಯವಾಗಿದ್ದು, ಸುರಕ್ಷತಾ ಸಾಧನಗಳ ಬಳಕೆ ಪ್ರತಿಯೊಬ್ಬರ ಜವಾಬ್ದಾರಿಯಾಗಿದೆ ಎಂದರು.

ಸಂಘದ ಸದಸ್ಯರಿಗೆ ಸಾಂಕೇತಿಕವಾಗಿ ಕಾರ್ಮಿಕರಿಗೆ ಹೆಲ್ಮೆಟ್, ಸುರಕ್ಷತಾ ಕೈಗವಸು, ಶೂ ಸೇರಿದಂತೆ ಇತರೆ ಸುರಕ್ಷತಾ ಸಾಮಗ್ರಿಗಳನ್ನು ಒಳಗೊಂಡ ಸುರಕ್ಷತಾ ಕಿಟ್‌ಗಳನ್ನು ವಿತರಿಸಲಾಯಿತು. ವೆಂಕಟೇಶ ಬಂಕದ, ತಿಮ್ಮಣ್ಣ ಮುಧೋಳ, ಹನಮಂತ ಗೌಡರ, ಮಾರುತಿ ಬೇಟಗೇರಿ, ಶೇಖಪ್ಪ ಇಂಗಳಗಿ, ಕಿರಣ ಬಂಕದ, ನಿಂಗಪ್ಪ ಬಂಡಿಗೇರ, ಪ್ರಕಾಶ ಕಲ್ಲುಗುಡಿ, ರಫೀಕ ಯಲಬುಣಚಿ, ಹನಮಂತಪ್ಪ ಲಕ್ಕಲಕಟ್ಟಿ, ಶಂಕ್ರಪ್ಪ ಗುಳಗುಂದಿ ಸೇರಿದಂತೆ ಅನೇಕರು ಇದ್ದರು.

## ಆ.24ಕ್ಕೆ ಶಂಭುಲಿಂಗೇಶ್ವರನ ಮಹಾರಥೋತ್ಸವ

**ನರಗುಂದ:** ಆಗಸ್ಟ್ 18 ರಿಂದ 24 ರವರೆಗೆ ನಿತ್ಯವೂ ಶಿವನಾಮ ಸ್ಮರಣೆಯೊಂದಿಗೆ ಶಂಭುಲಿಂಗೇಶ್ವರನ ಜಾತ್ರಾ ಮಹೋತ್ಸವ ಜರುಗಲಿದೆ ಎಂದು ಪುಣ್ಯಾರಣ್ಯ ಪತ್ರೀವನಮಠದ ಶ್ರೀ ಗುರು ಸಿದ್ಧವೀರ ಶಿವಾಚಾರ್ಯ ಸ್ವಾಮೀಜಿ ತಿಳಿಸಿದರು.

ಪುಣ್ಯಾರಣ್ಯ ಪತ್ರೀವನಮಠದಲ್ಲಿ ಜರುಗಿದ ಪ್ರಸಕ್ತ ವರ್ಷದ ಶ್ರೀ ಗುರು ಶಂಭುಲಿಂಗೇಶ್ವರನ ಜಾತ್ರಾ ಮಹೋತ್ಸವದ ಪೂರ್ವಭಾವಿ ಸಭೆಯಲ್ಲಿ ಮಾತನಾಡಿ, ಆ.20 ರಂದು ಶ್ರೀಮಠಕ್ಕೆ ನಂದಿಧ್ವಜ ಆಗಮನ ಮತ್ತು ಲಿಂಗದೀಕ್ಷೆ ಕಾರ್ಯಕ್ರಮ ಜರುಗಲಿದೆ. ಆ.23 ರಂದು ತೇರಿನ ಕಳಸಾರೋಹಣ ನೆರವೇರಲಿದೆ. ಆ.24ರಂದು ಶ್ರೀಗಳ ಶತಕುಂಭ ಮಜ್ಜನ, ಸಪ್ತಾಹ ಮಂಗಲ, ಮಧ್ಯಾಹ್ನ 12 ಗಂಟೆಗೆ ಮಹಾರಾಧನೆ ಜರುಗಿ, ಸಂಜೆ 5 ಗಂಟೆಗೆ ಶ್ರೀಗಳ ಸಾನ್ನಿಧ್ಯದಲ್ಲಿ ಶ್ರೀ ಗುರು ಶಂಭುಲಿಂಗೇಶ್ವರನ ಮಹಾರಥೋತ್ಸವ ಜರುಗಲಿದೆ ಎಂದರು. ರುದ್ರಯ್ಯ ಸ್ವಾಮೀಜಿ, ಬಸಯ್ಯ ಹಿರೇಮಠ, ಪಿ.ಡಿ. ಪತ್ತಾರ, ಎಸ್. ಎಸ್. ಪಾಟೀಲ, ಕೃಷ್ಣಪ್ಪ ಚವ್ಹಾಣ, ಪ್ರಕಾಶ ಪಟ್ಟಣಶೆಟ್ಟಿ, ಹೊಳೆಬಸಪ್ಪ ಅಕ್ಕಿ, ಭರತ ತಳವಾರ, ರಾಣಪ್ಪ ದರ್ಗಾದ, ಅಜ್ಜಪ್ಪ ಮೊರಬದ, ಈರಣ್ಣ ಹಡಗಲಿ, ಉದಯ ಮುಧೋಳೆ, ಶಂಕ್ರಣ್ಣ ಕಳಗಣ್ಣವರ, ವಿಠ್ಠಲ ಹಡಗಲಿ, ಬಸವರಾಜ ಉಳ್ಳಾಗಡ್ಡಿ, ಗಿರೀಶ ನೀಲರಡ್ಡಿ, ಸುತ್ತಲಿನ ಗ್ರಾಮಗಳಾದ ಕುರ್ಲಗೇರಿ, ಕುರುಗೋವಿನಕೊಪ್ಪ, ಎಡಿಹಳ್ಳಿಪೂರ, ಬೂದಿಹಾಳ, ಗುಡಿಸಾಗರ, ದಡೇರಕೊಪ್ಪ, ಹಳ್ಳಿಕೇರಿ, ಅನೇಕ ಗ್ರಾಮಗಳ ಭಕ್ತರು ಇದ್ದರು.



## ನಾನು ಯಾರೆಂಬ ಪ್ರಶ್ನೆಗೆ ಉತ್ತರ ಸಿಕ್ಕಾಗ ಜೀವನ ಸಾರ್ಥಕ

**ನರೇಗಲ್ಲ:** ಇಂದಿನ ಮಾನವನು ಭೌತಿಕ ಸಾಧನಗಳ ಹಿಂದೆ ಓಡುತ್ತಾ ತನ್ನ ನಿಜವಾದ ಗುರುತನ್ನೇ ಮರೆತಿದ್ದು, ನಾನು ಯಾರು ಎಂಬ ಪ್ರಶ್ನೆಗೆ ಸರಿಯಾದ ಉತ್ತರ ಸಿಕ್ಕಾಗಲೇ ಜೀವನದ ಸಾರ್ಥಕತೆ ಅರಿವಾಗುತ್ತದೆ ಎಂದು ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರೀಯ ವಿದ್ಯಾಲಯದ ಬಿ.ಕೆ. ಸವಿತಕ್ಕನವರು ಹೇಳಿದರು.

ಪಟ್ಟಣದ ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರೀಯ ವಿದ್ಯಾಲಯದಲ್ಲಿ ಹಮ್ಮಿಕೊಂಡಿದ್ದ ಪತ್ರಿಕಾ ದಿನಾಚರಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿ, ದೇಹ ನಶ್ವರವಾದರೂ ಆತ್ಮವು ಅವಿನಾಶಿ, ಶಾಶ್ವತ ಮತ್ತು ಅಮೂಲ್ಯವಾದದ್ದು. ಆತ್ಮವು ಮನಸ್ಸು, ಬುದ್ಧಿ ಹಾಗೂ ಸಂಸ್ಕಾರಗಳ ಮೂಲಕ ತನ್ನ ಕಾರ್ಯವನ್ನು ನಿರ್ವಹಿಸುತ್ತದೆ. ಪತ್ರಕರ್ತರ ವೃತ್ತಿ ಸವಾಲುಗಳು ಮತ್ತು ಒತ್ತಡಗಳಿಂದ ಕೂಡಿದ್ದು, ಇಂತಹ ಸಂದರ್ಭಗಳಲ್ಲಿ ಮಾನಸಿಕ ಸಮತೋಲನ ಕಾಪಾಡಿಕೊಳ್ಳಲು ಆಧ್ಯಾತ್ಮಿಕ ಮೌಲ್ಯಗಳು ಅಗತ್ಯವಾಗಿವೆ ಎಂದರು.



ಜಿಲ್ಲಾ ಕಾನಿಪ ಸಂಘದ ಉಪಾಧ್ಯಕ್ಷ ಪ್ರಭುಸ್ವಾಮಿ ಅರವಟಗಿಮಠ ಮಾತನಾಡಿ, ಇಂದಿನ ಸಾಮಾಜಿಕ ಜಾಲತಾಣಗಳ ಯುಗದಲ್ಲಿ ಸುಳ್ಳು ಸುದ್ದಿಗಳ ಹರಡುವಿಕೆ ಹೆಚ್ಚಾಗಿರುವುದರಿಂದ ಪತ್ರಿಕೆಗಳು ಸತ್ಯ ಮತ್ತು ವಿಶ್ವಾಸಾರ್ಹ ಮಾಹಿತಿಯ ಮೂಲವಾಗಿವೆ ಎಂದರು.

ಪತ್ರಕರ್ತ ಈಶ್ವರ ಬೆಟಗೇರಿ ಮಾತನಾಡಿ, ಸಮಾಜದ ಅಭಿವೃದ್ಧಿಗೆ ಆಧ್ಯಾತ್ಮಿಕ, ಧಾರ್ಮಿಕ ಹಾಗೂ ಸಾಮಾಜಿಕ ಚಿಂತನೆಗಳೆಲ್ಲವೂ ಅಗತ್ಯವಾಗಿದ್ದು, ಧ್ಯಾನ ಮತ್ತು ಆಧ್ಯಾತ್ಮಿಕ ಜ್ಞಾನದ ಮೂಲಕ ಮನಸ್ಸಿನ ಶಾಂತಿ ಹಾಗೂ ಆತ್ಮಶುದ್ಧಿಯನ್ನು ಸಾಧಿಸಬೇಕಾದ ಅಗತ್ಯವಿದೆ ಎಂದರು.

ಕಾನಿಪ ಸಂಘದ ಜಿಲ್ಲಾ ಕಾರ್ಯಕಾರಿಣಿ ಸದಸ್ಯ ನಿಂಗರಾಜ ಬೇವಿನಕಟ್ಟಿ ಮಾತನಾಡಿ, ಸಮಾಜದ ಸಮಸ್ಯೆಗಳು ಹಾಗೂ ಜನರ ಧ್ವನಿಯನ್ನು ಆಡಳಿತದ ಗಮನಕ್ಕೆ ತರುವಲ್ಲಿ ಮಾಧ್ಯಮಗಳ ಪಾತ್ರ ಮಹತ್ವದ್ದಾಗಿದೆ ಎಂದರು. ಉತ್ತರಾಖಂಡದ ಉತ್ತರಕಾಶಿ ಜಿಲ್ಲೆಯ ಹರ್ಸಾ ಟಾಪ್ ಶಿಖರವನ್ನು ಏರಿ ಸಾಧನೆಗೈದ ಜಕ್ಕಲಿ ಗ್ರಾಮದ ಸೃಷ್ಟಿ ಮೇಟಿ ಅವರನ್ನು ಸನ್ಮಾನಿಸಲಾಯಿತು. ಜಿಲ್ಲಾ ಕಾನಿಪ ಸಂಘದ ಜಿಲ್ಲಾ ಕಾರ್ಯಕಾರಿಣಿ ಸದಸ್ಯ ಆದರ್ಶ ಕುಲಕರ್ಣಿ, ಪತ್ರಕರ್ತರಾದ ಮಲ್ಲಯ್ಯ ಗುಂಡಗೋಪುರಮಠ, ಸಂಗಮೇಶ ಮೆಣಸಗಿ, ಉಮೇಶ ನವಲಗುಂದ, ಹುಚ್ಚೀರಪ್ಪ ಈಟಿ, ಶಿವು ಮಡಿವಾಳರ, ಮಂಜುನಾಥ ಬಂಡಿವಡ್ಡರ ಇದ್ದರು.

ಕೃಷಿಭೂಮಿಯನ್ನು ಬಂಜರು ಬಿಡುವವರು ಹೆಚ್ಚುತ್ತಿರುವ ಇಂದಿನ ಕಾಲದಲ್ಲಿ ಓರ್ವ ವೃದ್ಧ ಮಹಿಳೆಯಾಗಿದ್ದರೂ ಛಲಬಿಡದೇ ನೇಗಿಲು ಹಿಡಿದು ಉಳುವ ಯೋಗಿನಿಯಂತೆ ಕಂಡಳು ತುಳಸಜ್ಜಿ!

### ವಿಳಂಬವಾದರೂ ಭರ್ಜರಿ ಸುರಿದ ಆರಿದ್ರಾ ಮಳೆ
## ಉಳುಮೆಗೆ ಇಳಿದ ಹಾಲಕ್ಕಿ ಮಹಿಳೆ

ನಾಗರಾಜ ಶೆಟ್ಟಿ



**ಅಂಕೋಲಾ:** ಮುಂಗಾರು ವಿಳಂಬವಾಗಿ ಕೃಷಿಕರು ವ್ಯವಸಾಯದ ಚಿಂತೆಯಲ್ಲಿದ್ದಾಗಲೇ ಆರಿದ್ರಾ ಮಳೆ ಉತ್ತಮವಾಗಿ ಸುರಿದು ಕೃಷಿ ಭೂಮಿಯತ್ತ ರೈತರು ಮುಖ ಮಾಡುವಂತೆ ಮಾಡಿದ್ದು ತಾಲೂಕಿನ ಹಡಿನೂರಿನಲ್ಲಿ ಹಾಲಕ್ಕಿ ಮಹಿಳೆಯೋರ್ವರು ಎತ್ತುಗಳ ನೊಗಕ್ಕೆ ನೇಗಿಲು ಕಟ್ಟಿ ಕೃಷಿ ಭೂಮಿ ಉಳುಮೆ ಮಾಡುವ ಮೂಲಕ ಗಮನ ಸೆಳೆದಿದ್ದಾರೆ.

ಹಡಿನೂರಿನ 70 ವರ್ಷದ ಹಾಲಕ್ಕಿ ಮಹಿಳೆ ತುಳಸಿ ನಾರಾಯಣ ಗೌಡ ಅವರು ನೇಗಿಲು ಹಿಡಿದು ಹೊಲಕ್ಕೆ ಇಳಿದು ಜೋಡೆತ್ತುಗಳ ಸಹಾಯದಿಂದ ಭೂಮಿಯನ್ನು ಹದಗೊಳಿಸುವ ಕೆಲಸ ಮಾಡುತ್ತಿದ್ದು ಈಗಾಗಲೇ ತಮ್ಮ ಪಾಲಿನ ಕೃಷಿ ಭೂಮಿಯಲ್ಲಿ ಬಹುತೇಕ ಉಳುಮೆ ಕಾರ್ಯ ಮುಗಿಸಿದ್ದಾರೆ.

ತಾಲೂಕಿನ ಗ್ರಾಮೀಣ ಭಾಗದಲ್ಲಿ ಜನರು ಕೃಷಿಯನ್ನೇ ನಂಬಿ ಜೀವನ ಸಾಗಿಸುತ್ತಿದ್ದು, ಸಾಕಷ್ಟು ಕಡಿಮೆ ಪ್ರಮಾಣದ ಕೃಷಿ ಭೂಮಿ ಹೊಂದಿರುವ ಇಲ್ಲಿನ ಕೃಷಿಕರು ಕುಟುಂಬ ಸಮೇತ ಕೃಷಿ ಕಾಯಕದಲ್ಲಿ ತೊಡಗುತ್ತಾರೆ. ಆದರೆ, ಗದ್ದೆಯಲ್ಲಿ ಉಳುಮೆ

ಕಾರ್ಯ ಸಾಮಾನ್ಯವಾಗಿ ಗಂಡಸರೇ ನಿರ್ವಹಿಸುತ್ತಾರೆ.

ಸುಮಾರು 55 ವರ್ಷಗಳಿಂದ ಉಳುಮೆ ಕೆಲಸದ ಅನುಭವ ಇರುವ ತುಳಸಿ ಗೌಡ ಅವರಿಗೆ ಎತ್ತುಗಳ ಮೇಲೆ ನಿಯಂತ್ರಣ ಸಾಧಿಸಿ ನೇಗಿಲಿನಿಂದ ಮಣ್ಣು ಸಡಿಲುಗೊಳಿಸುವ ಕಲೆ ಕರಗತವಾದೆ.

ಪತಿಯನ್ನು ಮತ್ತು ಒಬ್ಬ ಮಗನನ್ನು ಕಳೆದುಕೊಂಡಿರುವ ತುಳಸಿ ಗೌಡ, ಇನ್ನೊಬ್ಬ ಮಗ ಮತ್ತು ಸೊಸೆಯಂದಿರ ಜೊತೆ ಸೇರಿ ಕೃಷಿ ಕಾರ್ಯ ನಡೆಸುತ್ತಿದ್ದು ಮುಂಗಾರಿನಲ್ಲಿ ಭತ್ತದ ಬೆಳೆ ಬೆಳೆಯಲು ಗದ್ದೆ ಉಳುವ ಮೂಲಕ ತಯಾರಿ ನಡೆಸುತ್ತಿದ್ದಾರೆ.

ಕೃಷಿ ರೈತರ ಜೀವನ ಕ್ರಮವಾಗಿದ್ದು ಎಷ್ಟೇ ಕಷ್ಟ ಬಂದರೂ ತುತ್ತು ಅನ್ನ ನೀಡುವ ಕೃಷಿಯನ್ನು ಬಿಡಬಾರದು ತಮ್ಮ ತೋಳಿನಲ್ಲಿ ಬಲ ಇರುವ ವರೆಗೆ ಹೊಲದಲ್ಲಿ ದುಡಿಯುವುದು ಹಡಿನೂರಿನ ತುಳಸಜ್ಜಿಯ ಆಶಯವಾಗಿದೆ.

ಕೃಷಿ ಕೈಹಿಡಿಯುತ್ತಿಲ್ಲ ತುಂಬಾ ಕಷ್ಟ ಎಂದು ಕೃಷಿಭೂಮಿಯನ್ನು ಬಂಜರು ಬಿಡುವವರು ಹೆಚ್ಚುತ್ತಿರುವ ಇಂದಿನ ಕಾಲದಲ್ಲಿ ಒಬ್ಬ ಮಹಿಳೆಯಾಗಿ ನೇಗಿಲು ಹಿಡಿದು ಉಳುವ ಯೋಗಿನಿಯಂತೆ ತೋರುವ ತುಳಸಜ್ಜಿ ಮಾದರಿಯಾಗಿದ್ದಾಳೆ.

### ರೈತರಿಗೆ ಆರಿದ್ರ ಮಳೆ ಆಸರೆ | ಭರದಿಂದ ಸಾಗಿದ ಕೃಷಿ ಕಾಯಕ
## ಜಿಲ್ಲೆಯಲ್ಲಿ ಕಳೆಗಟ್ಟಿದ ಸೀಮೆ ಬೆಳೆ

ಮಹಾಂತೇಶ ಕಣವಿ



**ಧಾರವಾಡ:** ವರುಣದೇವನ ಕಣ್ಣಾಮುಚ್ಚಾಲೆ ಮಧ್ಯೆಯೂ, ಅರೆಮಲೆನಾಡು ಧಾರವಾಡ ಜಿಲ್ಲೆಯಲ್ಲಿ ಭೂರಮೆ ಸೀರೆಯುಟ್ಟು ಕಂಗೊಳಿಸುತ್ತಿದ್ದಾಳೆ. ಆರಂಭದಲ್ಲಿ ಮುಂಗಾರು ಮಳೆ ಕೈಕೊಟ್ಟರೂ, ಪ್ರಸ್ತುತ ಹೊಲದಲ್ಲಿ ಸೀಮೆಬೆಳೆ ಕಳೆಗಟ್ಟಿದೆ!

ಮಳೆರಾಯನ ಕೃಪೆಯಿಂದ ಬೆಳೆಗಳು ಕೈಗೆಟುಕವ ಭರವಸೆ ಮೂಡುತ್ತಿದ್ದಂತೆ, ಸದ್ಯ ಜಮೀನಿನಲ್ಲಿ ಬೆಳೆಗಳು ನಳನಳಿಸುತ್ತಿವೆ. ರೈತರು ತಮ್ಮ ಹೊಲಗಳತ್ತ ಮುಖ ಮಾಡಿದ ಹಿನ್ನೆಲೆ ಕೃಷಿ ಚಟುವಟಿಕೆಗಳು ಜಿಲ್ಲೆಯಲ್ಲಿ ಭರದಿಂದ ಸಾಗಿದೆ.

ಏಪ್ರಿಲ್‌ನಲ್ಲಿ ಸುರಿದ ಅಕಾಲಿಕ ಮಳೆಗೆ ರೈತರು ಸಂಭ್ರಮದಿಂದ ಬಿತ್ತನೆ ಮಾಡಿದ್ದರು. ಆದರೆ, ಹವಾಮಾನ ಇಲಾಖೆಯ ವರದಿಯ ಪ್ರಕಾರ ಜಿಲ್ಲೆಯಲ್ಲಿ ಮಳೆಯ ಪ್ರಮಾಣ ಕೊಂಚ ಏರುಪೇರಾಗಿದ್ದು, ವರುಣನ ಅವಕೃಪೆಯೂ ಕಾಡಿತ್ತು.

ಪ್ರಸಕ್ತ ಜಿಲ್ಲೆಯಲ್ಲಿ ಮುಂಗಾರು ಹಂಗಾಮಿಗೆ 8.82 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ವಿವಿಧ ಬೆಳೆಗಳ ಬಿತ್ತನೆ ಗುರಿ ಹೊಂದಿದ್ದು, ಮಳೆ ಯ ಕೊರತೆ ನಡುವೆಯೂ ಧೃತಿಗೆಡದ ರೈತರು ಲಭ್ಯವಿದ್ದ ತೇವಾಂಶದಡಿ ಶೇ.70ರಷ್ಟು ಬಿತ್ತನೆ ಮಾಡಿದ್ದರು.

ಮುಂಗಾರಿನ ನಕ್ಷತ್ರ ಗಳಾದ ರೋಹಿಣಿ, ಮೃಗಶಿರ ಮಳೆಗಳು ಸಂಪೂರ್ಣ ಕೈಕೊಟ್ಟು ರೈತರಲ್ಲಿ ಆತಂಕ ಸೃಷ್ಟಿಸಿತ್ತು. ಬಿತ್ತಿದ ಬೀಜಗಳು ಏನಾಗುತ್ತವೆಯೋ? ಎಂದು ರೈತರು ಚಿಂತೆಯಲ್ಲಿದ್ದಾಗ ಕೊನೆಗೂ ಆರಿದ್ರ ಮಳೆ ಅಲ್ಪಮಟ್ಟಿಗೆ ಕೈಹಿಡಿದಿದೆ. ಇತ್ತೀಚೆಗೆ ಸುರಿದ ಸಾಧಾರಣ ಮಳೆಗೆ ಭೂಮಿ ತಂಪಾಗಿದ್ದು, ಮೊಳಕೆಯೊಡೆದ ಬೆಳೆ ಸಾಲು ಸಾಲಾಗಿ ನಿಂತು ಕಣ್ಮನ ಸೆಳೆಯುತ್ತಿವೆ. ಆರಂಭದ ಕಷ್ಟಗಳು ಮರೆತು, ಸದ್ಯ ಕೈಗೆ ಬಂದ ಬೆಳೆ ನೋಡುತ್ತ ರೈತರು ನಿಟ್ಟುಸಿರು ಬಿಡುವಂತಾಗಿದೆ.

ಮುಂದೆಯೂ ವರುಣದೇವ ಹೀಗೆ ಕೃಪೆ ತೋರಿದರೆ ಈ ಬಾರಿ ಉತ್ತಮ ಇಳುವರಿ ಪಡೆಯ ಬಹುದು ಎಂಬ ನಿರೀಕ್ಷೆಯಲ್ಲಿ ಜಿಲ್ಲೆಯ ಅನ್ನದಾತರಿದ್ದು, ಧಾರವಾಡ ಜಿಲ್ಲೆಯ ರೈತಾಪಿ ವರ್ಗ ಸದ್ಯ ಕೃಷಿ ಕಾಯಕದಲ್ಲಿ ಸಂಪೂರ್ಣ ಮುಳುಗಿದೆ.

#### ತಲೆ ಎತ್ತಿದ ಕಳೆ

ಹದವಾಗಿ ಸುರಿದ ಮಳೆಯಿಂದ ಬೆಳೆಗಳ ಜೊತೆ ಕಸ ಮತ್ತು ಕಳೆ ಕೂಡ ತಲೆ ಎತ್ತಿದೆ. ಧಾರವಾಡ, ಕುಂದಗೋಳ, ಅಳ್ನಾವರ, ಕಲಘಟಗಿ ಹಾಗೂ ಹುಬ್ಬಳ್ಳಿ ತಾಲೂಕಿನ ಅನ್ನದಾತರು ಕಸ ಮತ್ತು ಕಳೆ ನಿಯಂತ್ರಣಕ್ಕೆ ಎಡೆಕುಂಟಿ ಹೊಡೆಯುವ ಕಾಯಕದಲ್ಲಿ ತೊಡಗಿದ್ದಾರೆ.

**ಬಿತ್ತನೆಯ ನಂತರ ಮುಂಗಾರು ಆರಂಭದಲ್ಲಿ ಮಳೆ ಕೈಕೊಟ್ಟಿದೆ. ತುಂತುರು ಮಳೆಗೆ ಬೆಳೆಗಳಿಗೆ ಜೀವಕಳೆ ಬಂದಿದೆ. ಮಳೆರಾಯ ಕೈಹಿಡಿದು, ಕೈ ತುಂಬ ಫಸಲು ಸಿಗುವ ಆಶಯವಿದೆ.**

■ **ರವಿ ಯಲಿಗಾರ, ಕಲಘಟಗಿ ರೈತ**

## ಹಿಡಕಲ್ ಜಲಾಶಯಕ್ಕೆ ಹೆಚ್ಚಿದ ಒಳಹರಿವು



**ಬೆಳಗಾವಿ:** ಕಳೆದ ಕೆಲವು ತಿಂಗಳುಗಳಿಂದ ತೀವ್ರ ಆತಂಕ ಸೃಷ್ಟಿಸಿದ್ದ ಮುಂಗಾರು ಮಳೆ ಪ್ರಸ್ತುತ ಜಿಲ್ಲಾದ್ಯಂತ ಚುರುಕುಗೊಂಡಿರುವುದರಿಂದ ಪ್ರಮುಖ ಜಲಾಶಯಗಳಿಗೆ ನೀರಿನ ಒಳಹರಿವು ಗಣನೀಯವಾಗಿ ಹೆಚ್ಚಾಗುತ್ತಿದೆ.

ಈ ವರ್ಷದ ಬೇಸಿಗೆಯ ಕೊನೆಯ ಹಂತದಲ್ಲಿ ಬೆಳಗಾವಿ ಜಿಲ್ಲೆಯ ಜೀವನಾಡಿಯಾಗಿರುವ ಹಿಡಕಲ್ ಜಲಾಶಯದಲ್ಲಿ (ರಾಜಾ ಲಖಮಗೌಡ ಜಲಾಶಯ) ನೀರಿನ ಮಟ್ಟ ಅತ್ಯಂತ ಗಣನೀಯವಾಗಿ ಕುಸಿದಿತ್ತು. ಮಳೆ ತಡವಾದ ಹಿನ್ನೆಲೆಯಲ್ಲಿ ಜಲಾಶಯದ ಒಡಲು ಬತ್ತಿ ಹೋಗುತ್ತಿರುವುದು ಆಡಳಿತ ಮಂಡಳಿ ಹಾಗೂ ಸಾರ್ವಜನಿಕರಲ್ಲಿ ತೀವ್ರ ಕಳವಳ ಮೂಡಿಸಿತ್ತು.

ಬೆಳಗಾವಿ ಮಹಾನಗರ ಸೇರಿದಂತೆ ಸುತ್ತಮುತ್ತಲಿನ ನೂರಾರು ಹಳ್ಳಿಗಳಿಗೆ ಕುಡಿಯುವ ನೀರಿನ ಪೂರೈಕೆಯಲ್ಲಿ ವ್ಯತ್ಯಯ ಉಂಟಾಗಬಹುದು ಎಂಬ ಭೀತಿ ಎದುರಾಗಿತ್ತು.

ಕಳೆದ ಕೆಲವು ದಿನಗಳಿಂದ ಜಲಾನಯನ ಪ್ರದೇಶಗಳಲ್ಲಿ ವ್ಯಾಪಕ ಮಳೆಯಾಗುತ್ತಿದೆ. ಪರಿಣಾಮವಾಗಿ ಬೆಳಗಾವಿ ಭಾಗದ ನದಿಗಳು ಹಾಗೂ ಉಪನದಿಗಳು ಮೈದುಂಬಿ ಹರಿಯುತ್ತಿದ್ದು, ಜಲಾಶಯಗಳಿಗೆ ಬರುವ ನೀರಿನ ಪ್ರಮಾಣ ದಿನದಿಂದ ದಿನಕ್ಕೆ ಏರಿಕೆಯಾಗುತ್ತಿದೆ.

ಸದ್ಯದ ಪರಿಸ್ಥಿತಿಯಲ್ಲಿ ಒಳಹರಿವು ಉತ್ತಮವಾಗಿರುವುದರಿಂದ ಹಿಡಕಲ್ ಡ್ಯಾಂ ನೀರಿನ ಮಟ್ಟದಲ್ಲಿ ಸುಧಾರಣೆ ಕಂಡುಬರುತ್ತಿದೆ. ಮುಂದಿನ ದಿನಗಳಲ್ಲಿ ಇದೇ ರೀತಿ ಮಳೆ ಮುಂದುವರಿದರೆ ಜಲಾಶಯವು ಕ್ರಮೇಣ ಸಂಪೂರ್ಣವಾಗಿ ತುಂಬುವ ನಿರೀಕ್ಷೆಯಿದೆ ಎಂದು ನೀರಾವರಿ ಇಲಾಖೆಯ ಮೂಲಗಳು ತಿಳಿಸಿವೆ.

ಮಳೆಯ ಈ ಸಕಾರಾತ್ಮಕ ಬದಲಾವಣೆಯಿಂದಾಗಿ ಜಿಲ್ಲೆಯ ರೈತಾಪಿ ವರ್ಗದಲ್ಲಿ ಹರ್ಷ ಮೂಡಿದ್ದು, ಮುಂಬರುವ ದಿನಗಳಲ್ಲಿ ಕುಡಿಯುವ ನೀರು ಹಾಗೂ ಕೃಷಿ ಚಟುವಟಿಕೆಗಳಿಗೆ ಯಾವುದೇ ತೊಂದರೆಯಾಗುವುದಿಲ್ಲ ಎಂಬ ಆಶಾವಾದ ವ್ಯಕ್ತವಾಗಿದೆ.

## ಹಾವೇರಿ ಜಿಲ್ಲೆಯಲ್ಲಿ 3 ದಿನ ಮೋಡ ಬಿತ್ತನೆ

**ಹಾವೇರಿ:** ಮಳೆ ಕೊರತೆಯ ಹಿನ್ನೆಲೆಯಲ್ಲಿ ರೈತರ ನೆರವಿಗೆ ಧಾವಿಸಿರುವ ರಾಣೇಬೆನ್ನೂರು ಶಾಸಕ ಪ್ರಕಾಶ ಕೋಳಿವಾಡ ಅವರು ಜಿಲ್ಲಾದ್ಯಂತ ಮೋಡ ಬಿತ್ತನೆ ಮಾಡಲು ಮಹತ್ವದ ನಿರ್ಧಾರ ಕೈಗೊಂಡಿದ್ದಾರೆ. ಜು.7ರಿಂದ ಸತತ ಮೂರು ದಿನ ಜಿಲ್ಲೆಯಲ್ಲಿ ಮೋಡ ಬಿತ್ತನೆ ಕಾರ್ಯ ನಡೆಸುವುದಾಗಿ ತಿಳಿಸಿದ್ದಾರೆ.



ನಗರದಲ್ಲಿ ಶುಕ್ರವಾರ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ಮೋಡ ಬಿತ್ತನೆಗೆ ಕೇಂದ್ರ ಸರ್ಕಾರದಿಂದ ಪರವಾನಗಿ ಕೇಳಲಾಗಿತ್ತು. ಇಂದಷ್ಟೇ ಅವಕಾಶ ನೀಡಿರುವ ಮಾಹಿತಿ ಬಂದಿದೆ. ಮೋಡ ಬಿತ್ತನೆ ಕಾರ್ಯಕ್ಕಾಗಿಯೇ ಅಮೆರಿಕದಲ್ಲಿ ವಿಶೇಷವಾಗಿ ಸಿದ್ಧಪಡಿಸಲಾದ ಅತ್ಯಾಧುನಿಕ ವಿಮಾನವನ್ನು ಬಳಸಲಾಗುತ್ತಿದ್ದು, ಸೋಮವಾರವೇ ಹುಬ್ಬಳ್ಳಿ ವಿಮಾನ ನಿಲ್ದಾಣಕ್ಕೆ ಬಂದು ತಲುಪಲಿದೆ. ಈ ಕಾರ್ಯಾಚರಣೆಗಾಗಿ ಈಗಾಗಲೇ ಪೈಲಟ್‌ಗಳಿಗೆ ವಿಶೇಷ ತರಬೇತಿ ಸಹ ನೀಡಲಾಗಿದೆ ಎಂದು ತಿಳಿಸಿದರು.

ರಾಜ್ಯಾದ್ಯಂತ ಮೋಡ ಬಿತ್ತನೆ ಮಾಡಲು ರಾಜ್ಯ ಸರ್ಕಾರ ಟೆಂಡರ್ ಕರೆಯಬೇಕಿದೆ. ಅದಕ್ಕೆ ಸಮಯ ತಗಲುವುದರಿಂದ ಜಿಲ್ಲೆಯ 6 ಶಾಸಕರೇ ಸೇರಿ 8 ತಾಲೂಕುಗಳಲ್ಲಿ ಮೂರು ದಿನ ಮೋಡ ಬಿತ್ತನೆ ಕಾರ್ಯ ಮಾಡುತ್ತೇವೆ. ಒಂದು ತಾಸಿನ ಕಾರ್ಯಾಚರಣೆಗೆ 15 ಲಕ್ಷ ರೂ.ಪಾಯಿ ವೆಚ್ಚವಾಗಲಿದೆ. ಈ ಸಂಪೂರ್ಣ ವೆಚ್ಚವನ್ನು ನಾವೇ ಭರಿಸುತ್ತೇವೆ.

ಜಿಲ್ಲೆಯ ರೈತರು ಮಳೆ ಕೊರತೆಯಿಂದಾಗಿ ತೀವ್ರ ಸಂಕಷ್ಟ ಎದುರಿಸುತ್ತಿದ್ದಾರೆ. ಅವರ ಅನುಕೂಲಕ್ಕಾಗಿ ಈ ನಿರ್ಧಾರ ಮಾಡಲಾಗಿದೆ. ಸೋಮವಾರ ವಿಮಾನ ಬರಲಿದ್ದು, ಆಕಾಶದಲ್ಲಿ ಮೋಡಗಳ ಲಭ್ಯತೆಯನ್ನು ಪರಿಶೀಲಿಸಿ, ಜು.7ರಂದಲೇ ಮೋಡ ಬಿತ್ತನೆ ಆರಂಭಿಸಲಾಗುವುದು. ಮಳೆ ತರುವ ಮೋಡಗಳು ಸೂಕ್ತ ಪ್ರಮಾಣದಲ್ಲಿದ್ದಾಗ ಮಾತ್ರ ಬಿತ್ತನೆ ಪ್ರಕ್ರಿಯೆ ಯಶಸ್ವಿಯಾಗುವುದರಿಂದ, ಹವಾಮಾನದ ಮೇಲೆ ನಿಗಾ ಇಟ್ಟು ಕಾರ್ಯಾಚರಣೆ ನಡೆಸಲು ತಂಡ ಸಜ್ಜಾಗಿದೆ ಎಂದು ಪ್ರಕಾಶ ಕೋಳಿವಾಡ ತಿಳಿಸಿದರು.

## ಧರೆಗುರುಳಿದ ಮರಗಳು

**ಬೆಳಗಾವಿ:** ನಗರದಲ್ಲಿ ಗುರುವಾರ ರಾತ್ರಿ ಸುರಿದ ಭಾರೀ ಮಳೆಯಿಂದ ಕುಮಾರಸ್ವಾಮಿ ಬಡಾವಣೆ ಸೇರಿದಂತೆ ವಿವಿಧ ಪ್ರದೇಶಗಳಲ್ಲಿ ಹಲವು ಮರಗಳು ರಸ್ತೆಗೆ ಉರುಳಿ ಬಿದ್ದ ಪರಿಣಾಮ ಕೆಲಕಾಲ ವಾಹನ ಸಂಚಾರಕ್ಕೆ ತೀವ್ರ ಅಡಚಣೆ ಉಂಟಾಯಿತು. ರಸ್ತೆ ಮಧ್ಯೆ ಮರಗಳು ಬಿದ್ದಿದ್ದರಿಂದ ವಾಹನ ಸವಾರರು ಹಾಗೂ ಸಾರ್ವಜನಿಕರು ಪರದಾಡುವಂತಾಯಿತು. ಅದೃಷ್ಟವಶಾತ್ ಯಾವುದೇ ಪ್ರಾಣಹಾನಿ ಅಥವಾ ಗಾಯಗಳ ಸಂಭವಿಸಿಲ್ಲ. ಘಟನೆ ಯ ಮಾಹಿತಿ ತಿಳಿಯುತ್ತಿದ್ದಂತೆಯೇ ಮಹಾನಗರ ಪಾಲಿಕೆ ಅಧಿಕಾರಿಗಳು ಹಾಗೂ ಸಿಬ್ಬಂದಿ ಸ್ಥಳಕ್ಕೆ ಧಾವಿಸಿ ತುರ್ತು ಕಾರ್ಯಾಚರಣೆ ಕೈಗೊಂಡರು. ಆಧುನಿಕ ಯಂತ್ರೋಪಕರಣಗಳ ಸಹಾಯದಿಂದ ಸುಮಾರು ಎರಡು ಗಂಟೆಗಳ ಕಾರ್ಯಾಚರಣೆಯಲ್ಲಿ ರಸ್ತೆಗೆ ಬಿದ್ದಿದ್ದ ಮರಗಳನ್ನು ತೆರವುಗೊಳಿಸಿ, ವಾಹನ ಸಂಚಾರವನ್ನು ಪುನಃ ಸುಗಮಗೊಳಿಸಿದರು. ಮಾಹಿತಿ ದೊರೆತ ತಕ್ಷಣ ಸಿಬ್ಬಂದಿ ಕಾರ್ಯಾಚರಣೆಗೆ ಇಳಿದ ಪರಿಣಾಮ ಸಂಚಾರದ ಅಡಚಣೆಯನ್ನು ಶೀಘ್ರದಲ್ಲೇ ನಿವಾರಿಸಲು ಸಾಧ್ಯವಾಯಿತು ಎಂದು ಪಾಲಿಕೆ ಪರಿಸರ ವಿಭಾಗದ ಎಂಜಿನಿಯರ್ ಹನುಮಂತ ಕಲಾದಗಿ ತಿಳಿಸಿದ್ದಾರೆ. ಪಾಲಿಕೆ ಸಿಬ್ಬಂದಿಯ ತ್ವರಿತ ಸ್ಪಂದನೆಗೆ ಸಾರ್ವಜನಿಕರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ಜೊತೆಗೆ, ಮಳೆಗಾಲದ ಹಿನ್ನೆಲೆಯಲ್ಲಿ ಅಪಾಯಕಾರಿಯಾಗಿರುವ ಒಣಗಿದ ಹಾಗೂ ಬಾಗಿದ ಮರಗಳನ್ನು ಮುಂಚಿತವಾಗಿ ಗುರುತಿಸಿ ಅಗತ್ಯ ಮುನ್ನೆಚ್ಚರಿಕಾ ಕ್ರಮಗಳನ್ನು ಕೈಗೊಳ್ಳುವಂತೆ ಮಹಾನಗರ ಪಾಲಿಕೆಗೆ ಸಾರ್ವಜನಿಕರು ಮನವಿ ಮಾಡಿದ್ದಾರೆ.



### ಕಿರುಸುದ್ದಿ

#### ನಾರದ ಜಯಂತಿ ಇಂದು

**ಹುಬ್ಬಳ್ಳಿ:** ಲೋಕಹಿತ ಟ್ರಸ್ಟ್ ಮತ್ತು ಸಂವಾದ ಕೇಂದ್ರ ಜಂಟಿಯಾಗಿ ಆದ್ಯ ಪತ್ರಕರ್ತ ಮಹರ್ಷಿ ನಾರದರ ಜಯಂತಿ ಹಾಗೂ ಹಿರಿಯ ಪತ್ರಕರ್ತರನ್ನು ಮತ್ತು ಮಾಧ್ಯಮ ಕ್ಷೇತ್ರದ ಇತರ ಆಯಾಮಗಳ ಹಿರಿಯರನ್ನು ಸನ್ಮಾನಿಸಿ ಗೌರವಿಸುವ ಕಾರ್ಯಕ್ರಮವನ್ನು ಜು.4 ಶನಿವಾರದಂದು ಹುಬ್ಬಳ್ಳಿಯ ಜೆ.ಸಿ.ನಗರದ ಮುನ್ಸಿಪಲ್ ಎಂಪ್ಲಾಯೀಸ್ ಹಾಲ್‌ನಲ್ಲಿ ಆಯೋಜಿಸಲಾಗಿದೆ. ಹಿರಿಯ ಪತ್ರಕರ್ತ ಹಾಗೂ ಅಂಕಣಕಾರ ಮನೋಜ ಪಾಟೀಲ ಹಾಗೂ ಹಿರಿಯ ಛಾಯಾಗ್ರಾಹಕ ಹಾಗೂ ದೂರದರ್ಶನದ ವರದಿಗಾರ ಕಿರಣ ಬಾಕಳೆ ಅವರನ್ನು ಸನ್ಮಾನಿಸಿ ಗೌರವಿಸಲಾಗುವುದು. ಈ ಕಾರ್ಯಕ್ರಮದಲ್ಲಿ ಮುಖ್ಯವಕ್ತಾರರಾಗಿ ಆಕಾಶವಾಣಿಯ ನಿವೃತ್ತ ಕಾರ್ಯಕ್ರಮ ಅಧಿಕಾರಿ ಹಾಗೂ ತಾಳಮದ್ದಲೆ ಕಲಾವಿದರಾದ ದಿವಾಕರ ಹೆಗಡೆ ಅವರು ಆಗಮಿಸಲಿದ್ದಾರೆ ಎಂದು ಲೋಕಹಿತ ಟ್ರಸ್ಟ್ ಕಾರ್ಯದರ್ಶಿ ಶ್ರೀಧರ ನಾಡಗೀರ ಪತ್ರಿಕಾ ಪ್ರಕಟನೆಯಲ್ಲಿ ತಿಳಿಸಿದ್ದಾರೆ.

## ಮೇಯರ್, ಉಪಮೇಯರ್ ಆಯ್ಕೆಗೆ ಇಂದು ಚುನಾವಣೆ

**ಹುಬ್ಬಳ್ಳಿ:** ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಯ ಈ ಅವಯ ಕೊನೆಯ ಮೇಯರ್ ಹಾಗೂ ಉಪಮೇಯರ್ ಆಯ್ಕೆಗೆ ಚುನಾವಣೆ ಜು.4ರಂದು ಪಾಲಿಕೆಯ ಹುಬ್ಬಳ್ಳಿಯ ಸಭಾಭವನದಲ್ಲಿ ಶನಿವಾರ ನಡೆಯಲಿದೆ.

25ನೇ ಅವಧಿಗೆ ಮೇಯರ್ ಸ್ಥಾನ ಪರಿಶಿಷ್ಟ ಜಾತಿ ಮಹಿಳೆ ಮತ್ತು ಉಪ ಮೇಯರ್ ಸ್ಥಾನ ಸಾಮಾನ್ಯ ವರ್ಗದ ಮಹಿಳೆಗೆ ಮೀಸಲಾಗಿದೆ.

24ನೇ ಅವಧಿಯಲ್ಲಿ ಧಾರವಾಡಕ್ಕೆ ಮೇಯರ್ ಸ್ಥಾನ ನೀಡಲಾಗಿತ್ತು. ಈ ಬಾರಿ ಹುಬ್ಬಳ್ಳಿಗೆ ಮೇಯರ್ ಸ್ಥಾನ ಸಿಗಲಿದ್ದು, ಹುಬ್ಬಳ್ಳಿಯ ಚಂದ್ರಿಕಾ ಮೇಸ್ತ್ರಿ (ವಾರ್ಡ್ 56) ಅಭ್ಯರ್ಥಿಯಾಗುವ ಸಾಧ್ಯತೆ ಇದೆ. ಉಪ ಮೇಯರ್ ಸ್ಥಾನಕ್ಕೆ ಧಾರವಾಡದ ನೀಲವ್ವ ಅರವಳದ (ವಾರ್ಡ್ ವಾರ್ಡ್ 26), ರತ್ನಾಬಾಯಿ ನಾಝರೆ (ವಾರ್ಡ್ 9) ಪ್ರಮುಖ ಆಕಾಂಕ್ಷಿಗಳಾಗಿದ್ದಾರೆ. ಕೇಂದ್ರ ಸಚಿವ ಪ್ರಹ್ಲಾದ ಜೋಶಿ ಅಧ್ಯಕ್ಷತೆಯಲ್ಲಿ ಶುಕ್ರವಾರ ರಾತ್ರಿ ಜಿಲ್ಲಾ ಕೋರ್ ಕಮಿಟಿ ಸಭೆ ನಡೆಸಿ ಪಾಲಿಕೆ ಸದಸ್ಯರ ಅಭಿಪ್ರಾಯ ಸಂಗ್ರಹಿಸಲಾಯಿತು.

**ಈ ಅವಧಿಯಲ್ಲಿ ಪರಿಶಿಷ್ಟ ಜಾತಿ ಮಹಿಳೆಗೆ ಮೇಯರ್ ಸ್ಥಾನವಿದ್ದು, ಬಿಜೆಪಿಯಲ್ಲಿ ಇಬ್ಬರು ಸದಸ್ಯರಿದ್ದಾರೆ. ಕೋರ್ ಕಮಿಟಿಯಲ್ಲಿ ಸದಸ್ಯರ ಅಭಿಪ್ರಾಯ ಸಂಗ್ರಹಿಸಿ ಒಬ್ಬರ ಹೆಸರು ಘೋಷಿಸಲಾಗುವುದು.**

■ **ತಿಪ್ಪಣ್ಣ ಮಜ್ಜಗಿ, ಜಿಲ್ಲಾಧ್ಯಕ್ಷ ಹು-ಧಾ ಮಹಾನಗರ ಬಿಜೆಪಿ**

ಶನಿವಾರ ಬೆಳಗ್ಗೆ 9ರಿಂದ 11ರವರೆಗೆ ನಾಮಪತ್ರ ಸಲ್ಲಿಸಲು ಅವಕಾಶ ಇದ್ದು, ಅದಕ್ಕಿಂತ ಪೂರ್ವದಲ್ಲಿ ಪಕ್ಷದ ಅಭ್ಯರ್ಥಿಗಳ ಹೆಸರು ಘೋಷಣೆ ಮಾಡಲಾಗುವುದು ಎಂದು ಬಿಜೆಪಿ ಮುಖಂಡರೊಬ್ಬರು ತಿಳಿಸಿದರು.

82 ಸದಸ್ಯ ಬಲದ ಪಾಲಿಕೆಯಲ್ಲಿ 39 ಬಿಜೆಪಿ, 33 ಕಾಂಗ್ರೆಸ್, 3 ಎಐಎಂಐಎಂ, 6 ಪಕ್ಷೇತರರು ಮತ್ತು ಒಬ್ಬ ಜೆಡಿಎಸ್ ಸದಸ್ಯರಿದ್ದಾರೆ. ಪಕ್ಷೇತರರಲ್ಲಿ ಮೂವರು ಬಿಜೆಪಿಗೆ ಬೆಂಬಲ ನೀಡಿದ್ದಾರೆ. ನಾಲ್ವರು ವಿಧಾನ ಪರಿಷತ್ ಸದಸ್ಯರು, ಇಬ್ಬರು ಶಾಸಕರು, ಇಬ್ಬರು ಸಂಸದರು ಮತ್ತು ಒಬ್ಬ ಜೆಡಿಎಸ್ ಸದಸ್ಯ ಮತ್ತು ಮೂವರು ಪಕ್ಷೇತರರ ಮತಗಳನ್ನು ಸೇರಿಸಿದರೆ ಬಿಜೆಪಿ ಸಂಖ್ಯಾಬಲ 51 ಆಗುತ್ತದೆ.

ಕಾಂಗ್ರೆಸ್ ಬಳಿಕ ಮೂವರು ಪಕ್ಷೇತರರು, ತಲಾ ಒಬ್ಬ ಶಾಸಕ, ವಿಧಾನ ಪರಿಷತ್ ಸದಸ್ಯರ ಮತಗಳು ಸೇರಿ ಒಟ್ಟು 38 ಮತಗಳಿವೆ.

ಮೇಯರ್ ಸ್ಥಾನಕ್ಕೆ ಕವಿತಾ ಕಬ್ಬೇರ (ವಾರ್ಡ್ 20) ಮತ್ತು ಉಪಮೇಯರ್ ಸ್ಥಾನಕ್ಕೆ ದಿಲ್ಶಾದ್ ಬೇಗಂ ನದಾಫ್ (ವಾರ್ಡ್ 6) ಅವರನ್ನು ಅಭ್ಯರ್ಥಿಗಳಾಗಿ ಘೋಷಿಸಲಾಗಿದೆ.

ಎಐಎಂಐಎಂ ಪಕ್ಷದ ಮೂವರು ಸದಸ್ಯರಿದ್ದು, ಈ ಹಿಂದಿನ ಚುನಾವಣೆಗಳಲ್ಲಿ ಪಕ್ಷವೂ ಯಾರಿಗೂ ಬೆಂಬಲ ನೀಡದೆ ಸ್ವತಂತ್ರವಾಗಿ ಸ್ಪರ್ಧೆ ಮಾಡಿತ್ತು. ಈ ಬಾರಿಯೂ ಅಭ್ಯರ್ಥಿಗಳನ್ನು ಕಣಕ್ಕಿಳಿಸಲಾಗುವುದು ಎಂದು ಪಾಲಿಕೆ ಸದಸ್ಯ ನಜೀರ್ ಅಹ್ಮದ್ ಹೊನ್ಯಾಳ ತಿಳಿಸಿದರು.

## ಪರಾರಿಯಾಗಿದ್ದ ಆರೋಪಿ ಪೊಲೀಸರ ಬಲೆಗೆ

**ಕಲಬುರಗಿ:** ಅಫಜಲಪುರ ಪೊಲೀಸ್ ಠಾಣೆಯ ಲಾಕ್‌ಅಪ್‌ನಿಂದ ಪರಾರಿಯಾಗಿ ಪೊಲೀಸ್ ಇಲಾಖೆಗೆ ತೀವ್ರ ತಲೆನೋವಾಗಿದ್ದ ಪೋಕ್ಸೊ ಪ್ರಕರಣದ ಆರೋಪಿ ಮಂಜುನಾಥ್‌ನ್ನು ಕಲಬುರಗಿ ಜಿಲ್ಲಾ ಪೊಲೀಸರು ವಿಶೇಷ ಕಾರ್ಯಾಚರಣೆ ನಡೆಸಿ ಮರು ಬಂಧಿಸಿದ್ದಾರೆ.



ಮಹಾರಾಷ್ಟ್ರಕ್ಕೆ ಪರಾರಿಯಾಗಲು ಯತ್ನಿಸುತ್ತಿದ್ದ ಆರೋಪಿಯನ್ನು ತೆಲ್ಲೂರು ಸಮೀಪ ವಶಕ್ಕೆ ಪಡೆಯಲಾಗಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಸ್.ಪಿ.ಅಡೂರು ಶ್ರೀನಿವಾಸಲು ತಿಳಿಸಿದ್ದಾರೆ.

16 ವರ್ಷದ ಅಪ್ರಾಪ್ತ ಬಾಲಕಿಯ ಅಪಹರಣ ಹಾಗೂ ಪೋಕ್ಸೋ ಪ್ರಕರಣಕ್ಕೆ ಸಂಬಂಧಿಸಿದಂತೆ ಮಂಜುನಾಥ್ ವಿರುದ್ಧ ಪ್ರಕರಣ ದಾಖಲಾಗಿತ್ತು. ಆರೋಪಿಯನ್ನು ಕೆಲ ದಿನಗಳ ಹಿಂದೆ ಮಹಾರಾಷ್ಟ್ರದ ಪುಣೆಯಲ್ಲಿ ಬಂಧಿಸಿ ಅಫಜಲಪುರ ಪೊಲೀಸ್ ಠಾಣೆಗೆ ಕರೆತರಲಾಗಿತ್ತು. ಕಾನೂನು ಪ್ರಕ್ರಿಯೆಗಳು ನಡೆಯುತ್ತಿದ್ದ ವೇಳೆ ಗುರುವಾರ ಮಧ್ಯರಾತ್ರಿ ಠಾಣೆಯ ಲಾಕ್‌ಅಪ್‌ನಿಂದ ಆತ ಪೊಲೀಸರ ಕಣ್ತಪ್ಪಿಸಿ ಪರಾರಿಯಾಗಿದ್ದನು.

ಆರೋಪಿ ಪರಾರಿಯಾದ ಘಟನೆ ಬೆಳಕಿಗೆ ಬಂದ ಕೂಡಲೇ ಜಿಲ್ಲಾ ಪೊಲೀಸ್ ಇಲಾಖೆ ಎಚ್ಚೆತ್ತುಕೊಂಡು ವಿಶೇಷ ತಂಡಗಳನ್ನು ರಚಿಸಿತು. ಕರ್ನಾಟಕ-ಮಹಾರಾಷ್ಟ್ರ ಗಡಿ ಭಾಗ, ಪ್ರಮುಖ ರಸ್ತೆಗಳು ಹಾಗೂ ಹೊರ ರಾಜ್ಯಗಳಿಗೆ ಸಂಪರ್ಕ ಕಲ್ಪಿಸುವ ಮಾರ್ಗಗಳಲ್ಲಿ ಕಟ್ಟುನಿಟ್ಟಿನ ನಿಗಾ ವಹಿಸಿ ವ್ಯಾಪಕ ಶೋಧ ಕಾರ್ಯ ನಡೆಸಲಾಯಿತು. ಗುಪ್ತ ಮಾಹಿತಿ ಆಧರಿಸಿ ಕಾರ್ಯಾಚರಣೆ ನಡೆಸಿದ ಪೊಲೀಸರು, ಮಹಾರಾಷ್ಟ್ರಕ್ಕೆ ತೆರಳಲು ಯತ್ನಿಸುತ್ತಿದ್ದ ಆರೋಪಿಯನ್ನು ತೆಲ್ಲೂರು ಬಳಿ ಬಂಧಿಸುವಲ್ಲಿ ಯಶಸ್ವಿಯಾದರು.

ಆರೋಪಿ ಠಾಣೆಯಿಂದ ಪರಾರಿಯಾಗುತ್ತಿರುವ ದೃಶ್ಯ ಸಿಸಿಟಿವಿ ಕ್ಯಾಮೆರಾದಲ್ಲಿ ಸೆರೆಯಾಗಿದ್ದು, ಪೊಲೀಸರು ನಿದ್ರೆಯಲ್ಲಿದ್ದ ವೇಳೆ ಬಳಸಿಕೊಂಡು ಆತ ತಪ್ಪಿಸಿಕೊಂಡಿದ್ದಾನೆ ಎಂಬ ಮಾಹಿತಿ ಬಹಿರಂಗಗೊಂಡಿದೆ.

ಈ ದೃಶ್ಯಗಳು ಮಾಧ್ಯಮಗಳಲ್ಲೂ ಪ್ರಸಾರವಾಗಿ ಪೊಲೀಸ್ ಇಲಾಖೆಯ ಭದ್ರತಾ ವ್ಯವಸ್ಥೆ ಕುರಿತು ಪ್ರಶ್ನೆಗಳು ಉದ್ಭವಿಸಿದ್ದವು. ಪೊಲೀಸ್ ಠಾಣೆಯಿಂದ ಪರಾರಿಯಾದ ಹಿನ್ನೆಲೆಯಲ್ಲಿ, ಮೂಲ ಪೋಕ್ಸೋ ಪ್ರಕರಣದ ಜೊತೆಗೆ ಪೊಲೀಸ್ ವಶದಿಂದ ತಪ್ಪಿಸಿಕೊಂಡ ಆರೋಪದಡಿ ಮಂಜುನಾಥ್ ವಿರುದ್ಧ ಮತ್ತೊಂದು ಪ್ರತ್ಯೇಕ ಪ್ರಕರಣ ದಾಖಲಿಸಲಾಗಿದೆ. ಆರೋಪಿಯನ್ನು ಮರುಬಂಧಿಸಿದ ಬಳಿಕ ಕಟ್ಟುನಿಟ್ಟಿನ ಭದ್ರತೆಯಲ್ಲಿ ಕಾನೂನು ಪ್ರಕ್ರಿಯೆಗಳನ್ನು ಮುಂದುವರಿಸಲಾ ಗುತ್ತಿದೆ. ಠಾಣೆಯಿಂದ ಆರೋಪಿ ಹೇಗೆ ಪರಾರಿಯಾದ, ಕರ್ತವ್ಯ ನಿರ್ವಹಣೆಯಲ್ಲಿ ಯಾವುದೇ ನಿರ್ಲಕ್ಷ್ಯ ನಡೆದಿದೆಯೇ ಎಂಬ ಕುರಿತು ಇಲಾಖಾ ಮಟ್ಟದಲ್ಲಿ ತನಿಖೆ ನಡೆ ಯುವ ಸಾಧ್ಯತೆ ಇದೆ. ಆರೋಪಿಯನ್ನು ನ್ಯಾಯಾಲಯ ಕ್ಕೆ ಹಾಜರುಪಡಿಸಿ ಮುಂದಿನ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ಪೊಲೀಸರು ತಿಳಿಸಿದ್ದಾರೆ.

### ವಿಧಾನ ಪರಿಷತ್ ಸದಸ್ಯ ಎನ್.ರವಿಕುಮಾರ್ ಆಕ್ರೋಶ
## ಗೃಹ ಸಚಿವರಿಗೆ ರಾಜ್ಯಕ್ಕಿಂತ ರಿಜಿಸ್ಟ್ರೇಷನದ್ದೆ ಚಿಂತೆ!

**ಕಲಬುರಗಿ:** ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಹದಗೆಟ್ಟು ಹೋಗಿದೆ. ಮಳೆಯಿಲ್ಲದೇ ರೈತರು ಗೋಳಾಡುತ್ತಿದ್ದಾರೆ. ರಾಜ್ಯದಲ್ಲಿನ ಗಂಭೀರ ಸಮಸ್ಯೆ ಬಗ್ಗೆ ಚಿಂತಿಸದ ಅವರು, ಬರೀ ರಿಜಿಸ್ಟ್ರೇಷನದ್ದೆ ಚಿಂತೆಯಲ್ಲಿದ್ದಾರೆ ಎಂದು ವಿಧಾನ ಪರಿಷತ್ ಸದಸ್ಯ ಎನ್.ರವಿಕುಮಾರ ಹೇಳಿದ್ದಾರೆ.

ನಗರರ ಐವನ್ ಇ ಶಾಹಿ ಅತಿಥಿ ಗೃಹದಲ್ಲಿ ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಗೃಹ ಸಚಿವರ ತವರು ಕ್ಷೇತ್ರದಲ್ಲಿ ಪೋಲಿಸರಿಗೆ ಚಳ್ಳೆ ಹಣ್ಣು ತಿನ್ನಿಸಿ ರಾತ್ರಿ ಪರಾರಿಯಾಗುತ್ತಾನೆ ಅಂದ್ರೆ ಏನರ್ಥ. ಈ ಬಗ್ಗೆ ಉಸ್ತುವಾರಿ ಸಚಿವರು ಯಾಕೆ ಮೌನ ತಾಳಿದ್ದಾರೆ ಎಂದರು.

ಇತ್ತೀಚೆಗೆ ರಾಜ್ಯ ಸರ್ಕಾರ ತನ್ನ ಸಚಿವ ಸಂಪುಟದಲ್ಲಿ ಕಲಬುರಗಿ ಜಿಲ್ಲೆಯ ಆಳಂದ ಪಟ್ಟಣದ ಲಾಡ್ಲೆ ಮಶಾಕ್ ದರ್ಗಾದಲ್ಲಿ ಶಿವಲಿಂಗ ಪೂಜೆ ವೇಳೆ ಕಲ್ಲುತೂರಾಟ ನಡೆಸಿದ ಪ್ರಕರಣದಲ್ಲಿ ಭಾಗಿಯಾದವರ ಮೇಲಿನ ಕೇಸ್ ವಾಪಸ್ ಪಡೆದಿರುವ ನಿರ್ಣಯಕ್ಕೆ ಕರ್ನಾಟಕ ಹೈಕೋರ್ಟ್ ಕಪಾಳ ಮೋಕ್ಷ ಮಾಡಿದೆ. ಈಗಲಾದರೂ ಸರ್ಕಾರ ಎಚ್ಚೆತ್ತುಕೊಳ್ಳಬೇಕು. ರಾಜ್ಯ ಸರ್ಕಾರದಿಂದ ತುಷ್ಟೀಕರಣ ನೀತಿ ಮೇರೆ ಮೆರೆಯುತ್ತಿದೆ. ಈ ನೀತಿ ಬದಲಾಗಬೇಕು ಎಂದು ಹೇಳಿದರು.

ರಾಜ್ಯಾದ್ಯಂತ ಗುಂಡಿ ಇದೆಯೋ ಅಥವಾ ಗುಂಡಿಗಳಲ್ಲೆ ರಾಜ್ಯವಿದೆಯೋ ಗೊತ್ತಿಲ್ಲ, ಎಲ್ಲ ರಸ್ತೆಗಳ ಕಾಮಗಾರಿ, ಅಭಿವೃದ್ಧಿ ಕಾರ್ಯಗಳು ಸ್ಥಗಿತವಾಗಿವೆ. ಶಾಸಕರೂ ಅನುದಾನ ಇಲ್ಲವೆಂದು ಅನ್ ಹ್ಯಾಪಿಯಲ್ಲಿದ್ದಾರೆ. ಇನ್ನೂ 20 ಸಚಿವರು ಯಾವಾಗ ಮಂತ್ರಿಯಾಗಿ ಬರುತ್ತಾರೋ ಗೊತ್ತಿಲ್ಲ, ಡಿ.ಕೆ.ಶಿವಕುಮಾರ ಸಿಎಂ ಆಗಿ ತಿಂಗಳಾದರೂ ಸಚಿವರ ನೇಮಕಾತಿ ಆಗುತ್ತಿಲ್ಲ, ಸಚಿವರ ನೇಮಕಾತಿ ಮಾಡಿದ್ರೆ ಇನ್ನೇನು ಸಮಸ್ಯೆ ಆಗಲಿದೆ ಎಂಬ ಚಿಂತನೆಯಲ್ಲಿ ಅಳೆದು ತೂಗಿ ಮಂತ್ರಿಗಿರಿ ಕೊಡುವ ಕೆಲಸ ಮಾಡುತ್ತಿದ್ದಾರೆ ಎಂದ ಅವರು, ಕೂಡಲೇ ರಾಜ್ಯದ ರೈತರ ಹಿತದೃಷ್ಟಿಯಿಂದ ಸರ್ವ ಪಕ್ಷ ಸಭೆ ಕರೆಯಬೇಕು ಎಂದು ಆಗ್ರಹಿಸಿದರು.

ಬಿಜೆಪಿ ಜಿಲ್ಲಾಧ್ಯಕ್ಷ ಅಶೋಕ್ ಬಗಲಿ, ಆನಂದ ಪಾಟೀಲ್, ವೀರೇಂದ್ರ ಪಾಟೀಲ್ ರಾಯಕೋಡ್ ಸೇರಿದಂತೆ ಇತರರು ಇದ್ದರು.



**ಸಚಿವ ಪ್ರಿಯಾಂಕ್ ಖರ್ಗೆಯವರು ಕಲಬುರಗಿ ಉಸ್ತುವಾರಿಯನ್ನು ಬೆಂಗಳೂರು ಕೇಂದ್ರವನ್ನಾಗಿಟ್ಟು ನಿಭಾಯಿಸುತ್ತಿದ್ದಾರೆ. ಇದೇ ರೀತಿ ಮುಂದುವರಿದರೆ ಸಚಿವರನ್ನು ಹುಡುಕಿಕೊಡಿ ಎಂಬ ಅಭಿಯಾನ ನಡೆಸಬೇಕಾಗುತ್ತದೆ.**

■ **ಎನ್.ರವಿಕುಮಾರ್, ವಿಧಾನ ಪರಿಷತ್ ಸದಸ್ಯ**

#### ಹುಂಡಿ ಕಳ್ಳತನ ತನಿಖೆಯಾಗಲಿ

ರಾಮಮಂದಿರ ಹುಂಡಿ ಕಳ್ಳತನ ಕುರಿತು ಕೇಳಲಾದ ಪ್ರಶ್ನೆಗೆ ಉತ್ತರಿಸಿದ ಎನ್.ರವಿಕುಮಾರ್, ಈ ಕುರಿತು ನಾವು ಎಂದಿಗೂ ತನಿಖೆ ಆಗಬಾರದು ಅಂತ ಹೇಳಿಲ್ಲ, ತನಿಖೆಯಾಗಲಿ. ಉಪ್ಪು ತಿಂದವರು ನೀರು ಕುಡಿಯಲೇಬೇಕು. ಇದರ ಜೊತೆಗೆ ರಾಜ್ಯದಲ್ಲಿ ವಕ್ಫ್ ಎಷ್ಟು ರೈತರ ಜಮೀನು ಕಬಳಿಸಿದೆ ರಿಪೋರ್ಟ್ ನೀಡಿದ್ದಿರಾ?. ಹತ್ತು ವರ್ಷ ಹಿಂದೆ ವಕ್ಫ್ ಆಸ್ತಿ ಎಷ್ಟಿತ್ತು, ಈಗ ಎಷ್ಟಿದೆ? ಸರ್ಕಾರ ಹೇಳಲಿ. ರಾಮಮಂದಿರ ಒಂದೇ ಅಲ್ಲ.ಇಡೀ ದೇಶಾದ್ಯಂತ ಎಷ್ಟು ಮಸೀದಿಗಳು ಸಾರ್ವಜನಿಕರ ಆಸ್ತಿ ಕಬಳಿಸಿದ್ದಾರೆ?. ದೇಶಾದ್ಯಂತ ಎಷ್ಟು ವಕ್ಫ್ ಆಸ್ತಿ ಹೆಚ್ಚಾಗಿದೆ.? ಇದರ ಬಗ್ಗೆಯೂ ಕೂಡ ನಮ್ಮ ಬುದ್ಧಿವಂತ, ಮುತ್ಸದ್ದಿ, ಅತ್ಯಂತ ಪ್ರಬುದ್ಧ ಸಚಿವ ಪ್ರಿಯಾಂಕ್ ಖರ್ಗೆ ಅವರು ಬೆಳಕು ಚೆಲ್ಲುವ ಕೆಲಸ ಮಾಡಲಿ ಎಂದರು.

## ಲಂಚ ಸ್ವೀಕರಿಸುವಾಗ ಲೋಕಾ ಬಲೆಗೆ

**ಬಳ್ಳಾರಿ:** ನಗರದ ಹೊಸಪೇಟೆ ರಸ್ತೆಯ, 2ನೇ ರೈಲ್ವೆ ಗೇಟ್ ಹತ್ತಿರದ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಉಪವಿಭಾಗದ ಕಚೇರಿಯಲ್ಲಿ ಲೋಕಾಯುಕ್ತ ಪೊಲೀಸರು ದಾಳಿ ನಡೆಸಿದ್ದು, ಲಂಚ ಪಡೆಯುತ್ತಿದ್ದ ಇಬ್ಬರು ಅಧಿಕಾರಿಗಳನ್ನು ಶುಕ್ರವಾರ ಬಂಧಿಸಿದ್ದಾರೆ. ಇಲ್ಲಿನ ವೀರೇಶ ಎನ್ನುವವರು, ರಾಮರಾಜುರವರ ರಿಯಲ್ ಎಸ್ಟೇಟ್ ಕಚೇರಿಯಲ್ಲಿ ಕೆಲಸ ಮಾಡುತ್ತಿದ್ದು, ಸಂಗನಕಲ್ಲು ರಸ್ತೆಯ ವಡ್ಡೆ ಗೋವಿಂದಪ್ಪ ಅವರಿಗೆ ಸೇರಿದ ಸರ್ವೆ ನಂ: 78/3 ರ 2.47 ಎಕರೆ ಜಮೀನಿನ ಬಹು ನಿವೇಶನ ವಿನ್ಯಾಸಕ್ಕೆ ಸಂಬಂಧಿಸಿದಂತೆ, ನೀರು ಸರಬರಾಜು ಹಾಗೂ ಒಳಚರಂಡಿ ವ್ಯವಸ್ಥೆ ಕಲ್ಪಿಸುವ ಸಲುವಾಗಿ ಅಂದಾಜು ಪಟ್ಟಿಯನ್ನು ತಯಾರಿಸಿ ಮೇಲಾಧಿಕಾರಿಗಳಿಗೆ ಸಲ್ಲಿಸಲು ಮನವಿ ಮಾಡಿದ್ದರು. ಕಚೇರಿಯ ಎ.ಇ ಅಶೋಕ್ ಎಸ್.ಅವರು 55 ಸಾವಿರ ರೂ. ಲಂಚದ ಹಣಕ್ಕೆ ಬೇಡಿಕೆ ಇಟ್ಟಿದ್ದರು. ಈ ಕುರಿತು ವೀರೇಶ್ ಅವರು ಬಳ್ಳಾರಿ ಲೋಕಾಯುಕ್ತ ಪೊಲೀಸ್ ಠಾಣೆಗೆ ದೂರು ನೀಡಿದ್ದರು. ಈ ದೂರು ಅನ್ವಯ ಶುಕ್ರವಾರ ಮಧ್ಯಾಹ್ನ ಲೋಕಾಯುಕ್ತ ಪೊಲೀಸರು ದಾಳಿ ನಡೆಸಿದ್ದಾರೆ. ದೂರುದಾರರಿಂದ ಪಡೆದ 55 ಸಾವಿರ ರೂ. ಲಂಚದ ಹಣದಲ್ಲಿ 27,500 ರೂ.ಗಳನ್ನು ಅಶೋಕ್ ಎಸ್.ಅವರು ತಮ್ಮ ಮೇಲಾಧಿಕಾರಿಯಾದ ಎ.ಇ.ಇ. ಕಾಶಿ ವಿಶ್ವನಾಥ್ ಅವರಿಗೆ ನೀಡುತ್ತಿದ್ದರು. ಈ ಸಂದರ್ಭದಲ್ಲಿ ಲೋಕಾ ಪೊಲೀಸರ ಕೈಗೆ ಸಿಕ್ಕಿ ಬಿದ್ದಿದ್ದಾರೆ. ಇಬ್ಬರ ಬಳಿಯಿಂದಲೂ ತಲಾ 27,500 ರೂ.ಗಳ ಲಂಚದ ಹಣವನ್ನು ಜಪ್ತಿ ಮಾಡಿಕೊಳ್ಳಲಾಗಿದೆ. ಬಳ್ಳಾರಿ ಲೋಕಾಯುಕ್ತ ಪೊಲೀಸ್ ಅಧೀಕ್ಷಕ ಎನ್. ವಾಸುದೇವರಾಮ ಅವರ ಮಾರ್ಗದರ್ಶನದಲ್ಲಿ, ಪೊಲೀಸ್ ನಿರೀಕ್ಷಕರುಗಳಾದ ಗುರಣ್ಣ ಎಸ್ ಹೆಬ್ಬಾಳ್ ಮತ್ತು ಸುರೇಶ್ ಎಂ ಭಾವಿಮನಿ ಅವರ ನೇತೃತ್ವದಲ್ಲಿ ಈ ಕಾರ್ಯಾಚರಣೆ ನಡೆದಿದ್ದು, ಸಿಬ್ಬಂದಿಗಳಾದ ಚಂದ್ರಶೇಖರ್, ವಸಂತಕುಮಾರ್, ಅರವಿಂದ, ಅಂಜಿನಪ್ಪ, ಹನುಮಂತಪ್ಪ, ಪ್ರಕಾಶ್ ಎಂ., ನಜೀಮ್ ಶೇಖ್, ಗೊಲ್ಲರ ದಾಸಪ್ಪ, ಹೊನ್ನೂರಪ್ಪ ಕೆ.ಟಿ ಮತ್ತು ಹರೀಶ್.ವಿ ಅವರು ಭಾಗವಹಿಸಿದ್ದರು.

### ಬಿಟಿಡಿಎ ಕಚೇರಿ ಮೇಲೆ ದಾಳಿ
## 18 ನಿವೇಶನಗಳ ದಾಖಲೆ ಪರಿಶೀಲಿಸಿದ ಲೋಕಾಯುಕ್ತ

**ಬಾಗಲಕೋಟೆ:** ಅನರ್ಹರಿಗೆ ನಿವೇಶನ ಹಂಚಿಕೆ ಮಾಡಲಾಗಿದೆ ಎಂಬ ಸಾರ್ವಜನಿಕರ ದೂರಿನ ಹಿನ್ನೆಲೆಯಲ್ಲಿ ಲೋಕಾಯುಕ್ತ ಅಧಿಕಾರಿಗಳು ಶುಕ್ರವಾರ ಬಾಗಲಕೋಟೆ ಪಟ್ಟಣ ಅಭಿವೃದ್ಧಿ ಪ್ರಾಧಿಕಾರ (ಬಿಟಿಡಿಎ) ಕಚೇರಿಯಲ್ಲಿ ಲೋಕಾಯುಕ್ತ ಅಧಿಕಾರಿಗಳು ದಾಳಿ ನಡೆಸಿದರು. 18 ನಿವೇಶನಗಳ ಹಂಚಿಕೆ ಪ್ರಕ್ರಿಯೆಯಲ್ಲಿ ಅಕ್ರಮ ನಡೆದಿದೆ ಎಂಬ ಆರೋಪದ ಹಿನ್ನೆಲೆ ಈ ಕಾರ್ಯಾಚರಣೆ ಕೈಗೊಳ್ಳಲಾಯಿತು. ದಾಳಿಯ ವೇಳೆ ಅಧಿಕಾರಿಗಳು ವಿವಿಧ ಕಡತಗಳು, ನಿವೇಶನ ಹಂಚಿಕೆ ದಾಖಲೆಗಳು ಹಾಗೂ ಸಂಬಂಧಿತ ದಾಖಲಾತಿಗಳನ್ನು ಪರಿಶೀಲಿಸಿದರು. ಕಡತಗಳ ವಿಲೇವಾರಿ ಪ್ರಕ್ರಿಯೆ, ನಿವೇಶನ ಹಂಚಿಕೆ ಹಾಗೂ ಸಾರ್ವಜನಿಕ ಸೇವೆಗಳ ಬಗ್ಗೆ ಸಿಬ್ಬಂದಿಯಿಂದ ಮಾಹಿತಿ ಸಂಗ್ರಹಿಸಿದರು. ತನಿಖೆ ಪೂರ್ಣಗೊಂಡ ಬಳಿಕ ಇನ್ನಷ್ಟು ಮಾಹಿತಿ ಬಹಿರಂಗವಾಗುವ ಸಾಧ್ಯತೆ ಇದೆ. ಲೋಕಾಯುಕ್ತ ಎಸ್‌ಪಿ ಎಸ್.ಪಿ. ನಂದಗಾವಿ ಅವರ ನೇತೃತ್ವದಲ್ಲಿ ನಡೆದ ಕಾರ್ಯಾಚರಣೆಯಲ್ಲಿ ಡಿವೈಎಸ್‌ಪಿ ಸುರೇಶ್ ರೆಡ್ಡಿ, ಇಬ್ಬರು ಇನ್ಸ್‌ಪೆಕ್ಟರ್‌ಗಳು ಹಾಗೂ ಸುಮಾರು 20 ಸಿಬ್ಬಂದಿ ಭಾಗವಹಿಸಿದ್ದರು.

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. Printed at M/s Elegant Offset Printers, Pvt.Ltd, Plot no 33/1& 15/1(eastern part) MT Sagar Industrial Estate, Hubballi -580030, Published at Joshi Chambers, 2nd Floor, Near R.M.Joshi Petrol pump, Lamington Road, Hubballi-580020, Ph: 0836-2350942, Editor: P.S.Prakash, Group Editor: Vinayak S. Bhat

## ಕಿರುಸುದ್ದಿ

### ನಾಗೇಂದ್ರ ಶೆಟ್ಟಿಗೆ ಪ್ರಶಂಸಾ ಗೌರವ

**ಅಂಕೋಲಾ:** ಅಂಕೋಲಾ ಮೂಲದ ನಾಗೇಂದ್ರ ಶೆಟ್ಟಿ 2016 ರಲ್ಲಿ ರೈಲ್ವೆ ಪೊಲೀಸ್ ಇಲಾಖೆಯಲ್ಲಿ ನೇಮಕ ಹೊಂದಿದ್ದು ಇದೀಗ ಅವರ ಉತ್ತಮ ಸೇವೆಗೆ ಡಿ ಜಿ ಐ ಜಿ ಪ್ರಶಂಸಾ ಪತ್ರಕ್ಕೆ ಪಾತ್ರರಾಗಿದ್ದಾರೆ. ಹಾಲಿ ಅವರು ವಿಶೇಷ ತನಿಖಾ ದಳದ ಸದಸ್ಯ ರಾಗಿ (ಎಸ್‌ಐಟಿ) ಸೇವೆಸಲ್ಲಿಸುತ್ತಿದ್ದಾರೆ. ಒಬ್ಬ ಪೊಲೀಸ್ ಕಾನ್ಸ್‌ಟೇಬಲ್ ಆಗಿ ವೃತ್ತಿ ಆರಂಭಿಸಿದ ನಾಗೇಂದ್ರ ಶೆಟ್ಟಿ ತಮ್ಮ ಅಪ್ರತಿಮ ಕೌಶಲ್ಯದ ಮೂಲಕ ಕೊಲೆ ದರೋಡೆ ಮೊದಲಾದ ಅಪರಾಧ ಪ್ರಕರಣ ಭೇದಿಸುವಲ್ಲಿ ಸಹಾಯಕರಾಗಿ ದುಡಿದು ಇಲಾಖೆಯ ಪ್ರಶಂಸೆಗೆ ಪಾತ್ರರಾಗಿದ್ದಾರೆ. ಪ್ರತಿಭಾವಂತರಾದ ನಾಗೇಂದ್ರ ಶೆಟ್ಟಿ 2009–10 ನೆಯ ಸಾಲಿನ ಪಿ ಎಂ ಕಾಲೇಜಿನ ಅತ್ಯುತ್ತಮ ಆದರ್ಶ ವಿದ್ಯಾರ್ಥಿ ಗೌರವಕ್ಕೆ ಪಾತ್ರರಾಗಿದ್ದರು. ಅಂಕೋಲಾ ಮುಖ್ಯ ಪೇಟೆಯ ಸರ್ವಮಂಗಳ ಬಳೆ ಅಂಗಡಿ ಮಾಲೀಕರಾದ ನರಸಿಂಹ ಮತ್ತು ಅಂಜಲಿ ಶೆಟ್ಟಿ ಅವರ ಪುತ್ರ. ಇವರ ಈ ಸಾಧನೆಗೆ ಕಾಲೇಜು ಮತ್ತು ಗೆಳೆಯರು ಅಭಿನಂದಿಸಿದ್ದಾರೆ.



### 7,46,938 ಎನ್ಯುಮರೇಷನ್ ನಮೂನೆಗಳ ವಿತರಣೆ

**ಕಾರವಾರ:** ಉತ್ತರ ಕನ್ನಡ ಜಿಲ್ಲೆಯಲ್ಲಿ ಮತದಾರರ ಪಟ್ಟಿ ಸಮಗ್ರ ಪರಿಷ್ಕರಣೆ–2026 (ಎಸ್‌ಐಆರ್) ಪ್ರಕ್ರಿಯೆ ಚುರುಕಿನಿಂದ ಸಾಗಿದ್ದು, ಜಿಲ್ಲೆಯಲ್ಲಿ ಒಟ್ಟು 12,30,037 ಮತದಾರರಿದ್ದು, 11,58,776 ಮಂದಿಯ ಮ್ಯಾಪಿಂಗ್ ಮಾಡಿದ್ದು ಇದುವರೆಗೂ ಜಿಲ್ಲೆಯಾದ್ಯಂತ ಒಟ್ಟು 7,46, 938 ಎನ್ಯುಮರೇಷನ್ ಫಾರ್ಮ್ ಗಳನ್ನು ವಿತರಿಸಲಾಗಿದ್ದು, 8331 ಫಾರ್ಮ್ ಗಳನ್ನು ಗಣಕೀಕರಣ ಗೊಳಿಸಲಾಗಿದೆ ಎಂದುಜಿಲ್ಲಾ ಚುನಾವಣಾಧಿಕಾರಿ ಹಾಗೂ ಜಿಲ್ಲಾಧಿಕಾರಿ ಕೆ. ಲಕ್ಷ್ಮೀ ಪ್ರಿಯಾ ತಿಳಿಸಿದ್ದಾರೆ. ಈವರೆಗಿನ ಮನೆ ಮನೆ ಭೇಟಿಯ ಸಂದರ್ಭದಲ್ಲಿ ಸ್ಥಳಾಂತರ, ಮರಣ ಹಾಗೂ ದ್ವಿಪ್ರತಿ ಪ್ರಕರಣಗಳಿಗೆ ಸಂಬಂಧಿಸಿದಂತೆ ಒಟ್ಟು 187 ಮತದಾರರನ್ನು ಗುರುತಿಸಲಾಗಿದೆ. ಇದರಲ್ಲಿ 27 ಶಾಶ್ವತ ವಲಸೆ ಹಾಗೂ 153 ಮರಣ ಹೊಂದಿದ ಪ್ರಕರಣಗಳು ಸೇರಿವೆ ಎಂದು ತಿಳಿಸಿದ್ದಾರೆ.

### ಬಾಲಕ ಆತ್ಮಹತ್ಯೆ

**ದಾಂಡೇಲಿ:** ನಗರದ ಸಮೀಪದಲ್ಲಿರುವ ಅಂಬೇವಾಡಿ ನವಗ್ರಾಮದಲ್ಲಿ ಬಾಲಕನೋರ್ವ ಆತ್ಮಹತ್ಯೆಗೆ ಶರಣಾದ ಘಟನೆ ನಡೆದಿದೆ. ಕಾಶಿನಾಥ ಸೋಮಣ್ಣ ಲಮಾಣಿ (ವ.15) ಎಂಬಾತನೇ ನೇಣಿಗೆ ಶರಣಾದ ಬಾಲಕನಾಗಿದ್ದಾನೆ. ಈತ ನವಗ್ರಾಮದಲ್ಲಿರುವ ತನ್ನ ಮನೆಯ ಕೊಠಡಿಯಲ್ಲಿ ನೇಣಿಗೆ ಶರಣಾಗಿದ್ದಾನೆ. ಮಾಧ್ಯಮಕ್ಕೆ ದೊರೆತ ಮಾಹಿತಿ ಪ್ರಕಾರ ಈತ ಸ್ಥಳೀಯ ಶಾಲೆಯೊಂದರಲ್ಲಿ 9ನೇ ತರಗತಿ ವ್ಯಾಸಂಗ ಮಾಡುತ್ತಿದ್ದು, ಕಳೆದ ಒಂದು ತಿಂಗಳಿನಿಂದ ಶಾಲೆಗೆ ಹೋಗುತ್ತಿರಲಿಲ್ಲ ಎಂಬ ಮಾಹಿತಿ ಲಭ್ಯವಾಗಿದೆ. ಈ ಬಾಲಕನ ಸಾವಿಗೆ ನಿಖರ ಕಾರಣ ಇನ್ನಷ್ಟೇ ತಿಳಿದು ಬರಬೇಕಾಗಿದೆ. ಸ್ಥಳಕ್ಕೆ ದಾಂಡೇಲಿ ಗ್ರಾಮೀಣ ಪೊಲೀಸರು ಭೇಟಿ ನೀಡಿ, ಪರಿಶೀಲನೆಯನ್ನು ನಡೆಸಿ ಮುಂದಿನ ಕ್ರಮವನ್ನು ಕೈಗೊಂಡಿದ್ದಾರೆ. ನಗರದ ಸಾರ್ವಜನಿಕ ಆಸ್ಪತ್ರೆಯಲ್ಲಿ ಮರಣೋತ್ತರ ಪರೀಕ್ಷೆ ನಡೆಸಿ ಮೃತದೇಹವನ್ನು ಕುಟುಂಬಸ್ಥರಿಗೆ ಹಸ್ತಾಂತರಿಸಲಾಗಿದೆ.

### ಎಪಿಎಂಸಿ ಕೃಷಿ ಧಾರಣೆ

| ಶಿರಸಿ | ಕನಿಷ್ಠ | ಗರಿಷ್ಠ |
|---|---|---|
| ಕಾಳುಮೆಣಸು | 63299 | 68809 |
| ಬಿಳಿಗೋಟು | 27019 | 33900 |
| ಕೆಂಪುಗೋಟು | 30099 | 35099 |
| ಬೆಟ್ಟೆ | 39699 | 45899 |
| ರಾಶಿ | 48739 | 51500 |
| ಚಾಲಿ | 42500 | 48191 |
| ಬಿ.ಕಾಳುಮೆಣಸು | 80000 | 89000 |

| ಯಲ್ಲಾಪುರ | ಕನಿಷ್ಠ | ಗರಿಷ್ಠ |
|---|---|---|
| ರಾಶಿ | 48009 | 54299 |
| ಬೆಟ್ಟೆ | 39399 | 45799 |
| ಕೆಂಪುಗೋಟು | 18811 | 33499 |
| ಬಿಳಿಗೋಟು | 16909 | 35299 |
| ಚಾಲಿ | 36899 | 46799 |
| ಕೋಕಾ | 16615 | 30899 |
| ಕಾಳುಮೆಣಸು | 50309 | 68005 |



ಮುಂಡಗೋಡ: ವರ್ಗಾವಣೆಗೊಂಡ ಸಿಬ್ಬಂದಿಗಳಾದ ಕೋಟೇಶ ನಾಗರೊಳ್ಳಿ, ಮಾಲತೇಶ ಮುಧೋಳ ಮತ್ತು ಬಸವರಾಜ ಲಮಾಣಿ ಅವರಿಗೆ ಇಲ್ಲಿನ ಪೊಲೀಸ್ ಠಾಣೆಯಲ್ಲಿ ಶುಕ್ರವಾರ ಬೀಳ್ಕೊಡುಗೆ ನೀಡಲಾಯಿತು. ಈ ವೇಳೆ ಸಿಪಿಐ ರಮೇಶ ಹಾನಾಪುರ, ಪಿಎಸ್ಐ ಮಂಜುನಾಥ ಗೌಡರ ಹಾಗೂ ಸಿಬ್ಬಂದಿ, ರಾಜು ಗುಬ್ಬಕ್ಕನವರ, ಶಿವಾನಂದ ಕುರುಬರ, ಶಿವಾನಂದ ದೊಡ್ಡಮನಿ, ಬಸವರಾಜ ಸಂಗಮೇಶ್ವರ, ಮಂಜು ಕೋಣನಕೇರಿ, ಪೀರಜ್ಜ ಸಾಗರ, ಮಂಜುನಾಥ ಕುತ್ತಕೋಟಿ, ಮಾಲತೇಶ ವಾಲ್ಮೀಕಿ ಹಾಗೂ ಮುಂತಾದವರು ಇದ್ದರು.

## ವೈದ್ಯರ ದಿನಾಚರಣೆ: ರೋಟರಿಯಿಂದ ರಕ್ತದಾನ ಶಿಬಿರ

**ಕುಮಟಾ:** ವೈದ್ಯರ ದಿನಾಚರಣೆಯ ಅಂಗವಾಗಿ ಇಲ್ಲಿನ ರೋಟರಿ ಪ್ರವರ್ತಿತ ಉತ್ತರ ಕನ್ನಡ ಬ್ಲಡ್ ಬ್ಯಾಂಕ್ ಘಟಕದಲ್ಲಿ ರೋಟರಿ ಕ್ಲಬ್ ಕುಮಟಾ ವತಿಯಿಂದ ರಕ್ತದಾನ ಶಿಬಿರವನ್ನು ಗುರುವಾರ ಯಶಸ್ವಿಯಾಗಿ ಆಯೋಜಿಸಲಾಯಿತು.

ಶಿಬಿರವನ್ನು ಉದ್ಘಾಟಿಸಿ ಮಾತನಾಡಿದ ರೋಟರಿ ಕ್ಲಬ್ ಕುಮಟಾದ ಅಧ್ಯಕ್ಷ ಸಿ ವಿನಾಯಕ ಹೆಗಡೆ, ರಕ್ತದಾನವು ಜೀವದಾನಕ್ಕೆ ಸಮಾನವಾದ ಮಹಾದಾನ. ಅಪಘಾತ, ಶಸ್ತ್ರಚಿಕಿತ್ಸೆ ಹಾಗೂ ತುರ್ತು ಚಿಕಿತ್ಸೆಯ ಸಂದರ್ಭಗಳಲ್ಲಿ ರಕ್ತದ ಅವಶ್ಯಕತೆ ನಿರಂತರವಾಗಿದ್ದು, ಆರೋಗ್ಯವಂತರು ಸ್ವಯಂಪ್ರೇರಿತರಾಗಿ ರಕ್ತದಾನ ಮಾಡುವ ಮೂಲಕ ಸಮಾಜದ ಅಮೂಲ್ಯ ಸೇವೆಯಲ್ಲಿ ಪಾಲ್ಗೊಳ್ಳಬೇಕು ಎಂದು ಸಲಹೆ ನೀಡಿದರು.

ರೋಟರಿಯ ವಾರ್ಷಿಕ ಸೇವಾ ಯೋಜನೆಯ ಅಂಗವಾಗಿ ಈ ರಕ್ತದಾನ ಶಿಬಿರವನ್ನು ಆಯೋಜಿಸಲಾಗಿದ್ದು, ಶಿಬಿರದಲ್ಲಿ 40 ಮಂದಿ ಸ್ವಯಂಪ್ರೇರಿತ ರಕ್ತದಾನಿಗಳು ರಕ್ತದಾನ ಮಾಡಿ ಮಾನವೀಯ ಸೇವೆಗೆ ಕೈಜೋಡಿಸಿದರು.

ಈ ಸಂದರ್ಭದಲ್ಲಿ ವೈದ್ಯರಾದ ರೊ. ಡಾ. ವಾಗೀಶ್ ಭಟ್, ರೊ. ಡಾ. ಶ್ರೀದೇವಿ ಭಟ್, ರೊ. ನಿಖಿಲ್ ಕ್ಷೇತ್ರಪಾಲ, ಅಡ್ವೊಕೇಟ್ ಗಣೇಶ ನಾಯ್ಕ ರೊ. ಗುರುಪ್ರಸಾದ ಕಾಮತ, ರೊ. ಗುರುರಾಜ ಶೆಟ್ಟಿ ರೊ. ಪವನ ಶೆಟ್ಟಿ ರೊ. ಪ್ರಶಾಂತ ಮೂಡಲಮನೆ ಸೇರಿದಂತೆ ರೋಟರಿ ಪದಾಧಿಕಾರಿಗಳು, ಸದಸ್ಯರು ಹಾಗೂ ಬ್ಲಡ್ ಬ್ಯಾಂಕ್ ಸಿಬ್ಬಂದಿ ಉಪಸ್ಥಿತರಿದ್ದರು.



ಕುಮಟಾ: ವೈದ್ಯರ ದಿನಾಚರಣೆಯ ಅಂಗವಾಗಿ ಇಲ್ಲಿನ ರೋಟರಿ ಪ್ರವರ್ತಿತ ಉತ್ತರ ಕನ್ನಡ ಬ್ಲಡ್ ಬ್ಯಾಂಕ್ ಘಟಕದಲ್ಲಿ ರೋಟರಿ ಕ್ಲಬ್ ಕುಮಟಾ ವತಿಯಿಂದ ರಕ್ತದಾನ ಶಿಬಿರವನ್ನು ರೋಟರಿ ಕ್ಲಬ್ ಕುಮಟಾದ ಅಧ್ಯಕ್ಷ ಸಿ ವಿನಾಯಕ ಹೆಗಡೆ ಉದ್ಘಾಟಿಸಿದರು. ಈ ಸಂದರ್ಭದಲ್ಲಿ ವೈದ್ಯರಾದ ರೊ. ಡಾ. ವಾಗೀಶ್ ಭಟ್, ರೊ. ಡಾ. ಶ್ರೀದೇವಿ ಭಟ್ , ರೊ. ನಿಖಿಲ್ ಕ್ಷೇತ್ರಪಾಲ, ಅಡ್ವೊಕೇಟ್ ಗಣೇಶ ನಾಯ್ಕ ರೊ. ಗುರುಪ್ರಸಾದ ಕಾಮತ ಇತರರು ಉಪಸ್ಥಿತರಿದ್ದರು.

## ಆದಾಯ ಪ್ರಮಾಣ ಪತ್ರಕ್ಕಾಗಿ ನೆಮ್ಮದಿ ಕೇಂದ್ರದ ಮುಂದೆ ರಿಕಾಣಿ

# ಮಾಸಾಶನ ಬಂದ್: ಸಂಕಷ್ಟದಲ್ಲಿ ಫಲಾನುಭವಿಗಳು

ಸಂತೋಷ ರಾಯ್ಕರ

**ಮುಂಡಗೋಡ:** ತಾಲೂಕಿನ 4469 ಪಿಂಚಣಿದಾರರಿಗೆ ಮೂರ್ನಾಲ್ಕು ತಿಂಗಳಿಂದ ಮಾಸಾಶನ ಬಂದ್ ಆಗಿರುವ ಫಲಾನುಭವಿಗಳು ಮಾಸಾಶನ ಪಡೆಯಲು ವಾರ್ಷಿಕ ಆದಾಯ ಪತ್ರ ಮಾಡಿಸಿಕೊಳ್ಳಲು ನೆಮ್ಮದಿ ಕೇಂದ್ರದ ಮುಂದೆ ಹಗಲು ರಾತ್ರಿ ಎನ್ನದೆ ವೃದ್ಧರು ಕಾಯುತ್ತಿರುವುದು ದೃಶ್ಯ ಕಂಡುಬಂದಿದೆ.

ಮಾಶಾಸನ ಪಡೆಯುವ ಫಲಾನುಭವಿಗಳ ಆದಾರ್ ಕಾರ್ಡ್ ಹಾಗೂ ರೇಷನ ಕಾರ್ಡ್ ವಿಲೀನಗೊಳಿಸಿರುವುದ್ದರಿಂದ ಮಾಶಾಸನ ಬಂದಾಗಿದ್ದು ತಾಲೂಕಿನ 4469 ಪಿಂಚಣಿ ಪಡೆಯುವ ಫಲಾನುಭವಿಗಳು ಪರದಾಡುತ್ತಿದ್ದಾರೆ. ವೃದ್ಧಾಪವೇತನ, ಅಂಗವಿಕಲ, ವಿಧ್ವಾವೇತನ ಸೇರಿ ಒಟ್ಟು 12510 ಪಿಂಚಣಿದಾರರು ತಾಲೂಕಿನಲ್ಲಿದ್ದು ಇವರಲ್ಲಿ 4469 ಫಲಾನುಭವಿಗಳ ಮಾಶಾಸನ ಬಂದಾಗಿದೆ.

**ಆದಾಯ ಪ್ರಮಾಣ ಪತ್ರಕ್ಕೆ ಸರದಿ:** ಮಾಸಾಶನ ಪಡೆಯಬೇಕೆಂದರೆ 32ಸಾವಿರ ರೂ. ಇರುವ ವಾರ್ಷಿಕ ಆದಾಯ ಪ್ರಮಾಣ ಪತ್ರ, ಆದಾರ್ ಕಾರ್ಡ್, ಹಾಗೂ ವೇತನ ಮಂಜೂರಿ ಆದೇಶ ಪತ್ರವನ್ನು ಸಂಬಂಧಿಸಿದ ಗ್ರಾಮ ಆಡಳಿತ ಅಧಿಕಾರಿಗಳ ಬಳಿ ಹಾಜರ ಪಡಿಸಿದರೆ ಬಂದಾಗಿರುವ ಮಾಸಾಶನ ಪುನಃ ಆರಂಭವಾಗುತ್ತದೆ. ಆದ್ದರಿಂದ ಗ್ರಾಮೀಣ ಭಾಗದ ವೃದ್ಧರು ಆದಾಯ ಪ್ರಮಾಣ ಪತ್ರಕ್ಕೆ ಅರ್ಜಿ ಸಲ್ಲಿಸಲು ನಸುಕಿನಲ್ಲಿಯೇ ನೆಮ್ಮದಿ ಕಚೇರಿಯ ಬಳಿ ಸರದಿ ಸಾಲಲ್ಲಿ ನಿಲ್ಲುತ್ತಿರುವುದು ಕಂಡು ಬಂದಿದೆ.

**ಅರ್ಹರಿಗೂ ಸಂಕಷ್ಟ:** ಮಾಸಾಶನ ಪಡೆಯುವ ಫಲಾನುಭವಿಗಳ ಕುಟುಂಬದವರ ಪಡಿತರ ಚೀಟಿ ನೀಡಿ ಶಾಲಾ ಮಕ್ಕಳಿಗೆ ಪಡೆದ ಆದಾಯ ಪ್ರಮಾಣ ಪತ್ರದಲ್ಲಿ ವಾರ್ಷಿಕ ಆದಾಯ 32ಸಾವಿರಕ್ಕೂ ಹೆಚ್ಚಿಗೆ ಇದ್ದರೂ ಸಹ ಅಂತಹ ಕುಟುಂಬದ ವೃದ್ಧರ ವೇತನ ಬಂದ್ ಮಾಡಲಾಗಿದೆ ಎಂದು ತಿಳಿದುಬಂದಿದೆ. ಆದರಲ್ಲಿಯೂ ಮಾಸಾಶನ ಪಡೆಯಲು ಅರ್ಹರು ಇದ್ದರು ಸಹ ಮೂರ್ನಾಲ್ಕು ತಿಂಗಳದಿಂದ ವೇತನ ಬಾರದಿರುವುದು ವೃದ್ಧರನ್ನು ಸಂಕಷ್ಟಕ್ಕೆ ದುಡುವಂತಾಗಿದೆ.

**ವೃದ್ಧರು ಪರದಾಟ:** ಸರ್ಕಾರದ ನೂತನ ನಿಯಮದಿಂದ ತಾಲೂಕಿನ 4469ಜನರು ಮೂರ್ನಾಲ್ಕು ತಿಂಗಳಿಂದ ಮಾಸಾಶನವಿಲ್ಲದೆ ಪರದಾಡುತ್ತಿದ್ದು ಇದೀಗ ಮಾಸಾಶನ ನವೀಕರಣ ಮಾಡಲು 32ಸಾವಿರಕ್ಕಿಂತ ಕಡಿಮೆಯಿರುವ ಆದಾಯ ಪ್ರಮಾಣ ಪತ್ರ ಪಡೆಯಲು ಕಂದಾಯ ಇಲಾಖೆಗೆ ಅಲೆದಾಡುತ್ತಿದ್ದು ಗ್ರಾಮಲೆಕ್ಕಾಧಿಕಾರಿ, ಕಂದಾಯ ನಿರೀಕ್ಷಕ ಕಚೇರಿ ಹಾಗೂ ನೆಮ್ಮದಿ ಕೇಂದ್ರದ ಮುಂದೆ ಮಧ್ಯರಾತ್ರಿಯೇ ಬಂದು ಸರತಿ ಸಾಲಿನಲ್ಲಿ ನಿಲ್ಲುವ ಅನಿವಾರ್ಯತೆ ಎದುರಾಗಿದೆ.

ಸಾರ್ವಜನಿಕರು ಗ್ರಾಮ್ ಒನ್ ಕರ್ನಾಟಕ ಒನ್ ನಲ್ಲಿ ಅರ್ಜಿ ಹಾಕಲು ಅವಕಾಶ ಇದ್ದರೂ ಒಮ್ಮೆಲೆ ನೆಮ್ಮದಿ ಕೇಂದ್ರಕ್ಕೆ ಬರವುದ್ದರಿಂದ ಇಷ್ಟು ಸಮಸ್ಯೆ ಆಗುತ್ತಿದೆ ಎನ್ನಲಾಗಿದೆ.



ಮೂರು ತಿಂಗಳಿನಿಂದ ವೇತನ ಬಂದಿಲ್ಲ. ಕೇಳಿದರೆ 32 ಸಾವಿರಕ್ಕಿಂತ ಕಡಿಮೆ ಇರುವ ಆದಾಯ ಪ್ರಮಾಣ ಪತ್ರ ನೀಡಿದರೆ ನಿಮ್ಮ ಮಾಸಾಶನ ಮರಳಿ ಆರಂಭವಾಗುತ್ತೆ ಅಂತಾ ಹೇಳುತ್ತಿದ್ದಾರೆ. ಅದಕ್ಕಾಗಿ ಕಳೆದ ನಾಲ್ಕು ದಿನಗಳಿಂದ ಒಂದು ಆದಾಯ ಪ್ರಮಾಣಪತ್ರ ಪಡೆಯಲು ಓಡಾಡುತ್ತಿದ್ದೇನೆ. ಬಹಳಷ್ಟು ಜನರು ಮಧ್ಯರಾತ್ರಿಯೇ ಬಂದು ಸರತಿ ಸಾಲು ಹಚ್ಚಿದ್ದಾರೆ. ಕೆಲವೊಮ್ಮೆ ಸರ್ವರ ಸಮಸ್ಯೆಯಾಗಿ ವಿಳಂಬವಾಗುತ್ತಿದೆ.

■ ರತ್ನವ್ವಾ ಅರಶಿಣಗೇರಿ. ವೃದ್ಧೆ

ಪರಿಶೀಲನೆ ನಡೆಯುತ್ತಿದೆ. ಕೆಲ ಪಿಂಚಣಿದಾರ ವಯಸ್ಸಿನ ವ್ಯತ್ಯಾಸ, ಎಪಿಎಲ್ ಕಾರ್ಡ್ ಮತ್ತು ತೆರಿಗೆದಾರರು ಇರುವುದು ಕಂಡು ಬಂದಿರುವುದ್ದರಿಂದ ಅಂತಹವರ ವೇತನ ಬಂದಾಗಿದೆ. ಹೀಗಾಗಿ ದಾಖಲೆ ಪಡೆದು ಅನುಮೋದನೆ ನೀಡಲಾಗುವುದು. ಆ್ಯಪ್ ಸಮಸ್ಯೆಯಾಗಿದೆ. 32 ಸಾವಿರ ಆದಾಯ ಇರುವ ಪಿಂಚಣಿದಾರರು ಅರ್ಹರಾಗಿರುತ್ತಾರೆ. ಗ್ರಾಮ ಒನ್ , ಕರ್ನಾಟಕ ಒನ್ ನಲ್ಲಿ ಅರ್ಜಿ ಸಲ್ಲಿಸಬಹುದು ಆನ್ಲೈನ್ ಆಪರೇಟರ್ ಕರೆದು ಮಾತನಾಡುತ್ತೇನೆ.

■ ಎಸ್.ಎ. ಪ್ರಸಾದ್., ತಹಶೀಲ್ದಾರ್ ಮುಂಡಗೋಡ

## ಸಹಕಾರಿ ಸಂಘಗಳ ಚಟುವಟಿಕೆ ಬಗ್ಗೆ ನಿಗಾ ವಹಿಸಿ

**ಕಾರವಾರ:** ಜಿಲ್ಲೆಯಲ್ಲಿನ ಸಹಕಾರಿ ಸಂಘಗಳ ವ್ಯವಹಾರ ಮತ್ತು ಚಟುವಟಿಕೆಗಳ ಬಗ್ಗೆ ಹೆಚ್ಚಿನ ನಿಗಾವಹಿಸಿ ಯಾವುದೇ ಅವ್ಯವಹಾರಗಳು ನಡೆಯದಂತೆ ಆಗಾಗ್ಗೆ ತಪಾಸಣೆಗಳನ್ನು ನಡೆಸಿ, ಸಾರ್ವಜನಿಕರ ಠೇವಣಿಗಳ ಮೊತ್ತಕ್ಕೆ ಭದ್ರತೆ ನೀಡುವಂತೆ ಜಿಲ್ಲೆಯ ಸಹಕಾರಿ ಸಂಘಗಳ ಉಪ ನಿಬಂಧಕರಿಗೆ ಜಿಲ್ಲಾಧಿಕಾರಿ ಕೆ.ಲಕ್ಷ್ಮೀಪ್ರಿಯಾ ಸೂಚನೆ ನೀಡಿದರು.

ಅವರು ಶುಕ್ರವಾರ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ನಡೆದ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಜಿಲ್ಲೆಯಲ್ಲಿ ಕೆಲವು ಸಹಕಾರಿ ಸಂಘಗಳಲ್ಲಿನ ಅವ್ಯವಹಾರಗಳಿಂದ ಸಾರ್ವಜನಿಕರು ತಮ್ಮ ಠೇವಣಿಯ ಹಣವನ್ನು ಕಳೆದುಕೊಂಡಿರುವ ಘಟನೆಗಳು ನಡೆದಿದ್ದು, ಇಂತಹ ಘಟನೆಗಳನ್ನು ತಪ್ಪಿಸುವ ಸಲುವಾಗಿ ಸಹಕಾರಿ ಬ್ಯಾಂಕ್‌ಗಳು ನಿಯಮಾನುಸಾರ ಎಲ್ಲಾ ಅನುಮತಿಗಳನ್ನು ನಡೆದು ಚಟುವಟಿಕೆಗಳನ್ನು ನಡೆಸುತ್ತಿರುವ ಬಗ್ಗೆ ಮತ್ತು ಅಲ್ಲಿನ ಆರ್ಥಿಕ ಚಟುವಟಿಕೆಗಳ ಬಗ್ಗೆ ಆಗಾಗ್ಗೆ ತಪಾಸಣೆಗಳನ್ನು ನಡೆಸುವ ಮೂಲಕ ಸಾರ್ವಜನಿಕರ ಹಣಕ್ಕೆ ಅಗತ್ಯ ರಕ್ಷಣೆ ದೊರೆಯುವಂತೆ ನೋಡಿಕೊಳ್ಳಬೇಕು ಎಂದರು.

ಜಿಲ್ಲೆಯ ಮುಂಡಗೋಡು, ಹಳಿಯಾಳ ಮತ್ತಿತರ ತಾಲೂಕುಗಳಲ್ಲಿ ಖಾಸಗಿ ಫೈನಾನ್ಸ್ ಗಳ ಹಾವಳಿ ಕುರಿತಂತೆ ದೂರುಗಳು ಬರುತ್ತಿದ್ದು, ಖಾಸಗಿ ಪೈನಾನ್ಸ್ ಗಳು ಆರ್.ಬಿ.ಐ. ಮಾರ್ಗಸೂಚಿಗಳನ್ನು ಪಾಲಿಸಿಕೊಂಡು ನಡೆಯುತ್ತಿರುವ ಬಗ್ಗೆ ಮತ್ತು ಇವರು ವಿಧಿಸುವ ಬಡ್ಡಿ ದರಗಳ ಕುರಿತಂತೆ ಪರಿಶೀಲನೆ ನಡೆಸಬೇಕು. ಖಾಸಗಿ ಪೈನಾನ್ಸ್ ಗಳು ಸೇರಿದಂತೆ ಹಣಕಾಸು ಸಂಸ್ಥೆಗಳಲ್ಲಿ ಸಾರ್ವಜನಿಕರು ಸುರಕ್ಷಿತ ವ್ಯವಹಾರ ನಡೆಸುವ ಬಗ್ಗೆ ಹೆಚ್ಚಿನ ಸಂಖ್ಯೆಯಲ್ಲಿ ಅರಿವು ಮತ್ತು ಜಾಗೃತಿ ಕಾರ್ಯಕ್ರಮಗಳನ್ನು ಆಯೋಜಿಸುವಂತೆ ನಿರ್ದೇಶನ ನೀಡಿದರು.

ಜಿಲ್ಲೆಯಲ್ಲಿನ ಖಾಸಗಿ ಪೈನಾನ್ಸ್ ಸಂಸ್ಥೆಗಳು ಆರ್.ಬಿ.ಐ. ಮಾರ್ಗಸೂಚಿಯಡಿ ಕಾರ್ಯನಿರ್ವಹಿಸುತ್ತಿರುವ ಬಗ್ಗೆ ಪರಿಶೀಲಿಸಿ, ಅನಧಿಕೃತ ಎಂದು ಕಂಡು ಬಂದಲ್ಲಿ ಅಂತಹ ಸಂಸ್ಥೆಗಳ ವಿರುದ್ಧ ತಕ್ಷಣ ಪ್ರಕರಣ ದಾಖಲು ಮಾಡುವಂತೆ ಸೂಚನೆ ನೀಡಿದರು.

ಸಹಕಾರ ಸಂಘಗಳ ಆರ್ಥಿಕ ಅವ್ಯವಹಾರಗಳ ಕುರಿತು ಸಲ್ಲಿಕೆಯಾಗುವ ದೂರುಗಳನ್ನು ನಿಗಧಿತ ಕಾಲಾವಧಿಯಲ್ಲಿ ವಿಲೇಗೊಳಿಸುವುದರ ಜೊತೆಗೆ ಅಂತಹ ಸಂಸ್ಥೆಗಳಲ್ಲಿ ಸಾರ್ವಜನಿಕರ ಠೇವಣಿ ಮೊತ್ತ ಸುರಕ್ಷಿತವಾಗಿರುವಂತೆ ಅಗತ್ಯ ಎಚ್ಚರವಹಿಸುವಂತೆ ಸೂಚಿಸಿದರು.

ಸಭೆಯಲ್ಲಿ ಜಿ.ಪಂ. ಸಿಇಓ ಡಾ.ದಿಲೀಷ್ ಶಶಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ದೀಪನ್ ಎಂ.ಎನ್, ಉಪ ವಿಭಾಗಾಧಿಕಾರಿ ಶ್ರವಣ ಕುಮಾರ್, ಸಹಕಾರಿ ಸಂಘಗಳ ಉಪ ನಿಬಂಧಕಿ ತೇಜಸ್ವಿನಿ ಗೌಡ, ಲೀಡ್ ಬ್ಯಾಂಕ್ ಮೇನೇಜರ್ ರಾಜಪ್ಪ ಹಾಗೂ ಸಹಕಾರಿ ಸಂಘಗಳ ಇಲಾಖೆಯ ಎಲ್ಲಾ ತಾಲೂಕುಗಳು ಅಧಿಕಾರಿಗಳು ಇದ್ದರು.



## ಹಿರಿಯ ನಾಗರಿಕರಿಗಾಗಿ ವಿಶೇಷ ಕಾರ್ಯಕ್ರಮ

**ಹಳಿಯಾಳ:** ವಿಧಾನಸಭಾ ಕ್ಷೇತ್ರದ ಶಾಸಕ ಆರ್.ವಿ. ದೇಶಪಾಂಡೆಯವರ ತಂದೆ ವಿಶ್ವನಾಥರಾವ್ ದೇಶಪಾಂಡೆ ಅವರ ಜನ್ಮದಿನದ ಪ್ರಯುಕ್ತ ಪಟ್ಟಣದ ಕೆಎಲ್ ಎಸ್ ವಿಶ್ವನಾಥರಾವ್ ದೇಶಪಾಂಡೆ ತಾಂತ್ರಿಕ ಮಹಾವಿದ್ಯಾಲಯ ಹಾಗೂ ವಿ.ಆರ್. ದೇಶಪಾಂಡೆ ಮೆಮೋರಿಯಲ್ ಟ್ರಸ್ಟ್ ಇವರ ಜಂಟಿ ಸಹಯೋಗದಲ್ಲಿ ಜುಲೈ 1ರಂದು, ಸಂಸ್ಥಾಪಕರ ದಿನಾಚರಣೆ ಅಂಗವಾಗಿ, ಹಿರಿಯ ನಾಗರಿಕರಿಗಾಗಿ ವಿಶೇಷ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಯಾಗಿ ಸಾಮಾಜಿಕ ಕಾರ್ಯಕರ್ತರು ಹಾಗೂ ಲೇಖಕರಾದ ಶಿರಸಿಯ ವಿ.ಪಿ. ಹೆಗಡೆ ಆಗಮಿಸಿ, ಸಮಾಜ ಸೇವೆಯಲ್ಲಿ ಹಿರಿಯ ನಾಗರಿಕರ ಪಾತ್ರದ ಕುರಿತಾಗಿ ಮಾತನಾಡಿದರು. ಹಿರಿಯ ನಾಗರಿಕರು ಸಮಾಜ ಸುಧಾರಣೆಗೆ ತರುಣರಿಗೆ ಯೋಗ್ಯ ಸಲಹೆ ನೀಡಬೇಕೆಂದು ಹೇಳಿದರು.

ಗೌರವ ಅತಿಥಿಯಾದ ಕೆಎಲ್‌ಇ ವೈದ್ಯಕೀಯ ಮಹಾವಿದ್ಯಾಲಯ ಹುಬ್ಬಳ್ಳಿ ಯಲ್ಲಿ ಸಹ ಪ್ರಾಧ್ಯಾಪಕಿಯಾಗಿ ಕಾರ್ಯನಿರ್ವಹಿಸುತ್ತಿರುವ ಡಾ. ರಂಜನಾ ರಾನಡೆ, ವೃದ್ಧಾಪ್ಯದಲ್ಲಿ ಉತ್ತಮ ಆರೋಗ್ಯ ಕಾಪಾಡಿಕೊಳ್ಳುವುದರ ಕುರಿತಾಗಿ ಸಲಹೆ ನೀಡಿದರು. ಉತ್ತಮ ಆಹಾರ ಹಾಗೂ ಲಘು ವ್ಯಾಯಾಮದಿಂದ ಆರೋಗ್ಯದ ಸಮತೋಲನವನ್ನು ಕಾಪಾಡಿಕೊಳ್ಳಬಹುದೆಂದು ಹೇಳಿದರು. ಅನಗತ್ಯ ಆಲೋಚನೆ ಹಾಗೂ ಒತ್ತಡದಿಂದ ಆರೋಗ್ಯ ಕೆಡಿಸಿಕೊಳ್ಳದಂತೆ ಕಿವಿಮಾತು ಹೇಳಿದರು.

ಹಳಿಯಾಳ ಹಿರಿಯ ನಾಗರಿಕರ ವೇದಿಕೆ ಅಧ್ಯಕ್ಷ ಜಿ.ಡಿ. ಗಂಗಾಧರ ವಿಆರ್‌ಡಿಎಂ ಟ್ರಸ್ಟ್ ಮತ್ತು ವಿಡಿಐಟಿ ಕಾಲೇಜಿನ ಈ ಉಪಕ್ರಮಕ್ಕೆ ಮೆಚ್ಚುಗೆ ವ್ಯಕ್ತ ಪಡಿಸಿದರು.

ಅಧ್ಯಕ್ಷತೆ ವಹಿಸಿ ಮಾತನಾಡಿದ ಪ್ರಾಚಾರ್ಯ ಡಾ. ವಿ.ಎ. ಕುಲಕರ್ಣಿ ಹಿರಿಯ ನಾಗರಿಕರ ಅನುಭವದ ಸಲಹೆಗಳು ಸಮಾಜದಲ್ಲಿ ಉತ್ತಮ ಬದಲಾವಣೆಯನ್ನು ತರುತ್ತದೆ ಎಂದು ಹೇಳಿದರು.

ವಿಆರ್‌ಡಿಎಂ ಟ್ರಸ್ಟ್‌ನ ಆಡಳಿತಧಿಕಾರಿ ಪ್ರಕಾಶ್ ಪ್ರಭು ಹಾಗೂ ವಿಡಿಐಟಿ ಟ್ರೈನಿಂಗ್ ಅಂಡ್ ಪ್ಲೇಸ್ಮೆಂಟ್ ಸಂಚಾಲಕ ಪ್ರೊ. ನವೀನ್ ಹಿರೇಮಠ ಕಾರ್ಯಕ್ರಮ ಸಂಯೋಜಿಸಿದ್ದರು. ಪ್ರೊ ಶ್ರೀಗೌರಿ ಕಾರ್ಯಕ್ರಮ ನಿರೂಪಣೆ ಮಾಡಿದರು. ಹಳಿಯಾಳ ಮತ್ತು ತೇರಗಾಂವ್ ನ ಐವತ್ತಕ್ಕೂ ಅಧಿಕ ಹಿರಿಯ ನಾಗರಿಕರು ಈ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.



## ಪ್ರಧಾನಮಂತ್ರಿ ಬಗ್ಗೆ ಅವಹೇಳನಕಾರಿ ಕಾಮೆಂಟ್ ಖಂಡಿಸಿ ದೂರು ಸಲ್ಲಿಕೆ



**ಶಿರಸಿ:** ಸಾಮಾಜಿಕ ಜಾಲತಾಣವಾದ ಫೇಸ್‌ಬುಕ್‌ನಲ್ಲಿ 'ಕಾದೇನ ಸಿದ್ದಾಪುರ' ಎಂಬ ಹೆಸರಿನ ಖಾತೆಯಿಂದ ಭಾರತದ ಪ್ರಧಾನಮಂತ್ರಿಯವರ ಕುರಿತು ಆಕ್ಷೇಪಾರ್ಹ ಹಾಗೂ ಅವಹೇಳನಕಾರಿ ಕಾಮೆಂಟ್‌ಗಳನ್ನು ಪ್ರಕಟಿಸಿರುವುದನ್ನು ಖಂಡಿಸಿ ಶುಕ್ರವಾರ ಶಿರಸಿ ಉಪವಿಭಾಗದ ಡಿವೈಎಸ್‌ಪಿ ಗೀತಾ ಪಾಟೀಲ ಅವರಿಗೆ ಲಿಖಿತ ದೂರು ಸಲ್ಲಿಸಲಾಯಿತು.

ಸಾರ್ವಜನಿಕ ಹುದ್ದೆಯಲ್ಲಿರುವ ವ್ಯಕ್ತಿಗಳ ವಿರುದ್ಧ ಸಾಮಾಜಿಕ ಜಾಲತಾಣಗಳಲ್ಲಿ ಅವಹೇಳನಕಾರಿ ಹಾಗೂ ಪ್ರಚೋದನಕಾರಿ ಹೇಳಿಕೆಗಳನ್ನು ಪ್ರಕಟಿಸುವುದು ಸಮಾಜದಲ್ಲಿ ಅಶಾಂತಿ ಮತ್ತು ದ್ವೇಷದ ವಾತಾವರಣ ನಿರ್ಮಾಣಕ್ಕೆ ಕಾರಣವಾಗುವ ಸಾಧ್ಯತೆ ಇರುವುದರಿಂದ, ಈ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿ ಸಂಬಂಧಿಸಿದ ಫೇಸ್‌ಬುಕ್ ಖಾತೆಯ ಕುರಿತು ಸಮಗ್ರ ತನಿಖೆ ನಡೆಸಿ, ಕಾನೂನು ಪ್ರಕಾರ ಸೂಕ್ತ ಕ್ರಮ ಕೈಗೊಳ್ಳುವಂತೆ ದೂರಿನಲ್ಲಿ ಮನವಿ ಮಾಡಲಾಗಿದೆ.

ಈ ಸಂಬಂಧ ಸಂಬಂಧಿತ ಪೋಸ್ಟ್ ಗಳ ಸ್ಕ್ರೀನ್‌ಶಾಟ್ ಸೇರಿದಂತೆ ಅಗತ್ಯ ಸಾಕ್ಷ್ಯಗಳನ್ನು ಪೊಲೀಸ್ ಇಲಾಖೆಗೆ ಸಲ್ಲಿಸಲಾಗಿದೆ.

ಕಾನೂನನ್ನು ಕಾಪಾಡುವ ನಿಟ್ಟಿನಲ್ಲಿ ಪೊಲೀಸ್ ಇಲಾಖೆ ನಿಷ್ಪಕ್ಷಪಾತ ತನಿಖೆ ನಡೆಸಿ ತಪ್ಪಿತಸ್ಥರ ವಿರುದ್ಧ ಅಗತ್ಯ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಲಾಯಿತು.

ಈ ಸಂದರ್ಭದಲ್ಲಿ ನಾರಾಯಣ ಹೆಗಡೆ, ಬಿಜೆಪಿ ರೈತ ಮೋರ್ಚಾ ಜಿಲ್ಲಾಧ್ಯಕ್ಷ ಅನಂತಮೂರ್ತಿ ಹೆಗಡೆ, ಬಿಜೆಪಿ ಒಬಿಸಿ ಮೋರ್ಚಾ ಗ್ರಾಮೀಣದ ರವಿ ಗಾಂವಕರ, ಸುರೇಶ ನಾಯ್ಕ ಬಿಜೆಪಿ ರೈತ ಮೋರ್ಚಾ ಜಿಲ್ಲಾ ಉಪಾಧ್ಯಕ್ಷರು, ಮಧುಕರ್ ನಾಯ್ಕ್, ಬಿಜೆಪಿ ಸಾಮಾಜಿಕ ಜಾಲತಾಣ ಸಿರ್ಸಿ ಗ್ರಾಮೀಣದ ನರೇಂದ್ರ ಗೌಡ ಹಾಗೂ ಮಾಜಿ ತಾಲೂಕು ಪಂಚಾಯತ್ ಸದಸ್ಯ ಸಂತೋಷ್ ಗೌಡರ ಉಪಸ್ಥಿತರಿದ್ದರು.

## ಮೂರಿನಕಟ್ಟೆ ಸಮರ್ಪಕವಾಗಿ ನಿರ್ಮಿಸಲು ಆಗ್ರಹ

**ಭಟ್ಕಳ:** ಪಟ್ಟಣದಲ್ಲಿ ಮೂರಿನಕಟ್ಟೆ ಪ್ರದೇಶದಲ್ಲಿ ಜಿಲ್ಲಾಡಳಿತ ಹಿಂದೂಗಳಿಗೆ ಅನಾದಿಕಾಲದಿಂದ ನಡೆದುಕೊಂಡು ಬಂದ ಮಾರಿ ಹೊರೆ ಇಡುವ ಮೂರಿನಕಟ್ಟೆಯನ್ನು ಹಿಂದೂಗಳ ಭಾವನೆಗೆ ತಕ್ಕಂತೆ ಸಮರ್ಪಕವಾಗಿ ನಿರ್ಮಿಸಿಕೊಡಬೇಕು ಎಂದು ತಾಲೂಕು ಹಿಂದೂ ಜಾಗರಣ ವೇದಿಕೆಯ ಅಧ್ಯಕ್ಷ ಜಯಂತ ನಾಯ್ಕ ಆಗ್ರಹಿಸಿದ್ದಾರೆ.



ಈ ಕುರಿತು ಪತ್ರಿಕಾ ಪ್ರಕಟಣೆ ನೀಡಿರುವ ಅವರು ಭಟ್ಕಳದಲ್ಲಿ ಮೂರಿನಕಟ್ಟೆ ಎನ್ನುವುದು ಅನಾದಿ ಕಾಲದಿಂದಲೂ ಸಾಂಪ್ರದಾಯಕವಾಗಿ ಮಾರಿ ಅಮ್ಮನವರ ಹೊರ ಇಡುವ ಸ್ಥಳವಾಗಿ ಹಿಂದೂಗಳ ಧಾರ್ಮಿಕ ವಾಗಿ ನಡೆಸಿಕೊಂಡು ಬಂದಿರುವಂತ ಕಟ್ಟೆ ಯಾಗಿರುತ್ತದೆ. ರಸ್ತೆ ಅಗಲೀಕರಣದ ಸಂದರ್ಭದಲ್ಲಿ ಕಟ್ಟೆಯನ್ನು ಸ್ಥಳಾಂತರ ಮಾಡಬೇಕಾಗಿ ಬಂದ ವಾಗ ಅಲ್ಲೇ ಪಕ್ಕದಲ್ಲಿ ತಾಲೂಕು ಆಡಳಿತ ಗುರುತು ಮಾಡಿದ ಜಾಗದಲ್ಲೇ ಕಟ್ಟೆಯನ್ನು ನಿರ್ಮಾಣ ಮಾಡಿದ್ದನ್ನು ಮುಸ್ಲಿಂ ಮತಾಂಧರು ಧ್ವಂಸಗೊಳಿಸಿ ಭಟ್ಕಳದ ಹಿಂದುಗಳ ಧಾರ್ಮಿಕ ಭಾವನೆಗೆ ಧಕ್ಕೆ ತಂದಿದ್ದಾರೆ. ಇದರ ನಂತರ ಜಿಲ್ಲಾಡಳಿತ ಮರಿನ್ ಕಟ್ಟೆಯನ್ನು ನಾವು ನಿರ್ಮಾಣ ಮಾಡಿಕೊಡುತ್ತೇವೆ ಎಂದು ಭರವಸೆ ಕೊಟ್ಟಿದ್ದರು. ಈಗ ಡಿವೈಡರಿನ ಮಧ್ಯದಲ್ಲಿ ಬರುವ ಹಾಗೆ ಕಟ್ಟೆಯನ್ನು 7★15 ಹಾಗೆ 2.5 ಫೀಟ್ ಎತ್ತರದ ಕಟ್ಟೆಯನ್ನು ನಿರ್ಮಾಣ ಮಾಡಿ ಕೊಡುತ್ತೇವೆ ಎಂದು ಹೇಳಿ ಬೇಲಿ ಹಾಕಿದ ರೀತಿಯಲ್ಲಿ ಸುಮಾರು 50 ಮೀಟರ ಆಗುವಷ್ಟು ಉದ್ದದಲ್ಲಿ 6 ಅಡಿ ಎತ್ತರದ ಗ್ರಿಲ್ ಅನ್ನು ಅಳವಡಿಸಿ ಅದರ ಮಧ್ಯದಲ್ಲಿ 6 ಇಂಚು ಎತ್ತರದ ಸಿಮೆಂಟ್ ನ ಬೆಡ್ಡ ಅನ್ನು ಹಾಕಿ ಮೂರಿನಕಟ್ಟೆ ನಿರ್ಮಾಣ ಮಾಡಿದ್ದೇವೆ ಎನ್ನುತ್ತಿದ್ದಾರೆ. ಇದನ್ನು ನಾವು ಒಪ್ಪಿಕೊಳ್ಳಲು ಸಾಧ್ಯವೇ ಎಂದು ಪ್ರಶ್ನಿಸಿರುವ ಅವರು ಒಂದು ಧಾರ್ಮಿಕವಾದ ಕಟ್ಟೆ ಅಥವಾ ಒಂದು ಸ್ಥಳವನ್ನು ನೋಡಿದಾಗ ಮನಸ್ಸಿನಲ್ಲಿ ಒಂದು ಆಧ್ಯಾತ್ಮಿಕ ಭಾವನೆ ಬರಬೇಕು. ಜಿಲ್ಲಾಡಳಿತ ನಿರ್ಮಾಣ ಮಾಡಿದ ಮುರಿನ ಕಟ್ಟೆ ಹಾಗೂ ಗ್ರಿಲ್ ಇಂದ ಹಾಕಿದ ಬೇಲಿಯನ್ನು ನೋಡಿದರೆ ಯಾರನ್ನು ಒಲೈಸುವ ಸಲುವಾಗಿ ಯಾವುದನ್ನೋ ಮುಚ್ಚಿಡುವ ಸಲುವಾಗಿ ಮಾಡಿದಂತೆ ಕಾಣುತ್ತದೆ ಎಂದು ಅವರು ಆರೋಪಿಸಿದ್ದಾರೆ.

ಸಮಸ್ತ ಹಿಂದೂ ಸಮಾಜದ ತೀರ್ಮಾನದಂತೆ ನಮ್ಮ ಧಾರ್ಮಿಕವಾದಂತಹ ಮೂರಿನ ಕಟ್ಟೆಯನ್ನು ಉಳಿಸಿಕೊಳ್ಳಲು ಮುಂದಿನ ರೂಪರೇಷೆಗಳನ್ನು ಕೈಗೊಳ್ಳಲಾಗುವುದು ಎಂದು ಅವರು ತಿಳಿಸಿದ್ದಾರೆ.

## ಸಾಧನೆಗೆ ನಿಷ್ಠೆ, ಪ್ರಾಮಾಣಿಕ ಪ್ರಯತ್ನ ಮುಖ್ಯ: ಆರ್‌ವಿಡಿ

**ಹಳಿಯಾಳ:** ಇಂದಿನ ಸ್ಪರ್ಧಾತ್ಮಕ ಜೀವನದಲ್ಲಿ ಶಿಕ್ಷಣದ ಜೊತೆ ತರಬೇತಿ ಮತ್ತು ನೈಪುಣ್ಯ (ಸ್ಕಿಲ್) ಇದ್ದರಷ್ಟೇ ಸಾಲದು ಆರೋಗ್ಯವೂ ಪ್ರಮುಖವಾಗಿದೆ. ಇಂದಿನ ಯುವಕರು ಹೆಚ್ಚಿನ ಗಮನ ಆರೋಗ್ಯ ಮತ್ತು ಚಾರಿತ್ರ್ಯದ ಕಡೆ ಹರಿಸಬೇಕು. ಚಾರಿತ್ರ್ಯ ಸರಿ ಇಲ್ಲ ಎಂತಾದರೆ ಇಂದಿನ ಸಮಾಜದಲ್ಲಿ ಸ್ಥಾನಮಾನವಿಲ್ಲ. ಇವತ್ತಿನ ಯುವಕರು ರಾಷ್ಟ್ರದ ಆಸ್ತಿ. ಗುರಿ ಸಾಧನೆಗೆ ನಿಷ್ಠೆ ಮತ್ತು ಪ್ರಾಮಾಣಿಕ ಪ್ರಯತ್ನ ಮುಖ್ಯ ಎಂದು ಶ್ಲಾಘಿಸುತ್ತಾ ಶಾಸಕ ಆರ್.ವಿ.ದೇಶಪಾಂಡೆ ಹೇಳಿದರು.

ಅವರು ವಿ ಆರ್.ದೇಶಪಾಂಡೆ ಮೆಮೋರಿಯಲ್ ಟ್ರಸ್ಟ್ ನ ಸಂಸ್ಥಾಪಕರ ದಿನಾಚರಣೆಯಲ್ಲಿ ಮಾತನಾಡಿದರು.

ಮುಖ್ಯ ಅತಿಥಿಗಳಾಗಿ ಓಸಾಟ್ ಬೆಂಗಳೂರಿನ ಸಂಸ್ಥಾಪಕ ಹಾಗೂ ಧರ್ಮದರ್ಶಿ ವಾದಿರಾಜ್ ಭಟ್ ಮಾತನಾಡಿ, ತಮ್ಮ ಸಂಸ್ಥೆಯ ಮೂಲಕ ಕರ್ನಾಟಕದಾದ್ಯಂತ 86 ಸರಕಾರಿ ಶಾಲೆಗಳು ಹಾಗೂ ದೇಶದಾದ್ಯಂತ 150ಕ್ಕೂ ಮಿಗಿಲಾಗಿ ಸರಕಾರಿ ಶಾಲೆಯ ಕಟ್ಟಡ ಹಾಗೂ ಓದುವಿಕೆಯ ಸೌಲಭ್ಯದಲ್ಲಿ ಮಾಡಿದ ಬದಲಾವಣೆ ಹಾಗೂ ಸರಕಾರಿ ಶಾಲೆಯ ಮಕ್ಕಳ ಓದಿನಲ್ಲಿ ಅಭಿವೃದ್ಧಿ ಪಡಿಸಿದ್ದನ್ನು ಹಂಚಿಕೊಂಡರು.



ವಿಶೇಷ ಸಾಧಕರಾದ ಲತಿಕಾ ಭಟ್, ಪೂರ್ಣಿಮಾ ಹೆಗಡೆ, ಸಾಯಿನಾಥ ಮಾನು ಧವನ, ದೀಕ್ಷಿತಾ ಆರ್ ಗೌಡಾ, ಆಕಾಶ ಉದಯ ಹರಿಕಾಂತ ರವರನ್ನು ಟ್ರಸ್ಟ್ ನ ವತಿಯಿಂದ ಸನ್ಮಾನಿಸಲಾಯಿತು.

ಎಸ್ಸೆಸ್ಸೆಲ್ಸಿ ಮತ್ತು ಪಿಯುಸಿ ದ್ವಿತೀಯ ವರ್ಷದ ಪರೀಕ್ಷೆಗಳಲ್ಲಿ ಉತ್ತಮ ಅಂಕ ಪಡೆದು 37 ವಿದ್ಯಾರ್ಥಿ ಹಾಗೂ ವಿದ್ಯಾರ್ಥಿನಿಯರಿಗೆ ಪ್ರತಿಭಾ ಪುರಸ್ಕಾರ ವಿತರಿಸಿ ಸನ್ಮಾನಿಸಲಾಯಿತು.

ವಿ.ವಿ.ಡಿ. ಸ್ಕೂಲ್ ಆಫ್ ಎಕ್ಸಲೆನ್ಸ್ ನ ವಿದ್ಯಾರ್ಥಿಗಳು ಪ್ರಾರ್ಥಿಸಿದರು. ವಿಆರ್ ಡಿ ಎಮ್ ಟ್ರಸ್ಟ್ ನ ಆಡಳಿತಾಧಿಕಾರಿ ಪ್ರಕಾಶ ಪ್ರಭು ಸ್ವಾಗತಿಸಿದರು. ವಿಆರ್‌ಡಿಎಮ್ ಟ್ರಸ್ಟ್ ನ ಧರ್ಮದರ್ಶಿ ಪ್ರಸಾದ ದೇಶಪಾಂಡೆ ಪ್ರಾಸ್ತಾವಿಕವಾಗಿ ಮಾತನಾಡಿದರು.

ಶಾಸಕರ ಧರ್ಮಪತ್ನಿ ಹಾಗೂ ಟ್ರಸ್ಟ್ ನ ಧರ್ಮದರ್ಶಿ ರಾಧಾ ಆರ್. ದೇಶಪಾಂಡೆ ಹಾಗೂ ಸದಸ್ಯ ಕಾರ್ಯದರ್ಶಿ ಶ್ಯಾಮ ಕಾಮತ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ವಿವಿಡಿ ಸ್ಕೂಲ್ ಆಫ್ ಎಕ್ಸಲೆನ್ಸ್ ನ ಪ್ರಾಂಶುಪಾಲ ಬಸವರಾಜ್. ಎಚ್.ಎಮ್ ವಂದಿಸಿದರು. ಶ್ರೀಧರ ಬುಳ್ಳಣ್ಣವರ ಮತ್ತು ನೆಲ್ಲಿ ಗೊನ್ಸಾಲ್ವಿಸ್ ಕಾರ್ಯಕ್ರಮದ ನಿರೂಪಣೆ ಕೈಗೊಂಡರು.

## ಶಾಂತಿನಿಕೇತನ ಶಾಲೆಯಲ್ಲಿ ವೈದ್ಯರಿಗೆ ಸನ್ಮಾನ

**ಅಂಕೋಲಾ:** ವೈದ್ಯರ ದಿನಾಚರಣೆಯ ಸಂದರ್ಭದಲ್ಲಿ ಅಂಕೋಲದ ವೈದ್ಯರಾದ ಕಿವಿ, ಮೂಗು, ಗಂಟಲು ತಜ್ಞ ಡಾ.ರಮೇಶ್, ದಂತವೈದ್ಯ ಡಾ. ಕರುಣಾಕರ ನಾಯ್ಕ್, ಡಾ. ರಕ್ಷಿತಾ ಕರುಣಾಕರ ನಾಯ್ಕ್ , ಡಾ.ಅಕ್ಷರ ದುಗ್ಗಾಣಿ ಮತ್ತು ಡಾ.ಸುಮಾ ಅಕ್ಷರ್ ದುಗ್ಗಾಣಿ ಇವರನ್ನೆಲ್ಲ ಶಾಂತಿನಿಕೇತನ ಟ್ರಸ್ಟ್ ವತಿಯಿಂದ ಆತ್ಮೀಯವಾಗಿ ಸನ್ಮಾನಿಸಲಾಯಿತು. ಡಾ. ರಮೇಶ್ ಸನ್ಮಾನ ಸ್ವೀಕರಿಸಿ ಮಾತನಾಡಿ ಮಕ್ಕಳು ಶುಚಿತ್ವದ ಕಡೆ ಗಮನ ಕೊಟ್ಟರೆ ಆರೋಗ್ಯ ಚೆನ್ನಾಗಿ ಉಳಿಯುತ್ತದೆ ಎಂದರು.

ಸನ್ಮಾನ ಸ್ವೀಕರಿಸಿದ ದಂತ ವೈದ್ಯ ಡಾ. ಕರುಣಾಕರ ನಾಯ್ಕ್ ಮಾತಾಡಿ, ಚಿಕ್ಕಮಕ್ಕಳು ದಿನಾಲು 2 ಸಲ ಹಲ್ಲನ್ನು ಬ್ರಷ್ ಮಾಡಬೇಕು, ಹಲ್ಲು ಹಾಳಾಗದ ಹಾಗೆ ಕಾಪಾಡಿಕೊಳ್ಳಬೇಕು ಎಂದರು.

ಡಾ. ಅಕ್ಷರ ಮಾತನಾಡಿ, ಆರೋಗ್ಯವೇ ಭಾಗ್ಯ,ಎಲ್ಲರೂ ತಮ್ಮ ಆರೋಗ್ಯದ ಕಡೆ ಹೆಚ್ಚು ಲಕ್ಷ್ಯ ವಹಿಸಬೇಕು ಎಂದು ಹೇಳಿದರು.

ಶಾಂತಿನಿಕೇತನ ಟ್ರಸ್ಟ್ ನ ಮುಖ್ಯಸ್ಥರಾದ ದಂತವೈದ್ಯ ಡಾ.ಸಂಜು ನಾಯಕ ಉಪಸ್ಥಿತರಿದ್ದು ಸನ್ಮಾನ ಕಾರ್ಯಕ್ರಮ ನೆರವೇರಿಸಿದರು. ಶಿಕ್ಷಕಿ ಶ್ರದ್ಧಾ ಆಚಾರ್ಯ ನಿರ್ವಹಣೆ ಮಾಡಿದರು. ಮಮತಾ ನಾಯ್ಕ ವಂದನಾರ್ಪಣೆ ಮಾಡಿದರು. ಶೀತಲ್ ನಾಯ್ಕ್, ಮೈತ್ರಿ ಭಟ್, ಲಕ್ಷ್ಮೀ ಮತ್ತು ಸೌಖ್ಯ ಉಪಸ್ತಿತರಿದ್ದರು.



## ಶಾಂತಾರಾಮ ಸಿದ್ದಿ ಹೇಳಿಕೆ ಖಂಡನೀಯ: ಬೆನಿತ್ ಸಿದ್ದಿ

**ಯಲ್ಲಾಪುರ:** ಇತ್ತೀಚೆಗೆ ಎಂಎಲ್‌ಸಿ ಶಾಂತಾರಾಮ ಸಿದ್ದಿ ಅವರು ಮತಾಂತರಗೊಂಡ ಸಿದ್ದಿ ಜನರನ್ನು ಎಸ್.ಟಿ. ಮೀಸಲಾತಿಯಿಂದ ಕೈಬಿಡುವಂತೆ ನೀಡಿರುವ ಹೇಳಿಕೆಯನ್ನು ನಾವು ಖಂಡಿಸುತ್ತೇವೆ ಎಂದು ಸಿದ್ದಿ ಬುಡಕಟ್ಟು ಜನಪರ ಸಂಘದ ರಾಜ್ಯಾಧ್ಯಕ್ಷ ಬೆನಿತ್ ಸಿದ್ದಿ ಹೇಳಿದರು.

ಪಟ್ಟಣದಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ನಮ್ಮ ಆಚಾರ ವಿಚಾರಗಳು, ನಮ್ಮ ಜೀವನಶೈಲಿಯನ್ನು ಗಮನಿಸಿ ನಮ್ಮನ್ನು ಸಿದ್ದಿ ಬುಡಕಟ್ಟು ಜನಾಂಗಕ್ಕೆ ಸೇರಿಸಿದ್ದಾರೆ ಹೊರತು ಜಾತಿ ಧರ್ಮದ ಆಧಾರದ ಮೇಲೆ ಅಲ್ಲ. ಹೀಗಿರುವಾಗ ಪದೇ ಪದೇ ನಮ್ಮನ್ನು ಕೈಬಿಡುವಂತೆ ಹೇಳಿಕೆ ನೀಡುವುದು ಸಮಂಜಸವಲ್ಲ. ಸರ್ಕಾರವೇ ನಮಗೆ ಮೀಸಲಾತಿ ನೀಡಿರುವಾಗ ಇಂತಹ ಅನವಶ್ಯಕ ಹೇಳಿಕೆಗಳು ಅವರಿಗೆ ಶೋಭೆ ನೀಡುವುದಿಲ್ಲ ಎಂದರು.



ಕಾರ್ಯಾಧ್ಯಕ್ಷ ಲಾರೆನ್ಸ್ ಸಿದ್ದಿ ಮಾತನಾಡಿ, ನಮ್ಮದೇ ಸಮುದಾಯದಿಂದ ಉನ್ನತ ಹುದ್ದೆಗೆ ಆಯ್ಕೆಯಾದ ಶಾಂತಾರಾಮ ಸಿದ್ದಿ ಅವರ ಮೇಲೆ ನಮಗೆ ಗೌರವವಿದೆ. ನಾವು ಧರ್ಮದ ಹೊರತಾಗಿ ಎಲ್ಲರೂ ಸಹ ಬುಡಕಟ್ಟು ಜನಾಂಗದಲ್ಲಿಯೇ ಇದ್ದೇವೆ. ಈಗಲೂ ಸಹ ನಮಗೆ ಸರ್ಕಾರದ ಎಲ್ಲಾ ಸೌಲಭ್ಯಗಳನ್ನು ಪಡೆಯಲು ಹೋರಾಡುತ್ತಿರುವಾಗ, ನಾವೆಲ್ಲ ಒಂದೇ ಎನ್ನುವ ಭಾವವನ್ನು ಅವರು ಅನುಸರಿಸದೆ ಇದ್ದಲ್ಲಿ ಮುಂದಿನ ದಿನದಲ್ಲಿ ಹೋರಾಟದ ಮೂಲಕ ಖಂಡಿಸಬೇಕಾಗುತ್ತದೆ ಎಂದರು.

ಗೌರವಾಧ್ಯಕ್ಷ ಜಾನ್ ಕೋಸ್ತಾ ಸಿದ್ದಿ ಸತತ 20 ವರ್ಷಗಳ ಹೋರಾಟದ ಫಲವಾಗಿ ನಮಗೆ ಈ ಎಸ್.ಟಿ. ಮಾನ್ಯತೆ ದೊರೆತಿದೆ. ಇದನ್ನು ಉಳಿಸಿಕೊಂಡು ಹೋಗವತ್ತ, ಸರ್ಕಾರದ ಹೆಚ್ಚಿನ ಸೌಲಭ್ಯಗಳನ್ನು ಪಡೆಯುವ ನಿಟ್ಟಿನಲ್ಲಿ ನಾವೆಲ್ಲ ಕಾರ್ಯ ನಿರ್ವಹಿಸಬೇಕು ಹೊರತು, ನಮ್ಮ ನಮ್ಮಲ್ಲಿ ಒಡಕನ್ನು ಉಂಟುಮಾಡುವ ಧರ್ಮದ ಆಧಾರದ ಮೇಲೆ ರಾಜಕೀಯ ಮಾಡುವುದು ಖಂಡನೀಯ ಎಂದರು.

ಈ ಸಂದರ್ಭದಲ್ಲಿ ಸದಸ್ಯರಾದ ಶಂಕರ ನಾರಾಯಣ ಸಿದ್ದಿ, ಫಾತಿಮಾ ಫಕೀರ್ ಸಾಬ್ ಸಿದ್ದಿ, ಅಗಸ್ಟಿನ್ ಸಿದ್ದಿ, ಮಹಾದೇವ ಸಿದ್ದಿ, ಗೌರಿ ಸಿದ್ದಿ ಉಪಸ್ಥಿತರಿದ್ದರು.

## ಕಿರುಸುದ್ದಿ

### ವಿದ್ಯಾರ್ಥಿ ನಿಲಯ ಸದುಪಯೋಗಿಸಿಕೊಳ್ಳಿ

**ಹಾವೇರಿ:** ತಾಲೂಕಿನ ಕಳ್ಳಿಹಾಳ ಗ್ರಾಮದ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ವಿದ್ಯಾರ್ಥಿ ನಿಲಯವನ್ನು ವಿಧಾನಸಭೆ ಸಭಾಧ್ಯಕ್ಷ ಹಾಗೂ ಶಾಸಕ ರುದ್ರಪ್ಪ ಲಮಾಣಿ ಉದ್ಘಾಟಿಸಿದರು.ಈ ವೇಳೆ ಮಾತನಾಡಿದ ಅವರು, ರಾಜ್ಯ ಸರ್ಕಾರ ಮಂಜೂರು ಮಾಡಿದ ಮನತ ಸತತ ಕಾಲೇಜುಗಳ ಪೈಕಿ ರಾಜ್ಯದಲ್ಲಿಯೇ ಮೊದಲ ಬಾರಿಗೆ ಈ ಗ್ರಾಮದಲ್ಲಿ ಆರಂಭಿಸಲಾಗಿದೆ. ನಮ್ಮ ಸತತ ಪ್ರಯತ್ನದ ಫಲವಾಗಿ ಮಂಜೂರಾಗಿರುವ ಈ ವಿದ್ಯಾರ್ಥಿ ನಿಲಯವನ್ನು ವಿದ್ಯಾರ್ಥಿಗಳು ಸದುಪಯೋಗ ಮಾಡಿಕೊಳ್ಳಬೇಕು. ಜೊತೆಗೆ ತಮ್ಮ ಹೆತ್ತವರಿಗೆ ಉತ್ತಮ ಹೆಸರು ತರಬೇಕು ಎಂದರು.ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಸಂಜೀವಕುಮಾರ ನೀರಲಗಿ, ಕಾಲೇಜು ಅಭಿವೃದ್ಧಿ ಸಮಿತಿಯ ರಮೇಶ ಆನವಟ್ಟಿ, ಮಲ್ಲಿಕಾರ್ಜುನ ಬೂದಗಟ್ಟಿ, ಸಂಜನಾ, ಪ್ರಾಚಾರ್ಯ ಡಿ.ಟಿ. ಪಾಟೀಲ, ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕ ಅಂಜನೇಯ ಹುಲ್ಯಾಳ ಉಪಸ್ಥಿತರಿದ್ದರು.

### ಶಾಸಕ ಶ್ರೀನಿವಾಸ ಮಾನೆ ವಿರುದ್ಧ ಆಕ್ರೋಶ

**ಹಾನಗಲ್ಲ:** ಹಾಡುಹಗಲೇ ಮಾರಕಾಸ್ತ್ರಗಳಿಂದ ಹಲ್ಲೆ ನಡೆದು ನಾಲ್ಕು ದಿನಗಳಾದರೂ ಕೂಡ ಸ್ಥಳೀಯ ಶಾಸಕ ಶ್ರೀನಿವಾಸ ಮಾನೆ ತಾಲೂಕಿಗೆ ಆಗಮಿಸಿ ಸ್ಥಳಕ್ಕೆ ಭೇಟಿ ನೀಡದೆ ಇರುವುದು ವಿಷಾದದ ಸಂಗತಿ ಎಂದು ಹಿಂದು ಧ್ವಜ ಅಭಿಯಾನ ಸಮಿತಿ ಅಧ್ಯಕ್ಷ ಸಿದ್ದಲಿಂಗೇಶ ಕಮಡೊಳ್ಳಿ ಕಿಡಿಕಾರಿದರು.



ಗುರುವಾರ ಹಾನಗಲ್ಲಿನಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ಹಿಂದುಗಳ ಮೇಲೆ ನಿರಂತರ ಹಲ್ಲೆಗಳು ನಡೆಯುತ್ತಿವೆ. ಹಾನಗಲ್ಲ ತಾಲೂಕಿನ ನರೇಗಲ್ಲಿನಲ್ಲಿ ಕಾರಹುಣ್ಣಿಮೆಯಲ್ಲಿ ಹೋರಿ ಬೆದರಿಸುವವರು ಪಟಾಕಿ ಹಾರಿಸಿದರೆಂದು ಹಲ್ಲೆ ಮಾಡಿರುವುದನ್ನು ಯಾರೂ ಸಮರ್ಥನೆ ಮಾಡಿಕೊಳ್ಳುವಂತಹದ್ದಲ್ಲ. ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ, ನರೇಗಲ್ಲಿಗೆ ಭೇಟಿ ನೀಡಿ ಹಲ್ಲೆಗೊಳಗಾದ ಕುಟುಂಬಗಳಿಗೆ ಸಮಾಧಾನ ಹೇಳಿ, ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವವರನ್ನು ಭೇಟಿ ಮಾಡಿದ್ದಾರೆ, ಆದರೆ ಶಾಸಕ ಶ್ರೀನಿವಾಸ ಮಾನೆ ರಾಜಕೀಯಕ್ಕೆ ಬಳಸಿಕೊಳ್ಳುತ್ತಿದ್ದಾರೆ ಎಂದು ಹೇಳಿಕೆ ನೀಡುವ ಮೂಲಕ ತಮ್ಮ ಜವಾಬ್ದಾರಿಯಿಂದ ನುಣುಚಿಕೊಳ್ಳುತ್ತಿದ್ದಾರೆ ಎಂದು ಕಿಡಿ ಕಾರಿದರು.ನರೇಗಲ್ಲಿನಂತಹ ಘಟನೆಗಳು ಮರುಕಳಿಸದಂತೆ ಪೊಲೀಸ ಇಲಾಖೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು. ನರೇಗಲ್ಲ ಘಟನೆಯ ಬೆನ್ನಲ್ಲೇ ಹಾವೇರಿ ಜಿಲ್ಲೆಯ ರಟ್ಟಿಹಳ್ಳಿಯಲ್ಲಿ ವ್ಯಾಪಾರದಲ್ಲಿದ್ದ ಹಿಂದುವೊಬ್ಬನ ಅನ್ಯ ಕೋಮಿನವರು ಹಲ್ಲೆ ಮಾಡಿ ಸಾವಿಗೆ ಕಾರಣರಾಗಿದ್ದಾರೆ. ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ಅವರು ಹೇಳಿದಂತೆ ನಾವು ಭಾರತದಲ್ಲಿದ್ದೇವೆಯೋ ಪಾಕಿಸ್ತಾನದಲ್ಲಿದ್ದೇವೆಯೋ ಎಂಬ ಸಂಶಯ ಮೂಡುತ್ತಿದೆ ಎಂದರು.ಸುದ್ದಿಗೋಷ್ಠಿಯಲ್ಲಿ ರಾಮು ಯಳ್ಳೂರ, ಸಿದ್ದಲಿಂಗೇಶ ಶೆಟ್ಟರ, ಜಗದೀಶ ಸಿಂಧೂರ, ವಿಶ್ವನಾಥ ಭಿಕ್ಷಾವರ್ತಿಮಠ ಇದ್ದರು.

### ಹಾವೇರಿ ಕ್ಷೇತ್ರದಲ್ಲಿ 13,568 ಗಣಕೀಕರಣ

**ಹಾವೇರಿ:** ಭಾರತ ಚುನಾವಣಾ ಆಯೋಗದ ವೇಳಾಪಟ್ಟಿಯಂತೆ ಮತದಾರರ ಪಟ್ಟಿ ಸಮಗ್ರ ಪರಿಷ್ಕರಣೆ-2026ಕ್ಕೆ ಸಂಬಂಧಿಸಿದಂತೆ ಹಾವೇರಿ ವಿಧಾನಸಭಾ ಕ್ಷೇತ್ರದ ಎಲ್ಲ ಮತಗಟ್ಟೆಗಳ ಬೂತ್ ಮಟ್ಟದ ಅಧಿಕಾರಿಗಳ (ಬಿ.ಎಲ್.ಒ) ಎನುಮ್ಯರೇಷನ್ ಫಾರ್ಮನೊಂದಿಗೆ ಮತದಾರರ ಮನೆ ಮನೆಗೆ ಭೇಟಿ ಆರಂಭಿಸಲಾಗಿದೆ.ಹಾವೇರಿ ಕ್ಷೇತ್ರದಲ್ಲಿ ಒಟ್ಟು 2,39,012 ಮತದಾರರು ಇದ್ದು, ಮನೆ ಮನೆ ಭೇಟಿ ಹಾಗೂ ಸಂಗ್ರಹಿಸಿದ ನಮೂನೆಗಳ ಗಣಕೀಕರಣ ಜೂ.30 ರಿಂದ ಆರಂಭವಾಗಿದ್ದು, ಜುಲೈ 29ರವರೆಗೆ ಜರುಗಲಿದೆ. ಈವರೆಗೆ 56,675 ಎನುಮ್ಯರೇಷನ್ ಫಾರ್ಮಗಳನ್ನು ವಿತರಿಸಲಾಗಿದ್ದು, 13,568 ಗಣಕೀಕರಣ ಮಾಡಲಾಗಿದೆ. ಎಂದು ಹಾವೇರಿ ಉಪ ವಿಭಾಗಾಧಿಕಾರಿಗಳು ತಿಳಿಸಿದ್ದಾರೆ.

### ಬೈಕ್ ಡಿಕ್ಕಿ: ವ್ಯಕ್ತಿಗೆ ಗಾಯ

**ಹಾವೇರಿ:** ರಸ್ತೆಯಲ್ಲಿ ನಡೆದುಕೊಂಡು ಹೋಗುತ್ತಿದ್ದ ವ್ಯಕ್ತಿಯೊಬ್ಬರಿಗೆ ಹಿಂದಿನಿಂದ ಬಂದ ಬೈಕ್ ಡಿಕ್ಕಿ ಹೊಡೆದ ಪರಿಣಾಮ ಪಾದಾಚಾರಿ ಗಂಭೀರವಾಗಿ ಗಾಯಗೊಂಡ ಘಟನೆ ಸವಣೂರ ತಾಲೂಕು ತೊಂಡೂರ ಪ್ಲಾಟ್ ಗ್ರಾಮದಲ್ಲಿ ನಡೆದಿದೆ. ತೊಂಡೂರಿನ ದುಂಡಪ್ಪ ಗೂರಪ್ಪ ಚಂದ್ರಾಪಟ್ಟಣ ಗಾಯಗೊಂಡಿರುವ ಪಾದಾಚಾರಿ. ಅದೇ ಗ್ರಾಮದ ಮೈಲಪ್ಪ ಅಲಿಯಾಸ್ ಮೈಲಾರಿ ಮಾರ್ತಾಂಡಪ್ಪ ಹರಿಜನ (22) ಎಂಬ ಬೈಕ್ ಸವಾರನ ವಿರುದ್ಧ ದೂರು ದಾಖಲಿಸಲಾಗಿದೆ. ಆರೋಪಿ ಬೈಕ್ ಸವಾರ ಹೊಸಳ್ಳಿ-ತೊಂಡೂರು ರಸ್ತೆ ಮೇಲೆ ವೇಗವಾಗಿ ಬಂದು ಬೈಕ್‌ನ್ನು ನಿಯಂತ್ರಿಸಲಾಗದೆ ಪಾದಾಚಾರಿಗೆ ಡಿಕ್ಕಿ ಹೊಡೆದು ಅಪಘಾತ ಪಡಿಸಿದ್ದಾನೆ ಎಂದು ಗಾಯಾಳುವಿನ ಸಂಬಂ ಪ್ರಕಾಶ ಚಂದ್ರಾಪಟ್ಟಣ ಪೊಲೀಸರಿಗೆ ನೀಡಿದ ದೂರಿನಲ್ಲಿ ತಿಳಿಸಿದ್ದಾರೆ. ಸವಣೂರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



ಹಾವೇರಿ: ತಾಲೂಕಿನ ಕಳ್ಳಿಹಾಳ ಗ್ರಾಮದ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ವಿದ್ಯಾರ್ಥಿ ನಿಲಯವನ್ನು ವಿಧಾನಸಭೆ ಸಭಾಧ್ಯಕ್ಷ ಹಾಗೂ ಶಾಸಕ ರುದ್ರಪ್ಪ ಲಮಾಣಿ ಉದ್ಘಾಟಿಸಿದರು.

## ವಿಬಿಜಿರಾಮ್‌ಜಿ ತರಬೇತಿ ಕಾರ್ಯಾಗಾರ

**ಬ್ಯಾಡಗಿ:** ಉದ್ಯೋಗ ಖಾತ್ರಿ ಯೋಜನೆಯಂತೆಯೇ ವಿಬಿಜಿರಾಮ್‌ಜಿ ಯೋಜನೆ ಇದ್ದು, ಇದರಲ್ಲಿ ಬಹಳಷ್ಟು ಬದಲಾವಣೆ ಇಲ್ಲ. ಜಾಬ್ ಕಾರ್ಡ್ ಬದಲಿಗೆ ಗ್ಯಾರಂಟಿ ಕಾರ್ಡ್ ಬರಲಿದ್ದು, ಪ್ರತಿ ಮೂರು ವರ್ಷಕ್ಕೊಮ್ಮೆ ನವೀಕರಣ ಮಾಡಬೇಕು. ವಿಶೇಷಚೇತನರು ಹಾಗೂ ತೃತೀಯ ಲಿಂಗಿಗಳಿಗೆ ವಿಶೇಷ ಗ್ಯಾರಂಟಿ ಕಾರ್ಡ್ ನೀಡಲಾಗುವುದು'' ಎಂದು ತಾಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿ ಕೆಎಂ ಮಲ್ಲಿಕಾರ್ಜುನ್ ತಿಳಿಸಿದರು

ತಾಲೂಕ ಪಂಚಾಯತ್ ಕಚೇರಿಯ ಸಭಾಂಗಣದಲ್ಲಿ ಶುಕ್ರವಾರದಂದು ವಿಬಿಜಿರಾಮ್‌ಜಿ ಯೋಜನೆ ಕುರಿತು ಒಂದು ದಿನದ ತರಬೇತಿ ಕಾರ್ಯಾಗಾರ ಚಾಲನೆ ನೀಡಿ ಮಾತನಾಡಿದವರು. ಕೂಲಿಕಾರರಿಗೆ ಉದ್ಯೋಗ ಖಾತ್ರಿ ಜತೆಗೆ ಅಭಿವೃದ್ಧಿ ಖಾತ್ರಿ ಆಗಲಿ ಎಂಬುದು ವಿಬಿಜಿರಾಮ್‌ಜಿ ಯೋಜನೆಯ ಉದ್ದೇಶ'' ಎಂದು ಒತ್ತಿ ಹೇಳಿದ ಅವರು, 1 ರಿಂದ 37 ಕಾಯಿದೆಗಳ ಕುರಿತು ಸವಿಸ್ತಾರವಾಗಿ ವಿವರಿಸಿದರು.ಸಂಪನ್ಮೂಲ ವ್ಯಕ್ತಿಗಳಾದ ನಾಗರಾಜ ಹಡಗಲಿ ರವರು ಮಾತನಾಡಿ ಯೋಜನೆಯ ವಿಸ್ತೃತ ಮಾಹಿತಿ, ಅನುಷ್ಠಾನ ಪ್ರಕ್ರಿಯೆ ಹಾಗೂ ಮಾರ್ಗಸೂಚಿಗಳ ಕುರಿತು ತರಬೇತಿ ನೀಡಿದರು.ತರಬೇತಿಯಲ್ಲಿ ಸಹಾಯಕ ನಿರ್ದೇಶಕರಾದ ಎಂ.ಎ. ಅಗಸರ (ಗ್ರಾಬಿ) ತಾಪಂ ಸಿಬ್ಬಂದಿ, ಪಿ.ಡಿ.ಓಗಳು, ತಾಂತ್ರಿಕ ಸಂಯೋಜಕರಾದ ಸಂತೋಷ್ ನಾಯ್ಕ್, ಎಂ.ಐ.ಎಸ್ ಸಂಯೋಜಕರಾದ ಸಿದ್ದಲಿಂಗಮ್ಮ ಸಿರಿಗೇರಿ, ಐ.ಇ.ಸಿ ಸಂಯೋಜಕರಾದ ಅಕ್ಷಯ್ ದೇಶಪಾಂಡೆ ಆಡಳಿತ ಸಹಾಯಕರಾದ ಪ್ರತಿಭಾ , ಗ್ರಾಪಂ ಹಾಗೂ ಅನುಷ್ಠಾನ ಇಲಾಖೆಯ ತಾಂತ್ರಿಕ ಸಹಾಯಕರು ಮತ್ತು ಬಿ.ಎಫ್.ಟಿ ಗಳು ಉಪಸ್ಥಿತರಿದ್ದರು.



ಬ್ಯಾಡಗಿ: ತಾಲೂಕ ಪಂಚಾಯತ್ ಕಚೇರಿಯ ಸಭಾಂಗಣದಲ್ಲಿ ಶುಕ್ರವಾರದಂದು ವಿಬಿಜಿರಾಮ್‌ಜಿ ಯೋಜನೆ ಕುರಿತು ಒಂದು ದಿನದ ತರಬೇತಿ ಕಾರ್ಯಾಗಾರಕ್ಕೆ ತಾಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿ ಕೆಎಂ ಮಲ್ಲಿಕಾರ್ಜುನ್ ಅವರು ಚಾಲನೆ ನೀಡಿದರು.

### ಮಳೆ ಅಭಾವ, ಮುಂಜಾಗ್ರತಾ ಕ್ರಮಕ್ಕೆ ಸೂಚನೆ

# ಇಂದಿನಿಂದಲೇ ಕೆರೆ ತುಂಬಿಸಲು ಆರಂಭಿಸಿ

**ಹಾವೇರಿ:** ರಾಜ್ಯದಲ್ಲೇ ಹಾವೇರಿ ಜಿಲ್ಲೆಗೆ ಮಳೆ ಚೆನ್ನಾಗಿದೆ, ಬೆಳೆ ಸಹ ಉತ್ತಮ. ಮುಂಬರುವ 2ತಿಂಗಳ ನಂತರ ದೊಡ್ಡ ಸಮಸ್ಯೆ ಎದುರಿಸಬೇಕಾಗುತ್ತದೆ. ಹಾಗಾಗಿ ಕುಡಿಯುವ ನೀರು ಹಾಗೂ ಜಾನುವಾರುಗಳಿಗೆ ಮೇವಿನ ಕೊರತೆ ಆಗದಂತೆ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಅಧಿಕಾರಿಗಳಿಗೆ ಲೋಕೋಪಯೋಗಿ ಹಾಗೂ ಹಾವೇರಿ ಜಿಲ್ಲಾ ಪ್ರಕೃತಿ ವಿಕೋಪ ನಿರ್ವಹಣಾ ಮೇಲುಸ್ತುವಾರಿ ಸಚಿವ ಸತೀಶ ಜಾರಕಿಹೊಳಿ ಸೂಚನೆ ನೀಡಿದರು.

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಶುಕ್ರವಾರ ಜಿಲ್ಲಾ ಪ್ರಕೃತಿ ವಿಕೋಪ ನಿರ್ವಹಣೆ ಪ್ರಗತಿ ಪರಿಶೀಲನಾ ಸಭೆ ನಡೆಸಿದ ಅವರು, ನೂರು ವರ್ಷಗಳ ನಂತರ ಇಂತ ಬರಗಾಲ ಬಂದಿದ್ದು, ಸರ್ಕಾರ ಹಾಗೂ ಜಿಲ್ಲಾಡಳಿತ ಇದಕ್ಕೆ ಸನ್ನದ್ಧವಾಗಿ, ಇಲ್ಲಿನ ಸಮಸ್ಯೆಗಳ ಕುರಿತು ಸರ್ಕಾರದ ಗಮನಕ್ಕೆ ತಂದು ಸಮಸ್ಯೆ ಪರಿಹಾರಕ್ಕೆ ಪ್ರಯತ್ನ ಮಾಡಲಾಗುವುದು ಎಂದರು.

**ಕೆರೆ ತುಂಬಿಸಿ:** ನೀರಿನ ಸಮಸ್ಯೆ ಪರಿಹಾರಕ್ಕೆ ಕೆರೆ ತುಂಬಿಸುವುದು ಬಹಳ ಸೂಕ್ತ, ಈಗ ವರದಾ ನದಿಯಲ್ಲಿ ನೀರು ಬರುತ್ತಿದೆ, ಇಂದಿನಿಂದಲೇ ಕೆರೆ ತುಂಬಿಸುವ ಕಾರ್ಯ ಆರಂಬಿಸಿ, ಕೆರೆಗಳಿಗೆ ನೀರು ತುಂಬಿಸಲು ಅಗತ್ಯ ಸಿದ್ಧತೆಗಳನ್ನು ಮಾಡಿಕೊಳ್ಳಿ ಎಂದು ಸಣ್ಣ ನೀರಾವರಿ ಹಾಗೂ ನೀರಾವರಿ ಇಲಾಖೆ ಅಧಿಕಾರಿಗಳಿಗೆ ಸೂಚಿಸಿದರು.

**ಗ್ರಾ.ಪಂಗಳಿಗೆ ಟ್ಯಾಂಕರ್ ಖರೀದಿಸಿ:** ಪ್ರತಿ ಗ್ರಾ.ಪಂ. ಹಂತ ಹಂತವಾಗಿ ಒಂದು ಟ್ಯಾಂಕರ್ ಖರೀದಿಸಿ, ಇದರಿಂದ ತುಂಬಾ ಅನುಕೂಲವಾಗಲಿದೆ. ಬೆಳಗಾವಿ ಜಿಲ್ಲೆಯಲ್ಲಿ 15ನೇ ಹಣಕಾಸು ಯೋಜನೆಯಲ್ಲಿ ಪ್ರತಿ ಗ್ರಾ.ಪಂ.ನಲ್ಲಿ ಟ್ಯಾಂಕರ್ ಖರೀದಿಸಲಾಗಿದೆ. ಇದರಿಂದ ಸ್ಥಳೀಯವಾಗಿ ಗ್ರಾಮಸ್ಥರಿಗೆ ಅನುಕೂಲವಾಗಲಿದೆ ಎಂದು ತಿಳಿಸಿದರು.

ಜಿಲ್ಲೆಯ ರೈತರಿಗೆ ಸಮಗ್ರ ಬೇಸಾಯ ಪದ್ಧತಿ ಕುರಿತು, ಯೂರಿಯಾ ಬಳಕೆಯಿಂದ ಮಣ್ಣಿನ ಫಲವತ್ತತೆ ಹಾಳಾಗುವ ಕುರಿತು ಜಾಗೃತಿ ಮೂಡಿಸಿ. ಜಿಲ್ಲೆಯ ಪ್ರಗತಿಪರ ರೈತರ ಕುರಿತು ವ್ಯಾಪಕ ಪ್ರಚಾರ ಕೈಗೊಳ್ಳಿ, ಪ್ರಗತಿಪರ ರೈತರನ್ನು ಸನ್ಮಾನಿಸಿ, ಕೃಷಿ ಮೇಳಗಳಿಗೆ ರೈತರನ್ನು ಕರೆದುಕೊಂಡು ಹೋಗಿ. ಕೃಷಿ ಹಾಗೂ ತೋಟಗಾರಿಕೆಯಲ್ಲಿ ತೊಡಗಿಸಿಕೊಳ್ಳಲು ಅರಿವು ಮೂಡಿಸಿ ಎಂದು ಕೃಷಿ ಹಾಗೂ ತೋಟಗಾರಿಕೆ ಇಲಾಖೆ ಅಧಿಕಾರಿಗಳಿಗೆ ಸೂಚಿಸಿದರು.

**ಮಿಸ್ ಮ್ಯಾಚ್ ಆಗದಂತೆ ನೋಡಿಕೊಳ್ಳಿ:** ಬೆಳೆವಿಮೆ ಪರಿಹಾರ ಪ್ರಕರಣಗಳಲ್ಲಿ ಬೆಳೆ ಮಿಸ್ ಮ್ಯಾಚ್‌ನಿಂದ ರೈತರಿಗೆ ಪರಿಹಾರ ವಿಳಂಬವಾಗುತ್ತಿದೆ. ಅದೇ ರೀತಿ ರೈತರು ಬೆಳೆವಿಮೆ ನೋಂದಣಿಗೆ ಪರಿಹಾರ ಕಡಿಮೆ, ಏಜೆಂಟರು ಬೆಳೆವಿಮೆ ನೋಂದಣಿಗೆ ಹೆಚ್ಚಿನ ಪರಿಹಾರ ಕುರಿತು ಎಲ್ಲಕಡೆ ದೂರುಗಳಿವೆ. ಇನ್ನು ಮುಂದೆ ಇಂತಹ ಪ್ರಕರಣಗಳು ಉಂಟಾಗದಂತೆ ಅಧಿಕಾರಿಗಳು ಎಚ್ಚರಿಕೆ ವಹಿಸಬೇಕು. ವಿಬಿ-ಜಿ ರಾಮಜಿ ಜಾಗೃತಿ ಮೂಡಿಸಿ, ಈ ಯೋಜನೆಯ ಉದ್ದೇಶ ಕುರಿತು ಗ್ರಾಮಸ್ಥರಿಗೆ ತಿಳುವಳಿಕೆ ನೀಡುವ ಕೆಲಸವಾಗಬೇಕು. ಗ್ರಾಮ ಪಂಚಾಯತಿ ಆಡಳಿತಾಧಿಕಾರಿಗಳು ಸಭೆ ನಡೆಸಿ ಎಂದು ಸೂಚಿಸಿದರು.



**ಹೊಸ ಬ್ಯಾರೇಜ್‌ಗೆ ಜಾಗ ಗುರುತಿಸಿ**

ನೀರಿನ ಸಮಸ್ಯೆ ಪರಿಹಾರಕ್ಕೆ ಜಿಲ್ಲೆಯಲ್ಲಿ ಹೊಸ ಬ್ಯಾರೇಜ್ ನಿರ್ಮಾಣಕ್ಕೆ ಎಲ್ಲೆಲ್ಲಿ ಅವಕಾಶವಿದೆ ಎಂದು ಪಟ್ಟಿ ಮಾಡಿ ಜಿಲ್ಲಾಧಿಕಾರಿಗಳಿಗೆ ನೀಡಿ ಎಂದು ಅಧಿಕಾರಿಗಳಿಗೆ ಸಚಿವ ಸತೀಶ ಜಾರಕಿಹೊಳಿ ಸೂಚಿಸಿದರು.

ಶಾಸಕರು ಹಾಗೂ ವಿಧಾನಸಭೆ ಸಭಾಧ್ಯಕ್ಷ ರುದ್ರಪ್ಪ ಲಮಾಣಿ, ಶಾಸಕರಾದ ಬಸವರಾಜ ಶಿವಣ್ಣನವರ, ಶ್ರೀನಿವಾಸ ಮಾನೆ, ಯು.ಬಿ. ಬಣಕಾರ, ಪ್ರಕಾಶ ಕೋಳಿವಾಡ, ಯಾಸೀರ್‌ಖಾನ್ ಪಠಾಣ ಮಾತನಾಡಿ, ಜಿಲ್ಲೆಯ ವಿವಿಧ ಸಮಸ್ಯೆಗಳ ಜತೆಗೆ ಜಿಲ್ಲೆಗೆ ಶಾಶ್ವತ ನೀರಾವರಿ ಯೋಜನೆ ಮಂಜೂರು ಮಾಡುವಂತೆ ಮನವಿ ಮಾಡಿದರು.

ಜಿಲ್ಲಾಧಿಕಾರಿ ಡಾ.ವಿಜಯಮಹಾಂತೇಶ ದಾನಮ್ಮನವರ ಮಾತನಾಡಿ, ಜಿಲ್ಲೆಯಲ್ಲಿ ಪೂರ್ವ ಮುಂಗಾರು ಮಾರ್ಚ್ 1 ರಿಂದ ಮೇ 31ರವರೆಗೆ ವಾಡಿಕೆ ಮಳೆ 119.90 ಮಿ.ಮಿ.ಗೆ 150.50 ಮಿಮಿ ಮಳೆಯಾಗಿದ್ದು, 25.52 ಮಿ.ಮೀ. ಕಡಿಮೆ ಮಳೆಯಾಗಿದೆ. ಜಿಲ್ಲೆಯ 2,182 ಕೆರೆಗಳ ಪೈಕಿ 140 ಕೆರೆಗಳು ಖಾಲಿ ಇದ್ದು, 1,235 ಕೆರೆಗಳು ಶೇ.30, 390 ಕೆರೆಗಳು ಶೇ.50, 414 ಕೆರೆಗಳು ಶೇ.60ಕ್ಕಿಂತ ಭರ್ತಿಯಾಗಿದ್ದು, ಎರಡು ಕೆರೆಗಳು ಮಾತ್ರ ಪೂರ್ಣ ಪ್ರಮಾಣದಲ್ಲಿ ಭರ್ತಿಯಾಗಿದೆ ಎಂದು ಮಾಹಿತಿ ನೀಡಿದರು.

ಜಿಲ್ಲೆಯ ತುರ್ತು ಕುಡಿಯುವ ನೀರಿನ ಯೋಜನೆ ಕಾಮಗಾರಿ ಕೈಗೊಳ್ಳಲು ಪ್ರಸಕ್ತ 2026-27ನೇ ಸಾಲಿನಲ್ಲಿ ಸರ್ಕಾರದಿಂದ ರೂ.4ಕೋಟಿ ಅನುಮೋದನೆಯಾಗಿದೆ. ದ್ವಿತೀಯ ಹಂತದಲ್ಲಿ ರೂ.2.50 ಕೋಟಿಯಲ್ಲಿ 128 ಕಾಮಗಾರಿಗಳು ಮಂಜೂರಾಗಿದ್ದು, 99 ಕಾಮಗಾರಿಗಳು ಮುಕ್ತಾಯಗೊಂಡು, 29 ಕಾಮಗಾರಿಗಳು ಬಾಕಿ ಇವೆ ಎಂದರು. ಸಭೆಯಲ್ಲಿ ಹೆಸ್ಕಾಂ ಅಧ್ಯಕ್ಷ ಅಜೀಮ್‌ಪೀರ್ ಖಾದ್ರಿ, ಜಿಪಂ ಸಿಇಒ ದಲ್ಜಿತ್‌ಕುಮಾರ, ಎಸ್ಪಿ ಯಶೋಧಾ ವಂಟಗೋಡಿ, ಎಡಿಸಿ ಡಾ.ನಾಗರಾಜ, ಕೃಷಿ ಜೆಡಿ ಡಾ.ಮಲ್ಲಿಕಾರ್ಜುನ ಉಪಸ್ಥಿತರಿದ್ದರು.

## 'ಸ್ವಾತಂತ್ರ್ಯದ ಓಟ' ನಾಟಕ ಪ್ರದರ್ಶನ

**ಹಾನಗಲ್ಲ:** ವೈಚಾರಿಕ ಕ್ರಾಂತಿಗೆ ಮುನ್ನುಡಿ ಬರೆದ ಬೋಳುವಾರು ಮಹಮ್ಮದ್ ಕುಂಯಿ ಅವರ 'ಸ್ವಾತಂತ್ರ್ಯದ ಓಟ' ನಾಟಕ ಮಾನವ ಮೌಲ್ಯಾಧಾರಿತವಾಗಿರಬೇಕೇ ಹೊರತು ಜಾತಿ ಧರ್ಮದ ಹೆಸರಿನಲ್ಲಿ ಮನುಷ್ಯತ್ವವನ್ನು ಕಡೆಗಣಿಸಬಾರದು ಎಂಬ ಸಂದೇಶ ಸಾರುತ್ತದೆ ಎಂದು ಆನವಟ್ಟಿಯ ನಿವೃತ್ತ ಉಪನ್ಯಾಸಕ ಉಮೇಶ ಬಿಚ್ಚುಗತ್ತಿ ತಿಳಿಸಿದರು.

ರಂಗ ಗ್ರಾಮ ಹಾನಗಲ್ಲ ತಾಲೂಕಿನ ಶೇಷಗಿರಿ ಸಿ.ಎಂ.ಉದಾಸಿ ಕಲಾಕ್ಷೇತ್ರದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಶೇಷಗಿರಿ ಕಲಾ ತಂಡ ಸಂಯುಕ್ತವಾಗಿ ಆಯೋಜಿಸಿದ ಬೋಳುವಾರು ಮಹಮ್ಮದ್ ಕುಂಯಿ ಅವರ ಸ್ವಾತಂತ್ರ್ಯದ ಓಟ ನಾಟಕ ಪ್ರದರ್ಶನ ಉದ್ಘಾಟಿಸಿ ಮಾತನಾಡಿದರು.

ಮುಖ್ಯ ಅತಿಥಿಯಾಗಿ ಮಾತನಾಡಿದ ಶಿಕ್ಷಕ ಸಂತೋಷ ಬಿದರಗಡ್ಡಿ, ಬದುಕು ಕಟ್ಟಿಕೊಳ್ಳುವ ಕಾಲ ಇದಾಗಿದೆ. ಶೇಷಗಿರಿ ಸಾಹಿತ್ಯ ಸಂಸ್ಕೃತಿ ಸಾಮಾಜಿಕ ಬದುಕಿನ ಎಲ್ಲ ಮಜಲುಗಳಲ್ಲಿ ನಾಟಕ ಪ್ರದರ್ಶನದ ಮೂಲಕ ಹೆಸರು ಮಾಡಿದೆ. ಇಡೀ ರಾಜ್ಯದ ಬಹುತೇಕ ಹಿರಿಕಿರಿಯ ಕಲಾವಿದರು ಈ ರಂಗ ಮಂದಿರದ ಪ್ರೀತಿ ವಿಶ್ವಾಸದಲ್ಲಿದ್ದಾರೆ. ಶೇಷಗಿರಿ ಒಂದು ಸಮಾಜಮುಖಿ ರಂಗ ಕೇಂದ್ರ ಎಂದರು.

ಶೇಷಗಿರಿ ವ್ಯವಸಾಯ ಸೇವಾ ಸಹಕಾರಿ ಬ್ಯಾಂಕ ಅಧ್ಯಕ್ಷ ಜಗದೀಶ ಹಂಚಿನಮನಿ ಅಧ್ಯಕ್ಷತೆವಹಿಸಿದ್ದರು. ಸನ್ಮತಿ ಸಹಕಾರಿ ಬ್ಯಾಂಕ್ ನಿರ್ದೇಶಕ ಗಿರೀಶ ದೇಶಪಾಂಡೆ ಕಲಾವಿದ ತಂಡದ ನಾಯಕ ಮಂಜು ಹಿರೇಮಠ ಅತಿಥಿಗಳಾಗಿದ್ದರು. ಗಜಾನನ ಯುವಕ ಮಂಡಳದ ಅಧ್ಯಕ್ಷ ಪ್ರಭು ಗುರಪ್ಪನವರ ವೇದಿಕೆಯಲ್ಲಿದ್ದರು.

ನಾಟಕ ಪ್ರದರ್ಶನದ ಸಂವಾದದಲ್ಲಿ ರಂಗಾಸಕ್ತರಾದ ಎಸ್.ಎಸ್. ಮೂರುಮಟ್ಟಿ, ಮಾರುತಿ ಶಿಡ್ಲಾಪೂರ, ಶೇಖರ ಭಜಂತ್ರಿ, ಮಂಜುನಾಥ, ವಸಂತ ಚಿಕ್ಕಣ್ಣನವರ, ಅಶೋಕ ತತ್ತೂರ, ಆರ್.ಎಚ್.ಓಲೇಕಾರ, ಎನ್.ಐ.ಕೋಮಾರ, ಗದಿಗೆಪ್ಪ ಕೋಟಿ, ಜೆ.ಎಸ್.ಮುಚ್ಚಂಡಿ, ನಾಗರಾಜ ಅಡಿಗ ಪಾಲ್ಗೊಂಡಿದ್ದರು.

ಅಮೀರ ಪಠಾಣ ಸ್ವಾಗತಿಸಿದರು. ಸೋಮು ಗುರಪ್ಪನವರ ಕಾರ್ಯಕ್ರಮ ನಿರೂಪಿಸಿದರು. ನಾಗರಾಜ ಧಾರೇಶ್ವರ ವಂದಿಸಿದರು.



## ಅಕ್ಷರಾಭ್ಯಾಸ ಪ್ರಾರಂಭೋತ್ಸವಕ್ಕೆ ಚಾಲನೆ

**ರಾಣೇಬೆನ್ನೂರ:** ಸರ್ಕಾರ ಖಾಸಗಿ ಶಾಲೆಗಳ ಪ್ರಾರಂಭಕ್ಕಾಗಿ ಅನುಮತಿ ನೀಡುತ್ತಿಲ್ಲ. ಸರ್ಕಾರ ವಿಧಿಸಿರುವ ಎಲ್ಲಾ ನಿಯಮಗಳಿಗೆ ಬದ್ಧವಾಗಿ ಪರವಾನಗಿ ಪಡೆದಿರುವ ಶಾಸ್ತಾ ಪಬ್ಲಿಕ್ ಶಾಲೆ ಗ್ರಾಮಾಂತರ ಪ್ರದೇಶದ ಮಕ್ಕಳಿಗೆ ಉತ್ತಮ ಗುಣಮಟ್ಟದ ಶಿಕ್ಷಣ ನೀಡಲು ಮುಂದಾಗಬೇಕೆಂದು ಕ್ಷೇತ್ರ ಶಿಕ್ಷಣಾಧಿಕಾರಿ ಶಾಮಸುಂದರ ಅಡಿಗ ಹೇಳಿದರು.

ತಾಲೂಕಿನ ಮಾಕನೂರ ಕ್ರಾಸ್ ಸಮೀಪ ವಡೇರಾಯನಹಳ್ಳಿ ರಸ್ತೆಯ ಪಕ್ಕದಲ್ಲಿ ನೂತನವಾಗಿ ಆರಂಭಿಸಿರುವ ಶಾಸ್ತಾ ಪಬ್ಲಿಕ್ ಶಾಲೆಯ ಮಕ್ಕಳಿಗೆ ಅಕ್ಷರಾಭ್ಯಾಸ ಪ್ರಾರಂಭೋತ್ಸವ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಹರಿಹರ ತಾಲೂಕಿನ ವಿನಾಯಕ ನಗರ ಕ್ಯಾಂಪನ್ ಕಾಲಜ್ಞಾನ ಮಠದ ಸಿದ್ದಲಿಂಗ ಶಿವಾಚಾರ್ಯ ಮಹಾಸ್ವಾಮಿಗಳು ಶಾಸ್ತಾ ವಿದ್ಯಾಪೀಠ್ ಟ್ರಸ್ಟ್‌ನಿಂದ ನೂತನವಾಗಿ ಆರಂಭಿಸಿರುವ, ಶಾಸ್ತಾ ಪಬ್ಲಿಕ್ ಶಾಲೆಯು ಉತ್ತಮ ಗುಣನಟ್ಟದ ಶಿಕ್ಷಣವನ್ನು ನೀಡುವುದರ ಜೊತೆಗೆ ರಾಜ್ಯದಲ್ಲಿ ಮಾದರಿ ಶಾಲೆಯಾಗಿ ಹೊರಹೊಮ್ಮಲಿ ಎಂದರು.

ಪುಟಾಣಿ ಮಕ್ಕಳಿಗೆ ಸಾಂಪ್ರದಾಯ ಬದ್ಧವಾಗಿ ಅಕ್ಷರಭ್ಯಾಸ ನೆರವೇರಿಸಲಾಯಿತು. ಬಳಿಕ ನಡೆದ ಪೋಷಕರ ಸಭೆಯಲ್ಲಿ ಶಾಲೆಯ ಶೈಕ್ಷಣಿಕ ಯೋಜನೆಗಳು, ಬೋಧನಾ ವಿಧಾನಗಳು ಹಾಗೂ ವಿದ್ಯಾರ್ಥಿಗಳ ಸರ್ವತೋಮುಖ ಅಭಿವೃದ್ಧಿಗೆ ಕೈಗೊಳ್ಳಲಿರುವ ಕಾರ್ಯಕ್ರಮಗಳ ಕುರಿತು ಶಾಲೆಯ ಆಡಳಿತ ಮಂಡಳಿಯಿಂದ ಮಾಹಿತಿ ನೀಡಲಾಯಿತು.

ಮಾಜಿ ಶಾಸಕ ಅರುಣಕುಮಾರ ಪೂಜಾರ, ಜಿಪಂ ಮಾಜಿ ಸದಸ್ಯ ಸಂತೋಷಕುಮಾರ ಪಾಟೀಲ, ಕ್ಷೇತ್ರ ಸಮನ್ವಯಾಧಿಕಾರಿ ಮಂಜುನಾಯ್ಕ ಎಲ್, ಶಿಕ್ಷಕ ಸಂತೋಷ ದೊಡ್ಮನಿ, ಸಿ.ಆರ್.ಸಿ ಎನ್.ಎನ್ ಅಣ್ಣೇರ ಮಾತನಾಡಿದರು.

ಶಾಸ್ತ ವಿದ್ಯಾ ಟ್ರಸ್ಟ್ ಕಾರ್ಯದರ್ಶಿ ನಾಗರತ್ನಾ ಸಂತೋಷ ದೊಡ್ಮನಿ ಸ್ವಾಗತಿಸಿದರು, ಎಸ್.ಎಸ್ ನಾರಾಯಣ ಹೃದಯಾಲಯ ಆಸ್ಪತ್ರೆಯ ಪ್ರಸನ್ನಾ, ಸಿ.ರಾಜು ಉಕ್ಕುಂದ, ಶಾಸ್ತಾ ಪಬ್ಲಿಕ್ ಶಾಲೆಯ ಗೌರವಾಧ್ಯಕ್ಷ ನಾಗರಾಜ ಕುಣಿಗಲ್, ಉಪಾಧ್ಯಕ್ಷ ಶಿವಮ್ಮ ನಾಗರಾಜ ಕುಣಿಗಲ್ ,ಬೀರಪ್ಪ ಎಸ್ ಕಣಿವೆಪ್ಪನವರ, ನಾಗರತ್ನಾ ಎಸ್ ದೊಡ್ಮನಿ, ಬಸವರಾಜ ಕುಣಿಗಲ್, ರಾಘವೇಂದ್ರ ಘೋರ್ಪಡೆ, ಪುಟ್ಟಪ್ಪ ಮೇಶಿನ್, ಸಿದ್ದೇಶ್ವರ ಕೆ.ಎಂ, ಹನುಮಂತಪ್ಪ ಕೋಡೇರ, ಉಮೇಶ್ ಹೊನ್ನಪ್ಪನವರ, ದುರುಗೇಶ ಮದರಂಗಿ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.



## ಅಂಗೂರ ಮನೆಗೆ ಸಚಿವ ಜಾರಕಿಹೊಳಿ ಭೇಟಿ



**ಹಾವೇರಿ:** ಲೋಕೋಪಯೋಗಿ ಸಚಿವರಾದ ಸತೀಶ ಜಾರಕಿಹೊಳಿ ಅವರು ಶುಕ್ರವಾರ ಸಂಜೆ ನಗರದ ಹಿರಿಯ ಪತ್ರಕರ್ತ ಮಾಲತೇಶ ಅಂಗೂರ ಅವರ ಮನೆಗೆ ಭೇಟಿ ಕೊಟ್ಟು ಅಂಗೂರ ಅವರ ಆರೋಗ್ಯ ವಿಚಾರಿಸಿದರು.

ಈ ಸಂದರ್ಭದಲ್ಲಿ ಅವರು ಹಿರಿಯ ಪತ್ರಕರ್ತ, ಸಾಹಿತಿ ಮಾಲತೇಶ ಅವರು ಕಾಲು ಕಳೆದುಕೊಂಡು ಅನಾರೋಗ್ಯಕ್ಕೆ ಒಳಗಾಗಿರುವುದು ಬಹಳ ನೋವಿನ ಸಂಗತಿ. ಸರ್ಕಾರದ ನೆರವು ದೊರಕಿಸುವ ಭರವಸೆ ನೀಡಿದರು. ನಿಮ್ಮೊಂದಿಗೆ ನಾವು ಇರುವುದಾಗಿ ಭರವಸೆ ನೀಡಿದರು.

ಸಚಿವರ ಜೊತೆ ಶಾಸಕ ಯಾಸೀರ್‌ಖಾನ್ ಪಠಾಣ, ಜಿಲ್ಲಾ ಕಾಂಗ್ರೆಸ್ ವಕ್ತಾರ ಡಾ.ಸಂಜಯ ಡಾಂಗೆ, ಮಂಜುನಾಥ ಮನ್ನಂಗಿ, ಮಲ್ಲಿಕಾರ್ಜುನ ಬೂದಗಟ್ಟಿ, ಬಸವರಾಜ ತಳವಾರ, ಮನೋಹರ ಹಾದಿಮನಿ, ಉಮೇಶ್ ತಳವಾರ ಸೇರಿದಂತೆ ಅನೇಕ ಹಾಜರಿದ್ದರು.

## ಗಾಯಾಳುಗಳ ಮನೆಗೆ ಬೊಮ್ಮಾಯಿ ಭೇಟಿ

**ಹಾನಗಲ್ಲ:** ತಾಲೂಕಿನ ನರೇಗಲ್ ಗ್ರಾಮದಲ್ಲಿ ಕಾರ ಹುಣ್ಣಿಮೆ ನಿಮಿತ್ತ ಹೋರಿ ಬೆದರಿಸುವ ವೇಳೆ ಎರಡು ಸಮುದಾಯಗಳ ನಡುವೆ ನಡೆದ ಗಲಭೆಯಲ್ಲಿ ಹಿಂದೂ ಯುವಕರ ಮೇಲೆ ಅನ್ಯ ಕೋಮಿನ ಕೆಲವರು ಕುಡಗೋಲಿನಿಂದ ಹಲ್ಲೆ ನಡೆಸಿರುವ ಹಿನ್ನೆಲೆ ಶುಕ್ರವಾರ ಮಾಜಿ ಮುಖ್ಯಮಂತ್ರಿ ಹಾಗೂ ಹಾವೇರಿ - ಗದಗ ಲೋಕಸಭಾ ಕ್ಷೇತ್ರದ ಸಂಸದ ಬಸವರಾಜ ಬೊಮ್ಮಾಯಿಯವರು ಹಲ್ಲೆಗೆ ಒಳಗಾದ ಗಾಯಾಳುಗಳ ಮನೆಗೆ ಭೇಟಿ ನೀಡಿ ಕುಟುಂಬದ ಸದಸ್ಯರಿಗೆ ಧೈರ್ಯ ತುಂಬಿದರು.

ಈ ಸಂದರ್ಭದಲ್ಲಿ ಮಾಜಿ ಶಾಸಕರುಗಳಾದ ಶಿವರಾಜ ಸಜ್ಜನ, ವೀರುಪಾಕ್ಷಪ್ಪ ಬಳ್ಳಾರಿ, ಸೇರಿದಂತೆ ಗ್ರಾಮದ ಮುಖಂಡರು ಹಾಗೂ ಪಕ್ಷದ ಪ್ರಮುಖರು ಉಪಸ್ಥಿತರಿದ್ದರು.




## ನೇಣು ಬಿಗಿದುಕೊಂಡು ವ್ಯಕ್ತಿ ಆತ್ಮಹತ್ಯೆ

**ಹಾವೇರಿ:** ಅನಾರೋಗ್ಯ ಹಾಗೂ ಕೋರ್ಟ್ ಕೇಸ್ ಮುಗಿಯದೆ ಇದ್ದುದ್ದರಿಂದ ಮನಸ್ಸಿಗೆ ಬೇಜಾರು ಮಾಡಿಕೊಂಡ ವ್ಯಕ್ತಿಯೊಬ್ಬರು ಮನೆಯಲ್ಲಿ ನೇಣು ಬಿಗಿದುಕೊಂಡು ಆತ್ಮಹತ್ಯೆಗೆ ಶರಣಾಗಿರುವ ಘಟನೆ ರಟ್ಟೀಹಳ್ಳಿ ಪಟ್ಟಣದ ಪ್ರಶಾಂತನಗರದಲ್ಲಿ ನಡೆದಿದೆ. ಶಿವಮೊಗ್ಗ ಜಿಲ್ಲೆ ಶಿಕಾರಿಪುರ ಮೂಲದ ನಿವಾಸಿ ರಾಕೇಶ ರವೀಂದ್ರ ಎಸ್.ಆರ್. ಘೋರ್ಪಡೆ (31) ಮೃತಪಟ್ಟ ವ್ಯಕ್ತಿಯಾಗಿದ್ದಾರೆ. ಮೃತರು ರಟ್ಟಿಹಳ್ಳಿಯ ಪ್ರಶಾಂತ ನಗರದಲ್ಲಿ ಬಾಡಿಗೆ ಮನೆಯೊಂದರಲ್ಲಿ ವಾಸವಿದ್ದರು. ಮೃತ ರಾಕೇಶ ಪೀಡ್ಸ್ ಕಾಯಿಲೆಯಿಂದ ಬಳಲುತ್ತಿದ್ದು, ಎಷ್ಟೇ ಆಸ್ಪತ್ರೆಗೆ ತೋರಿಸಿದರೂ ಗುಣಮುಖರಾಗಿರಲಿಲ್ಲ. ಜತೆಗೆ ಶಿಕಾರಿಪುರದಲ್ಲಿ ಮದ್ಯ ಮಾರಾಟ ಮಾಡುತ್ತಿದ್ದ ಆರೋಪದಡಿ ಕೇಸ್ ದಾಖಲಾಗಿದ್ದು, ಕೋರ್ಟ್‌ಗೆ ಅಲೆದಾಡಿ ಸುಸ್ತಾಗಿದ್ದರು. ಈ ಎರಡು ಮುಖ್ಯ ಕಾರಣಗಳಿಂದ ಮನಸ್ಸಿಗೆ ಬೇಜಾರ ಮಾಡಿಕೊಂಡು ಮನೆಯಲ್ಲಿ ಯಾರೂ ಇಲ್ಲದಿರುವಾಗ ತನ್ನಷ್ಟಕ್ಕೆ ತಾನೇ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಮೃತರ ಪತ್ನಿ ಪವಿತ್ರಾ ಘೋರ್ಪಡೆ ಪೊಲೀಸರಿಗೆ ನೀಡಿದ ದೂರಿನಲ್ಲಿ ತಿಳಿಸಿದ್ದಾರೆ. ರಟ್ಟಿಹಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ದೇಶದ ಹಿತರಕ್ಷಣೆ, ಸಮಗ್ರತೆಗೆ ಬಿಜೆಪಿ ಹೋರಾಟ: ಸಂಸದ ಬೊಮ್ಮಾಯಿ

**ಹಾವೇರಿ:** ಬಿಜೆಪಿ ಪಕ್ಷವು ವಿಶ್ವದಲ್ಲಿಯೇ ಅತಿ ದೊಡ್ಡ ರಾಜಕೀಯ ಪಕ್ಷವಾಗಿ ಹೊರಹೊಮ್ಮಿದೆ. ದೇಶದ ಹಿತರಕ್ಷಣೆಗೆ ಹಾಗೂ ಸಮಗ್ರತೆಗೆ ಬಿಜೆಪಿ ಅವಿರತವಾಗಿ ಹೋರಾಟ ಮಾಡುತ್ತಿದೆ ಎಂದು ಸಂಸದ ಬಸವರಾಜ ಬೊಮ್ಮಾಯಿ ಹೇಳಿದರು.




ನಗರದ ಬಿಜೆಪಿ ಕಚೇರಿಯಲ್ಲಿ ಶುಕ್ರವಾರ ಜಿಲ್ಲಾ ಬಿಜೆಪಿಯಿಂದ ಹಮ್ಮಿಕೊಂಡಿದ್ದ ಡಾ.ಶ್ಯಾಮಪ್ರಸಾದ ಮುಖರ್ಜಿಯವರ 125ನೇ ಜನ್ಮ ದಿನೋತ್ಸವ ಹಾಗೂ ಎಸ್‌ಐಆರ್ ಕುರಿತು ಜಾಗೃತಿ ಸಮ್ಮೇಳನದಲ್ಲಿ ಭಾಗವಹಿಸಿ ಅವರು ಮಾತನಾಡಿ, 1951ರಲ್ಲಿ ಶ್ಯಾಮಪ್ರಸಾದ್ ಮುಖರ್ಜಿಯವರು ಜನಸಂಘ ಸ್ಥಾಪಿಸಿ ದೇಶಕ್ಕಾಗಿ ತನ್ನ ಜೀವನವನ್ನೇ ತ್ಯಾಗ ಮಾಡಿರುವಂತಹ ಶ್ರೇಷ್ಠ ನಾಯಕರು. ಅವರು ಭಾರತದ ಭವಿಷ್ಯವನ್ನು ಗ'ಮ'ನ'ದ'ಲ್ಲಿಟ್ಟುಕೊಂಡು ಉದಾತ್ತ ಧ್ಯೇಯಗಳನ್ನು ಪಕ್ಷದ ಕಾರ್ಯಕರ್ತರಲ್ಲಿ ಮೂಡಿಸಿದರು. ನಾವೆಲ್ಲರೂ ಇಂದು ಸಮಗ್ರ ಹಾಗೂ ಸುಂದರವಾದ ಭಾರತದಲ್ಲಿ ನಿರ್ಭಯವಾಗಿ ಜೀವಿಸುತ್ತಿದ್ದೇವೆ ಎಂದರೆ ಡಾ. ಶ್ಯಾಮಪ್ರಸಾದ ಮುಖರ್ಜಿರವರ ಉದಾತ್ತ ಆದರ್ಶಗಳೆ ಪ್ರಮುಖ ಕಾರಣ ಎಂದರು.

ಎಸ್‌ಐಆರ್ ಪ್ರಕ್ರಿಯೆ ಕುರಿತು ಮಾತನಾಡಿದ ಅವರು, 2002ರ ಪೂರ್ವದಲ್ಲಿ 7ಭಾರಿ ಮತದಾರರ ಪರಿಷ್ಕರಣೆ ಜರುಗಿದೆ. ಕಾಂಗ್ರೇಸ್ ಪಕ್ಷ ಅನಗತ್ಯವಾಗಿ ಎಸ್‌ಐಆರ್ ಕುರಿತು ಜನರಲ್ಲಿ ತಪ್ಪು ಅಭಿಪ್ರಾಯ ಮೂಡಿಸುತ್ತಿದೆ. ನಮ್ಮ ಪಕ್ಷದ ಎಲ್ಲ ಕಾರ್ಯಕರ್ತರು ಕಡ್ಡಾಯವಾಗಿ ಎಸ್‌ಐಆರ್ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳಬೇಕು ಹಾಗೂ ಅಗತ್ಯ ದಾಖಲೆಗಳನ್ನು ಬಿಎಲ್‌ಓಗಳಿಗೆ ನೀಡಿ ಸಹಕರಿಸಬೇಕು ಎಂದರು.

ಮುಖ್ಯ ವಕ್ತಾರರಾಗಿ ಭಾಗವಹಿಸಿದ್ದ ಗದಗ ಜಿಲ್ಲಾ ಕೋಶಾಧ್ಯಕ್ಷ ನಾಗರಾಜ ಕುಲಕರ್ಣಿ ಮಾತನಾಡಿ, ಡಾ. ಶ್ಯಾಮಪ್ರಸಾದ ಮುಖರ್ಜಿರವರು ಪಕ್ಷದ ಸಂಸ್ಥಾಪಕ ಅಧ್ಯಕ್ಷರಾಗಿ ಪಕ್ಷವನ್ನು ಹುಟ್ಟಿಹಾಕಿ ದೇಶದಲ್ಲಿ ಒಂದೆ ಕಾನೂನು ಇರಬೇಕು, ಒಂದೇ ಧ್ವಜ ಇರಬೇಕು, ಒಂದೇ ಸಂವಿಧಾನ ಇರಬೇಕು ಹಾಗೂ ಭಾರತ ಸಮಗ್ರವಾಗಿರಬೇಕೆಂದು ಚಿಂತನೆ ಮಾಡಿ ದೇಶಾದ್ಯಂತ ಜನಾಂದೋಲನ ರೂಪಿಸಿದರು ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ವೇದಿಕೆಯಲ್ಲಿ ಮುಖಂಡ ಭೋಜರಾಜ ಕರೂದಿ, ಜಿಲ್ಲಾಧ್ಯಕ್ಷ ವಿರುಪಾಕ್ಷಪ್ಪ ಬಳ್ಳಾರಿ, ಮಾಜಿ ಶಾಸಕರಾದ ಶಿವರಾಜ ಸಜ್ಜನರ, ಅರುಣಕುಮಾರ ಪೂಜಾರ, ಮುಖಂಡರಾದ ಗವಿಸಿದ್ದಪ್ಪ ದ್ಯಾಮಣ್ಣವರ, ಸಿದ್ದರಾಜಕಲಕೋಟಿ, ಶೋಭಾ ನಿಸ್ಸೀಮಗೌಡ್ರ, ನೀಲಪ್ಪ ಚಾವಡಿ, ಸಂತೋಷ ಆಲದಕಟ್ಟಿ, ಸಿದ್ದಪ್ಪ ಚಿಕ್ಕಬಿದರಿ, ನಂಜುಂಡೇಶ ಕಳ್ಳೇರ, ಶಿವಲಿಂಗಪ್ಪ ತಲ್ಲೂರು, ಪ್ರಕಾಶಗೌಡ ಪಾಟೀಲ, ಶಿವಾನಂದ ಮ್ಯಾಗೇರಿ ಸೇರಿದಂತೆ ಪಕ್ಷದ ಮುಖಂಡರು, ಕಾರ್ಯಕರ್ತರು, ವಿವಿಧ ಮಂಡಲದ ಪದಾಧಿಕಾರಿಗಳು, ಪಾಲ್ಗೊಂಡಿದ್ದರು.

## ಅರ್ಹ ಮತದಾರರು ಮತದಾನದ ಹಕ್ಕು ಕಳೆದುಕೊಳ್ಳಬೇಡಿ: ಶಾಸಕ

**ಬ್ಯಾಡಗಿ:** ಅರ್ಹ ಮತದಾರರು ಯಾವುದೇ ಕಾರಣಕ್ಕೂ ಮತದಾನದ ಹಕ್ಕಿನಿಂದ ವಂಚಿತರಾಗದಂತೆ ಎಸ್‌ಐಆರ್ ಪ್ರಕ್ರಿಯೆ ಕುರಿತು ಮನೆಮನೆಗೆ ತೆರಳಿ ಸ್ಪಷ್ಟ ಹಾಗೂ ಮನಮುಟ್ಟುವ ರೀತಿಯಲ್ಲಿ ಮಾಹಿತಿ ನೀಡಬೇಕು ಎಂದು ಶಾಸಕ ಬಸವರಾಜ ಶಿವಣ್ಣನವರ ಸಲಹೆ ನೀಡಿದರು.

ಅವರು ಪಟ್ಟಣದ ಕಾಂಗ್ರೆಸ್ ಪಕ್ಷದ ಸಭಾಭವನದಲ್ಲಿ ಎಸ್‌ಐಆರ್ ಪ್ರಕ್ರಿಯೆಯಲ್ಲಿ ಭಾಗವಹಿಸುವ ಬಿಎಲ್‌ಎ-2 ಹಾಗೂ ಪಕ್ಷದ ಪದಾಧಿಕಾರಿಗಳೊಂದಿಗೆ ನಡೆದ ಜಾಗೃತಿ ಸಭೆ ಉದ್ಘಾಟಿಸಿ ಮಾತನಾಡಿ ಅಗತ್ಯ ಸೂಚನೆಗಳನ್ನು ನೀಡಿದರು. ಮತದಾರರ ಪಟ್ಟಿಯಲ್ಲಿರುವ ಅರ್ಹರ ಹೆಸರುಗಳು ಯಾವುದೇ ಕಾರಣಕ್ಕೂ ಅಳಿಸಿಹೋಗದಂತೆ ವಿಶೇಷ ಕಾಳಜಿ ವಹಿಸಬೇಕು. ಪಕ್ಷದ ಬೆಂಬಲಿಗರು ಹಾಗೂ ಪ್ರಮುಖ ಮತದಾರರ ಹೆಸರುಗಳು ಅದೇ ಮತಗಟ್ಟೆಯಲ್ಲಿ ಯಥಾಸ್ಥಿತಿಯಲ್ಲಿ ಉಳಿಯುವಂತೆ ನಿರಂತರವಾಗಿ ಪರಿಶೀಲನೆ ನಡೆಸಿ ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ತಿಳಿಸಿದರು.

ಎಸ್‌ಐಆರ್ ಪ್ರಕ್ರಿಯೆ ವೇಳೆ ಪ್ರತಿಯೊಬ್ಬ ಮತದಾರನಿಗೂ ಅಗತ್ಯ ದಾಖಲೆಗಳು, ಪರಿಶೀಲನಾ ವಿಧಾನ ಹಾಗೂ ಹೆಸರು ಪಟ್ಟಿಯಲ್ಲಿ ಉಳಿಸಿಕೊಳ್ಳುವ ಬಗ್ಗೆ ಸಮಗ್ರ ಮಾಹಿತಿ ನೀಡಿ ಜಾಗೃತಿ ಮೂಡಿಸುವಂತೆ ಅವರು ಬಿಎಲ್‌ಎ-2 ಅವರಿಗೆ ಹಾಗೂ ಕಾರ್ಯಕರ್ತರಿಗೆ ಸೂಚಿಸಿದರು.

ಮತದಾನದ ಹಕ್ಕು, ಬದುಕಿನ ಹಕ್ಕು; ಅದನ್ನು ಉಳಿಸಿಕೊಂಡರೆ ಸರ್ಕಾರಿ ಸೌಲಭ್ಯ ಪಡೆಯೋದು ಕಷ್ಟವಾಗಲಿದೆ.

ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ ಆರಂಭವಾಗಿದ್ದು, ಬಿಎಲ್‌ಎ-2 ಗಳು ತಮಗೆ ಸಂಬಂಧಿಸಿದ ವಾರ್ಡುಗಳಲ್ಲಿ ಯಾವುದೇ ಮತದಾರರ ಹೆಸರು ತಪ್ಪದಂತೆ ನೋಡಿಕೊಳ್ಳಬೇಕು. ಮುಂದಿನ ದಿನಗಳಲ್ಲಿ ಮತದಾನದ ಹಕ್ಕು ಉಳಿಸಿಕೊಳ್ಳದಿದ್ದರೆ ಗ್ಯಾರಂಟಿ ಯೋಜನೆಗಳು ಸೇರಿದಂತೆ ಪಿಂಚಣಿ ಹಾಗೂ ರಾಜ್ಯ ಸರ್ಕಾರದ ಇತರೆ ಯೋಜನೆಗಳನ್ನು ಪಡೆಯಲು ತೊಂದರೆ ಆಗಲಿದೆ ಎಂದರು.

ಈ ಸಂದರ್ಭದಲ್ಲಿ ತಾಲೂಕಾ ಕಾಂಗ್ರೆಸ್ ಪಕ್ಷದ ಅಧ್ಯಕ್ಷರುಗಳಾದ ದಾನಪ್ಪ ಚೂರಿ, ಶಿವನಗೌಡ ವೀರನಗೌಡ, ಪ್ರಧಾನ ಕಾರ್ಯದರ್ಶಿ ರಮೇಶ್ ಸುತ್ತಕೋಟಿ, ಕಾರ್ಯದರ್ಶಿ ಮಾರುತಿ ಅಚ್ಚಿಗೇರಿ, ಬಸವರಾಜ ಸವಣೂರ, ಸುರೇಶಗೌಡ ಪಾಟೀಲ, ಶಂಭನಗೌಡ ಪಾಟೀಲ ಸೇರಿದಂತೆ ಇತರರಿದ್ದರು.



▸▸ ಎಸ್‌ಐಆರ್ ಪ್ರಕ್ರಿಯೆಯಲ್ಲಿ ಭಾಗವಹಿಸುವ ಬಿಎಲ್ ಎ-2 ಹಾಗೂ ಪಕ್ಷದ ಪದಾಧಿಕಾರಿಗಳೊಂದಿಗೆ ನಡೆದ ಜಾಗೃತಿ ಸಭೆ ಉದ್ಘಾಟನೆ

## ಕಿರುಸುದ್ದಿ

### ಇಂದು ಸಾಧಕರೊಂದಿಗೆ ಸಂವಾದ ಕಾರ್ಯಕ್ರಮ

• **ಬೆಳಗಾವಿ:** ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ 2026-27ನೇ ಸಾಲಿನ ಕ್ರಿಯಾ ಯೋಜನೆಯಂತೆ ಸಾಧಕರೊಂದಿಗೆ ಸಂವಾದ ಕಾರ್ಯಕ್ರಮವನ್ನು ಜುಲೈ 4ರಂದು ಬೆಳಿಗ್ಗೆ 11 ಗಂಟೆಗೆ ನಗರದ ಬಸವರಾಜ ಕಟ್ಟೀಮನಿ ಸಭಾ ಭವನ(ಸಾಂಸ್ಕೃತಿಕ ಸಮುಚ್ಛಯ ಭವನ) ದಲ್ಲಿ ಹಮ್ಮಿಕೊಳ್ಳಲಾಗಿದೆ.

ಸ್ವಾತಂತ್ರ್ಯ ಯೋಧರಾದ ರಾಜೇಂದ್ರ ಧರ್ಮಪ್ಪ ಕಲಘಟಗಿ ಇವರೊಂದಿಗೆ ಸಂವಾದ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದ್ದು, ಸದರಿ ಕಾರ್ಯಕ್ರಮದಲ್ಲಿ ಜಿಲ್ಲೆಯ ಹಿರಿಯ ಸಾಹಿತಿ/ಕಲಾವಿದರು ಹಾಗೂ ವಿವಿಧ ಕಾಲೇಜು ವಿದ್ಯಾರ್ಥಿಗಳು ಭಾಗವಹಿಸಿ ಸಾಧಕರೊಂದಿಗೆ ಸಂವಾದ ನಡೆಸಲಿದ್ದಾರೆ ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಉಪನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ಜು.6ಕ್ಕೆ ಕಾರಂಜಿಮಠದಲ್ಲಿ ಶಿವಾನುಭವ ಕಾರ್ಯಕ್ರಮ

• **ಬೆಳಗಾವಿ:** ನಗರದ ಕಾರಂಜಿಮಠದಲ್ಲಿ ಜು.6ರಂದು ಸಂಜೆ ಶಿವಾನುಭವ ಕಾರ್ಯಕ್ರಮ ಆಯೋಜಿಸಲಾಗಿದೆ.



ಸಾನ್ನಿಧ್ಯವನ್ನು ಗುರುಸಿದ್ಧ ಸ್ವಾಮಿಜಿ ವಹಿಸುವರು. ಕರ್ನಾಟಕ ಸಾಹಿತ್ಯ ಅಕಾಡೆಮಿ ಸದಸ್ಯರಾದ ಡಾ. ಮೈತ್ರೇಯಿಣಿ ಗದಿಗೆಪ್ಪಗೌಡರ ಅವರು ಬಸವಾದಿ ಶರಣರು ಕಟ್ಟಿದ ಮಾನವತಾವಾದ್ಯ ಭಿಂಬ ವಿಷಯ ವಿಶೇಷ ಉಪನ್ಯಾಸ ನೀಡುವರು. ಇದೇ ಸಂದರ್ಭದಲ್ಲಿ ಸಂಗೀತಕ್ಷೇತ್ರದಲ್ಲಿ ಸಾಧನೆ ಮಾಡುತ್ತಿರುವ ಡಾ. ಸುನೀತಾ ಪಾಟೀಲ, ಡಾ ದುರ್ಗಾ ನಾಡಕರಣಿ, ಸುಜಾತಾ ಕಲ್ಲೇಶ, ನೈನಾ ಗಿರಿಗೌಡರ, ಸಹನಾ ಭೋಗಾರ ಅವರನ್ನು ಶ್ರೀಮಠದಿಂದ ಸನ್ಮಾನಿಸಲಾಗುವದು. ಶ್ರೀ ಕಾರಂಜಿಮಠದ ಕುಮಾರೇಶ್ವರ ಸಂಗೀತ ಪಾಠಶಾಲೆಯ ಮಕ್ಕಳಿಂದ ಪ್ರಾರ್ಥನ ಜರುಗುವುದು ಎಂದು ಶ್ರೀಮಠದ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

### ವಿಬಿ ಜಿ ರಾಮಜಿ ಜಾರಿ

• **ಗೋಕಾಕ:** ವಿಕಸಿತ ಭಾರತ ಗ್ಯಾರಂಟಿ ಫಾರ್ ರೋಜಗಾರ್ ಅಂಡ್ ಅಜೀವಿಕಾ ಮಿಷನ್ ವಿಬಿ-ಜಿ ರಾಮ ಜಿ ಯೋಜನೆಯು ಜು.1ರಿಂದ ಜಾರಿಯಾಗಿದ್ದು, ಈ ಹಿಂದೆ ಕೂಲಿಕಾರರಿಗೆ ನಿಗದಿಪಡಿಸಲಾಗಿದ್ದ ಕೂಲಿ ದರವನ್ನು ಕೂಡ ಹೆಚ್ಚಳ ಮಾಡಲಾಗಿದೆ ಎಂದು ತಾಲೂಕು ಪಂಚಾಯತ್ ಗೋಕಾಕ ಕಾರ್ಯನಿರ್ವಾಹಕ ಅಧಿಕಾರಿ ಪರಶುರಾಮ ಘಸ್ತೆ ಅವರು ತಿಳಿಸಿದ್ದಾರೆ. ಈ ಕುರಿತು ಪತ್ರಿಕಾ ಪ್ರಕಟಣೆ ನೀಡಿರುವ ಅವರು, ಈ ಹಿಂದೆ ಒಬ್ಬ ಕೂಲಿಕಾರನಿಗೆ ಪ್ರತಿ ದಿನಕ್ಕೆ ರೂ.370 ಇದ್ದ ಕೂಲಿ ದರವನ್ನು ರೂ.12 ಹೆಚ್ಚಿಸಲಾಗಿದ್ದು, ಜು.1 ರಿಂದ ರೂ.382 ಕೂಲಿ ದರ ನಿಗದಿಪಡಿಸಲಾಗಿದೆ. ಪ್ರತಿ ಕುಟುಂಬಕ್ಕೆ ವರ್ಷಕ್ಕೆ 100 ದಿನಗಳ ಬದಲಾಗಿ ಈಗ 125 ದಿನಗಳವರೆಗೆ ಉದ್ಯೋಗ ನೀಡಲಾಗುವುದು ಕೂಲಿಕಾರರು ಇದರ ಸದುಪಯೋಗ ಪಡೆದುಕೊಳ್ಳಬೇಕೆಂದು ತಿಳಿಸಿದ್ದಾರೆ.



ವಿಬಿ-ಜಿ ರಾಮ್ ಜಿ ಯೋಜನೆಯಡಿ ಒಟ್ಟು 318 ಅನುಮೋದಿತ ಕಾಮಗಾರಿಗಳನ್ನು ಕೈಗೊಳ್ಳಲು ಅವಕಾಶ ನೀಡಲಾಗಿದ್ದು, ಇದರಿಂದ ಗ್ರಾಮದ ಸಮಗ್ರ ಅಭಿವೃದ್ಧಿಗೆ ಸಹಕಾರಿಯಾಗಲಿದೆ ಎಂದು ಅವರು ಮಾಹಿತಿ ನೀಡಿದ್ದಾರೆ.

### ತೋಟಗಾರಿಕೆ ಬೆಳೆಗಳಿಗೆ ಬೆಳೆ ವಿಮೆ ಪಾವತಿಸಿ

• **ಬೆಳಗಾವಿ:** 2026-27 ನೇ ಸಾಲಿನ ಮುಂಗಾರು ಹಂಗಾಮಿನ ಪುನರ್‌ವಿನ್ಯಾಸಗೊಳಿಸಲಾದ ಹವಾಮಾನ ಆಧಾರಿತ ಬೆಳೆ ವಿಮೆ ಯೋಜನೆ ಮತ್ತು ಪ್ರಧಾನಮಂತ್ರಿ ಫಸಲ ಬಿಮಾ ಯೋಜನೆಗಳ ಬೆಳೆ ವಿಮೆ ಪಾವತಿಸುವ ಕುರಿತು ಬೆಳೆ ವಿಮೆ ಯೋಜನೆಯಡಿ ತೋಟಗಾರಿಕೆ ಬೆಳೆಗಳಿಗೆ ಬೆಳೆ ವಿಮಾ ಕಂತನ್ನು ನಿಗದಿಪಡಿಸಲಾಗಿರುತ್ತದೆ.

ರೈತರು ಪಾವತಿಸಿ ವಿಮಾ ಕಂತು ಪ್ರತಿ ಹೆಕ್ಟೇರ್ (ರೂ. ಗಳಲ್ಲಿ) ವಿಮೆ ಪಾವತಿಸಲು ಕೊನೆಯ ದಿನಾಂಕ ಜುಲೈ 31 ಆಗಿದ್ದು, (ಬೆಳೆ ಸಾಲ ಪಡೆಯುವ ಮತ್ತು ಬೆಳೆ ಸಾಲ ಪಡೆಯದ ರೈತರಿಗೆ ಒಂದೇಯಾಗಿರುತ್ತದೆ) ದಾಳಿಂಬೆ 6350, ದ್ರಾಕ್ಷಿ 14000, ಹಸಿ ಮೆಣಸಿನಕಾಯಿ 3550, ಮಾವು 4000, ರೂ.ಗಳು ಆಗಿವೆ. ಪ್ರಧಾನಮಂತ್ರಿ ಫಸಲ ಬಿಮಾ ಯೋಜನೆಯಡಿ ತೋಟಗಾರಿಕೆ ಬೆಳೆಗಳಿಗೆ ಬೆಳೆ ವಿಮಾ ಕಂತನ್ನು ನಿಗಧಿಪಡಿಸಲಾಗಿರುತ್ತದೆ.

ಅರಿಶಿಣ 8210,ಆಲೂಗಡ್ಡೆ (ಮಳೆಯಾಶ್ರಿತ)4120, ಟೊಮ್ಯಾಟೊ 8490,ಈರುಳ್ಳಿ (ನೀರಾವರಿ) 4695, ಈರುಳ್ಳಿ (ಮಳೆಯಾಶ್ರಿತ)4280. ಬೆಳೆಗಳಿಗೆ ಜುಲೈ 31 ದಿನಾಂಕವಾಗಿದ್ದು, ಎಲೆಕೋಸು 4530, ಜುಲೈ 15, ಕೊನೆಯ ದಿನವಾಗಿದೆ. ವಿಮಾ ಕಂತಿನ ಮೊತ್ತವು ಬೆಳೆ ಸಾಲ ಪಡೆಯುವ (ಔಣಅಫೆಉಉ) ಮತ್ತು ಬೆಳೆ ಸಾಲ ಪಡೆಯದ ರೈತರಿಗೆ ಒಂದೇಯಾಗಿರುತ್ತದೆ.



ಸಂಕೇಶ್ವರ: ಪಟ್ಟಣದಲ್ಲಿ ಕಾರ್ಯಾಲಯ ದಲ್ಲಿ ಬರುವ 2027 ರ ಶ್ರೀ ಮಹಾಲಕ್ಷ್ಮಿ ಜಾತ್ರಾ ಮಹೋತ್ಸವ ಬಗ್ಗೆ ವಿವಿಧ ಸಮಾಜಗಳ ಮುಖಂಡರ ಸಭೆ ನಡೆಯಿತು.

## 2016ರ ಜಾತ್ರೆಯ ಲೆಕ್ಕ ಬಹಿರಂಗಪಡಿಸಿ

• **ಸಂಕೇಶ್ವರ:** ಕಳೆದ 2016ರಲ್ಲಿ ಜರುಗಿದ ಶ್ರೀ ಮಹಾಲಕ್ಷ್ಮೀದೇವಿ ಜಾತ್ರೆಯ ಲೆಕ್ಕಪತ್ರವನ್ನು ಸಾರ್ವಜನಿಕರ ಮುಂದೆ ಪಾರದರ್ಶಕತೆಯಿಂದ ಬಹಿರಂಗ ಪಡಿಸಬೇಕು ಎಂದು ಸಭೆಯಲ್ಲಿ ಜಾತ್ರಾ ಸಮಿತಿ ಕಾರ್ಯಾಧ್ಯಕ್ಷ ಸುನೀಲ ಪರ್ವತರಾವ ಒತ್ತಾಯಿಸಿದರು. ಪಟ್ಟಣದಲ್ಲಿ ಕಾರ್ಯಾಲಯ ದಲ್ಲಿ ಬರುವ 2027 ರ ಶ್ರೀ ಮಹಾಲಕ್ಷ್ಮಿ ಜಾತ್ರಾ ಮಹೋತ್ಸವ ಬಗ್ಗೆ ವಿವಿಧ ಸಮಾಜಗಳ ಮುಖಂಡರು ನಡೆಸಿದ ಸಭೆಯಲ್ಲಿ ಅವರು ಮಾತನಾಡಿ, ಶ್ರೀ ಮಹಾಲಕ್ಷ್ಮಿ ಜಾತ್ರೆಯು ಪ್ರತಿ 11 ವರ್ಷದ ಬಳಿಕ ಜಾತ್ರಾ ಮಹೋತ್ಸವ ಜರುಗುತ್ತದೆ. ಪ್ರಸ್ತುತ ಜಾತ್ರಾ ಸಮಿತಿಯಲ್ಲಿ ಕೇವಲ ಎರಡೇ ಸಮಾಜದವರಿಗೆ ಮಾತ್ರ ಅವಕಾಶ ನೀಡಲಾಗಿದ್ದು ಸಂಕೇಶ್ವರ ಪಟ್ಟಣವು ವೇಗವಾಗಿ ಬೆಳೆದಿದ್ದು, ಜನ ಸಂಖ್ಯೆಯು ಹೆಚ್ಚಾದ ಕಾರಣ, ಜಾತ್ರಾ ಮಹೋತ್ಸವವನ್ನು ಸುಸಜ್ಜಿತವಾಗಿ ನಡೆಸಲು ಎಲ್ಲ ಸಮಾಜಗಳ ಪ್ರತಿನಿಧಿಗಳಿಗೆ ಅವಕಾಶ ಕಲ್ಪಿಸುವ ದೃಷ್ಟಿಯಿಂದ ಸರ್ವ ಸಮಾಜ ಸಮಿತಿ ರಚಿಸಬೇಕು ಎಂದು ಆಗ್ರಹಿಸಿದರು. ಮುಖಂಡಾರ ಗಜಾನನ ಕ್ವಳ್ಳಿ , ಶಿವಾನಂದ ಮುಡಶಿ ಮಾತನಾಡಿದರು. ರೋಹನ ನೇಸರಿ ಸಭೆಯ ಉದ್ದೇಶ ಹಾಗೂ ಮುಂದಿನ ಕಾರ್ಯಯೋಜನೆ ಕುರಿತು ಮಾಹಿತಿ ನೀಡಿದರು. ಈ ಸಂದರ್ಭದಲ್ಲಿ ಹುಕ್ಕುದಾರ ಶಂಕರ ಖಾತೇದಾರ, ಮುಖಂಡರಾದ ಚಿದಾನಂದ ಕರದನ್ನವರ, ಸುಭಾಷ ಕಾಸಾರಕರ, ಕುಮಾರ ಬಸ್ತವಾಡಿ,ಆನಂದ ಸಂಸುದ್ದಿ, ಚೇತನ ಬಶೆಟ್ಟಿ, ವಿಜಯ ಜರಳಿ, ದೀಪಕ್ ಬೀಶೆ, ಹರುಣ ಮುಲ್ಲಾ, ಅಣ್ಣಪ್ಪ ಕುಂಬಾರ, ರಾಜು ಹುಕ್ಕೇರಿ ಸೇರಿದಂತೆ ವಿವಿಧ ಸಮಾಜದವರು ಹಾಜರಿದ್ದರು.



ಗೋಕಾಕ: ಕೃಷಿ ಮಂತ್ರಾಲಯದ ಮಹತ್ವಾಕಾಂಕ್ಷೆ ಯೋಜನೆಯಾದ ಶಾಲಾ ಮಣ್ಣು ಆರೋಗ್ಯ ಯೋಜನೆಯ ಅರಿವು ಮುಡಿಸುವ ಸಲುವಾಗಿ ಇಲ್ಲಿಯ ಪಿ ಎಂ ಶ್ರೀ ಸರ್ಕಾರಿ ಕನ್ನಡ ಹಿರಿಯ ಪ್ರಾಥಮಿಕ ಹಾಗೂ ಪ್ರೌಢ ಶಾಲೆಯಲ್ಲಿ 8, 9, 10ನೇ ತರಗತಿ ವಿದ್ಯಾರ್ಥಿಗಳಿಗೆ ತರಬೇತಿಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ಜು. 1ರಿಂದ ವಿಬಿ–ಜಿ ರಾಮ್ ಜಿ ಯೋಜನೆ ಜಾರಿ | ಕೂಲಿ ದರ 382ಕ್ಕೆ ಏರಿಕೆ

## ಗ್ರಾಮೀಣಾಭಿವೃದ್ಧಿಗೆ ಹೊಸ ವೇಗ

• **ಬೆಳಗಾವಿ:** ಗ್ರಾಮೀಣ ಪ್ರದೇಶದ ಕೂಲಿಕಾರರಿಗೆ ಹೆಚ್ಚಿನ ಉದ್ಯೋಗಾವಕಾಶಗಳನ್ನು ಕಲ್ಪಿಸುವ ಹಾಗೂ ಹಳ್ಳಿಗಳ ಸಮಗ್ರ ಅಭಿವೃದ್ಧಿಗೆ ಹೊಸ ವೇಗವನ್ನು ನೀಡುವ ಮಹತ್ವಾಕಾಂಕ್ಷಿ ಉದ್ದೇಶದಿಂದ ಕೇಂದ್ರ ಸರ್ಕಾರ ಜಾರಿಗೆ ತಂದಿರುವ ವಿಕಸಿತ ಭಾರತ ಗ್ಯಾರಂಟಿ ಫಾರ್ ರೋಜಗಾರ್ ಆ್ಯಂಡ್ ಅಜೀವಿಕಾ ಮಿಷನ್' (ವಿಬಿ–ಜಿ ರಾಮ್ ಜಿ) ಯೋಜನೆ ಜುಲೈ 1ರಿಂದ ರಾಜ್ಯಾದ್ಯಂತ ಅಧಿಕೃತವಾಗಿ ಅನುಷ್ಠಾನಗೊಂಡಿದೆ. ಈ ಹೊಸ ಯೋಜನೆಯ ಅನ್ವಯ ಕೂಲಿಕಾರರ ದಿನಗೂಲಿ ದರದಲ್ಲೂ ಗಮನಾರ್ಹ ಹೆಚ್ಚಳ ಮಾಡಲಾಗಿದೆ ಎಂದು ತಾಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿ ಯಶಂತಕುಮಾರ ತಿಳಿಸಿದ್ದಾರೆ.

ನಗರದ ಪಶುವೈದ್ಯಾಧಿಕಾರಿಗಳ ಕಚೇರಿ ಆವರಣದಲ್ಲಿರುವ ರೈತ ತರಬೇತಿ ಕೇಂದ್ರದಲ್ಲಿ ಆಯೋಜಿಸಲಾಗಿದ್ದ ವಿಬಿ–ಜಿ ರಾಮ್ ಜಿ' ಯೋಜನೆ ಕುರಿತ ತಾಂತ್ರಿಕ ತರಬೇತಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಹೆಚ್ಚಿದ ದಿನಗೂಲಿ: ಈ ಹಿಂದೆ ಯೋಜನೆಯಡಿ ಪ್ರತಿ ಕೂಲಿಕಾರರಿಗೆ ದಿನಕ್ಕೆ 370ರೂ. ನೀಡಲಾಗುತ್ತಿತ್ತು. ಜುಲೈ 1ರಿಂದ ಜಾರಿಗೆ ಬರುವಂತೆ ದಿನಗೂಲಿಯಲ್ಲಿ ರೂ.12 ಹೆಚ್ಚಳ ಮಾಡಲಾಗಿದ್ದು, ಹೊಸದಾಗಿ ಪ್ರತಿ ದಿನಕ್ಕೆ 382 ರೂ.ಕೂಲಿ ದರ ನಿಗದಿಪಡಿಸಲಾಗಿದೆ.

125 ದಿನಗಳ ಉದ್ಯೋಗ ಗ್ಯಾರಂಟಿ: ಗರಿಷ್ಠ ಉದ್ಯೋಗಾವಕಾಶ ಕಲ್ಪಿಸುವ ನಿಟ್ಟಿನಲ್ಲಿ, ಈ ಹಿಂದೆ ಗ್ರಾಮೀಣ ಕುಟುಂಬಗಳಿಗೆ ನೀಡಲಾಗುತ್ತಿದ್ದ ವರ್ಷಕ್ಕೆ 100 ದಿನಗಳ ಉದ್ಯೋಗದ ಮಿತಿಯನ್ನು ಈಗ 125 ದಿನಗಳಿಗೆ ಹೆಚ್ಚಿಸಲಾಗಿದೆ.

ಇದರಿಂದ ಗ್ರಾಮೀಣ ಬಡ ಕುಟುಂಬಗಳ ಆರ್ಥಿಕ ಸ್ಥಿತಿ ಮತ್ತಷ್ಟು ಬಲಗೊಳ್ಳಲಿದ್ದು, ಅರ್ಹ ಕೂಲಿಕಾರರು ಯೋಜನೆಯ ಸೌಲಭ್ಯವನ್ನು ಸಂಪೂರ್ಣವಾಗಿ ಸದುಪಯೋಗಪಡಿಸಿಕೊಳ್ಳಬೇಕು ಎಂದು ಕಾರ್ಯನಿರ್ವಾಹಕ ಅಧಿಕಾರಿ ಯಶಂತಕುಮಾರ ತಿಳಿಸಿದರು.

ಕಾರ್ಯಕ್ರಮದಲ್ಲಿ ತಾಲೂಕು ಪಂಚಾಯತ್ ಸಹಾಯಕ ನಿರ್ದೇಶಕ ಬಿ.ಡಿ. ಕಡೇಮನಿ, ವಿಬಿ–ಜಿ ರಾಮ್ ಜಿ ತರಬೇತಿಗಾರ ಸಂಗನಗೌಡ ಹಂದ್ರಾಳ, ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ವಿವಿಧ ವಿಷಯ ನಿರ್ವಾಹಕರು ಹಾಗೂ ತಾಲ್ಲೂಕು ಪಂಚಾಯತಿಯ ತಾಂತ್ರಿಕ ಸಿಬ್ಬಂದಿ ಉಪಸ್ಥಿತರಿದ್ದರು.



### ಸಮನ್ವಯತೆಯಿಂದ ಕೆಲಸ ನಿರ್ವಹಿಸಿ

ಯೋಜನೆಯ ಯಶಸ್ವಿ ಅನುಷ್ಠಾನಕ್ಕಾಗಿ ಗ್ರಾಮ ಪಂಚಾಯಿತಿ ಅಧಿಕಾರಿಗಳು, ತಾಂತ್ರಿಕ ಸಿಬ್ಬಂದಿ ಹಾಗೂ ಸಂಬಂಧಿತ ಇಲಾಖೆಗಳ ಅಧಿಕಾರಿಗಳು ಪರಸ್ಪರ ಸಮನ್ವಯದಿಂದ ಕಾರ್ಯನಿರ್ವಹಿಸಬೇಕು. ಅರ್ಹ ಫಲಾನುಭವಿಗಳಿಗೆ ಯೋಜನೆಯ ಕುರಿತು ಸಮರ್ಪಕ ಮಾಹಿತಿ ನೀಡಿ, ಹೆಚ್ಚಿನ ಸಂಖ್ಯೆಯಲ್ಲಿ ಉದ್ಯೋಗ ಒದಗಿಸಲು ತಳಮಟ್ಟದಲ್ಲಿ ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ಅವರು ಸಿಬ್ಬಂದಿಗೆ ತಾಪಂ ಇಒ ಕಟ್ಟುನಿಟ್ಟಿನ ಸೂಚನೆ ನೀಡಿದರು.

### 318 ವಿವಿಧ ಕಾಮಗಾರಿಗಳಿಗೆ ಆಡಳಿತಾತ್ಮಕ ಅನುಮೋದನೆ

ವಿಬಿ–ಜಿ ರಾಮ್ ಜಿ ಯೋಜನೆಯಡಿ ತಾಲೂಕಿನಲ್ಲಿ ಒಟ್ಟು 318 ವಿವಿಧ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ಈಗಾಗಲೇ ಆಡಳಿತಾತ್ಮಕ ಅನುಮೋದನೆ ದೊರೆತಿದೆ. ಈ ಕಾಮಗಾರಿಗಳ ಮೂಲಕ ಗ್ರಾಮಗಳಲ್ಲಿ ಮೂಲಸೌಕರ್ಯ ಅಭಿವೃದ್ಧಿ, ಸಾರ್ವಜನಿಕ ಆಸ್ತಿಗಳ ನಿರ್ಮಾಣ ಹಾಗೂ ನೀರಿನ ಸಂರಕ್ಷಣೆ ಸೇರಿದಂತೆ ವಿವಿಧ ಪ್ರಮುಖ ಅಭಿವೃದ್ಧಿ ಕಾರ್ಯಗಳಿಗೆ ಹೆಚ್ಚಿನ ಉತ್ತೇಜನ ಸಿಗಲಿದ್ದು, ಇದು ಗ್ರಾಮಗಳ ಸಮಗ್ರ ಚಿತ್ರಣವನ್ನು ಬದಲಾಯಿಸಲು ಸಹಕಾರಿಯಾಗಲಿದೆ ಎಂದು ತಪಂ ಕಾರ್ಯನಿರ್ವಾಹಕ ಅಧಿಕಾರಿ ಯಶಂತಕುಮಾರ ತಿಳಿಸಿದರು.

## ಕಡ್ಡಾಯವಾಗಿ ಅವಧಿಯೊಳಗೆ ಎಸ್‌ಐಆರ್ ನಮೂನೆ ಹಿಂತಿರುಗಿಸಿ

• **ಬೆಳಗಾವಿ:** ಮತಗಟ್ಟೆ ಅಧಿಕಾರಿಗಳು (ಬಿಎಲ್‌ಓ) ಈಗಾಗಲೇ ಮನೆ ಮನೆಗೆ ತೆರಳಿ ಗಣತಿ ನಮೂನೆ ನೀಡುತ್ತಿದ್ದು, ಪ್ರತಿ ಯೊಬ್ಬ ಅರ್ಹ ನಾಗರಿಕನು ಸರಿಯಾದ ಮಾಹಿತಿ ಭರ್ತಿ ಮಾಡಿ ಅವಧಿಯೊಳಗೆ ಅದನ್ನು ಹಿಂತಿರುಗಿಸುವುದು ಕಡ್ಡಾಯ ವಾಗಿದೆ ಎಂದು ಪಾಲಿಕೆ ಆಯುಕ್ತರು ಹಾಗೂ ಚುನಾವಣಾ ಅಧಿಕಾರಿಗಳಾಗಿರುವ ಕಾರ್ತಿಕ್ ಎಂ. ಅವರು ತಿಳಿಸಿದ್ದಾರೆ.



ಶುಕ್ರವಾರ ಈ ಕುರಿತು ಮಹಾನಗರ ಪಾಲಿಕೆಯ ಕಚೇರಿಯಲ್ಲಿ ಮಾಹಿತಿ ನೀಡಿ ಮಾತನಾಡಿದ ಅವರು, ಚುನಾವಣಾ ಆಯೋಗದ ಆದೇಶ ಮತ್ತು ನಡಾವಳಿಗಳ ಪ್ರಕಾರ ಪಾಲಿಕೆಯ ವ್ಯಾಪ್ತಿಯಲ್ಲಿ ಬರುವ ಉತ್ತರ ಮತ್ತು ದಕ್ಷಿಣ ವಿಧಾನಸಭಾ ಮತಕ್ಷೇತ್ರಗಳಲ್ಲಿ ಎಸ್‌ಐಆರ್ ಪ್ರಕ್ರಿಯೆ ನಡೆದಿದೆ.

ಈ ಕುರಿತು ಯಾವುದೇ ಗೊಂದಲಗಳು, ಸಂಶಯಗಳು ಇದ್ದರೆ, ಬಿಎಲ್‌ಓಗಳು, ಮೇಲ್ವಿಚಾರಕರು ಇಲ್ಲವೇ ಪಾಲಿಕೆಯ ಚುನಾವಣಾ ವಿಭಾ ಗದ ಸಹಾಯ ಪಡೆಯಬಹುದು. ಮತದಾರರ ಪಟ್ಟಿಯಲ್ಲಿ ತಮ್ಮ ಹೆಸರು ಮುಂದುವ ರೆಯಲು ಎಸ್ ಐ ಆರ್ ಪ್ರಕ್ರಿಯೆ ಯಲ್ಲಿ ಎಲ್ಲರೂ ಪಾಲ್ಗೊಳ್ಳಲೇಬೇಕು.

ನಿಗದಿತ ಅವಧಿಯಲ್ಲಿ (ಜು.29) ನಮೂನೆಯನ್ನು ಭರ್ತಿ ಮಾಡಿ ಬಿಎಲಒಗಳಿಗೆ ಹಿಂತಿರು ಗಿಸದಿದ್ದರೆ, ಅದಕ್ಕೆ ತಾವೇ ಹೊಣೆಯಾ ಗುತ್ತೀರಿ. ಅಲ್ಲದೆ ಮತದಾರರ ಪಟ್ಟಿಯಿಂದ ತಮ್ಮ ಹೆಸರು ಹೊರಗುಳಿಯ ಬಹುದು. ಈ ಹಿನ್ನೆಲೆಯಲ್ಲಿ ಸಿಬ್ಬಂದಿಯೊಂದಿಗೆ ನಾಗರಿಕರು ಸಹಕರಿಸಿ ಪ್ರಕ್ರಿಯೆಯನ್ನು ಸುಗಮಗೊಳಿಸಲು ಸಹಕರಿಸಬೇಕೆಂದರು.



ಅಡಹಳ್ಳಿ ಗ್ರಾಮದ ವಿವಿಧೋದ್ದೇಶಗಳ ಪ್ರಾಥಮಿಕ ಗ್ರಾಮೀಣ ಕೃಷಿ ಸಹಕಾರಿ ಸಂಘದಲ್ಲಿ ಪ್ರೌಢ ಶಾಲೆಯ ವಿದ್ಯಾರ್ಥಿಗಳ ರಸಪ್ರಶ್ನೆ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಪಡೆದ ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಲಾಯಿತು.

## ಕ್ಷೇತ್ರದ ಸಮಗ್ರ ಅಭಿವೃದ್ಧಿಗೆ ಶ್ರಮ




• **ಚನ್ನಮ್ಮನ ಕಿತ್ತೂರು:** ರೈತರ ಅನುಕೂಲಕ್ಕಾಗಿ ಹೊಲಗಳಿಗೆ ಹೋಗುವ ರಸ್ತೆ, ಶಾಲೆಗಳ ಅಭಿವೃದ್ಧಿ, ದೇವಸ್ಥಾನ ಸೇರಿ ಧಾರ್ಮಿಕ ಸ್ಥಳ ಗಳ ಅಭಿವೃದ್ಧಿ, ರಸ್ತೆ ಚರಂಡಿ ನಿರ್ಮಾಣಕ್ಕೆ ಸರ್ಕಾರ ದಿಂದ ಹೆಚ್ಚಿನ ಅನುದಾನ ತಂದು ಕ್ಷೇತ್ರದ ಸಮಗ್ರ ಅಭಿವೃದ್ಧಿಗೆ ಶ್ರಮಿಸುತ್ತಿದ್ದೇನೆ ಎಂದು ಶಾಸಕ ಬಾಬಾಸಾಹೇಬ ಪಾಟೀಲ ಹೇಳಿದರು.

**ಪಟ್ಟಣ ಪಂಚಾಯತಿ ನೂತನ ಕಚೇರಿ ಕಟ್ಟಡ ನಿರ್ಮಾಣಕ್ಕೆ ಭೂಮಿಪೂಜೆ**

ಸಮೀಪದ ಎಂ ಕೆ ಹುಬ್ಬಳ್ಳಿ ಪಟ್ಟಣದಲ್ಲಿ ಬುಧವಾರ ನಗರಾಭಿವೃದ್ಧಿ ಇಲಾಖೆಯಡಿ ಸರ್ಕಾರದ 5ಕೋಟಿ ರೂ. ವಿಶೇಷ ಅನುದಾನದಡಿ ಪಟ್ಟಣ ಪಂಚಾಯತಿ ನೂತನ ಕಚೇರಿ ಕಟ್ಟಡ ನಿರ್ಮಾಣಕ್ಕೆ ಭೂಮಿಪೂಜೆ ಹಾಗೂ ವಿವಿಧ ಅಭಿವೃದ್ಧಿ ಕಾರ್ಯಕ್ಕೆ ಚಾಲನೆ ನೀಡಿ ಮಾತನಾಡಿ ಅಭಿವೃದ್ಧಿಗೆ ಸಾಕಷ್ಟು ಅನುದಾನ ತರಲಾಗಿದೆ ಎಂದು ತಿಳಿಸಿ ಐತಿಹಾಸಿಕ ತುಂಬುಕೆರೆಯನ್ನು ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಹೋಳೆತ್ತಿ, ಅಭಿವೃದ್ಧಿ ಪಡಿಸಿದೆ. ಕೆರೆ ಪಕ್ಕದಲ್ಲಿ ಸಾರ್ವಜನಿಕರ ಅನುಕೂಲಕ್ಕಾಗಿ 1 ಕೋಟಿ ರೂ.ವೆಚ್ಚದಲ್ಲಿ ಟ್ರೀ ಪಾರ್ಕ್(ಉದ್ಯಾನವನ) ನಿರ್ಮಿಸಲಾಗುತ್ತಿದೆ ಎಂದರು. ಪಟ್ಟಣದ ಅಭಿವೃದ್ಧಿಗೆ ಸಿಎಂಐಡಿಪಿ ಅನುದಾನದಡಿ 4.25ಕೋಟಿ ರೂ. ಮಂಜೂರು ಮಾಡಲಾಗಿದ್ದು, ಅಗತ್ಯವಿದ್ದ ಕಡೆ ಅಭಿವೃದ್ಧಿಗೆ ಮೊದಲ ಆದ್ಯತೆ ನೀಡಬೇಕೆಂದರು.

ಪಟ್ಟಣದ ಪಂಚಾಯತ ಮುಖ್ಯಾಧಿಕಾರಿ ರವಿಶಂಕರ ಮಾಸ್ತಿಹೊಳಿಮಠ, ಅಧ್ಯಕ್ಷರಾದ ಸುರೇಶ ಮುತ್ನಾಳ, ಉಪಾಧ್ಯಕ್ಷೆ ಲಕ್ಷ್ಮೀ ಮಲ್ಲಪ್ಪ ನಾಗನೂರ, ರಾಣಿ ಶುರ್ ನಿರ್ದೇಶಕರಾದ ಫಕ್ಕೀರಪ್ಪ ಸಕ್ರೆನ್ನವರ, ಶಂಕರ ಕಿಲ್ಲೇದಾರ, ಪಪಂ ಸದಸ್ಯರಾದ ದೇಮಪ್ಪ ಬಸರಗಿ, ಗದಿಗೆವ್ವ ಜಂಗಳಿ, ದೊಡ್ಡಪ್ಪ ಗಣಾಚಾರಿ, ಪ್ರಕಾಶ ಗಿರಜಿಮನಿ, ಮಂಜುನಾಥ ಕಡಕೋಳ, ಸಾವಿತ್ರಿ ಹೊನ್ನಣ್ಣವರ, ಪ್ರಕಾಶ ಕೊಡ್ಲಿ, ಸುಶೀಲಾ ಗಣಾಚಾರಿ, ಸುಭಾನಿ ಅಗಸಿಬಾಗಿಲ, ಪರವಿನ ನಬುವಾಲೆ, ಸಮೀರ ಪಟೇಲ, ಮಂಗಳಾ ದೇಮಟ್ಟಿ, ಹಿರಿಯರಾದ ಎನ್.ಸಿ.ಗಣಾಚಾರಿ, ಶ್ರೀಶೈಲ ತಿಗಡಿ, ಚಿನ್ನಪ್ಪ ಮುತ್ನಾಳ, ಅದೃಶ್ಯಪ್ಪ ಗದ್ದಿಹಳ್ಳಿ, ಮಿಟ್ಟುಸಾಬ ಜಾಮೀನದಾರ, ಯೂಸುಬ ಖಾಜಿ, ಲಕ್ಷ್ಮಣ ಗೋಕಾರ, ಪಿಎಸ್‌ಐ ಭರತ ಎಸ್, ಗುತ್ತಿಗೆದಾರ ಸಮೀರ್ ಸಿರಗುಪ್ಪಿ, ಪ್ರವೀಣ ಹಿರೇಮಠ ಇತರರಿದ್ದರು. ಶಿಕ್ಷಕ ಸಿದ್ದಯ್ಯ ಹಿರೇಮಠ ನಿರೂಪಿಸಿದರು.

## ಗ್ಯಾರಂಟಿ ಯೋಜನೆಗಳ ಅನುಷ್ಠಾನಕ್ಕೆ ಶ್ರಮಿಸಿ: ಪಾಟೀಲ

• **ಬೆಳಗಾವಿ:** ಚುನಾವಣಾ ಪೂರ್ವ ದಲ್ಲಿ ರಾಜ್ಯ ಸರಕಾರ ಘೋಷಿಸಿದ ಗ್ಯಾರಂಟಿ ಯೋಜನೆ ಗಳನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸಿತ್ತಿದೆ. ಗ್ಯಾರಂಟಿ ಯೋಜನೆಗಳಲ್ಲಿ ಕಂಡು ಬರುತ್ತಿರುವ ಸಣ್ಣ-ಪುಟ್ಟ ನ್ಯೂನ್ಯತೆಗಳನ್ನು ಶೀಘ್ರದಲ್ಲೇ ಪರಿಹರಿಸಲಾಗುವುದು ಎಂದು ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ರಾಜ್ಯ ಉಪಾಧ್ಯಕ್ಷ ಎಸ್.ಆರ್.ಪಾಟೀಲ (ಬ್ಯಾಡಗಿ) ತಿಳಿಸಿದರು.

ಗುರುವಾರ ಜಿಲ್ಲಾ ಪಂಚಾಯತ ಸಭಾಂಗಣದಲ್ಲಿ ಜರುಗಿದ ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.



ಗ್ಯಾರಂಟಿ ಯೋಜನೆಗಳು ಪ್ರಾರಂಭವಾಗಿ ಮೂರು ವರ್ಷಗಳು ಕಳೆದಿವೆ ರಾಜ್ಯ ಸರ್ಕಾರ ಕೊಟ್ಟ ಮಾತಿನಂತೆ ಭರವಸೆಗಳನ್ನು ಈಡೇರಿಸಿದೆ. ಶಕ್ತಿ ಯೋಜನೆಯಡಿ ಇಲ್ಲಿಯವರೆಗ ರಾಜ್ಯದ 750 ಕೋಟಿಗೂ ಹೆಚ್ಚಿನ ಮಹಿಳಾ ಪ್ರಯಾಣಿಕರು ಶಕ್ತಿ ಯೋಜನೆಯ ಸದುಪಯೋಗ ಪಡೆದುಕೊಂಡಿದ್ದು ದಾಖಲೆಯಾಗಿದೆ ಎಂದರು.

ಜಿಲ್ಲಾ ಪಂಚಾಯತ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಾಹುಲ ಶಿಂಧೆ ಮಾತನಾಡಿ, ರಾಜ್ಯ ಸರಕಾರದ ಮಹತ್ವಾಕಾಂಕ್ಷಿ ಗ್ಯಾರಂಟಿ ಯೋಜನೆಗಳು ದುರುಪಯೋಗವಾಗಬಾರದು. ಗೃಹಲಕ್ಷ್ಮೀ ಯೋಜನೆಯಡಿ ಮೃತ ಫಲಾನುಭವಿಗಳ ವಿವರಗಳನ್ನು ನೀಡಿ ಅಂತಹ ಫಲಾನುಭವಿಗಳ ಹೆಸರನ್ನು ಗೃಹಲಕ್ಷ್ಮೀ ಯೋಜನೆಯ ಫಲಾನುಭವಿಗಳ ಪಟ್ಟಿಯಿಂದ ಹೆಸರನ್ನು ಕೈಬಿಡಬೇಕು ಎಂದರು.

ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಜಿಲ್ಲಾಧ್ಯಕ್ಷರಾದ ವಿನಯ ನಾವಲಗಟ್ಟಿ, ವಿವಿಧ ತಾಲೂಕು ಅಧ್ಯಕ್ಷರು, ಸದಸ್ಯರುಗಳು, ಜಿಲ್ಲಾ ಪಂಚಾಯತ ಉಪ ಕಾರ್ಯದರ್ಶಿ ಬಸವರಾಜ ಹೆಗನಾಯಕ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು ಹಾಜರಿದ್ದರು.



ನೇರಲಿ: ಗ್ರಾಮದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿಯಮಿತ ಸಭಾಭವನದಲ್ಲಿ ಸಹಕಾರ ಸಮ್ಮೇಳನ ಕಾರ್ಯಕ್ರಮ ನಡೆಯಿತು. ಬೆಳಗಾವಿ ಕ್ರಿಬ್ಕೋ ಜಿಲ್ಲಾ ಕ್ಷೇತ್ರಧಿಕಾರಿ ನವೀನ ಭಟ, ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ರುದ್ರಗೌಡ ಸಣ್ಣಕ್ಕಿ, ಬಸವಪ್ರಸಾದ ಸಂಕಪಾಳ, ಶಿವಲಿಂಗ ಹುಕ್ಕೇರಿ, ಈರಪ್ಪ ಲಬ್ಬಿ, ಅಣ್ಣಾಗೌಡ ಪಾಟೀಲ, ಅಪ್ಪಸಾಹೇಬ ಪಾಟೀಲ, ಸುನೀಲ ಹೊಸಮನಿ ಸೇರಿದಂತೆ ಗ್ರಾಮದ ರೈತರು ಉಪಸ್ಥಿತರಿದ್ದರು. ರಾಮು ಶಿಂದೆ ಕಾರ್ಯಕ್ರಮ ಸ್ವಾಗತಿಸಿ ವಂದಿಸಿದರು.



ರಾಯಬಾಗ: ವಿಶ್ವ ತಂಬಾಕು ವಿರೋಧಿ ದಿನಾಚರಣೆಯ ಪ್ರಯುಕ್ತ ಏಕಕಾಲದಲ್ಲಿ ಕರ್ನಾಟಕದ 1000 ಕ್ಕೂ ಅಧಿಕ ಶಾಲಾ-ಕಾಲೇಜ್ ಗಳಲ್ಲಿ ಸ್ವಾಸ್ಥ್ಯ ಸಂಕಲ್ಪ ಕಾರ್ಯಕ್ರಮವನ್ನು ಶ್ರೀ ಕ್ಷೇತ್ರ ಧರ್ಮಸ್ಥಳದಿಂದ ಆನ್ ಲೈನ್ ಮೂಲಕ ನಡೆಸಲಾಯಿತು. ರಾಯಬಾಗ ತಾಲೂಕಿನ ಶಾಲಾ ಕಾಲೇಜ್ ವಿದ್ಯಾರ್ಥಿಗಳು ಭಾಗವಹಿಸಿದ್ದರು.

## ಮರಾಠಿಯಲ್ಲಿ ಎಸ್‌ಐಆರ್ ದಾಖಲೆ ನೀಡಲು ಎಂಇಎಸ್ ಕಾರ್ಯಕರ್ತರ ಆಗ್ರಹ

• **ಬೆಳಗಾವಿ:** ರಾಜ್ಯ ಚುನಾವಣಾ ಆಯೋಗ ಕೈಗೊಂಡಿರುವ ವಿಶೇಷ ಮತದಾರರ ಪಟ್ಟಿ ಪರಿಷ್ಕರಣೆ (ಎಸ್‌ಐಆರ್) ಪ್ರಕ್ರಿಯೆಗೆ ಸಂಬಂಧಿಸಿದ ದಾಖಲೆಗಳನ್ನು ಮರಾಠಿ ಭಾಷೆಯಲ್ಲಿಯೂ ಲಭ್ಯಗೊಳಿಸಬೇಕು ಎಂದು ಆಗ್ರಹಿಸಿ ಮಹಾರಾಷ್ಟ್ರ ಏಕೀಕರಣ ಸಮಿತಿ (ಎಂಇಎಸ್) ಕಾರ್ಯಕರ್ತರು ಶುಕ್ರವಾರ ಬೆಳಗಾವಿ ಮಹಾನಗರ ಪಾಲಿಕೆ ಕಚೇರಿ ಎದುರು ಪ್ರತಿಭಟನೆ ನಡೆಸಿ, ಪಾಲಿಕೆ ಆಯುಕ್ತರಿಗೆ ಮನವಿ ಸಲ್ಲಿಸಿದರು.

ಎಸ್‌ಐಆರ್ ಸಮೀಕ್ಷೆಯ ಅಂಗವಾಗಿ ಅಧಿಕಾರಿಗಳು ಹಾಗೂ ಬಿಎಲ್‌ಒಗಳು ಮನೆ ಮನೆಗೆ ತೆರಳಿ ಮಾಹಿತಿ ಸಂಗ್ರಹಿಸುತ್ತಿದ್ದು, ದಾಖಲೆಗಳು ಕನ್ನಡ ಭಾಷೆಯಲ್ಲಿ ಮಾತ್ರ ಇರುವುದರಿಂದ ಮರಾಠಿ ಭಾಷಿಕರಿಗೆ ಮಾಹಿತಿ ಅರ್ಥವಾಗುತ್ತಿಲ್ಲ ಎಂದು ಪಾಲಿಕೆಯ ಅಧೀಕಾರಿಗಳನ್ನು ಹಾಗೂ ಬಿಎಲ್ ಓ ಗಳನ್ನು ವಾಪಸ್ ಕಳುಹಿಸಿದ್ದಾರೆ. ಮರಾಠಿ ಭಾಷಿಕರ ಮನೆಗಳಿಗೆ ತೆರಳುವ ಅಧಿಕಾರಿಗಳು ಮರಾಠಿ ಭಾಷೆಯಲ್ಲಿಯೇ ದಾಖಲೆಗಳನ್ನು ನೀಡಬೇಕು ಎಂದು ಮನವಿಯಲ್ಲಿ ಪಾಲಿಕೆ ಆಯುಕ್ತರಿಗೆ ಒತ್ತಾಯಿಸಿದರು.



ಎಂಇಎಸ್ ಅಧ್ಯಕ್ಷ ಪ್ರಕಾಶ ಮರಗಾಳೆ, ರಾಜ್ಯ ಸರ್ಕಾರ ಹಾಗೂ ಚುನಾವಣಾ ವ್ಯವಸ್ಥೆ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ನ್ಯಾಯವಾದಿ ಅಮರ್ ಯಳ್ಳೂರಕರ, ಮಾಜಿ ಮಹಾಪೌರ ಶಿವಾಜಿರಾವ್ ಸುಂಠಕರ, ರೇಣು ಕಿಲ್ಲೇರ್ಕ, ಸರಿತಾ ಪಾಟೀಲ್, ಪಂಢರಿ ಪರಬ್, ರಣಜೀತ್ ಚವ್ಹಾಣ್ ಪಾಟೀಲ್, ಮದನ್ ಬಾಮಣೆ, ಅಂಕುಶ್ ಕೇಸರಕರ ಸೇರಿದಂತೆ ಎಂಇಎಸ್‌ನ ಹಲವು ಮುಖಂಡರು ಮತ್ತು ಕಾರ್ಯಕರ್ತರು ಇದ್ದರು.


## ಏಕಾಗ್ರತೆಯಿಂದ ಅಭ್ಯಾಸದತ್ತ ಗಮನಹರಿಸಿ

• **ರಾಯಬಾಗ:** ವಿದ್ಯಾರ್ಥಿಗಳು ಏಕಾಗ್ರತೆಯಿಂದ ಅಭ್ಯಾಸ ಮಾಡಿ ಒಳ್ಳೆಯ ಅಂಕಗಳನ್ನು ಗಳಿಸಿ ಉನ್ನತ ಸಾಧನೆ ಮಾಡಬೇಕೆಂದು ಧಾರವಾಡದ ನಿವೃತ್ತ ಪ್ರಾಧ್ಯಾಪಕ ಎಚ್.ಕೆ.ಗುರವ ಹೇಳಿದರು.

ಪಟ್ಟಣದ ಕೆಎಲ್‌ಇ ಸಂಸ್ಥೆಯ ಮಲಗೌಡಾ ಪಾಟೀಲ ಪದವಿ ಪೂರ್ವ ಕಾಲೇಜಿನ 2026–27 ನೇ ಸಾಲಿನ ಪ್ರಥಮ ವರ್ಷದ ವಿದ್ಯಾರ್ಥಿಗಳ ಸ್ವಾಗತ ಹಾಗೂ ಕ್ರೀಡಾ ಮತ್ತು ಸಾಂಸ್ಕೃತಿಕ ವಿಭಾಗದ ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿದ ಅವರು

ವಿದ್ಯಾರ್ಥಿಗಳು ತ್ಯಾಗ, ನ್ಯಾಯ, ನೀತಿ, ಧರ್ಮ, ಪ್ರೀತಿ, ವಿಶ್ವಾಸ ಈ ಮಾನವೀಯ ಮೌಲ್ಯಗಳನ್ನು ಅನುಸರಿಸಿಕೊಂಡು ಸಮಾಜದ ಹಿತವನ್ನು ಕಾಪಾಡುವಂತಾಗಬೇಕು ಎಂದರು.

ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಪ್ರಾಚಾರ್ಯ ಡಾ.ಆರ್.ಕೆ.ಪಾಟೀಲ ಮಾತನಾಡಿ, ಬಡ ಹಾಗೂ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಕಾಲೇಜಿನ ಶುಲ್ಕದಲ್ಲಿ ವಿನಾಯಿತಿ ನೀಡಲಾಗಿದ್ದು, ಪ್ರಥಮ ವರ್ಷದ 27, ದ್ವಿತೀಯ ವರ್ಷದ 16 ವಿದ್ಯಾರ್ಥಿಗಳಿಗೆ 3 ಲಕ್ಷದವರೆಗೆ ಶುಲ್ಕದಲ್ಲಿ ವಿನಾಯಿತಿ ನೀಡಲಾಗಿದೆ ಎಂದರು.




ಕಾರ್ಯಕ್ರಮದಲ್ಲಿ 2025–26 ನೇ ಸಾಲಿನಲ್ಲಿ ವಿಷಯವಾರು ಪ್ರತಿಶತ 100 ಅಂಕ ಗಳಿಸಿದ ವಿದ್ಯಾರ್ಥಿಗಳನ್ನು ಹಾಗೂ ಪ್ರಥಮ, ದ್ವಿತೀಯ, ತೃತೀಯ ಸ್ಥಾನ ಗಳಿಸಿದ ವಿದ್ಯಾರ್ಥಿಗಳನ್ನು ಸತ್ಕರಿಸಲಾಯಿತು.

ಈ ಸಂದರ್ಭದಲ್ಲಿ ಡಿಸಿಸಿ ಬ್ಯಾಂಕ್ ನಿರ್ದೇಶಕ ಅಪ್ಪಾಸಾಹೇಬ ಕುಲಗುಡೆ, ಡಿ.ಎಲ್.ಮಿರ್ಜೆ, ಎಮ್.ಎಮ್.ನಿಶಾನದಾರ, ವಿ.ಪಿ.ಪಾಟೀಲ, ಎಲ್.ಬಿ.ಪಾಟೀಲ, ಎಸ್.ಬಿ.ಗಸ್ತಿ, ಎ.ಜಿ.ಹಂಜಿ, ಪಿ.ಬಿ.ಪಾಟೀಲ, ಎಮ್.ಆರ್.ಹೊಸಮನಿ, ಆರ್.ಎಸ್.ಬುಗಡಿಕಟ್ಟಿ, ಪಿ.ಆರ್.ಬಿರಡಿ, ಎಮ್.ಎಸ್.ಜಾಧವ, ಎ.ಎ.ಶೆಟ್ಟಿ, ಪಿ.ಪಿ.ಪವಾರ, ಕಾಲೇಜಿನ ಉಪನ್ಯಾಸಕರು, ಸಿಬ್ಬಂದಿ ವರ್ಗ ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

## ಜನರ ಆರೋಗ್ಯ ರಕ್ಷಣೆ ವೈದ್ಯರ ಆದ್ಯಕರ್ತವ್ಯ

• **ನೇಸರಗಿ:** ಸಾರ್ವಜನಿಕರ ಆರೋಗ್ಯ ರಕ್ಷಣೆಗೆ ಹಗಲು ಇರುಳು ಎನ್ನದೆ ಅವರ ಆರೋಗ್ಯ ರಕ್ಷಣೆ ಮಾಡುವದು ವೈದ್ಯರಾದ ನಮ್ಮೆಲ್ಲರ ಆದ್ಯಕರ್ತವ್ಯ ಆಗಿದೆ ಎಂದು ಡಾ. ಪ್ರಕಾಶ ಹಳ್ಯಾಳ ಹೇಳಿದರು.

ಅವರು ದೇವರಕೊಂಡ ಅಜ್ಜನ ರಸ್ತೆಯಲ್ಲಿ ಇರುವ ವೇದ್ಧಾಂತ ಆಸ್ಪತ್ರೆಯಲ್ಲಿ ವೈದ್ಯರ ದಿನ ಆಚರಣೆ ಮಾಡಿ ಮಾತನಾಡಿದರು.

ಈ ಸಂದರ್ಭದಲ್ಲಿ ನಾಗರಾಜ ತುಬಾಕಿ, ಆಸ್ಪತ್ರೆಯ ಸಿಬ್ಬಂದಿ, ಶಿವಶಕ್ತಿ ಮೆಡಿಕಲನ ಸಿಬ್ಬಂದಿ ಉಪಸ್ಥಿತರಿದ್ದರು.



## ಕಿರುಸುದ್ದಿ

### ಸಾಂಸ್ಕೃತಿಕ ಕಲಾ ಪರಿಮಳ ಕಾರ್ಯಕ್ರಮ ಇಂದು

**ಚಿಕ್ಕೋಡಿ:** ಪಟ್ಟಣದ ಆರ್ ಡಿ ಪಿಯು ಕಾಲೇಜು ಸಭಾಭವನದಲ್ಲಿ ಉನ್ನತಿ ಸ್ವಯಂಸೇವಾ ಸಂಸ್ಥೆ ಚಿಕ್ಕೋಡಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಸಿಟಿಇ ಸಂಸ್ಥೆ ಸಹಯೋಗದಲ್ಲಿ ಜು.4ರಂದು ಬೆಳಿಗ್ಗೆ 10 ಗಂಟೆಗೆ ಸಾಂಸ್ಕೃತಿಕ ಕಲಾ ಪರಿಮಳ-2026 ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಚಿಕ್ಕೋಡಿ-ಸದಲಗಾ ಶಾಸಕ ಗಣೇಶ ಹುಕ್ಕೇರಿ ಉದ್ಘಾಟಿಸಲಿರುವ ಕಾರ್ಯಕ್ರಮ ಅಧ್ಯಕ್ಷತೆಯನ್ನು ಸಿಟಿಇ ಸಂಸ್ಥೆ ಉಪಾಧ್ಯಕ್ಷ ವಿ ಎಸ್ ಮಾಂಜರೇಕರ ವಹಿಸುವರು. ಮುಖ್ಯ ಅತಿಥಿಗಳಾಗಿ ಉಪ ವಿಭಾಗಾಧಿಕಾರಿ ಸುಭಾಷ ಸಂಪಗಾವಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಉಪ ನಿರ್ದೇಶಕಿ ವಿದ್ಯಾವತಿ ಹೆಚ್ ಬಿ, ಸಿಪಿಐ ವಿಶ್ವನಾಥ ಚೌಗಲಾ, ಪುರಸಭೆ ಮುಖ್ಯಾಧಿಕಾರಿ ಜಗದೀಶ ಈಟಿ, ಸಿಟಿಇ ಸಂಸ್ಥೆಯ ನಿರ್ದೇಶಕರಾದ ಎಸ್ ಬಿ ಕುಲಕರ್ಣಿ, ವಿ ಪಿ ಶೇಡಬಾಳೆ, ಓಂಕಾರ ಕುಲಕರ್ಣಿ ಆಗಮಿಸುವರು. ಚಿಕ್ಕೋಡಿ ಶೈಕ್ಷಣಿಕ ಜಿಲ್ಲಾ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘಟನಾ ಕಾರ್ಯದರ್ಶಿ ಎನ್ ಜಿ ಪಾಟೀಲ ಅವರಿಗೆ ಚಿಕ್ಕೋಡಿಯ ಉನ್ನತಿ ಸ್ವಯಂಸೇವಾ ಸಂಸ್ಥೆ ನೀಡುವ 2026ನೇ ವರ್ಷದ ಶಿಕ್ಷಕ ರತ್ನ ಪ್ರಶಸ್ತಿಯನ್ನು ಗಣ್ಯರು ಪ್ರದಾನ ಮಾಡುವರು. ವಿವಿಧ ಕ್ಷೇತ್ರದಲ್ಲಿ ಸಾಧನೆ ಮಾಡಿದ ಸಂಗೀತ ಕಲಾವಿದ ಧನಪಾಲ ಪಟವರ್ಧನ, ಸಾಂಸ್ಕೃತಿಕ ಸಂಘಟಕರಾದ ಕವಿತಾ ಹಟ್ಟಿ, ಡೊಳ್ಳಿನ ಕಲಾವಿದ ಶಂಕರ ಡಂಗೇರ, ನಿವೃತ್ತ ಮುಖ್ಯ ಶಿಕ್ಷಕ ಪ್ರಕಾಶ ಪಾಯನ್ನವರ ಅವರನ್ನು ಸನ್ಮಾನಿಸಲಾಗುವದು. ಮಧ್ಯಾಹ್ನ 12.30ಕ್ಕೆ ಹಮ್ಮಿಕೊಂಡ ಕವಿಗೋಷ್ಠಿ ನಡೆಯಲಿದೆ. ನಂತರ ಸಾಂಸ್ಕೃತಿಕ ಕಲಾ ಪ್ರದರ್ಶನ ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ.

### ಪ್ರತಿ ಎಕರೆಗೆ 60 ಸಾವಿರ ರೂ. ಪತ್ತುನೀಡಲು ಪ್ರಯತ್ನ: ಹುಕ್ಕೇರಿ



**ಚಿಕ್ಕೋಡಿ:** ಬೆಳಗಾವಿ ಡಿಸಿಸಿ ಬ್ಯಾಂಕ್ ವತಿಯಿಂದ ಜಿಲ್ಲೆಯ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಮೂಲಕ ರೈತರಿಗೆ ನೀಡುವ ಬೆಳೆಸಾಲದ ಪತ್ತಿನ ಮಿತಿಯನ್ನು 40 ಸಾವಿರ ದಿಂದ 60 ಸಾವಿರಕ್ಕೆ ಹೆಚ್ಚಿಸಲು ಪ್ರಯತ್ನ ಮಾಡಲಾಗುತ್ತಿದೆ ಎಂದು ಚಿಕ್ಕೋಡಿ ಸದಲಗಾ ಶಾಸಕ, ಬಿಡಿಸಿಸಿ ಬ್ಯಾಂಕ್ ನಿರ್ದೇಶಕ ಗಣೇಶ ಹುಕ್ಕೇರಿ ತಿಳಿಸಿದ್ದಾರೆ. ರೈತರ ಆರ್ಥಿಕ ಹೊರೆಯನ್ನು ಕಡಿಮೆ ಮಾಡಿ, ಕೃಷಿ ಚಟುವಟಿಕೆಗಳಿಗೆ ಅಗತ್ಯ ಆರ್ಥಿಕ ನೆರವು ನೀಡುವ ಉದ್ದೇಶದಿಂದ ಪ್ರತಿ ಎಕರೆಗೆ 60 ಸಾವಿರ ಪತ್ತು ದೊರಕಿಸಿಕೊಡುವ ಎಲ್ಲ ಹಂತದ ಅಗತ್ಯ ಪ್ರಯತ್ನ ಮಾಡಲಾಗುತ್ತಿದೆ. ರೈತರಿಗೆ ಅನುಕೂಲವಾಗುವ ಕ್ರಮಗಳನ್ನು ಕೈಗೊಳ್ಳಲು ಬ್ಯಾಂಕ್ ಬದ್ಧವಾಗಿದೆ. ರೈತರ ಅಭಿವೃದ್ಧಿ, ಸಮೃದ್ಧಿ ಹಾಗೂ ಕೃಷಿ ಕ್ಷೇತ್ರ ಬಲವರ್ಧನೆಗೆ ತಾನು ಹಾಗೂ ಕರ್ನಾಟಕ ಸರ್ಕಾರದ ದೆಹಲಿ ವಿಶೇಷ ಪ್ರತಿನಿಧಿ ಪ್ರಕಾಶ ಹುಕ್ಕೇರಿ ಪ್ರಯತ್ನ ಮಾಡುತ್ತಿದ್ದೇವೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ಜಲಪಾತಗಳಿಗೆ ಪ್ರವೇಶ ನಿಷೇಧ

**ಬೆಳಗಾವಿ:** ಖಾನಾಪುರ ತಾಲೂಕಿನ ಪಶ್ಚಿಮ ಘಟ್ಟ ವ್ಯಾಪ್ತಿಯಲ್ಲಿ ಭಾರಿ ಮಳೆಯಾಗುತ್ತಿರುವ ಹಿನ್ನೆಲೆಯಲ್ಲಿ ಅರಣ್ಯ ಪ್ರದೇಶದಲ್ಲಿರುವ ಜಲಪಾತಗಳಿಗೆ ಸಾರ್ವಜನಿಕರ ಪ್ರವೇಶವನ್ನು ನಿಷೇಧಿಸಲಾಗಿದೆ ಎಂದು ಬೆಳಗಾವಿ ಅರಣ್ಯ ವಿಭಾಗ ತಿಳಿಸಿದೆ.ಸಾರ್ವಜನಿಕರು ಇಲಾಖೆಯ ಸೂಚನೆಗಳನ್ನು ಪಾಲಿಸಿ ಜಲಪಾತಗಳ ವೀಕ್ಷಣೆ ಹಾಗೂ ಚಾರಣಕ್ಕೆ ತೆರಳಬಾರದು. ಅನಧಿಕೃತವಾಗಿ ಅರಣ್ಯ ಪ್ರದೇಶ ಪ್ರವೇಶಿಸುವವರ ವಿರುದ್ಧ ಕರ್ನಾಟಕ ಅರಣ್ಯ ಕಾಯ್ದೆಯಡಿ ಕಠಿಣ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ಬೆಳಗಾವಿ ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ನಿಧನ ಸುದ್ದಿ

### ಮೊಹಮ್ಮದ್ ಬಾಗವಾನ



**ನೇಸರಗಿ:** ಗ್ರಾಮದ ಗಣ್ಯ ತರಕಾರಿ ವ್ಯಾಪಾರಸ್ಥರಾದ ಮೊಹಮ್ಮದ್ ಗೌಸ್ ಬಾಗವಾನ (55) ಅವರು ಹೃದಯಾಘಾತದಿಂದ ನಿಧನರಾಗಿದ್ದಾರೆ. ಮೃತರು ಪತ್ನಿ, ಐದು ಜನ ಪುತ್ರರು ಹಾಗೂ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.

### ಪಾರ್ವತಿ ಹಳ್ಳೂರ



**ಕಬ್ಬೂರ:** ಪಟ್ಟಣದ ಹಳ್ಳೂರ ತೋಟದ ನಿವಾಸಿ ಪಾರ್ವತಿ ವಿಠ್ಠಲ ಹಳ್ಳೂರ (76) ಗುರವಾರ ನಿಧನರಾಗಿದ್ದಾರೆ. ಮೃತರು ಐವರು ಪತ್ರರು, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧುಬಳಗವನ್ನು ಆಗಲಿದ್ದಾರೆ.



ನೇಸರಗಿ: ಐಸಿಎಆರ್-ಕೆಎಲ್ಇ ಕೃಷಿ ವಿಜ್ಞಾನ ಕೇಂದ್ರ, ಮತ್ತಿಕೊಪ್ಪ ಹಾಗೂ ಕೃಷಿ ಇಲಾಖೆಯ ಸಂಯುಕ್ತ ಆಶ್ರಯದಲ್ಲಿ ಜೂನ್1 ರಿಂದ 30, 2026ರವರೆಗೆ ಬೆಳಗಾವಿ ಜಿಲ್ಲೆಯ ಏಳು ತಾಲೂಕುಗಳ 46 ಗ್ರಾಮಗಳಲ್ಲಿ 'ಖೇತ್ ಬಚಾವೋ ಅಭಿಯಾನ ವನ್ನು ಯಶಸ್ವಿಯಾಗಿಹಮ್ಮಿಕೊಳ್ಳಲಾಯಿತು.ಕೃಷಿ ವಿಜ್ಞಾನ ಕೇಂದ್ರದ ಹಿರಿಯ ವಿಜ್ಞಾನಿ ಹಾಗೂ ಮುಖ್ಯಸ್ಥ ಡಾ. ಮಂಜುನಾಥ ಚೌರಡ್ಡಿ ಅವರ ಮಾರ್ಗದರ್ಶನದಲ್ಲಿ ನಡೆದ ಅಭಿಯಾನದಲ್ಲಿ ಒಟ್ಟು6,034ರೈತರು ಭಾಗವಹಿಸಿ ಕೇಂದ್ರದ ಕೃಷಿ ತಜ್ಞರಿಂದ ವೈಜ್ಞಾನಿಕ ಮಾಹಿತಿಯನ್ನು ಪಡೆದುಕೊಂಡರು.

## ಸಂಭ್ರಮದ ಹನುಮಂತ ದೇವರ ಜಾತ್ರೆ

**ಯರಗಟ್ಟಿ:** ಧಾರ್ಮಿಕ ಆಚರಣೆಗಳಿಂದ ಮಾತ್ರ ಮನಸ್ಸಿನ ನೆಮ್ಮದಿ ಶಾಂತಿ ದೊರಕುತ್ತದೆ. ಹಣ ಐಶ್ವರ್ಯ, ಅಧಿಕಾರ ಯಾವುದರಿಂದಲೂ ನೆಮ್ಮದಿ ಸಿಗಲಾರದು ಎಂದು ಸ್ಥಳೀಯ ನಂದಿಮಠದ ಬಾಳಯ್ಯಜ್ಜ ಹೇಳಿದರು. ಸಮೀಪದ ತಲ್ಲೂರ ಗ್ರಾಮದಲ್ಲಿ ಶ್ರೀ ಹನುಮಂತ ದೇವರ ಜಾತ್ರಾ ಮಹೋತ್ಸವದ ನಿಮಿತ್ತ ಗುರುವಾರ ಹಮ್ಮಿಕೊಂಡಿದ್ದ ಧಾರ್ಮಿಕ ಕಾರ್ಯಕ್ರಮಗಳಿಗೆ ಚಾಲನೆ ನೀಡಿ ಮಾತನಾಡಿದ ಅವರು, ಮಠ ಮಾನ್ಯಗಳಲ್ಲಿ ನಡೆಯುವ ದಾರ್ಮಿಕ ಕಾರ್ಯಕ್ರಮಗಳಲ್ಲಿ ಇಂದಿನ ಯುವ ಸಮೂಹ ಶ್ರದ್ದೆಯಿಂದ ಭಾಗವಹಿಸಬೇಕು ಎಂದು ಹೇಳಿದರು. ಪಿಕೆಪಿಎಸ್ ಮಾಜಿ ಅಧ್ಯಕ್ಷ ಶ್ರೀಮಂತ ಅನಿಲಕುಮಾರ ದೇಸಾಯಿ ಮಾತನಾಡಿದರು. ಇದಕ್ಕೂ ಮುಂಚೆ ಬೆಳಗ್ಗೆ ಹನುಮಂತ ದೇವರ ಅಭಿಷೇಕ, ಎಲೆ ಪೂಜೆ, ಶ್ರೀರಾಮ ಜಪ ಹಾಗೂ ಹನುಮಾನ ಚಾಲೀಸ್ ಪಠಣ ಸೇರಿದಂತೆ ವಿವಿಧ ಪೂಜಾ ಕೈಂಕರ್ಯ ನೆರವೇರಿದವು. ಗ್ರಾಮಸ್ಥರು ಓಕಳಿ ಹೊಂಡಕ್ಕೆ ಪೂಜೆ ಸಲ್ಲಿಸಿದರು. ಸಂಜೆ ಯುವಕರು ಪರಸ್ಪರ ನೀರು ಎರಚಿ ಸಂಭ್ರಮಿಸಿದರು. ಮಾರುತಿ ದೇವರ ಬುತ್ತಿ ಪೂಜೆಯೊಂದಿಗೆ ಅಲಂಕಾರ ಮಾಡಲಾಯಿತು. ಮುಖಂಡ ಬಸವರಾಜ ಪೂಜೇರ, ನೀಲಕಂಠ ಶಿವಪೂಜೆ, ಬಸವರಾಜ ಈಟಿ, ವಿಠ್ಠಲ ಕಲ್ಲನ್ನವರ, ಪರಶುರಾಮ ಜಾಧವ, ಶಿವಪ್ಪ ನಡುವಿನಮನಿ, ಶಿವಾಜಿ ಬೋಯಿಟೆ, ಬಸವಣ್ಣೆಪ್ಪ ಕಲಬಸಪ್ಪನವರ, ಪಕ್ಕೀರಪ್ಪ ಉಪ್ಪಾರ, ಬಸವರಾಜ ಕಲ್ಲನ್ನವರ, ಹನಮಂತ ಮನ್ನಿಕೇರಿ, ಬಸವರಾಜ ಕಟ್ಟಿಮನಿ, ಸಂಗಪ್ಪ ಕಾಜಗಾರ, ಲಕ್ಷ್ಮಣ ಈರಗಾರ, ಪಕ್ಕೀರಪ್ಪ ಭಜಂತ್ರಿ, ನಿಂಗಪ್ಪ ದೊಡವಾಡ, ಶಿವಯೋಗಿ ಬಡಿಗೇರ, ಗುಡುಸಾಬ ಸಾಬರ ಮತ್ತಿತರಿದ್ದರು.



ಯರಗಟ್ಟಿ: ಸಮೀಪದ ತಲ್ಲೂರ ಗ್ರಾಮದಲ್ಲಿ ಶ್ರೀ ಹನುಮಂತ ದೇವರ ಜಾತ್ರಾ, ಮಹೋತ್ಸವ ಕಾರ್ಯಕ್ರಮಗಳಿಗೆ ನಂದಿಮಠದ ಬಾಳಯ್ಯಜ್ಜ ಹಾಗೂ ಗಣ್ಯರು ಓಕಳಿ ಹೊಂಡಕ್ಕೆ ಪೂಜೆ ಸಲ್ಲಿಸಿದರು. ಅನಿಲಕುಮಾರ ದೇಸಾಯಿ, ಬಸವರಾಜ ಪೂಜೇರ, ನೀಲಕಂಠ ಶಿವಪೂಜೆ, ಬಸವರಾಜ ಈಟಿ ಮತ್ತಿತರಿದ್ದರು.

## ಬಸ್ ನಿಲ್ದಾಣ ಗುಂಡಿಗಳ ತಾಣ !

ಈರಣ್ಣಾ ಹೂಲ್ಲೂರ

**ಯರಗಟ್ಟಿ:** ಪಟ್ಟಣದ ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಘಟಕದ ಕೇಂದ್ರ ಬಸ್ ನಿಲ್ದಾಣ ಪ್ರವೇಶಿಸುವ ಎರಡು ಬದಿಯ ಮುಖ್ಯ ದ್ವಾರಗಳಲ್ಲಿ ತಗ್ಗು, ಗುಂಡಿ ಬಿದ್ದಿದ್ದು ಬಸ್‌ಗಳ ಓಡಾಟಕ್ಕೆ ಪ್ರಯಾಣಿಕರಿಗೆ, ಸಾರ್ವಜನಕರಿಗೆ ತೊಂದರೆ ಉಂಟಾಗುತ್ತಿದೆ.

ಈ ಹಿಂದೆ ಸಣ್ಣ ಪ್ರಮಾಣದಲ್ಲಿ ಬಿದ್ದಿದ್ದ ಗುಂಡಿಗಳು ಬಾಯಿ ತೆರೆದಿದ್ದು ಕಬ್ಬಿನದ ರಾಡಗಳು ಹೊರಬಂದು ನಾಗರಿಕರ, ಬಸ್‌ಗಳ ಓಡಾಟಕ್ಕೆ ಅಡಚಣೆ ಉಂಟು ಮಾಡಿದೆ.

ದಿಗಂತ ವಿಶೇಷ

ಈ ಕುರಿತು ಘಟಕ ವ್ಯವಸ್ಥಾಪಕರಿಗೆ, ಸಿಬ್ಬಂದಿಗಳಿಗೆ ತಿಳಿಸಿದರೂ ಗಮನಹರಿಸುತ್ತಿಲ್ಲ, ಇದರಿಂದ ಮಳೆ ನೀರು ಗುಂಡಿಗಳಲ್ಲಿ ಸಂಗ್ರಹವಾಗಿ ದ್ವಿಚಕ್ರ ವಾಹನ ಸವಾರರು, ಪಾದಚಾರಿಗಳು ಬಿದ್ದು ಗಾಯಗೊಳ್ಳುತ್ತಿದ್ದಾರೆ.

ಗುಂಡಿ ಮುಚ್ಚಲು ಆಗ್ರಹ:

ದಿನನಿತ್ಯದ ನೂರಾರು ಬಸ್ಸುಗಳ ಓಡಾಟಕ್ಕೆ ತೊಂದರೆ ಆಗಿದೆ. ಬಸ್ ಚಾಲಕ, ನಿರ್ವಾಹಕರು ಬಸ್ ನಿಲ್ದಾಣ ಆವರಣದಲ್ಲಿ ಉದ್ಭವಿಸಿರುವ ಮೊಣಕಾಲುದ್ದದ ಗುಂಡಿಗಳಿಂದ ಜನರು ಬೇಸತ್ತು ಹೋಗಿದ್ದಾರೆ.



ಬಸ್ ನಿಲ್ದಾಣದಲ್ಲಿರುವ ಗುಂಡಿ ಮುಚ್ಚಿ ಎಂದು ಸಾರ್ವಜನಿಕರು ಒತ್ತಾಯಿಸಿದ್ದಾರೆ.

ಗುಂಡಿಗಳಲ್ಲಿನ ಮಳೆ ನೀರು ಬಸ್ ಸಾಗುವಾಗ ಪಾದಚಾರಿಗಳಿಗೆ ತಾಗಿ ತೊಂದರೆ ಉಂಟಾಗುತ್ತಿದೆ. ಸಂಬಂಧಪಟ್ಟ ಅಧಿಕಾರಿಗಳು ಕೂಡಲೇ ಗಮನ ಹರಿಸಿ ಬಸ್ ನಿಲ್ದಾಣ ಆವರಣದಲ್ಲಿ ಉದ್ಭವಿಸಿರುವ ಗುಂಡಿ ಮುಚ್ಚಿಸಬೇಕು.

ಸಾರ್ವಜನಿಕ ಆಸ್ತಿ ಆಗಿರುವ ಬಸ್‌ಗಳ ಅವೈಜ್ಞಾನಿಕ ರಸ್ತೆಯಿಂದ ಹಿಂಬದಿಯಲ್ಲಿ ರಸ್ತೆಗೆ ತಾಗಿ ಸಾಗುತ್ತಿರುವುದರಿಂದ ಬಸ್‌ಗಳಿಗೆ ಆಗುತ್ತಿರುವ ಹಾನಿ ಸರಿಪಡಿಸಬೇಕು ಎಂದು ಸಮಾಜ ಸೇವಕ ಉದಯಕುಮಾರ ಚಿಕ್ಕಣ್ಣವರ, ರಫೀಕ ಡಿ.ಕೆ., ಸೋಮು ರೈನಾಪೂರ, ಚಿದಂಬರ ಕಟ್ಟಿಮನಿ ಆಗ್ರಹಿಸಿದ್ದಾರೆ.

> ಯರಗಟ್ಟಿ ಬಸ್ ನಿಲ್ದಾಣದಲ್ಲಿ ಗುಂಡಿಗಳು ಬಿದ್ದಿರುವ ಮಾಹಿತಿ ಬಂದಿದೆ ಕೂಡಲೇ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ಮಾಡಿ ಎರಡು ದಿನಗಳಲ್ಲಿ ಕಾಮಗಾರಿ ಆರಂಭಿಸಿ ಪ್ರಯಾಣಿಕರಿಗೆ, ಸಾರ್ವಜನಿಕರಿಗೆ ಅನಕೂಲ ಕಲ್ಪಿಸಲಾಗುವುದು
> ■ ಬಿ. ಕೆ. ನಾಗರಾಜ, ಡಿಪೋ ಮ್ಯಾನೇಜರ್, ಸವದತ್ತಿ

## ಆರ್ಥಿಕ ಅಭಿವೃದ್ಧಿ ಕಾರ್ಯಾಗಾರ ಇಂದು

**ಸವದತ್ತಿ:** ನಗರದ ಗಂಗಾ ಶಂಕರ ಮಂಗಲ ಕಾರ್ಯಾಲಯದಲ್ಲಿ ಜು.4ರಂದು ಬೆಳಿಗ್ಗೆ 10 ಗಂಟೆಗೆ ಕ್ರೆಡಿಟ್ ಎಕ್ಸಿಸ್ ಗ್ರಾಮೀಣ ಲಿಮಿಟೆಡ್ ಸೌದತ್ತಿ ಶಾಖೆ ಸವದತ್ತಿ ವತಿಯಿಂದ ಸಾಮಾಜಿಕ ಆರ್ಥಿಕ ಅಭಿವೃದ್ಧಿ ಕಾರ್ಯಾಗಾರ ನಡೆಯಲಿದೆ.ಅಧ್ಯಕ್ಷತೆಯನ್ನು ಬೆಳಗಾವಿಯ ಪ್ರಾದೇಶಿಕ ವ್ಯವಸ್ಥಾಪಕರಾದ ರವಿ ಎಸ್.ಎನ್ ಹಾಗೂ ವಿಭಾಗೀಯ ವ್ಯವಸ್ಥಾಪಕರು ಹುಬ್ಬಳ್ಳಿ ಯ ಆನಂದ ಲಮಾಣಿ ವಹಿಸಲಿದ್ದಾರೆ. ಸವದತ್ತಿ ಪೊಲೀಸ್ ಠಾಣೆಯ ಪಿಐ ಸುರೇಶ ಬೆಂಡೇಗುಂಬಳ ಹಾಗೂ ಪಿ ಎಸ್ ಐ ರವರಾದ ಲಕ್ಷ್ಮಣ್ ಆರ್. ಗೌಡಿ ಉದ್ಘಾಟಿಸಲಿದ್ದಾರೆ.ತಾಲೂಕ ದಂಡಾಧಿಕಾರಿಗಳಾದ ಮಲ್ಲಿಕಾರ್ಜುನ ಎಂ ಹೆಗ್ಗಣ್ಣವರ್ ಹಾಗೂ ತಾಲೂಕು ಆರೋಗ್ಯ ಅಧಿಕಾರಿಗಳಾದ ಡಾ. ಶ್ರೀಪಾದ್ ಸಬನೀಸ ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದಾರೆ.

## ವಿಬಿಜಿ ರಾಮ್‌ಜಿ ಅನುಷ್ಠಾನಕ್ಕೆ ತರಬೇತಿ

**ಚನ್ನಮ್ಮನ ಕಿತ್ತೂರು:** ಗ್ರಾಮೀಣ ಪ್ರದೇಶಗಳಲ್ಲಿ ಉದ್ಯೋಗ ಸೃಷ್ಟಿ, ಸುಸ್ಥಿರ ಜೀವನೋಪಾಯಕ್ಕೆ ಉತ್ತೇಜನ ಹಾಗೂ ಗ್ರಾಮೀಣ ಮೂಲಸೌಕರ್ಯ ಅಭಿವೃದ್ಧಿಗೆ ಒತ್ತು ನೀಡುವ ವಿ.ಬಿ.ಜಿ. ರಾಮ್-ಜಿ ಯೋಜನೆಯನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವ ಉದ್ದೇಶದಿಂದ ತಾಲೂಕು ಪಂಚಾಯತಿ ಸಭಾಂಗಣದಲ್ಲಿ ಶುಕ್ರವಾರ ಒಂದು ದಿನದ ತರಬೇತಿ ಕಾರ್ಯಾಗಾರ ನಡೆಯಿತು.

ತಾಲೂಕು ಪಂಚಾಯತಿ ಕಾರ್ಯನಿರ್ವಾಹಕ ಅಧಿಕಾರಿ ನಿಂಗಪ್ಪ ಮಸಳಿ ಅವರ ಅಧ್ಯಕ್ಷತೆಯಲ್ಲಿ ನಡೆದ ಕಾರ್ಯಾಗಾರದಲ್ಲಿ ಯೋಜನೆಯ ವಿವಿಧ ಆಯಾಮಗಳ ಕುರಿತು ಅಧಿಕಾರಿಗಳು ಹಾಗೂ ಸಿಬ್ಬಂದಿಗೆ ಸಮಗ್ರ ಮಾಹಿತಿ ನೀಡಲಾಯಿತು.

ಗ್ರಾಮ ಪಂಚಾಯಿತಿಗಳ ಮೂಲಕ ಯೋಜನೆಯನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸಲು ಅಗತ್ಯವಿರುವ ಆಡಳಿತಾತ್ಮಕ ಹಾಗೂ ತಾಂತ್ರಿಕ ಅಂಶಗಳ ಕುರಿತು ವಿವರಿಸಲಾಯಿತು.

ಯೋಜನೆಯ ಮಾಸ್ಟರ್ ಟ್ರೈನರ್ ಸಂಗನಗೌಡ ಹಂದ್ರಾಳ ಅವರು ಯೋಜನೆಯ ಉದ್ದೇಶ, ಅನುಷ್ಠಾನದ ವಿಧಾನ, ಕಾರ್ಯನಿರ್ವಹಣೆಯ ಮಾರ್ಗಸೂಚಿಗಳು, ದಾಖಲಾತಿ ನಿರ್ವಹಣೆ, ಆನ್‌ಲೈನ್ ಮಾಹಿತಿ ದಾಖಲಾತಿ, ಮೇಲ್ವಿಚಾರಣೆ ಹಾಗೂ ವರದಿ ಸಲ್ಲಿಕೆ ಕುರಿತು ವಿವರವಾಗಿ ಮಾಹಿತಿ ನೀಡಿದರು. ಯೋಜನೆಯಡಿ ಗ್ರಾಮೀಣ ಕಾರ್ಮಿಕರಿಗೆ ಉದ್ಯೋಗಾವಕಾಶಗಳನ್ನು ಪರಿಣಾಮಕಾರಿಯಾಗಿ ಕಲ್ಪಿಸುವುದು, ಗ್ರಾಮ ಮಟ್ಟದಲ್ಲಿ ಆಸ್ತಿಗಳ ನಿರ್ಮಾಣ, ಅಭಿವೃದ್ಧಿ ಕಾಮಗಾರಿಗಳ ಗುಣಮಟ್ಟ ಕಾಪಾಡುವುದು ಹಾಗೂ ಯೋಜನೆಯ ಪಾರದರ್ಶಕ ಅನುಷ್ಠಾನಕ್ಕೆ ಒತ್ತು ನೀಡಬೇಕು ಎಂದು ತಿಳಿಸಿದರು.





ತರಬೇತಿ ವೇಳೆ ಅಧಿಕಾರಿಗಳು ಕೇಳಿದ ಪ್ರಶ್ನೆಗಳಿಗೆ ಉತ್ತರಿಸಿ, ಯೋಜನೆಯ ಪರಿಣಾಮಕಾರಿ ಅನುಷ್ಠಾನಕ್ಕೆ ಅಗತ್ಯವಾದ ಸಲಹೆಗಳನ್ನು ನೀಡಿದರು.

ಕಾರ್ಯಾಗಾರದಲ್ಲಿ ಚನ್ನಮ್ಮನ ಕಿತ್ತೂರು ತಾಲೂಕಿನ ಎಲ್ಲ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು, ತಾಂತ್ರಿಕ ಸಹಾಯಕರು, ಗಣಕಯಂತ್ರ ನಿರ್ವಾಹಕರು, ಬೇರ್‌ಫುಟ್ ಟೆಕ್ನಿಷಿಯನ್‌ಗಳು, ಗ್ರಾಮ ಕಾಯಕ ಮಿತ್ರರು ಸೇರಿದಂತೆ ಯೋಜನೆಯ ಅನುಷ್ಠಾನದಲ್ಲಿ ತೊಡಗಿರುವ ಸಿಬ್ಬಂದಿ ಭಾಗವಹಿಸಿದ್ದರು.

ಸಹಾಯಕ ನಿರ್ದೇಶಕರು (ವಿಬಿ-ಜಿ ರಾಮ್ ಜಿ) ಮಹಮ್ಮದ್ ಗೌಸ್ ರಿಸಲ್ದಾರ್, ಸಹಾಯಕ ನಿರ್ದೇಶಕರು (ಪಂರಾ) ವಿಜಯ ಪಾಟೀಲ್ ಹಾಗೂ ವಿ.ಬಿ.ಜಿ. ರಾಮ್-ಜಿ ಯೋಜನೆಯ ತಾಲೂಕು ಮಟ್ಟದ ಸಿಬ್ಬಂದಿಗಳು ಉಪಸ್ಥಿತರಿದ್ದರು.

## ಮಾದಕ ವಸ್ತು ವಿರೋಧಿ ಆಂದೋಲನ

» ನೇರ ಪ್ರಸಾರ
» ವಿದ್ಯಾರ್ಥಿಗಳು ಭಾಗಿ

**ಖಾನಾಪುರ:** ಮಾದಕ ವಸ್ತುಗಳ ಸೇವನೆಯಿಂದ ಆಗುವ ದುಷ್ಪರಿಣಾಮಗಳ ಬಗ್ಗೆ ವಿದ್ಯಾರ್ಥಿಗಳಿಗೆ ಅರಿವು ಮೂಡಿಸುವ ನಿಟ್ಟಿನಲ್ಲಿ ಮಂಗಳವಾರ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ವತಿಯಿಂದ ಮಾದಕ ವಸ್ತು ವಿರೋಧಿ ಆಂದೋಲನ ಕಾರ್ಯಕ್ರಮದ ನೇರ ಪ್ರಸಾರದ ವ್ಯವಸ್ಥೆ ಕಲ್ಪಿಸಲಾಗಿತ್ತು. ಧರ್ಮಸ್ಥಳದಿಂದ ಇಡೀ ರಾಜ್ಯಾದ್ಯಂತ ನೇರ ಪ್ರಸಾರದಲ್ಲಿ ಜರುಗಿದ ಈ ಕಾರ್ಯಕ್ರಮದಲ್ಲಿ ತಾಲೂಕಿನ ನಾಲ್ಕು ಶಿಕ್ಷಣ ಸಂಸ್ಥೆಗಳಿಂದ ನೂರಾರು ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಪಟ್ಟಣದ ಸರಕಾರಿ ಪದವಿ ಪೂರ್ವ ಕಾಲೇಜು, ಮುಗಳಿಹಾಳದ ಕರ್ನಾಟಕ ಪಬ್ಲಿಕ್ ಸ್ಕೂಲ್ ಮತ್ತು ಪಿಯು ಕಾಲೇಜು, ಪಾರಿಶ್ವಾಡದ ಬಿ.ವಿ ಸಂಬರಗಿ ಸಂಯುಕ್ತ ಪದವಿಪೂರ್ವ ಕಾಲೇಜು ಮತ್ತು ಕಕ್ಕೇರಿ ಗ್ರಾಮದ ಬಿಷ್ಠಾದೇವಿ ಪ್ರೌಢಶಾಲೆಗಳಲ್ಲಿ ಏಕಕಾಲಕ್ಕೆ ಆಯೋಜಿಸಿದ್ದ ನೇರ ಪ್ರಸಾರದ ಕಾರ್ಯಕ್ರಮ ಆಯೋಜಿಸಲಾಗಿತ್ತು.

ನೇರ ಪ್ರಸಾರ ಉದ್ದೇಶಿಸಿ ಮಾತನಾಡಿದ ಧರ್ಮಸ್ಥಳದ ಧರ್ಮಾಧಿಕಾರಿ ಡಾ.ವೀರೇಂದ್ರ ಹೆಗಡೆ ಮತ್ತು ಹೇಮಾವತಿ ಹೆಗಡೆ ದಂಪತಿಗಳು ಹಾಗೂ ಸಂಪನ್ಮೂಲ ವ್ಯಕ್ತಿಗಳು ದುಶ್ಚಟಗಳಿಂದ ಆಗುವ ದುಷ್ಪರಿಣಾಮಗಳ ಬಗ್ಗೆ ಮತ್ತು ದುಶ್ಚಟಗಳಿಂದ ಮುಕ್ತ ಜೀವನದ ಬಗ್ಗೆ ವಿವರಿಸಿದರು.

ಕಾರ್ಯಕ್ರಮದ ಆರಂಭದಲ್ಲಿ ಯೋಜನೆಯ ಅಧಿಕಾರಿಗಳು ಸ್ವಾಸ್ಥ್ಯ ಸಂಕಲ್ಪ ಕಾರ್ಯಕ್ರಮದ ಉದ್ದೇಶಗಳ ಬಗ್ಗೆ ವಿವರಿಸಿದರು. ಬಳಿಕ ಆಹ್ವಾನಿತರಿಂದ ಕಾರ್ಯಕ್ರಮದ ಉದ್ಘಾಟನೆ ನೆರವೇರಿತು. ಒಂದು ಗಂಟೆಗಳ ಕಾಲ ನಡೆದ ನೇರ ಪ್ರಸಾರದ ಬಳಿಕ ಕಾರ್ಯಕ್ರಮದ ಸಮಾರೋಪ ಜರುಗಿತು. ನೇರ ಪ್ರಸಾರ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಎಲ್ಲ ವಿದ್ಯಾರ್ಥಿಗಳಿಗೆ ಪ್ರತಿಜ್ಞಾವಿಧಿ ಬೋಧಿಸಲಾಯಿತು. ಈ ಸಂದರ್ಭದಲ್ಲಿ ಧರ್ಮಸ್ಥಳ ಯೋಜನೆಯ ಜಿಲ್ಲಾ ಜನಜಾಗೃತಿ ಸಮಿತಿ ಸದಸ್ಯರಾದ ರೂಪಾ ಕುಲಕರ್ಣಿ, ಯಲ್ಲಪ್ಪ ಸಾಗರ, ಯೋಜನಾಧಿಕಾರಿ ಗಣಪತಿ ನಾಯ್ಕ, ಸರ್ಕಾರಿ ಪಿಯು ಕಾಲೇಜು ಅಭಿವೃದ್ಧಿ ಸಮಿತಿ ಉಪಾಧ್ಯಕ್ಷ ಪ್ರಸನ್ನ ಕುಲಕರ್ಣಿ, ಪ್ರಾಚಾರ್ಯ ಎಸ್.ಕೆ ಅಕಿವಾಟ, ವಲಯ ಮೇಲ್ವಿಚಾರಕಿ ವಾಣಿಶ್ರೀ, ಸಿ.ಎಸ್.ಸಿ ನೋಡಲ್ ಅಧಿಕಾರಿ ಜಿತೇಂದ್ರ, ಸೇವಾ ಪ್ರತಿನಿಧಿ ವಿದ್ಯಾ ಸೇರಿದಂತೆ ವಿದ್ಯಾರ್ಥಿಗಳು, ಬೋಧಕರು ಇದ್ದರು.



## ಬಿಇಓ ರಾಮಪ್ಪನವರ ಬೀಳ್ಕೊಡುಗೆ: ಶಾಸಕ ಹಲಗೇಕರ ಭಾಗಿ

**ಖಾನಾಪುರ:** ಪಟ್ಟಣದ ಮರಾಠಾ ಮಂಡಳ ಪಿಯು ಕಾಲೇಜಿನ ಸಭಾಗೃಹದಲ್ಲಿ ಗುರುವಾರ ಜರುಗಿದ ಸಮಾರಂಭದಲ್ಲಿ ಜೂ.30ರಂದು ವಯೋನಿವೃತ್ತಿ ಹೊಂದಿದ ಖಾನಾಪುರ ಬಿಇಓ ರಾಮಪ್ಪ ಅವರನ್ನು ತಾಲೂಕಿನ ವತಿಯಿಂದ ಆತ್ಮೀಯವಾಗಿ ಸತ್ಕರಿಸಿ ಬೀಳ್ಕೊಡಲಾಯಿತು. ಶಾಸಕ ವಿಠ್ಠಲ ಹಲಗೇಕರ ಅವರ ಅಧ್ಯಕ್ಷತೆಯಲ್ಲಿ ಜರುಗಿದ ಸಮಾರಂಭದಲ್ಲಿ ತಾಲೂಕಿನ ಶಿಕ್ಷಕರು ಸೇರಿ ಸಿದ್ಧಪಡಿಸಿದ್ದ ರಾಮಪ್ಪ ಅವರು ನಡೆದುಬಂದ ಹಾದಿಯ ಕುರಿತಾದ ಕಿರುಚಿತ್ರವನ್ನು ಪ್ರದರ್ಶಿಸಲಾಯಿತು. ಬಳಿಕ ಕಾರ್ಯಕ್ರಮ ಉದ್ದೇಶಿಸಿ ಮಾತನಾಡಿದ ವಿವಿಧ ಆಹ್ವಾನಿತರು ರಾಮಪ್ಪ ಅವರು ಶಿಕ್ಷಣ ಇಲಾಖೆಯಲ್ಲಿ ಕೈಗೊಂಡ ಸೇವೆಯನ್ನು ಪ್ರಶಂಸಿಸಿದರು.

ಕಾರ್ಯಕ್ರಮದ ಅಂಗವಾಗಿ ಶಾಸಕ ಹಲಗೇಕರ ಸೇರಿದಂತೆ ಶಿಕ್ಷಣ ಇಲಾಖೆಯ ಅಧಿಕಾರಿಗಳು, ಸಿಬ್ಬಂದಿ, ಶಿಕ್ಷಕರ ಸಂಘದ ಪದಾಧಿಕಾರಿಗಳು, ರಾಮಪ್ಪ ಅವರೊಂದಿಗೆ ಕರ್ತವ್ಯ ನಿರ್ವಹಿಸಿದ ಶಿಕ್ಷಕರು, ಸ್ನೇಹಿತರು, ಶಿಕ್ಷಕರು ಹಾಗೂ ವಿವಿಧ ಗ್ರಾಮ ಪಂಚಾಯತಿಗಳ ಪಿಡಿಓಗಳು, ಸಿಬ್ಬಂದಿ ರಾಮಪ್ಪ ದಂಪತಿಯನ್ನು ಆತ್ಮೀಯವಾಗಿ ಸತ್ಕರಿಸಿದರು. ಸತ್ಕಾರ ಸ್ವೀಕರಿಸಿ ಮಾತನಾಡಿದ ರಾಮಪ್ಪ ಶಿಕ್ಷಣ ಇಲಾಖೆಯಲ್ಲಿನ ತಮ್ಮ 35 ವರ್ಷಗಳ



ಅವಧಿಯ ಸುದೀರ್ಘ ಸೇವೆಯನ್ನು ಸ್ಮರಿಸಿ ಗೌರವಿಸಿದ ಎಲ್ಲರನ್ನೂ ಅಭಿನಂದಿಸಿದರು.

ಈ ಸಂದರ್ಭದಲ್ಲಿ ತಾಲೂಕಿನ ಶಿಕ್ಷಕರು, ಶಿಕ್ಷಕರ ಸಂಘಗಳ ಪದಾಧಿಕಾರಿಗಳು ಮತ್ತು ಆಹ್ವಾನಿತರು ಇದ್ದರು. ವಿವೇಕ ಕುರಗುಂದ ಕಾರ್ಯಕ್ರಮ ನಿರ್ವಹಿಸಿದರು. ಶಂಕರ ಕಮ್ಮಾರ ಪ್ರಾಸ್ತಾವಿಕ ಮಾತನಾಡಿದರು, ಬಸವರಾಜ ಜನಕಟ್ಟಿ ಸ್ವಾಗತಿಸಿದರು. ಮಂಜುನಾಥ

## ಉತ್ತಮ ತಾಯಿ, ಸೊಸೆ, ಅತ್ತೆಯಾಗುವುದೂ ಒಂದು ದೊಡ್ಡ ಸಾಧನೆ

**ರಾಯಬಾಗ:** ತಾಯಂದಿರು ಮಕ್ಕಳಿಗೆ ಮನೆಯಿಂದಲೇ ಉತ್ತಮ ಸಂಸ್ಕಾರ, ಜ್ಞಾನ ಹಾಗೂ ಜೀವನ ಮೌಲ್ಯಗಳನ್ನು ಕಲಿಸಬೇಕು. ಮಕ್ಕಳಿಗೆ ತಮ್ಮ ಜೀವನದಲ್ಲಿ ಎದುರಿಸಿದ ಕಷ್ಟದ ದಿನಗಳ ಅನುಭವಗಳನ್ನು ತಿಳಿಸುವ ಮೂಲಕ ಅವರಲ್ಲಿ ಆತ್ಮವಿಶ್ವಾಸ ಮತ್ತು ಜವಾಬ್ದಾರಿಯ ಮನೋಭಾವ ಬೆಳೆಸಬೇಕು ಎಂದು ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತೆ ಕವಿತಾ ಮಿಶ್ರಾ ಹೇಳಿದರು.

ಪಟ್ಟಣದ ವಿಶ್ವಚೇತನ ಇಂಗ್ಲಿಷ್ ಮಾಧ್ಯಮ ಶಾಲೆಯಲ್ಲಿ ಗುರುವಾರ ನಡೆದ ಸರಸ್ವತಿದೇವಿ ಪೂಜಾ ಕಾರ್ಯಕ್ರಮ ಹಾಗೂ ಉಪನ್ಯಾಸ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಇಂದಿನ ಮಕ್ಕಳು ಭವಿಷ್ಯದ ಸಮಾಜದ ನಿರ್ಮಾತೃಗಳು. ಅವರ ವ್ಯಕ್ತಿತ್ವ ರೂಪುಗೊಳ್ಳುವಲ್ಲಿ ತಾಯಿಯ ಪಾತ್ರ ಅತ್ಯಂತ ಮಹತ್ವದ್ದಾಗಿದೆ. ಶಿಕ್ಷಣದ ಜೊತೆಗೆ ಸಂಸ್ಕಾರ, ಮಾನವೀಯತೆ ಮತ್ತು ಹಿರಿಯರ ಗೌರವದಂತಹ ಮೌಲ್ಯಗಳನ್ನು ಮಕ್ಕಳಿಗೆ ಕಲಿಸುವ ಜವಾಬ್ದಾರಿ ತಾಯಂದಿರ ಮೇಲಿದೆ ಎಂದು ಹೇಳಿದರು.

ಪ್ರಧಾನ ಗುರುಮಾತೆ ವಿದ್ಯಾ ನಾಯಿಕ ಮಾತನಾಡಿ, ತಂದೆ ಮತ್ತು ತಾಯಿ ಮಕ್ಕಳೊಂದಿಗೆ ಆತ್ಮೀಯವಾಗಿ ಮಾತನಾಡುವ ಮೂಲಕ ಅವರ ಸಮಸ್ಯೆಗಳನ್ನು



ಅರಿತುಕೊಳ್ಳಬೇಕು. ತಮ್ಮ ಬದುಕಿನ ಅನುಭವಗಳು ಹಾಗೂ ಕಷ್ಟದ ದಿನಗಳನ್ನು ಅವರ ಜೊತೆ ಹಂಚಿಕೊಳ್ಳುವುದರಿಂದ ಮಕ್ಕಳಲ್ಲಿ ಧೈರ್ಯ ಮತ್ತು ಜೀವನ ಮೌಲ್ಯಗಳ ಅರಿವು ಮೂಡುತ್ತದೆ ಎಂದು ತಿಳಿಸಿದರು. ನಂದಿಕುರಳಿ ಗ್ರಾಮದ ಪಂಚಲಿಂಗೇಶ್ವರ ಮಠದ ವೀರಭದ್ರ ಸ್ವಾಮೀಜಿ,ಸಂಸ್ಥೆಯ ಅಧ್ಯಕ್ಷ ಚೈತನ ನಾಯಿಕ,ರಾಯಬಾಗ ಗ್ರಾಮೀಣ ಪಿಡಿಓ ಹಣಮಂತ ಖಿಲಾರೆ,ಕರ್ನಾಟಕ ಗ್ರಾಮೀಣ ಬ್ಯಾಂಕಿನ ಪ್ರಧಾನ ವ್ಯವಸ್ಥಾಪಕ ವಾಸುದೇವ ನಾಯಿಕ ಮಾತನಾಡಿದರು.

## ಭೂಮಿ ತೇವಾಂಶ ಅರಿತು ಬಿತ್ತನೆ ಮಾಡಿ: ಸವದಿ

**ಅಡಹಳ್ಳಿ :** ರಾಜ್ಯದಲ್ಲಿ ಬರಗಾಲದ ಛಾಯೆ ಎದ್ದು ಕಾಣುತ್ತಿದ್ದು, ರೈತರು ಬಿತ್ತನೆ ಮಾಡಲು ಪೈಪೋಟಿ ಮಾಡದೇ ಸಂಪೂರ್ಣ ಮಳೆಯಾದ ನಂತರ ಭೂದೇವಿಯ ಉಡಿ ತುಂಬಬೇಕು ಎಂದು ಶಾಸಕ ಲಕ್ಷ್ಮಣ ಸವದಿ ಹೇಳಿದರು.

ಅವರು ಸಮೀಪದ ಕೋಹಳ್ಳಿ ಗ್ರಾಮದ ಮಲ್ಲೇವ್ವಮಡ್ಡಿ ಹತ್ತಿರ ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆಯ ವತಿಯಿಂದ 150 ಕೋಟಿ ರೂ, ವೆಚ್ಚದಲ್ಲಿ ನಿರ್ಮಿಸಲಾಗುವ ಬ್ರಿಜ್ ಕಂ ಬಾಂದಾರ ನಿರ್ಮಾಣ ಕಾಮಗಾರಿಗೆ ಭೂಮಿ ಪೂಜೆ ನೇರವೇರಿಸಿ ಮಾತನಾಡಿ, ಅಥಣಿ ತಾಲೂಕಿನಲ್ಲಿ ನೀರಾವರಿ ಮಾಡುವ ಉದ್ದೇಶದಿಂದ ಕರಿಮಸೂತಿ, ಕೊಟ್ಟಲಗಿ ಅಮ್ಮಾಜೇಶ್ವರಿ, ತುಂಗಳ ಸಾವಳಗಿ ಯೋಜನೆ ಹಾಗೂ ಕೆರೆ ತುಂಬುವ ಯೋಜನೆ ಮಾಡಲಾಗಿದ್ದು, ಮಳೆರಾಯಣ ಕೃಪೆಯಾದರೇ ಈ ಎಲ್ಲ ಯೋಜನೆಗಳು ಯಶಸ್ವಿಯಾಗಿ ರೈತನ ಬರಡು ಭೂಮಿಗೆ ಹಸಿರು ನಳನಳಿಸುತ್ತದೆ. ಕೃಷಿಕನ ಮೊಗದಲ್ಲಿ ಮಂದಹಾಸ ಮೂಡಬೇಕಾದರೇ ನಾವು ನೀವೆಲ್ಲಾ ವರುಣನ ಬರುವಿಕೆಗಾಗಿ



ಅಲ್ಲಿಯವರೆಗೆ ಕಾಯಬೇಕಾಗಿದ್ದು, ರೈತರು ಬಿತ್ತನೆ ಮಾಡಿ ಬೀಜ, ಗೊಬ್ಬರಕ್ಕಾಗಿ ಖರ್ಚು ಮಾಡಬಾರದು ಎಂದರು.

20 ವರ್ಷಗಳ ಹಿಂದೆ ನಮ್ಮ ಊರು, ನಮ್ಮ ಬಾಂದಾರ ಯೋಜನೆಯಡಿ ಪಾಂಡೇಗಾಂವ, ಪಾರ್ಥನಹಳ್ಳಿ ಸೇರಿದಂತೆ ಅನೇಕ ಗ್ರಾಮಗಳಲ್ಲಿ ಇರುವ ಬಾಂದಾರ ಹಾಗೂ ಕೋಹಳ್ಳಿ ಗ್ರಾಮದ ಬಾಂದಾರ ಅಭಿವೃದ್ಧಿ ಮಾಡಲು ನೀರಾವರಿ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಭೂ ನ್ಯಾಯ ಮಂಡಳಿ ಸದಸ್ಯ ಸಂಗಯ್ಯಾ ಪೂಜಾರಿ ಮಾತನಾಡಿದರು.

ಈ ವೇಳೆ ಸಣ್ಣ ನೀರಾವರಿ ಇಲಾಖೆಯ ಸ.ಕಾ. ಅ. ಪ್ರವೀಣ ಪಾಟೀಲ, ಸಂಗಯ್ಯಾ ಪೂಜಾರಿ, ಶೇಖರ ನೇಮಗೌಡ, ತುಕಾರಾಮ ದೇವಖಾತೆ, ನೂರಅಹ್ಮದ್ ಡೊಂಗರಗಾಂವ, ಸದಾಶಿವ ಹರಪಾಳೆ, ಉಮ್ಮಯ್ಯಾ ಪೂಜಾರಿ, ದುಂಡಪ್ಪ ಡಂಬಳಿ, ದಿಲೀಪ ಮರಗಾಳೆ, ಮಲಗೌಡ ಪಾಟೀಲ, ಸದಾಶಿವ ಮಾಳಿ, ಶಿವಗೌಡ ಮುಧೋಳ, ಸಹದೇವ ಸೂರ್ಯವಂಶಿ, ಲಿಂಗರಾಜ ಮುಧೋಳ, ಚಿದಾನಂದ ತಳಕೇರಿ, ಸಿಕಂದರ ಮುಜಾವರ, ಗುತ್ತಿಗೆದಾರ ಬಿ. ವಾಯ್. ಪಾತ್ರೂಟ, ಸದಾಶಿವ ಸವದಿ, ಮಹೇಶ ಬಡಕೆ, ಲಕ್ಷ್ಮಣ ಉಮರಾಣಿ, ತುಕಾರಾಮ ಫಡತಾರೆ, ದೊಂಡಿಭಾ ನಾಗಣೆ, ಜಟ್ಟೆಪ್ಪ ಮಿರ್ಜಿ, ಗಣಪತಿ ಮರಗಾಳೆ, ಮಲ್ಲಪ್ಪ ಬಡಚಿ, ಗುರು ಮಂಟೂರ, , ಪರಶುರಾಮ್ ಮಾದರ, ಪುರಂದರ ನಾಟೀಕಾರ, ಬಸಪ್ಪ ನಾವಿ ಸೇರಿದಂತೆ ಅನೇಕರು ಇದ್ದರು.

### ವಿದ್ಯುತ್ ವ್ಯತ್ಯಯ ಇಂದು

**ಸವದತ್ತಿ:** 110 ಕೆ ವಿ ಮುನವಳ್ಳಿ ಆರ್ಟಗಲ್ ಮಾರ್ಗದ ಟವರ್ ಸಂಖ್ಯೆ 56 57 ನಡುವೆ ಎಸ್ ಸಿ ಮಾರ್ಗ ನಿರ್ಮಿಸುವ ಕಾಮಗಾರಿಯನ್ನು ಕೈಗೊಳ್ಳುತ್ತಿರುವುದರಿಂದ ಜು.4ರಂದು ವಿವಿಧೆಡೆ ವಿದ್ಯುತ್ ವ್ಯತ್ಯಯ ಉಂಟಾಗಲಿದೆ.

110 ಕೆ ವಿ ಮುನವಳ್ಳಿ ಆರಳಿಗಲ್ ವಿದ್ಯುತ್ ವಿತರಣಾ ಕೇಂದ್ರದಿಂದ ಪೂರೈಕೆ ಆಗುತ್ತಿರುವ ಗ್ರಾಮಗಳಾದ ಮುನವಳ್ಳಿ ಪಟ್ಟಣ ಸಿಂದೋಗಿ ಗೊಂದಿ ಕಲ್ಲೋಳಿ ಯಕ್ಕೇರಿ, ಹೀರೂರು ಭಂಡಾರಹಳ್ಳಿ ನವಿಲು ತೀರ್ಥ ಡ್ಯಾಮ್ ತೆರೆದಕೊಪ್ಪ ತೆಗ್ಗಿಹಾಳ ಜಕಬಾಳ ಕಿಟದಾಳ ಆರ್ಟಗಲ್ ಬಸರಗಿ ಹೂಲಿ ಮಣಿಕಟ್ಟಿ ಹುಲಿಕಟ್ಟಿ ಬಸಿದೋಣಿ ಸಿರಸಂಗಿ ಗೋವನಕೊಪ್ಪ ಕಲ್ಲಾಪುರ ಹಳಕಟ್ಟಿ ಕಗದಾಳ ಆಚಮಟ್ಟಿ ಗ್ರಾಮಗಳ ಮತ್ತು ಗ್ರೀನ್ ಕೋ ಸ್ಥಾವರದ ವಿದ್ಯುತ್ ಪೂರೈಕೆಯಲ್ಲಿ ಬೆಳಗ್ಗೆ ಎಂಟು ಗಂಟೆಯಿಂದ ಮಧ್ಯಾಹ್ನ 2 ಗಂಟೆಯವರೆಗೆ ವಿದ್ಯುತ್ ಸಂಪೂರ್ಣವಾಗಿ ನಿಲುಗಡೆಯಾಗಲಿದೆ ಆದ್ದರಿಂದ ಗ್ರಾಹಕರು ಮತ್ತು ಗ್ರಾಮಸ್ಥರು ಸಹಕರಿಸಬೇಕು ಎಂದು ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಕಾರ್ಯ ಮತ್ತು ಪಾಲನೆ ಉಪ ವಿಭಾಗ ಹೂ ವಿ ಸ ಕಂಪನಿ ಸವದತ್ತಿ ಇವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ವಿವಿಧ ಕಾಮಗಾರಿಗಳಿಗೆ ಭೂಮಿ ಪೂಜೆ

ಯಮಕನಮರಡಿ : ದಡ್ಡಿ ಜಿಲ್ಲಾ ಪಂಚಾಯತ್ ವ್ಯಾಪ್ತಿಗೆ ಬರುವ ಗ್ರಾಮಗಳಲ್ಲಿ ವಿವಿಧ ಯೋಜನೆಯಡಿ, ರಾಜ್ಯ ಯುವ ಪ್ರಧಾನ ಕಾರ್ಯದರ್ಶಿ ರಾಹುಲ್ ಜಾರಕಿಹೊಳಿ ಗುದ್ದಲಿ ಪೂಜೆ ನೆರವೇರಿಸಿ ಚಾಲನೆ ನೀಡಿದರು.

ಬೆನಕನಹೊಳಿ ಗ್ರಾಮದಲ್ಲಿ ಪಂಚಾಯತ್ ಇಲಾಖೆಯ ಪರಿಶಿಷ್ಟ ಪಂಗಡ, (ಎಸ್ ಟಿ ) ವಲಯಗಳಲ್ಲಿನ ಸರಕಾರಿ ಶಾಲೆಗಳ ಹೊಸ ಕೊಠಡಿ ನಿರ್ಮಾಣ ಯೋಜನೆಯಡಿ 43.50 ಲಕ್ಷ ರೂ ವೆಚ್ಚದಲ್ಲಿ ಕೆ. ಎಚ್ ಪಿ ಶಾಲೆಯ ಕೊಠಡಿ ನಿರ್ಮಾಣ, ಮನಗುತ್ತಿ ಗ್ರಾಮದಲ್ಲಿ ಸಿಎಮ್ ಐಡಿಪಿ ಯೋಜನೆಯಡಿ 30 ಲಕ್ಷ ರೂ ವೆಚ್ಚದಲ್ಲಿ ಸಿ. ಸಿ ರಸ್ತೆ ನಿರ್ಮಾಣ ಕಾಮಗಾರಿ ಮತ್ತು ಲೋಕೋಪಯೋಗಿ ಇಲಾಖೆ ಯೋಜನೆಯಡಿ 30 ಲಕ್ಷ ವೆಚ್ಚದಲ್ಲಿ ಸರಕಾರಿ ಮರಾಠಿ ಶಾಲೆಯ 2 ಕೊಠಡಿಗಳ ನಿರ್ಮಾಣ,ಹಾಗೂ ಹುನ್ನೂರ -ಮಾಸ್ತಿಹೊಳಿ ಗ್ರಾಮದಲ್ಲಿ ಲೋಕೋಪಯೋಗಿ ಇಲಾಖೆ ಯೋಜನೆಯಡಿ 90 ಲಕ್ಷ ರೂ ವೆಚ್ಚದಲ್ಲಿ ನಿರ್ಮಿಸಲಾದ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯ 6 ಶಾಲಾ ಕೊಠಡಿಗಳ ಉದ್ಘಾಟಣೆ,

ಅತ್ತಿಹಾಳ ಗ್ರಾಮದ ಸರಕಾರಿ ಪ್ರೌಢ ಶಾಲೆಯಲ್ಲಿ 36 ಲಕ್ಷ ರೂ ಗಳ ವೆಚ್ಚದಲ್ಲಿ 2 ಶಾಲಾ ಕೊಠಡಿ ನಿರ್ಮಾಣ ಕಾಮಗಾರಿ ಮತ್ತು 25 ಲಕ್ಷ ವೆಚ್ಚದಲ್ಲಿ ಸಿ ಸಿ ರಸ್ತೆ ಕಾಮಗಾರಿಗೆ ಚಾಲನೆ ನೀಡಿದರು.

ಸಚಿವರ ಆಪ್ತ ಸಹಾಯಕರಾದ ಕಿರಣಸಿಂಗ ರಜಪೂತ ದಯಾನಂದ ಪಾಟೀಲ್, ಜಂಗ್ಲಿಸಾಹೇಬ ನಾಯಕ, ಎಸ್ ಡಿ ಎಮ್ ಸಿ ಅಧ್ಯಕ್ಷ ಪರಸಪ್ಪ ನಾಯಕ, ಬಸವರಾಜ ಥರಣಟ್ಟಿ ,ಅರ್ಜುನ ಘಸ್ತಿ, ಸತೀಶ್ ನಾಯಕ, ಸುರೇಶ ನಾಯಕ, ಸಿದ್ದು ನಾಯಕ, ಹುಕ್ಕೇರಿ ಕ್ಷೇತ್ರ ಶಿಕ್ಷಣಾಧಿಕಾರಿ ಪ್ರಭಾವತಿ ಪಾಟೀಲ್ ಸೇರಿದಂತೆ ಮತ್ತಿತರರು ಇದ್ದರು.



## ಕಿರುಸುದ್ದಿ

### ದತ್ತಿ ಪ್ರಶಸ್ತಿ ಪ್ರದಾನ ಸಮಾರಂಭ ಇಂದು

**ಕೆರೂರ:** ಕನ್ನಡ ಸಾಹಿತ್ಯ ಪರಿಷತ್ ತಾಲೂಕ ಹಾಗೂ ಜಿಲ್ಲಾಘಟಕ ಬಾಗಲಕೋಟೆ ಇವರ ಸಹಯೋಗದಲ್ಲಿ ಜು.4ರಂದು ಸಮೀಪದ ಯಂಡಿಗೇರಿ ಗ್ರಾಮದಲ್ಲಿ ದತ್ತಿ ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಲಿದೆ. ಲಿಂಗೈಕ್ಯ ಪಡದಯ್ಯ ಶೆಲ್ಲಿಕೇರಿ ಹಾಗೂ ಈರಮ್ಮ ಶೆಲ್ಲಿಕೇರಿ ಇವರ ಸ್ಮರಣಾರ್ಥ ಪುಸ್ತಕ ದತ್ತಿ ಪ್ರಶಸ್ತಿ ಪ್ರದಾನ ಸಮಾರಂಭ ಜರುಗಲಿದೆ.ಶಾಂತಾನಂದ ಆಶ್ರಮ ಮಾತೋಶ್ರೀ ವಿದ್ಯಾತಾಯಿಯವರು ಸಾನ್ನಿಧ್ಯ ವಹಿಸುವರು. ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಶಿವಾನಂದ ಶೆಲ್ಲಿಕೇರಿ ಅಧ್ಯಕ್ಷತೆ ವಹಿಸುವರು. ಸಾಹಿತಿ ಮನು ಬಳಿಗಾರ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ. ಅಭಿನಂದನಾ ನುಡಿಗಳನ್ನು ಖ್ಯಾತ ಶಿಶು ಸಾಹಿತಿ ರಾಜಶೇಖರ ಕುಕ್ಕುಂದಾ ಆಡಲಿದ್ದಾರೆ. ಶಾರದಾ ಮುಳ್ಳೂರ ಬಂದೆ ಬರುತ್ತೇನೆ ಕವನ ಸಂಕಲನಕ್ಕೆ ಹಾಗೂ ಎಂ.ಡಿ.ಚಿತ್ತರಗಿ ಚಿಟ್ಟದ ಬಕ್ಕು ಕಥಾ ಸಂಕಲನಕ್ಕೆ ದತ್ತಿ ಪ್ರಶಸ್ತಿ ನೀಡಲಿದ್ದಾರೆ. ಡಿ.ಕೆ.ಚವ್ಹಾಣ, ಎಸ್. ಎಂ.ಕೊಟಗಿ, ವಿ.ಬಿ.ಪಾಟೀಲ, ಸನ್ಮಾನಿತರಾಗಿ ನಿವೃತ್ತ ಸಿಪಿಐ ಡಿ.ಬಿ.ಪಾಟೀಲ ಅತಿಥಿಗಳಾಗಿ ಆಗಮಿಸುವರು ಎಂದು ಪ್ರಕಟಣೆ ತಿಳಿಸಿದ್ದಾರೆ.

### ಹಳಕಟ್ಟಿಯವರ ತ್ಯಾಗ ಅವಿಸ್ಮರಣೀಯ

**ತೇರದಾಳ:** ವಚನ ಸಾಹಿತ್ಯ ಶ್ರೇಷ್ಠತೆ ಅರಿತಿದ್ದ ಡಾ.ಫ.ಗು ಹಳಕಟ್ಟಿಯವರು ವಚನ ಸಾಹಿತ್ಯಗಳ ಹುಡುಕಾಟದಲ್ಲಿ ತಮ್ಮನ್ನು ತಾವು ಸಮರ್ಪಿಸಿಕೊಂಡರು. ಕೇವಲ ದಿನವಲ್ಲ ವರ್ಷವಲ್ಲ, ಇಡೀ ಜೀವನವನ್ನೇ ಅದಕ್ಕಾಗಿ ಮುಡುಪಾಗಿಟ್ಟ ತ್ಯಾಗ ಅವಿಸ್ಮರಣೀಯವಾಗಿದೆ ಎಂದು ತಾಲೂಕಾ ಘಟಕದ ಅಧ್ಯಕ್ಷ ಎಸ್.ಆರ್.ರಾವಳ ಹೇಳಿದರು. ಡಾ.ಫ.ಗು ಹಳಕಟ್ಟಿ ರಾಷ್ಟ್ರೀಯ ಟ್ರಸ್ಟ್(ರಿ) ರಾಯಬಾಗ ತಾಲೂಕಾ ಘಟಕ ತೇರದಾಳ ವತಿಯಿಂದ ಕುಂಬಾರ ಓಣಿಯ ಬಸವೇಶ್ವರ ದೇವಸ್ಥಾನದಲ್ಲಿ ನಡೆದ ವಚನಪಿತಾಮಹ ಡಾ.ಫ.ಗು ಹಳಕಟ್ಟಿಯವರ ಜನ್ಮದಿನವನ್ನು ಆಚರಿಸಿ ಮಾತನಾಡಿ, ಡಾ.ಹಳಕಟ್ಟಿಯವರು ತಮ್ಮ ಇಡೀ ಆಸ್ತಿಯನ್ನು ಹಾಗೂ ಇಡೀ ಬದುಕನ್ನು ಈ ವಚನಸಾಹಿತ್ಯಗಳ ರಕ್ಷಣೆಗಾಗಿ ಹಾಗೂ ಪ್ರಸಾರಕ್ಕಾಗಿ ತೆರೆದಿಟ್ಟರು. ಅವರ ವಚನ ಸಾಹಿತ್ಯದ ಪ್ರತಿಯೊಂದು ಸಾಲುಗಳು ನಮ್ಮ ಬದುಕಿಗೆ ಸಂದಾನಿವಾಗಳಾಗಿವೆ ಎಂದರು. ಈ ವೇಳೆ ಬಸವರಾಜ ನೀಲನೂರ, ಡಾ.ರಮೇಶ ಕುಂಬಾರ, ಶಿವಾನಂದ ಹೂಗಾರ ಇದ್ದರು. ಪದ್ಮಾವತಿ ನಾಗನೂರ ನಿರೂಪಿಸಿ ವಂದಿಸಿದರು.

### ಪ್ರತ್ಯೇಕ ಗಾಂಜಾ ಪ್ರಕರಣ: ಆರೋಪಿಗಳ ಬಂಧನ

**ರಬಕವಿ-ಬನಹಟ್ಟಿ:** ಇಲ್ಲಿಯ ವೃತ್ತ ಪೊಲೀಸ್ ಠಾಣೆ ಪೊಲೀಸರು ನಡೆಸಿದ ಕಾರ್ಯಾಚರಣೆಯಲ್ಲಿ 2ಗಾಂಜಾ ಪ್ರಕರಣ, ಐದು ಬಂಗಾರ ಕಳವು ಪ್ರಕರಣ ಯಶಸ್ವಿಯಾಗಿ ಭೇದಿಸಿ ಒಟ್ಟು 7.63 ಲಕ್ಷ ರೂ. ಮೌಲ್ಯದ ಸ್ವತ್ತು, 72 ಸಾವಿರ ರೂ. ನಗದು ವಶಪಡಿಸಿಕೊಳ್ಳಲಾಗಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಿದ್ಧಾರ್ಥ ಗೋಯಲ್ ತಿಳಿಸಿದ್ದಾರೆ. ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, 1 ಕೆಜಿ ಗಾಂಜಾ, ಸುಮಾರು 6.55 ಲಕ್ಷ ರೂ. ಮೌಲ್ಯದ 53.6 ಗ್ರಾಂ ಚಿನ್ನಾಭರಣ, 30 ಗ್ರಾಂ ಬೆಳ್ಳಿ, 2ದ್ವಿಚಕ್ರ ವಾಹನಗಳು ಸೇರಿದಂತೆ ಒಟ್ಟು 7.63 ಲಕ್ಷ ರೂ. ಮೌಲ್ಯದ ಸ್ವತ್ತು ಜಪ್ತಿ ಮಾಡಲಾಗಿದೆ. ಇದಲ್ಲದೆ ಆರೋಪಿಗಳಿಂದ 72 ಸಾವಿರ ನಗದು ವಶಪಡಿಸಿಕೊಳ್ಳಲಾಗಿದೆ ಎಂದರು.

ಸಿಪಿಐ ರಾಜು ಪಾಟೀಲ, ಪಿಎಸ್‌ಐ ಶಿವರಾಜ ಧರಿಗೋಣ, ಕ್ರೈಂ ಪಿಎಸ್‌ಐ ಪುರಂದರ ಪೂಜಾರಿ, ಮಹಾಲಿಂಗಪೂರ ಕಿರಣ ಸತ್ತಿಗೇರಿ, ತೇರದಾಳ ಶಿವಾನಂದ ಸಿಂಗನ್ನವರ ಸೇರಿದಂತೆ ಸಿಬ್ಬಂದಿ ಇದ್ದರು.

### ಎಪಿಎಂಸಿ ಅಧಿಕಾರಿಗಳ ವಿರುದ್ಧ ಆಕ್ರೋಶ

**ಬೀಳಗಿ:** ಜಿಲ್ಲೆಯಲ್ಲಿರುವ ತರಕಾರಿ ಮತ್ತು ಉಳ್ಳಾಗಡ್ಡಿ ಮಾರುಕಟ್ಟೆಯಲ್ಲಿ ದಲ್ಲಾಳಿಗಳು ರೈತರಿಂದ ಶೇ.4 ರಿಂದ 10ರಷ್ಟು ಕಮಿಷನ್ ಪಡೆದು ರೈತರ ಶೋಷಣೆ ಮಾಡುತ್ತಿದ್ದರೂ ಎಪಿಎಂಸಿ ಅಧಿಕಾರಿಗಳು ಕಣ್ಣುಮುಚ್ಚಿಕೊಂಡು, ಜಾಣ ಮೌನವಹಿಸಿ ಕೈಕಟ್ಟಿಕೊಂಡು ಕುಳಿತಿದ್ದಾರೆ ಎಂದು ರೈತ ಹೋರಾಟಗಾರ ಈರಪ್ಪ ಹಂಚಿನಾಳ ಆರೋಪಿಸಿದ್ದಾರೆ.



ಪತ್ರಿಕೆಯೊಂದಿಗೆ ಮಾತನಾಡಿ, ಎಪಿಎಂಸಿ ಕಾಯ್ದೆ ವಿರುದ್ಧವಾಗಿ ರೈತರಿಂದ ಕಮಿಷನ್, ಸೆಸ್, ದಲಾಲಿ ಮುರಿದುಕೊಂಡು ಅನ್ಯಾಯ ಮಾಡುತ್ತಿದ್ದಾರೆಂದು ಆರೋಪಿಸಿದರು. ಅಡತಿ ಅಂಗಡಿಗೆ ರೈತರು ಒಯ್ದ ಗೋವಿನಜೋಳ, ಶೇಂಗಾ, ಗೋಧಿ, ಸೂರ್ಯಕಾಂತಿ ಸೇರಿದಂತೆ ಎಲ್ಲ ಕಾಳು-ಕಡಿಗಳಿಗೆ (ಮಾಲಿಗೂ) ಕಾನೂನು ಬಾಹಿರವಾಗಿ ಬೇಕಾಬಿಟ್ಟಿಯಾಗಿ ದಲಾಲಿ, ಸೆಸ್, ಕಮಿಷನ್ ಮುರಿದು ಹಗಲು ಲೂಟಿ ಮಾಡುತ್ತಿದ್ದರೂ ಎಪಿಎಂಸಿ ಅಧಿಕಾರಿಗಳು ಮತ್ತು ಜಿಲ್ಲಾಧಿಕಾರಿಗಳು ಯಾವುದೇ ಕ್ರಮ ಜರುಗಿಸದೇ ಕಣ್ಮುಚ್ಚಿಕೊಂಡು ಕುಳಿತಿರುವುದು ಏಕೆ ಎಂದು ಖಾರವಾಗಿ ಪ್ರಶ್ನಿಸಿದರು. ತರಕಾರಿಗಳಿಗೆ ಬಾಗಲಕೋಟೆಯಲ್ಲಿ ಶೇ.4, ಮುಧೋಳ ಮತ್ತು ಜಮಖಂಡಿಯಲ್ಲಿ ಶೇ.10ರಷ್ಟು ಕಮಿಷನ್ ಹೀಗೆ ಬೇಕಾಬಿಟ್ಟಿಯಾಗಿ ರೈತರಿಂದ ಕಮಿಷನ್ ಪಡೆಯುವದನ್ನು ತಕ್ಷಣವೇ ನಿಲ್ಲಿಸಲಿ. ಇಲ್ಲದಿದ್ದರೆ ಜಿಲ್ಲೆಯ ರೈತರನ್ನು ಸೇರಿಸಿ ಹೋರಾಟ ಮಾಡುವುದಾಗಿ ಅವರು ಎಚ್ಚರಿಸಿದರು.



ಇಳಕಲ್: ಸಾರ್ವಜನಿಕರಲ್ಲಿ ಹಾಗೂ ವಿದ್ಯಾರ್ಥಿಗಳಲ್ಲಿ ಜಾಗೃತಿ ಮೂಡಿಸುವ ಉದ್ದೇಶದಿಂದ ನಗರದ ಶಹರ ಪೊಲೀಸ್ ಠಾಣೆ ವತಿಯಿಂದ ಮಾದಕ ವಸ್ತುಗಳ ಸೇವನೆ ಹಾಗೂ ಮಾರಾಟ ತಡೆ ಮಾಸಾಚರಣೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ನಗರದ ಬಸವೇಶ್ವರ ವೃತ್ತದಿಂದ ಆರಂಭವಾಗಿ ಪ್ರಮುಖ ರಸ್ತೆಗಳ ಮೂಲಕ ಸಾಗಿ ನಗರದ ಹೃದಯ ಭಾಗವಾದ ಎಸ್.ಆರ್.ಕಂಠಿ ವೃತ್ತದವರೆಗೆ ತಲುಪಿತು.

## ಮಾದಕ ವಸ್ತು ವಿರೋಧಿ ಜಾಗೃತಿ ಜಾಥಾ

**ಇಳಕಲ್:** ಯುವ ಪೀಳಿಗೆ ಹಾಗೂ ವಿದ್ಯಾರ್ಥಿಗಳು ಮಾದಕವಸ್ತುಗಳ ಸೇವನೆಯಿಂದ ತಮ್ಮ ಅಮೂಲ್ಯವಾದ ಜೀವನವನ್ನು ಹಾಳು ಮಾಡಿಕೊಳ್ಳುತ್ತಿರುವುದು. ಈ ನಿಟ್ಟಿನಲ್ಲಿ ಸಾರ್ವಜನಿಕರಲ್ಲಿ ಹಾಗೂ ವಿದ್ಯಾರ್ಥಿಗಳಲ್ಲಿ ಜಾಗೃತಿ ಮೂಡಿಸುವ ಉದ್ದೇಶದಿಂದ ನಗರದ ಶಹರ ಪೊಲೀಸ್ ಠಾಣೆ ವತಿಯಿಂದ ಮಾದಕ ವಸ್ತುಗಳ ಸೇವನೆ ಹಾಗೂ ಮಾರಾಟ ತಡೆ ಮಾಸಾಚರಣೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

ಈ ವಿಶೇಷ ಜಾಗೃತಿ ಕಾರ್ಯಕ್ರಮದಲ್ಲಿ ಇಳಕಲ್ ನಗರದ ಪ್ರಸಿದ್ಧ ಶಿಕ್ಷಣ ಸಂಸ್ಥೆ ಎಸ್‌ವಿಎಂ ಹಾಗೂ ಆಯುರ್ವೇದಿಕ ವಿದ್ಯಾಲಯದ ನೂರಾರು ವಿದ್ಯಾರ್ಥಿಗಳು ಅತ್ಯಂತ ಉತ್ಸಾಹದಿಂದ ಭಾಗವಹಿಸಿದ್ದರು. ನಗರದ ಬಸವೇಶ್ವರ ವೃತ್ತದಿಂದ ಆರಂಭವಾಗಿ ಪ್ರಮುಖ ರಸ್ತೆಗಳ ಮೂಲಕ ಸಾಗಿ ನಗರದ ಹೃದಯ ಭಾಗವಾದ ಎಸ್.ಆರ್.ಕಂಠಿ ವೃತ್ತದವರೆಗೆ ತಲುಪಿತು. ಈ ವೇಳೆ ಇಳಕಲ್ ನಗರದ ಶಹರ ಪೊಲೀಸ್ ಠಾಣೆಯ ಪಿಎಸ್‌ಐ ಮಂಜುನಾಥ ಪಾಟೀಲ, ಎಎಸ್‌ಐಗಳಾದ ವಿ ವಿ ಪಾಟೀಲ, ಕೊಡತಿ, ಹಾಗೂ ಪೊಲೀಸ್ ಸಿಬ್ಬಂದಿಗಳಾದ ತಳಗೇರಿ, ಸುತ್ತುಗುಂಡಾರ ಹಾಗೂ ಸಿಬ್ಬಂದಿ ವರ್ಗದವರು, ಕಾಲೇಜಿನ ಪ್ರಾಚಾರ್ಯ ಡಾ.ಎಸ್.ಬಿ. ಬಿರಾದಾರ, ಹಿರಿಯ ಪ್ರಾಧ್ಯಾಪಕ ಡಾ.ಬಿ.ಎಂ.ರಾಯೊಳ, ದೈಹಿಕ ಶಿಕ್ಷಣ ನಿರ್ದೇಶಕ ಡಾ.ಸುಭಾಸ ಹುನ್ನಳ್ಳಿ, ಉಪನ್ಯಾಸಕ ಡಾ.ಪ್ರಶಾಂತ ಅರಡಕ್ಕಿ, ದೇವೇಂದ್ರಪ್ಪ ಸಂಪಾದ ಜರಲಿ, ಮಹಾಂತೇಶ ನಾಯನೇಗಲಿ, ದರೇಶ ಕಮತಿಗಿ, ಆಯುರ್ವೇದ ಮಹಾವಿದ್ಯಾಲಯದ ಡಾ.ಶಂಕರ ಮೈದರಗಿ, ವಿದ್ಯಾರ್ಥಿಗಳು ಸೇರಿದಂತೆ ಅನೇಕರು ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು.



ತೇರದಾಳ: ಡಾ.ಫ.ಗು ಹಳಕಟ್ಟಿ ರಾಷ್ಟ್ರೀಯ ಟ್ರಸ್ಟ್(ರಿ) ರಾಯಬಾಗ ತಾಲೂಕಾ ಘಟಕ ತೇರದಾಳ ವತಿಯಿಂದ ಕುಂಬಾರ ಓಣಿಯ ಬಸವೇಶ್ವರ ದೇವಸ್ಥಾನದಲ್ಲಿ ನಡೆದ ವಚನಪಿತಾಮಹ ಡಾ.ಫ.ಗು ಹಳಕಟ್ಟಿಯವರ ಜನ್ಮದಿನವನ್ನು ಆಚರಿಸಲಾಯಿತು.

### ಸಂಕಷ್ಟದಲ್ಲಿ ಬೆಳೆಗಾರರು | ನೆರವಿಗೆ ಬಾರದ ಅಧಿಕಾರಿಗಳು

# ದಾಳಿಂಬೆಗೆ ದುಂಡಾಣು ಕಜ್ಜಿ ರೋಗ

ನಿತೀಶ ಪಾಟೀಲ

**ಕಲಾದಗಿ:** ದಾಳಿಂಬೆ ಬೆಳೆ ಒಂದು ಉತ್ತಮ ವಾಣಿಜ್ಯ ಬೆಳೆಯಾಗಿ ರೈತನಿಗೆ ಲಾಭ ತರುವ ಬೆಳೆಯಾಗಿದ್ದು ಲಕ್ಷಾಂತರ ರೂ.ಗಳನ್ನು ಖರ್ಚು ಮಾಡಿ ಬೆಳೆದ ಬೆಳೆಗೆ ದುಂಡಾಣು ಕಜ್ಜಿ ರೋಗ ಬಾಧೆ ತಗುಲಿದ್ದು, ಕಲಾದಗಿ ಭಾಗದ ದಾಳಿಂಬೆ ಬೆಳೆಗಾರರನ್ನು ಸಂಕಷ್ಟಕ್ಕೀಡು ಮಾಡಿದೆ.

ಬಾಗಲಕೋಟೆ ಜಿಲ್ಲೆಯಲ್ಲಿ ದಾಳಿಂಬೆ ಹಣ್ಣು ಎಂದರೆ ಸಾಕು ಕಲಾದಗಿ ಎಂದು ಹೇಳುವಷ್ಟುಪ್ರಸಿದ್ಧಿಪಡೆದಿರುವ ಗ್ರಾಮದಲ್ಲಿ ದುಂಡಾಣು ರೋಗದಿಂದಾಗಿ ಕಟಾವಿಗೆ ಬಂದಬೆಳೆರಾಶಿರಾಶಿಯಾಗಿ ಕಸಕ್ಕೆ ಹಾಕುವಷ್ಟು ರೋಗ ಭೀತಿ ಎದುರಾಗಿದೆ.

ದಿಗಂತ ವಿಶೇಷ

ಪ್ರತಿ ವರ್ಷವು ಈ ದುಂಡಾಣು ರೋಗದಿಂದಾಗಿ ಅಲ್ಪ ಸ್ವಲ್ಪ ಬೆಳೆ ಹಾನಿಯಾಗುತ್ತಿತ್ತಾದರೂ ಈ ವರ್ಷದ ವಾತಾವರಣದ ಅತೀವ ವ್ಯತ್ಯಾಸದಿಂದಾಗಿ ಮತ್ತಷ್ಟು ಹಾನಿ ಸಂಭವಿಸಿದ್ದು, ಸಾಲ ಮಾಡಿ ಲಕ್ಷಾಂತರ ರೂ. ಖರ್ಚು ಮಾಡಿ ಬೆಳೆದ ದಾಳಿಂಬೆ ಅಗ್ನಿ ಆಹುತಿಯಾಗುತ್ತಿದೆ. ಕನಿಷ್ಠ ಪಕ್ಷ ಬೆಳೆಗೆ ಖರ್ಚು ಮಾಡಿದ ಹಣವಾದರೂ ಬಂದರೆ ಸಾಕು ಎನ್ನುವ ಮಟ್ಟಿಗೆ ರೈತ ಚಿಂತಿಸುತ್ತಿದ್ದಾರೆ.

ದಾಳಿಂಬೆ ಸಸ್ಯ ಹೂವು ಹಿಡಿದಾಗಿನಿಂದ ಬೆಳೆ ರೈಗೆ ಬರುವವರೆಗೂ ಈ ರೋಗ ಕಾಣಸಿಗುತ್ತದೆ. ಕಲಾದಗಿ ಹಾಗೂ ಸುತ್ತಮುತ್ತಲಿನ ಗ್ರಾಮಗಳಲ್ಲಿ ಸಾವಿರಾರೂ ಹೆಕ್ಟರ್ ಪ್ರದೇಶದಲ್ಲಿ ಬೆಳೆದ ದಾಳಿಂಬೆ ಬೆಳೆ ಶೇ.70%ರಷ್ಟು ದುಂಡಾಣು ರೋಗಕ್ಕೆ ತುತ್ತಾಗಿದ್ದು, ಕಲಾದಗಿ, ಗೋವಿಂದಕೊಪ್ಪ, ಚಿಕ್ಕಸಂಶಿ, ಹಿರೇಸಂಶಿ, ದೇವನಾಳ, ಸೊಕನಾದಗಿ, ತುಳಸಿಗೇರಿ, ಶಾರದಾಳ, ಉದಗಟ್ಟಿ ಸೇರಿದಂತೆ ಮುಂತಾದ ಗ್ರಾಮಗಳಲ್ಲಿ ರೋಗಕ್ಕೆ ತುತ್ತಾಗಿರುವ ದಾಳಿಂಬೆಯನ್ನು ಸುಡಲು ತೋಟದ ಬದುವಿನಲ್ಲಿ ಹಾಕಿರುವುದು ಬಹುತೇಕ ಕಡೆ ಕಂಡು ಬರುತ್ತಿದೆ.

> ಈ ಬಾರಿ ಹೆಚ್ಚಾಗಿ ದಾಳಿಂಬೆ ಬೆಳೆಗೆ ದುಂಡಾಣು ರೋಗ ತಗುಲಿದ್ದು, ವರ್ಷ ಪೂರ್ತಿ 3-4 ಲಕ್ಷದಷ್ಟು ಖರ್ಚು ಮಾಡಿರುವ ನಮಗೆ ಸೂಕ್ತ ಪರಿಹಾರ ಒದಗಿಸಿಕೊಡುವಲ್ಲಿ ಇಲಾಖೆ ಕ್ರಮ ಕೈಗೊಳ್ಳಬೇಕು.
> ■ ರಾಮು ರೇವಣಕರ, ದಾಳಿಂಬೆ ಬೆಳೆಗಾರ

> ಈ ವರ್ಷ ಸರಾಸರಿ ತಾಪಮಾನ ಹಾಗೂ ಮಳೆಯಾಗದ ಕಾರಣ ಕಳೆದ ತಿಂಗಳ ಹಿಂದೆ ಜೋರಾಗಿ ಮಳೆ ಬಿದ್ದು ಮತ್ತೆ ಬಿಸಿಲು ಹೆಚ್ಚಾದ ಕಾರಣ ಅರೆ ಝಳದಿಂದಾಗಿ ದಾಳಿಂಬೆ ಬೆಳೆಗೆ ಅಂಗಮಾರಿ ದುಂಡಾಣು ಕಜ್ಜಿ ರೋಗ ಬಂದಿದ್ದು ತೋಟಗಾರಿಕಾ ವಿಜ್ಞಾನಿಗಳ ಜೊತೆಗೂಡಿ ಇದನ್ನು ಪರಿಶೀಲಿಸುತ್ತೇವೆ.
> ■ ನೀಲಕಂಠ ಬಿರಾದಾರ, ತೋಟಗಾರಿಕಾ ಅಧಿಕಾರಿ ಬಾಗಲಕೋಟೆ



### ದುಂಡಾಣು ರೋಗ ಲಕ್ಷಣಗಳು

ಸೊಂಕು ತಾಕಿದ 2-3ದಿನಗಳ ನಂತರ ರೋಗಲಕ್ಷಣಗಳು ಕಾಣಿಸಿಕೊಳ್ಳುತ್ತವೆ. ಅಕಾಲಿಕವಾಗಿ ಎಲೆ ಉದುರುವುದು, ವೃತ್ತಾಕಾರದ ಕಲೆಗಳು ಅನೀಯಮಿತ ಗಾಯಗಳಾಗಿ ಗೋಚರ ಕ್ರಮೇಣ ಕಲೆಗಳ ಮಧ್ಯ ಭಾಗ ಕೊಳೆತಂತಾಗಿ ಕಾಂಡ ಮತ್ತು ಕೊಂಬೆಗಳಿಗೆ ಆವರಿಸಿ ಬಿರಕಿಗೆ ಕಾರಣವಾಗಿ ಇಡೀ ಹಣ್ಣು ಒಡೆದು ತೆರೆದುಕೊಂಡು ಅಂತಿಮವಾಗಿ ಹಣ್ಣು ಕಪ್ಪಾಗಿ ಒಣಗಿ ಹೋಗುತ್ತಿವೆ.

### ಸಮೀಕ್ಷೆ ನಡೆಸಿ ಸೂಕ್ತ ಪರಿಹಾರಕ್ಕೆ ಆಗ್ರಹ

ಕಲಾದಗಿಯಿಂದ ಕೂಗಳತೆ ದೂರದಲ್ಲೇ ತೋಟಗಾರಿಕಾ ವಿಶ್ವ ವಿದ್ಯಾಲಯವಿದ್ದು ತೋಟಗಾರಿಕಾ ಇಲಾಖೆಯ ವಿಜ್ಞಾನಿಗಳು ಹಾಗೂ ಅಧಿಕಾರಿಗಳು ದುಂಡಾಣು ಕಜ್ಜಿ ರೋಗ ಬಾಧಿತ ಹಳ್ಳಿಗಳಿಗೆ ಭೇಟಿ ನೀಡಿ ಸಮೀಕ್ಷೆ ನಡೆಸಿ ರೈತರಿಗೆ ಸೂಕ್ತ ಪರಿಹಾರ ಒದಗಿಸಬೇಕೆಂದು ದಾಳಿಂಬೆ ಬೆಳೆಗಾರ ರೈತರು ಅಧಿಕಾರಿಗಳನ್ನು ಆಗ್ರಹಿಸುತ್ತಿದ್ದಾರೆ.

## ಸೂಕ್ತ ನಿರ್ಧಾರ ತೆಗೆದುಕೊಂಡರೆ ಒಳ್ಳೆಯದು

**ಅಮೀನಗಡ:** ಆಡಳಿತ ಮಂಡಳಿಯವರು ನೇಕಾರರಿಗೆ ಬೋನಸ್ ಕೊಟ್ಟು, ಅವರಿಗೆ ಧೈರ್ಯ ತುಂಬಿದರೆ ಅವರಲ್ಲಿ ವಿಶ್ವಾಸ ಉಳಿಯುವದರಿಂದ ನಿಮ್ಮ ಆಡಳಿತ ಮಂಡಳಿಯವರು ಜವಾಬ್ದಾರಿ ತಗೆದುಕೊಂಡು ಚರ್ಚಿಸಿ ನಿರ್ಧಾರ ತೆಗೆದುಕೊಂಡರೆ ಒಳ್ಳೆಯದಾಗುತ್ತದೆ ಎಂದು ಮಾಜಿ ಶಾಸಕ ದೊಡ್ಡನಗೌಡ ಪಾಟೀಲ ಆಡಳಿತ ಮಂಡಳಿಯವರಿಗೆ ಸಲಹೆ ನೀಡಿದರು.

ಸಮೀಪ ಸೂಳೇಭಾವಿ ಶಾಖಾಂಬರಿ ನೇಕಾರ ಸಹಕಾರಿ ಸಂಘದ ಹಣ ದುರುಪಯೋಗ ಖಂಡಿಸಿ ನೇಕಾರರು ನಡೆಸುತ್ತಿರುವ ಪ್ರತಿಭಟನೆಗೆ ಬೆಂಬಲ ಸೂಚಿಸಿ ಮಾತನಾಡಿದರು.

ಸೂಳೇಭಾವಿ (ತಾ.ಹುನಗುಂದ) ಸೂಳೇಭಾವಿಯ ಪ್ರತಿಷ್ಠಿತ ಶಾಖಾಂಬರಿ ನೇಕಾರ ಸಹಕಾರಿ ಸಂಘದಲ್ಲಿ ನಡದಿದೆ ಎನ್ನಲಾದ ಹಣ ದುರುಪಯೋಗ ಹಾಗೂ ಅವ್ಯವಹಾರದ ವಿರುದ್ಧ ನಡೆಸುತ್ತಿರುವ ಪ್ರತಿಭಟನೆ ಇಂದಿಗೆ 5ನೇ ದಿನಕ್ಕೆ ಕಾಲಿಟ್ಟಿದ್ದು ನೇಕಾರರ ಪ್ರತಿಭಟನೆ ಸ್ಥಳಕ್ಕೆ ಆಗಮು ಆಗಮಿಸಿದ ಜಿಪಂ ಮಾಜಿ ಅಧ್ಯಕ್ಷೆ ವೀಣಾ ಕಾಶಪ್ಪನವರ ಭೇಟಿ ನೀಡಿ ಮಾತನಾಡಿದ ಅವರು, ನಿಮ್ಮ ನ್ಯಾಯಯುತ ಬೇಡಿಕೆಗೆ ನನ್ನ ಬೆಂಬಲ ಯಾವಾಗಲೂ ಇರುತ್ತದೆ. ಇಲ್ಲಿ ಯಾರೋ ಮಾಡಿದ ತಪ್ಪಿಗೆ ಬಡ ನೇಕಾರರು ಶಿಕ್ಷೆ ಅನುಭವಿಸುವಂತಾಗಿದೆ. ತಕ್ಷಣವೇ ಆಡಳಿತ ಮಂಡಳಿ ಸಂಬಂಧ ಪಟ್ಟವರ ಮೇಲೆ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಆಡಳಿತ ಮಂಡಳಿ ವಿರುದ್ಧ ಹರಿಹಾಯ್ದರು.

ಸಂಸ್ಥೆ ಅಧ್ಯಕ್ಷ ಪ್ರವೀಣ ರಾಮದುರ್ಗ ಮಾತನಾಡಿ, ಈಗಾಗಲೇ ನಮ್ಮ ಸಂಸ್ಥೆ ಹಾನಿಯಲ್ಲಿದ್ದು, ಯಾವುದೇ ರೀತಿಯಿಂದಲೂ ಬೋನಸ್ ಕೊಡಲು ಸಾಧ್ಯವಿಲ್ಲ ಎಂದರು.

ಈ ವೇಳೆ ನೇಕಾರ ಮುಖಂಡರಾದ ರೋಮಣ್ಣ ಜನಿವಾರದ, ಜ್ಞಾನೇಶ್ವರ ಧೂಪದ, ಶಂಕರ ಮಿಣಜಗಿ, ಪಾಂಡುರಂಗ ರಾಮದುರ್ಗ, ಮುಖಂಡರಾದ ನಾಗೇಶ ಗಂಜಿಹಾಳ, ಬಸವರಾಜ ಹಾವರಗಿ, ಈರಣ್ಣ ಘರಾಳದ, ಆನಂದ ಮೇಕಾಶಿ, ಜಗದೀಶ ಪಾಟೀಲ, ಮಾಜಿ ಸೈನಿಕರಾದ ಸಿದ್ದನಗೌಡ ಪಾಟೀಲ, ರಮೇಶ ಭದ್ರಣ್ಣವರ, ನಾರಾಯಣಪ್ಪ ಮಿಣಜಗಿ, ರಾಘವೇಂದ್ರ ಭಾಪ್ರಿ, ರಮೇಶ ಕೋಟಿ ಕಲ್ಲ, ಮುಂತಾದವರು ಉಪಸ್ಥಿತರಿದ್ದರು.



## ಶಾಸಕ ಕಾಶಪ್ಪನವರಿಗೆ ಸಚಿವ ಸ್ಥಾನ ನೀಡಿ: ಮದರಿ ಒತ್ತಾಯ

**ಹುನಗುಂದ:** ಲಿಂಗಾಯತ ಸಮಾಜದ ಪ್ರಬಲ ನಾಯಕರಾದ ಶಾಸಕ ವಿಜಯಾನಂದ ಕಾಶಪ್ಪನವರಿಗೆ 2ನೇ ಹಂತದ ಸಚಿವ ಸಂಪುಟದಲ್ಲಿ ಕ್ಯಾಬಿನೆಟ್ ದರ್ಜೆಯ ಸಚಿವ ಸ್ಥಾನ ನೀಡಿ ಬಾಗಲಕೋಟ ಜಿಲ್ಲೆಯ ಉಸ್ತುವಾರಿಯನ್ನಾಗಿ ಮಾಡಬೇಕೆಂದು ಅಖಿಲ ಭಾರತ ಲಿಂಗಾಯತ ಪಂಚಮಸಾಲಿ ಸಮಾಜದ ತಾಲೂಕ ಪ್ರಧಾನ ಕಾರ್ಯದರ್ಶಿ ಮಹಾಂತೇಶ ಮದರಿ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ, ಮಾಜಿ ಸಿಎಂ ಸಿದ್ದರಾಮಯ್ಯನವರನ್ನು ಒತ್ತಾಯಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕಳೆದ ಐದು ದಶಕಗಳಿಂದ ಕಾಶಪ್ಪನವರ ಕುಟುಂಬ ಕಾಂಗ್ರೆಸ್ ಪಕ್ಷದ ತತ್ವ ಸಿದ್ಧಾಂತಕ್ಕೆ ಬದ್ಧರಾಗಿ,ಪಕ್ಷ ನಿಷ್ಠರರಾಗಿ ಹುನಗುಂದ ಮತಕ್ಷೇತ್ರದಿಂದ ರಾಜ್ಯಮಟ್ಟದವರೆಗೆ ಪಕ್ಷವನ್ನು ಸಂಘಟಿಸಿದ್ದಾರೆ. ಶಾಸಕ ವಿಜಯಾನಂದ ಕಾಶಪ್ಪನವರ ತಂದೆ ಮಾಜಿ ಸಚಿವ ದಿ.ಎಸ್. ಆರ್.ಕಾಶಪ್ಪನವರ ಮೂರು ಬಾರಿ ಶಾಸಕರಾಗಿ, ಒಂದು ಬಾರಿ ಸಚಿವರಾಗಿ ಲಿಂಗಾಯತ ಸಮಾಜದ ಮೇರು ನಾಯಕರಾಗಿ ಲಿಂಗಾಯತರ ಮತಗಳನ್ನು ಕಾಂಗ್ರೆಸ್ ಪಕ್ಷದತ್ತ ಸೆಳೆಯುವಲ್ಲಿ ಪ್ರಮುಖ ಪಾತ್ರವಹಿಸಿದ್ದರು.ಅವರ ನಿಧನ ನಂತರ ತಾಯಿ ಗೌರಮ್ಮ ಕಾಶಪ್ಪನವರ ಕೂಡಾ ಶಾಸಕರಾಗಿ ಕ್ಷೇತ್ರದ ಅಭಿವೃದ್ಧಿ ಕಾರ್ಯವನ್ನು ಮಾಡಿದ್ದಾರೆ. ಸದ್ಯ ಶಾಸಕ ವಿಜಯಾನಂದ ಕಾಶಪ್ಪನವರ ಎರಡು ಬಾರಿ ಶಾಸಕರಾಗಿ ಕ್ಷೇತ್ರದ ಅಭಿವೃದ್ಧಿಯ ಜೊತೆಗೆ ಲಿಂಗಾಯತ ಪಂಚಮಸಾಲಿ ಸಮಾಜದ ಮಕ್ಕಳ ವಿದ್ಯಾಭ್ಯಾಸ ಮತ್ತು ಉದ್ಯೋಗಕ್ಕಾಗಿ 2ಎ ಮೀಸಲಾತಿಗಾಗಿ ಕೂಡಲಸಂಗಮದಿಂದ ಬೆಂಗಳೂರದವರಗೆ 718 ಕಿ.ಮೀ ಪಾದಯಾತ್ರೆ ಮಾಡುವ ಮೂಲಕ 2023ರಲ್ಲಿ ಕಾಂಗ್ರೆಸ್ ಪಕ್ಷ 136 ಸ್ಥಾನಗಳನ್ನು ಗೆಲ್ಲುವಲ್ಲಿ ಕಾಶಪ್ಪನವರದು ಸಿಂಹಪಾಲು ಇದೆ. ಇಂತಹ ಲಿಂಗಾಯತ ಪ್ರಬಲ ನಾಯಕನಿಗೆ ಈ ಬಾರಿ ಸಚಿವ ಸ್ಥಾನ ನೀಡಿ ಬಾಗಲಕೋಟೆ ಜಿಲ್ಲೆಯ ಉಸ್ತುವಾರಿಯ ಜವಾಬ್ದಾರಿ ವಹಿಸಿದರೆ ಖಂಡಿತ ಇಡೀ ಜಿಲ್ಲೆ ಅಭಿವೃದ್ಧಿಯ ಜೊತೆಗೆ ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷ ಮತ್ತಷ್ಟು ಪ್ರಬಲವಾಗಿ ಸಂಘಟನೆಯಾಗಲು ಸಾಧ್ಯವಾಗಲಿದೆ ಎಂದರು.

### ನಾಳೆ ಜಿಜ್ಞಾಸೆ ಕಾರ್ಯಕ್ರಮ

**ಹುಬ್ಬಳ್ಳಿ:** ಇಲ್ಲಿಯ ದುರ್ಗದ ಬೈಲ್ ಗೌಳಿಗಲ್ಲಿರುವ ವೆಂಕಟೇಶ್ವರ ದೇವಸ್ಥಾನದಲ್ಲಿ ವಿಜಯೀಂದ್ರ ಗುಡಿ ಹಾಗೂ ಶ್ರೀಶಗುಡಿ ಅವರಿಂದ ಜು.5ರಂದು ಬೆಳಗ್ಗೆ 10 ಗಂಟೆಗೆ ಜಿಜ್ಞಾಸೆ ಕಾರ್ಯಕ್ರಮ ನಡೆಯಲಿದೆ. ರಾಷ್ಟ್ರಪತಿ ಪ್ರಶಸ್ತಿ ಪುರಸ್ಕೃತ ವಿದ್ವಾನ್ ಡಾ. ವ್ಯಾಸನಕೆರೆ ಪ್ರಭಂಜನ ಆಚಾರ್ಯ ಅವರು ನಡೆಸಿಕೊಡಲಿದ್ದಾರೆ. ಸಾಧನ ಮಾರ್ಗ ಎಂಬ ವಿಷಯದ ಬಗ್ಗೆ ಕಾರ್ಯಕ್ರಮ ನಡೆಯಲಿದೆ ಎಂದು ವಿಜಯೀಂದ್ರ ಗುಡಿ ಹಾಗೂ ಶ್ರೀಶ ಗುಡಿ ತಿಳಿಸಿದ್ದಾರೆ.

## ವಿವಿಧ ಕ್ಷೇತ್ರದಲ್ಲಿ ಸಾಧನೆಗೈದ ಸಾಧಕರಿಗೆ ಸತ್ಕಾರ ಸಮಾರಂಭ

**ಮುಧೋಳ:** ಭಾರತೀಯ ಸೇನೆಯಲ್ಲಿ ಸೈನಿಕನಾಗಿ, ಗುಪ್ತಚರ ವಿಭಾಗದಲ್ಲೂ ಸೇರಿ ಕಳೆದ 16ವರ್ಷ ಭಾರತ ಮಾತೆಯ ಸೇವೆ ಸಲ್ಲಿಸಿದ್ದು, ನನಗೆ ಸಂತಸ ತಂದಿದೆ ಎಂದು ಮಾಜಿ ಸೈನಿಕ ಶಂಕರ ಬಾಡಗಿ ಹೇಳಿದರು.

ನಗರದ ಪಾರ್ಕ್ ಹೊಟೇಲ್ ಸಭಾ ಭವನದಲ್ಲಿ ಬಾಲ್ಯದ ಗೆಳೆಯರ ಬಳಗ ಹಮ್ಮಿಕೊಂಡಿದ್ದ ವಿವಿಧ ಕ್ಷೇತ್ರದಲ್ಲಿ ಸಾಧನೆ ಮಾಡಿದ ಸಾಧಕರ ಸತ್ಕಾರ ಸಮಾರಂಭದಲ್ಲಿ ಆತ್ಮೀಯ ಸನ್ಮಾನ ಸ್ವೀಕರಿಸಿ ಅವರು ಮಾತನಾಡಿ, ಕೊವಿಡ್ -19. ಕೋರೊನಾದಿಂದ ಸಂಕಷ್ಟದಲ್ಲಿದ್ದ ನನ್ನ ನೆರವಿಗೆ ಬಂದ ಈ ಗೆಳೆಯರ ಬಳಗವನ್ನು ಎಂದೂ ಮರೆಯಲಾರೆ ಎಂದರು.

ಚಂದರಗಿ ಉಪ ತಹಶೀಲ್ದಾರ್ ರಂಗನಗೌಡ ನಾಯಕ, ಗೌರವ ಡಾಕ್ಟರ್ ಪದವಿ ಪಡೆದ ಪ್ರಾ.ಎ.ಎಚ್.ಬರಗಿ, ಬೆಳಗಾವಿ ಜಿಪಂ. ಯೋಜನಾಧಿಕಾರಿ ರವೀಂದ್ರ ಬಂಗಾರಪ್ಪನವರ ಮಾತನಾಡಿ, ಕಳೆದ 40 ವರ್ಷದ ನಂತರ 1987ರ ಎಸ್‌ಎಸ್‌ಎಲ್‌ಸಿ. ತಂಡದ ನೂರಾರು ಗೆಳೆಯರು ಗುರುವಂದನೆಗೆ ಸೇರಿ ಪರಿಚಯಿಸಿಕೊಂಡು, ನಮ್ಮ ಸೇವೆ ಗುರುತಿಸಿ ತಾವು ನೀಡಿರುವ ಗೌರವ ಸತ್ಕಾರ ರಾಜ್ಯ, ರಾಷ್ಟ್ರಮಟ್ಟದ ಸನ್ಮಾನಗಿಂತ ನಮಗಿದು ಸಂತಸ ತಂದಿದೆ ಎಂದರು.



ಪ್ರಮುಖರಾದ ಸಂಜಯ ಕಮಕೇರಿ, ಮುಸ್ತಾಕ ಬಿದರಿ, ನಂದು ಚಿಕದಾನಿ, ಕಿಶೋರ ಘೋರ್ಪಡೆ, ಎಂ.ಬಿ. ಪಾಟೀಲ, ಸುಭಾಸ ಭೋಸಲೆ, ಭೀಮಶಿ ಘೋರ್ಪಡೆ, ಎಂ.ಡಿ.ನೇವಣಕ್ಕಿ, ಅಪ್ಪಾಸಿ ಘೋರ್ಪಡೆ, ಬಾಬು ನಿಂಬಾಳಕರ, ಎಸ್.ಬಿ.ಜಲಗೇರಿ, ಎಸ್.ಎಸ್. ಬೋಳಿಶೆಟ್ಟಿ, ಬಿ.ಎಚ್.ಬೀಳಗಿ, ಗಂಗಮ್ಮ ತಿಮಸಾನಿ, ಸುನೀತಾ ಜಾಧವ, ಭಾರತಿ ಗಲಗಲಿ, ಸಹನಾ ಚೌಗಲಾ ಜಿರಲಿ ಇತರರಿದ್ದರು. ಎಂ.ಆರ್.ಬಿದರಿ ನಿರುಪಿಸಿದರು. ಭಾರತಿ ಗಲಗಲಿ ಸಂಗಡಿಗರು ಪ್ರಾರ್ಥಿಸಿದರು. ಎಂ.ಆಯ್. ರಾಮತೀರ್ಥ ಸ್ವಾಗತಿಸಿದರು. ಮಹಾನಂದಾ ಮೆಳ್ಳಿಗೇರಿ ವಂದಿಸಿದರು.

## ಪರಿಸರ ಸಂರಕ್ಷಣೆ ನಾಗರಿಕನ ಕರ್ತವ್ಯ: ಶ್ರೀಗಳು

**ತೇರದಾಳ:** ಪರಿಸರ ಸಂರಕ್ಷಣೆ ಪ್ರತಿಯೊಬ್ಬ ನಾಗರಿಕನ ಕರ್ತವ್ಯವಾಗಿದ್ದು, ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಮರ ನೆಟ್ಟು ಪರಿಸರ ಉಳಿಸುವ ಅಭಿಯಾನದಲ್ಲಿ ತೊಡಗಿಸಿಕೊಳ್ಳಬೇಕು. ಪರಸರ ಕಾಪಾಡದಿದ್ದರೆ ಮುಂದಿನ ಜೀವಸಂಕುಲದ ಬದುಕು ದುಸ್ತರವಾಗುವುದು. ಪರಸರವು ನಮ್ಮ ಜೀವನದ ಒಂದು ಪ್ರಮುಖ ಭಾಗವಾಗಿದೆ ಎಂದು ಆನಂದ ಬಿ.ಸಿರಬೂರ ಹೇಳಿದರು.

ಇತ್ತೀಚೆಗೆ ತೇರದಾಳ ಪಟ್ಟಣದ ಪ್ರತಿಷ್ಠಿತ ಡಿಜಿಬಿ ಸಂಸ್ಥೆಯಲ್ಲಿ ರಾಷ್ಟ್ರೀಯ ವಿದ್ಯಾರ್ಥಿ ಪರಿಸರ ಸ್ಪರ್ಧೆ (ಫಖಿಕಇತ್-2026) ಬಿತ್ತೋಣ, ಬೆಳೆಸೋಣ (ಖಿಟಡಿಜ್ಜ್ಲಿಜ ಠಿಟ ಏಟಡಿಜ್ಜ್ಲಿಜ) ಅಭಿಯಾನದ ಪೋಸ್ಟರ್ ಅನಾವರಣ ಕಾರ್ಯಕ್ರಮದಲ್ಲಿ ಮಾತನಾಡಿ, ವಿದ್ಯಾರ್ಥಿಗಳಲ್ಲಿ ಪರಿಸರ ಸಂರಕ್ಷಣೆಯ ಬಗ್ಗೆ ಕಾಳಜಿ ಇರಬೇಕು. ಅದರ ಮಹತ್ವ ಅರಿಯಬೇಕು. ನಿರಂತರವಾಗಿ ಸಸಿ ನೆಡುವಂತಹ ಸಂಸ್ಕೃತಿ ಬೆಳೆಸಿಕೊಳ್ಳಬೇಕು ಎಂದರು.

ರಾಮಕೃಷ್ಣ ವಿವೇಕಾನಂದ ಆಶ್ರಮ, ಜಮಖಂಡಿ ಪ.ಪೂ.ಶ್ರೀ ಸ್ವಾಮಿ ಗಿರಿಜೇಶಾನಂದಜೀ ಮಹಾರಾಜರು ದಿವ್ಯಸಾನ್ನಿಧ್ಯ ವಹಿಸಿ ಮಾತನಾಡಿ, ಕಾಡಿನಲ್ಲಿ ಹಸಿರಿದ್ದರೆ ನಾಡಿನಲ್ಲಿ ಉಸಿರಿರುತ್ತದೆ. ಪ್ರತಿ ಮನೆಗೊಬ್ಬ ಗಿಡನೆಟ್ಟು ನಿಸರ್ಗದ ಋಣವನ್ನು ತೀರಿಸಬೇಕು. ಕಾಡನ್ನು ಬೆಳೆಸುವುದಕ್ಕಾಗಿ ಮತ್ತು ಸಂರಕ್ಷಿಸುವುದಕ್ಕಾಗಿ ಪಣ ತೊಡೋಣ ಎಂದರು. ಡಿಜಿಬಿ ಸಂಸ್ಥೆ ನಿರ್ದೇಶಕ ಡಾ.ಮಧುರಾ ಪಿ.ದಾನಿಗೊಂಡ ಅಧ್ಯಕ್ಷತೆ ಅವಹಿಸಿ ಮಾತನಾಡಿದರು. ದಾನಿಗೊಂಡ ಆಯುರ್ವೇದಿಕ್ ಮೆಡಿಕಲ್ ಕಾಲೇಜಿನ ಪ್ರಾಚಾರ್ಯ ಡಾ.ಪಿ.ಬಿ.ಅಪರಾಜ, ಅಕಾಡೆಮಿಕ್ ಡೀನ್ ಡಾ.ವಿಶ್ವನಾಥ್ ರೆಡ್ಡಿ, ಸಂದೀಪ ಸೋಮಸೋಲೆ, ಬಿ.ಎಸ್. ಬಾಗೇವಾಡಿ, ಡಾ.ಎಂ.ಆರ್.ಪಾಟೀಲ, ಕೆ.ಜಿ.ಗುರವ, ಪ್ರಕಾಶ ಮಾಳಿ ಸೇರಿದಂತೆ ಅನೇಕ ಗಣ್ಯರು ಉಪಸ್ಥಿತರಿದ್ದರು. ಶಿಕ್ಷಕ ಸಿದ್ದು ಹಾವೋಜಿ ನಿರೂಪಿಸಿ, ವಂದಿಸಿದರು.



## ವಚನ ಸಾಹಿತ್ಯ ಬೆಳಕಿಗೆ ತಂದವರು ಹಳಕಟ್ಟಿಯವರು: ಶ್ರೀ

**ಗುಳೇದಗುಡ್ಡ:** ಹಳಕಟ್ಟಿಯವರು ವಚನ ಸಾಹಿತ್ಯವನ್ನು ಸಂಶೋಧಿಸದೇ ಇದ್ದಿದ್ದರೆ ವಚನ ಸಾಹಿತ್ಯ ಇಂದು ನಮಗೆ ದೊರೆಯುತ್ತಿದ್ದಿಲ್ಲ. ಶರಣರ ವಚನದಕಟ್ಟುಗಳು ಮನೆಗಳ ಮಾಡಿನಲ್ಲಿ, ಗೋಡೆಯಲ್ಲಿ, ಮಣ್ಣಿನಲ್ಲಿ ಮರೆಯಾಗುತ್ತಿದ್ದವು. ಜಗತ್ತಿನ ಅಮೂಲ್ಯವಾದ ವಚನ ಸಾಹಿತ್ಯ ಕಣ್ಮರೆಯಾಗುತ್ತಿತು. ತಮ್ಮ ಜೀವನದುದ್ದಕ್ಕೂ ವಚನ ಸಾಹಿತ್ಯ ಸಂರಕ್ಷಣೆ ಕಾರ್ಯ ಮಾಡಿದ ಹಳಕಟ್ಟಿಯವರು ವಚನ ಪಿತಾಮಹರಾಗಿದ್ದಾರೆ ಎಂದು ಇಳಕಲ್ಲದ ಡಾ.ಗುರುಮಹಾಂತ ಶ್ರೀಗಳು ಹೇಳಿದರು.

ಅವರು ಪಟ್ಟಣದ ಶ್ರೀ ಜ.ಗುರುಸಿದ್ದೇಶ್ವರ ಬೃಹನ್ಮಠದಲ್ಲಿಡಾ.ಫ.ಗು.ಹಳಕಟ್ಟಿತಾಲೂಕುಟ್ರಸ್ಟ್ ಹಾಗೂ ಶ್ರೀ ಗುರುಸಿದ್ದೇಶ್ವರ ಮಠದ ವತಿಯಿಂದ ಆಯೋಜಿಸಿದ್ದ ಡಾ.ಫ.ಗು.ಹಳಕಟ್ಟಿ ಜನ್ಮದಿನದ ವಚನ ಸಾಹಿತ್ಯ ಸಂರಕ್ಷಣಾ ದಿನಾಚರಣೆಯಲ್ಲಿ ಗೌರವ ಡಾಕ್ಟರೇಟ್ ಪದವಿ ಪಡೆದ ನಿಮಿತ್ತ ಗೌರವ ಸನ್ಮಾನ ಸ್ವೀಕರಿಸಿ ಮಾತನಾಡಿ, ಬಸವಾದಿ ಶರಣರ ಕೊಟ್ಟಂತಹ ವಚನ ಸಾಹಿತ್ಯವನ್ನು ಉಳಿಸಬಾರದು ಎನ್ನುವ ದೊಡ್ಡ ಷಡ್ಯಂತ್ರ ನಾಡಿನಲ್ಲಿ ನಡೆದಿತ್ತು. ಅದರ ವಿರುದ್ಧ ಹೋರಾಡಿದ ಅನೇಕ ವಚನಕಾರರು ವಚನ ಸಾಹಿತ್ಯ ಸಂರಕ್ಷಣೆ ಮಾಡಿದರು. ಅದರ ಫಲವಾಗಿ ಇಂದು ನಾಡಿನ ಶ್ರೀಮಂತ ವಚನ ಸಾಹಿತ್ಯ ಜೀವಂತವಾಗಿ ಉಳಿದಿದೆ ಎಂದರು.



ಜಗದ್ಗುರು ಗುರುಸಿದ್ಧ ಪಟ್ಟದಾರ್ಯ ಶ್ರೀಗಳು ಮಾತನಾಡಿ, ವಚನ ಸಾಹಿತ್ಯವೆಂಬ ಅಮೂಲ್ಯ ಸಂಪತ್ತನ್ನು ಸಂರಕ್ಷಣೆ ಮಾಡಿ ಕೊಡುಗೆ ನೀಡಿದ ಡಾ.ಫ.ಗು.ಹಳಕಟ್ಟಿ ಅವರ ನಿಸ್ವಾರ್ಥ ವಚನ ಸಾಹಿತ್ಯದ ಸೇವೆ ನಾವೆಂದೂ ಮರೆಯುವಂತಿಲ್ಲ ಎಂದರು.

ಟ್ರಸ್ಟ್‌ನ ತಾಲೂಕು ಅಧ್ಯಕ್ಷ ವಿ.ಎ.ಬೆನಕನಾಳ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಟ್ರಷ್ಟ ವತಿಯಿಂದ ಪ್ರಸಕ್ತ ವರ್ಷದಿಂದ ನೀಡುವ ಡಾ.ಫ.ಗು.ಹಳಕಟ್ಟಿ ಪ್ರಶಸ್ತಿಯನ್ನು ಬಸವ ಕೇಂದ್ರದ ಅಧ್ಯಕ್ಷ ಎಚ್.ಎಸ್.ಹುಳಪಲ್ಲೆದ ಅವರಿಗೆ ನೀಡಿ ಗೌರವಿಸಲಾಯಿತು.

ಈ ವೇಳೆ ಡಾ.ರಾಜಶೇಖರ ಬಸುಪಟ್ಟದ, ಟ್ರಸ್ಟ್‌ನ ತಾಲೂಕು ಕಾರ್ಯದರ್ಶಿ ಚಂದ್ರಶೇಖರ ಹೆಗಡೆ, ಸದಸ್ಯರಾದ ಸಿದ್ದಲಿಂಗಪ್ಪ ಬರಗುಂಡಿ, ಮಹಾದೇವಯ್ಯ ನೀಲಕಂಠಮಠ, ರಾಜಶೇಖರ ಪಾಗಿ, ಸುರೇಶ ವಗ್ಗಾ, ಬಸವರಾಜ ಚವಡಿ, ಮಲ್ಲಿಕಾರ್ಜುನ ರಾಜನಾಳ, ಬಸವರಾಜ ಸಿಂದಗಿಮಠ, ಮಳಿಯಪ್ಪ ಸುರಪೂರ, ರವಿ ಶೇಬಿನಕಟ್ಟಿ, ಸಂಗಮೇಶ ಚಿಕ್ಕಾಡಿ, ಅನ್ನಪೂರ್ಣ ಜವಳಿ, ಭಾಗೀರಥಿ ಆಲೂರ, ಪ್ರಕಾಶ ಶೇಬಿನಕಟ್ಟಿ, ದೇವಿಕಾ ಬಸವರಾಜ ಇತರರು ಇದ್ದರು.

## ಮುಖ್ಯಾಧಿಕಾರಿ, ಸದಸ್ಯರ ನಡುವೆ ವಾಗ್ವಾದ

**ಕಮತಗಿ:** ಪಟ್ಟಣ ಪಂಚಾಯಿತಿ ಸಾಮಾನ್ಯ ಸಭೆಯಲ್ಲಿ ಮುಖ್ಯಾಧಿಕಾರಿ ಹಾಗೂ ಸದಸ್ಯಸಂಗಪ್ಪ ಗಾಣಿಗೇರ ಇವರ ಇಬ್ಬರ ನಡುವೆ ವಾಗ್ವಾದ ನಡೆಯಿತು.

ಗಣರಾಜ್ಯೋತ್ಸವ ಹಬ್ಬದ ಆಚರಣೆ ಖರ್ಚ 40,000 ರೂ.ಗಳನ್ನು ಖರ್ಚು ತೋರಿಸಿದ್ದೀರಿ. ಇಷ್ಟು ಖರ್ಚು ಹೇಗಾಯಿತು ಎಂದು ಸದಸ್ಯರು ಕೇಳಿದರು.

ಇದಕ್ಕೆ ಮುಖ್ಯಾಧಿಕಾರಿಗಳು ಉತ್ತರ ನೀಡುವಲ್ಲಿ ತಡಬಡಿಸಿದರು. ಮಧ್ಯಪ್ರವೇಶಿಸಿದ ಅಧ್ಯಕ್ಷರು ನಿಮಗೆ ಅನುಮಾನವಿದ್ದರೆ ಎಲ್ಲ ವೋಚರಗಳು ಕಚೇರಿಯಲ್ಲಿ ಇರುತ್ತವೆ. ನೀವು ಬಂದು ನೋಡಬಹುದೆಂದು ತಿಳಿಗೊಳಿಸಿದರು.

ಸ್ಥಳೀಯ ಪಪಂ ಕಾರ್ಯಾಲಯದ ಸಭಾಭವನದಲ್ಲಿ ಅಧ್ಯಕ್ಷ ಬಸವರಾಜ ಪಿ ಕುಂಬಳಾವತಿ ಅವರ ಅಧ್ಯಕ್ಷತೆಯಲ್ಲಿ ನಡೆದ ಸಾಮಾನ್ಯ ಸಭೆಯಲ್ಲಿ ಮಾತಿನ ಚಕಮಕಿ ನಡೆಯಿತು.

ಬೀದಿ ದೀಪದ ಸಲುವಾಗಿ 6,63,488 ರೂ ಬೀದಿ ದೀಪದ ಬಲ್ಬುಗಳನ್ನು ಖರೀದಿ ಮಾಡಿದ್ದನ್ನು, ಎಲ್ಲಿ ಅಳವಡಿಸಿರಿ ಎಂದು ಕೇಳಿದರು. ಇದಕ್ಕೆ ಮುಖ್ಯಾಧಿಕಾರಿಗಳು ಮಾತನಾಡಿ, ತಂದ ಬಲ್ಬ್ ಗಳನ್ನು ಎಲ್ಲ ವಾಡ್‌ಗಳಿಗೆ ಹಾಕಿದ್ದೇವೆ ಎಂದರು.



ಖಾಲಿ ಇರುವ ಪೌರಕಾರ್ಮಿಕರ ಹುದ್ದೆಗಳನ್ನು ಭರ್ತಿ ಮಾಡಲು ಸರ್ವ ಸದಸ್ಯರು ಒಪ್ಪಿಗೆ ಸೂಚಿಸಿದರು. ಅಲ್ಲದೇ ಮುಖ್ಯಾಧಿಕಾರಿ ಕಾರಿನ ಬಾಡಿಗೆ 78 ಸಾವಿರ ಹೇಗಾಗುತ್ತದೆ. ಮುಂದಿನ ದಿನಗಳಲ್ಲಿ ಈ ಹಣವನ್ನು ಬೇರೆ ಕಾರ್ಯಕ್ಕೆ ವಿನಿಯೋಗಿಸುವಂತೆ ಸಲಹೆ ನೀಡಿದರು. ಹಾಗೂ ಫೆಬ್ರುವರಿಯಿಂದ ಮೇ ತಿಂಗಳವರೆಗೆ ಸಾಮಾನ್ಯ ನಿಧಿಯ ತಿಂಗಳ ಜಮಾ ಖರ್ಚನ್ನು ಓದಿ ದೃಢೀಕರಿಸಿದ್ದರು.

ಈ ವೇಳೆ ಪಪಂ ಉಪಾಧ್ಯಕ್ಷೆ ನೇತ್ರಾವತಿ ನಿಂಬಲಗುಂದಿ, ಸದಸ್ಯ ರಮೇಶ ಜಮಖಂಡಿ, ಸಂಗಪ್ಪ ಗಾಣಗೇರ, ಗುರಲಿಂಗಪ್ಪ ಪಾಟೀಲ, ದೇವಿಪ್ರಸಾದ ನಿಂಬಲಗುಂದಿ, ಚಂದು ಕುರಿ, ಲಕ್ಷ್ಮಣ ಮಾದರ, ಹುಚ್ಚೇಶ ಮದ್ನಿ,ನಂದಾ ದ್ಯಾಮನ್ನವರ, ರತ್ನಾ ತಳಗೇರಿ, ಹುಚ್ಚವ್ವ ಹಗೇದಾಳ, 'ಮಂಜುಳಾ ಮುರಾಳ, ಸುಮಿತ್ರಾ ಲಮಾಣಿ, ಬಸವರಾಜ ದಂಡಾವತಿ ಹಾಗೂ ಪಪಂ ಮುಖ್ಯಾಧಿಕಾರಿ ಎಫ್. ಎನ್.ಹುಲ್ಲಿಕೇರಿ ಹಾಗೂ ಸಿಬ್ಬಂದಿ ಇದ್ದರು.

## ಕಿರುಸುದ್ದಿ

### ಕಾಮಗಾರಿ ಶೀಘ್ರ ಪೂರ್ಣಗೊಳಿಸಿ: ಮನವಿ

**ನಾಲತವಾಡ:** ಪಟ್ಟಣ ಹಾಗೂ ಸುತ್ತಮುತ್ತಲಿನ ಪ್ರದೇಶಗಳ ವಿವಿಧ ಮೂಲಭೂತ ಅಭಿವೃದ್ಧಿ ಕಾಮಗಾರಿ ತ್ವರಿತವಾಗಿ ಪೂರ್ಣಗೊಳಿಸಿ ಸಾರ್ವಜನಿಕರ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ಕಲ್ಪಿಸಬೇಕು ಎಂದು ಆಗ್ರಹಿಸಿ ಮುಖಂಡರು ನಗರಾಭಿವೃದ್ಧಿ ಕೋಶದ ಯೋಜನಾಧಿಕಾರಿ ಬಿ.ಎ. ಸೌದಾಗರಗೆ ಮನವಿ ಸಲ್ಲಿಸಿದರು.

ಮನವಿಯಲ್ಲಿ ಶರಣ ವೀರೇಶ್ವರ ಸಮುದಾಯ ಭವನಕ್ಕೆ ಅಗತ್ಯ ಮೂಲಭೂತ ಸೌಲಭ್ಯಗಳನ್ನು ಒದಗಿಸುವಂತೆ ಒತ್ತಾಯಿಸಲಾಗಿದೆ. ನಾಗಬೇನಾಳ ಗ್ರಾಮದಲ್ಲಿ ನಿರ್ಮಿಸಿರುವ ಘನತ್ಯಾಜ್ಯ ವಿಲೇವಾರಿ ಘಟಕದ ತಡೆಗೋಡೆ ಹಾನಿಗೊಳಗಾದ ಪ್ರಕರಣದಲ್ಲಿ ಸಂಬಂಧಪಟ್ಟ ಅಧಿಕಾರಿಗಳು ಹಾಗೂ ಗುತ್ತಿಗೆದಾರರ ವಿರುದ್ಧ ಸೂಕ್ತ ಕ್ರಮ ಕೈಗೊಂಡು, ಘಟಕಕ್ಕೆ ಸಂಪರ್ಕ ರಸ್ತೆ ನಿರ್ಮಿಸಬೇಕು ಎಂದು ಆಗ್ರಹಿಸಲಾಗಿದೆ. ಎಸ್‌ಎಸ್‌ಪಿ ವಿಶೇಷ ಅನುದಾನದಲ್ಲಿ ನಾಲತವಾಡ ಬಸ್ ನಿಲ್ದಾಣದ ಉತ್ತರ ಹಾಗೂ ಪೂರ್ವ ಭಾಗದಲ್ಲಿ ವ್ಯಾಪಾರ ಮಳಿಗೆಗಳನ್ನು ನಿರ್ಮಿಸಲು ಉದ್ದೇಶಿಸಿರುವುದರಿಂದ ಭವಿಷ್ಯದಲ್ಲಿ ಮುಖ್ಯ ರಸ್ತೆ ಹಾಗೂ ಬೈಪಾಸ್ ರಸ್ತೆ ನಿರ್ಮಾಣಕ್ಕೆ ತೊಂದರೆಯಾಗುವ ಸಾಧ್ಯತೆ ಇದೆ. ಆದ್ದರಿಂದ ಸೂಕ್ತ ಸ್ಥಳವನ್ನು ಗುರುತಿಸಿ ಮಳಿಗೆಗಳನ್ನು ನಿರ್ಮಿಸಬೇಕು ಎಂದು ಮನವಿಯಲ್ಲಿ ತಿಳಿಸಲಾಗಿದೆ. ಮನವಿ ಸ್ವೀಕರಿಸಿದ ನಗರಾಭಿವೃದ್ಧಿ ಕೋಶದ ಯೋಜನಾಧಿಕಾರಿ ಬಿ.ಎ. ಸೌದಾಗರ ಮಾತನಾಡಿ, ಮನವಿಯಲ್ಲಿರುವ ಬೇಡಿಕೆಗಳನ್ನು ಪರಿಶೀಲಿಸಿ ಸಾಧ್ಯವಾದಷ್ಟು ಬೇಗ ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿದರು. ಈ ವೇಳೆ ಮುದ್ದೇಬಿಹಾಳ ತಹಶೀಲ್ದಾರ್ ಕೀರ್ತಿ ಚಾಲಕ, ಪಪಂ ಮುಖ್ಯಾಧಿಕಾರಿ ಪ್ರಶಾಂತ ಸಿ., ಮುಖಂಡರಾದ ಎಂ.ಬಿ.ಅಂಗಡಿ, ಖಾಜಾಹುಸೇನ ಎತ್ತಿಮನಿ, ಶಶಿಧರ ಬಂಗಾರಿ, ಸಂಗಣ್ಣ ಕುಳಗೇರಿ, ಸಂಗಮೇಶ ಮೇಟಿ, ಹಣಮಂತ ಚಲವಾದಿ ಸೇರಿದಂತೆ ಸಾರ್ವಜನಿಕರು ಇದ್ದರು.

### ಸುವರ್ಣ ಮಹೋತ್ಸವ ನಾಳೆ

**ದೇವರಹಿಪ್ಪರಗಿ:** ತಾಲೂಕಿನ ಯಾಳವಾರ ಗ್ರಾಮದ ಸೋಮೇಶ್ವರ ವಿದ್ಯಾವರ್ಧಕ ಸಂಘದ ಪ್ರೌಢಶಾಲೆ ನೂತನ ಕಟ್ಟಡ ಹಾಗೂ ವಿದ್ಯಾರ್ಥಿ ನಿಲಯ ಉದ್ಘಾಟನೆ ಮತ್ತು ಸುವರ್ಣ ಮಹೋತ್ಸವದ ಅಂಗವಾಗಿ ಸ್ಮರಣ ಸಂಚಿಕೆ ಬಿಡುಗಡೆ, ಗುರುವಂದನ ಸೇರಿದಂತೆ ವಿವಿಧ ಕಾರ್ಯಕ್ರಮಗಳು ಜು.5ರಂದು ಜರುಗಲಿವೆ ಎಂದು ಸಂಸ್ಥೆ ಅಧ್ಯಕ್ಷ ರಾಜುಗೌಡ.ಸಂ.ನಾಡಗೌಡ್ರ ಹೇಳಿದರು.

ತಾಲೂಕಿನ ಯಾಳವಾರ ಗ್ರಾಮದ ಸೋಮೇಶ್ವರ ವಿದ್ಯಾವರ್ಧಕ ಸಂಘದ ಕಚೇರಿಯಲ್ಲಿ ಮಾತನಾಡಿ, ಬಾಳೆಹೊನ್ನೂರ ರಂಭಾಪುರಿ ವೀರ ಸಿಂಹಾಸನಾಧೀಶ್ವರ ಜಗದ್ಗುರು ಡಾ.ಪ್ರಸನ್ನ ರೇಣುಕ ವೀರಸೋಮೇಶ್ವರ ರಾಜ್ಯ ದೇಶಿಕೇಂದ್ರ ಶಿವಾಚಾರ್ಯರ ದಿವ್ಯ ಸಾನ್ನಿಧ್ಯದಲ್ಲಿ ಕಾರ್ಯಕ್ರಮ ನಡೆಯಲಿವೆ. ಯಾಳವಾರ ಗುರುಮಠದ ದಾರುಕಲಿಂಗ ಶಿವಾಚಾರ್ಯರು ಹಾಗೂ ಆಲಮೇಲ ಗುರು ಸಂಸ್ಥಾನ ಹಿರೇಮಠದ ಚಂದ್ರಶೇಖರ ಶಿವಾಚಾರ್ಯ ಶ್ರೀಗಳು ನೇತೃತ್ವ ವಹಿಸುವವರು.ಹರಳಕಟ್ಟಿಯ ಸದ್ಗುರು ನಿಜಗುಣ ಶ್ರೀಗಳು, ಕಡಕೋಳ ಸಂಸ್ಥಾನ ಮಠದ ರಾಜಗುರು ಮಹಾಲಿಂಗ ಶ್ರೀಗಳು, ದೇವರಹಿಪ್ಪರಗಿ ಪರದೇಶಿ ಮಠದ ಶಿವಯೋಗಿ ಶ್ರೀಗಳು ವಹಿಸುವರು. ಸೋಮೇಶ್ವರ ವಿದ್ಯಾವರ್ಧಕ ಸಂಘದ ಹಾಗೂ ಸ್ಥಳೀಯ ಪಿಕೆಪಿಎಸ್ ಅಧ್ಯಕ್ಷ ರಾಜುಗೌಡ ಸಂಗನಗೌಡ ನಾಡಗೌಡ್ರ ಅಧ್ಯಕ್ಷತೆ ವಹಿಸಿವರು. ಸಚಿವ ಡಾ.ಎಂ.ಬಿ.ಪಾಟೀಲ, ಸಂಸದ ರಮೇಶ ಜಿಗಜಿಣಗಿ ಜ್ಯೋತಿ ಬೆಳಗಿಸುವರು. ಶಾಸಕರಾದ ಸಿ.ಎಸ್.ನಾಡಗೌಡ, ಗಾಲಿ ಜನಾರ್ಧನ ರೆಡ್ಡಿ, ರಾಜುಗೌಡ ಪಾಟೀಲ ಕುದರಿಸಾಲವಾಡಗಿ ಸ್ಮರಣ ಸಂಚಿಕೆ ಬಿಡುಗಡೆಗೊಳಿಸುವರು. ಮಾಜಿ ಶಾಸಕರಾದ ಎಸ್.ಎಂ.ದೇಸಾಯಿ, ಶರಣಪ್ಪ ಸುಣಗಾರ ಅತಿಥಿಗಳಾಗಿ ಹಲವಾರು ರಾಜಕೀಯ ಮುಖಂಡರು ಸೇರಿದಂತೆ ಇದ್ದರದರು ಗಣ್ಯರು ಭಾಗವಹಿಸುವರು. ಗುರುವಂದನೆ ಹಾಗೂ ಹಿರಿಯ ವಿದ್ಯಾರ್ಥಿಗಳ ಸ್ನೇಹ ಸಮಾಗಮ ಕಾರ್ಯಕ್ರಮದಲ್ಲಿ ಉಪನ್ಯಾಸ, ಎಸ್ಸೆಸ್ಸೆಲ್ಸಿ ವಿದ್ಯಾರ್ಥಿಗಳಿಗೆ ಸನ್ಮಾನ ನಡೆಯಲಿದೆ. ರಾತ್ರಿ ವಿಜಯಪುರದ ಮಂದಾರ ಮೆಲೋಡೀಸ್ ಹಾಗೂ ಅವರಿಂದ ರಸಮಂಜರಿ ಕಾರ್ಯಕ್ರಮ ಜರುಗಲಿದೆ ಎಂದು ತಿಳಿಸಿದರು.

### ಫ.ಗು.ಹಳಕಟ್ಟಿ ಜಯಂತಿ ಆಚರಣೆ



**ದೇವರಹಿಪ್ಪರಗಿ:** ತಾಲೂಕು ಬಸವಶರಣ ಸಂಗಮ ಸೇವಾ ಸಮಿತಿ ಅಧ್ಯಕ್ಷ ಸಂಗಪ್ಪ ತಡವಲ್ ಅವರ ನೇತೃತ್ವದಲ್ಲಿ ಫ.ಗು.ಹಳಕಟ್ಟಿ ಜಯಂತಿ ಆಚರಣೆ ಮಾಡಲಾಯಿತು. ಪಟ್ಟಣದ ಚೌಡೇಶ್ವರಿ ದೇವಸ್ಥಾನದಲ್ಲಿ ಫ.ಗು. ಹಳಕಟ್ಟಿ ಅವರ ಜನ್ಮದಿನ ಹಾಗೂ ವಚನ ಸಾಹಿತ್ಯ ದಿನ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಗೊಲ್ಲಾಳಪ್ಪ ಬಿರಾದಾರ, ಕಾಸಪ್ಪ ಯಂಬತ್ನಾಳ, ನಿಂಗು ದಾನಗೊಂಡ, ರೇವಣಸಿದ್ಧ ನಂದ್ಯಾಳ, ಬಸಪ್ಪ ಕುಂಬಾರ ಸೇರಿದಂತೆ ಹಲವಾರು ಮುಖಂಡರು ಉಪಸ್ಥಿತರಿದ್ದರು.



ಮುದ್ದೇಬಿಹಾಳ: ತಾಲೂಕಿನ ಬಿದರಕುಂದಿ ಗ್ರಾಮದಲ್ಲಿ ಮಳೆಯ ಬರದ ಕಾರಣಕ್ಕೆ ವರುಣ ದೇವನಲ್ಲಿ ಪ್ರಾರ್ಥಿಸಿ ಹಿರಿಯರು ಹಾಗೂ ಮಹಿಳೆಯರ ಸಮ್ಮುಖದಲ್ಲಿ ಶುಕ್ರವಾರ ಗೊಂಬೆ ಮದುವೆ ಮಾಡಿದರು.

### ಬೆಳೆ ವಿವರ ಆ್ಯಪ್‌ನಲ್ಲಿ ದಾಖಲಿಸಿ: ಡಿಸಿ

**ವಿಜಯಪುರ:** 2026-27ನೇ ಸಾಲಿನ ಮುಂಗಾರು ಹಂಗಾಮಿನಲ್ಲಿ ಜಿಲ್ಲೆಯ ರೈತರು ತಮ್ಮ ಜಮೀನಿನಲ್ಲಿ ಬೆಳೆದ ಬೆಳೆ ವಿವರಗಳನ್ನು ಬೆಳೆ ಸಮೀಕ್ಷೆ ಮೊಬೈಲ್ ಆ್ಯಪ್‌ನಲ್ಲಿ ದಾಖಲಿಸಬೇಕು ಎಂದು ಜಿಲ್ಲಾಧಿಕಾರಿ ಡಾ.ಆನಂದ ಕೆ. ರೈತರಲ್ಲಿ ಮನವಿ ಮಾಡಿದ್ದಾರೆ. ರೈತರು ಗೂಗಲ್ ಪ್ಲೇ ಸ್ಟೋರ್ ಅಥವಾ ಕ್ಯೂಆರ್ ಕೋಡ್‌ನಿಂದ ಮುಂಗಾರು ಬೆಳೆ ಸಮೀಕ್ಷೆ ಆ್ಯಪ್ ಡೌನ್‌ಲೋಡ್ ಮಾಡಿಕೊಂಡು, ಸ್ವತ ತಾವೇ ಬೆಳೆ ಸಮೀಕ್ಷೆ ಮಾಡಿ ತಮ್ಮ ಜಮೀನಿನಲ್ಲಿ ತಾವು ಬೆಳೆದ ಬೆಳೆ ವಿವರ ದಾಖಲಿಸಬಹುದು. ಬೆಳೆ ಸಮೀಕ್ಷೆ ತಂತ್ರಾಂಶ ಆ್ಯಪ್ ತಂತ್ರಾಂಶದಲ್ಲಿ ದಾಖಲಾಗುವ ಮಾಹಿತಿ ಬೆಳೆ ಸಾಲ, ಬೆಳೆ ವಿಮೆ, ಬೆಂಬಲ ಬೆಲೆ, ಖರೀದಿ, ಬೆಳೆ ಪರಿಹಾರ, ಪಹಣಿಯಲ್ಲಿ ಬೆಳೆ ವಿವರ ದಾಖಲಿಸಲು,ವಿವಿಧ ಇಲಾಖೆಗಳ ಸವಲತ್ತು ಪಡೆಯಲು ಉಪಯೋಗಿಸಲಾಗುವುದು. ಸರದಿ ಆ.31 ರೊಳಗಾಗಿ ರೈತರು ಸ್ವತಃ ತಮ್ಮ ಜಮೀನಿನ ಬೆಳೆ ಸಮೀಕ್ಷೆ ಮಾಡಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ. ಒಂದು ವೇಳೆ ರೈತರು ತಮ್ಮ ಜಮೀನಿನ ಬೆಳೆ ಸಮೀಕ್ಷೆ ತಾವೇ ಕೈಗೊಳ್ಳಲು ಸಾಧ್ಯವಾಗದಿದ್ದಲ್ಲಿ ತಮ್ಮ ಜಮೀನಿನಲ್ಲಿ ಬೆಳೆದ ವಿವಿಧ ಬೆಳೆಗಳ ಮಾಹಿತಿ ಖಾಸಗಿ ನಿವಾಸಿಗಳ ಮುಖಾಂತರ ಕ್ಷೇತ್ರದಲ್ಲಿದ್ದು ಆ.15 ರಿಂದ ಸೆ.30 ರೊಳಗಾಗಿ ನಿಗದಿವಾಗಿ ದಾಖಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗೆ ತಮ್ಮ ಗ್ರಾಮಕ್ಕೆ ನಿಯೋಜಿಸಲಾದ ಖಾಸಗಿ ನಿವಾಸಿ (ಪಿಆರ್) ಗಳನ್ನು ಅಥವಾ ಕೃಷಿ, ತೋಟಗಾರಿಕೆ, ಕಂದಾಯ ಇಲಾಖೆ ಅಧಿಕಾರಿಗಳನ್ನು ಅಥವಾ ಸಹಾಯವಾಣಿ 18004-253553 ಗೆ ಸಂಪರ್ಕಿಸಲು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ನಗರದ ಸರ್ಕಾರಿ ಮಾದರಿ ಪ್ರಾಥಮಿಕ ಶಾಲೆಯಲ್ಲಿ ವಿಜಯಪುರ ಭಾರತ ಸೇವಾದಳ ಜಿಲ್ಲಾ ಸಮಿತಿ, ತಾಲೂಕು ಸಮಿತಿ, ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯ ಸಹಯೋಗದಲ್ಲಿ ನಡೆದ ತಾ. ಮಟ್ಟದ ಭಾರತ ಸೇವಾದಳ ಶಿಕ್ಷಕರ ಪುನಃಶ್ಚೇತನ ಶಿಬಿರವನ್ನು ಕ್ಷೇತ್ರ ಶಿಕ್ಷಣಾಧಿಕಾರಿ ಟಿ.ಎಸ್.ಆಲಗೂರ ಅವರು ಉದ್ಘಾಟಿಸಿದರು.

ನೂತನ ಪ್ರೌಢ ಶಾಲಾ ಕಟ್ಟಡ ಲೋಕಾರ್ಪಣೆ | ಎಂಬಿಪಾ ಹೇಳಿಕೆ

## ಹೆಣ್ಣುಮಕ್ಕಳನ್ನು ಶಾಲೆಗೆ ಕಳುಹಿಸಿ

**ವಿಜಯಪುರ:** ಹೆಣ್ಣುಮಕ್ಕಳನ್ನು ಕಡ್ಡಾಯವಾಗಿ ಶಾಲೆಗೆ ಕಳುಹಿಸಿ, ಶಿಕ್ಷಣವಂತರನ್ನಾಗಿ ಮಾಡಬೇಕು ಎಂದು ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವ ಎಂ.ಬಿ.ಪಾಟೀಲ ಹೇಳಿದರು.

ಜಿಲ್ಲೆಯ ತಿಕೋಟಾ ತಾಲೂಕಿನ ಕೋಟ್ಯಾಳ ಗ್ರಾಮದಲ್ಲಿ ಬೆಂಗಳೂರಿನ ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ಪ್ರತಿಷ್ಠಾನ ಮತ್ತು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ಲಿಮಿಟೆಡ್ ಸಂಸ್ಥೆಗಳ ಸಿಎಸ್‌ಆರ್ ಅನುದಾನದಡಿ 3.25 ಕೋಟಿ ರೂ.ಗಳ ವೆಚ್ಚದಲ್ಲಿ ನಿರ್ಮಿಸಲಾದ ಸುಸಜ್ಜಿತ ನೂತನ ಸರ್ಕಾರಿ ಪ್ರೌಢ ಶಾಲಾ ಕಟ್ಟಡವನ್ನು ಶುಕ್ರವಾರ ಲೋಕಾರ್ಪಣೆಗೊಳಿಸಿ ಮಾತನಾಡಿದ ಅವರು, ಜಗತ್ತಿನಲ್ಲಿ ದೊಡ್ಡದಾದ ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ತನ್ನ ಆದಾಯದ ಮರುಹೂಡಿಕೆ ಮಾಡಿದ ಏಕೈಕ ವಿಮಾನ ನಿಲ್ದಾಣವಾಗಿದೆ. ಆ ಲಾಭಾಂಶದಲ್ಲಿ ಸಮಾಜಮುಖಿ ಕಾರ್ಯ ನಿರ್ವಹಿಸುವುದರಲ್ಲಿ ಸದಾ ಮುಂದಿರುವ ಈ ಸಂಸ್ಥೆ, ಕೋಟ್ಯಾಳದಲ್ಲಿ ಗುಣಮಟ್ಟದ ಹಾಗೂ ಸುಂದರ ಶಾಲಾ ಕಟ್ಟಡ ನಿರ್ಮಿಸಿಕೊಟ್ಟಿದೆ ಎಂದರು.

ಈ ಸುಸಜ್ಜಿತ ಶಾಲಾ ಕಟ್ಟಡವನ್ನು ಒಟ್ಟು 3.25 ಕೋಟಿ ರೂಪಾಯಿ ವೆಚ್ಚದಲ್ಲಿ, 7,000 ಚದರ ಅಡಿ ವಿಸ್ತೀರ್ಣದಲ್ಲಿ ಅತ್ಯಾಧುನಿಕವಾಗಿ ಪ್ರಾಥಮಿಕ ಹಾಗೂ ಪ್ರೌಢಶಾಲಾ ಕಟ್ಟಡ ನಿರ್ಮಿಸಲಾಗಿದೆ. ಇದರೊಂದಿಗೆ 800 ಚದರ ಅಡಿಯ ಹಳೆಯ ಕಟ್ಟಡದ ಪುನರುಜ್ಜೀವನ ಕಾರ್ಯವನ್ನು ಸಹ ಯಶಸ್ವಿಯಾಗಿ ಪೂರ್ಣಗೊಳಿಸಲಾಗಿದೆ. ಶಾಲೆಯಲ್ಲಿ 1 ರಿಂದ 10ನೇ ತರಗತಿವರೆಗಿನ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಏಳು ಸುಸಜ್ಜಿತ ಕೊಠಡಿಗಳನ್ನು ಸಿದ್ಧಪಡಿಸಲಾಗಿದೆ ಎಂದರು.



> ಹೆಣ್ಣು ಮಕ್ಕಳನ್ನು ಪೋಷಕರು ಕಡ್ಡಾಯವಾಗಿ ಶಾಲೆಗೆ ಕಳುಹಿಸಿಕೊಡಬೇಕು. ಭವಿಷ್ಯದ ದಿನಗಳಲ್ಲಿ ಅವರು ಎಂಜಿನಿಯರ್ ಹಾಗೂ ವೈದ್ಯರು ಒಳಗೊಂಡಂತೆ ಉನ್ನತ ಹುದ್ದೆಗೇರಿ ಉಜ್ವಲ ಭಾರತ ನಿರ್ಮಾಣಕ್ಕೆ ಕೈಜೋಡಿಸಬೇಕು.
> ■ ಎಂ.ಬಿ. ಪಾಟೀಲ, ಜಿಲ್ಲಾ ಉಸ್ತುವಾರಿ ಸಚಿವ

ಬೆಂಗಳೂರು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ಲಿಮಿಟೆಡ್‌ನ ವ್ಯವಸ್ಥಾಪಕ ನಿರ್ದೇಶಕ ಮತ್ತು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಡಾ.ಹರಿ ಮರಾರ ಮಾತನಾಡಿ, ಈ ಸುಂದರ ಕಟ್ಟಡ ವಿದ್ಯಾರ್ಥಿಗಳ ಭವ್ಯ ಭವಿತವ್ಯ ಬೆಳಗುವ ಜ್ಞಾನ ದೇಗುಲವಾಗಿದೆ. ನೀರಾವರಿಯಿಂದ ಈ ಭಾಗದ ರೈತರ ಬಾಳು ಸಮೃದ್ಧಿಗೊಳಿಸಿದ ಡಾ.ಎಂಬಿ ಪಾಟೀಲ ಅವರು ಶೈಕ್ಷಣಿಕ ಉನ್ನತಿಗಾಗಿ ಶ್ರಮಿಸುತ್ತಿದ್ದಾರೆ. ಅವರ ಶ್ರಮದ ಫಲವಾಗಿ ಈ ಕಟ್ಟಡ ಮೈದಳೆದಿದೆ ಎಂದ ಅವರು, ಮಕ್ಕಳಿಗೆ ಈ ಶಾಲೆಯಲ್ಲಿ ಗುಣಮಟ್ಟದ ಶಿಕ್ಷಣ ಕೊಡಿಸುವ ಮೂಲಕ ಒಳ್ಳೆಯ ಕಾರ್ಯದಲ್ಲಿ ಪ್ರತಿಯೊಬ್ಬರೂ ಕೈಜೋಡಿಸಬೇಕು ಎಂದರು.

ಮುಖ್ಯ ಹಣಕಾಸು ಅಧಿಕಾರಿ ಭಾಸ್ಕರ್ ಆನಂದರಾವ್ ಮಾತನಾಡಿ, ಶಿಕ್ಷಣ, ಮೂಲಸೌಲಭ್ಯ ನೀಡುತ್ತಿರುವ ಸಚಿವರ ಕಾರ್ಯ ಅನನ್ಯವಾಗಿದೆ ಎಂದರು.

ಭೂಮಿ ದಾನ ಮಾಡಿದ ಕಮಲಾ ಮುರುಗೇಶ ನಿರಾಣಿ, ಕ್ಷೇತ್ರ ಶಿಕ್ಷಣಾಧಿಕಾರಿ ಬಸವರಾಜ ತಳವಾರ ಮಾತನಾಡಿದರು. ಶಾಲಾ ಕಟ್ಟಡಕ್ಕೆ ಭೂಮಿ ದಾನ ನೀಡಿರುವ ಆನಂದರಾವ್ ಕುಲಕರ್ಣಿ, ಅನೀಲಕುಮಾರ ಪಾಟೀಲ, ವಿ.ಎಸ್.ಪಾಟೀಲ ಇದ್ದರು.

## ಮಳೆ ಅಭಾವ ಎದುರಿಸಲು ಸಜ್ಜಾಗಿರಿ: ಖುಷ್ಬು ಚೌಧರಿ

**ವಿಜಯಪುರ:** ಜಿಲ್ಲೆಯಲ್ಲಿನ ಕುಡಿಯುವ ನೀರಿನ ಲಭ್ಯತೆ, ಹಿಂಗಾರು ಹಾಗೂ ಮುಂಗಾರು ಮಳೆ ಪರಿಸ್ಥಿತಿ, ಮಳೆ ಕೊರತೆಯಾದಲ್ಲಿ ಪರ್ಯಾಯ ಮಾರ್ಗಗಳನ್ನು ಕೈಗೊಳ್ಳುವಂತೆ ಕೈಗಾರಿಕಾ ಮತ್ತು ವಾಣಿಜ್ಯ ಇಲಾಖೆಯ ಕೈಗಾರಿಕಾ ಅಭಿವೃದ್ಧಿ ಆಯುಕ್ತೆ ಹಾಗೂ ನಿರ್ದೇಶಕ ಆಗಿರುವ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಖುಷ್ಬು ಗೋಯಲ್ ಚೌಧರಿ ಹೇಳಿದರು.

ನಗರದ ಜಿ.ಪಂಚಾಯಿತಿ ಸಭಾಂಗಣದಲ್ಲಿ ಜಿಲ್ಲಾಡಳಿತ ಹಾಗೂ ಜಿಪಂ ಆಶ್ರಯದಲ್ಲಿ ಶುಕ್ರವಾರ ಹಮ್ಮಿಕೊಂಡ ಪ್ರಗತಿ ಪರಿಶೀಲನಾ ಸಭೆಯಲ್ಲಿ ಮಾತನಾಡಿ, ಜಿಲ್ಲೆಯಲ್ಲಿ ಮುಂಗಾರು ಮಳೆ ಸಮರ್ಪಕವಾಗಿ ಆಗದೇ ಇದ್ದರೆ, ಕುಡಿಯುವ ನೀರಿನ ಸಮಸ್ಯೆ ಉಂಟಾಗದಂತೆ ಅಧಿಕಾರಿಗಳು ನೋಡಿಕೊಳ್ಳಬೇಕು ಎಂದ ಅವರು, ಇದಕ್ಕೆ ಯಾವ ಮುನ್ನೆಚ್ಚರಿಕಾ ಯೋಜನೆ ರೂಪಿಸಲಾಗಿದೆ ಎಂಬುದರ ಕುರಿತು ಅಧಿಕಾರಿಗಳಿಂದ ಸಮಗ್ರ ಮಾಹಿತಿ ಪಡೆದರು.

ಮಹಾನಗರ ಪಾಲಿಕೆ ಸೇರಿದಂತೆ ವಿವಿಧ ಇಲಾಖೆಗಳ ಆಡಳಿತಾತ್ಮಕ ನಿರ್ವಹಣೆ, ಸಾರ್ವಜನಿಕ ಸೇವೆಗಳ ಅನುಷ್ಠಾನ, ಅಭಿವೃದ್ಧಿ ಕಾಮಗಾರಿಗಳ ಪ್ರಗತಿ, ಕಾರ್ಯನಿರ್ವಹಣೆ ಕುರಿತು ಅಧಿಕಾರಿಗಳಿಂದ ಇಲಾಖಾವಾರು ಪರಿಶೀಲನೆ ನಡೆಸಿದರು. ವಿದ್ಯುತ್ ಸಂಪರ್ಕದಿಂದ ವಂಚಿತವಾಗಿರುವ ಯಾವುದೇ ಗ್ರಾಮ, ವಸತಿ ಪ್ರದೇಶಗಳಿವೆಯೇ ಎಂಬುದರ ಕುರಿತು ಅಧಿಕಾರಿಗಳಿಂದ ವಿವರವಾದ ಮಾಹಿತಿ ಪಡೆದರು. ಜಿಲ್ಲಾಧಿಕಾರಿ ಡಾ.ಆನಂದ್ ಕೆ. ಮಾತನಾಡಿ, ಜಿಲ್ಲೆಯಲ್ಲಿ ಮುಂಗಾರು ಮಳೆ ಪರಿಸ್ಥಿತಿ, ಮಳೆ ಹಿನ್ನೆಲೆಯಲ್ಲಿ ಜಿಲ್ಲಾಡಳಿತ ಕೈಗೊಂಡಿರುವ ಮುನ್ನೆಚ್ಚರಿಕೆ ಕ್ರಮಗಳು ಕುರಿತು ಸಭೆಗೆ ಮಾಹಿತಿ ನೀಡಿದರು.

ಜಿಪಂ ಸಿಇಒ ರಿಷಿ ಆನಂದ ಮಾತನಾಡಿ, ಜಿಲ್ಲೆಯ ವಿವಿಧ ಇಲಾಖೆಗಳ ಅಭಿವೃದ್ಧಿ ಕಾಮಗಾರಿಗಳ ಪ್ರಗತಿ, ಗ್ರಾಮೀಣಾಭಿವೃದ್ಧಿ ಯೋಜನೆಗಳು ಹಾಗೂ ವಿವಿಧ ಕಲ್ಯಾಣ ಕಾರ್ಯಕ್ರಮಗಳ ಅನುಷ್ಠಾನದ ಕುರಿತು ಸಭೆಗೆ ಮಾಹಿತಿ ನೀಡಿದರು.

ಈ ವೇಳೆ ಎಸ್ಪಿ ಲಕ್ಷ್ಮಣ ನಿಂಬರಗಿ, ಪ್ರೊಬೇಷನರಿ ಐಎಎಸ್ ಅಧಿಕಾರಿ ಅಭಿಷೇಕ ಸೆಹರಾ, ಅಪರ ಜಿಲ್ಲಾಧಿಕಾರಿ ಡಾ. ಔದ್ರಾಮ್ ಇತರರು ಇದ್ದರು.



## ಶಿಕ್ಷಕ ಜಗದೀಶಗೆ ಪ್ರಶಸ್ತಿ ಪ್ರದಾನ



**ದೇವರಹಿಪ್ಪರಗಿ:** ತಾಲೂಕಿನ ತಿಳಗೂಳ ಗ್ರಾಮದ ಶಿಕ್ಷಕ ಜಗದೀಶ ಸಾತಿಹಾಳ ಅವರಿಗೆ ಸಿದ್ದೇಶ್ವರ ಶ್ರೀ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಬಾಗೇವಾಡಿ ಪಟ್ಟಣದಲ್ಲಿ ನಡೆದ ಗಾನಯೋಗಿ ಡಾ. ಪಂಚಾಕ್ಷರಿ ಪುಟರಾಜ ಗವಾಯಿಗಳ ಪುಣ್ಯ ಸ್ಮರಣೋತ್ಸವ, ಸ್ಮರಣ ಸಂಚಿಕೆ ಬಿಡುಗಡೆ ಹಾಗೂ ರಾಜ್ಯ ಮಟ್ಟದ ಪ್ರಶಸ್ತಿ ಪ್ರಧಾನ ಸಮಾರಂಭದಲ್ಲಿ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಶೈಕ್ಷಣಿಕ ಕ್ಷೇತ್ರದಲ್ಲಿ ಸಾಧನೆ ಮಾಡಿದ ಶಿಕ್ಷಕರಿಗೆ ಕೊಡಮಾಡುವ ಸಿದ್ದೇಶ್ವರ ಶ್ರೀ ಪ್ರಶಸ್ತಿಗೆ ಆಯ್ಕೆಯಾಗಿರುವ ಜಗದೀಶ ಸಾತಿಹಾಳಗೆ ಗ್ರಾಮದ ಬಸವ ಸೇವಾ ಯುವಕ ಸಮಿತಿ ಉಪಾಧ್ಯಕ್ಷರು, ಹಾಗೂ ಉಪನ್ಯಾಸಕರು ಸಂಗನಬಸವ ಪಿಯು ಕಾಲೇಜ್, ಎಸ್.ಸಿ. ಉಪ್ಪಿನ್ ಡಿಗ್ರಿ ಕಾಲೇಜ್ ವಿಜಯಪುರ ಅಭಿನಂದಿಸಿ ಗೌರವಿಸಿದರು.

ಈ ವೇಳೆ ರಾಘವೇಂದ್ರ ಉಮ್ಮರಗಿ, ಶಿವಪುತ್ರ ಸಾತಿಹಾಳ, ಮುದಕಪ್ಪ ಯಾಳವಾರ, ಬಸಲಿಂಗ ಯಡ್ರಾಮಿ, ಮುತ್ತುರಾಜ ಸಾತಿಹಾಳ, ಶರಣಮ್ಮ ಬಂಡೋಳಿ, ಜಗದೇವಿ ಸಾಹುಕಾರ,ಚೈತ್ರಾ ಸಾತಿಹಾಳ, ಅಕ್ಕಮಹಾದೇವಿ ಬಂಡೋಳಿ, ಬಸವಶ್ರೀ ಸಾತಿಹಾಳ ಸೇರಿದಂತೆ ಗ್ರಾಮದ ಪ್ರಮುಖರು, ಗಣ್ಯರು, ಸಮಿತಿಯ ಎಲ್ಲಾ ಪದಾಧಿಕಾರಿಗಳು, ವಿದ್ಯಾರ್ಥಿ ಮಿತ್ರ, ಸ್ನೇಹಿತ ಬಳಗದವರು ಇದ್ದರು.

## ಸರ್ಕಾರದ ಧೋರಣೆ ಖಂಡನೀಯ: ಸೊಲ್ಲಾಪುರ

**ವಿಜಯಪುರ:** ರಾಜ್ಯದ ರೈತರ ಬದುಕಿಗೆ ಮತ್ತೊಂದು ದೊಡ್ಡ ಹೊಡೆತ ನೀಡುವ ರೀತಿಯಲ್ಲಿ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ನೇತೃತ್ವದ ಕಾಂಗ್ರೆಸ್ ಸರ್ಕಾರ ಕೈಗೊಂಡಿರುವ ಬೆಳೆಯನ್ನೇ ಬೆಳೆಯಬೇಡಿ, ಪರಿಹಾರವನ್ನೇ ಕೇಳಬೇಡಿ ಎನ್ನುವ ಧೋರಣೆ ಕ್ಯಾಬಿನೆಟ್ ನಿರ್ಧಾರ ಅತ್ಯಂತ ನಿರ್ಲಕ್ಷ್ಯ, ರೈತ ವಿರೋಧಿ ಹಾಗೂ ಅಮಾನವೀಯವಾಗಿದೆ ಎಂದು ಆಮ್ ಆದ್ಮಿ ಪಕ್ಷದ ಜಿಲ್ಲಾಧ್ಯಕ್ಷ ಭೋಗೇಶ ಸೊಲ್ಲಾಪುರ ತೀವ್ರವಾಗಿ ಖಂಡಿಸಿದ್ದಾರೆ.

ಈ ಕುರಿತು ಪ್ರಕಟಣೆ ನೀಡಿದ ಅವರು, ರಾಜ್ಯದ ರೈತರು ಇಂದು ಮಳೆ ಕೊರತೆ, ಅತಿವೃಷ್ಟಿ, ಬೆಳೆಗಳಿಗೆ ಸಮರ್ಪಕ ಬೆಲೆ ಸಿಗದಿರುವುದು ತೀವ್ರ ಸಂಕಷ್ಟ ಎದುರಿಸುತ್ತಿದ್ದಾರೆ. ಇಂತಹ ಸಂದರ್ಭದಲ್ಲಿ ರೈತರ ಬೆನ್ನಿಗೆ ನಿಲ್ಲಬೇಕಾದ ಸರ್ಕಾರವೇ ಪರಿಹಾರದ ಜವಾಬ್ದಾರಿಯಿಂದ ಹಿಂದೆ ಸರಿಯುವ ರೀತಿಯ ನಿರ್ಧಾರ ಕೈಗೊಂಡಿರುವುದು ರೈತರಿಗೆ ಮಾಡಿರುವ ದೊಡ್ಡ ಅನ್ಯಾಯವಾಗಿದೆ. ಕೂಡಲೇ ಸರ್ಕಾರ ರೈತರ ನೆರವಿಗೆ ಬರಬೇಕು ಎಂದು ಒತ್ತಾಯಿಸಿದ್ದಾರೆ.

## ಸರ್ಕಾರಿ ಶಾಲೆ ಅವ್ಯವಸ್ಥೆ ಖಂಡಿಸಿ ದೀಡ್ ನಮಸ್ಕಾರ ವಿನೂತನ ಹೋರಾಟ

**ಸಿಂದಗಿ:** ಸರ್ಕಾರಿ ಶಾಲೆಯಲ್ಲಿನ ಮೂಲಸೌಕರ್ಯಗಳ ಕೊರತೆ, ವಿದ್ಯಾರ್ಥಿಗಳಿಗೆ ಸಮರ್ಪಕ ಸೌಲಭ್ಯಗಳ ಅಭಾವ ಹಾಗೂ ಶಿಕ್ಷಣ ಇಲಾಖೆಯ ನಿರ್ಲಕ್ಷ್ಯವನ್ನು ಖಂಡಿಸಿ ಸಿಂದಗಿ ತಾಲೂಕು ಘಟಕದ ಕೆಆರ್‌ಎಸ್ ಪಕ್ಷದ ವತಿಯಿಂದ ವಿನೂತನವಾಗಿ ದೀಡ್ ನಮಸ್ಕಾರ ಹೋರಾಟ ನಡೆಸಲಾಯಿತು.



ನಗರದ ಟಿಪ್ಪು ಸುಲ್ತಾನ್ ವೃತ್ತದಿಂದ ಡಾ.ಬಿ.ಆರ್.ಅಂಬೇಡ್ಕರ್ ವೃತ್ತದ ಮಾರ್ಗವಾಗಿ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯದವರೆಗೆ ಹೋರಾಟಗಾರರು ಸರ್ಕಾರಿ ಶಾಲೆಯ ಸಮಸ್ಯೆಗಳನ್ನು ತಕ್ಷಣ ಪರಿಹರಿಸುವಂತೆ ಆಗ್ರಹಿಸಿ ದೀಡ್ ನಮಸ್ಕಾರ ಸಲ್ಲಿಸುವ ಮೂಲಕ ತಮ್ಮ ಆಕ್ರೋಶವನ್ನು ವ್ಯಕ್ತಪಡಿಸಿದರು. ಶಾಲಾ ಕಟ್ಟಡಗಳ ದುರಸ್ಥಿತಿ, ಶೌಚಾಲಯಗಳ ಕೊರತೆ, ಕುಡಿಯುವ ನೀರಿನ ಸಮಸ್ಯೆ, ಅಗತ್ಯ ಶಿಕ್ಷಕರ ನೇಮಕ ಹಾಗೂ ವಿದ್ಯಾರ್ಥಿಗಳಿಗೆ ಮೂಲಭೂತ ಸೌಲಭ್ಯಗಳನ್ನು ಒದಗಿಸುವಂತೆ ಸರ್ಕಾರವನ್ನು ಒತ್ತಾಯಿಸಿದರು.

ಈ ವೇಳೆ ಕೆಆರ್‌ಎಸ್ ಪಕ್ಷದ ರಾಜ್ಯ ಸಂಘಟನಾ ಕಾರ್ಯದರ್ಶಿ ಶಿವಾನಂದ ಯಡಹಳ್ಳಿ ಮಾತನಾಡಿ, ಸರ್ಕಾರಿ ಶಾಲೆಗಳ ಅಭಿವೃದ್ಧಿಗೆ ಸರ್ಕಾರ ಹೆಚ್ಚಿನ ಆದ್ಯತೆ ನೀಡಬೇಕು. ಗ್ರಾಮೀಣ ಭಾಗದ ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣ ದೊರೆಯುವಂತೆ ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕು. ಸಮಸ್ಯೆಗಳನ್ನು ತಕ್ಷಣ ಪರಿಹರಿಸದಿದ್ದರೆ ಮುಂದಿನ ದಿನಗಳಲ್ಲಿ ಉಗ್ರ ಹೋರಾಟ ಹಮ್ಮಿಕೊಳ್ಳುವುದಾಗಿ ಎಚ್ಚರಿಕೆ ನೀಡಿದರು.

ಹೋರಾಟದಲ್ಲಿ ಗೌರವಾಧ್ಯಕ್ಷ ಸಂಗಣ್ಣ ಬ್ಯಾಕೋಡ, ಸಿಂದಗಿ ತಾಲೂಕಾಧ್ಯಕ್ಷ ನಬಿಹುಣಶ್ಯಾಳ, ಆಲಮೇಲ ತಾಲೂಕಾಧ್ಯಕ್ಷ ಮಹಿಬೂಬ ತಾಂಬೊಳ್ಳಿ, ಕಾರ್ಯದರ್ಶಿ ಮಸ್ತಫಾ ಬಳಗಾನೂರ, ಸಂಗಮೇಶ ಪತ್ತಾರ, ಜಗದೀಶ ಕಲಬುರ್ಗಿ ಸೇರಿದಂತೆ ಪಕ್ಷದ ತಾಲೂಕು ಪದಾಧಿಕಾರಿಗಳು, ಕಾರ್ಯಕರ್ತರು ಭಾಗವಹಿಸಿ ಸರ್ಕಾರದ ವಿರುದ್ಧ ಘೋಷಣೆ ಕೂಗಿ ತಮ್ಮ ಪ್ರತಿಭಟನೆಯನ್ನು ವ್ಯಕ್ತಪಡಿಸಿದರು.

## ಸೇವಾ ಮನೋಭಾವನೆ ಬೆಳೆಯಲಿ: ಆಲಗೂರ

**ಸಿಂದಗಿ:** ನಾವು ನಮಗಾಗಿ ಬದುಕುವುದಕ್ಕಿಂತ ಸಮಾಜಕ್ಕಾಗಿ ಬದುಕಿದಾಗ ಮಾತ್ರ ಸಮಾಜದಲ್ಲಿ ಒಳ್ಳೆಯ ಗೌರವ ಗಳಿಸಲು ಮತ್ತು ಗುರುತಿಸಿಕೊಳ್ಳಲು ಸಾಧ್ಯ ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ಟಿ.ಎಸ್.ಆಲಗೂರ ಹೇಳಿದರು.


ನಗರದ ಸರ್ಕಾರಿ ಮಾದರಿ ಪ್ರಾಥಮಿಕ ಶಾಲೆಯಲ್ಲಿ ವಿಜಯಪುರ ಭಾರತ ಸೇವಾದಳ ಜಿಲ್ಲಾ ಸಮಿತಿ, ತಾಲೂಕು ಸಮಿತಿ, ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯ ಸಹಯೋಗದಲ್ಲಿ ನಡೆದ ತಾ. ಮಟ್ಟದ ಭಾರತ ಸೇವಾದಳ ಶಿಕ್ಷಕರ ಪುನಃಶ್ಚೇತನ ಶಿಬಿರ ಉದ್ಘಾಟಿಸಿ ಮಾತನಾಡಿ, ಭಾರತ ಸೇವಾದಳ ಶಿಸ್ತು, ದೇಶಪ್ರೇಮ, ರಾಷ್ಟ್ರೀಯ ಭಾವೈಕ್ಯತೆ, ಮಾನವೀಯ ಮೌಲ್ಯ ಬೆಳೆಸುವ ಸಂಸ್ಥೆಯಾಗಿದೆ. ಸೇವಾ ಮನೋಭಾವನೆ ವಿಚಾರಧಾರೆ ಮಕ್ಕಳಲ್ಲಿ ಬೆಳೆಸಬೇಕು ಎಂದರು.

ಕ್ಷೇತ್ರ ಸಮನ್ವಯಾಧಿಕಾರಿ ಆಯ್.ಎಸ್.ಟಕ್ಕೆ, ಸೇವಾದಳ ಸಮಿತಿ ಮಹಿಳಾ ಸದಸ್ಯೆ ಶ್ಯಾಮಲಾ ಮಂದೇವಾಲಿ ಮಾತನಾಡಿದರು. ಭಾರತ ಸೇವಾ ದಳದ ವಲಯ ಸಂಘಟಕ ನಾಗೇಶ ಡೋಣೂರ ಪ್ರಾಸ್ತಾವಿಕ ಮಾತನಾಡಿದರು.

ಈ ವೇಳೆ ತಾ.ದೈಹಿಕ ಶಿಕ್ಷಣ ಪರಿವೀಕ್ಷಕ ರಮೇಶ ಬಿರಾದಾರ, ಸೇವಾದಳ ಜಿ. ಸಮಿತಿ ಸದಸ್ಯ ಎಸ್.ಡಿ.ಕುಂಬಾರ, ತಾ.ಸಮಿತಿ ಸದಸ್ಯ ಬಸವರಾಜ ಲಿಂಗದಳ್ಳಿ, ಶಿಕ್ಷಕ ಮಹಿಳಾ ಪ್ರತಿನಿಧಿ ಎಸ್.ಎಸ್.ಕುಂಬಾರ, ಮುಖ್ಯ ಶಿಕ್ಷಕ ಮಹಾದೇವ ಬಿರಾದಾರ ಸೇರಿದಂತೆ ನೇಕರು ಇದ್ದರು. ಸಂಪನ್ಮೂಲ ಶಿಕ್ಷಕ ಆರ್.ಆರ್.ನಿಂಬಾಳ್ಕರ್ ಸ್ವಾಗತಿಸಿದರು. ಶಾಲೆ ತಾಲೂಕು ಸಂಘಟಕ ಡಿ.ಸಿ.ಜಾಧವ್ ನಿರೂಪಿಸಿದರು. ಶಿಕ್ಷಕ ಸಂಗಮೇಶ ಮಲ್ಲೇದ ವಂದಿಸಿದರು.

## ಬೀಳ್ಕೊಡುಗೆ ಸಮಾರಂಭ

**ಮುದ್ದೇಬಿಹಾಳ:** ಅಂಜುಮನ್-ಎ-ಇಸ್ಲಾಂ, ಹೈಸ್ಕೂಲ್‌ನಲ್ಲಿ ಸುಮಾರು 30 ವರ್ಷಗಳ ಕಾಲ ಉರ್ದು ಶಿಕ್ಷಕಿಯಾಗಿ ಸೇವೆ ಸಲ್ಲಿಸಿದ ಎಸ್. ಎಚ್. ದಖನಿ ಅವರ ನಿವೃತ್ತಿ ಅಂಗವಾಗಿ ಅಭಿನಂದನಾ ಹಾಗೂ ಬೀಳ್ಕೊಡುಗೆ ಸಮಾರಂಭ ನಡೆಯಿತು. ಮುಖ್ಯ ಅತಿಥಿಯಾಗಿ ಹೈಸ್ಕೂಲ್‌ನ ಮಾಜಿ ಮುಖ್ಯ ಶಿಕ್ಷಕರಾದ ಎಂ. ಎ. ಬಾಗಬಾನ. ವಿದ್ಯಾರ್ಥಿ ಅಲ್ಫ್ ನದಾಫ್ ಕುರಾನ್ ಪಠಣದೊಂದಿಗೆ ಆರಂಭವಾಯಿತು. ಆಲಿಯಾ ಅಕ್ಕಲಕೋಟೆ ಹಮ್ದ್ ಹಾಗೂ ತೈಬಾ ಮುಲ್ಲಾ ನಾತ್‌ನ್ನು ಪ್ರಸ್ತುತಪಡಿಸಿದರು. ಎಸ್.ಐ.ಹಿರೇಮಠ, ನ್ಯಾಯವಾದಿ ಎಲ್.ಆರ್.ನಾಲತವಾಡ. ಅಧ್ಯಕ್ಷತೆ ಎ.ಕೆ.ನಂದವಾಡಗಿ ವಹಿಸಿದ್ದರು. ಟಿ.ಐ.ಮೊಮಿನ್, ಸಂಸ್ಥೆ ಪದಾಧಿಕಾರಿಗಳು, ಶಿಕ್ಷಕರು, ವಿದ್ಯಾರ್ಥಿಗಳು, ಹಳೆಯ ವಿದ್ಯಾರ್ಥಿಗಳು ಇದ್ದರು.



## ಟಿಪ್ಪರ್ ನದಿಗೆ ಉರುಳಿದ ಘಟನೆ: ಚಾಲಕನ ಶವ ಪತ್ತೆ

**ಕೊಲ್ಹಾರ:** ವಿಜಯಪುರ-ಹುಬ್ಬಳ್ಳಿ ರಾಷ್ಟ್ರೀಯ ಹೆದ್ದಾರಿ-52ರಲ್ಲಿ ಬುಧವಾರ ಸಂಭವಿಸಿದ ಭೀಕರ ರಸ್ತೆ ಅಪಘಾತದಲ್ಲಿ ಟಿಪ್ಪರ್ ಒಂದು ಕೊಲ್ಹಾರ ಸೇತುವೆಯಿಂದ ಕೃಷ್ಣಾ ನದಿಗೆ ಉರುಳಿದ ಘಟನೆ ಸಂಬಂಧಿಸಿದಂತೆ ಶುಕ್ರವಾರ ಎರಡು ಕ್ರೇನ್‌ಗಳ ಮೂಲಕ ಟಿಪ್ಪರ್ ಮೇಲೆತ್ತುವ ಕಾರ್ಯಾಚರಣೆ ನಡೆಯಿತು.

ಈ ವೇಳೆ ಟಿಪ್ಪರ್ ಜತೆಗೆ ಚಾಲಕನ ಶವ ತೆಗೆಯಲಾಯಿತು. ವಾಹನದೊಳಗೆ ಸಿಲುಕಿದ್ದ ಟಿಪ್ಪರ್ ಚಾಲಕ ಬಾಗಲಕೋಟೆ ಜಿಲ್ಲೆ ಬೆಣ್ಣೂರ ಗ್ರಾಮದ ಸಂತೋಷ ಕೋಟಿ ಶವದ ಜೊತೆಗೆ ಟಿಪ್ಪರ್ ಮೇಲೆ ಎತ್ತಲಾಯಿತು.

ಈ ವೇಳೆ ವಿಜಯಪುರ ಹುಬ್ಬಳ್ಳಿ ರಾಷ್ಟ್ರೀಯ ಹೆದ್ದಾರಿ ಬಂದಾದ ಕಾರಣ ಪರ್ಯಾಯವಾಗಿ 20 ವರ್ಷಗಳ ನಂತರ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಬಸ್ ಸೇರಿದಂತೆ ವಾಹನಗಳು ಹಳೆಯ ಕೊರ್ತಿ-ಕೊಲ್ಹಾರ ಮೇಲಿಂದ ಚಲಿಸಿದವು.



## ವಚನ ಸಾಹಿತ್ಯ ಕ್ಷೇತ್ರಕ್ಕೆ ಹಳಕಟ್ಟಿಯವರ ಕೊಡುಗೆ ಅಪಾರ



**ಬಸವನಬಾಗೇವಾಡಿ:** ಇಡೀ ತಮ್ಮ ಬದುಕನ್ನೇ ವಚನ ಸಾಹಿತ್ಯ ಸಂರಕ್ಷಣೆಗಾಗಿ ಶ್ರಮಿಸಿ 250ಕ್ಕೂ ಹೆಚ್ಚು ಶರಣರ ವಚನಗಳನ್ನು ಊರೂರು ಸುತ್ತಿ ಸಂಗ್ರಹಿಸಿ ಪ್ರಕಟಿಸಿ ನಮಗೆ ಕೊಟ್ಟು ಹೋದವರು ಹಳಕಟ್ಟಿಯವರು. ಇವರ ಕೊಡಗೆ ಅಪಾರ ಎಂದು ಸ್ಥಳೀಯ ಕರ್ನಾಟಕ ಚುಟುಕು ಸಾಹಿತ್ಯ ಪರಿಷತ್ ತಾಲೂಕಾಧ್ಯಕ್ಷ ಪ್ರಭಾಕರ ಖೇಡದ ಹೇಳಿದರು.

ಸ್ಥಳೀಯ ತಹಶೀಲ್ದಾರ್ ಕಚೇರಿ ಸಭಾಂಗಣದಲ್ಲಿ ಹಮ್ಮಿಕೊಂಡ ಫ.ಗು. ಹಳಕಟ್ಟಿಯವರ 146ನೇ ಜಯಂತೋತ್ಸವ, ವಚನ ಸಂರಕ್ಷಣಾ ದಿನದ ವಿಶೇಷ ಉಪನ್ಯಾಸಕರಾಗಿ ಮಾತನಾಡಿ, ವಚನ ಸಾಹಿತ್ಯ ಸಂರಕ್ಷಣೆಯೊಂದಿಗೆ ವಿಜಯಪುರ ಜಿಲ್ಲೆಯ ವಿಕಾಸಕ್ಕೆ ಅವರು ಕೊಟ್ಟ ಕೊಡುಗೆ ಅಪಾರವಾಗಿದೆ, ಹೆಣ್ಣು ಮಕ್ಕಳ ಶಿಕ್ಷಣಕ್ಕಾಗಿ ಅವರು ಹೆಚ್ಚಿನ ಮಹತ್ವ ನೀಡಿದರು.

ವಕೀಲರಾಗಿ ಶ್ರದ್ಧೆತ್ಯಾಗ, ಶುದ್ಧ ಹಸ್ತ ಒಂದು ಕಡೆ ಆದರೆ ಹಸಿವು, ಪರಹಿತಕ್ಕಾಗಿ ಸ್ವಂತ ಮನೆ ಮಾರಿದ್ದು, ಕೈಗೆ ಬಂದ ಮಗ ಮರಣಸಿದ್ದು ಇನ್ನೊಂದು ಕಡೆ. ಇದಾವುದಕ್ಕೂ ಧೃತಿಗೆಡದೇ 20ನೇ ಶತಮಾನದ ಶರಣರಂತೆ ಬಾಳಿ ತೋರಿಸಿದವರು ಡಾ.ಫ.ಗು. ಹಳಕಟ್ಟಿಯ ಎಂದರು.

ತಹಶೀಲ್ದಾರ್ ವೈ.ಎಸ್.ಸೋಮನಕಟ್ಟಿ ಮಾತನಾಡಿದರು. ಈ ವೇಳೆ ಶರಣರಾದ ಎಸ್.ಕೆ. ಸೋಮನಕಟ್ಟಿ, ವಿವೇಕಾನಂದ ಕಲ್ಯಾಣಶೆಟ್ಟಿ, ಬಿ.ಎಸ್.ಪಟ್ಟಣದ, ಶ್ರೀಶೈಲ ಸಿರಗುಪ್ಪಿ,ಕಾಶಿನಾಥ ಅವಟಿ, ಜಿ.ಐ.ಬೇಕಿನಾಳ, ಲಕ್ಷ್ಮಣ ಮೇತ್ರಿ, ಶಿವಾನಂದ ತುಬಾಕಿ, ವಿಲಾಸ ಜಾಡರ, ಎನ್.ಎನ್.ಹೊಸಮನಿ ಇದ್ದರು. ಸಿದ್ದು ಶಿರಶ್ಯಾಡ ನಿರೂಪಿಸಿದರು. ಶ್ರೀಶೈಲ ಸ್ವಾಗತಿಸಿದರು. ಎಸ್.ಬಿ.ಅಂಕದ ವಂದಿಸಿದರು.

## ಅನಾಹುತ ಸಂಭವಿಸದಂತೆ ಜಾಗರೂಕರಾಗಿ

**ನಿಡಗುಂದಿ:** ಶಾಲಾ ಮಕ್ಕಳನ್ನು ಸುರಕ್ಷಿತವಾಗಿ ಮನೆಗಳಿಂದ ಶಾಲೆಗೆ ಹಾಗೂ ಶಾಲೆಯಿಂದ ಮನೆಗೆ ತಲುಪಿಸುವ ಜವಾಬ್ದಾರಿ ಚಾಲಕರ ಮೇಲಿದೆ. ರಸ್ತೆ ದಾಟುವಾಗ ಹಾಗೂ ವಾಹನ ಚಲಾಯಿಸುವಾಗ ಸಂಪೂರ್ಣ ಎಚ್ಚರಿಕೆ ವಹಿಸಿ, ಯಾವುದೇ ರೀತಿಯ ಅನಾಹುತ ಸಂಭವಿಸದಂತೆ ಜಾಗರೂಕರಾಗಿರಬೇಕು ಎಂದು ಪಿಎಸ್ಐ ಶಿವಾನಂದ ಪಾಟೀಲ ಹೇಳಿದರು.

ಪಟ್ಟಣದ ಖಾಸಗಿ ಶಾಲಾ ವಾಹನಗಳ ಚಾಲಕರಿಗೆ ವಾಹನ ಮಾಲೀಕರಿಗೆ ಶುಕ್ರವಾರ ರಸ್ತೆ ಸುರಕ್ಷತೆ ಹಾಗೂ ವಿದ್ಯಾರ್ಥಿಗಳ ಭದ್ರತೆ ಕುರಿತು 25 ಕ್ಕಿಂತ ಹೆಚ್ಚು ಶಾಲಾ ವಾಹನ ಒಂದೆಡೆ ಸೇರಿಸಿ ಕಟ್ಟುನಿಟ್ಟಿನ ಸೂಚನೆ ನೀಡಿದರು.

ವಾಹನದ ವಿಮೆ ನೋಂದಣಿ ಪ್ರಮಾಣಪತ್ರ ಸೇರಿದಂತೆ ಎಲ್ಲ ದಾಖಲೆಗಳು ಮಾನ್ಯವಾಗಿರಬೇಕು. ವಾಹನಗಳ ನಿಯಮಿತ ನಿರ್ವಹಣೆ ಮಾಡಬೇಕು. ಯಾವುದೇ ಅಹಿತಕರ ಘಟನೆ ನಡೆಯದಂತೆ ಎಲ್ಲ ಚಾಲಕರು ತಮ್ಮ ಕರ್ತವ್ಯವನ್ನು ಜವಾಬ್ದಾರಿಯಿಂದ ನಿರ್ವಹಿಸಬೇಕು. ಸಂಚಾರ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು ಎಂದು ಖಡಕ್ ಎಚ್ಚರಿಕೆ ನೀಡಿದರು.



## ಯೋಗದಿಂದ ಆರೋಗ್ಯ ವೃದ್ಧಿ: ಡಾ.ವಡ್ಡರ

**ಮುದ್ದೇಬಿಹಾಳದ:** ಯೋಗ ಹಾಗೂ ಧ್ಯಾನದಿಂದ ಆರೋಗ್ಯ ವೃದ್ಧಿಯಾಗಿ ಮನಸ್ಸಿಗೆ ನೆಮ್ಮದಿ ಲಭಿಸಲು ಸಾಧ್ಯವೆಂದು ವೈದ್ಯ ಡಾ.ಪರುಶರಾಮ್ ವಡ್ಡರ ಹೇಳಿದರು.

ಬಸವೇಶ್ವರ ವೃತ್ತದ ಸಮೀಪದ ಸರ್ಕಾರಿ ನೌಕರರ ಭವನದ ಸಭಾಭವನದಲ್ಲಿ ನಿವೃತ್ತ ನೌಕರರ ಸಂಘ ಆಯೋಜಿಸಿದ್ದ ಮಾಸಿಕ ಸಭೆಯಲ್ಲಿ ಮಾತನಾಡಿ, ಹಿರಿಯರು ಆರೋಗ್ಯ ಕಾಪಾಡಿಕೊಳ್ಳುವ ಬಗೆ ಹೇಗೆ ಎಂಬ ವಿಷಯ ಕುರಿತು ಉಪನ್ಯಾಸ ನೀಡಿ ಮಾತನಾಡಿ, ಹಿರಿಯರು ಆದಷ್ಟು ಧ್ಯಾನ ಮಾಡಿ. ಪೂಜ್ಯ ಸಿದ್ದೇಶ್ವರ ಶ್ರೀಗಳಂತಹ ದಾರ್ಶನಿಕರ, ತತ್ವಜ್ಞಾನಿಗಳ ನುಡಿಮುತ್ತು ಆಲಿಸಿರಿ. ವಿನಾಕಾರಣ ಮತ್ತೊಬ್ಬರ ವಿಷಯದಲ್ಲಿ ಮೂಗು ತೂರಿಸಿ ಬುದ್ಧಿ ಹೇಳಲು ಹೋಗಬೇಡಿ. ತಜ್ಞ ವೈದ್ಯರನ್ನು ಸಂಪರ್ಕಿಸಿರಿ. ಏಕಾಂಗಿತನ ಕೂಡದು ಎಂದು ಸಲಹೆ ನೀಡಿದರು.

ಸಂಘದ ಅಧ್ಯಕ್ಷ ಹಾಗೂ ಹಿರಿಯ ಸಾಹಿತಿ ಅಶೋಕ ಪಿ.ಮಣಿ ಅಧ್ಯಕ್ಷತೆ ವಹಿಸಿ ಮಾತನಾಡಿದರು.




ಸದಸ್ಯರಾದ ಎಸ್.ಎಸ್.ಹೂಗಾರ. ಜಿ.ಸಿ.ಅಂಗಡಿ, ಆರ್.ಜಿ.ಧನಶೆಟ್ಟಿ, ಬಸವರಾಜ ಲಿಂಗದಳ್ಳಿ, ಡಾ.ಎಸ್ .ವಿ.ಒಡ್ಡೊಡಗಿ, ಪ್ರೊ.ಬಿ.ಎನ್. ಚೌಡಾಪೂರ, ರಾಜಶೇಖರ ಮೇಗೇರಿ, ಬಿ.ವಿ.ಕೋರಿ, ಬಸವರಾಜ ನಾಲತವಾಡ, ಯು.ಕೆ.ಭಾಗವಾನ, ಸಿ.ಜಿ.ನಾಗರಾಳ, ಡಿ. ಬಿ.ಓಲೇಕಾರ , ಎಚ್.ಬಿ.ದಳವಾಯಿ. ಎ.ಎಚ್ .ಬಿರಾದಾರ ಸೇರಿದಂತೆ ಸಂಘದ ಗೌರವಾಧ್ಯಕ್ಷ ಬಾಪುಗೌಡ ಪಂ.ಪಾಟೀಲ. ಕೋಶಾಧ್ಯಕ್ಷ ಬಿ.ಎಚ್. ಬಳಬಟ್ಟಿ, ಸಂಘಟನಾ ಕಾರ್ಯದರ್ಶಿ ಎಸ್.ಎಸ್ .ಭೂತಲ್. ಮಹಾದೇವಿ ಕಂಠಿ ಇದ್ದರು.

## ಕಿರುಸುದ್ದಿ

### ಅನುಪಮ್‌ಗೆ ಪಿಎಚ್‌ಡಿ

**ಕಲಬುರಗಿ:** ಅನುಪಮ್ ಅಶೋಕ ಪಾಟೀಲ ಅವರು ಮಂಡಿಸಿದ 'ಐಡೆಂಟಿಫಿಕೇಶನ್ ಆಫ್ ಡಿಸಿಸ್ಡ್ ಪೀಜನ್ ಪೀ ಲೀವ್ಸ್ ಯುಸಿಂಗ್ ಇಮೇಜ್ ಪ್ರೋಸೆಸಿಂಗ್ ಆ್ಯಂಡ್ ಮಷೀನ್ ಲರ್ನಿಂಗ್ ಅಪ್ರೋಚೆಸ್' ಎಂಬ ಮಹಾಪ್ರಬಂಧಕ್ಕೆ ಕಲಬುರಗಿಯ ಶರಣಬಸವ ವಿಶ್ವವಿದ್ಯಾಲಯದಿಂದ ಪಿಎಚ್‌ಡಿ ಪದವಿ ಪಡೆದಿದ್ದಾರೆ. ವಿವಿಯ ಕಂಪ್ಯೂಟರ್ ಅಪ್ಲಿಕೇಶನ್ ನಿಕಾಯದ ಡಾ.ವಿರುಪಾಕ್ಷಪ್ಪ ಅವರ ಮಾರ್ಗದರ್ಶನದಲ್ಲಿ ಸಂಶೋಧನೆ ಕೈಗೊಂಡಿದ್ದಾರೆ.



### ಬೆಳೆ ವಿಮೆಗೆ ನೋಂದಾಯಿಸಿ

**ಕನಕಗಿರಿ:** 2026-27ನೇ ಸಾಲಿನ ಮುಂಗಾರು ಹಂಗಾಮಿನ ರೈತ ಸುರಕ್ಷಾ ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನಯಡಿಯಲ್ಲಿ ಬೆಳೆ ವಿಮೆಗೆ ನೋಂದಾಯಿಸಲು ಕೃಷಿ ಇಲಾಖೆ ರೈತರಿಗೆ ಸೂಚಿಸಿದೆ. ಹತ್ತಿ (ನೀರಾವರಿ), ಹತ್ತಿ (ಮಳೆಆಶ್ರಿತ) ಬೆಳೆಗಳಿಗೆ ಜು.15ರಂದು ಕೊನೆ ದಿನವಾಗಿದೆ. ಇತರೆ ಪ್ರಮುಖ ಬೆಳೆಗಳಾದ ತೊಗರಿ(ಮ.ಆ.), ಮೆಕ್ಕೆಜೋಳ(ಮ.ಆ. ಮತ್ತು ನೀರಾವರಿ), ಸಜ್ಜೆ(ಮ.ಆ. ಮತ್ತು ನೀರಾವರಿ), ಸೂರ್ಯಕಾಂತಿ(ನೀರಾವರಿ) ಬೆಳೆಗಳಿಗೆ ಜು.31ಕೊನೆಯ ದಿನವಾಗಿದೆ. ಈ ಯೋಜನೆಯನ್ನು ವಿಮಾ ಕಂಪನಿ ಇಫ್ಕೋ. ಸಂಸ್ಥೆಯ ಮೂಲಕ ಜಾರಿಗೊಳಿಸಲಾಗುತ್ತಿದ್ದು. ಕನಕಗಿರಿ ತಾಲೂಕಿನ ರೈತರು ವಿವಿಧ ಬೆಳೆಗಳಿಗೆ ವಿಮೆ ಮಾಡಿಸಿಕೊಳ್ಳಬಹುದು. ರೈತರು ಸಮೀಪದ ಸೇವಾ ಕೇಂದ್ರ, ಗ್ರಾಮ ಒನ್, ಕರ್ನಾಟಕ ಒನ್, ಅಥವಾ ಬ್ಯಾಂಕ ಮುಖಾಂತರ ಬೆಳೆ ವಿಮೆ ನೋಂದಾಣಿ ಮಾಡಿಸಿಕೊಳ್ಳಬಹುದು ಹೆಚ್ಚಿನ ಮಾಹಿತಿಗೆ ಟೋಲ್ ಫ್ರೀ ನಂ.18001035490ಗೆ ಸಂಪರ್ಕಿಸಬಹುದು ಎಂದು ಕೃಷಿ ಅದಿಕಾರಿ ನವೀನ ಕೆ. ತಿಳಿಸಿದ್ದಾರೆ.

### ಡಾ.ಹಳಕಟ್ಟಿ ವಚನ ಸಾಹಿತ್ಯದ ಪಿತಾಮಹ



**ಯಲಬುರ್ಗಾ:** ಸ್ಥಳೀಯ ಪಟ್ಟಣ ಪಂಚಾಯತಿ ಸಭಾಂಗಣದಲ್ಲಿ ಗುರುವಾರ ವಚನ ಪಿತಾಮಹ ಡಾ.ಫ.ಗು.ಹಳಕಟ್ಟಿ ಅವರ ಜನ್ಮದಿನವನ್ನು ಆಚರಿಸಲಾಯಿತು. ಬಳಿಕ ಪಪಂ ಮುಖ್ಯಾಧಿಕಾರಿ ನಾಗೇಶ ಅವರು ಫ.ಗು.ಹಳಕಟ್ಟಿ ಅವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಮಾತನಾಡಿದ ಅವರು ಡಾ.ಫ.ಗು.ಹಳಕಟ್ಟಿ ಅವರು ವಚನ ಸಾಹಿತ್ಯದ ಪಿತಾಮಹರಾಗಿದ್ದಾರೆ ಇನ್ನೂ ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ನೀಡಿದ ಕೊಡುಗೆ ಅಪಾರವಾಗಿದೆ. ಪ್ರತಿಯೊಬ್ಬರು ಅವರ ವಚನ ಸಾಹಿತ್ಯವನ್ನು ಅಧ್ಯಾಯ ಮಾಡುವ ಮೂಲಕ ಅವುಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದರು. ಈ ವೇಳೆಯಲ್ಲಿ ಕರ್ನಾಟಕ ದಲಿತ ಸಂಘರ್ಷ ಸಮಿತಿ(ಅಂಬೇಡ್ಕರ ವಾದ ಬಣ) ಅಧ್ಯಕ್ಷ ಶಿವಾನಂದ ಬಣಕಾರ,ಈರಪ್ಪ ಬಣಕಾರ,ಪಪಂ ಇಂಜನೀಯರ ಉಮೇಶ ಬೇಲಿ,ಸಿಬ್ಬಂದಿಗಳಾದ ಸುಮಾ ಕಂಚಿ,ರಮೇಶ ಬೇಲೇರಿ,ರವಿ ಪತ್ತೇಪೂರು ಮತ್ತಿತರರು ಇದ್ದರು.

### ಜಿಲ್ಲೆಯಾದ್ಯಂತ ಶೇ.53.79ರಷ್ಟು ಗಣತಿ ನಮೂನೆ ವಿತರಣೆ

**ಕಲಬುರಗಿ:** ವಿಶೇಷ ಸಮಗ್ರ ಮತದಾರರ ಪಟ್ಟಿ ಪರಿಷ್ಕರಣೆ ಕಾರ್ಯ ಜಿಲ್ಲೆಯಲ್ಲಿ ಭರದಿಂದ ಸಾಗಿದ್ದು, ಕಳೆದ ನಾಲ್ಕು ದಿನಗಳ ಅವಧಿಯಲ್ಲಿ ಜಿಲ್ಲೆಯಾದ್ಯಂತ ಒಟ್ಟು 23,71,542 ಮತದಾರರ ಪೈಕಿ ಶುಕ್ರವಾರದ 8 12,75,654 (8.53.79) ಗಣತಿ ನಮೂನೆ ವಿತರಣೆ ಮಾಡಲಾಗಿದೆ ಎಂದ ಜಿಲ್ಲಾ ಚುನಾವಣಾಧಿಕಾರಿ ಇಕ್ರಮ್ ಶರೀಫ್ ತಿಳಿಸಿದ್ದಾರೆ.

ಇದೂವರೆಗೆ ಬಿಎಲ್‌ಒಗಳು 13,240 (ಶೇ.0.56) ಮತದಾರರಿಂದ ಭರ್ತಿ ಮಾಡಿದ ಗಣತಿ ನಮೂನೆ ಪಡೆದು ಮೊಬೈಲ್ ತಂತ್ರಾಂಶದಲ್ಲಿ ಡಿಜಿಟೈಸ್ ಮಾಡಿದ್ದಾರೆ. ಇನ್ನು 1,628 (ಶೇ.0.07) ಮತದಾರರು ಸ್ವಯಂ ಪ್ರೇರಿತವಾಗಿ ಆನ್‌ಲೈನ್ ಮೂಲಕ ಗಣತಿ ನಮೂನೆ ಸಲ್ಲಿಸಿದ್ದಾರೆ. ಬಿಎಲ್‌ಒಗಳು ಮನೆ-ಮನೆ ಭೇಟಿ ಕೊಟ್ಟಾಗ ಇಲ್ಲಿಯವರೆಗೆ 44 ಮತದಾರರು ಸ್ಥಳಾಂತರಗೊಂಡಿರುವುದು ಮತ್ತು 97 ಜನ ನಿಧನ ಹೊಂದಿರುವ ಬಗ್ಗೆ ವರದಿಯಾಗಿದೆ.



ರಾಯಚೂರು: ಜಿಲ್ಲಾಡಳಿತ, ಜಿಪಂ, ಜಿಲ್ಲಾ ಸ್ವೀಪ್ ಸಮಿತಿ ಹಾಗೂ ಪಾಲಿಕೆ ವತಿಯಿಂದ ನಗರದ ಜಿಪಂ ಆವರಣದಲ್ಲಿ ಆಯೋಜಿಸಲಾಗಿದ್ದ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆಗೆ ಜಿಲ್ಲಾ ಉಸ್ತುವಾರಿ ಸಚಿವ ಶರಣಪ್ರಕಾಶ ಪಾಟೀಲ ಹಸ್ತಾಕ್ಷರ ಮಾಡುವ ಮೂಲಕ ಚಾಲನೆ ನೀಡಿದರು. ಸಂಸದ ಜಿ.ಕುಮಾರ ನಾಯಕ, ಶಾಸಕ ಬಸನಗೌಡ ದದ್ದಲ, ವಿಪ ಸದಸ್ಯ ಎ.ವಸಂತಕುಮಾರ, ಡಿಸಿ ಪುವೀತಾ ಎಸ್., ಜಿಪಂ ಸಿಇಒ ಈಶ್ವರ ಕಾಂದೂ ಇತರರಿದ್ದರು.

## ಉತ್ತಮ ಭವಿಷ್ಯ ರೂಪಿಸಿಕೊಳ್ಳಿ: ಶಾಸಕ

**ಮಾನ್ವಿ:** ವಿದ್ಯಾರ್ಥಿಗಳು ತಮ್ಮ ಗುರಿಯ ಬಗ್ಗೆ ಸ್ಪಷ್ಟತೆ ಹೊಂದಿ, ನಿರಂತರ ಅಭ್ಯಾಸ ಮತ್ತು ಶಿಸ್ತಿನ ಜೀವನವನ್ನು ರೂಢಿಸಿಕೊಳ್ಳಬೇಕು. ಸತತ ಪರಿಶ್ರಮವೇ ಯಶಸ್ಸಿನ ಮೂಲವಾಗಿದ್ದು, ಇಂದಿನ ಅಧ್ಯಯನವೇ ನಾಳಿನ ಉಜ್ವಲ ಭವಿಷ್ಯವನ್ನು ರೂಪಿಸುತ್ತದೆ ಎಂದು ಶಾಸಕ ಹಂಪಯ್ಯ ನಾಯಕ ಹೇಳಿದರು.

ಅವರು ಮಾನ್ವಿಯ ನೇತಾಜಿ ಪಿ.ಯು.ಕಾಲೇಜಿನಲ್ಲಿ ಪ್ರಥಮ ವರ್ಷದ ವಿಜ್ಞಾನ,ಕಲಾ ಮತ್ತು ವಾಣಿಜ್ಯ ವಿಭಾಗದ ವಿದ್ಯಾರ್ಥಿಗಳಿಗಾಗಿ ಆಯೋಜಿಸಿದ್ದ ಸ್ವಾಗತ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದರು. ವಿದ್ಯಾರ್ಥಿಗಳು ಶಿಕ್ಷಣದ ಜೊತೆಗೆ ಉತ್ತಮ ವ್ಯಕ್ತಿತ್ವ ನೈತಿಕ ಮೌಲ್ಯಗಳು ಮತ್ತು ಕೌಶಲ್ಯಗಳನ್ನು ಬೆಳೆಸಿಕೊಳ್ಳಬೇಕು. ಅವಕಾಶಗಳನ್ನು ಸದ್ಬಳಕೆ ಮಾಡಿಕೊಂಡು ಸಮಾಜಕ್ಕೆ ಆದರ್ಶ ನಾಗರಿಕರಾಗಬೇಕು ಎಂದು ಕರೆ ನೀಡಿದರು.

ಪ್ರಾಸ್ತಾವಿಕ ವಾಗಿ ಮಾತನಾಡಿದ ಆಡಳಿತಾಧಿಕಾರಿ ಡಾ.ಕೆ.ವಿನಯಾ ಮಾತನಾಡಿ, ಕಳೆದ ನಾಲ್ಕು ವರ್ಷದಿಂದ ಕಲಾ ಮತ್ತು ವಾಣಿಜ್ಯ ವಿಭಾಗದಲ್ಲಿ ಜಿಲ್ಲೆಯಲ್ಲೇ ಅತ್ಯಂತ ಉತ್ತಮ ಫಲಿತಾಂಶ ಕೊಟ್ಟಿದ್ದೇವೆ ಎಂದರು. ಕಾಲೇಜಿನ ಆಡಳಿತ ಮಂಡಳಿಯ ಕೆ.ವಿಜಯ ಲಕ್ಷ್ಮಿ, ಕೆ.ರಾಜಾ ರವಿವರ್ಮಾ, ಅನೀಸ್ ಫಾತಿಮಾ, ರಹಿಂ,ಬಸವರಾಜ, ಸೇರಿದಂತೆ ಎಲ್ಲಾ ಉಪನ್ಯಾಸಕರು, ಸಿಬ್ಬಂದಿ, ವಿದ್ಯಾರ್ಥಿಗಳು ಹಾಗೂ ಪೋಷಕರು ಉಪಸ್ಥಿತರಿದ್ದರು. ಕೊನೆಯಲ್ಲಿ ವಿದ್ಯಾರ್ಥಿ ಗಳಿಂದ ಸಾಂಸ್ಕೃತಿಕ ಕಾರ್ಯಕ್ರಮ ನಡೆದವು.




ಮಾನ್ವಿ: ನೇತಾಜಿ ಪಿ.ಯು.ಕಾಲೇಜಿನಲ್ಲಿ ಪ್ರಥಮ ವರ್ಷದ ವಿಜ್ಞಾನ,ಕಲಾ ಮತ್ತು ವಾಣಿಜ್ಯ ವಿಭಾಗದ ವಿದ್ಯಾರ್ಥಿಗಳಿಗಾಗಿ ಆಯೋಜಿಸಿದ್ದ ಸ್ವಾಗತ ಸಮಾರಂಭವನ್ನು ಶಾಸಕ ಹಂಪಯ್ಯ ನಾಯಕ ಉದ್ಘಾಟಿಸಿದರು.

ಪ್ರಕೃತಿ ವಿಕೋಪ ನಿರ್ವಹಣೆಯ ಮೇಲುಸ್ತುವಾರಿ ಸಭೆ | ಸಚಿವ ಸೂಚನೆ

## ಪರಿಸ್ಥಿತಿ ನಿರ್ವಹಣೆಗೆ ಸನ್ನದ್ಧರಾಗಿ

**ಕೊಪ್ಪಳ:** ಮುಂಗಾರು ಋತುವಿನಲ್ಲಿ ಮಳೆಯ ಕೊರತೆಯ ಮುನ್ಸೂಚನೆ ಕಾಣುತ್ತಿದ್ದು, ಪರಿಸ್ಥಿತಿಯನ್ನು ಎದುರಿಸಲು ಅಧಿಕಾರಿಗಳು ಈಗಿನಿಂದಲೇ ಸಿದ್ಧರಾಗಬೇಕು. ಜನತೆಗೆ ಕುಡಿಯುವ ನೀರು ಒದಗಿಸಲು ಹಾಗೂ ಜನತೆಗೆ ಉದ್ಯೋಗ ಒದಗಿಸುವ ಕ್ರಿಯಾಯೋಜನೆಗಳನ್ನು ಸಿದ್ಧಪಡಿಸಬೇಕು ಎಂದು ಜಿಲ್ಲೆಯ ಪ್ರಕೃತಿ ವಿಕೋಪ ನಿರ್ವಹಣೆಯ ಮೇಲುಸ್ತುವಾರಿ ಸಚಿವ ಡಾ.ಶರಣಪ್ರಕಾಶ ಆರ್.ಪಾಟೀಲ ಅವರು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಆಯೋಜಿಸಲಾಗಿದ್ದ ಕೊಪ್ಪಳ ಜಿಲ್ಲೆಯ ಪ್ರಕೃತಿ ವಿಕೋಪ ನಿರ್ವಹಣೆಯ ಮೇಲುಸ್ತುವಾರಿ ಸಚಿವರ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಮಳೆ ಕೊರತೆಯಿಂದ ಕೃಷಿ ಚಟುವಟಿಕೆ ಕಡಿಮೆಯಾದಲ್ಲಿ ಸರ್ಕಾರದಿಂದ ಮಾನವ ದಿನಗಳನ್ನು ಸೃಜಿಸುವುದು ಅನಿವಾರ್ಯವಾಗಲಿದೆ. ಆದ್ದರಿಂದ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಅಗತ್ಯವಿರುವ ಕಾಮಗಾರಿಗಳ ಬಗ್ಗೆ ವಿಬಿಜಿ ರಾಮ್ ಜಿ ಯೋಜನೆಯಡಿ ಮಾನವ ದಿನಗಳನ್ನು ಸೃಜಿಸಲು ಕ್ರಿಯಾ ಯೋಜನೆ ರೂಪಿಸಬೇಕು. ಜಾಬ್ ಕಾರ್ಡ್ ವಿತರಣೆಗೆ ಕ್ರಮ ವಹಿಸಬೇಕು. ಬೆಳೆ ವಿಮಾ ಯೋಜನೆಗೆ ಜಿಲ್ಲೆಯ ಎಲ್ಲ ಅರ್ಹ ರೈತರು ನೋಂದಣಿ ಮಾಡಿಕೊಳ್ಳುವಂತೆ ಕೃಷಿ ಇಲಾಖೆಯ ಅಧಿಕಾರಿಗಳು ಜಾಗೃತಿ ಮೂಡಿಸಬೇಕು ಎಂದು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಶಾಸಕ ಬಸವರಾಜ ರಾಯರೆಡ್ಡಿ ಅವರು ಮಾತನಾಡಿ, ಯಲಬುರ್ಗಾ ಹಾಗೂ ಕುಕನೂರ ತಾಲ್ಲೂಕುಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಕಾಣುತ್ತಿದೆ. ಬಿತ್ತನೆ ಪ್ರಮಾಣ ಕಡಿಮೆ ಆಗಿದೆ. ಹೆಚ್ಚುವರಿ ಜಿಲ್ಲಾಧಿಕಾರಿ ನೇತೃತ್ವದಲ್ಲಿ ತಂಡ ರಚನೆಯಾಗಬೇಕು. ಈ ತಂಡವು ಜಿಲ್ಲೆಯ ಎಲ್ಲ ತಾಲೂಕಿಗೆ ಸಂಚರಿಸಿ ಆಯಾ ಕಡೆಗಳಲ್ಲಿ ತಹಸೀಲ್ದಾರರು, ತಾಪಂ ಕಾರ್ಯನಿರ್ವಹಣಾಧಿಕಾರಿಗಳು, ಬಿಇಒ ಸೇರಿದಂತೆ ತಾಲೂಕುಮಟ್ಟದ ಅಧಿಕಾರಿಗಳೊಂದಿಗೆ ಸಭೆ ನಡೆಸಿ ಬಿತ್ತನೆ ಪ್ರಮಾಣ, ಕುಡಿವ ನೀರಿನ ಪರಿಸ್ಥಿತಿ ಸೇರಿದಂತೆ ಮಳೆ ಕೊರತೆಯ ಹಿನ್ನಲೆಯಲ್ಲಿ ಎಲ್ಲ ರೀತಿಯ ಮಾಹಿತಿ ಸಂಗ್ರಹಿಸಿ ವರದಿ ಸಿದ್ಧಪಡಿಸಬೇಕು ಎಂದು ತಿಳಿಸಿದರು.



> **ಕುಷ್ಟಗಿ ತಾಲೂಕಿನಲ್ಲಿ ಕುಡಿಯುವ ನೀರಿನ ಸಮಸ್ಯೆ ಹೆಚ್ಚಾಗಿದೆ. ಜೆಜೆಎಂ ಅಡಿ ಪೂರೈಕೆಯಾಗುವ ನೀರಿನಲ್ಲಿ ವ್ಯತ್ಯಯವಾಗುತ್ತಿದೆ. ಶಾಲಾ-ಕಾಲೇಜುಗಳ ಸಮಯಕ್ಕೆ ಅನುಕೂಲವಾಗುವಂತೆ ಬಸ್‌ಗಳನ್ನು ಒದಗಿಸಬೇಕು. ಬಸ್‌ಗಳ ಸಂಖ್ಯೆಯೂ ಕಡಿಮೆ ಇದ್ದು, ಸಾರ್ವಜನಿಕರಿಗೆ, ವಿದ್ಯಾರ್ಥಿಗಳಿಗೆ ಬಹಳಷ್ಟು ತೊಂದರೆ ಉಂಟಾಗಿದೆ. ಈ ಸಮಸ್ಯೆಗಳ ಬಗ್ಗೆ ಸಂಬಂಧಿಸಿದ ಅಧಿಕಾರಿಗಳು ಅಗತ್ಯ ಕ್ರಮ ಕೈಗೊಂಡು ಪರಿಹಾರ ಕಲ್ಪಿಸಿಕೊಡಬೇಕು.**
> ■ ದೊಡ್ಡನಗೌಡ ಹನುಮಗೌಡ ಪಾಟೀಲ, ಶಾಸಕ

ಡಿಸಿ ಡಾ.ಸುರೇಶ ಬಿ.ಇಟ್ನಾಳ ಅವರು ಮಾತನಾಡಿ, ಜಿಲ್ಲೆಯಲ್ಲಿ ಪ್ರಕೃತಿ ವಿಕೋಪಕ್ಕೆ ಸಂಬಂಧಿಸಿದಂತೆ ಯಾವುದೇ ಸನ್ನವೇಶವನ್ನು ಎದುರಿಸಲು ಜಿಲ್ಲಾಡಳಿತ ಸಿದ್ಧವಾಗಿದೆ. ಜೀವ ಹಾನಿ ಪ್ರಕರಣಗಳಿಗೆ ನಿಯಮಾನುಸಾರ ಪರಿಹಾರ ಒದಗಿಸಲಾಗಿದೆ. ರೈತ ಆತ್ಮಹತ್ಯೆ ಪ್ರಕರಣಗಳಿಗೆ ಪರಿಹಾರ ಒದಗಿಸಿದೆ ಎಂದು ಸಚಿವರಿಗೆ ಮಾಹಿತಿ ನೀಡಿದರು.

ಜಂಟಿ ಕೃಷಿ ನಿರ್ದೇಶಕ ಜಿ.ಡಿ.ಕೃಷ್ಣಮೂರ್ತಿ ಮಾತನಾಡಿ, ಜಿಲ್ಲೆಯಲ್ಲಿ ವಾಡಿಕೆಗಿಂತ ಶೇ.31 ರಷ್ಟು ಮಳೆಯ ಕೊರತೆಯಾಗಿದೆ. ಜಿಲ್ಲೆಯಲ್ಲಿ ಮುಂಗಾರು ಹಂಗಾಮಿನ ಸಾಮಾನ್ಯ ಬಿತ್ತನೆ ಗುರಿ 3,49,892 ಹೆಕ್ಟೇರ್ ಆಗಿದ್ದು, ಇದುವರೆಗೂ 1,63,546 ಹೆಕ್ಟೇರ್ ಪ್ರದೇಶದಲ್ಲಿ ಮಾತ್ರ ಬಿತ್ತನೆಯಾಗಿದ್ದು, ಶೇ.47ರಷ್ಟು ಬಿತ್ತನೆ ಕಾರ್ಯ ಪೂರ್ಣಗೊಂಡಿದೆ ಎಂದರು.

ಜಿಪಂ ಸಿಇಒ ವರ್ಣಿತ್ ನೇಗಿ, ಎಡಿಸಿ ಸಿದ್ರಾಮೇಶ್ವರ ಉಪಸ್ಥಿತರಿದ್ದರು.

## ಬೇಡಿಕೆಗೆ ಅನುಗುಣವಾಗಿ ರಸಗೊಬ್ಬರ ಪೂರೈಸಿ

**ರಾಯಚೂರು:** ಜಿಲ್ಲೆಯಲ್ಲಿ ರಸಗೊಬ್ಬರ ಕೊರತೆಯಾಗದಂತೆ ದಾಸ್ತಾನು ಮಾಡಿಕೊಳ್ಳಬೇಕು. ರೈತರ ಬೇಡಿಕೆಗೆ ಅನುಗುಣವಾಗಿ ರಸಗೊಬ್ಬರವನ್ನು ಕಾಲಕಾಲಕ್ಕೆ ರೈತರಿಗೆ ವಿತರಣೆ ಮಾಡಬೇಕು. ರೈತರಿಗೆ ಯಾವುದೇ ಸಮಸ್ಯೆಯಾಗದಂತೆ ನೋಡಿಕೊಳ್ಳಬೇಕು ಎಂದು ರಾಯಚೂರು ಪ್ರಕೃತಿ ವಿಕೋಪ ನಿರ್ವಹಣೆಯ ಮೇಲುಸ್ತುವಾರಿ ಆಗಿರುವ ವೈದ್ಯಕೀಯ ಶಿಕ್ಷಣ ಹಾಗೂ ಕೌಶಲ್ಯಾಭಿವೃದ್ಧಿ ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವ ಡಾ.ಶರಣಪ್ರಕಾಶ ಪಾಟೀಲ ಹೇಳಿದರು.

ಶುಕ್ರವಾರ ನಗರದ ಜಿಲ್ಲಾಧಿಕಾರಿಗಳ ಕಚೇರಿಯ ಸಭಾಂಗಣದಲ್ಲಿ ಜಿಲ್ಲೆಯಲ್ಲಿ ಕುಡಿಯುವ ನೀರಿನ ಸಮಸ್ಯೆಗಳು, ಮುಂಗಾರು ಹಂಗಾಮಿನ ಬಿತ್ತನೆ ಮತ್ತು ರಸಗೊಬ್ಬರ ಬೇಡಿಕೆಗಳು ಹಾಗೂ ಜಾನುವಾರುಗಳಿಗೆ ಮೇವಿನ ಲಭ್ಯತೆ ಕುರಿತು ನಡೆದ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಖಾಸಗಿ ಅಂಗಡಿಗಳಲ್ಲಿ ಇರುವ ದಾಸ್ತಾನುಗಳ ಬಗ್ಗೆ ಫಲಕ ಪ್ರದರ್ಶನ ಮಾಡಬೇಕು. ರೈತರಿಂದ ಹೆಚ್ಚುವರಿ ಹಣವನ್ನುಸ್ವೀಕರಿಸದಂತೆನೋಡಿಕೊಳ್ಳಬೇಕು. ಕೃಷಿ ಇಲಾಖೆಯ ಅಧಿಕಾರಿಗಳು ಆಗಾಗ ರಸಗೊಬ್ಬರ ಅಂಗಡಿಗಳಿಗೆ ಭೇಟಿ ನೀಡಿ ಪರಿಶೀಲಿಸಬೇಕು.ಕಾಳಸಂತೆಯಲ್ಲಿಮಾರಾಟ ಮಾಡಿದಲ್ಲಿ ಅಂತಹ ಅಂಗಡಿಗಳನ್ನು ಬ್ಲಾಕ್ ಲಿಸ್ಟ್ ಪಟ್ಟಿಗೆ ಸೇರಿಸಬೇಕು ಎಂದರು.

ಜಿಲ್ಲೆಯಲ್ಲಿ ಇನ್ನೂ ಬಿತ್ತನೆಗೆ ಸಮಯವಿದ್ದು, ಬಿತ್ತನೆ ಬೀಜಗಳ ವಿತರಣೆ ಅಗತ್ಯ ಕ್ರಮವಹಿಸಬೇ. ಜಿಲ್ಲೆಯಲ್ಲಿ ರೈತರಿಂದ ಬೆಳೆ ವಿಮೆಗೆ ಮಾಡಿಸಲು ಅಗತ್ಯ ಪ್ರಚಾರ ಕೈಗೊಳ್ಳಬೇಕು. ತಾಲೂಕು ಮಟ್ಟದ ಅಧಿಕಾರಿಗಳು ರೈತರಿಗೆ ಈ ಬಗ್ಗೆ ಮಾಹಿತಿ ನೀಡಬೇಕು. 75 ಸಾವಿರ ರೈತರ ಪೈಕಿ 75 ಸಾವಿರ ರೈತರು ಬೆಳೆ ವಿಮೆಯಲ್ಲಿ ನೋಂದಣಿಯಾಗಬೇಕು ಎಂದು ಸೂಚಿಸಿದರು.

ಗ್ರಾಮೀಣ ಕ್ಷೇತ್ರದ ಶಾಸಕ ಬಸನಗೌಡ ದದ್ದಲ ಮಾತನಾಡಿ, ಜಿಲ್ಲೆಯಲ್ಲಿ ನಷ್ಟಕ್ಕೆ ಈಡಾದ ರೈತರ ಪಟ್ಟಿ ಸಿದ್ಧ ಮಾಡಿ ಕೃಷಿ ಇಲಾಖೆಯ ಮೂಲಕ ಸರ್ಕಾರಕ್ಕೆ ವರದಿ ಸಲ್ಲಿಸಬೇಕು. ಖಾಸಗಿ ಬೋರವೆಲ್ ಮಾಲೀಕರಿಗೆ ಯಾವ ಯಾವ ಯೋಜನೆಯಡಿ ಅನುದಾನವನ್ನು ಬಿಡುಗಡೆ ಮಾಡಬೇಕು. ಎಂಬುದನ್ನು ಸ್ಪಷ್ಟವಾಗಿ ಅಧಿಕಾರಿಗಳಿಗೆ ಜಿಪಂ ಸಿಇಒ ನಿರ್ದೇಶನ ನೀಡಬೇಕು ಎಂದರು.

ಲೋಕಸಭಾ ಸದಸ್ಯ ಜಿ.ಕುಮಾರ ನಾಯಕ, ಶಾಸಕರಾದ ಆರ್.ಬಸನಗೌಡ ತುರ್ವಿಹಾಳ, ಜಿ.ಹಂಪಯ್ಯ ನಾಯಕ್, ವಿ.ಪ ಸದಸ್ಯ ಎ.ವಸಂತಕುಮಾರ, ಬಸನಗೌಡ ಬಾದರ್ಲಿ, ಡಿಸಿ ಪೂವಿತಾ ಎಸ್., ಜಿಪಂ ಸಿಇಒ ಈಶ್ವರ ಕುಮಾರ ಕಾಂದೂ, ಎಸ್ಪಿ ಅರುಣಾಂಗ್ಶು ಗಿರಿ ಸೇರಿದಂತೆ ಇತರರಿದ್ದರು.



## ಸಹಕಾರಿ ಸಂಘಗಳು ಪ್ರತಿಯೊಬ್ಬ ರೈತರಿಗೆ ವರದಾನ: ಶರಣಪ್ಪ ರ್‍ಯಾವಣಕಿ

**ಯಲಬುರ್ಗಾ:** ಗ್ರಾಮೀಣ ಭಾಗದಲ್ಲಿ ರೈತರಿಗಾಗಿ ರೈತರಿಗೋಸ್ಕರ ಇರುವ ಸಹಕಾರಿ ಸಂಘಗಳು ಇವತ್ತು ರೈತರಿಗೆ ವರದಾನವಾಗಿವೆ ಎಂದು ಸ್ಥಳೀಯ ಕರ್ನಾಟಕ ಪಬ್ಲಿಕ್ ಸ್ಕೂಲ್ ಹಾಗೂ ಸ.ಹಿ.ಪ್ರಾ.ಶಾಲೆಯ ಮುಖ್ಯೋಪಾಧ್ಯಯ ಶರಣಪ್ಪ ರ್‍ಯಾವಣಕಿ ಹೇಳಿದರು.

ತಾಲೂಕಿನ ಬಂಡಿ ಗ್ರಾಮದ ಪ್ರಾಥಮಿಕ ಸಹಕಾರ ಸಂಘ,ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ, ಕೊಪ್ಪಳ ಜಿಲ್ಲಾ ಸಹಕಾರ ಯೂನಿಯನ್, ಸಹಕಾರ ಇಲಾಖೆ ಸಹಯೋಗದಲ್ಲಿ ಕರ್ನಾಟಕ ಪಬ್ಲಿಕ್ ಸ್ಕೂಲ್ ಆವರಣದಲ್ಲಿ ಸಸಿ ನೆಡುವ ಸಹಕಾರ ಸಪ್ತಾಹ ಅಭಿಯಾನಕ್ಕೆ ಚಾಲನೆ ನೀಡಿ ಮಾತನಾಡಿದರು.

ಪ್ರತಿಯೊಬ್ಬರು ತಂತಮ್ಮ ಮನೆಯ ಸುತ್ತಮುತ್ತರುವ ಜಾಗಗಳಲ್ಲಿ ಸಸಿಗಳನ್ನು ನೆಡುವ ಮೂಲಕ ಪರಿಸರವನ್ನು ಬೆಳೆಸುವ ಮೂಲಕ ಅವುಗಳನ್ನು ಕಾಪಾಡಿಕೊಂಡು ಹೋಗುವ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ. ಪರಿಸರ, ಪ್ರಕೃತಿ, ನಮಗೆ ಎಲ್ಲವನ್ನು ನೀಡುತ್ತದೆ. ಪ್ರತಿಯೊಂದು ಜೀವ ಸಂಕುಲಕ್ಕೆ ಅಗತ್ಯ,ಪರಿಸರ ಸಂರಕ್ಷಣೆ ಮಾಡುವ ಸಂಕಲ್ಪ ಮಾಡಲು ಮುಂದಾಗಬೇಕು ಎಂದರು.

ಪಿಎಸಿಎಸ್ ಸಂಘದ ಕಾರ್ಯದರ್ಶಿ ಪವನಕುಮಾರ ಕುಲಕರ್ಣಿ ಪ್ರಾಸ್ತಾವಿಕವಾಗಿ ಮಾತನಾಡಿ, ಸಹಕಾರ ತತ್ವದಡಿಯಲ್ಲಿ ಇವತ್ತು ಸಹಕಾರ ಸಂಘಗಳು ಉತ್ತಮ ಕಾರ್ಯ ನಿರ್ವಹಿಸುಯುತ್ತ ಬಂದಿದ್ದು, ಕೇಂದ್ರ ಸರ್ಕಾರದ ಸಹಕಾರ ಸಚಿವಾಲಯ ಐದು ವರ್ಷ ಪೂರ್ಣಗೊಳಿಸುತ್ತಿರುವ ಹಿನ್ನಲೆಯಲ್ಲಿ ಗ್ರಾಮದ ಶಾಲೆಯ ಆವರಣದಲ್ಲಿ ಸಸಿ ನೆಡೆಸುವ ಮೂಲಕ ಚಾಲನೆ ನೀಡಲಾಗಿದೆ. ಸಹಕಾರದಿಂದ ಸಮೃದ್ಧಿ ಎಂಬ ಧ್ಯೇಯದೊಂದಿಗೆ ಪ್ರತಿಯೊಬ್ಬರು ಸಸಿಗಳನ್ನು ನೆಡುವ ಮೂಲಕ ಪರಿಸರವನ್ನು ಕಾಪಾಡಿಕೊಂಡು ಹೋಗಬೇಕು ಎಂದರು.

ಮುಖಂಡರಾದ ಮಲ್ಲಪ್ಪ ಜುಮ್ಮನ್ನವರ್, ಬಸವಲಿಂಗಪ್ಪ ಅರಕೇರಿ, ಬಸವಲಿಂಗಪ್ಪ ಯಲಬುರ್ಗಿ, ಈಶಪ್ಪ ನೆಲಗಣಿ, ಶರಣಪ್ಪ ತಳವಾರ, ವೀರನಗೌಡ ನಿಂಬನಗೌಡ, ಶರಣಬಸಪ್ಪ ಬಿಲ್ಡರ್, ಪಿಎಸಿಎಸ್ ಸಿಬ್ಬಂದಿ ಮಹಾಂತೇಶ ಶೆಟ್ಟರ ಸೇರಿದಂತೆ ಶಾಲೆಯ ಸರ್ವ ಶಿಕ್ಷಕ ವರ್ಗದವರು ಇದ್ದರು.



## ಶ್ರೀನಿವಾಸ ಕ್ಯಾಂಪ್‌ಗೆ ಪ್ರತ್ಯೇಕ ನ್ಯಾಯಬೆಲೆ ಅಂಗಡಿ ಮಂಜೂರಾತಿಗೆ ಆಗ್ರಹ

**ಸಿಂಧನೂರು:** ತಾಲೂಕಿನ ಜವಳಗೇರಾ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಬರುವ ಶ್ರೀನಿವಾಸ ಕ್ಯಾಂಪ್‌ಗೆ ಪ್ರತ್ಯೇಕ ನ್ಯಾಯಬೆಲೆ ಅಂಗಡಿ ಮಂಜೂರು ಮಾಡಬೇಕೆಂದು ಒತ್ತಾಯಿಸಿ ಉಟಗನೂರು ಬಸವಲಿಂಗೇಶ್ವರ ದೇವಸ್ಥಾನ ಸೇವಾ ಟ್ರಸ್ಟ್ ನೇತೃತ್ವದಲ್ಲಿ ಸಾರ್ವಜನಿಕರು ತಹಶೀಲ್ದಾರ್ ಅವರಿಗೆ ಮನವಿ ಸಲ್ಲಿಸಿದರು. ಈ ಒಂದು ಮನವಿಯಲ್ಲಿ ಶ್ರೀನಿವಾಸ ಕ್ಯಾಂಪ್‌ನ ನಿವಾಸಿಗಳು ಪ್ರಸ್ತುತ ನ್ಯಾಯಬೆಲೆ ಅಂಗಡಿಯ ಸೌಲಭ್ಯ ಪಡೆಯಲು 4 ಕೀಲೋ ಮೀಟರ್ ದೂರದಲ್ಲಿರುವ ಸುಲ್ತಾನಪೂರು ತೆರಳಬೇಕಾಗಿದ್ದು, ಇದರಿಂದ ವೃದ್ಧರು, ಮಹಿಳೆಯರು, ಅಂಗವಿಕಲರು ಹಾಗೂ ಬಡ ಕುಟುಂಬಗಳು ಯಾವುದೇ ರೀತಿಯ ಬಸ್ ಸೌಲಭ್ಯ, ಸೇರಿದಂತೆ ಇನ್ನಿತರ ವಾಹನಗಳ ಸೌಲಭ್ಯವಿಲ್ಲದೆ ಕಾಲು ದಾರಿಯಲ್ಲಿ ಹೋಗುವಾಗ ಬೀದಿ ನಾಯಿಗಳ ಕಾಟದಿಂದ ತೀವ್ರ ತೊಂದರೆ ಅನುಭವಿಸುತ್ತಿದ್ದಾರೆ ಎಂದು ತಿಳಿಸಲಾಗಿದೆ.

ಇನ್ನೂ ಈ ಒಂದು ಗ್ರಾಮದಲ್ಲಿ 375 ಪಡಿತರ ಕಾರ್ಡದಾರರಿದ್ದು, ಸುಮಾರು 975 ಮತದಾರರ ಜನಸಂಖ್ಯೆಯನ್ನು ಹೊಂದಿರುವ ಹಾಗೂ ಸಾರ್ವಜನಿಕರ ಅನುಕೂಲವನ್ನು ಪರಿಗಣಿಸಿ ಶ್ರೀನಿವಾಸ ಕ್ಯಾಂಪ್‌ನಲ್ಲಿಯೇ ಪ್ರತ್ಯೇಕ ನ್ಯಾಯಬೆಲೆ ಅಂಗಡಿಯನ್ನು ಮಂಜೂರು ಮಾಡಿದರೆ ಸಾವಿರಾರು ಫಲಾನುಭವಿಗಳಿಗೆ ಅನುಕೂಲವಾಗಲಿದೆ ಎಂದು ಟ್ರಸ್ಟ್‌ನ ಪದಾಧಿಕಾರಿಗಳು ಮನವಿಯಲ್ಲಿ ಒತ್ತಾಯಿಸಿದರು.



ಮಾತನಾಡಿದ ಸಾರ್ವಜನಿಕರು,ಸರ್ಕಾರ ಗ್ರಾಮೀಣ ಜನರ ಮೂಲಭೂತ ಅಗತ್ಯಗಳಿಗೆ ಆದ್ಯತೆ ನೀಡುವ ಮೂಲಕ ಶ್ರೀನಿವಾಸ ಕ್ಯಾಂಪ್‌ಗೆ ನ್ಯಾಯಬೆಲೆ ಅಂಗಡಿ ಮಂಜೂರು ಮಾಡುವ ಮೂಲಕ ಸಾರ್ವಜನಿಕರ ಸಮಸ್ಯೆಗೆ ಶಾಶ್ವತ ಪರಿಹಾರ ಕಲ್ಪಿಸಬೇಕು ಎಂದು ಆಗ್ರಹಿಸಿದರು.

ಉಟಗನೂರು ಬಸವಲಿಂಗೇಶ್ವರ ದೇವಸ್ಥಾನ ಸೇವಾ ಟ್ರಸ್ಟ್‌ನ ಪದಾಧಿಕಾರಿಗಳು ಹಾಗೂ ಗ್ರಾಮದ ಮುಖಂಡರಾದ ನಾಗರಾಜಪ್ಪ ಪನ್ನೂರು, ಶಿವಪ್ಪ ಮನೆಗಾರ, ಸಂಗಪ್ಪ ಜೋಗುಳಗುಡ್ಡ, ದುರ್ಗಪ್ಪ ಮಾನೆಗಾರ, ಹುಸೇನ್ ಸಾಬ್, ಅಬ್ದುಲ್ ಸಾಬ್, ತಿಮ್ಮಣ್ಣ, ಅಯ್ಯಪ್ಪ ಕೂಡ್ಲೂರು ಇತರರಿದ್ದರು.

## ಸಸಿ ನೆಡುವ ಕಾರ್ಯಕ್ರಮಕ್ಕೆ ಚಾಲನೆ

**ಕುಷ್ಟಗಿ:** ತಾಲೂಕಿನ ಹಿರೇಮನ್ನಾಪುರ ಗ್ರಾಮದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ವತಿಯಿಂದ ಭಾರತ ಸರ್ಕಾರದಲ್ಲಿ ಸಹಕಾರ ಸಚಿವಾಲಯ ಪ್ರಾರಂಭಗೊಂಡ ಹಿನ್ನೆಲೆಯಲ್ಲಿ ಸಂಸ್ಥೆಯ ಆವರಣದಲ್ಲಿ ಸಸಿ ನೆಡುವ ಮೂಲಕ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು ಈ ಕಾರ್ಯಕ್ರಮದಲ್ಲಿ ಸಹಕಾರ ಪತ್ತಿನ ಸಂಘದ ಅಧ್ಯಕ್ಷ ಮಂಜುನಾಥ ಕಜ್ಜಿ ಅವರು ಚಾಲನೆಯನ್ನು ನೀಡಿದರು.

ನಿರ್ದೇಶಕರಾದ ಪರಸಪ್ಪ ಅಳ್ಳಳ್ಳಿ ಹುಲುಗಪ್ಪ ವಡ್ಡರ್ ಶರಣಗೌಡ ಪಾಟೀಲ್ ದೊಡ್ಡಪ್ಪ ಬಳೂಟಗಿ ವಿರುಪಯ್ಯ ಹಿರೇಮಠ ಬಸಣ್ಣ ಕತ್ತಿ ಅವರುಗಳು ಉಪಸ್ಥಿತರಿದ್ದರು. ಕಾರ್ಯನಿರ್ವಾಹಣಾಧಿಕಾರಿ ದೊಡ್ಡಬಸಯ್ಯ ಹಿರೇಮಠ ನಿರೂಪಿಸಿ, ವಂದಿಸಿದರು. ರೈತರಿಗೆ ಗೊಬ್ಬರ ವಿತರಣೆಗೆ ಚಾಲನೆ: ಸ್ಥಳೀಯ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ವತಿಯಿಂದ ಮುಂಗಾರು ಹಂಗಾಮಿನ ಕೃಷಿ ಚಟುವಟಿಕೆಗಳಿಗೆ ಅನುಕೂಲವಾಗುವ ನಿಟ್ಟಿನಲ್ಲಿ ರೈತರಿಗೆ ಯೂರಿಯಾ ರಸಗೊಬ್ಬರ ವಿತರಣಾ ಕಾರ್ಯಕ್ರಮ ಕೂಡ ನಡೆಯಿತು ಸಂಘದ ಅಧ್ಯಕ್ಷ ಮಂಜುನಾಥ್ ಕಜ್ಜಿ ಅವರು ಗ್ರಾಮದ ಯುವ ರೈತ ಮಹೇಶ್ ಪೂಜಾರಿ ಅವರಿಗೆ ಗೊಬ್ಬರ ಚೀಲವನ್ನು ನೀಡಿ ಕಾರ್ಯಕ್ರಮಕ್ಕೆ ಚಾಲನೆಯನ್ನು ನೀಡಿ ಮಾತನಾಡಿದ ಅವರು ಮುಂಗಾರು ಹಂಗಾಮಿನ ಕೃಷಿ ಕಾರ್ಯಗಳು ಆರಂಭಗೊಂಡಿರುವ ಹಿನ್ನೆಲೆಯಲ್ಲಿ ರೈತರಿಗೆ ಸಕಾಲದಲ್ಲಿ ಗುಣಮಟ್ಟದ ರಸಗೊಬ್ಬರ ಲಭ್ಯವಾಗುವಂತೆ ಸಂಘವು ಅಗತ್ಯ ಕ್ರಮವನ್ನು ಕೈಗೊಂಡಿದೆ ರೈತರು ಸಂಘದ ಸೌಲಭ್ಯಗಳನ್ನು ಸದ್ಬಳಕೆ ಮಾಡಿಕೊಂಡು ವೈಜ್ಞಾನಿಕ ಕೃಷಿ ಪದ್ಧತಿಗಳನ್ನು ಅಳವಡಿಸಿಕೊಂಡು ಉತ್ತಮ ಇಳುವರಿ ಪಡೆಯಬೇಕು ಎಂದರು. ಸಂಘದ ಅಧ್ಯಕ್ಷರು ಸರ್ವ ಸದಸ್ಯರು ಉಪಸ್ಥಿತರಿದ್ದರು.



## ಸರ್ಕಾರಿ ಶಾಲಾ ಮಕ್ಕಳಿಗೆ ತಾಡಪತ್ರಿ ಭಾಗ್ಯ: ಮೆಚ್ಚುಗೆ

▸ ಸಿದ್ದಯ್ಯ ಹೆಸರೂರು

ದಿಗಂತ ವಿಶೇಷ

**ಮಸ್ಕಿ:** ಮಳೆಗಾಲ ಆರಂಭವಾಯಿತೆಂದರೆ ಗ್ರಾಮೀಣ ಭಾಗದ ಶಾಲಾ ಮಕ್ಕಳು ನೆನೆಯದೆ ಮನೆ ಸೇರುವುದೇ ದೊಡ್ಡ ಸವಾಲು. ಕೊಡೆ (ಛತ್ರಿ) ಕೊಳ್ಳಲಾಗದ ಬಡ ವಿದ್ಯಾರ್ಥಿಗಳು ಪ್ರತಿದಿನ ಮಳೆಯಲ್ಲೇ ನೆನೆದುಕೊಂಡು ಮನೆಗೆ ಹೋಗಬೇಕಾದ ಪರಿಸ್ಥಿತಿ ಇರುತ್ತದೆ.

ಇಂತಹ ವಿದ್ಯಾರ್ಥಿಗಳ ಸಂಕಷ್ಟಕ್ಕೆ ಸ್ಪಂದಿಸಿದ ಮಸ್ಕಿ ತಾಲೂಕಿನ ಮಟ್ಟೂರು ಸರ್ಕಾರಿ ಪ್ರೌಢ ಶಾಲೆಯಗೆ ಗುಡಿಹಾಳ ಗ್ರಾಮದಿಂದ ಆಗಮಿಸುವ ವಿದ್ಯಾರ್ಥಿಗಳಿಗೆ ಮಟ್ಟೂರು ಶಾಲೆಯ ಹಳೆಯ ವಿದ್ಯಾರ್ಥಿ ಹಾಗು ಪ್ರಸ್ತುತ ಅದೇ ಶಾಲೆಯ ಯೋಗ ಶಿಕ್ಷಕರಾದ ಚಂದ್ರಶೇಖರ್ ಕೊನಪ್ಪ ಹಳೆಯ ವಿದ್ಯಾರ್ಥಿ ಸಂಘದ ಅಧ್ಯಕ್ಷ ಬಡ್ ಸಾಬ್ ಅವರು ಮಕ್ಕಳು ಶಾಲೆಯಿಂದ ಮನೆಗೆ ಸುರಕ್ಷಿತವಾಗಿ ಹೋಗಲು ಉಚಿತವಾಗಿ ತಾಡಪತ್ರಿಗಳನ್ನು ವಿತರಿಸುವ ಮೂಲಕ ಇಡೀ ಸಮಾಜಕ್ಕೆ ಪ್ರೇರಣೆಯಾಗಿದ್ದಾರೆ.

ಸಂಜೆ ಶಾಲೆಯ ಬೆಲ್ ಆಗುತ್ತಿದ್ದಂತೆ ಮಳೆ ಸುರಿಯಲು ಆರಂಭಿಸಿದರೆ, ಗ್ರಾಮೀಣ ಭಾಗದ ದೂರದ ಊರುಗಳಿಂದ ಮಟ್ಟೂರುಶಾಲೆಗೆಬರುವ, ಗುಡಿಹಾಳ ಗ್ರಾಮದ ಮಕ್ಕಳು ನೆನೆಯುತ್ತಲೇ ಹೆಜ್ಜೆ ಹಾಕಬೇಕಾಗುತ್ತಿತ್ತು.



ಇದರಿಂದ ಮಕ್ಕಳು ಜ್ವರ, ಶೀತದಂತಹ ಕಾಯಿಲೆಗಳಿಗೆ ತುತ್ತಾಗುತ್ತಿದ್ದರು.ಅಷ್ಟೇ ಅಲ್ಲದೆ, ಅವರು ಕಷ್ಟಪಟ್ಟು ಬರೆದ ನೋಟ್‌ಬುಕ್‌ಗಳು ಹಾಗೂ ಪಠ್ಯಪುಸ್ತಕಗಳು ಮಳೆಗೆ ಒದ್ದೆಯಾಗಿ ಹಾಳಾಗುತ್ತಿದ್ದವು.

ವಿದ್ಯಾರ್ಥಿ ಹಾಗೂ ಪೋಷಕರ ಈ ಕಷ್ಟವನ್ನು ಕಣ್ಣಾರೆ ಕಂಡ ಯೋಗ ಶಿಕ್ಷಕ ಚಂದ್ರಶೇಖರ್ ಕೊನಪ್ಪ ಹಾಗು ಹಳೆಯ ವಿದ್ಯಾರ್ಥಿ ಸಂಘದ ಅಧ್ಯಕ್ಷ ಬಡ್ ಸಾಬ್ ಅವರು ಈ ನೂತನ ಉಪಾಯ ಮಾಡಿದ್ದಾರೆ.

> **ಪೋಷಕರ ಕೃತಜ್ಞತೆ**
> ಶಿಕ್ಷಕರ ಈ ಸಮಯೋಚಿತ ಕಾರ್ಯದಿಂದಾಗಿ ಈಗ ಮಟ್ಟೂರು ಶಾಲೆಗೆ ಹೋಗುವ ಗುಡಿಹಾಳ ಶಾಲೆಯ ಮಕ್ಕಳು ಮಳೆಗೆ ಹೆದರದೆ, ಸುರಕ್ಷಿತವಾಗಿ ಮನೆ ಸೇರುತ್ತಿದ್ದಾರೆ. ಮಕ್ಕಳ ಆರೋಗ್ಯ ಮತ್ತು ಓದಿನ ಬಗ್ಗೆ ಕಾಳಜಿ ವಹಿಸಿದ ಗುರುಗಳಿಗೆ ಪೋಷಕರು ಕೃತಜ್ಞತೆ ಸಲ್ಲಿಸಿದ್ದಾರೆ.

ಗಾಳಿ-ಮಳೆಗೆ ಛತ್ರಿಗಳು ಬೇಗನೆ ಹಾಳಾಗುತ್ತವೆ ಮತ್ತು ಬಡತನದ ಹಿನ್ನೆಲೆಯುಳ್ಳ ಮಕ್ಕಳಿಗೆ ಅವುಗಳನ್ನು ಖರೀದಿಸುವುದು ಸುಲಭವಲ್ಲ. ಇದನ್ನು ಅರಿತ ಶಿಕ್ಷಕರು, ಮಕ್ಕಳು ತಮ್ಮ ಸ್ಕೂಲ್ ಬ್ಯಾಗ್ ಹಾಗೂ ದೇಹವನ್ನು ಪೂರ್ತಿಯಾಗಿ ಮುಚ್ಚಿಕೊಂಡು ಹೋಗಲು ಅನುಕೂಲವಾಗುವಂತೆ ಹಗುರವಾದ ಮತ್ತು ಗಟ್ಟಿಮುಟ್ಟಾದ ತಾಡಪತ್ರಿಗಳನ್ನು ತಮ್ಮ ಸ್ವಂತ ಖರ್ಚಿನಲ್ಲಿ ಗುಡಿಹಾಳ ಗ್ರಾಮದ 20 ಶಾಲೆಯ ವಿದ್ಯಾರ್ಥಿಗಳಿಗೆ ಉಚಿತವಾಗಿ ಹಂಚಿದ್ದಾರೆ. ಶಿಕ್ಷಕರ ಈ ಜನಪರ ಕಾರ್ಯದ ಬಗ್ಗೆ ಸಾರ್ವಜನಿಕರು ಶ್ಲಾಘಿಸಿದ್ದಾರೆ.

ಹೆಲ್ಮೆಟ್ ಇಲ್ಲದ ಸವಾರರಿಗೆ ಎಚ್ಚರಿಕೆ | ನಗರಾದ್ಯಂತ ದಿಢೀರ್ ತಪಾಸಣೆ ಆರಂಭ

## ಖಡಕ್ ಕಾರ್ಯಾಚರಣೆ: ರಸ್ತೆಗಿಳಿದ ಪೊಲೀಸ್ ಕಮಿಷನರ್

**ಕಲಬುರಗಿ:** ರಸ್ತೆ ಸುರಕ್ಷತೆಗೆ ಹೆಚ್ಚಿನ ಒತ್ತು ನೀಡಿರುವ ನಗರ ಪೊಲೀಸ್ ಇಲಾಖೆ, ಸಂಚಾರ ನಿಯಮ ಉಲ್ಲಂಘಿಸುವ ವಾಹನ ಸವಾರರ ವಿರುದ್ಧ ವಿಶೇಷ ಕಾರ್ಯಾಚರಣೆ ಆರಂಭಿಸಿದೆ. ನಗರ ಪೊಲೀಸ್ ಆಯುಕ್ತ ಡಾ.ಶರಣಪ್ಪ ಎಸ್.ಡಿ. ಅವರ ನೇತೃತ್ವದಲ್ಲಿ ಕಳೆದ ಎರಡು ದಿನಗಳಿಂದ ನಗರದ ವಿವಿಧ ಪ್ರಮುಖ ರಸ್ತೆ ಹಾಗೂ ವೃತ್ತಗಳಲ್ಲಿ ತಪಾಸಣೆ ನಡೆಸಲಾಗುತ್ತಿದ್ದು, ಹೆಲ್ಮೆಟ್ ಧರಿಸದೆ ವಾಹನ ಚಲಾಯಿಸುತ್ತಿದ್ದ ಸವಾರರ ವಿರುದ್ಧ ಕ್ರಮ ಕೈಗೊಳ್ಳಲಾಗಿದೆ.

ಶುಕ್ರವಾರ ಜಗತ್ ವೃತ್ತ ಸೇರಿದಂತೆ ನಗರದ ಪ್ರಮುಖ ಸಂಚಾರ ಕೇಂದ್ರಗಳಲ್ಲಿ ವಿಶೇಷ ತಪಾಸಣೆ ನಡೆಸಿದ ಪೊಲೀಸರು, ನಿಯಮ ಉಲ್ಲಂಘನೆ ಮಾಡುತ್ತಿದ್ದ ದ್ವಿಚಕ್ರ ವಾಹನ ಸವಾರರನ್ನು ತಡೆದು ದಂಡ ವಿಧಿಸಿದರು. ವಾಹನ ಸವಾರರಲ್ಲಿ ರಸ್ತೆ ಸುರಕ್ಷತೆ ಕುರಿತು ಜಾಗೃತಿ ಮೂಡಿಸುವುದರ ಜೊತೆಗೆ ಕಾನೂನು ಪಾಲನೆಯ ಮಹತ್ವವನ್ನು ಮನವರಿಕೆ ಮಾಡಿಕೊಡಲಾಯಿತು.

ಕಾರ್ಯಾಚರಣೆಯಲ್ಲಿ ಡಿಸಿಪಿ ಶಾಲೂ, ಎಸಿಪಿ ಶರಣಪ್ಪ ಸುಬೇದಾರ್, ಇನ್ಸ್‌ಪೆಕ್ಟರ್‌ಗಳಾದ ಗುರುಗೌಡ ಪಾಟೀಲ, ಮಹಾಂತೇಶ್ ಪಾಟೀಲ, ವಾಜೀದ್ ಪಟೇಲ್ ಸೇರಿದಂತೆ ಅನೇಕ ಅಧಿಕಾರಿಗಳು ಹಾಗೂ ಸಿಬ್ಬಂದಿ ಭಾಗವಹಿಸಿದ್ದರು. ನಗರದ ವಿವಿಧ ಜಂಕ್ಷನ್‌ಗಳಲ್ಲಿ ಏಕಕಾಲಕ್ಕೆ ತಪಾಸಣೆ ನಡೆಸುವ ಮೂಲಕ ಸಂಚಾರ ನಿಯಮ ಪಾಲನೆಗೆ ಹೆಚ್ಚಿನ ಒತ್ತು ನೀಡಲಾಯಿತು.



ಈ ವೇಳೆ ಮಾತನಾಡಿದ ನಗರ ಪೊಲೀಸ್ ಆಯುಕ್ತ ಡಾ. ಶರಣಪ್ಪ ಎಸ್.ಡಿ., ದಂಡ ವಸೂಲಿ ಮಾಡುವುದು ಇಲಾಖೆಯ ಉದ್ದೇಶವಲ್ಲ. ಅಪಘಾತಗಳಿಂದ ಜೀವಹಾನಿ ತಪ್ಪಿಸುವುದು ಮತ್ತು ಸಾರ್ವಜನಿಕರಲ್ಲಿ ಸುರಕ್ಷತಾ ಅರಿವು ಮೂಡಿಸುವುದೇ ಮುಖ್ಯ ಗುರಿಯಾಗಿದೆ. ಪ್ರತಿಯೊಬ್ಬ ವಾಹನ ಸವಾರರೂ ತಮ್ಮ ಹಾಗೂ ತಮ್ಮ ಕುಟುಂಬದ ಸುರಕ್ಷತೆಯನ್ನು ಗಮನದಲ್ಲಿಟ್ಟುಕೊಂಡು ಕಡ್ಡಾಯವಾಗಿ ಹೆಲ್ಮೆಟ್ ಧರಿಸಿ ಸಂಚಾರ ನಿಯಮಗಳನ್ನು ಪಾಲಿಸಬೇಕು ಎಂದು ಹೇಳಿದರು.

ಎಐ ಆಧಾರಿತ ಸಂಚಾರ ನಿರ್ವಹಣಾ ವ್ಯವಸ್ಥೆಯಿಂದ ಈಗಾಗಲೇ ಸಾವಿರಾರು ನಿಯಮ ಉಲ್ಲಂಘನೆ ಪ್ರಕರಣಗಳು ಪತ್ತೆಯಾಗಿವೆ. ಇಲಾಖೆಯು ನಿರಂತರವಾಗಿ ಜಾಗೃತಿ ಮೂಡಿಸುತ್ತಿದ್ದರೂ ಕೇವಲ ಶೇ.25ರಷ್ಟು ಮಾತ್ರ ಬದಲಾವಣೆಯಾಗಿದೆ ಎಂದರು.

> **ಆರು ತಿಂಗಳಲ್ಲಿ 1.63 ಕೋಟಿ ದಂಡ ವಸೂಲಿ**
> ನಗರದಲ್ಲಿ ಕಳೆದ ಆರು ತಿಂಗಳ ಅವಧಿಯಲ್ಲಿ ಸಂಚಾರ ನಿಯಮ ಉಲ್ಲಂಘನೆಗೆ ಸಂಬಂಧಿಸಿದಂತೆ 31,805 ಪ್ರಕರಣಗಳು ದಾಖಲಾಗಿದ್ದು, ಒಟ್ಟು 1.63 ಕೋಟಿ ರೂ. ದಂಡ ವಸೂಲಿ ಮಾಡಲಾಗಿದೆ. ಇದರಲ್ಲಿ ಹೆಲ್ಮೆಟ್ ಧರಿಸದೆ ವಾಹನ ಚಲಾಯಿಸಿದ ಪ್ರಕರಣಗಳಿಂದಲೇ 1.08 ಕೋಟಿ ರೂ. ದಂಡ ಸಂಗ್ರಹವಾಗಿರುವುದು ಗಮನಾರ್ಹವಾಗಿದೆ. ನಿಯಮ ಪಾಲನೆಗೆ ಇನ್ನಷ್ಟು ಕಟ್ಟುನಿಟ್ಟಿನ ಕ್ರಮವಾಗಿ ಡಿವೈಎಸ್ಪಿ ಹಾಗೂ ಎಸಿಪಿ ನೇತೃತ್ವದಲ್ಲಿ 10 ವಿಶೇಷ ತಂಡಗಳನ್ನು ರಚಿಸಲಾಗಿದ್ದು, ನಗರದಾದ್ಯಂತ ದಿಢೀರ್ ತಪಾಸಣೆ ಮುಂದುವರಿಯಲಿದೆ ಎಂದು ಪೊಲೀಸ್ ಇಲಾಖೆ ತಿಳಿಸಿದೆ.

## ಕಿರುಸುದ್ದಿ

### ಶ್ರೀರಾಘವೇಂದ್ರ ಸ್ವಾಮಿ ದರ್ಶನ ಪಡೆದ ಶಾಸಕ

**ಬಳ್ಳಾರಿ:** ನಗರ ಶಾಸಕ ನಾರಾ ಭರತ್ ರೆಡ್ಡಿ ಅವರು, ಶುಕ್ರವಾರ ಪ್ರಸಿದ್ಧ ಧಾರ್ಮಿಕ ಕ್ಷೇತ್ರ, ಬೇಡಿದ ವರಕೊಡುವ ಮಂತ್ರಾಲಯ ಶ್ರೀರಾಘವೇಂದ್ರ ಸ್ವಾಮಿ ದರ್ಶನ ಪಡೆದು ಭಕ್ತಿ ಸಮರ್ಪಿಸಿದರು. ಬೆಂಬಲಿಗರೊಂದಿಗೆ ಶ್ರೀಕ್ಷೇತ್ರಕ್ಕೆ ತೆರಳಿದ ಶಾಸಕ ನಾರಾ ಭರತ್ ರೆಡ್ಡಿ ಅವರು, ಶ್ರೀಗಳ ದರ್ಶನ ಪಡೆದರು. ನಂತರ ಶ್ರೀಮಠದ ಶ್ರೀಸುಭುದೇಂದ್ರ ತೀರ್ಥ ಸ್ವಾಮೀಜಿ ಅವರನ್ನು ಭೇಟಿ ಮಾಡಿ, ಆಶೀರ್ವಾದ, ಫಲ ಮಂತ್ರಾಕ್ಷತೆ ಪಡೆದರು. ಎಪಿಎಂಸಿ ಅಧ್ಯಕ್ಷ ಕಟ್ಟೆಮನೆ ನಾಗೇಂದ್ರ, ಹಿರಿಯ ಕಾಂಗ್ರೆಸ್ ಮುಖಂಡ ಅಸುಂಡಿ ಹೊನ್ನರಪ್ಪ, ಪರಶುರಾಮುಡು, ಹೊನ್ನಪ್ಪ, ಹಗರಿ ಗೋವಿಂದ, ಗುಂತಕಲ್ ಸುರೇಶ್, ನಾಯ್ಡು ಸೇರಿದಂತೆ ವಿವಿಧ ನಾಯಕರು ಉಪಸ್ಥಿತರಿದ್ದರು.



ಗಾದಿಗನೂರು: ಮತದಾರರ ಪಟ್ಟಿ ವಿಶೇಷ ತೀವ್ರ ಪರಿಷ್ಕರಣೆ ಅಭಿಯಾನದ ಅಂಗವಾಗಿ ಶುಕ್ರವಾರ ಗಾದಿಗನೂರು ಗ್ರಾಪಂ ವ್ಯಾಪ್ತಿಯಲ್ಲಿ ಬರುವ ಭುವನಹಳ್ಳಿ, ಕೊಟ್ಟಿಗಿನಾಳ ಗ್ರಾಮಗಳಲ್ಲಿ ಎಸ್ಐಆರ್ ಅಭಿಯಾನಕ್ಕೆ ಗ್ರಾಪಂ ಕಾರ್ಯದರ್ಶಿ ಎನ್.ಬೆನ್ನಪ್ಪ ಚಾಲನೆ ನೀಡಿದರು.

### ಜನಮನ ಸೆಳೆದ ಸುಗಮ ಸಂಗೀತ ಕಾರ್ಯಕ್ರಮ



**ಕುರುಗೋಡು:** ಸಮೀಪದ ಎಮ್ಮಿಗನೂರು ಗ್ರಾಮದಲ್ಲಿ ಡಾ.ಅಬ್ದುಲ್ ಕಲಾಂ ಎಸ್.ಪಿ ಚಾರಿಟೇಬಲ್ ಫೌಂಡೇಶನ್ (ರಿ) ಎಮ್ಮಿಗನೂರು ಮತ್ತು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬಳ್ಳಾರಿ ಇವರ ಸಹಯೋಗದೊಂದಿಗೆ ಸುಗಮ ಸಂಗೀತ ಸರ್ಕಾರಿ ಮೆಟ್ರಿಕ್ ಪೂರ್ವ ಬಾಲಕರ ವಸತಿ ನಿಲಯ ಆವರಣದಲ್ಲಿ ನಡೆಯಿತು. ಈ ವೇಳೆ ರಂಗ ನಿರ್ದೇಶಕ ಮಾವಿನಹಳ್ಳಿಯ ಕುರುಬರ ಹೇಮೇಶ್ವರ ಉದ್ಘಾಟನೆ ನೆರವೇರಿಸಿ ಮಾತನಾಡಿ, ಇಂದಿನ ಮಕ್ಕಳಿಗೆ ತಂದೆ ತಾಯಿ ಮತ್ತು ಗುರುಗಳು ಉತ್ತಮವಾದ ಮಾರ್ಗದರ್ಶನ ನೀಡಬೇಕು. ಇಂದಿನ ದಿನಗಳಲ್ಲಿ ಮಕ್ಕಳಿಗೆ ಮೊಬೈಲ್ ಫೋನ್ ಬಳಕೆ ಅತಿ ಹೆಚ್ಚಾಗಿ ಪರಿಣಾಮ ಬೀರಿದೆ. ಅದನ್ನು ತಪ್ಪಿಸುವ ಕೆಲಸ ಮನೆಯಲ್ಲಿ ತಾಯಿ ಮೊದಲು ಗುರುಗಳು ಎಂದು ಕರೆಯುತ್ತಾರೆ. ಆ ತಾಯಿ ಮಕ್ಕಳಿಗೆ ಆಟದ ಮೇಲೆ ಪರಿಣಾಮ ಬೀರುವಂತೆ ಪ್ರೇರಿಸಬೇಕು ಮಕ್ಕಳಿಗೆ ತಂದೆ ಒಳ್ಳೆಯ ಕಥೆರನಾಟಕ, ಹಾಡುಗಳು ಹೇಳುವುದರ ಮುಖಾಂತರ ಸಂಸ್ಕೃತಿ ಬಗ್ಗೆ ಅರಿವು ಮೂಡಿಸಬೇಕು. ಶಾಲಾ ಹಂತದಲ್ಲಿ ಮಕ್ಕಳಿಗೆ ಸತ್ಯಾಂಶ ಬಗ್ಗೆ ಅರಿವು ಮೂಡಿಸುವ ನಾಟಕ, ಸಂಗೀತ, ನೃತ್ಯ ಕೈಗೊಳ್ಳಬೇಕು. ಶಾಲೆಗಳಲ್ಲಿ ರಂಗಭೂಮಿ ಶಿಕ್ಷಕರ ನೇಮಕಾತಿ ಪ್ರಾರಂಭವಾಗಬೇಕೆಂದು ವ್ಯಕ್ತಪಡಿಸಿದರು. ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಸುಗಮ ಸಂಗೀತ ರಾಜ ಎಮ್ಮಿಗನೂರು ಮತ್ತು ತಂಡದವರು ಜರುಗಿತು. ಅಬ್ದುಲ್ ಕಲಾಂ ಎಸ್.ಪಿ.ಚಾರಿಟೇಬಲ್ ಫೌಂಡೇಶನ್ ಅಧ್ಯಕ್ಷೆ ಬಿ.ಸಬೀನ್, ಕಾರ್ಯದರ್ಶಿ ಎಚ್.ಪೀರಾವಲಿ, ಶಿಕ್ಷಕರ ಭೀಮೇಶ್, ರಮೇಶ, ಅಡಿಗೆ ಸಹಾಯಕರು ವಿಜಯ್, ರಂಗ ನಿರ್ದೇಶಕರು ಕುರುಬರ ಹೇಮೇಶ್ವರ, ಮಾವಿನಹಳ್ಳಿ ಸಂಗೀತಗಾರು ಸಂಗೀತ ಗಂಗಾವತಿ, ತಬಲಾ ವಾದಕರು ರಾಘವೇಂದ್ರ ಗಂಗಾವತಿ, ಕ್ಯಾಶಿಯೋ ರಾಮ ಕಂಪ್ಲಿ, ನಿರೂಪಣೆ ಮತ್ತು ಸ್ವಾಗತ ರಮೇಶ, ಮತ್ತು ಸದಸ್ಯರು ಇದ್ದರು.

### ಎಸ್ಐಆರ್ ಸಮಗ್ರ ಪರಿಷ್ಕರಣಗೆ ಸಹಕರಿಸಿ

**ಕುರುಗೋಡು:** ರಾಜ್ಯಾದ್ಯಂತ ಆರಂಭವಾಗಿರುವ ವಿಶೇಷ ಸಮಗ್ರ ಮತದಾರರ ಪಟ್ಟಿ ಪರಿಷ್ಕರಣ ಕಾರ್ಯಕ್ರಮಕ್ಕೆ ಪ್ರತಿಯೊಬ್ಬ 18 ವರ್ಷ ಮೇಲ್ಪಟ್ಟ ಎಲ್ಲ ನಾಗರಿಕರು ಸಕ್ರಿಯವಾಗಿ ಭಾಗವಹಿಸಬೇಕು. ಎಂದು ಕಂಪ್ಲಿ ಮಂಡಲದ ಯುವ ಮೋರ್ಚಾ ಅಧ್ಯಕ್ಷ ವೀರೇಶ್ ಬಡಿಗೇರ್ ಹೇಳಿದರು.



ಮತದಾರರ ಪಟ್ಟಿಯಲ್ಲಿ ತಮ್ಮ ಹೆಸರು, ವಿಳಾಸ ಹಾಗೂ ಇತರೆ ವಿವರಗಳನ್ನು ಪರಿಶೀಲಿಸಿ ಅಗತ್ಯ ತಿದ್ದುಪಡಿಗಳನ್ನು ಮಾಡಿಸಿಕೊಳ್ಳಬೇಕು ಎಂದು ಮನವಿ ಮಾಡಿದರು.



ಬಳ್ಳಾರಿ: ನಗರ ಶಾಸಕ ನಾರಾ ಭರತ್ ರೆಡ್ಡಿ ಅವರು, ಶುಕ್ರವಾರ ಪ್ರಸಿದ್ಧ ಧಾರ್ಮಿಕ ಕ್ಷೇತ್ರ, ಬೇಡಿದ ವರಕೊಡುವ ಮಂತ್ರಾಲಯ ಶ್ರೀರಾಘವೇಂದ್ರ ಸ್ವಾಮಿ ದರ್ಶನ ಪಡೆದು ಭಕ್ತಿ ಸಮರ್ಪಿಸಿದರು. ಬೆಂಬಲಿಗರೊಂದಿಗೆ ಶ್ರೀಕ್ಷೇತ್ರಕ್ಕೆ ತೆರಳಿದ ಶಾಸಕ ನಾರಾ ಭರತ್ ರೆಡ್ಡಿ ಅವರು, ಶ್ರೀಗಳ ದರ್ಶನ ಪಡೆದರು.

## ಸಸಿ ನೆಡುವ ಕಾರ್ಯಕ್ರಮ

**ಸಿರುಗುಪ್ಪ:** ಕೇಂದ್ರ ಸಹಕಾರ ಸಚಿವಾಲಯ ಸ್ಥಾಪನೆಯಾಗಿ ಜು.6ಕ್ಕೆ 5 ವರ್ಷಗಳನ್ನು ಪೂರ್ಣಗೊಳಿಸುತ್ತಿದ್ದು, ಈ ಹಿನ್ನೆಲೆಯಲ್ಲಿ, ಸಹಕಾರ ಸಪ್ತಾಹ ನಿಮಿತ್ತ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ಬೆಂಗಳೂರು ಹಾಗೂ ಬಳ್ಳಾರಿ ಜಿಲ್ಲಾ ಸೌಹಾರ್ದ ಸಹಕಾರಿಗಳಿಂದ ನಗರದಲ್ಲಿ ಸಸಿ ನೆಡುವ ಕಾರ್ಯಕ್ರಮವನ್ನು ಶುಕ್ರವಾರ ಹಮ್ಮಿಕೊಳ್ಳಲಾಯಿತು. ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ರಾಜ್ಯ ನಿರ್ದೇಶಕ ಎಚ್.ಜೆ.ಹನುಮಂತಯ್ಯ ಅವರು, ನಗರದ ಪಿಎಂಶ್ರೀ ಸರ್ಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಸಸಿಗೆ ನೀರು ಹಾಕುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಸಿಡಿಪಿಒ ಪ್ರದೀಪ್ ಕುಮಾರ್, ಕ್ಷೇತ್ರ ಶಿಕ್ಷಣಾಧಿಕಾರಿ ಎಚ್.ಗುರಪ್ಪ, ಅಗ್ನಿಶಾಮಕ ಠಾಣಾಧಿಕಾರಿ ಮಜರ್ ಹಸನ್ ಕ್ಷೇತ್ರ ಸಮನ್ವಯ ಅಧಿಕಾರಿ ತಮ್ಮನಗೌಡ ಪಾಟೀಲ್, ಶಾಲೆಯ ಮುಖ್ಯಗುರು ಮುಕ್ಕಣ್ಣ , ಬನ್ನಿ ಮಹಾಂಕಾಳಿ ಸೌಹಾರ್ದ ಪತ್ತಿನ ಸಹಕಾರಿ ಸಂಘದ ಅಧ್ಯಕ್ಷ ಚಿಂತಕುಂಟೆ ಗಾದಿಲಿಂಗನ ಗೌಡ, ಗುರುಪಾದೇಶ್ವರ ಸೌಹಾರ್ದ ಪತ್ತಿನ ಸಹಕಾರಿ ಸಂಘದ ಅಧ್ಯಕ್ಷ ಜಿ.ಮುದ್ದನಗೌಡ, ಸಿರಿ ಮಹಾಲಕ್ಷ್ಮಿ ಸೌಹಾರ್ದ ನಿರ್ದೇಶಕ ರಾಘವೇಂದ್ರ ಆಚಾರ, ವಿಶ್ವಚೇತನ ಸೌಹಾರ್ದ ಪತ್ತಿನ ಸಹಕಾರಿ ಸಂಘದ ಅಧ್ಯಕ್ಷ ಬಿ.ರಾಘವೇಂದ್ರ, ಹಾಗೂ ವಿಷ್ಣು ವಿಲಾಸ ಸೌಹಾರ್ದ ಮುಖ್ಯ ಕಾರ್ಯ ನಿರ್ವಾಹಕ ಅನಿಲ್‌ಕುಮಾರ್ ಸೇರಿದಂತೆ ತಾಲೂಕಿನ ಎಲ್ಲ ಸೌಹಾರ್ದ ಸಹಕಾರಿಗಳ ಆಡಳಿತ ಮಂಡಳಿಯ ಸದಸ್ಯರು, ಸಿಬ್ಬಂದಿ ಭಾಗವಹಿಸಿದ್ದರು.



ಸಿರುಗುಪ್ಪ: ಕೇಂದ್ರ, ಸಹಕಾರ ಸಚಿವಾಲಯ ಸ್ಥಾಪನೆಯಾಗಿ ಜು.6ಕ್ಕೆ 5 ವರ್ಷಗಳನ್ನು ಪೂರ್ಣಗೊಳಿಸುತ್ತಿದ್ದು, ಈ ಹಿನ್ನೆಲೆಯಲ್ಲಿ, ಸಹಕಾರ ಸಪ್ತಾಹ ನಿಮಿತ್ತ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ಬೆಂಗಳೂರು ಹಾಗೂ ಬಳ್ಳಾರಿ ಜಿಲ್ಲಾ ಸೌಹಾರ್ದ ಸಹಕಾರಿಗಳಿಂದ ನಗರದಲ್ಲಿ ಸಸಿ ನೆಡುವ ಕಾರ್ಯಕ್ರಮವನ್ನು ಶುಕ್ರವಾರ ಹಮ್ಮಿಕೊಳ್ಳಲಾಯಿತು.

### ವಿಶೇಷ ಮತದಾರರ ಪಟ್ಟಿ ಪರಿಷ್ಕರಣೆ | ಡಾ.ಜಗದೀಶ ಸೂಚನೆ

# ಎರಡು ದಿನಗಳಲ್ಲಿ ಶೇ.100ರಷ್ಟು ಗಣತಿ ನಮೂನೆ ವಿತರಿಸಿ

**ವಿಜಯನಗರ:** ವಿಶೇಷ ಮತದಾರರ ಪಟ್ಟಿ ಪರಿಷ್ಕರಣೆ ಪ್ರಕ್ರಿಯೆಯ ಗಣತಿ ನಮೂನೆ (ಎನ್ಯುಮರೇಷನ್ ಫಾರ್ಮ್) ವಿತರಣೆಯನ್ನು ಜು.5ರೊಳಗೆ ಶೇ.100ರಷ್ಟು ಪೂರ್ಣಗೊಳಿಸಬೇಕು ಎಂದು ಸಿಬ್ಬಂದಿ, ಆಡಳಿತ ಸುಧಾರಣೆ ಇಲಾಖೆ ಮತ್ತು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಡಾ.ಕೆ.ಜಿ.ಜಗದೀಶ ಕಟ್ಟುನಿಟ್ಟಿನ ಸೂಚನೆ ನೀಡಿದರು.

ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಗುರುವಾರ ಜಿಲ್ಲಾ ಮಟ್ಟದ ಅಧಿಕಾರಿಗಳ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಮತದಾರರ ಪಟ್ಟಿ ಪರಿಷ್ಕರಣೆ ವೇಳೆ ಸಾರ್ವಜನಿಕರು ಸಿಗದಿದ್ದಲ್ಲಿ ಬಿಎಲ್‌ಒಗಳು ಉದಾಸೀನತೆ ತೋರಬಾರದು. ಇಂತಹ ಬೇಜವಾಬ್ದಾರಿತನದಿಂದ ತಾಂತ್ರಿಕ ಹಾಗೂ ಕಾನೂನಾತ್ಮಕ ತೊಡಕುಗಳು ಎದುರಾಗುತ್ತವೆ. ಬಿಎಲ್‌ಒಗಳು ಮನೆ ಮನೆಗೆ ಭೇಟಿ ನೀಡಿ ನಿಖರ ಮಾಹಿತಿ ದಾಖಲಿಸಬೇಕು. ತಾತ್ಕಾಲಿಕವಾಗಿ ವಲಸೆ ಹೋಗಿರುವ ನಾಗರಿಕರ ಬಗ್ಗೆ ವಿಶೇಷ ಗಮನ ಹರಿಸಿ, ಸ್ಥಳೀಯ ಆಡಳಿತದ ನೆರವಿನೊಂದಿಗೆ ನೋಂದಣಿ ಪ್ರಕ್ರಿಯೆಯನ್ನು ಯಶಸ್ವಿಗೊಳಿಸಬೇಕು ಎಂದರು.

ಇದೇ ವೇಳೆ ಮಾತನಾಡಿದ ಡಿಸಿ ಕವಿತಾ ಎಸ್. ಮನ್ನಿಕೇರಿ, ನಿಗದಿತ ಅವಧಿಯೊಳಗೆ ಶೇ.100 ರಷ್ಟು ಪ್ರಗತಿ ಸಾಧಿಸುವ ಬಿಎಲ್‌ಒಗಳಿಗೆ ಪ್ರಶಸ್ತಿ ಪತ್ರ ನೀಡಿ ಗೌರವಿಸಲಾಗುವುದು ಎಂದು ತಿಳಿಸಿದರು.

ಬೆಳೆ ವಿಮೆ, ಕುಡಿಯುವ ನೀರಿಗೆ ಆದ್ಯತೆ: ಪ್ರಸಕ್ತ ಮುಂಗಾರು ಮಳೆ ಕೊರತೆಯಾಗಿದೆ. ಸದ್ಯದ ಹವಾಮಾನಕ್ಕೆ ತಕ್ಕಂತೆ ಪರ್ಯಾಯ ಬಿತ್ತನೆ ಬೀಜಗಳನ್ನು ದಾಸ್ತಾನು ಇಟ್ಟುಕೊಳ್ಳಬೇಕು. ರೈತರ ಹಿತರಕ್ಷಣೆಗಾಗಿ ಬೆಳೆ ವಿಮೆ ನೋಂದಣಿ ಪ್ರಕ್ರಿಯೆಯಲ್ಲಿ ಶೇ.100ರಷ್ಟು ಪ್ರಗತಿ ಸಾಧಿಸಬೇಕು ಎಂದು ಕೃಷಿ ಇಲಾಖೆಗೆ ಸೂಚಿಸಿದರು.

ಜಿಪಂ ಸಿಇಒ ನೋಂಗ್ಜಾಯ್ ಮಹಮದ್ ಅಲಿ ಅಕ್ರಂ ಷಾ, ಎಡಿಸಿ ಈ.ಬಾಲಕೃಷ್ಣ , ವಿವಿಧ ಇಲಾಖೆಗಳ ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.




> ಮುಂದಿನ ದಿನಗಳಲ್ಲಿ ಎದುರಾಗಬಹುದಾದ ಕುಡಿಯುವ ನೀರಿನ ಅಭಾವವನ್ನು ಎದುರಿಸಲು ಮುಂಜಾಗ್ರತಾ ಕ್ರಮವಾಗಿ ಸಮಸ್ಯಾತ್ಮಕ ಗ್ರಾಮಗಳ ಖಾಸಗಿ ಕೊಳವೆಬಾವಿಗಳನ್ನು ಕಾಯ್ದಿರಿಸಬೇಕು. ಅಗತ್ಯವಿರುವೆಡೆ ತಕ್ಷಣವೇ ಟ್ಯಾಂಕರ್ ಮೂಲಕ ನೀರು ಸರಬರಾಜು ಮಾಡಬೇಕು. ಹೊಸ ಕೊಳವೆಬಾವಿ ಕೊರೆಸುವುದನ್ನು ಕೊನೆಯ ಆಯ್ಕೆಯಾಗಿ ಇಟ್ಟುಕೊಳ್ಳಬೇಕು.
> ■ ಕವಿತಾ ಎಸ್.ಮನ್ನಿಕೇರಿ, ಡಿಸಿ

- ಬಿಎಲ್‌ಒಗಳು ಮನೆ ಮನೆಗೆ ಭೇಟಿ ನೀಡಿ ನಿಖರ ಮಾಹಿತಿ ದಾಖಲಿಸಬೇಕು.
- ಸ್ಥಳೀಯ ಆಡಳಿತದ ನೆರವಿನೊಂದಿಗೆ ನೋಂದಣಿ ಪ್ರಕ್ರಿಯೆಯನ್ನು ಯಶಸ್ವಿಗೊಳಿಸಬೇಕು
- ರೈತರ ಹಿತರಕ್ಷಣೆಗಾಗಿ ಬೆಳೆ ವಿಮೆ ನೋಂದಣಿ ಪ್ರಕ್ರಿಯೆಯಲ್ಲಿ ಶೇ.100ರಷ್ಟು ಪ್ರಗತಿ ಸಾಧಿಸಬೇಕು

## ಹಳಕಟ್ಟಿ ಕೊಡುಗೆ ಅಪಾರ: ಶಾಸಕ ಚನ್ನಾರೆಡ್ಡಿ

**ಯಾದಗಿರಿ:** ವಚನ ಸಾಹಿತ್ಯದ ಉಳಿವಿಗೆ ಫ.ಗು.ಹಳಕಟ್ಟಿ ಅವರ ಕೊಡುಗೆ ಅಪಾರವಿದೆ. ಅವರು ಈ ಸಮಾಜದ ವಚನಗುಮ್ಮಟ ಎಂದು ಶಾಸಕ ಚನ್ನಾರೆಡ್ಡಿ ಪಾಟೀಲ ತುನ್ನೂರ ಬಣ್ಣಿಸಿದರು.

ಜಿಲ್ಲಾಡಳಿತ, ಜಿಪಂ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಗಳ ಸಂಯುಕ್ತಾಶ್ರಯದಲ್ಲಿ ಇಲ್ಲಿನ ಲಿಂಗೇರಿ ಕೊನಪ್ಪ ಶಿಕ್ಷಣ ಸಂಸ್ಥೆಯಲ್ಲಿಠಿ ಆಯೋಸಿದ್ದ ವಚನ ಪಿತಾಮಹಾ ಡಾ.ಫ.ಗು.ಹಳಕಟ್ಟಿ ಅವರ ಜನ್ಮದಿನ ಮತ್ತು ವಚನ ಸಂರಕ್ಷಣಾ ದಿನಾಚರಣೆ ಕಾರ್ಯಕ್ರಮದಲ್ಲಿ ಅವರ ಭಾವಚಿತ್ರಕ್ಕೆ ಮಾಲಾರ್ಪಣೆ ಮಾಡಿ ಗೌರವ ಅರ್ಪಿಸಿ, ಕಾರ್ಯಕ್ರಮಕ್ಕೆ ಚಾಲನೆ ಅವರು ಮಾತನಾಡಿದರು.

ಮನೆ, ಮಠ, ಜಗುಲಿಗಳಲ್ಲಿ ಪೂಜಿಸುತ್ತಿದ್ದ ತಾಡೋಲೆಗಳನ್ನು ಹುಡುಕಿ ತಂದು, ಅದರಲ್ಲಿನ ಅರ್ಥ ಬಿಡಿಸಿ ಬರೆದ ಇವರು, ತಾವು ಸಂಗ್ರಹಿಸಿದ ರಾಶಿ,ರಾಶಿ ವಚನಗಳನ್ನು ಮುದ್ರಿಸಿ ಆ ಸಾಹಿತ್ಯ ಜನರಿಗೆ ತಲುಪಲು 1925ರಲ್ಲಿ ಹಿತಚಿಂತಕ ಮುದ್ರಣಾಲಯ ಆರಂಭಿಸಿದರು. ಮುದ್ರಣ ಯಂತ್ರ ಖರೀದಿಸಲು ಆರ್ಥಿಕ ತೊಂದರೆ ಉಂಟಾದಾಗ ವಕೀಲಿ ವೃತ್ತಿಯಿಂದ ಸಂಪಾದಿಸಿ ಕಟ್ಟಿದ್ದ ತಾವಿದ್ದ ಮನೆಯನ್ನೇ ಮಾರಿ ಬಾಡಿಗೆ ಮನೆಯಲ್ಲಿ ಅಂದು ಜೀವನ ಸಾಗಿಸಿದ ಮಹಾನ ವ್ಯಕ್ತಿ ಎಂದು ಬಣ್ಣಿಸಿದರು.

ಉಪನ್ಯಾಸಕ ಸತೀಶಕುಮಾರ್ ಹವಾಲ್ದಾರ ಮಾತನಾಡಿ, ನಾಡಿನ ಶ್ರೇಷ್ಠ ವ್ಯಕ್ತಿಗಳಲ್ಲಿ ಒಬ್ಬರಾಗಿದ್ದ ಫ.ಗು.ಹಳಕಟ್ಟಿ ಅವರು,

ವಿಜಯಪುರ ನಗರಸಭೆ ಅಧ್ಯಕ್ಷರಾಗಿದ್ದಾಗ ಬೆಳೆಯುತ್ತಿರುವ ನಗರಕ್ಕೆ ಕುಡಿಯುವ ನೀರು ಒದಗಿಸಲು ಸರ್ ಎಂ.ವಿಶ್ವೇಶ್ವರಯ್ಯನವರನ್ನು ಅಲ್ಲಿಗೆ ಕರೆಯಿಸಿ, ಅವರ ತಾಂತ್ರಿಕ ಸಹಾಯ ಪಡೆದು ನಗರದ ಹೊರವಲಯದಲ್ಲಿ ಭೂತನಾಳ ಕೆರೆಯನ್ನು ಸ್ಥಾಪಿಸಿದ್ದು ಅವರ ದೂರದೃಷ್ಟಿಗೆ ಸಾಕ್ಷಿ. ಈ ಕೆರೆಯ ಕುಡಿಯುವ ನೀರಿನ ಯೋಜನೆ ನೂರು ವರ್ಷಗಳ ನಂತರ ಇಂದಿಗೂ ನಗರದ ಶೇ.30 ಭಾಗಕ್ಕೆ ಶುದ್ಧ ಕುಡಿಯುವ ನೀರು ಒದಗಿಸುತ್ತಿದೆ ಎಂದು ಹೇಳಿದರು.

ಯುಡಾ ಅಧ್ಯಕ್ಷರಾದ ಬಾಬುರಾವ ಕಾಡ್ಲೂರ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕಿ ಉತ್ತರಾದೇವಿ, ಉಪನ್ಯಾಸಕರಾದ ಬಸವರಾಜ ಜುಗೇರಿ, ಕಾಲೇಜಿನ ಪ್ರಾಂಶುಪಾಲರಾದ ಗುರುಪ್ಪಚಾರ್ಯ ಎಂ. ವಿಶ್ವಕರ್ಮ ಸೇರಿದಂತೆ ವಿದ್ಯಾರ್ಥಿಗಳು ಇದ್ದರು. ಆರಂಭದಲ್ಲಿ ಅಶೋಕ ರಾಜನಕೋಳ್ಳೂರ ಮತ್ತು ಸಂಗಡಗರಿಂದ ನಾಡಗೀತೆ ನಡೆಯಿತು.



## ವಯೋನಿವೃತ್ತಿ: ಗೋಣಿಬಸಪ್ಪಗೆ ಬೀಳ್ಕೊಡುಗೆ

**ಹೂವಿನಹಡಗಲಿ:** ತಾಲೂಕಿನ ಅಡವಿಮಲ್ಲನಕೇರಿ ಗ್ರಾಮದ ಎಂಎಂಪಿ ಸರ್ಕಾರಿ ಪ್ರೌಢಶಾಲೆಯ ಹಿರಿಯ ವಿಜ್ಞಾನ ವಿಷಯ ಶಿಕ್ಷಕರಾದ ಬಿ.ಕೆ.ಗೋಣಿಬಸಪ್ಪ ಅವರು ಸುದೀರ್ಘ 13 ವರ್ಷಗಳ ಸೇವೆ ಸಲ್ಲಿಸಿ ವಯೋ ನಿವೃತ್ತಿ ಹೊಂದಿದ ಹಿನ್ನೆಲೆಯಲ್ಲಿ ಶಾಲೆಯ ಸಭಾಂಗಣದಲ್ಲಿ ಗೌರವ ಅಭಿನಂದನಾ ಕಾರ್ಯಕ್ರಮ ನಡೆಯಿತು.

ನಿವೃತ್ತಿ ಶಿಕ್ಷಕ ಗೋಣಿಬಸಪ್ಪ ಮಾತನಾಡಿ, ನಾನು ಶಿಕ್ಷಕನಾಗಿ ಮೊದಲು ಕರ್ತವ್ಯ ನಿಭಾಯಿಸಿದ್ದು, 1998ರಲ್ಲಿ ಹೂವಿನಹಡಗಲಿ ತಾಲೂಕಿನ ಅಂಕ್ಲಿ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಸೇವೆ ಸಲ್ಲಿಸಿ 2013ರಲ್ಲಿ ಎಂಎಂಪಿ ಸರ್ಕಾರಿ ಪ್ರೌಢಶಾಲೆ ಅಡವಿಮಲ್ಲನಕೇರಿ ಗ್ರಾಮಕ್ಕೆ ಬರಲಾಯಿತು. ತದನಂತರ ಮಕ್ಕಳಲ್ಲಿ ಅತ್ಯುನ್ನತ ಶಿಕ್ಷಣ ನೀಡುವಲ್ಲಿ ಪಾತ್ರವಹಿಸಿದೆನು. ಎಲ್ಲಾ ಶಿಕ್ಷಕರ ಜೊತೆಯಲ್ಲಿ ಸಹಪಾಠಿಯಾಗಿ, ಸ್ನೇಹಿತನಾಗಿ, ಮಕ್ಕಳಿಗೆ ಗುರುವಾಗಿ ನನ್ನ ಕರ್ತವ್ಯವನ್ನು ದೇವರೆಂದು ಸೇವೆ ಸಲ್ಲಿಸಿದ್ದೇನೆ. ಈ ಶಾಲೆಯ ಹಾಗೂ ಈ ಗ್ರಾಮದ ಋಣವನ್ನು ನಾನೆಂದು ಮರೆಯಲಾರೆ ಎಂದು ಹೇಳಿದರು.

ಹಿರಿಯ ದೈಹಿಕ ಶಿಕ್ಷಕ ರಾಮನಗೌಡ ಮಾತನಾಡಿ, ಶಿಕ್ಷಕ ಗೋಣಿಬಸಪ್ಪ ಇವರು ಮಕ್ಕಳಿಗೆ ಮೌಲ್ಯಯುತ ಶಿಕ್ಷಣ ನೀಡುತ್ತಾ ಶಿಕ್ಷಣ ರಂಗದಲ್ಲಿ ಹಲವಾರು ಚೇತನಗಳಿಗೆ ಸ್ಫೂರ್ತಿಯಾಗಿ ಸೇವೆ ಸಲ್ಲಿಸಿದ್ದಾರೆ. ನಿವೃತ್ತಿಯಾಗುವ ಶಿಕ್ಷಕರು ತಮ್ಮ ನಿವೃತ್ತಿ ಜೀವನವನ್ನು ಸಮಾಜಮುಖಿ ಚಿಂತನೆಗಳಲ್ಲಿ ತೊಡಗಿಸಿಕೊಳ್ಳುವ ಮೂಲಕ ಬದುಕು ಸಾರ್ಥಕ ಪಡಿಸಿಕೊಳ್ಳಬೇಕು ಎಂದರು.

ಶಿಕ್ಷಕ ರೇವಣಸಿದ್ದಪ್ಪ ಮಾತನಾಡಿದರು.

ಶಾಲೆಯ ಎಸ್‌ಡಿಎಂಸಿ ಅಧ್ಯಕ್ಷರು ಹಾಗೂ ಎಲ್ಲ ಶಿಕ್ಷಕರು ಮತ್ತು ಮಕ್ಕಳು ಗುರುವಿಗೆ ಗೌರವ ಪೂರ್ವಕವಾಗಿ ಸನ್ಮಾನಿಸಿ ಬೀಳ್ಕೊಡುಗೆ ನೀಡಿದರು.

ನೂತನವಾಗಿ ಶಾಲೆಗೆ ಆಗಮಿಸಿದ ರೇವಣಸಿದ್ದಪ್ಪ, ಮಂಜುನಾಥ್ ಶಿಕ್ಷಕರುಗಳಿಗೆ ಗೌರವಪೂರ್ವಕವಾಗಿ ಸನ್ಮಾನಿಸಲಾಯಿತು.

ಶಾಲಾ ಅಭಿವೃದ್ಧಿ ಸಮಿತಿ ಅಧ್ಯಕ್ಷ ಎಚ್.ಗಂಗಪ್ಪ, ಮುಖ್ಯ ಶಿಕ್ಷಕ ದಾವಲ್ ಸಾಹೇಬ್ ನೀಲಗುಂದ, ಶಿಕ್ಷಕರಾದ ಎಂ.ಮಧುಕರ, ಮಂಜುನಾಥ್, ಸಿದ್ದೇಶ್, ಅತಿಥಿ ಶಿಕ್ಷಕಿ ಎಚ್.ತೇಜಸ್ವಿನಿ, ಕಂಪ್ಯೂಟರ್ ತರಬೇತಿ ಶಿಕ್ಷಕ ಜಿ.ಭರತ್, ಗ್ರಾಮದ ಮುಖಂಡ ಮೊರಗೇರಿ ಕೊಟ್ರೇಶ್, ಶಾಲಾ ಮಕ್ಕಳಿದ್ದರು.



## ಬ್ರಿಮ್ಸ್‌ನಲ್ಲಿ ಎಫ್‌ಡಿಎ ನೇಮಕಾತಿಯಲ್ಲಿ ಅಕ್ರಮ: ಆರೋಪ

**ಬೀದರ್:** ಬ್ರಿಮ್ಸ್ ಸಂಸ್ಥೆಯಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ಪ್ರಥಮ ದರ್ಜೆ ಸಹಾಯಕರ (ಲಿಪಿಕ ಸಿಬ್ಬಂದಿ) ನೇಮಕಾತಿಯಲ್ಲಿ ಅಕ್ರಮ ನಡೆದಿದ್ದು, ಆಯ್ಕೆ ಪಟ್ಟಿಯಲ್ಲಿ ಹೆಸರಿಲ್ಲದ ವ್ಯಕ್ತಿಗೆ ಕಾನೂನುಬಾಹಿರವಾಗಿ ಕಾರ್ಯಾದೇಶ ನೀಡಲಾಗಿದೆ ಎಂದು ಭಾರತೀಯ ಜೈಭೀಮ ದಳದ ಮುಖಂಡರು ಜಿಲ್ಲಾಧಿಕಾರಿಗಳಿಗೆ ದೂರು ಸಲ್ಲಿಸಿದ್ದಾರೆ.

ಬ್ರಿಮ್ಸ್ ಸಂಸ್ಥೆಯಲ್ಲಿ 10 ಪ್ರಥಮ ದರ್ಜೆ ಸಹಾಯಕರ ಹುದ್ದೆಗಳ ಭರ್ತಿಗಾಗಿ ಜಿಲ್ಲಾ ಕಾರ್ಮಿಕ ವಿವಿಧೋದ್ದೇಶ ಸಹಕಾರ ಸಂಘದ ಮೂಲಕ 2022ರಲ್ಲಿ ನೇಮಕಾತಿ ಪ್ರಕ್ರಿಯೆ ನಡೆಸಲಾಗಿತ್ತು. ಈ ಹುದ್ದೆಗಳಿಗೆ ಸುಮಾರು 800 ರಿಂದ 1000 ಅಭ್ಯರ್ಥಿಗಳು ಅರ್ಜಿ ಸಲ್ಲಿಸಿದ್ದರು. ಆಯ್ಕೆ ಪ್ರಕ್ರಿಯೆಯ ನಂತರ ಶ್ರೇಣಿವಾರು 15 ಅಭ್ಯರ್ಥಿಗಳ ಆಯ್ಕೆ ಪಟ್ಟಿಯನ್ನು ಪ್ರಕಟಿಸಲಾಗಿದ್ದು, ಮೊದಲ ಹಂತದಲ್ಲಿ 10 ಮಂದಿಗೆ ಕಾರ್ಯಾದೇಶ ನೀಡಲಾಗಿತ್ತು.

ಆದರೆ ಆಯ್ಕೆಯಾದವರಲ್ಲಿ ಇಬ್ಬರು ಸೇವೆಗೆ ಹಾಜರಾಗದ ಹಿನ್ನೆಲೆಯಲ್ಲಿ ಕಾಯ್ದಿರಿಸಿದ ಪಟ್ಟಿಯಲ್ಲಿದ್ದ 11 ಮತ್ತು 12ನೇ ಕ್ರಮಾಂಕದ ಅಭ್ಯರ್ಥಿಗಳಿಗೆ ಅವಕಾಶ ನೀಡಬೇಕಾಗಿತ್ತು. ಆದರೆ 11ನೇ ಕ್ರಮಾಂಕದ ಅಭ್ಯರ್ಥಿಗೆ ಮಾತ್ರ ಕಾರ್ಯಾದೇಶ ನೀಡಲಾಗಿದ್ದು, 12ನೇ ಕ್ರಮಾಂಕದ ಅಭ್ಯರ್ಥಿಯನ್ನು ಕಡೆಗಣಿಸಿ ಆಯ್ಕೆ ಪಟ್ಟಿಯಲ್ಲಿ ಹೆಸರೇ ಇಲ್ಲದ ಅಂಬ್ರೇಶ ತಂದೆ ಶಿವಮೂರ್ತಿ ಬಟ್ನಾಪೂರೆ ಅವರಿಗೆ ಕಾನೂನುಬಾಹಿರವಾಗಿ ನೇಮಕಾತಿ ಮಾಡಲಾಗಿದೆ ಎಂದು ದೂರಿನಲ್ಲಿ ಆರೋಪಿಸಲಾಗಿದೆ.



ಸಂಘದ ಜಿಲ್ಲಾ ಅಧ್ಯಕ್ಷ ಅಂಬೇಡ್ಕರ ಸಾಗರ, ತಾಲೂಕು ಅಧ್ಯಕ್ಷ ದೇವಿಂದ್ರ ಶರ್ಮಾ, ಜಿಲ್ಲಾ ಕಾರ್ಯದರ್ಶಿ ಸುಶೀಲ ದೊಡ್ಡಬಾವಿ, ಜಿಲ್ಲಾ ಸಂಚಾಲಕ ಸಚಿನ್ ಸಾಗರ, ಜಿಲ್ಲಾ ಖಜಾಂಚಿ ರಾಮು ದೊಡ್ಡಬಾವಿ ಹಾಗೂ ಉಮೇಶ ಕಾಂಬಳೆ ಸೇರಿದಂತೆ ಹಲವರು ಉಪಸ್ಥಿತರಿದ್ದರು.

## 1.50 ಕೋಟಿ ವೆಚ್ಚದ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಚಾಲನೆ

**ಬಳ್ಳಾರಿ:** ನಗರದ 33ನೇ ವಾರ್ಡ್ ವ್ಯಾಪ್ತಿಯ ವಿನಾಯಕ ನಗರ ಪ್ರದೇಶದಲ್ಲಿ ಸುಮಾರು 1.50 ಕೋಟಿ ವೆಚ್ಚದ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಮಹಾನಗರ ಪಾಲಿಕೆ ಸದಸ್ಯೆ ಜಾನಕಿ ಅವರು ಗುರುವಾರ ಭೂಮಿಪೂಜೆ ನೆರವೇರಿಸಿದರು.

ನಂತರ ಮಾತನಾಡಿದ ಅವರು, ನಗರದ ಮೂಲಸೌಕರ್ಯವನ್ನು ಮತ್ತಷ್ಟು ಬಲಪಡಿಸುವ ಉದ್ದೇಶದಿಂದ ಕೈಗೆತ್ತಿಕೊಳ್ಳಲಾಗಿರುವ ಈ ಕಾಮಗಾರಿ ಸ್ಥಳೀಯ ನಿವಾಸಿಗಳ ಬಹುಕಾಲದ ಬೇಡಿಕೆಯಾಗಿದ್ದು, ಕಾಮಗಾರಿ ಪೂರ್ಣಗೊಂಡ ಬಳಿಕ ಸಂಚಾರ ವ್ಯವಸ್ಥೆಯಲ್ಲಿ ಗಣನೀಯ ಸುಧಾರಣೆ ಆಗಲಿದೆ. ಸಾರ್ವಜನಿಕರಿಗೆ ಮೂಲ ಸೌಕರ್ಯಗಳನ್ನು ಕಲ್ಪಿಸುವುದು ಜನಪ್ರತಿನಿಧಿಗಳ ಜವಾಬ್ದಾರಿಯಾಗಿದೆ. ರಸ್ತೆ, ಕುಡಿಯುವ ನೀರು, ಒಳಚರಂಡಿ, ಬೀದಿ ದೀಪ ಸೇರಿದಂತೆ ಅಗತ್ಯ ಸೌಲಭ್ಯಗಳನ್ನು ಹಂತ ಹಂತವಾಗಿ ಒದಗಿಸಲೂ ಪ್ರಾಮಾಣಿಕವಾಗಿ ಶ್ರಮಿಸಿರುವೆ. ನಮ್ಮ ವಾರ್ಡ್ ಅಭಿವೃದ್ಧಿಗೆ ಬದ್ಧರಾಗಿದ್ದೇವೆ. ಜನರ ಸಹಕಾರದಿಂದ ಹಲವು ಅಭಿವೃದ್ಧಿ ಕಾಮಗಾರಿಗಳನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದ್ದೇವೆ. ರಸ್ತೆ ಅಭಿವೃದ್ಧಿ ಕಾಮಗಾರಿಯೂ ಅದೇ ದಿಸೆಯಲ್ಲಿ ಮತ್ತೊಂದು ಮಹತ್ವದ ಹೆಜ್ಜೆಯಾಗಿದೆ ಎಂದರು.



ಬಳ್ಳಾರಿ ನಗರ ಪಾಲಿಕೆಯ ವತಿಯಿಂದ ಮಹಾತ್ಮ ಗಾಂಧಿ ನಗರ ವಿಕಾಸ ಯೋಜನೆ 2024-25 ಅಡಿಯಲ್ಲಿ ಪ್ಯಾಕೇಜ್ 6, ಉಪ ಅಂದಾಜು 4ರಡಿ ವಾರ್ಡ್ ಸಂಖ್ಯೆ 33ರಲ್ಲಿ ರಸ್ತೆ ಅಭಿವೃದ್ಧಿ ಕಾಮಗಾರಿ ಕೈಗೊಳ್ಳಲು ವಿವರವಾದ ಯೋಜನಾ ವರದಿ ಸಿದ್ಧಪಡಿಸಲಾಗಿದೆ. ಈ ಯೋಜನೆಯಡಿ ವಿನಾಯಕ ನಗರದ ಡಬ್ಲ್ಯೂ ಟಿಪಿ ಯಿಂದ ರೈಲ್ವೆ ಟ್ರ್ಯಾಕ್ ರಸ್ತೆವರೆಗೆ ರಸ್ತೆ ಅಭಿವೃದ್ಧಿ ಕಾಮಗಾರಿಯನ್ನು 1.50 ಕೋಟಿ ವೆಚ್ಚದಲ್ಲಿ ಕೈಗೊಳ್ಳಲಾಗುವುದು ಎಂದರು. ಪತ್ರಕರ್ತ ಎಂ.ಜಂಬುನಾಥ್, ಗೋವಿಂದ ಸೇರಿದಂತೆ ಬಡಾವಣೆಯ ಪ್ರಮುಖರಿದ್ದರು.

## ಕಾರ್ಮಿಕರ ಹಿತ ಕಾಪಾಡುವೆ: ಶಾಸಕ ಕೃಷ್ಣನಾಯಕ

**ಹೂವಿನಹಡಗಲಿ:** ಎಲೆಕ್ಟ್ರಿಷಿಯನ್ ಮತ್ತು ಪ್ಲಂಬರ್ ಕಾರ್ಮಿಕರ ಹಿತ ಕಾಪಾಡುವ ನಿಟ್ಟಿನಲ್ಲಿ ಕಾರ್ಯ ನಿರ್ವಹಿಸುವೆ ಎಂದು ಶಾಸಕ ಎಲ್. ಕೃಷ್ಣನಾಯಕ ಅಭಿಮತ ವ್ಯಕ್ತಪಡಿಸಿದರು.

ಪಟ್ಟಣದ ಸರ್ಕಾರಿ ನೌಕರರ ಭವನದಲ್ಲಿ ಸೋಮವಾರ ಹೂವಿನಹಡಗಲಿ ತಾಲೂಕು ಎಲೆಕ್ಟ್ರಿಷಿಯನ್ ಮತ್ತು ಪ್ಲಂಬರ್ ಕಾರ್ಮಿಕರ ಅಸೋಸಿಯೇಷನ್ ನೂತನ ಪದಾಧಿಕಾರಿಗಳ ಪದಗ್ರಹಣ ಕಾರ್ಯಕ್ರಮ ಉದ್ಘಾಟನೆ ನೆರವೇರಿಸಿ ಅವರು ಮಾತನಾಡಿದರು.




ಸಮಾಜದ ಪ್ರಗತಿ ಹಾಗೂ ನವ ನಿರ್ಮಾಣದಲ್ಲಿ ಹಗಲಿರುಳು ಶ್ರಮಿಸುವ ಎಲೆಕ್ಟ್ರಿಷಿಯನ್ ಮತ್ತು ಪ್ಲಂಬರ್ ಕಾರ್ಮಿಕ ಬಂಧುಗಳ ಹಿತರಕ್ಷಣೆ ಬಹಳ ಮುಖ್ಯ. ಇವರಿಗೆ ನ್ಯಾಯ ಒದಗಿಸಲು ಪ್ರಾಮಾಣಿಕ ಪ್ರಯತ್ನ ಮಾಡುವುದಾಗಿ ತಿಳಿಸಿದರು. ಒಗ್ಗಟ್ಟಿಗಾಗಿ ಈ ಸಂಘಟನೆ ಮುನ್ನಡೆಯುತ್ತಿರುವುದು ಅತ್ಯಂತ ಶ್ಲಾಘನೀಯ.ನಿಮ್ಮ ಬೇಡಿಕೆಗಳನ್ನು ಹಂತಹಂತವಾಗಿ ಪರಿಹಾರಕ್ಕೆ ಕ್ರಮ ಕೈಗೊಳ್ಳಲಾಗುವುದು ಎಂದರು. ಮನೆ ಕಟ್ಟಡ ವಿವಿಧ ಹಂತದ ಕಾಮಗಾರಿಗಳ ಕೆಲಸದಲ್ಲಿ ತಮ್ಮ ಸಿದ್ಧತೆ ಬದ್ಧತೆ ಮತ್ತು ಅತ್ಯಂತ ಕಾಳಜಿಯಿಂದ ದುಡಿಯುವ ಮನೋಭಾವ ಶ್ಲಾಘನೀಯ ಸೇವಾ ಕಾರ್ಯ ಎಂದು ಬಣ್ಣಿಸಿದರು.

ಕಾರ್ಮಿಕ ಭವನ ನಿರ್ಮಾಣಕ್ಕೆ ನಿವೇಶನ ಹಂಚಿಕೆ ಕಟ್ಟಡ ನಿರ್ಮಾಣಕ್ಕೆ ಮುಂದಿನ ದಿನಗಳಲ್ಲಿ ಅನುದಾನ ನೀಡುವುದಾಗಿ ಭರವಸೆ ನೀಡಿದರು.

ಗವಿಮಠದ ಡಾ ಹಿರಿಶಾಂತವೀರ ಮಹಾಸ್ವಾಮಿಗಳು ಹಿರೆಮಲ್ಲನಕೇರಿ ಮಠದ ಡಾ.ಚೆನ್ನಬಸವ ಮಹಾಸ್ವಾಮಿಗಳು ಕೊಂಬಳಿ ಚೌಕಿಮಠದ ಗಾಡಿತಾತಾ, ರಾಕೇಶಯ್ಯ ರಾಮಸ್ವಾಮಿ ಆಶೀರ್ವಚನ ನೀಡಿ ನೂತನ ಸಂಘದ ಕಾರ್ಯಗಳಿಗೆ ಶುಭ ಹಾರೈಸಿದರು.

ದಾವಣಗೆರೆ ಕಾರ್ಮಿಕ ಮುಖಂಡ ರಾಜ್ಯಾಧ್ಯಕ್ಷ ಎಚ್.ಜಿ.ಉಮೇಶ್ ಕಾರ್ಮಿಕರ ಸಂಘಟನೆ ಕುರಿತು ಮಾಹಿತಿ ನೀಡಿದರು. ಮುಖಂಡರಾದ ಕೆ.ಪುತ್ರೇಶ್ ಪುನೀತ್ ದೊಡ್ಡಮನಿ ಕಾರ್ತಿಕ್ ಶೆಟ್ಟಿ ಉಪಸ್ಥಿತರಿದ್ದರು. ಸಂಘದ ಅಧ್ಯಕ್ಷ ಊಳಿಗದ ಮಲ್ಲಿಕಾರ್ಜುನ ಉಪಾಧ್ಯಕ್ಷ ಬಳೆಗಾರ ಫಕೃದ್ದೀನ್, ಟಿ.ಶೇಖರ್, ಇಬ್ರಾಹಿಂ ಖಲೀಲ್, ಟಿ.ಅಣ್ಣಪ್ಪ, ಡಿ.ಮೆಹಬೂಬ್, ಕಡ್ಲಿ ಕೊಟ್ರೇಶ್ ಸೇರಿದಂತೆ ನೂತನ ಪದಾಧಿಕಾರಿಗಳು ಇತರರು ಇದ್ದರು. ತಾಲೂಕಿನ ವಿವಿಧ ಗ್ರಾಮಗಳಿಂದ ಪ್ಲಂಬರ್ ಎಲೆಕ್ಟ್ರಿಷಿಯನ್ ಕಾರ್ಮಿಕರು ಹಾಗೂ ಕುಟುಂಬ ವರ್ಗದವರು ಭಾಗವಹಿಸಿದ್ದರು.

### ಬಳ್ಳಾರಿ ಭಾರತೀಯ ವೈದ್ಯಕೀಯ ಸಂಘದಿಂದ ವೈದ್ಯರ ದಿನಾಚರಣೆ

## ರಕ್ತದಾನ ಶಿಬಿರ, ಸಸಿ ನೆಡುವ ಕಾರ್ಯಕ್ರಮ

**ಬಳ್ಳಾರಿ:** ಅಂತಾರಾಷ್ಟ್ರೀಯ ವೈದ್ಯರ ದಿನಾಚರಣೆ ನಿಮಿತ್ತ ಭಾರತೀಯ ವೈದ್ಯಕೀಯ ಸಂಘ ಬಳ್ಳಾರಿ ಆಶ್ರಯದಲ್ಲಿ ಸಸಿ ನೆಡುವ ಕಾರ್ಯಕ್ರಮ ಹಾಗೂ ರಕ್ತದಾನ ಶಿಬಿರವನ್ನು ಹಮ್ಮಿಕೊಳ್ಳಲಾಗಿತ್ತು. ಬಹುತೇಕ ಕಾರ್ಯಕ್ರಮಗಳಲ್ಲಿ ವೈದ್ಯರು ಭಾಗವಹಿಸಿ, ರಕ್ತದಾನದ ಮಹತ್ವ ಹಾಗೂ ಪರಿಸರ ಕಾಳಜಿ, ಅರಣ್ಯ ಸಂಪತ್ತು ಉಳಿಸುವ ಕುರಿತು ಜನರ ಗಮನ ಸೆಳೆಯುತ್ತಿದ್ದ ವೈದ್ಯರು, ವೈದ್ಯರ ದಿನಾಚರಣೆ ನಿಮಿತ್ತ ರಕ್ತದಾನ ಶಿಬಿರ ಹಾಗೂ ಸಸಿಗಳನ್ನು ನೆಡುವ ಕಾರ್ಯಕ್ರಮವನ್ನು ಅರ್ಥಪೂರ್ಣವಾಗಿ ಆಯೋಜಿಸಿ, ಜನರಲ್ಲಿ ಜಾಗೃತಿ ಮೂಡಿಸುವ ಮೂಲಕ ಗಮನಸೆಳೆದರು.

ನಗರದ ಗಾಂಧಿನಗರ ಬಡಾವಣೆಯ ಸ್ಪಂದನಾ ಬ್ಲೆಡ್ ಬ್ಯಾಂಕ್ ನಲ್ಲಿ ಭಾರತೀಯ ವೈದ್ಯಕೀಯ ಸಂಘದಡಿ ಆಯೋಜಿಸಿದ್ದ ರಕ್ತದಾನ ಶಿಬಿರಕ್ಕೆ ಸಂಘದ ಅಧ್ಯಕ್ಷರಾದ ಡಾ.ವಿ.ಜೆ.ಭರತ್ ಅವರು ಚಾಲನೆ ನೀಡಿ ಮಾತನಾಡಿ, ವೈದ್ಯರ ಸಲಹೆ ಪಡೆದು ನಿಗದಿತ ಅವಧಿಯಲ್ಲಿ ಮಹಿಳೆಯರು, ಪುರುಷರು ರಕ್ತದಾನ ಮಾಡಲು ಮುಂದಾಗಬೇಕು. ಆರೋಗ್ಯವಂತ ಮಹಿಳೆಯರು, ಪುರುಷರು ವೈದ್ಯರ ಸಲಹೆ ಪಡೆದು ನಿಗದಿತ ಅವಧಿಯಲ್ಲಿ ರಕ್ತದಾನ ಮಾಡಲು ಮುಂದಾಗಬೇಕು. ಇದರಿಂದ ಆರೋಗ್ಯ ಸದೃಢವಾಗಿರಲಿದೆ, ಆವರಿಸುವ ನಾನಾ ರೋಗಗಳು ದೂರವಾಗಲಿವೆ ಎಂದರು.



ಪರಿಸರ ಸಂರಕ್ಷಣೆ ನಮ್ಮೆಲ್ಲರ ಜವಾಬ್ದಾರಿಯಾಗಿದೆ. ಅರಣ್ಯ ಸಂಪತ್ತು ಉಳಿದರೆ ಕಾಲಕಾಲಕ್ಕೆ ಉತ್ತಮ ಮಳೆಯಾಗಿ ನಾಡು ಸುಭಿಕ್ಷೆಯಾಗಿರಲಿದೆ. ಪ್ರತಿಯೊಬ್ಬರೂ ಮನೆ ಹಿಂದೆ ಅಥವಾ ಮುಂದೆ ಮರಗಳನ್ನು ಬೆಳೆಸಿ ಪರಿಸರ ಸಂರಕ್ಷಣೆಗೆ ಮುಂದಾಗಬೇಕು ಎಂದರು. ಭಾರತೀಯ ವೈದ್ಯಕೀಯ ಸಂಘದ ಆಶ್ರಯದಲ್ಲಿ ಹಮ್ಮಿಕೊಂಡ ರಕ್ತದಾನ ಶಿಬಿರದಲ್ಲಿ ವೈದ್ಯರು ರಕ್ತದಾನ ಮಾಡುವ ಮೂಲಕ ಗಮನಸೆಳೆದರು. ಬಳ್ಳಾರಿ ಸಮೀಪದ ಸಂಗನಕಲ್ ಬಳಿಯ ಎನ್ ಪಿಆರ್ ಲೇಔಟ್, ಐಎಂಎ ಸೈಟ್‌ನಲ್ಲಿ ಸಸಿಗಳನ್ನು ನೆಡುವ ಮೂಲಕ ವೈದ್ಯರು ಪರಿಸರದ ಕುರಿತು ಜಾಗೃತಿ ಮೂಡಿಸಿದರು. ರಕ್ತದಾನ ಮಾಡಿದ ಎಲ್ಲರಿಗೂ ಪ್ರಮಾಣ ಪತ್ರಗಳನ್ನು ವಿತರಿಸಿ, ವೈದ್ಯರ ದಿನಾಚರಣೆಯ ಶುಭಾಶಯ ಕೋರಿದರು.

ಸಂಘದ ಪದಾಧಿಕಾರಿಗಳು ಹಾಗೂ ಐಎಂಎ ಸದಸ್ಯರಾದ ಡಾ.ಮಹಿಪಾಲ್, ಡಾ.ಶ್ರೀನಿವಾಸಲು, ಡಾ.ಹರೀಶ್,ಡಾ.ಪರ್ವತರೆಡ್ಡಿ,ಡಾ.ಅಶ್ವಿನಿಕುಮಾರ್ ಸಿಂಗ್, ಡಾ.ರೇಣುಕಾ ಮಂಜುನಾಥ್, ಡಾ.ಸುಮಾ ಗುಡಿ, ಡಾ.ಚಂದ್ರಶೇಖರ್, ಡಾ.ರೇಣುಕಾ ರೆಡ್ಡಿ, ಡಾ.ಗೋವರ್ಧನ ರೆಡ್ಡಿ, ಡಾ.ಮೇದಿನಿ ಅಲ್ಲಂ, ಡಾ.ರೇಣುಕಾ ಆಚಾರ್ಯ, ಡಾ.ದಿನೇಶ್ ಗುಡಿ, ಡಾ.ಜಗದೀಶ್, ಡಾ.ಶ್ರೀನಿವಾಸ್ ಎನ್. ಇತರರಿದ್ದರು.